ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ

★

ತೃತೀಯ ಸಂಪುಟ (ಬ-ಲೋ)

3

ಪ್ರಾಚ್ಯವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ

★

ತೃತೀಯ ಸಂಪುಟ (ಬ-ಲೋ)

ಪ್ರಾಚ್ಯವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

A DESCRIPTIVE CATALOGUE OF

KANNADA MANUSCRIPTS

in the

Oriental Research Institute, Mysore

Vol. III (Ba–Lo)

General Editor :
H. DEVEERAPPA, M.A.
Director.

Editor :
B. S. SANNAIAH, M.A.
Asst. Director.

Assisted by :
The Research Assistants

ಮೈಸೂರು ವಿಶ್ವವಿದ್ಯಾನಿಲಯ

ORIENTAL RESEARCH INSTITUTE
UNIVERSITY OF MYSORE. : : MYSORE.

Published by :
Oriental Research Institute, Mysore.
1963

Price Rs.4-50

Printed at :
Mysore Printing & Publishing House. Mysore

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ

ತೃತೀಯ ಸಂಪುಟ (ಬ-ಲೋ)

ಪ್ರಧಾನ ಸಂಪಾದಕರು :

ಹೆಚ್. ದೇವೀರಪ್ಪ, ಎಂ.ಎ.

ಡೈರೆಕ್ಟರ್.

ಪ್ರಾಚ್ಯವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪ್ರಥಮ ಮುದ್ರಣ ೧೦೦೦ ಪ್ರತಿಗಳು
೧೯೬೩

ಬೆಲೆ : ರೂ. ೪-೫೦

ಮುದ್ರಣಕಾರರು :
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು.

ಪೀಠಿಕೆ

ಮುದ್ರಣ ಸೌಕರ್ಯವಿಲ್ಲದಿದ್ದ ಕಾಲದಲ್ಲಿ ಜನರು ತಮಗೆ ಬೇಕಾದ ವಿಷಯಗಳನ್ನೂ ಗ್ರಂಥಗಳನ್ನೂ ಓಲೆಗರಿಗಳ ಮೇಲೂ ಕಾಗದವು ಬಳಕೆಗೆ ಬಂದಮೇಲೆ ಕಾಗದದ ಮೇಲೂ ಬರೆದು ಇಟ್ಟುಕೊಳ್ಳುತ್ತಿದ್ದರು. ಪ್ರಾಚೀನ ಗ್ರಂಥಗಳನ್ನು ತಾವು ಓದುವುದಕ್ಕಾಗಿ ಲಿಪಿಕಾರರಿಂದ ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದೂ ಉಂಟು. ಇದರಿಂದಲೇ ಇಂದು ಒಂದೇ ಕೃತಿಯ ಹಲವಾರು ಕೈಬರಹದ ಪ್ರತಿಗಳು ನಮಗೆ ದೇಶದ ಬೇರೆ ಬೇರೆ ಮೂಲೆಗಳಲ್ಲಿ ದೊರೆಯುತ್ತಿವೆ. ಹೀಗೆ ದೇಶದಾದ್ಯಂತ ಇರುವ ಈ ವಿಧವಾದ ಹಸ್ತಲಿಖಿತ ಗ್ರಂಥಗಳಲ್ಲಿ ಮುಖ್ಯವಾದುವನ್ನು ಸಂಗ್ರಹಿಸಿ ನಮ್ಮ ಸಂಸ್ಥೆಯ ಗ್ರಂಥಾಲಯದಲ್ಲಿಟ್ಟಿದೆ. ಅವುಗಳಲ್ಲಿ ಕನ್ನಡ ಗ್ರಂಥಗಳ ಸ್ವರೂಪವನ್ನು ಈ ವರ್ಣನಾತ್ಮಕ ಸೂಚಿಯು ವಿವರವಾಗಿ ತಿಳಿಯಪಡಿಸುತ್ತದೆ. ಪ್ರತ್ಯಕ್ಷವಾಗಿ ಪುಸ್ತಕಗಳನ್ನು ನೋಡದೆಯೇ ಅವುಗಳ ಸ್ಥೂಲಪರಿಚಯವನ್ನು ಈ ವರ್ಣನಾತ್ಮಕ ಸೂಚಿಯು ಮಾಡಿಕೊಡುತ್ತದೆ.

ಈ ವಿಧವಾದ ವರ್ಣನಾತ್ಮಕ ಸೂಚಿಯು ಕನ್ನಡ ವಿದ್ವಾಂಸರಿಗೆ ಅನೇಕ ದೃಷ್ಟಿಯಿಂದ ಉಪಯುಕ್ತವೆಂಬುದನ್ನು ಮನಗಂಡು ಸಂಸ್ಥೆಯು ಕ್ರಿ. ಶ. ೧೯೫೪ರ ವರೆಗೆ ಸಂಗ್ರಹಿಸಿರುವ ಕೈಬರಹದ ಕನ್ನಡ ಗ್ರಂಥಗಳ ವರ್ಣನಾತ್ಮಕ ಸೂಚಿಯನ್ನು ಅತ್ಯಲ್ಪಕಾಲದಲ್ಲಿ ಸಿದ್ಧಪಡಿಸಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಈ ನಾಲ್ಕು ಸಂಪುಟಗಳಲ್ಲಿ ಇದು ಮೂರನೆಯದು. ಇದರಲ್ಲಿ 'ಬ'ಕಾರದಿಂದ 'ಲ' ಕಾರ ಪೂರ್ತಿ ಒಟ್ಟು ೫೧೪ (೧೦೦೨-೧೫೧೫) ಕೃತಿಗಳ ವಿವರಣೆಯನ್ನು ಕೊಟ್ಟಿದೆ.

ಮೊದಲು ಆಂಗ್ಲ ಸಂಖ್ಯೆಯಲ್ಲಿ ಕೊಟ್ಟಿರುವುದು ಗ್ರಂಥಗಳ ಕ್ರಮಾಂಕ. ಇದಾದ ಬಳಿಕ ಗ್ರಂಥದ ಸಾಂಕೇತಿಕಾಂಕವನ್ನು ಕನ್ನಡ ಅಂಕಿಗಳಲ್ಲಿ ಕೊಟ್ಟಿದೆ. ಈ ಸಾಂಕೇತಿಕಾಂಕದ ಹಿಂದೆ 'ಕೆ' ಎಂದು ಮಾತ್ರ ಇದ್ದರೆ ಅದು ಓಲೆಯ ಪ್ರತಿಯೆಂದೂ, 'ಕೆ.ಎ.' ಎಂದಿದ್ದರೆ ದೊಡ್ಡ ಅಳತೆಯ ಕಾಗದದ ಪ್ರತಿಯೆಂದೂ, 'ಕೆ.ಬಿ.' ಎಂದಿದ್ದರೆ ಚಿಕ್ಕ ಅಳತೆಯ ಕಾಗದದ ಪ್ರತಿಯೆಂದೂ ಸೂಚನೆ. ಒಂದೇ ಪುಸ್ತಕದಲ್ಲಿ ಹೆಚ್ಚು ಗ್ರಂಥಗಳಿದ್ದಾಗ ಆ ಗ್ರಂಥವು ಆ ಕಟ್ಟಿನಲ್ಲಿ ಎಷ್ಟನೆಯದು ಎನ್ನುವುದನ್ನು ತಿಳಿಯುವುದಕ್ಕಾಗಿ ಸಾಂಕೇತಿಕಾಂಕದ ಮುಂದೆ ಒಂದು ಗೀಟನ್ನು ಹಾಕಿ ಅದರ ಮುಂದೆ ಗ್ರಂಥದ ಸಂಖ್ಯೆಯನ್ನು ಕೊಟ್ಟಿದೆ. ಅದೇ ಸಾಲಿನ ಮಧ್ಯದಲ್ಲಿ ದೊಡ್ಡ ಅಕ್ಷರಗಳಲ್ಲಿರುವುದು ಗ್ರಂಥದ ಹೆಸರು. ಕೊನೆಯಲ್ಲಿರುವುದು ಗದ್ಯ, ಪದ್ಯ, ವಚನ, ಷಟ್ಪದಿ ಮೊದಲಾದ ಗ್ರಂಥಪ್ರಭೇದ. ಎರಡನೆಯ ಸಾಲಿನ ಆರಂಭದಲ್ಲಿ ಪುಸ್ತಕದ ಅಳತೆಯನ್ನು ಅಂಗುಲಗಳಲ್ಲಿ ಕೊಟ್ಟಿದೆ. ಅಂಗುಲದ ವಿಭಾಗವನ್ನು ದಶಮಾಂಶದಿಂದ

ಸೂಚಿಸಿದೆ. ಈ ಅಳತೆಯ ಅಂಕಿಗಳಲ್ಲಿ ಮೊದಲನೆಯದು ಉದ್ದ, ಎರಡನೆಯದು ಅಗಲ. ಇವೆರಡರ ಮಧ್ಯೆ ವಿಭಾಗಕ್ಕಾಗಿ 'x' ಚಿಹ್ನೆಯನ್ನು ಉಪಯೋಗಿಸಿದೆ. ಗ್ರಂಥದ ಹೆಸರಿನ ಕೆಳಗೆ, ಕವಿಯು ತಿಳಿದಿದ್ದರೆ ಆತನ ಹೆಸರನ್ನೂ ಅದೇ ಸಾಲಿನ ಕೊನೆಯಲ್ಲಿ ಕವಿಯ ಕಾಲವನ್ನೂ ಈ ಎರಡೂ ತಿಳಿಯದಿದ್ದಾಗ ಆ ಸ್ಥಳಗಳಲ್ಲಿ ಪ್ರಶ್ನಚಿಹ್ನೆ (?) ಯನ್ನೂ ಕೊಟ್ಟಿದೆ. ಕವಿ ಮತ್ತು ಕಾಲವಿಚಾರಗಳಿಗೆ ಬಹುಮಟ್ಟಿಗೆ ಕರ್ಣಾಟಕ ಕವಿಚರಿತೆಯನ್ನು ಅವಲಂಬಿಸಿದೆ.

ಮೂರನೆಯ ಸಾಲಿನ ಆರಂಭದಲ್ಲಿ ಗ್ರಂಥ ಪ್ರಾರಂಭವಾಗುವ ಮತ್ತು ಮುಗಿಯುವ ಪತ್ರ ಸಂಖ್ಯೆಗಳನ್ನು ಹೇಳಿದೆ. ಪತ್ರಗಳಿಗೆ ಕ್ರಮಾಂಕವನ್ನು ಬರೆಯದಿರುವ ಪುಸ್ತಕಗಳಲ್ಲಿ ಒಟ್ಟು ಎಷ್ಟು ಪತ್ರಗಳಿವೆ ಎನ್ನುವುದನ್ನು ಲೆಕ್ಕಮಾಡಿ ಕೊಟ್ಟಿದೆ. ಕೆಲವು ಕಡೆಗಳಲ್ಲಿ ಪುಟಸಂಖ್ಯೆಯನ್ನು ಕೊಟ್ಟಿದೆ. ಪತ್ರ ಎಂದಿರುವ ಕಡೆ ಎರಡು ಪಾರ್ಶ್ವಗಳೂ ಸೇರಿ ಒಂದು ಎಂದೂ, ಪುಟ ಎಂದರೆ ಪ್ರತಿಪಾರ್ಶ್ವಕ್ಕೂ ಬೇರೆ ಬೇರೆ ಕ್ರಮಾಂಕ ಕೊಟ್ಟಿದೆ ಎಂದೂ ತಿಳಿಯಬೇಕು. ಒಂದೇ ಪಾರ್ಶ್ವದಲ್ಲಿ ಬರೆದಿರುವ ಕಡೆಗಳಲ್ಲೆಲ್ಲಾ ವಿಶೇಷ ವಿಭಾಗದಲ್ಲಿ, ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರವಣಿಗೆ ಇದೆ ಎಂದು ತಿಳಿಸಿದೆ. ಇದೇ ಸಾಲಿನ ಮಧ್ಯದಲ್ಲಿ ಪ್ರತಿಪತ್ರದ ಒಂದೊಂದು ಪಾರ್ಶ್ವದಲ್ಲೂ ಇರುವ ಸಾಲಿನ ಸಂಖ್ಯೆಗಳನ್ನೂ, ಕೊನೆಯಲ್ಲಿ ಪ್ರತಿಸಾಲಿನಲ್ಲೂ ಇರುವ ಅಕ್ಷರ ಸಂಖ್ಯೆಗಳನ್ನೂ ಸರಾಸರಿ ಮಾನದಿಂದ ಕೊಟ್ಟಿದೆ. ಬಳಿಕ ಗ್ರಂಥದ ಆದಿಭಾಗವನ್ನು '**ಆದಿ :**' ಎನ್ನುವುದರ ಮುಂದೆಯೂ ಅಂತ್ಯಭಾಗವನ್ನು '**ಅಂತ್ಯ :**' ಎನ್ನುವುದರ ಮುಂದೆಯೂ ಕೊಟ್ಟಿದೆ. ಈ ಆದ್ಯಂತ ಗ್ರಂಥ ಭಾಗಗಳ ಕೆಲವು ಕಡೆಗಳಲ್ಲಿ........ ...ಈ ಗುರುತಿರುವ ಕಡೆ ಗ್ರಂಥ ತ್ರುಟಿತವಾಗಿದೆಯೆಂದೂ x x x x ಹೀಗಿರುವ ಕಡೆ ಪುಸ್ತಕದಲ್ಲಿ ಆ ಭಾಗದ ಗ್ರಂಥವಿದ್ದರೂ ಆ ಭಾಗವನ್ನು ಬಿಟ್ಟು ಮುಂದುವರಿಸಿದೆ ಎಂದೂ ತಿಳಿದುಕೊಳ್ಳಬೇಕು. **ಆದಿ, ಅಂತ್ಯ**ಗಳಾದ ಬಳಿಕ ಇರುವ **ವಿಷಯ** ಎಂಬ ವಿಭಾಗದಲ್ಲಿ ಪತ್ರಿಪಾದ್ಯ ವಿಷಯವನ್ನು ಒಂದೊಂದು ವಾಕ್ಯದಲ್ಲಿ ಸೂಚಿಸಲಾಗಿದೆ.

ಆ ಬಳಿಕ ಇರುವ **ವಿಶೇಷ** ಎಂಬ ವಿಭಾಗದಲ್ಲಿ ಆ ಪುಸ್ತಕಕ್ಕೆ ಸಂಬಂಧಪಟ್ಟಂತೆ ಲಿಪಿ, ಪುಸ್ತಕದ ಸ್ಥಿತಿ, ಶಕಟರೇಫದ ಬಳಕೆ, ಅಸಮಗ್ರ ಮತ್ತು ಲುಪ್ತ ಪತ್ರಗಳ ವಿವರಣೆ, ಅದೇ ಪುಸ್ತಕದಲ್ಲಿ ಇರುವ ಇತರ ಗ್ರಂಥಗಳ ಸಂಖ್ಯೆ ಇವುಗಳ ವಿವರವನ್ನು ಸಂಗ್ರಹವಾಗಿ ಕೊಟ್ಟಿದೆ. ಕೆಲವು ಕನ್ನಡ ಪುಸ್ತಕಗಳೊಡನೆ ಇರುವ ಸಂಸ್ಕೃತ ಮತ್ತು ತೆಲುಗು ಭಾಷೆಯ ಗ್ರಂಥಗಳನ್ನು ಪ್ರತ್ಯೇಕವಾಗಿ ಪಟ್ಟಿಮಾಡಿ ನಾಲ್ಕನೆಯ ಸಂಪುಟದ ಅನುಬಂಧದಲ್ಲಿ ಕೊಟ್ಟಿದೆ.

ಪ್ರತಿ ಗ್ರಂಥದ ವರ್ಣನೆಯೂ 'ಕ್ರಮಾಂಕ' ಮೊದಲಾಗಿ 'ವಿಶೇಷ' ಕಡೆಯಾಗಿ ಹದಿನಾಲ್ಕು ವಿಭಾಗಗಳನ್ನೊಳಗೊಂಡಿದೆ.

ಸೂಚಿಯಲ್ಲಿ ಎತ್ತಿಕೊಟ್ಟಿರುವ ಭಾಗಗಳು ಪಾಠದೃಷ್ಟಿಯಲ್ಲಿ ಮೂಲಪ್ರತಿಯನ್ನೆ ಸಂಪೂರ್ಣವಾಗಿ ಹೋಲುತ್ತಿವೆ. ಆದರೆ ಪದ್ಯಭಾಗವನ್ನು ಆಯಾ ಛಂದಸ್ಸಿಗನು ಗುಣವಾಗಿ ವಿಭಾಗಮಾಡಿ, ಗೀಟುಗಳಿದ್ದರೆ ಅವನ್ನು ತೆಗೆದುಹಾಕಿದೆ. ಓದುಗರಿಗೆ ಸೌಲಭ್ಯವಾಗಲೆಂದು ಅಗತ್ಯವಿದ್ದ ಕಡೆಗಳಲ್ಲಿ ಆಧುನಿಕ ಚಿಹ್ನೆಗಳನ್ನು ಹಾಕಲಾಗಿದೆ. ಲಿಪಿಕಾರರು ಆದ್ಯಂತಗಳಲ್ಲಿ ಅನೇಕ ಇಷ್ಟದೇವತೆಗಳ ಹೆಸರುಗಳನ್ನು ಬರೆದಿದ್ದರೆ, ಮೊದಲನೆಯದನ್ನು ಮಾತ್ರ ಕೊಟ್ಟು ಉಳಿದುವುಗಳನ್ನು ಬಹುಶಃ ಬಿಡಲಾಗಿದೆ. 'ಶ್ರೀ' ಕಾರದ ವಿಷಯದಲ್ಲಿಯೂ ಅಷ್ಟೆ. ಒಂದನ್ನೊ ಎರಡನ್ನೊ ಉದ್ಧರಿಸಿ ಉಳಿದು ವನ್ನು ಬಿಟ್ಟಿದೆ. ಅನೇಕ ಪ್ರತಿಕಾರರು ಗ್ರಂಥಾಂತ್ಯದಲ್ಲಿ, ತಪ್ಪಂ ಬರೆದಂ ಕಡುಜಡ | ನಪ್ಪಂ ಬರೆದಾತನೆಂದು ಬಯ್ಯಲು ಬೇಡಾ || ತಪ್ಪಕ್ಕು ಶುದ್ಧಮಕ್ಕು | ತಪ್ಪುಳ್ಳರೆ ತಿದ್ದಿಕೊಳುವುದುತ್ತಮ ಪುರುಷರ್—ಎಂದಿರುವುದುಂಟು. ಇದನ್ನು ಗ್ರಂಥಸೂಚಿ ಯಲ್ಲಿ ಸೇರಿಸಿಲ್ಲ. ಹಸ್ತಪ್ರತಿಗಳ ಸ್ವರೂಪವು ಗೊತ್ತಾಗಲೆಂದು ಅದರಲ್ಲಿರುವ ತಪ್ಪು ಗಳನ್ನು ತಿದ್ದದೆ ಅವುಗಳಲ್ಲಿರುವಂತೆ ತಪ್ಪಾಗಿಯೇ ಕೊಟ್ಟಿದೆ. ಸಂಶೋಧಕರು ಇಂತಹ ಅಶುದ್ಧವೂ ಅಸಾಧುವೂ ಆದ ಬರವಣಿಗೆಯಿಂದ ಕೂಡಿದ ಹಸ್ತಪ್ರತಿಗಳ ಆಧಾರದ ಮೇಲೆ ಸರಿಯಾದ ಪಾಠವನ್ನು ಕಂಡುಹಿಡಿದು ಮೂಲಪ್ರತಿಯನ್ನು ಪುನರ್ನಿರ್ಮಿಸಿ ಸಂಪ್ರತಿಸಿ ಪ್ರಕಟಿಸುವಲ್ಲಿ ಎಷ್ಟು ಶ್ರಮ ವಹಿಸಬೇಕಾಗುತ್ತದೆ ಎಂಬುದನ್ನು ನಿಷ್ಪಕ್ಷಪಾತಿಗಳೂ ಗುಣಗ್ರಾಹಿಗಳೂ ಆದ ವಿದ್ವಜ್ಜನರು ಊಹಿಸಿಕೊಳ್ಳ ಬಲ್ಲರು.

ಈಗ ದೊರೆಯುತ್ತಿರುವ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳು ಲಿಪಿಕಾರರಿಂದ ಪ್ರತಿಮಾಡಲ್ಪಟ್ಟವು. ಕವಿಯ ಸ್ವಹಸ್ತಾಕ್ಷರ ಪ್ರತಿಗಳಲ್ಲ. ಕವಿ ಗ್ರಂಥವನ್ನು ಸೃಷ್ಟಿಸಿದವ ಮಾತ್ರ. ಆತ ಒಬ್ಬನೇ. ಆದರೆ ಆ ಗ್ರಂಥಭಂಡಾರದ ರಕ್ಷಣೆಯ ಭಾರವನ್ನು ಬಹುಮಂದಿ ಲಿಪಿಕಾರರು ಹೊತ್ತಿದ್ದಾರೆ. ಗ್ರಂಥಕ್ಕೆ ಮರುಜೀವಣಿ ಎರೆಯುವವರು ಅವರು. ಒಂದು ಗ್ರಂಥದ ಹಲವಾರು ಪ್ರತಿಗಳನ್ನು ಬೇರೆ ಬೇರೆ ಲಿಪಿಕಾರರು ಬರೆದಿರುವುದರಿಂದಲೇ ಈಗಲೂ ಪ್ರಾಚೀನ ಗ್ರಂಥಗಳು ಜೀವಂತವಾಗಿವೆ.

ಅನೇಕ ಪ್ರತಿಗಳನ್ನು ಬರೆಯುವುದರ ಮೂಲಕ ಈ ಪ್ರತಿಕಾರರು ಪ್ರಾಚೀನ ಸಾಹಿತ್ಯದ ಒಂದು,ಬೃಹದ್ರತ್ನಾಕರವನ್ನೇ ರಚಿಸಿದ್ದಾರೆ. ಇದಕ್ಕಾಗಿ ಪ್ರತಿಯೊಬ್ಬ ಸಾಹಿತ್ಯಾಭಿಮಾನಿಯೂ ಈ ಲಿಪಿಕಾರರನ್ನು ಅಭಿನಂದಿಸಬೇಕು.

ತಾನು ಬರೆದ ಬರವಣಿಗೆಯಲ್ಲಿ ತಪ್ಪು ಕಂಡುಬಂದರೆ ಅದನ್ನು ಸರಿಪಡಿಸಿಕೊಳ್ಳಿ ಎಂದು ಗ್ರಂಥಾಂತ್ಯದಲ್ಲಿ ಓದುಗರನ್ನು ಪ್ರಾರ್ಥಿಸದ ಲಿಪಿಕಾರನಿಲ್ಲ. ಇದು ಆತನ ವಿನಯವನ್ನು ಸೂಚಿಸುತ್ತದೆ. ಗ್ರಂಥಾರಂಭಕ್ಕೆ ಮೊದಲು ಪ್ರತಿಯೊಬ್ಬ ಲಿಪಿಕಾರನೂ ತನ್ನ ಇಷ್ಟದೈವ ಮತ್ತು ಗುರುಗಳನ್ನು ಸ್ತುತಿಸಿ ಬಳಿಕ ಗ್ರಂಥವನ್ನು ಬರೆಯಲು ಪ್ರಾರಂಭಿಸುತ್ತಾನೆ. (ಈ ವರ್ಣನಾತ್ಮಕ ಸೂಚಿಯಲ್ಲಿ ಅತ್ಯಧಿಕವಾಗಿ ಸ್ತುತಿಗಳು ಇರುವೆಡೆಗಳಲ್ಲಿ ಅವುಗಳನ್ನು ಬಿಟ್ಟು ಗ್ರಂಥವನ್ನು ಮುಂದುವರಿಸಿದೆ). ಕೆಲವರು

ತಾವು ಬರೆಯಲು ಪ್ರಾರಂಭಿಸಿದ ಮತ್ತು ಪ್ರತಿಮಾಡಿ ಮುಗಿಸಿದ ಕಾಲವಿವರವನ್ನು ಬರೆದಿದ್ದಾರೆ.

ವೀರಮಾಹೇಶ್ವರಾಚಾರ ಸಂಗ್ರಹವನ್ನು ಬರೆದ ಒಬ್ಬ ಲಿಪಿಕಾರನು ತಾನು ತಾಳೇಗರಿಯನ್ನು ಸಂಗ್ರಹಿಸಿ ಅದರಲ್ಲಿ ಬರವಣಿಗೆಯನ್ನು ಪೂರ್ತಿಮಾಡಿರುವ ವರೆಗಿನ ವಿವರವನ್ನು ಗ್ರಂಥಾಂತ್ಯದಲ್ಲಿ ಕೊಟ್ಟಿರುತ್ತಾನೆ. ಅದರ ಒಕ್ಕಣೆ ಈ ರೀತಿ ಇದೆ. :—

"ಪಡುವಣ ದೆಸೆಯಿಂದೊಪ್ಪುತಿರ್ದ ಲವಣಾಂಬುಧಿಗೆ ಪುರ್ಬುಂ ಪುಟ್ಟಿದಹಾಂಗಿರ್ದ ಘಟ್ಟದ ಸರೋವರಂಗಳಲ್ಲೇಕಪಾದಚರ ಕೆದಜುದ ಮುಂಡೆ ಮೌನವ್ರತದಿಂದೊಪ್ಪುತ್ತಿರ್ದ ದಿವ್ಯತಾಳಪತ್ರಮುಂ ತಂದು ದ್ವಿತೀಯ ರಂಧ್ರವಂ ಮಾಡಿ ಬಿಂಗದ ಹೊರೆಯಂತೊಂದೊಂದಂ ಪೊಂದಿಸಿಕ್ಕೆಲದಲುಭಯಂ ಪಲಗೆಯಷ್ಟಲೋವೆಯಷ್ಟಮೂಲೆಗಳಿಂದತ್ಯಂತಲಂಕಾರವಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯ ಶಿವಾಲಯವಂ ನಿರ್ಮಿಸಿ ದಿಂತಿರಬಾರದೆಂದು ಬಿಂದು ವಿಸರ್ಗಂ ದಡ್ಡತೆ ಪೊಂದಿದಾವೃತೋರ್ಧ್ವರೇಫೆ ದೀರ್ಘ ಹ್ರಸ್ವದಿಂದೊಪ್ಪುತ್ತಿರ್ದ್ದ ಅಕ್ಷರಮೂರ್ತಿಗಳಂ ಲೇಖನವಂ ಮಾಡೆಂದು ಚಿಕ್ಕೈಯನವರು ದಿವ್ಯ ಆಲೇಖಮುಂ ಷಟ್ಸ್ಥಲಜ್ಞಾನ ಸಂಪನ್ನರಾದ ವಿರಕ್ತ ಅನ್ನದಾನ ದೇವರ ಹಸ್ತದಲ್ಲಿ ಪಾಲಿಸಲು ಯಿಂತೀ ಶಿವಗಣಂಗಳ ನಿರೂಪವಂ ಕೈಗೊಂಡು ಬರವುದಕ್ಕೆ ಯನ್ನ ಕಂಗಳು ಜಿಹ್ವೆ ಕರ ಕರ್ನಂಗಳು ಗತಿ ಮತಿ ಚೈತನ್ಯಕ್ಕೆ ಸಮಸ್ತ ಸದ್ಭಕ್ತ ವೀರಮಾಹೇಶ್ವರರುಗಳೇ ಕರ್ತೃರಾದ ಕಾರಣ ಯಿಂತಿವರ ಕರುಣ ಪ್ರಸಾದವಂ ಕೈಕೊಂಡು ಈ ವೀರಮಾಹೇಶ್ವರಾಚಾರ ಸಂಗ್ರಹವ ಬರದೆನಲ್ಲದೆ ನನ್ನಿಚ್ಛೆಯೊಳಂ ನಾ ಬರದುದಿಲ್ಲ

ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ |
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ||

ಇಂತೆಂದುದಾಗಿ ಈ ಪುಸ್ತಕವಂ ಬರದ ಸ್ಥಿತಿಯಂತೆಂದಡೆ – ಸ್ವಸ್ತಿ ಶ್ರೀ ಜಯಾಭ್ಯುದಯ ವಿಧಿಷ್ಟ ಶಕ ವಿಕ್ರಮ ಶಕಯೊ ದ್ವಿತೀಯಶಕ ಸಂದದು ೪೦೦೦ ವರುಷ | ಶಾಲಿವಾಹನಶಕ ಸಂದದು ೧೫೮೩ ವರುಷ ಸಂದು ವರ್ತಮಾನವಾದ ಶಾರ್ವರಿ ಸಂವತ್ಸರದ ಚೈತ್ರಮಾಸದ ಶುಕ್ಲಪಕ್ಷದ ರೇವತಿ ನಕ್ಷತ್ರದ ಶುದ್ಧ ದಶಮಿ ಶಶಿವಾರದಲ್ಲು ಬರದ ವಿರಕ್ತ ಅನ್ನದಾನದೇವರು ಆಚಾರ್ಯ ಚಿಕ್ಕೈಯದೇವಗೆ ನೀಲಕಂಠನಾಗನಾಥಾಚಾರ್ಯರು ವಿರಚಿಸಿದಂಥಾ ವೀರಮಾಹೇಶ್ವರಾಚಾರ ಸಂಗ್ರಹವೆಂಬ ಬಾಹುಲ್ಯವಾದ ವ್ಯಾಖ್ಯಾನಶಾಸ್ತ್ರವ ಬರದು ಸಂಪೂರ್ನವಾಯಿತ್ತು | ಯಿಂತೀ ಪುಸ್ತಕಕ್ಕೈಶ್ವರ್ಯಮಸ್ತು ಶುಭಮಸ್ತು ನಿರ್ವಿಘ್ನಮಸ್ತು ಅಜೀರ್ಣಮಸ್ತು | ಆಯುರಾರೋಗ್ಯಮಸ್ತು ಚಂದ್ರಾರ್ಕ ತಾರಾ ನಭವುಳ್ಳನಕಂ ಸ್ಥಾಯಿಯಸ್ತು ||

ಭಗ್ನಪೃಷ್ಠಕಟಿಗ್ರೀವ ಬದ್ಧದೃಷ್ಟಿರಧೋಮುಖಂ | ಕಷ್ಟೇನ ಲಿಖಿತಂ ಶಾಸ್ತ್ರಂ ಯತ್ನೇನ ಪರಿಪಾಲಯ || ಇಂತೆಂದುದಾಗಿ ಈ ಪುಸ್ತಕವಂ ಬರವರ್ಗಂ ಓದುವರ್ಗಂ ಶಿವಾನುಭಾವವಂ ನಿರೂಪಿಸುವರ್ಗಂ ಲಾಲಿಸುವರ್ಗಂ ಸಹಸ್ರಕೋಟಿ ನಮಸ್ಕಾರವಂ

ಮಾಡುತ್ತಿದೇನೆ. ಎನ್ನ ಬಿಂನಪವನವಧರಿಸಿ ಯಿದಂ ಬರದ ನಿಂಮ್ಮ ಕರುಣದ ಕಂದನಿಗೆ ನಿಮ್ಮ ಕೃಪಾಮೃತ ರಸವನೆಱದು ನೋಡಿ ಸಲಹಿ ನಿಮ್ಮ ಶ್ರೀಪಾದ ಪದ್ಮಾರಾಧನೆಯ ಯೆಂದೆಂದು ಪಿಂಗದಂತೆ ಮಾಡಯ್ಯಾ ಲಿಂಗತಂದೆ ಶರಣು ಶರಣು ಶರಣಾರ್ತ್ರಿ ॥

ಪುಸ್ತಕಂ ವನಿತಾ ವಿತ್ತಂ ಪರಹಸ್ತಗತಂ ಗತಂ ।

* ಆಯಾಸಂ ಪುನರಾಯಾಸಂ ಭೃಷ್ಟಭೃಷ್ಟಾ ಚ ಭೃಷ್ಟಯೋ ॥

ಜಲಾದ್ರಕ್ಷ ತೈಲಾದ್ರಕ್ಷ ದ್ರಕ್ಷಮುಸ್ಲಾಗ್ಯ ಬಂಧನಾತ್ ।

ಅವಸ್ಯ ಯಾಚಕದ್ರಕ್ಷ ಮಮ ರಕ್ಷಂತು ಪುಸ್ತಕಂ ॥

ನೀಲಕಂಠ ನಾಗನಾಥಾಚಾರ್ಯ ವಿರಚಿತಂ ವೀರಮಾಹೇಶ್ವರಾಚಾರ ಸಂಗ್ರಹಂ ಸಂಪೂರ್ಣಂ ಮಂಗಳಂ ಮಹಾಶ್ರೀ ॥ ”

ಈ ವಿಧವಾದ ಒಕ್ಕಣೆಯಿಂದ ಪ್ರತಿಕಾರನ ವಿಚಾರವೂ ಆತನು ಪ್ರತಿಮಾಡಲು ತೆಗೆದುಕೊಂಡ ಶ್ರಮವೂ ಸ್ಪಷ್ಟಪಡುತ್ತದೆ.

ಈ ಗ್ರಂಥಸೂಚಿಯನ್ನು ಸಂಸ್ಥೆಯ ಅಸಿಸ್ಟೆಂಟ್ ಡೈರೆಕ್ಟರ್ ಆಗಿರುವ ಶ್ರೀ ಬಿ. ಎಸ್. ಸಣ್ಣಯ್ಯನವರು ಮತ್ತು ರಿಸರ್ಚ್ ಅಸಿಸ್ಟೆಂಟರು ಅತ್ಯಲ್ಪಕಾಲದಲ್ಲಿ ಸಿದ್ಧಪಡಿಸಿರುವುದು ಸಂತೋಷಕರವಾದ ವಿಷಯ.

ಈ ವರ್ಣನಾತ್ಮಕ ಸೂಚಿಯ ಮೂರನೆಯ ಸಂಪುಟವನ್ನು ಅತಿ ಶೀಘ್ರಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವ ಮೈಸೂರಿನ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಕೇಷನ್ನಿನ ಮಾಲೀಕರಿಗೆ ಈ ಸಂಸ್ಥೆಯ ಕೃತಜ್ಞತಾಪೂರ್ವಕವಾದ ವಂದನೆಗಳು.

ಹೆಚ್. ದೇವೀರಪ್ಪ

---

* ಈ ಶ್ಲೋಕಗಳ ಸರಿಯಾದ ಪಾಠ ಈ ರೀತಿ ಇದೆ :

ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾ ಚ ಖಂಡಶಃ ॥

ತೈಲಾದ್ರಕ್ಷೇಜ್ಜಲಾದ್ರಕ್ಷೇದ್ರಕ್ಷೇಚ್ಛಿಥಿಲಬಂಧನಾತ್ ।

ಮೂರ್ಖಹಸ್ತೇ ನ ದಾತವ್ಯಮೇವಂ ವದತಿ ಪುಸ್ತಕಂ ॥

ಕನ್ನಡ ಹಸ್ತಪ್ರತಿಗಳ
ವರ್ಣನಾತ್ಮಕ ಸೂಚೀ

ತೃತೀಯ ಸಂಪುಟ

1002

ಕೆ ೧೩೨/೧ **ಬಣ್ಣಾಂತರದ ಸೂತ್ರ** ಸೂತ್ರ, ಗದ್ಯ

೧೧.೫" × ೧.೧" ರಾಜಾದಿತ್ಯ ಸು. ೧೧೨೦

೧–೧೫ ಪತ್ರ ೫ ಪಂಕ್ತಿ ೪೪ ಅಕ್ಷರ

ಆದಿ : ಶ್ರೀ ಗುರುವೆ....ಣಂತ್ರದ ಸೂತ್ರಾ....ವರ್ನ....ವರ್ನ....ರ್ನ ಮನೊಂದಿರ । ....ನಿಜ ವರ್ನದೊಳೊತ್ತಿ । ಮತ್ತವಂತವನಿರದೊಂದ್ದು ಮಾಡಿ ಉತ್ರಿ ಗೈಉದು ಮುಂನ್ನಿನ ಮಿಶ್ರ ಹೇಮದಿಂ । ದವೆ ಮೊದಲ ವರ್ನ ಮಿಉ....ನಮ ತದಿ । ಲಬ್ಧ ಸುವರ್ನ ಸೂತ್ರದಿಂ ॥ ಸೂತ್ರ ೧ ॥

ಅಂತ್ಯ : ತೂಕ ೧ ವರಹಾಂನ್ನು ಗ ೭೮ಕ್ಕೆ ಯೆಷ್ಟು ತೂಕ ವಾದಿತ್ಯಾಯಿಂದರೆ ಲಬ್ಧ ತೂಕ ೮೦ ಹಾರ ೩೯ ವೊಡ್ಡು ೩೧೨೦ ಟೀಕೂ ॥ಬಂಣ ೯॥ ಮುಪ್ಪಾಗ ವಂನ್ನು ಹಾಗವ ಮಾಡಲು ೩೯ ಕಡೆಯ ಯಿಪ್ಪತೆಂಟ್ಟು ವರಹಾಂನು ಹಾಗವ ಮಾಡಲು ೩೧೨೦ ಹಾಗ । ಅದನೂ ಹಾರದಿಂ ಭಾಗಿಸಲು । ೮೦....ಉಘಡಿ ಸುವ ವಿವರಾ । ವೊಂಭತ್ತ ಮುಪ್ಪಾಗದ ತೂಕ ಬಂಣ ೭೮ ಹಾಗಕ್ಕೆ ತೂಕವೆ ನಾದಿತ್ಯಾ ಎಂದರೆ ತೂಕ ೮೦೧೭ ॥ ಸೂತ್ರಾ ೩೯ ॥ ಬಂಣಾಂತ್ರದ ಸೂತ್ರ ಸಮಾಪ್ತಾ । ಮಂಗಳ ಮಹಾಶ್ರೀ

ವಿಷಯ : ಚಿನ್ನದ ಬಣ್ಣದ ಗಣಿತ.

ವಿಶೇಷ : ಶಿಥಿಲ ಪ್ರತಿ. ಇದರಲ್ಲಿ ೩೯ ಸೂತ್ರಗಳಿವೆ. ಇದೇ ಕಟ್ಟನಲ್ಲಿ ಮುತ್ತಿನ ಚಿಪ್ಪಿನ ಸೂತ್ರವೆಂಬ ಮತ್ತೊಂದು ಗ್ರಂಥವಿದೆ.

1003

ಕೆ ೩೩ **ಬತ್ತೀಸ ಪುತ್ತಳಿ ಕಥೆ** ಚಂಪು

೧೬.೫" × ೧.೪" ದೇವ ಸು. ೧೭೨೫

೧–೨೦೫ ಪತ್ರ ೫ ಪಂಕ್ತಿ ೪೭ ಅಕ್ಷರ

ಆದಿ : ಬತ್ತೀಶ ಪುತ್ತಳಿ ಕಥೆ

ಶ್ಲೋಕ ॥ ಮೌಕ್ತಿಕ ತಾಟಂಕ ಪತಿಮ್ಮರತಕ ಮೇಚಕಮನೋಹರಾಂಗ ಲತಾಂ ॥ ಅಂಗೀಕೃತವಾಣಿ ವೀಣಾಸಂಗೀತಾನಂದ ಮಾತೃಕಂ ವಂದೇ ॥೧॥

x x x x x

ಸುಲಭರ್ಸ್ನನ್ರ ನಿರೂಪಗೋನಿಕರಬ್ಭಾರ್ವಜ ಸಂದಾಹ ಮಂ
ಗಳ ವಾಚರ್ಕ್ಕವಿದೇವನಂ ಹರುಷದಿಂ ಪೇಳೆಂದು ಬತ್ತೀಶ ಪು
ಥಳಿಯ ಕಾವ್ಯಾಂಗಮುಂನೆಯ್ದೆ ಪೇಳ್ವೆ ಮುದದಿಂ ಕೇಳ್ವಾದ್ಲಕ್ಷಣಂ ಚಿತ್ರಪೊಂ
ಪುಳಿ ...ಕ್ಕರ್ಳಾಯೆನಲಿದಂ ಪೇಳ್ದಿಂ ಕಥಾಪ್ರಬಂಧಮಂ ॥ ೩ ॥

ಕೃತಿವೇಳ್ದಂ ಕವಿಬಾಳನೇತ್ರ ಕವಿದೇವಂ ಪಾಂಡುರಂಗಾತ್ಮಜಂ
ಕೃತಿನಾಥಂ ನೃಪ ಚಂದ್ರಮಂ ನಿ....ದಿತ್ಯನಂ ॥
ನತಮಂತ್ರೀಕೃತ ಲೋಕಪೂಜ್ಯಯೆನಿಕುಂ ಬತ್ತೀಶ ಸತ್ಪುತ್ರಿಕಾ
ಕೃತಿಯಂ ಮೆಚ್ಚದ ಜಾಣರಾರಿದೇಂ ಸಾಮಾನ್ಯಮಲ್ಲಂದಿರೇ ॥ ೪ ॥

ಅಂತ್ಯ: ಯಿಂತೀ ಬತ್ತೀಶ ಪುತ್ತಳಿಯ ತೆತ್ತಿಸಿದ ಸಿಂಹ್ಮಾಸನದ ಮೇಲೆ ಕುಳಿತು ಚತುಃಸ್ಸಮುದ್ರಮನಾಳ್ದ ವೀರವಿತರಣ ಪರೋಪಕಾರ ಕಲ್ಪದೃಮನಪ್ಪ ವಿಕ್ರಮಾದಿತ್ಯನ....ರಿತ್ರಮು .... ಯನ ಉಚಿತ ದಾನ ಚರಿತ್ರಮಂ ವೋದಿ ಕೇಳಿ....ದವರ್ಗ್ಗೆ ಪುತ್ರ ಪೌತ್ರಾಭಿವೃದ್ಧಿಯುಂ ವೀರವಿತರಣಮುಂ ಆಯುಸ್ಸು ವೃದ್ಧಿಯುಂ ಸಂಭವಿಕ್ಕುಂ। ಯಿಂತೀ ಬತ್ತೀಶ ಪುಥ್ಥಳಿಯ ಮೂವ್ವತ್ತೆರಡು ಕಥೆ ಸಮಾಪ್ತಂ ಮ ...ಮಹಾಶ್ರೀ....ಪ್ರಭವ ಸಂವತ್ಸರದ ಮಾಗ ಶುದ ಬಿದಿಗೆ ಯಲ್ಲು ಬತ್ತೀಶ ಪುತ್ತಳಿ ಕಥೆ ಸಮಾಪ್ತಂ ಶ್ರೀ.

ವಿಷಯ : ಬೇತಾಳರ ಕಥೆಗಳು

ವಿಶೇಷ : ಕೆಲವು ಗರಿಗಳು ಮುರಿದು ತುಂಡಾಗಿವೆ. ಅಂಚುಗಳನ್ನು ಹುಳು ತಿಂದಿದೆ. ಅತ್ಯಂತ ತ್ರುಟಿತ ಪ್ರತಿ. ಮಧ್ಯೆ ಮಧ್ಯೆ ಗ್ರಂಥಲೋಪ. ೯೯–೧೧೬ರ ವರೆಗಿನ ಪತ್ರಗಳಿಲ್ಲ.

1004

ಕೆ ೮೬	**ಬತ್ತೀಸ ಪುತ್ತಳಿ ಕಥೆ**	ಚಂಪು
೧೩.೭″ × ೧.೪″	ದೇವ	ಸು. ೧೭೩೫
೧–೧೩೮ ಪತ್ರ	೭ ಪಂಕ್ತಿ	೫೮ ಅಕ್ಷರ

ಆದಿ : ಬತ್ತೀಸ ಪುತ್ತಳಿಯ ಕಥೆ

ವೃತ್ತ ॥ ಮೌಕ್ತಿಕ ತಾಟಂಕವತಿ ಮರಕತ ಮೇಚಃ ಕಮನೋ....ಹರಾಂಗ
ಲತಾಂಗ ಅಂಗೀಕ್ರುತಪಾಣಿ ವೀಣಾಸಂಗೀತ ಆನಂದ ಮಾತ್ರಕಂ ವಂದೇ ॥೧॥

x x x x x

ಸುಲಭರ್ಸನ್ರ ನಿರೂಪಣರ್ಮನಿರ್ಕರಭಾರ್ವಜ ಸಂದೋಹ ಮಂ
ಗಳ ವಾಚಾರ್ಕ್ಕವಿದೇವನಂ ಹರುಷದಿಂ ಪೇಳೆಂದ....ಬತ್ತೀಸ ಪು

ತ್ಥಳಿಯ ಕಾವ್ಯಾಂಗ....ಪೇಳೆ ಮುದದಿಂ ಕೇಳ್ದಾ ಕ್ಷಣಂ ಚಿತ್ತಂ ಪೊಂ
ಪುಳಿಯೋಗಲ್ ಸುಜನರ್ಕ್ಕೆಳಾ ಯನಲಿದಂ ಪೇಳ್ದೆಂ ಕಥಾ ಬಂಧಮಂ ॥ ೩ ॥

ಕ್ರುತಿವೇಳ್ದ....ಕವಿಬಾಳನೇತ್ರ ಕವಿದೇವಂ ಪಾಂಡುರಂಗಾತ್ಮಜಂ
ಕ್ರುತಿನಾಥಂ ನ್ರುಪಚಂದ್ರಮಂ ನಿಜಶ್ರೀ ಯಶಶ್ರೀ ವಿಕ್ರಮಾದಿತ್ಯನಂ
ನತಮಂತ್ರೀಕ್ರುತ ಲೋಕಮಿಾದೈಮೆನಿಕುಂ ಬತ್ತೀಸ....ತ್ರಿಕಾ
ಕ್ರುತಿಯಂ ಮೆಚ್ಚದರಾರ್ದ್ಧರೆಯೊಳಿದೇಂ ಸಾಮಾನ್ಯಮಲ್ಲಂ ದಿಠಂ ॥ ೪ ॥

ಅಂತ್ಯ : ವ॥ ಯಿತಿ ಬತ್ತೀಸ ಪುತ್ಥಳಿಯ ತೆತ್ತಿಸಿದ ಸಿಂಹಾಸನದ ಮೇಲೆ ಕುಳಿತು । ಚತುಸ್ಸಮುದ್ರಮನಾಳ್ವ ವೀರ ವಿತರಣ ಪರೋಪಕಾರ ಕಲ್ಪದ್ರುಮನಪ್ಪ । ವಿಕ್ರಮಾದಿತ್ಯನ ಚರಿತ್ರಮಂ । ಬರದೋದಿ ಕೇಳಿದ ಸಜ್ಜನರ್ಕ್ಕಳಂ ಭಾಳಕ್ಷ ತಾನವರ್ಗೆ ಸಂತಾನಾರೋಗ್ಯಾಯು ಮುಂತಾದೈಶ್ವರ್ಯಾದಿ ಧರ್ಮಾರ್ಥ ಕಾಮ ಮೋಕ್ಷಾದಿಷ್ಟಾರ್ತ್ಥಮಂ 'ಕೊಟ್ಟು ಸಲಹುವೆನೆಂದುಮಾದೇವಿಯರ್ಗೆ ನಿರೂಪಿಸಿದ ಬತ್ತೀಸ ಪುತ್ಥಳಿ ಕಥೆ ಸಮಾಪ್ತಕ್ಕೆ ಜಯಮಂಗಳ ಮಹಾಶ್ರೀ.

ವಿಷಯ : ಬೇತಾಳರ ಕಥೆಗಳು

ವಿಶೇಷ : ಕೆಲವು ಗರಿಗಳು ಮುರಿದುಹೋಗಿವೆ; ಹುಳುಗಳು ತಿಂದು ತ್ರುಟಿತ ವಾಗಿವೆ. ೮೨, ೮೮ನೇ ಪತ್ರಗಳು ಮುರಿದು ತುಂಡಾಗಿವೆ.

1005

ಕೆ. ಎ. ೧	**ಬತ್ತೀಸ ಪುತ್ತಳಿ ಕಥೆ**	ಚಂಪು
೧೩" × ೮"	?	?
೧–೮೩ ಪತ್ರ	೩೦ ಪಂಕ್ತಿ	೨೪ ಅಕ್ಷರ

ಆದಿ : ಬತ್ತೀಶ ಪುತ್ಥಳಿಯ ಕಥೆ

ಶ್ರೀ ಮಹಾದೇವ ದೇವಿಯರ ಬತ್ತೀಶ ಪುತ್ಥಳಿಯ ಕಥೆಯಾದ್ಯಂತಮಂ ವರ ಖುಷಿ ನಾರದರು ಪೇಳ್ದುದಿಳೆಯೊಳ್ ಸೆರೆಯಿಹ। ಕಂಚಿಯಲಹಂಕನಾಡ ಪ್ರಭು ಚಿನ್ನ ಬೆಳ್ಳಿ ಹಸ್ಕರಿಸೆ ಅಶ್ವಪತಿರಾಯ ಶಿವಾಜ್ಞೆಯಿಂ। ಗುಬ್ಬಿ ಭೂಪ ಯಿಾ ಕಥೆಗೇಳ್ದಲಾ ।ಈ ಕೃತಿಯ ಪೆಸರು ಬತ್ತೀಶ ಪುತ್ಥಳಿ ।ಯಿಾಕೃತಿ ಗಾದಿ ದೇವ ಜಗನ್ಮಾತೆ ಚತುರೆ ಶಿವಾಜ್ಞೆಯಿಂ ಗುಬ್ಬಿಭೂಪ ಕೇಳುತ್ತಿಹ। ಕ್ಷಿತಿಯೊಳಗಿದು ಪೊಸತಲಾ ॥

ಅಂತ್ಯ : ದೇವಲೋಕದಿಂ ದೇವದುಂದುಭಿ ಮೊಳಗಿ ಸುರಪುರ್ಷ್ಪವಳೆಗರೆಯೆ ಪುಷ್ಪಕಂ ಬರಲನಿಬರುಂ ಕೈಲಾಸಕ್ಕೆ ಪೋದರ್

ಕಂ || ಸುರಲೋಕದಿಂದ ನಾರದ |
ವರಮುನಿಯೈತರಲು ಶಾಲಿವಾಹನ ವಂದಿಸಿ ||
ಕರುಣದಲಿ ಪುತ್ಥಳಿಯ ಕಥೆ |
ಯರುಪೆನುತಂ ಕೇಳೆ ಪೇಳ್ದುದಿಳೆಯೊಳ್ ಪರೆಯಿತು || ೧೧೬ ||

ಅಂತು ದಿನ ೩೨ ಕ್ಕಂ ಕಥೆ ೬೪ ಕ್ಕಂ ಮಂಗಳಮಸ್ತು ದೇವಿಯರ ಬತ್ತೀಸು ಪುತ್ಥಳಿ ಕಥೆ ಸಂಪೂರ್ಣಂ ಶ್ರೀ.

ವಿಷಯ : ಬೇತಾಳರ ಕಥೆಗಳು

ವಿಶೇಷ : ಒಟ್ಟು ೩೨ ಕಥೆಗಳಿವೆ. ಮಧ್ಯದಲ್ಲಿ ಶ್ಲೋಕ, ಪದ್ಯಗಳೂ ಇವೆ. ಗ್ರಂಥವು ಎರಡು ಸಂಚಿಕೆಯಾಗಿ ವಿಭಕ್ತವಾಗಿದೆ. ಆರಂಭದಲ್ಲಿ ಮಾತ್ರ ಶಕಟ ರೇಫವಿದೆ. ಶಿಥಿಲ ಪ್ರತಿ. ಕೆಲವು ಕಡೆ ಗ್ರಂಥ ಲುಪ್ತವಾಗಿದೆ. ಆರಂಭದ ಎರಡು ಪತ್ರಗಳಲ್ಲಿ ವಿಷಯಾನುಕ್ರಮಣಿಕೆ ಇದೆ.

1006

ಕೆ. ಎ. ೭೮	**ಬತ್ತೀಸ ಪುತ್ತಳಿ ಕಥೆ**	ಚಂಪು
೧೨.೧" × ೭.೬"	?	?
೧–೨೨೮ ಪುಟ	೨೦ ಪಂಕ್ತಿ	೨೩ ಅಕ್ಷರ

ಆದಿ : ಶುಭಮಸ್ತು || ಬತ್ತೀಸ ಪುತ್ತಳಿಯ ಕಥೆ

ವೃತ್ತ || ಶ್ರೀಮುದಿತಾನು ವೃಂದೈಶರಧಿ ನಿಧಿಗೆ ಸೊರಾಗಮಂ ಬೀರಿ ಚಂದ್ರ
ಧಾಮಂ ಪಿತಾಂಗದೈಶಂ ಭೈರವನುಗುಣಾರವೈಃ ಚಾರು ಸಂಧ್ಯಾಂಗ
ರಾಮಂ ತೇಜಂ ಪ್ರತಾಪಂ ಹರಿಸಖ ಕಮಲಾನಂದಕಂ ದೈತ್ಯನಾಶಂ ಸವವಿಾ
ಧೂಮಂ ತೇಜಪ್ರತಾಪಂ ಕೊಡುಗಭಿಮತಮಂ ವಿಕ್ರಮಾದಿತ್ಯದೇವಂ ||

ಅಂತ್ಯ : ಭೋಜರಾಯನು | ಯಿಾ ಸಿಂಹಾಸನಂ ವಿಕ್ರಮಾದಿತ್ಯರಾಯಂಗಲ್ಲದೆ ಉಳಿದ ರಾಯರಿಗೆ ಅಸಾಧ್ಯವೆಂದು | ಹಡಪಿಗನ ಕೈವಿಡಿದು ಅರಮನೆಗೆ ಚಿತ್ತೈಸಿದನೆಂಬುದೀಗ ಬತ್ತೀಸಪುತ್ಥಳಿಯ ಮೂವತ್ತೆರಡನೆಯ ಕಥಾ ಪ್ರಸಂಗಕ್ಕೆ ಬತ್ತೀಶ ಪುತ್ಥಳಿಯ ಕಥೆ ಸಮಾಪ್ತಃ ಜಯಮಂಗಳ ಮಹಾಶ್ರೀ.

ವಿಷಯ : ಬೇತಾಳರ ಕಥೆಗಳು

ವಿಶೇಷ : ಕೆಲವು ಪತ್ರಗಳ ಅಂಚುಗಳಲ್ಲಿರುವ ಸಾಲಗಳು ಕತ್ತರಿಸಿಹೋಗಿವೆ. ಬರಹವು ಸುಂದರವಾಗಿದೆ. ವೃತ್ತ, ಕಂದ, ಶ್ಲೋಕ, ಟೀಕು ಮತ್ತು ಬಹು ಭಾಗ ಗದ್ಯವೂ ಇವೆ.

1007

ಕೆ ೨೩೩	**ಬತ್ತೀಸ ಪುತ್ತಳಿ ಕಥೆ**	ಗದ್ಯ
೧೫.೨" × ೧.೪"	ಮುಮ್ಮಡಿ ಕೃಷ್ಣರಾಜ	೧೮೦೦
೧–೧೮೦ ಪತ್ರ	೫ ಪಂಕ್ತಿ	೬೦ ಅಕ್ಷರ

ಆದಿ : ಬತ್ತೀಶ ಪುತ್ತಲಿ ಕಥೆ ಬರೆಯುದಕ್ಕೆ ನಿರ್ವಿಘ್ನಮಸ್ತು ॥ ಕಾಂಬೋಜ ದೇಶದಲ್ಲಿ । ವುಜ್ಜನಿ ಮಹಾಕಾಳಿ । ಯಂಬ ಪಟ್ಟಣದ....ವಬ್ಬ ಗೋವಿಂದ । ಭಗವಾನನೆಂಬ ಬ್ರಾಂಹಣ ಯಿದ್ದನು ಆ ಬ್ರಾಂಹಣಗೆ । ಬ್ರಂಹ್ಮ ಕ್ಷತ್ರಿ । ವೈಶ್ಯ ಶೂದ್ರ । ಯಿಾ ನಾಲ್ಕು ಜಾತಿಯಲ್ಲಿಯು ಮದುವೆಗಳು ಆಗಿ । ನಾಲ್ಕು ಮಂದಿ ಶ್ರೀಯ....ಲ್ಲಿಯು । ಪುತ್ರ ಸಂತಾನವಾ ಹೆಸರುಗಳು । ಯೇನು ಯಂದರೆ ।

ಅಂತ್ಯ : [೧೭೮ನೆಯ ಗರಿ] ಮೀರಿ ಪೋದುದಕ್ಕೆ। ಚಿಂತ್ರೆ ಬೇಡಾ ಯಂದು ಪೇಳಲು। ರಾಜೇಂದ್ರ ಚೂಡಾಮಣಿ ಭೋಜರಾಯ....ದಾರಾಪುರದೊಳು ಸುಖರಾಜ್ಯಂ। ಗೈವುತಿರ್ದ। ನೆಂಬುದಂ। ಪೂರ್ವ ಕಥೆಯಲ್ಲಿ ಪರಮೇಶ್ವರನು। ಪಾರ್ವತಾದೇವಿಗೆ। ಬ್ರಂಹ್ಮತ್ಕಥೆಯಂ। ಕ್ಷಮೆ........ಂದಾ। ಭೂಭುಜಂ ಪೇಳ್ದ ಪದಿನೆಂಟನಯ। ಲಂಬಕದ । ಬತ್ತೀಸ ಪುಥಳಿಯ । ಕಥಾ ಪ್ರಬಂಥಮಂ

x x x x x

ಲೋಕೋಪ । ಕಾರಾರ್ಥವಾಗಿ । ವಿರಚಿಸಿದ । ಕೃಷ್ಣರಾಜ । ವಾಣೀವಿಲಾಸವೆಂಬ । ಬತ್ತೀಶ ಪುಥಳಿ ಕಥೆ । ಸಂಪೂರ್ನಂ । ಮಂಗಳಮಹಾಶ್ರೀ ॥

ವಿಷಯ : ಬೇತಾಳರ ಕಥೆಗಳು

ವಿಶೇಷ : ಶಿಥಿಲ ಪ್ರತಿ. ೧೨೦, ೧೨೧ನೆಯ ಗರಿಗಳಿಲ್ಲ. ೧, ೨೭, ೮೪, ೧೨೭, ೧೨೮, ೧೪೯, ೧೫೦, ೧೫೭, ೧೫೮, ೧೬೪, ೧೬೯ ಮತ್ತು ೧೭೫ ನೆಯ ಗರಿಗಳು ಬಹು ಶಿಥಿಲ ಹಾಗೂ ಅಂಚುಗಳು ಮುರಿದು ಗ್ರಂಥದ ಕೆಲವುಭಾಗ ಲುಪ್ತವಾಗಿವೆ. ಗ್ರಂಥಾಂತ್ಯದಲ್ಲಿ ಮುರಿದುಹೋಗಿರುವ ಕೆಲವು ಗರಿಗಳಿವೆ.

1008

ಕೆ. ४೧೩	**ಬತ್ತೀಸ ಪುತ್ತಳಿ ಕಥೆ**	ಗದ್ಯ
೧೪.೧" × ೧.೪"	ಮುಮ್ಮಡಿ ಕೃಷ್ಣರಾಜ	೧೮೦೦
೧–೮೮ ಪತ್ರ	೪ ಪಂಕ್ತಿ	೫೦ ಅಕ್ಷರ

ಆದಿ : ಬತ್ತೀಸ ಪುಥಳಿ ಪಸ್ತುಕ ಬರೆಯುವದಕೆ ಶುಭಮಸ್ತು॥ ಧಾರಾಪುರವೆಂಭ ಪಟ್ಟಣದಲು॥ ಭೋಜರಾಯ ...... ಯಿರಲು ॥ ವಂದು ಹೊಲದೊಳ........

ವೀಶ್ವರನ ಸಾಹಾರ್ಥದಲ್ಲು ಸ್ಥಾನದೇವತಾರ್ಚನೆ ದಾನ ಧರ್ಮಂಗ್ಗಳಂನ್ನು ಮಾಡಿ ಸಮಸ್ತ್ರಯವರ್ಧಿಯಂಬ ಪುಥಳಿ ನುಡಿದುದು.

ಅಂತ್ಯ: ಯಿಾ ಬ್ರಾಂಹ್ಮನು ಸಂತೋಷಿದಿಂದ ಕಳುಹಿಸಿಕೊಂಡು ಹೋದನೂ ರಾಯನು ತಂನ ಪಟಣಕಂ ಬಂದನೂ ಯಿಂತ್ತಾ ವುಧಾರ ಶವುರ್ಯ್ಯ ಪರಾಕ್ರಮ ಜಾಣ್ಣೆ ಸಾಹಸ ನಿಂನಗುಂಟಾದರೆ ಯಿಾ ಸಿಂಹ್ವಾಸದ ಮೇಲೆ ಕುಳಿರು ಯಿಲ್ಲವೆ ಬೇಡಾ ಯಂದು ಪುಥಳಿ ನುಡಿದುದೂ॥ ಯಿಂತೀ ಕಥೆ ೩೨ ಕಂ ಮಂಗಳ ಮಹಾಶ್ರೀ ಶ್ರೀ ಭತೀಸ ಪುತ್ಥಳಿ ಪಸ್ತಕಂ ಮಂಗಳ ಮಹಾಶ್ರೀ ವಿರೋಧಿ ಸಂವತ್ಸರ ಜೇಷ್ಮ ಶು. ೫ ಭಾನುವಾರ ವರಿಗೆ ಬರದ ಪಸ್ತುಕಕ್ಕೆ ಮಂಗಳ ಮಹಾಶ್ರೀ.

ವಿಷಯ: ಬೇತಾಳರ ಕಥೆಗಳು

ವಿಶೇಷ: ಒಟ್ಟು ೩೨ ಕಥೆಗಳಿವೆ. ಪತ್ರಗಳು ತ್ರುಟಿತ, ಅಲ್ಲಲ್ಲಿ ಗರಿಗಳು ಮುರಿದು ಹೋಗಿವೆ. ಮಧ್ಯದಲ್ಲಿ ಕೆಲವು ಶ್ಲೋಕಗಳು ಮತ್ತು ಅವಕ್ಕೆ ತಾತ್ಪರ್ಯವೂ ಇವೆ. ೩೮ನೇ ಗರಿಯ ಅರ್ಧ ಭಾಗ ಮಾತ್ರ ಇದೆ.

1009

ಕೆ. ಬಿ. ೬/೨	**ಬತ್ತೀಶ ಪುತ್ತಳಿ ಕಥೆ**	ಗದ್ಯ
೯.೭" × ೭.೮"	?	?
೧–೩೬ ಪತ್ರ	೨೬ ಪಂಕ್ತಿ	೨೫ ಅಕ್ಷರ

ಆದಿ: ಶುಭಮಸ್ತು

ಕೈಲಾಸವಾಶಿ ಕಪಾಲಪಾ....ಯಾಧಾ। ಪರಶಿವನಾದಾ ಮೂರ್ತ್ತಿಯೂ। ಪಾರ್ವತ್ತಿದೇವಿಯೂ ಲೀಲಾ ವಿನೋದದಲ್ಲಿ। ಯಿರುವಂತ್ತ ವ್ಯಾಳೆಯಲ್ಲೀ। ಗಿರಿಜಾತೆ ಯಿಂತ್ತೆಂದಳೂ॥ ದೇವಾದಿದೇವನಾದ। ಮಹಾದೇವನೆ ನನಗೆ ಯಿಧು ಅಪುರ್ವವಾಗಿ ಯಿರುವಂತ್ತ॥ ಕಥೆಯಂನ್ನು ನಿರೂಪಿಸಿಬಹುದೆಂಬು ದಾಗಿ ಬಿಂನ್ನಹಂಗೈದು ಶ್ರುತಪಡಿಸಲಾಗಿ ಆ ಗಿರಿಜೆ ವಾಕಿಗೆ ಪರಶಿವನ್ನೂ ಪರಿಣಾಮಚಿತ್ತದಿಂದಾ ಯಿಂತೆಂದನ್ನೂ.

ಅಂತ್ಯ: ಪಾರ್ವತಿಗೆ ಪರಮೇಶ್ವರ ನಿರೂಪಿಸಿದ ಬ್ರಂಹ್ಮ ಸತ್ಕತ್ತೆಯಂಭ ಭತ್ತೀಸ ಪುತ್ತಲಿ ಪ್ರಸಂಗದ ಪ್ರಭಂದವಂ ಲೋಕ ವಿಕ್ಯಾತನಾದ ವಿಕ್ರಮಾದಿತ್ಯ ರಾಯನಾ ವೀರತ್ವವಂ ಕನಕ ಪಾಂಡುರಂಗನಾತ್ತನ ಕುಮಾರ ಭಾಳಲೋಚನ ನೆಂಭ। ಕರಣಕವೀಶ್ವರನೂ। ದೇವನಿಂಥ ನಿರ್ಮಿಶಿಥಂತ್ತಾ ಯಿಾ ಧೈರ್ಯ್ಯಂ ಮ್ಮುತ್ತವಂ। ಸುಜನರಾದವರೂ। ಪೇಳಿ ಕೇಳಿಥರೆ ಯಿಷ್ಟಾರ್ತ್ಥ ಸಿಧ್ಧಿಪು

ದೆಂಥೂ ಪೇಳಿ ಯಿಂತ್ರ ಕರ್ನಾಟಕ ಭಾಷ| ವಿರಚಿತ್ರಮಪ್ಪ ವಿಕ್ರಮಾದಿತ್ಯ ರಾಯನಾ| ಚರಿತ್ರೆ| ವಾಮಲೋಚನೆಯಂಭ ಪುತ್ತಲ್ಲಿಯೂ ಪೇಳಿಥ ಮೂವತ್ತೆರಡನೆ ಕತ್ತೆಗೆ ಮಂಗಳ ಮಾಹಾಶ್ರೀ| ಶಾರ್ವರೀ ಸಂವತ್ಸರಥಾ ಮಾರ್ಗಿ ಶಿರ....೧ಳ ಯಲ್ಲು ಬತ್ತೀಸ ಪುತ್ತಲ್ಲಿ ಕತ್ತೆ....ಸಂಪೂರ್ಣ ಮಂಗಳ ಮಾಶ್ರೀ.

ವಿಷಯ : ಬೇತಾಳರ ಕಥೆಗಳು

ವಿಶೇಷ : ಗ್ರಂಥಾಂತ್ಯದಲ್ಲಿ ಒಂದು ಹಾಡು ಇದೆ. ಇದೇ ಪುಸ್ತಕದಲ್ಲಿ ಪಂಚತಂತ್ರ ವೆಂಬ ಕೃತಿ ಇದೆ. ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳೂ ಮತ್ತು ಒಂದು ದೇವೀ ಚಿತ್ರವೂ ಇದೆ. ಪತ್ರಗಳನ್ನು ಹುಳು ತಿಂದಿದೆ.

1010

ಕೆ. ಬಿ. ೧೪೯	**ಬತ್ತೀಸ ಪುತ್ತಳಿ ಕಥೆ**	ಗದ್ಯ
೭.೫" × ೬"	?	?
೧–೧೬೯ ಪತ್ರ	೧೩ ಪಂಕ್ತಿ	೨೧ ಅಕ್ಷರ

ಆದಿ : ಬತ್ತೀಸ ಪುತ್ಥಳೀ ಕಥೆ ಪ್ರಾರಂಭಃ
ಪೂರ್ವದಲ್ಲಿ ರಾವಣೇಶ್ವರನ ಕೈಯಿಂದ ಯತ್ತಲಪ್ಪಟ್ಟ ಕೈಲಾಸ ಪರ್ವತದಲ್ಲಿ ಪಾರ್ವತಿಯು ಪರಮೇಶ್ವರನು ಲೀಲಾವಿನೋದದಿಂದ ಯಿರುವ ಸಮಯದಲ್ಲಿ ಪಾರ್ವತಾದೇವಿಯು ಪರಮೇಶ್ವರನೊಡನೆ ಸ್ವಾಮಿಾ, ಯಿಾಗ ನನಿಗೆ ಬಹಳ ಬೇಸರವಾಗಿ ಯಿಥೆ ನಿಂಮ ಸಂಗಡ ಅಪೂರ್ವವಾದ ವಂದು ವಳೆ ಕಥೆಯಂ ಕೇಳಬೇಕೆಂಬ ಇಚ್ಛೆ ಉಂಟಾಗಿ ಯಿಥೆ. ಅಪ್ಪಣೆಯಂ ಕೊಡಬೇಕೆಂದು ಕೇಳಿದ ಕಾರಣ ಪಾರ್ವತಾದೇವಿಯೊಡನೆ ಯಿಾಶ್ವರನು ವಂದು ಕಥೆಯಂ ಹೇಳುತ್ತಿರ್ದನೂ.

ಅಂತ್ಯ : ವರರುಚಿ ಪೇಳಿದ ಮಾತಿಗೆ ನಮ್ಮ ಭೋಜರಾಯ ಅತಿ ಸಂತೋಷಪಟ್ಟು ವರರುಚಿಗೆ ಕೋಟಿ ವರಹವಂ ಕೊಟ್ಟು ಮಂನಿಸಿದ ನಂಮ ರಾಯನು ಯೆಂದು ಚಿತ್ರಶರ್ಮ ನುಡಿದ ಮಾತಿಗೆ ವಾಮಲೋಚನೆ ಯಂಬ ಪುತ್ಥಳಿಯು ಗಹಗಹಿಸಿ ನಕ್ಕು ಹಾಸ್ಯವಂ ಮಾಡಿ ಪೇಳಿದ ಉಪಕಥೆ.

ವಿಷಯ : ಬೇತಾಳರ ಕಥೆಗಳು

ವಿಶೇಷ : ಒಟ್ಟು ೩೨ ಕಥೆಗಳಿವೆ. ೧೪೭ನೆಯ ಪತ್ರದಿಂದ ೩ ಪತ್ರಗಳಲ್ಲಿ ಬರವಣಿಗೆ ಇಲ್ಲ. ಅಷ್ಟು ಭಾಗ ಗ್ರಂಥ ಲುಪ್ತವಾಗಿದೆ; ಎಂದರೆ ೨೧ನೆಯ ಕಥೆಯ ಉತ್ತರಾರ್ಧವಿಲ್ಲ. ಇಲ್ಲಿಂದ ಮುಂದೆ ಬೇರೆ ವಿಧವಾದ ಕಾಗದವಿದೆ.

1011

ಕೆ. ಬಿ. ೧೬೬ ಬಭ್ರುವಾಹನನ ಕಾಳಗ ಯಕ್ಷಗಾನ

೭.೬" × ೬.೩" ಲಿಂಗರಾಜ ೧೮೫೦

೧–೬೧ ಪತ್ರ ೧೧ ಪಂಕ್ತಿ ೨೧ ಅಕ್ಷರ

ಆದಿ : ಬೊಬ್ರುವಾಹನನ ಕಾಳಗ ಬರೆವರೆ ಶುಭಮಸ್ತು.

ವಾರ್ದಿಖ|| ನಿಸ್ತುಲ ತಪೋವನ್ಹಿಹುತ ಸಮುಸ್ತಕ್ಲೇಶ
ಶಸ್ತ್ರವೈಶಂಪಾಯನನೆ ಹಂಸಕೇತುವಂ
ಕೌಸ್ತುಭಾಭರಣನೊಡಬಡಿಸಿ ನರನೊಡನೆ ಸಾಹಾರ್ಥವಂ ಬೆಳಸಿ ತಾನು ||
ಹಸ್ತದಿಂ ಮುಡಿದಡವಿ ವಿಜಯನಂ ಪರಸುತ್ತ
ಹಸ್ತಿನಾಪುರದತ್ತ ಬಿಜಯಂಗೈಯೆ ಬಳಿಕ ಭೂ
ಪಸ್ಥೋಮಮಂ ಕೂಡಿ ಮುಂದಾರಗೆಲ್ದನದನುಸುರೆಂದು ನೃಪನೆರಗಲೂ ||೧||

ಅಂತ್ಯ : ಬಳಿಕ ಶೇಶನ ಬೀಳ್ಕೊಳುತ ಮುಂದಿಹ ನೃಪತಿ
ಗಳು ಶೂರರದರಿಂದಲೊಡನೆ ನಾನೇ ಪೋಪೆ
ನೆಲದೊಡೆಯ ಧರ್ಮಜನದೇನು ಚಿಂತಿಪನೊ ಪೋಗೆನುತ ಭೀಮಾದಿಗಳ ||
ಕಳುಪುತ್ತ ಬಬ್ರುವಾಹಂ ಬೆರಸು ಬಲವೆರದು
ನಳಿನನಯನಂ ವಿಜಯ ಸಹಿತ ಪೊರಮಟ್ಟನೆಂ
ದೊಲಿದು ಜನಮೇಜಯ ಮಹೀಪತಿಗೆ ಪೇಳಿದಂ ಮುನಿಪ
ವೈಶಂಪಾಯನೂ || ೧೯೬ ||

x x x x x

ಕಂದ || ದ್ವಿರದರಸರಂದ್ರಗಾಸರ
ಪರಿಮಿತ ಕಲಿವತ್ಸರಂಗಳಿಳೆಯೊಳ್ಕಳಿಯಲ್
ದುರಧೀರ ಬಬ್ರುವಾಹನ
ಚರಿತವನೀ ಲಿಂಗರಾಜನೊಯ್ಯೊಳುಸುರ್ದಂ || ೫೦೦ ||

ಅಂತು ಸಂಧಿ ೫೦೦ ಕಾಂ ಪದ ಮಂಗಳ ಮಹಾಶ್ರೀ.

ವಿಷಯ : ಅರ್ಜುನನಿಗೂ ಬಭ್ರುವಾಹನನಿಗೂ ನಡೆದ ಕಾಳಗದ ಕಥೆ.

ವಿಶೇಷ : ವಿರಳಾಕ್ಷರ.

1012

ಕೆ. ಬಿ. ೨೧೩ ಬಭ್ರುವಾಹನನ ಕಾಳಗ ಯಕ್ಷಗಾನ
೭.೭" × ೫.೯" ಲಿಂಗರಾಜ ೧೮೫೦
೧–೭೪ ಪತ್ರ ೧೪ ಪಂಕ್ತಿ ೧೨ ಅಕ್ಷರ

ಆದಿ: ಶುಭಮಸ್ತು|| ಬಬ್ರುವಾಹನನ ಕಾಳಗ ಬರಿಯುವದಕ್ಕೆ ನಿರ್ವಿಘ್ನಮಸ್ತು ನಾಂದೀ ಕಂದ ||

ವಾರ್ಧಕ|| ನಿಸ್ತುಲ ತಪೋವನ್ಹಿಹುತ ಸಮಸ್ತಕ್ಲೇಶ
ಶಸ್ತ್ರವೈಶಂಪಾಯನನೆನೆ ಹಂಸಕೇತುವಂ
ಕೌಂಸ್ತುಭಾಭರಣನೊಡಬಡಿಸಿ ನರನೊಡನೆ ಸಾಹಾರ್ಥವಂ
ಬೆಳಸಿ ತಾನೂ
ಹಸ್ತದಿಂ ಮುಡಿದಡವಿ ವಿಜಯನಂ ಪರಸುತ್ತ
ಹಸ್ತಿನಾಪುರದತ್ತ ಬಿಜಗೈಯ್ಯೆ ಬಳಿಕ ಭೂ
ಪಸ್ತೋಮಮಂ ಕೂಡಿ ಮುಂದಾರ ಗೆಲ್ವನದನುಸುರೆಂದು
ಪದಕೆರಗಲು || ೧||

ಅಂತ್ಯ:

ವಾರ್ಧಕ|| ಬಳಿಕ ಶೇಷನ ಬೀಳ್ಕೊಳುತ್ತ ಮುಂದಿಹ ನೃಪತಿ
ಗಳು ಶೂರರದರಿಂದಲೊಡನೆ ನಾನೇ ಪೋಪೆ
ನೆಲದೊಡೆಯ ಧರ್ಮಜನದೇಸು ಚಿಂತಿಪನೊ ಪೋಗೆನುತ ಭೀಮಾದಿಗಳನು
ಕಳುಪುತ್ತ ಬಭೃವಾಹಂ ಬೆರಸು ಬಲವೆರದು
ನಳಿನನಯನಂ ವಿಜಯ ಸಹಿತ ಪೊರಮಟ್ಟನೆಂ
ದೊಲಿದು ಜನಮೇಜಯ ಮಹೀಪತಿಗೆ ಪೇಳಿದಂ ಮುನಿಪ ವೈಶಂ
ಪಾಯನು || ೪೨೨ ||

ಕಂದ || ದ್ವಿರದ ರಸರಂಧ್ರ ಸಾಗರ
ಪರಿಮಿತ ಕಲಿವತ್ಸರಂಗಳಿಳೆಯೊಳ್ಕಳಿಯ
ಲ್ಧುರಧೀರ ಬಭ್ರುವಾಹನ
ಚರಿತವನೀ ಲಿಂಗರಾಜನೋಜೆಯೊಳುಸುರ್ದಂ ||
ಶ್ರೀರಾಮಾಯ ನಮಃ

ವಿಷಯ : ಅರ್ಜುನನಿಗೂ ಬಭ್ರುವಾಹನನಿಗೂ ನಡೆದ ಕಾಳಗ

ವಿಶೇಷ : ತೆಳುವು ಕಾಗದ, ಶಿಥಿಲಪ್ರತಿ. ಅಂತ್ಯದ ನಾಲ್ಕು ಪತ್ರಗಳ ನಡುವೆ ಹುಳು ತಿಂದು ರಂಧ್ರ ಬಿದ್ದಿದೆ.

1013

ಕೆ. ಎ. ೨೫೮/೧ **ಬಭ್ರುವಾಹನನ ಕಾಳಗ** ಯಕ್ಷಗಾನ

೧೩.೪" × ೬" ? ?

೧–೪೯ ಪತ್ರ ೨೦ ಪಂಕ್ತಿ ೨೦ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ। ಭಾರತದೊಳಗಣ ಬಭ್ರುವಾಹನನ ಕಾಳಗ
ಬರೆಯುವದಕ್ಕೆ ನಿರ್ವಿಘ್ನಮಸ್ತು। ರಾಗ ನಾಟಿ। ತಾಳ। ಜಂಪೆ।
ಶರಣು ಶಶಿಧರಪುತ್ರ ಶರಣು ಸಕಲವಿಶಾಸ್ತ್ರ
ಶರಣು ಕೋಮಲಗಾತ್ರ ಶರಣು ಸುಚರಿತ್ರಾ॥
ಶರಣು ವಿದ್ಯಾಗಾತ್ರ ಶರಣು ಸುರಗಣಮಿತ್ರ
ಶರಣು ಪರಮ ಪವಿತ್ರ ಶರಣು ಭವ ಹೋತ್ರಾ ಶರಣುಶರಣೂ ॥ ೧ ॥

x x x x x

ವಾರ್ದಿಕ್ಯ॥ ಭಾರತಿಯ ಬಲಗೊಂಡು ಶುಕ ಶೌನಕರ್ಗೆರಗಿ
ನಾರದಾದ್ಯರ ವ್ಯಾಸ ಮುನಿಯಂಘ್ರಿಯಂ ಭಜಿಸಿ
ಭಾರತಾಂವೃತ ಶರಧಿಯೊಳಗೆ ಪಿರಿದಾಗಿರುವ ಅಶ್ವಮೇಧದ ಕಥೆಯನೂ ॥
ಧಾರುಣಿಯೊಳರಿವಂತೆ ಯಕ್ಷಗಾನ ಕ್ರಮದಿ
ಸಾರನಿದ ಪೇಳ್ವೆನಾ ಸ್ರುತಿ ತಾಳ ಬಂದದಿಂ
ವಾರುಧಿಯ ತಡಿಯ ವುಡುಪಿನಲಿ ನೆಲಸಿರುವ ಶ್ರೀ ಕೃಷ್ಣನ
ಕಟಾಕ್ಷದಿಂದಾ ॥ ೯ ॥

ಅಂತ್ಯ: ವಾರ್ದಿಕ್ಯ॥

ಅರಸ ಕೇಳ್ ಕೃಷ್ಣನಪ್ಪಣೆಯಿಂದ ಪ್ರದ್ಯುಂಮ್ನ
ಪೊರಡಿಸುತ ಸಕಲಸೇನಾನಿವಹ ಹಯಮೇದ
ತುರಗ ಸಹಿತಲೆ ನಡವ ಭರಕೆ ದಿಗ್ಗಜಗಳಂ ಕಳವಳಿಶಿ ಕಂಪಿಸಲ್ಕೆ ॥ ೦ ॥

ತುರಗಮಂ ಚಪ್ಪರಿಶಿ ಕೃಷ್ಣ ರಥ ಹಾರಿಸುತ
ನರಗೆ ಕರ್ಪುರವೀಳ್ಯ ಮಡಿದಿತ್ತ ಸಂಭ್ರಮವೂ
ಸುರರು ಕಾಣುತ ಪುಷ್ಪವೃಷ್ಟಿಯ ದುಂದುಭಿಯ ರವದಿ ನರಹರಿಯ
ಮೇಲ್ಗರದರೂ ॥ ೧ ॥

ಅಂತ್ತು ಸಂಧಿ ೩ ಕ್ಕಂ ಪದ ೫೮೭ ಕ್ಕಂ ಮಂಗಳ ಮಹಾಶ್ರೀ

ವಿಷಯ : ತಂದೆಯಾದ ಅರ್ಜುನನೊಡನೆ ಬಭ್ರುವಾಹನನು ಕಾದಿದ ಪ್ರಸಂಗ.

ವಿಶೇಷ : ಶಿಥಿಲಪ್ರತಿ. ಕ್ರಮಸಂಖ್ಯೆ ಸರಿಯಾಗಿಲ್ಲ. ಇದೇ ಪುಸ್ತಕದಲ್ಲಿ 'ಇಂದ್ರಕೀಲ' ವೆಂಬ ಮತ್ತೊಂದು ಗ್ರಂಥವಿದೆ.

1014

ಕೆ. ಬಿ. ೧೬೪ **ಬಲಿಚಕ್ರವರ್ತಿಯ ಚರಿತ್ರೆ** ಯಕ್ಷಗಾನ

೭.೭" × ೬.೧" ನಂಜುಂಡ ?

೧–೪೮ ಪತ್ರ ೧೧ ಪಂಕ್ತಿ ೨೧ ಅಕ್ಷರ

ಆದಿ : ಭಾಗವತದೊಳಗಣ ಬಲಿಚಕ್ರವರ್ತಿ ಚರಿತ್ರೆ ಪ್ರಾರಂಭಃ ।

ನಾಂದಿ ॥ ವೃತ್ತಾ॥
ಶ್ರೀಮತ್ಕುಡುಮಪುರೀಶೋ
ದ್ಧಾಮಂ ನಿಗಮೋತ್ತಮಾಂಗವೇದ್ಯಂ ಸುಖದಂ
ಸೋಮಾರ್ಕವನ್ಹಿನಯನಂ
ಭೀಮಂ ಕೊಡಲೆಮುಗಭೀಷ್ಟಮಂ ದಯದಿಂದಂ ॥ ೧ ॥

x x x x x

ಭಾಗವತ ಕಥನದೊಳು ಬಲಿಚಕ್ರವರ್ತಿ
ಗಾಗಿ ವಾಮನ ತ್ರಿವಿಕ್ರಮ ಮಹಾಮೂರ್ತಿ ॥ ೧೧ ॥

ಯಾದ ಶ್ರೀಹರಿಯ ಚರಿತವನು ಶುಕಮುನಿಯು
ವೋದದಿ ಪರೀಕ್ಷಿತಂಗೊರದುದೀ ಕಥೆಯು ॥ ೧೨ ॥

ಅಂತ್ಯ : ಬಾಲೇಂದು ಮೌಳಿಗೆ ಸಾನಂದ ಕೇಳಿಗೆ
ಗಿರಿನಂದನೆ ವರ ವರ ಶುಭಕರ ಶಿವಗೆ ಮಂಗಳಂ ॥ ೩೮೩ ॥

ಖಳಕುಂಜರಾರಿಗೆ ಮೃಗಮಂಜುಧಾರಿಗೆ
ಶ್ರೀ ಮಂಜುನಾಥ ಭೂತನಾಥ ಶಿವಗೆ ಮಂಗಳಂ ॥ ೩೮೪ ॥

ಕಂದಪದ್ಯ ॥ ವರಕಲಿವತ್ಸರನಾಲ್ಸಾ
ಸಿರವಾಷ್ಟ ಚತುರದಾ ಸ್ವಭಾನುವು ಮಾರ್ಗೀ
ಶರ ಬಹುಳ ಚತುರ್ದಸಿ ವಾ
ಸರ ಕಲಿದಿನ ಬಲಿಚರಿತೆಯೊರದ ನಂಜುಂಡಾ ॥ ೩೮೫ ॥

ಅಂತು ಬಲಿಚರಿತ್ರೆ ಸಂದಿ ೨ ಕಾಂ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ವಾಮನನು ಬಲಿಚಕ್ರವರ್ತಿಯಲ್ಲಿ ದಾನವನ್ನು ಬೇಡಿ ಆತನನ್ನು ಪಾತಾಳಕ್ಕೆ ತುಳಿದ ಕಥೆ.

ವಿಶೇಷ : ಕೆಲವು ಪತ್ರಗಳನ್ನು ಹುಳು ಕೊರೆದಿದೆ. ವಿರಳಾಕ್ಷರ.

1015

ಕೆ. ಬಿ. ೨೧೧ **ಬಲಿಚಕ್ರವರ್ತಿಯ ಚರಿತ್ರೆ** ಯಕ್ಷಗಾನ

೮.೧" × ೬.೨" ನಂಜುಂಡ ?

೧–೫೧ ಪತ್ರ ೧೫ ಪಂಕ್ತಿ ೧೬ ಅಕ್ಷರ

ಆದಿ : ಶ್ರೀ ಶುಭಮಸ್ತು॥ ಸರ್ನ ೧೮೮೮ನೆ ಯ್ಸಿವಿ ಮಾರ್ಚಿ ತಾರೀಖು ೨೯ರಲ್ಲು ಸೂರ್ಯ ನಾರಾಯಣ ಶಾಸ್ತ್ರಿಗಳ ಪುಸ್ತುಕಕ್ಕೆ ವಿರೋಚನ ಕಥೆ ಬಲಿ ಚರಿತ್ರೇ ಬರಿಯುವದ್ದಕ್ಕೆ ಐಶ್ವರ್ಯ ಆಯುರಾರೋಗ್ಯಮಸ್ಥು ನಿರ್ವಿಘ್ನಮಸ್ಥು

ನಾಂದೀ॥ ಶ್ರೀಮತ್ಕುಡುಮಪುರೀಶೋ
ದ್ದಾಮಂ ನಿಗಮೋತ್ತಮಾಂಗವೇದ್ಯಂ ಸುಖದಂ
ಸೋಮಾರ್ಕ ವಂಹ್ನಿ ನಯನಂ
ಭೀಮಂ ಕೊಡಲೆಮಗಭೀಷ್ಟಮಂ ದಯದಿಂ ॥ ೧ ॥

x x x x x

ಭಾಗವತ ಕಥನದೊಳು ಬಲಿಚಕ್ರವರ್ತಿ
ಗಾಗಿ ವಾಮನ ತ್ರಿವಿಕ್ರಮ ಮಹಾಮೂರ್ತಿ ॥ ೧೧ ॥

ಯಾದ ಶ್ರೀಹರಿಯ ಚರಿತವನು ಶುಕಮುನಿಯು
ವೋದದಿ ಪರೀಕ್ಷಿತಂಗೊರದುದೀ ಕಥೆಯೂ ॥ ೧೨ ॥

ಅಂತ್ಯ : ಬಾಲೇಂದು ಮೌಳಿಗೆ ಸಾನಂದ ಕೇಳಿಗೆ
ಗಿರಿನಂದನೆ ವರ ವರ ಶುಭಕರಾ ॥ ೩೮೩ ॥

ಖಳ ಕುಂಜವಾರಿಗೆ ಮೃಗಮಂಜುಧಾರಿಗೆ
ಶ್ರೀಮಂಜುನಾಥ ಭೂತನಾಥ ॥ ೩೮೪ ॥

ಕಂದ ॥ ವರಕಲಿವತ್ಸರ ನಾಲ್ಸಾ
ಸಿರ ನವಾಷ್ಟ ಚತುರಾದಾ ಸ್ವಭಾನುವ ಮಾರ್ಗೀ
ಶರಬಹುಳ ಚತುರ್ದಸೀ ವಾ
ಸರ ಕಲಿದಿನ ಬಲಿಚರಿತೆಯೊರೆದ ನಂಜುಂಡಂ ॥

ಅಂತು ಸಂದಿ ೨ಕ್ಕೆ ಬಲಿಚರಿತ್ರೆ ಮಂಗಳ ಮಹಾಶ್ರೀ.

ವಿಷಯ : ವಾಮನನು ಬಲಿಚಕ್ರವರ್ತಿಯಲ್ಲಿ ದಾನವನ್ನು ಬೇಡಿ ಆತನನ್ನು ಪಾತಾಳಕ್ಕೆ ತುಳಿದ ಕಥೆ.

ವಿಶೇಷ : ತೆಳುವು ಕಾಗದ, ಸ್ಫುಟಾಕ್ಷರ.

1016

ಕೆ ೧೯೩ **ಬಸವ ಚರಿತ್ರೆ** ಭಾಮಿನೀ ಷಟ್ಪದಿ

೧೩.೧" × ೧.೧" ? ?

೧–೫೬ ಪತ್ರ ೪ ಪಂಕ್ತಿ ೪೪ ಅಕ್ಷರ

ಆದಿ : ಭಸವ ಚರಿತ್ರೆ ಬರೆಯುವದಕ್ಕೆ ಶುಭಮಸ್ತು | ಗ್ರಂಥಾ |
ಅನಾದಿ ಆದಿರೂಪಾಯ ನಿರ್ಗುಣಾಯ ಗುಣಾತ್ಮನೇ |
ಸಮಸ್ಥ ಲೋಕ ನಾಥಾಯಾ ಕರ್ಥಾಯ ಮಮಪ್ರಭೂ || ೧ ||

ಮಹಂ ಕಾಳ ಜಗಂನಾಥಾ ಮಹಾದೇವೋ ಜಗತ್ಪತಿಃ |
ವುಬೆ ಯಸ್ಯ ಪರಂ ನಾಸ್ತಿ ಯೇಕರೂಪೋ ಜಗದ್ಗುರೂ || ೨ ||

ಜಗದ್ಭರಿತ ಮಹಾದೇವೋ ತೇಜೋರ್ಲಿಂಗಸ್ಯ ವಿಸ್ತರಯರ್ಕ |
ವೃಷಭಸ್ಯ ದರ್ಮರೂಪಾಯ ಪೀಡತ್ವಚಗೈರ್ತ || ೩ ||

ಆದಿಸೂನ್ಯ ಅಂತ್ಯಸೂನ್ಯ ಮದ್ಯಸೂನ್ಯ ನಿರಾಮಯಾ |
ಸರ್ವಸೂನ್ಯ ನಿರಾಕಾರಂ ನಿಶಬ್ದಂ ಬ್ರಂಹ್ಮಮುಚ್ಯತೇ || ೪ ||

x x x ಭಾಮಿನೀಷಟ್ಪದಿ | ರಾಗಾ | ಶಾಂತಮುಲಾಹರಿ |

ಪಲ್ಲ || ಶ್ರೀ ಬಸವಲೀಲಾವಿನೋದವ
ಶ್ರೀ ಬಸವ ಘನತೇಜ ಮಹಿಮೆಯ
ಶ್ರೀ ಬಸವನ ಪುಂಣ್ಯಾಭಿಚರಿತೆಯ ಗಿರಿಜೆ ಕೇಳೆಂದಾ |

ಅಂತ್ಯ : ಆ ಬಸವಂಣನ ಪಾದಪದ್ಮಂಗಳಿಗೆ ತ್ರಿಸಂದ್ಯಾ ಅಹೋರಾತ್ರೆಯಲ್ಲು ನಮೋ ನಮೋ ಯಂದು ಬದುಕಿದೆನು ಕಣ | ಆ ಗುರುಚಂನಮಲ್ಲಿಕಾರ್ಜುನಪ್ರಭೂವೇ ಪಂಚ್ಚಸ್ತಲಕೆ ಸೇರಿದಾ ಗ್ರಂಥಾ | ಗ್ರಂಥಾಸಷ್ಟಾಪದಾ ||೨೬೬|| ಕಂ ಮಂಗಳ ಮಹಾಶ್ರೀ. ರುಧಿರೋದ್ಗಾರಿ ಸಂವತ್ಸರದ ವೈಶಾಖ ಬಹುಳ ೧೪ ಯಲು ಶನಿವಾರದಲ್ಲು ಅಸ್ತಮಯ ಕಾಲಕ್ಕೆ ಬಸವ ಚರಿತ್ರೆ ಸಂಪೂರ್ನ ಮಂಗಳಂXX ಯಿಾ ಬಸವ ಚರಿತ್ರೆ ಯಲ್ಲಿದೊ ತಿಳಿಯಲಿಲ್ಲಾವಾದರಿಂದ ಜಾಗ್ರತೆಯಾಗಿ ಬರದುಯಿದೇನೆ. ನಾನು ತಿದ್ದುವಥಕ್ಕೆ ಬರಪ್ದೆ ಹೊರತು ನಾನು ಚಂನಾಗಿ ಬರೆ ಲಿಲ್ಲವಾದರಿಂದ ಬೈಯಲಾಗದು. ಯಾಕ್ಕಂದರೆ ಪ್ರತಿಸ್ಯೇಹಳಗನಡು ಆದರಿಂದಾ ತಪಂ ಬರದಿರ್ದಡಂ ವಪದಿಂದೋದಿಕೊಳ್ಳುವದು. ತಪ್ಪೆಂದು ಬೈದಡೆ ಆ ಪಾಪ ನಿಂಮ್ಮನ್ನೆ ಕೂಡಿದು | ಪ್ರತಿಯಿದ ಹಾಗೆ ಬರದು ಯಿದೆನೇ ಬರವಾತಾ ವೀರಣಗೆರೆ ದೊಡ ಸುಬ್ಬೈಯನ ಮೊಂಮ್ಮಗ ದ್ಯಾವೈಯನ ಬರಹಾ ||

ವಿಷಯ : ಬಸವನ ಚರಿತ್ರೆ

ವಿಶೇಷ : ಕೆಲವು ಪತ್ರಗಳನ್ನು ಹುಳು ಹೊಡೆದಿದೆ. ದಪ್ಪಕ್ಷರ. ೧ನೇ ಪತ್ರದ ಒಂದು ಪಾರ್ಶ್ವದಲ್ಲಿ ಗ್ರಂಥಕ್ಕೆ ಸಂಬಂಧಪಡದ ಬರವಣಿಗೆಯಿದೆ. ಕ್ರಮಾಂಕ ೨೪ರವರೆಗೆ ಸರಿಯಾಗಿದ್ದು ಮತ್ತೆ ೧೫ರಿಂದ ಕ್ರಮವಾಗಿ ಮುಂದುವರಿದಿದೆ. ಇದರಿಂದ ಒಟ್ಟನಲ್ಲಿ ೬೬ ಪತ್ರಗಳಿದ್ದಂತಾಗುತ್ತದೆ.

1017

ಕೆ. ೨೬೩/೨	**ಬಸವ ಚರಿತ್ರೆ**	ಭಾಮಿನೀ ಷಟ್ಪದಿ
೭.೬" × ೨"	?	?
೧–೨೮ ಪತ್ರ	೯ ಪಂಕ್ತಿ	೪೦ ಅಕ್ಷರ

ಆದಿ : ಬಸವ ಚೆರಿತ್ರೆ ಬರವುದಕ್ಕೆ ಯ್ಯೆಶ್ವರ್ಯಮಸ್ತು|

ರಾಗ| ಶ್ಯಾಂತ ಮಲಹರಿ|| ಸಾಕ್ಷಿ||

ಆದಿಸುನ್ಯ ಅತ್ಯೀತ ಸೂನ್ಯ ಮದ್ಯ ಸುನ್ಯ ನಿರಮಯಂ ಸರ್ವ್ವಸೂನ್ಯಂ
ನಿರಕಾಕಾರಂ ನಿಶಬ್ದಂ ಬ್ರಂಹ್ಮಮುಚ್ಯತೇ ||೧||

ವಾತತಿತಂ ಮನತಿತಂ ಭಾಗತಿತಂ ಮಘೋಚರಂ
ಸರ್ವ್ವಸೂನ್ಯ ನಿರಾಕಾರಂ ನಿತ್ಯತ್ವಂ ಪರಮಂ ಪದಂ ||೨||

ನಿರ್ಮ್ಮಳಂ ಚ ನಿರಾಕಾರಂ ನಿರ್ವ್ವಚ್ಚಕ ನಿರಾಮಯಂ
ನಿಭ್ರಾಂತಂತು ಕಥಾದೇವಿ ಬ್ರಂಹ್ಮಗ್ನಾನಪ್ರಕಾಸಿತೆಂ ||೩||

ಪದನೂ||

ಶ್ರೀ ಬಸವಲೀಲಾ ವಿನೋದ
ಶ್ರೀ ಬಸವ ಘನತೇಜಮಹಿಮೆಯ
ಶ್ರೀ ಬಸವಪುಣ್ಯಾಂದಿ ಚೆರಿತ್ರೆಯ ಗಿರಿಜೆ ಕೇಳೆಂದ || ಪಲ್ಲ||

ಗಿರಿಜೆ ಕೇಳ್ಮುಂನಾದಿಯಲಿ ನಾ
ಪರಮನಲ್ಲದೆ ಸ್ಮರಿಸೆ ಬಸವ
ಚರಣ ಕಮಲ ಪಿಡೆಯೆನಾತನ ಘನಕೆ ಘನವೆಂಥೂ
ಹರಣದೊಡೆಯನು ಬಸವರಾಜನು
ಕರುಣದೊಡೆಯನು ಬಸವರಾಜನು
ಮರಣ ವಿರಹಿತನಾಗಿ ಕೊಂಡಾಡಿದೆನು ಕ್ಯೆಲಾಸಪುರದೊಳಗೆ ||೨||

ಅಂತ್ಯ: ಬಸವ ಜಯಜಯ ಭಕ್ತವತ್ಸಲ
ಬಸವ ಜಯಜಯ ಶಿವನ ಪದವಿಯ
ಕುಸುಮಜಾತೆಯ ಮಂತ್ರಮಾತೆಯ ಜಯತು ವರಗೌರಿ
ವಸುದೆ ಶ್ರೀ ಕಲ್ಯಾಣಪಟ್ಣದಿ
ಬಸವರಾಜನ ಘನ ಪವಾಡವ
ಶಸಿಮುಖಿಯು ಪಾರ್ವತಿ ಪೇಳಿದ ಸಿವನೆ ಜಯಜಯತು ‖ ೩೫ ‖

ಅಂತು ಸಂಧಿಗಳು ೪ ಕ್ಕೆ ಪದನು ೧೫೯ ‖ ಗ್ರಂಥೀ ೯೦ ‖ ಉಭೆಯಂ
೨೪೯ ‖ ಕಂ ಮಂಗಳ ಮಹಾಶ್ರೀ ‖

ವಿಷಯ : ಬಸವನ ಚರಿತ್ರೆ

ವಿಶೇಷ: ಇದೇ ಕಟ್ಟನಲ್ಲಿ ಗುರುಭಕ್ತಾಂಡಾರಿಯ ಚರಿತ್ರೆ ಎಂಬ ಕೃತಿ ಇದೆ. ಕೊನೆಯ ಎರಡು ಪತ್ರಗಳಲ್ಲಿ ಬಸವ ಮತ್ತು ಲಿಂಗದ ಚಿತ್ರವಿದೆ.

1018

ಕೆ. ೨೭೧/೨	**ಬಸವ ಚರಿತ್ರೆ**	ಭಾಮಿನೀ ಷಟ್ಪದಿ
೮.೭" × ೧.೪"	?	?
೧–೩೩ ಪತ್ರ	೭ ಪಂಕ್ತಿ	೪೦ ಅಕ್ಷರ

ಆದಿ: ಶ್ರೀ....ಬಸವ ಚರಿತವ ಬರವುದಕ್ಕೆ ಶುಭಮಸ್ತು

ಗ್ರಂಥ ‖ ಅನಾದಿ ಆದಿರೂಪಾಯ । ನಿರ್ಗ್ಗುನೆನಾಗುಣಾತ್ಮನೆ
ಸಮಸ್ತ ಲೋಕನಾಥಾಯ । ಕರ್ಥಾಯ ಮಮಪ್ರಭೂ ‖ ೧ ‖

x x x x x

ಪದನೂ ‖

ಶ್ರೀ ಬಸವ ಲೀಲಾ ವಿನೋದವ
ಶ್ರೀ ಬಸವ ಘನತ್ತೇಜ ಮಹಿಮೆಯ
ಶ್ರೀ ಬಸವ ಪುಂಣ್ಯಕಿಳ ಚೆರಿತೆಯ ಗಿರಿಜೆ ಕೇಳೆಂದ್ಬಾ ‖ ಪಲ್ಲ ‖
ಗಿರುಜೆ ಕೇಳ್ಮುಂನಾದಿಯಲಿ ತಾ
ಪರಮನಲ್ಲದೆ ಸ್ಮರಿಸೆ ಬಸವನ
ಚರಣ ಕಮಲವ ಪಿಡಿದೆ ನಾಥನ ಘನಕೆ ಘನವೆನಿಸಿ
ಹರಣದೊಡೆಯನು ಬಸವರಾಜನು
ಕರಣದೊಡೆಯನು ಬಸವರಾಜನು
ಮರಣ ವಿರಹಿತನಾಗಿ ಕೊಂಡಾಡಿದನು ಕೈಲಾಸಪುರದೊಳಗೆ ‖ ೧ ‖

ಅಂತ್ಯ: ಬಸವ ಜಯಜಯ ಭಕ್ತವತ್ಸಲ
ಬಸವ ಜಯಜಯ ಶಿವನ ಪೂಜೆಯ
ಕುಸುಮ ಮಾತೆಯೆ ಮಂತ್ರ ಸೂತೆಯೆ ಗೌರಿ ಜಯಜಯತೂ
ವಸುದೆ ಶ್ರೀ ಕಲ್ಯಾಣ ಪಟ್ಟಣ
ಬಸವರಾಜನ ಘನ ಪವಾಡವ
ಶಶಿಮುಖಿ ಪಾರ್ವ್ವಗೆ ಪೇಳಿದ ಶಿವನೆ ಜಯಜಯತೂ ॥ ೩೨ ॥

x x x x x

ನಮ್ಮ ಬಸವಂಣನು । ಆ ಬಸವಂಣನ ಪಾದಪದ್ಮಂಗಳಿಗೆ ತ್ರಿಸಂಧ್ಯ ಅಹೋರಾತ್ರಿಯಲ್ಲೂ ನಾನು ನಮೊ ನಮೊ ಯಂದ್ದು ಬದುಕಿದೆನು ಕಾಣ ಚಂನ್ನಮಲ್ಲಿಕಾರ್ಜುನ ಪ್ರಭುವೆ ॥ ೧ ॥ ಪಂಚಮಸ್ಥಲ ೫ ಸಾಕ್ಷಿ. ವಚನ ೨೫ ಪದ ೩೨ಅಂತು ೫೭ ಶ್ರೀ ಬಸವ ಚರಿತ್ರ ಸಮಾಪ್ತ ಮಂಗಳಂ ಮಹಾಶ್ರೀ.

ವಿಷಯ: ಬಸವನ ಚರಿತ್ರೆ.

ವಿಶೇಷ: ಇದೇ ಕಟ್ಟನಲ್ಲಿ ಪಂಚಕಲಶ ದೀಕ್ಷಾವಿಧಿ, ಗುರುರಗಳೆ ಎಂಬ ಗ್ರಂಥಗಳಿವೆ.

1019

ಕೆ. ೪೨೧/೩	**ಬಸವ ಚರಿತ್ರೆ**	ಭಾಮಿನೀ ಷಟ್ಪದಿ
೧೭″ × ೧.೪″	?	?
೧–೨೫ ಪತ್ರ	೭ ಪಂಕ್ತಿ	೫೦ ಅಕ್ಷರ

ಆದಿ: ಶ್ರೀ ಗಣಾಧಿಪತಯೇ ನಮಃ ॥ ಶಿವನು ಪಾರ್ವತಾದೇವಿಯರಿಗೆ । ನಿರೂಪಿಸಿ ಪೇಳ್ದ । ಬಸವನ ಚಾರಿತ್ರವ ಬರಉದಕ್ಕೆ ಆಯುರಾ....ಮಸ್ತು॥
ಶ್ಲೋಕಾ ॥ ಅನಾದಿ ಆದಿರೂಪಾಯಾ । ನಿರ್ಗುಣೇನ ಗುಣಾತ್ಮನೇ ।
ಸಮಸ್ತಲೋಕ ನಾಥಾಯಾ । ಕಥೆಯಾಮಿ ಮಮಪ್ರಭೂ ॥ ೧ ॥
ಮಹಂಕಾಳಿ ಜಗಂನಾಥೆ । ಮಹದೇ....ಗತ್ಪತೇ ॥
ಉಭಯಾಂನ್ನೆ ಪರಂನ್ನಾಸ್ತಿ। ಯೇಕರೂಪೋ ಜಗದ್ಗುರುಃ ॥ ೨ ॥
ಜಗದ್ಭರಿತ ಮಹಾದೇವೋ । ತೇಜೋಲಿಂಗಸ್ಯ ವಿಸ್ತರೇತ್ ॥
ಉ್ರಶಭಸ್ಯ ಧಂರ್ಮ್ಮ ರೂಪಾಯಾ । ತತ್ಪಂಚಗ್ರುಹೇತವಾತ್ ॥ ೩ ॥
ಪದನೂ ॥ ಭಾಮಿನೀಷಟ್ಪತೀ ॥ ಶಾಂತಮಲಹರಿ ರಾಗಾ ॥
ಶ್ರೀ ಬಸವ ಲೀಲಾವಿನೋದವ
ಶ್ರೀ ಬಸವ ಘನತೇಜೋ ಮಹಿಮೆಯಾ
ಶ್ರೀ ಬಸವ ಪುಂಣ್ಯಾಖಿಳ ಚರಿತೆಯಾ ಗಿರಿಜೆ ಕೇಳೆಂದಾ ॥ ೧ ॥

ಗಿರಿಜೆ ಕೇಳ್ಮುಂನ್ನಾದಿಯಲಿ ತಾ
ಪರಮನಲ್ಲದೆ ಸ್ಮರಿಸೆ ಬಸವನ
ಚರಣಕಮಲವ ಪಿಡಿಯೆನಾವನ ಘನಕೆ ಘನವೆಂದೂ
ಹರಣದೊಡೆಯನು ಬಸವರಾಜನು
ಕರುಣದೊಡೆಯನು ಬಸವರಾಜನು
ಮರಣವಿರಹಿತನಾಗಿ ಕೊಂಡಾಡಿದೆನು ಕೈಲಾಸಪುರದೊಳಗೇ || ೨ ||

ಅಂತ್ಯ: ಬಸವ ಜಯಜಯ ಭಕ್ತವತ್ಸಲ
ಶಿಶುವ ಜಯಜಯ ಶಿವನ ಪೂಜೆಯೊ
ಕುಸುಮ..................................
....................ಶ್ರೀ ಕಲ್ಯಾಣಪಟ್ಣದಿ
ಬಸವರಾಜನ ಘನ ಪವಾಡವ
ಸಸಿಮುಖಿಯು ಪಾರ್ವತಿಗೆ ಪೇಳಿದ ಶಿವನೆ ಜಯಜಯತೂ || ೩೩ ||

ವಚನಾ || ಶಿವಶಿವಾ ಆದಿ ಅನಾದಿಯೆಂಬೆರಡಿಲ್ಲ ಡಿಲ್ಲದಿರುತಿರ್ಪ ಶಿವ ನಿಂಮ್ಮ ನಿಜವನಾರ್ರೈಯಬಲ್ಲವರು || x x x ಶರಣಸಂಗಮೇಶ್ವರನೂ ||| ತ್ರಿವಿಧಿ ಆಯತನು | ತ್ರಿಕರಣ ಶುದ್ಧನೂ | ನಿಂದ ಬಯವಾಡ | ಅನ್ರುತವ ನುಡಿಯೆ | x x x ಗುರು ಚೆಂನಮಲ್ಲಿಕಾರ್ಜುನ ಪ್ರಭುವೇ || ೧ || ಅಂತೂ ಬಸವನ ಚರಿತೆಯಾ ಬರದೋದಿ ಕೇಳ್ದಾ ಭಕ್ತಜನಂಗಳಿಗೆ ಅಷ್ಟ ಯಿಶ್ವರ್ಯ್ಯ | ಭುಕ್ತಿಮುಕ್ತಿಯಾ | ಪದದೋರುಉದೂ | ಭವದ ಖರ್ಮ್ಮಂಗಳೆಲ್ಲ ತೊಲಗುವದೂ || ಶಿ......ಬೇಡಿದ ಪದವಿಯನೀವನು | ಸಉಭಾಗ್ಯ ಸಂತಾನ ಫಲಮಕ್ಕೂ || ೧ || ಅಂತೂ ೩ ಕಂ ಪದನೂ ೧೭೦ ಕಂ ಶ್ಲೋಕಾ ೮೦ ಕಂ ಬಸವನ ಚರಿತೆ ಸಮಾಪ್ತ ಮಂಗಳ ಮಹಾಶ್ರೀ ಪ್ರಭವ ನಾಮ ಸಂವತ್ಸರದ ಜೇಷ್ಠ ಬ ೧೦ ಯಲ್ಲೂ | ಯಿಾ ಬಸವನ ಚಾರಿತ್ರವಂನೂ ಮೂಲ ಪ್ರತಿಯಿದ್ದಹಾಗೆ | ನೋಡಿ ಬರದಾತ | x x x ಯಿಾ ಪುಸ್ತಕ ಕಂದಿಕೆರೆಯಾ | ಭಿಕ್ಷಾವತಿ ಚಿಗುರುವಂಣನದೂ | ಶ್ರೀ

ವಿಷಯ : ಬಸವನ ಚರಿತ್ರೆ

ವಿಶೇಷ : ಅತಿ ಶಿಥಿಲ ಪ್ರತಿ. ಇದೇ ಕಟ್ಟಿನಲ್ಲಿ ವಿರೂಪೇಂದ್ರಕೃತ ಗುರುಭಕ್ತ ಚಾರಿತ್ರ (ಮಧುರ ಮಂದಾರ) ಮತ್ತು ಹರಿಶ್ಚಂದ್ರ ಸಾಂಗತ್ಯಗಳೆಂಬ ಮತ್ತೆರಡು ಕೃತಿಗಳಿವೆ.

1020

ಕೆ. ೪೫೧/೨	**ಬಸವ ಚರಿತ್ರೆ**	ಯಕ್ಷಗಾನ
೧೩.೧″ × ೧.೪″	ಚೆನ್ನಪ್ಪ ಕವಿ	ಸು ೧೭೫೦
೪೬–೮೩ ಪತ್ರ	೮ ಪಂಕ್ತಿ	೬೨ ಅಕ್ಷರ

ಆದಿ : ....ದೆಡೆಯೊ ‖ ೧ ‖ ವಚನಾ ‖ ಯಿಂತ ಉತ್ಪತ್ಯವಂ ನೋಡಿ ಸಕಲ ಮುನಿಗಳು | ಸಕಲ ಮುನಿಗಳು ಯೆದ್ದು ಯೋಚನೆಯ ಮಾಡಲೂ | ದಕ್ಷಬ್ರಂಹ ಯೇನೆಂನ್ನುತಿದ್ದ....ಕ ತಾಳದ |

ಅರ್ಥರೆ....‖ ಯಾಕೆ ಯೋಚನೆ ನಿಮಗೆ ಯಲ್ಲ ಮುನಿಗಳಿರಾ |
ನಾಕಾದಿ ಪತಿಗಳು ನಮ್ಮೊಳಗೀರಾಲೂ |

೧೭

ನುಕುವೆ ಮಿಕ್ಕ ಬಂದಾ | ನೇಕ ಬಾರವನೂ |
ಹೋಮದ ಉಪಟಣಉ | ಹೊಸತೆಂದಿರಿಲ್ಲಾ ‖ ೧ ‖

ಅಂತ್ಯ : ಯಿಂದುಧರ ಬಸವರಾಜನ |
ಚಂದಾದಿ ನಾ ಸ್ತುತಿಸಿ ಮತ್ತೆ | ವಿಸ್ತಾರಿಸುವೆನೂ ‖
ಚಂದದಿ ಚಂನ್ನಪ್ಪ ದೇವರೂ |
ವಂದಿಸುತ.... ... ‖ ೨ ‖

ಅಂತ್ತು ಸಂಧಿ ೬ ಕಾಂ ಪದನು ೨೦೬೬ ಕಾಂ ಮಂಗಳ ಮಹಾಶ್ರೀ.

ವಿಷಯ : ಬಸವನ ಚರಿತ್ರೆ

ವಿಶೇಷ : "ಶರಣ ಲೀಲಾಮೃತ"ದಲ್ಲಿ ಇದೊಂದು ಭಾಗವಾಗಿದೆ. ಸಂಪೂರ್ಣ ಗ್ರಂಥ ವಲ್ಲ. ಬಸವನ ಚರಿತ್ರೆಗೆ ಮಾತ್ರ ಸಂಬಂಧಿಸಿದ ಭಾಗವಾಗಿದೆ. ಆದಿಯ ಎರಡು ಪತ್ರಗಳೂ ಕೊನೆಯ ಆರೇಳು ಪತ್ರಗಳೂ ಅಲ್ಲಲ್ಲಿ ಮುರಿದು ಲುಪ್ತವಾಗಿವೆ. ಮಧ್ಯೆಮಧ್ಯೆ ಶಿಥಿಲವಾಗಿದೆ. ಈ ಕಟ್ಟಿನಲ್ಲೇ ಪ್ರಭುಲಿಂಗ ಲೀಲೆ ಎಂಬ ಗ್ರಂಥವಿದೆ.

1021

ಕೆ ಬಿ. ೩೨೫/೩	**ಬಸವನಾಮಾವಳಿ.**	ಪದ್ಯ
೭.೫″ × ೬″	?	ಸು ೧೬೫೦
೨೦೭–೨೦೯ ಪತ್ರ	೨೪ ಪಂಕ್ತಿ	೨೫ ಅಕ್ಷರ

ಆದಿ : ಬಸವನಾಮಾವಳಿ ನೂರಾರೆಂಟು ಬರಿಯುವುದಕ್ಕೆ ಶುಭಮಸ್ತು ‖

ಶ್ರೀರಸ್ತು ॥ ಶ್ರೀ ಗುರುವೆ ಚಿದ್ಘನ ಸುಖ
ಸಾಗರವೆ ಯಂನ ಹೃದಯ ಸರಶಿರುಹದೊಳ್
ಬೇಗದಿ ನೆಲೆಗೊಳುತಿರ್ದನು
ರಾಗದಿ ಸಲಹೈಯ ತಂದೆ ಬಹು ಕೃಪೆಯಿಂದಂ ॥ ೧ ॥

ಶ್ರೀ ಮಹಾ ವೃಷಾಧಿ ಪ್ರಶಿದ್ಧನಾಮ ಬಸವಲಿಂಗ
ಧಾಮನಿಧಿಶಿತೆಂದು ಕೋಟಿ ಧಾಮ ಶಿವ ಬಸವಲಿಂಗ
ಸತ್ವರಜತಮೋಗುಣ ಪ್ರಚಾರದೂರ ಬಸವಲಿಂಗ
ತತ್ವಮಿಶಿಪ ದೈತ್ಯ ವಚನ ಧರ್ಮಯುಕ್ತ ಬಸವಲಿಂಗ ॥

ಅಂತ್ಯ: ಗುರುಬಸವಲಿಂಗದೇವರ ವರಮಹಿಮಷ್ಠೋತ್ತರವನಿಳೆಯೊಳು
ಬರದೋದಿ ಜಪಿಸುವರ್ಗೆ ಪರಮಯಿಷ್ಟಾರ್ಥಗಳನೀವ ಬಸವೇಶಂ ॥ ೨ ॥
ಇತಿ ಬಸವಾಷ್ಟೋತ್ತರ ಶತನಾಮ ಸ್ತೋತ್ರ ಸಂಪೂರ್ಣ ಮಂಗಳಾನಿ ಭವಂತ್ತು ॥ ಶ್ರೀ ॥ ಸ್ವಭಾನು ಸಂ। ರಾಶ್ವಿಜಶು ೧೦ ಗುರುವಾರ ರಾಯದುರ್ಗದ ಪುಷ್ಪಗಿರಿ ಮತದ ಚಂದ್ರಶೇಖರಯ್ಯನವರು ಮೈಸೂರು ಯಿರಾರನಗೆರೆಯಲ್ಲಿಯಿರುವ ನಂಜಪ್ಪಯಂಬುವ ಭಕ್ತನಿಗೆ ಬರದು ಕೊಡೋಣಾಗಿಥೆ ॥

ವಿಷಯ ; ಗುರುಬಸವಲಿಂಗ ದೇವರ ನಾಮಾವಳಿ

ವಿಶೇಷ: ಈ ಕೃತಿಗೆ ಬಸವಾಷ್ಟೋತ್ತರ ಶತನಾಮ ಸ್ತೋತ್ರವೆಂಬ ನಾಮಾಂತರವಿದೆ. ಇದರೊಡನೆ ಅಖಂಡಾನಂದ ಸ್ವರೂಪವೆಂಬ ಗ್ರಂಥವಿದೆ. ಪುಸ್ತಕದ ಕೊನೆಯಲ್ಲಿ “ ೯ ೧೮೮೫ನೆ ಯೆಪ್ರೆಲ್ । ತಾರಣ ಸಂ । ಚೈತ್ರ । ರಾಮನೌಮಿ । ಮಂಗಳ ಜಂಗಮಲಿಂಗನಿಗೇ । ಜಯಮಂಗಳ ದುರಿತವಿಭಂಗನಿಗೆ ॥ ಪ ॥” ಎಂದಿದ್ದು ಬಳಿಕ ಮೂರು ಮಂಗಳದ ಪದ್ಯಗಳಿವೆ. ಮೂರನೆಯ ಪದ್ಯ ಈ ರೀತಿ ಇದೆ.

ಭಂಜಿಸುತಲಿ ಶಿಷ್ಯ ರಂಜಿಕೆಯನು ಕರ
ಕಂಜದೊಳುರೆ ಪುಸ್ತಕವಿಡಿದೂ
ತಾಂ ಜವದಿಂದ ವೀರಣಗೆರೆಯೊಳಗಿರ್ಪ
ನಂಜುಂಡ ಯೋಗೀಂದ್ರಗನವರತಾ ॥ ಮಂಗಳ ಜಂಗಮ ॥ ೩ ॥ಶ್ರೀ॥

1022

ಕೆ. ೫೮೨/೧ **ಬಸವ ಪವಾಡ** ಸಾಂಗತ್ಯ

೧೨.೮" × ೨" ಗುರು ಚನ್ನಬಸವನ ಶಿಷ್ಯ ಸು ೧೬೫೧

೧–೩೪ ಪತ್ರ ೧೦ ಪಂಕ್ತಿ ೬೫ ಅಕ್ಷರ

ಆದಿ : ಬಸವೇಶ್ವರ ದೇವರ ಪವಾಡವ ಬರವುದಕ್ಕೆ ಶುಭಮಸ್ತು ||

ಕಂದ || ಬಸವ ಪವಾಡವನಿದನೀ
ಉಸುರವೆ ಭಕ್ತಿಯಲಿ ಕೇಳ್ದ ಭಕ್ತರಿಗೆಲ್ಲಂ
ದೆಸೆಗೆಟ್ಟು ಕರ್ಮ ಪೋಪುದು
ಸಸಿದರನು ಸಂತೋಷದಿ ಆಯರಾರೋಗ್ಯ ನೀವಂ || ೧ ||

x x x x

ಗುರು ಚೆಂನ ಬಸವರಾಜನು ಹರುಷದೊಳೆಂನ
ಕರದು ಕೃಪೆಯಲಿ ಪೇಳಿದರೂ
ಧರೆಯೊಳು ಬಸವ ಪವಾಡವ ತಿದ್ದಿ ವಿ
ಸ್ತರಿಸೆನಲುಸುರ್ದ್ದೆ ಚಿತ್ತಯಿಸಿ || ೧೦ ||

ಅಂತ್ಯ : ಜಯ ಜಯ ಕರುಣಾಕರ ಕ್ರುಪ ಬಕ್ತ ಬಾಂದು
ಜಯ ಜಯ ಪಾಪವಿನಾಸಾ
ಜಯ ಜಯ ಕ್ರುತಿಯ ಕೇಳ್ವರಿಗೆ ಮುಕ್ತಿಯನೀವಾ
ಜಯ ಜಯ ಬಸವೇಶ ಶರಣೂ || ೧೫೩ ||

ಬಸವೇಶ್ವರನ ಕಾವ್ಯವ ಕೇಳ್ವವರಿಗೆ
ದೆಶೆಗೆಟ್ಟು ಪಾಪ ವೋಡುವದೂ
ಶಿಶು ಪಸು ದನ ದಾನ್ಯ ಆಯು ಆರೋಗ್ಯವಾ
ಶಶಿದರನಿತ್ತು ರಕ್ಷಿಪನೂ || ೧೫೪ ||

ಅಂತು ಸಂಧಿ ೫ ಕಂ ಪದನು ೭೯೮ ಕಂ ಮಂಗಳ ಮಹಾಶ್ರೀ ||
ತಾರಣ ಶವಚಾರದ ಮಾಗಮಾಸದ ಬಹುಳ ಪಂಚಮೆಯಲ್ಲು ಆಗಸನ ಹಳಿ ಬಶವಲಿಂಗ ದೇವರು ಹುರಳಿಹಾಳ ಕೆಂಡ್ಯೆಯಗೆ ಬರದು ಕೊಟ್ಟ ಪುಸ್ತಕಕ್ಕೆ ಶುಭಮಸ್ತು ಶ್ರೀ.

ವಿಷಯ : ಬಸವನ ಪವಾಡಗಳು.

ವಿಶೇಷ : ೬, ೭ನೇ ಪತ್ರಗಳು ಮುರಿದಿವೆ. ಶಕಟ ರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ನಾಗವರ್ಮನ ಛಂದೋಂಬುಧಿ ಮತ್ತು ಅಮರಕೋಶದ ಒಂದನೇ ಕಾಂಡವೂ ಇವೆ.

1023

ಕೆ. ಬಿ. ೪೫೪ **ಬಸವ ಪವಾಡ** ಸಾಂಗತ್ಯ

೮.೩" × ೬.೫" ಗುರು ಚನ್ನಬಸವನ ಶಿಷ್ಯ ಸು ೧೬೫೦

೧–೧೯೩ ಪುಟ ೧೬ ಪಂಕ್ತಿ ೧೪ ಅಕ್ಷರ

ಆದಿ : ಬಸವ ಪವಾಡ
ಬಸವ ಪವಾಡವನಿದನಾ
ನುಸುರುವೆನು ಭಕ್ತಿಯಲಿ ಕೇಳ್ದ ಭಕ್ತರಿಗೆಲ್ಲಂ
ದೆಸಿಗೆಯ್ದು ಕರ್ಮ ಪೋಪುದು
ಶಸಿಥರನು ಸಂತೋಷದಲಿ ಆಯುರಾರೋಗ್ಯವನೀವಂ ॥ ೧ ॥

x x x x

ಶ್ರೀಮದಮಲ ರಾಮಗಿರಿ ಸಿದ್ಧೇಶನ
ಕೋಮಲ ಪದ ಕಮಲಗಳಿಗೆ
ಪ್ರೇಮದಿಂದೆರಗಿ ಪೇಳುವೆ ಬಸವೇಶನಿ
ಸ್ಸೀಮನ ಕಥೆ ಕಾವ್ಯರಸವಾ ॥ ೩ ॥

x x x x

ಗುರು ಚೆನ್ನಬಸವರಾಜನು ಹರುಷದೊಳೆನ್ನ
ಕರದೆನ್ನ ಕೃಪೆಯಲಿ ಪೇಳಿದಳೂ
ಧರೆಯೊಳು ಬಸವ ಪವಾಡವ ತಿದ್ದಿ ವಿ
ಸ್ತರಿಸೆನಲುಸುರ್ದೆ ಚಿತ್ತೈಸೀ ॥ ೧೨ ॥

ಅಂತ್ಯ : ಹರುಷದಿ ಭೃಂಗೀಶಗುಡುಗೊರೆಯಿತ್ತು
ಶರಣರೆಲ್ಲರನು ಕಳುಹಿದಾನೂ
ಗಿರಿಜೆ ಸಹಿತಲರಮನೆ ಪೊಕ್ಕು ಶಿವನಿರು
ತಿರುತಿರ್ದ ಸಂಧಿ ಮುಗಿಯಿತೂ ॥ ೧೫೨ ॥

x x x x

ಯಣ್ಣೆನಳದ ಮನ ನುಣ್ಣಗೆಂದೆಂಬರ
ಪುಣ್ಯವ ಶಿವ ತಾನೆ ಬಲ್ಲಾ
ಕಣ್ಣು ಮೂರುಳ್ಳನ ಕರುಣದಿ ಬಾಳರು
ಪುಣ್ಯಕಥೆಯ ಕೇಳುವರೂ ॥ ೧೫೫ ॥

ಅಂತು ಸಂಧಿ ೫ ಕ್ಕಂ ಪದನು ಕಂದಾ ೭೯ | ೧೭೭೫ ಕ್ಕಂ ಮಂಗಳಮಹಾ ॥

ದುರ್ಮುಖಿ ಸಂವತ್ಸರದ ಕಾರ್ತಿಕ ಶುದ್ಧ ೧೨ ಮಂಗಳವಾರದಲ್ಲು ಬಿಳಿ ಮಗ್ಗದ ಸಿದ್ಧನ ಮಗ ಲಿಂಗಶೆಟ್ಟಿಗೆ ಮಾದಿಹಳ್ಳಿ ಶಾನುಭಾಗ ತಿಪ್ಪಣ್ಣಯ್ಯನ ಮಗ ನಂಜಪ್ಪಯ್ಯನು ಬರಕೊಟ್ಟ ಬಸವ ಪವಾಡ ಮಂಗಳ ಮಹಾ

20-1-39

ವಿಷಯ : ಬಸವನ ಮಹಿಮೆ.

ವಿಶೇಷ : ಪದ್ಯಗಳಿಗೆ ಪಾದ ವಿಂಗಡಣೆ ಇದೆ.

1024

ಕೆ ೪೭೦	**ಬಸವ ಪುರಾಣ**	ಭಾಮಿನೀಷಟ್ಪದಿ
೧೫.೭" × ೧.೫"	ಭೀಮಕವಿ	ಸು. ೧೩೬೯
೩೧–೧೮೮ ಪತ್ರ	೯ ಪಂಕ್ತಿ	೯೦ ಅಕ್ಷರ

ಆದಿ :

....ನುಜಾತನೆಯೆನುತೆ ||
ಪ್ರೀತಿಯಂದಂಬುಧಿಗೆ ಮಣಿಯಂ
ಶೀತರುಚಿಗೆಳೆಯಂ ಕುಡು..........................
ಬಸವರಾಜನನಾವನುಂ ಕೊಂ
ಡಿಸಿದೊಡಿಂನಾ ಚಂಡಿಗುಂನಿಯ
ರಸನೆಯಂ ತವೆ ಕೊಯ್ದು ಸುಂಣವನೊರಸಿ ಮಿಗೆ ಪುರಿದಾ ||
ಬಿಶಿಯ ಮಳಲಂ ತರಿಸಿ ಬಾಯ್ದುಂ
ಬಿಸಿದಪೆ ತಾನೆನುತೆ ಬಿಜ್ಜಳ
ನೊಸೆದು ಕಳುಪಲ್ ದಂಡನಾಥಂ ಬಂದನರಮನೆಗೇ || ೧೯ ||

ಅಂತ್ಯ : ಕೋವಿದರು ಕೇಳ್ದೊಳ್ಳಿತೆನಲುಡು
ದೇವ ನಿಧಿ ನಯನೇಂದು ಸಂಖೆಗ
ಳೋವಿ ಶಕವರುಷಂಗಳಾಗಲ್ ಸೌಮ್ಯವತ್ಸರದಾ-
ಶ್ರವಣ ಬಹುಳ—ದಶಮಿ
ಜೀವವಾರದೊಳಾದಿ ವೃಷಭೇಂ
ದ್ರಾವತಾರದ ಬಸವಚರಿತೆ ಸಮಾಪ್ತಿಯಾಯಿತ್ತು || ೯೨ ||

x x x x

ಇದು ಸಕಲ ಮಾಹೇಶ್ವರಾಮಳ
ಪದಪಯೋಜ ಪರಾಗಮದ ಷ
ಟ್ಪದಿಯೆನಿಪ ಪಾಲ್ಕುರಿಕೆ ಸೋಮೇಶ್ವರನ ಕಾರುಣ್ಯಾ
ವೊದವಿದಖಿಳ ಕಳಾಪ್ರಪೂರಿತ
ಹೃದಯ ಭೀಮಕವಿ ಪ್ರಣೀತಾ
ಭ್ಯುದಯ ಬಸವ ಪುರಾಣ ಕಥೆಯೊಳಗಷ್ಟಮಾಸ್ವಾಸಾ ॥
ಅಂತು ಖಾಂಡ ೮ ಕ್ಕಂ ಸಂಧಿ ೬೦ ಕ್ಕಂ ಪದನು ೩೬೯೯ ಕ್ಕಂ ಮಂಗಳ ಮಹಾ ಶ್ರೀ॥
ಪ್ಲವ ಸಂವತ್ಸರ ವೈಶಾಖ ಬಹುಳ ೧೧ ಲು ಬಸವೇಶ್ವರನ ಪುರಾಣ ಬರದು ಸಂಪೂರ್ನ್ನವಾಯಿತು ॥ ಶುಭಮಸ್ತು ॥

ವಿಷಯ : ಬಸವೇಶ್ವರನ ಚಾರಿತ್ರ.

ವಿಶೇಷ : ಅಸಮಗ್ರ. ಶಕಟರೇಫವೂ, ಪ್ರತಿಕಾಲವೂ, ಗ್ರಂಥ ಮುಕ್ತಾಯ ಕಾಲವೂ ಇರುತ್ತದೆ. ಆದಿಯಲ್ಲಿ ಮೂವತ್ತು ಪತ್ರಗಳಿಲ್ಲ. ಹತ್ತನೆಯ ಸಂಧಿಯ ಹದಿನೆಂಟನೆಯ ಪದ್ಯಾರ್ಧದಿಂದ ಪೂರ್ತಿಯಾಗಿದೆ. ಹುಳು ಹಿಡಿದು ಅಲ್ಲಲ್ಲಿ ತ್ರುಟಿತ. ಪತ್ರ ೪೩ ಮತ್ತು ೧೭೧ ಇವುಗಳು ಹೆಚ್ಚು ತ್ರುಟಿತಗಳಾಗಿವೆ. ೧೬೧ ನೆಯ ಸಂಖ್ಯಾಪತ್ರವಿಲ್ಲದಿದ್ದರೂ ವಿಷಯ ಲೋಪವಿಲ್ಲ.

1025

ಕೆ. ಎ. ೫೮	**ಬಸವ ಪುರಾಣ**	ಭಾಮಿನೀಷಟ್ಪದಿ
೧೨೨″ × ೮.೩″	ಭೀಮಕವಿ	೧೩೬೯
೧–೬೭೦ ಪುಟ	೩೩ ಪಂಕ್ತಿ	೧೪ ಅಕ್ಷರ

ಆದಿ : ಬಸವ ಪುರಾಣವು ಭಾಮಿನೀ ಷಟ್ಪದಿ
॥ ಸೂಚನೆ ॥ ಆದಿ ಶಿವಲಿಂಗಕ್ಕೆ ವಾಹನ
ವಾದ ನಂದೀಶ್ವರನೆ ಮತ್ತೆ ಶಿ
ಲಾದ ಮುನಿಗುದಯಿಸಿದ ಪರಿಯಂ ಪೇಳ್ವೆನೆಂತೆನಲು ॥
ಪದ ॥ ಶ್ರೀ ಗುರುವೆ ದೀಕ್ಷಾಗುರುವೆ ಶಿ
ಕ್ಷಾ ಗುರುವೆ ರಕ್ಷಾಗುರುವೆ ಸ
ರ್ವಾಗವೋಕ್ತ ಕಲಾಗುರುವೆ ಶಿವಯೋಗಧರ್ಮಾರ್ಥ
ಭೋಗ ಗುರುವೇ ತ್ಯಾಗಗುರುವೆ ಸು
ಧೀ ಗುರುವೆ ವಾಚಾಗುರುವೆ ಭವ
ರೋಗ ಹರ ಶರಣಾಗು ಬಸವ ಮಹಾ ಗುರುವೆಯೆಮಗೆ ॥ ೧ ॥

ಅಂತ್ಯ : ಕೋವಿದರು ಕೇಳೊಳ್ಳಿತೆನಲುಡು
ದೇವ ನಿಧಿ ನಯನೇಂದು ಸಂಖೆಗ
ಳೋವಿ ಶಕವರುಷಂಗಳಾಗಲು ಸೌಮ್ಯವತ್ಸರದ
ಶ್ರಾವಣ ಬಹುಳ ಪಕ್ಷ ದಶಮಿಾ
ಜೀವವಾರದೊಳಾದಿ ವೃಷಭೇಂ
ದ್ರಾವತಾರದ ಬಸವ ಚರಿತೆ ಸಮಾಪ್ತಿಯಾಯಿತ್ತು || ೯೨ ||

x x x x x

ಇದು ಸಕಳಮಾಹೇಶ್ವರಾಮಳ
ಪದ ಪಯೋಜ ಪರಾಗ ಮದ ಷ
ಟ್ಪದಿಯೆನಿಪ ಪಾಲ್ಕುರಿಕೆ ಸೋಮೇಶ್ವರನ ಕಾರುಣ್ಯ
ಒದವಿದಖಿಳ ಕಳಾಪ್ರಪೂರಿತ
ಹೃದಯ ಭೀಮ ಕವಿ ಪ್ರಣೀತಾ
ಭ್ಯುದಯ ಬಸವಪುರಾಣ ಕಥೆಯೊಳು ಅಷ್ಟಮಾಶ್ವಾಸ || ೯೪ ||

ಅಂತು ಸಂಧಿ ೬೧ ಕ್ಕಂ ಪದ ३೬೨३ ಕ್ಕಂ ಮಂಗಳಂ ||

ವಿಷಯ : ಬಸವ, ಮುಗ್ಧಸಂಗಯ್ಯ, ದೀಪದ ಕಲಿ, ನಂಬಿಯಣ್ಣ ಮೊದಲಾದ ಶರಣರ ಕಥೆಗಳು.

ವಿಶೇಷ : ಕಲ್ಲಚ್ಚಿನ ಪ್ರತಿ, ಮಂಗಳೂರಿನಲ್ಲಿ ೧೮೫೦ರಲ್ಲಿ ಛಾಪಿಸಿದ್ದು ಪಾದಗಳ ವಿಭಾಗವಿದೆ. ಅಕ್ಷರಗಳು ಸ್ಪಷ್ಟವಾಗಿವೆ.

1026

ಕೆ. ಎ. ៩೧೨	**ಬಸವ ಪುರಾಣ**	ಭಾಮಿನೀಷಟ್ಪದಿ
೧೨.೪″ × ೭.೯″	ಭೀಮಕವಿ	೧೩೬೯
೧–೨೨೦ ಪತ್ರ	೧೫ ಪಂಕ್ತಿ	೪೨ ಅಕ್ಷರ

ಆದಿ: ಶ್ರೀ ಬಸವೇಶ್ವರನ ಪುರಾಣವನ್ನು ಲೇಖನಂಗೈವುದಕ್ಕೆ ಮಂಗಳಮಕ್ಕೆ ಭಾಮಿನೀ ಷಟ್ಪದಂ || ರಾಗ ಕಲ್ಲ್ಯಾಣಿ || ತಾಳ ರೂಪಕವು ||
|| ಪಲ್ಲವಂ || ಆದಿ ಶಿವಲಿಂಗಕ್ಕೆ ವಾಹನ
ವಾದ ನಂದೀಶ್ವರನೆ ಮತ್ತೆ ಶಿ
ಲಾದ ಮುನಿಗುದಯಿಸಿದ ಪರಿಯಂ ಪೇಳ್ವೆನೆಂತೆನಲೂ ||
|| ಪದ || ಶ್ರೀ ಗುರುವೆ ದೀಕ್ಷಾಗುರುವೆ ರ
ಕ್ಷಾಗುರುವೆ ಶೀಕ್ಷಾಗುರುವೆ ಸ

ರ್ವಾಗವೋಕ್ತ ಕಳಾಗುರುವೆ ಶಿವಯೋಗಧರ್ಮಾರ್ಥ
ಭೋಗಗುರುವೆ ತ್ಯಾಗ ಗುರುವೆ ಸು
ಧೀ ಗುರುವೆ ವಾಚಾಗುರುವೆ ಭವ
ರೋಗ ಹರ ಶರಣಾಗು ಬಸವ ಮಹಾಗುರುವೆ ನಮಗೆ ॥ ೧ ॥

ಅಂತ್ಯ : ಯಿದು ಸಕಲ ಮಾಹೇಶ್ವರಾಮಳ
ಪದಪಯೋಜ ಪರಾಗಮದ ಷ
ಟ್ಪದಿಯನಿಪ ಪಾಲ್ಕುರಿಕಿ ಸೋಮೇಶ್ವರನ ಕಾರುಣ್ಯಾ
ವದಗಿದಖಿಳ ಕಳಾ ಪ್ರಪೂರಿತ
ಹೃದಯ ಭೀಮ ಕವಿ ಪ್ರಣೀತಾ
ದ್ಭುದಯ ಬಸವಪುರಾಣ ಕಥೆಯೊಳಗಷ್ಟಮಾಶ್ವಾಸಾ ॥ ೯೮ ॥

ಅಂತು ಸಂಧಿ ॥ ೬೦ ॥ ಕ್ಕಂ ॥ ಪದಗಳೂ ॥ ೩೬೨೮ ॥ ಕ್ಕಂ ॥ ಕಾಂಡ ॥ ೮ ॥ ಕ್ಕಂ ॥ ಮಂಗಳಮಹಾ ॥ ಶ್ರೀ ॥ ಶ್ರೀಮನ್ನೃಪ ಶಾಲಿವಾಹನ ಶಕಾಬ್ಧ ಪರಿಮಿತ ॥ ೧೩೫೩ ಮನ್ಮಥನಾಮ ಸಂವತ್ಸರೆ ॥ ಫಾಲ್ಗುಣ ಮಾಸೆ ॥ ವುತ್ತರಾಯಣೆ ಶಶಿರುತೌ ಶುಕ್ಲಪಕ್ಷೆ ೧೨ ಸೋಮವಾಸರೆ ಪುಷ್ಯ ನಕ್ಷತ್ರೆ ॥ ಶೋಭನನಾಮ ಯೋಗೆ ॥ ವೈಯ್ಯಾಕರಣಕ್ಕೆ ॥ ೦ ॥ ಶ್ರೀ ಬಸವೇಶ್ವರ ದೇವರ ಪುರಾಣ ಬರುದು ಸಂಪೂರ್ಣವಾಯಿತು ॥

ಯಿ‌ಾ ಪುಸ್ತಕವಂ ಬರಸಿದವರು ಆರುಯಂದರೆ ॥ ಶ್ರೀಮನ್ಮಹಾ ನಿರಂಜನ ಜಗದ್ಗುರು ಸೂನ್ಯ ಶಿಂಹ್ವಾಸನಾಧೀಶ್ವರ ಭ್ರೂಪುರದ ಮೂರು ಸಾಹಸ್ರ ಮಠಾಧಿಕಾರಿಗಳಾದ ಗಂಗಾಧರಸ್ವಾಮಿಯವರ ಕರಕಮಲೋದ್ಭವರಾದ ಗುರು ಶಿದ್ಧಸ್ವಾಮಿಯವರು ಬರಿಸಿದ್ದು ಸಿದ್ಧಾಂತವೂ ॥ ಶ್ರೀರಸ್ತು ॥ ಜಿಲ್ಲಾ ಧಾರವಾಡ ಕಸಬ ಮಂಗಳವಾರ ಪೀಟವಿರಕ್ತ ಮಠದಲ್ಲಿ ಬರಸಿದ್ದು ಪ್ರಸಿದ್ಧವೂ ॥ ಶ್ರೀ ಶ್ರೀ ಯಿ‌ಾ ಪುಸ್ತಕವ ಬರದವರು ಆರು ಯಂದರೆ ॥ ನಿಡುಮಾಮಿಡಿ ಕರಿಬರವ ಸ್ವಾಮಿಯವರ ವಂಶಪಾರಂಪರಿಯಲ್ಲಿ ಜನಿಸಿದ ॥ ಶ್ರೀ ರೇವಣಾ ಸಿದ್ಧೇಶ್ವರರ ಸಂಪ್ರದಾಯಕರಾದ ಪಡ್ವಡೀ ಸೂತ್ರದ ವೀರೇಶ್ವರ ಗೋತ್ರದ ಕಿತ್ತೂರ ದೇಶದ ಬಯಲಹೊಂಗಲದ ಮಠದ ಶಂಕ್ರಪ್ಪನವರ ಆತ್ಮಜನಾದ ಷಣ್ಮು ಖಯ್ಯನಿಂ ಬರಿಯಲ್ಪಟ್ಟಿತು.

ವಿಷಯ : ಬಸವ, ನಂಬಿಯಣ್ಣ, ದೀಪದ ಕಲಿ—ಮೊದಲಾದ ಶಿವಶರಣರ ಕಥೆಗಳು

ವಿಶೇಷ : ಪ್ರತಿಯೊಂದು ಪತ್ರದ ಸುತ್ತಲೂ ಅಂಚಿನಲ್ಲಿ ಚಚ್ಚೌಕದ ಬಣ್ಣದ ಚಿತ್ರ ವಿದೆ. ಪುಸ್ತುಕದ ಹೊದಿಕೆಯಾಗಿ ಎರಡು ಮರದ ಹಲಗೆಗಳಿವೆ. ಅವುಗಳ ಮೇಲ್ಭಾಗ ಬಣ್ಣ ಬಣ್ಣದ ಚಿತ್ರಗಳಿಂದ ಕೂಡಿದೆ.

1027

ಕೆ. ೪೮೨	**ಬಸವಪುರಾಣದ ಟೀಕು**	ಶ್ಲೋಕ, ಟೀಕು
೧೬.೪" × ೧.೬"	ವೆಂಕಯ್ಯಭೂಪ	?
೧೩೧–೨೩೮ ಪತ್ರ	೧೧ ಪಂಕ್ತಿ	೯೦ ಅಕ್ಷರ

ಆದಿ : ....ಮಣಕತ್ವ ಈ ಮೂಕನ ಹದನವನು
ಉಪಪನ್ನಸ್ಯ। ಯಯ್ದಿರ್ದ। ಬ್ರಹ್ಮಣಃ ಬ್ರಹ್ಮನ। ಪದೇನ ಪದದಿಂದೆ। ನಃ ನಮಗೆ। ಕಿಂ। ಯೇನುಫಲವು ॥ ೭೯ ॥
ಅಸ್ಮತ್ತಾರಕ ತೇಜೋಭಿರ್ನಿರ್ದಗ್ಧ ನಿಜ ತೇಜಸಃ।
x x ಮಹಾದೇವನೆ। ಆಸ್ಮತ್ತಾರಕ ತೇಜೋಭಿಃ। ನಮ್ಮ ತಾರಕಾಸುರನ ತೇಜಸ್ಸುಗಳಿಂದೆ। ನಿರ್ದಗ್ಧ ನಿಜತೇಜಸಃ। ಮಿಗಿಲಾಗಿ ಸುಡಲುಪಟ್ಟ ತನ್ನ ತೇಜಸಭಿತ್ವ। ದಿವಸ್ಪತೇಃ ಸ್ವರ್ಗಕ್ಕೆ ವೊಡಯನಾದ ದೇವೇಂದ್ರನ ದಿನದೀಪ ಪ್ರಕಾಶಿನಾ ಹಗಲದೀಪದೋಪಾದಿಯ....ಪ್ರಕಾಶಿಸುತ್ತಿರ್ದ ಪದೇನ ಪದದಿಂದ। ನಃ ನಮುಗೆ। ಕಿಂ। ಯೇನುಫಲವು ॥ ೮೦ ॥

ಅಂತ್ಯ : ಆಜ್ಞಾಪಯಾಮಾಸ ನದೀಂ ಗಚ್ಛ ಗಚ್ಛ ಯದಾ ಪುರಾ ॥
ಟೀ ॥ಸಃ। ಆ ಚೌಂದಿದೇವರಾಯತ್ತಾದೊಡೆ। ಸ್ವಯಂತು ತಾವು।..........,ಪರಂ ಮಿಗಲಾಗಿ ಗಚ್ಛ ಗಚ್ಛ ಹೋಗು ಹೋಗು ಇತಿ ಹೀಗೆಂದು। ನದೀಂ ನದಿಯವಂ। ಆಜ್ಞಾಪಯಾಮಾಸ........

ವಿಷಯ : ಬಸವಪುರಾಣ.

ವಿಶೇಷ : ಅಸಮಗ್ರ ಮತ್ತು ಶಿಥಿಲಪ್ರತಿ. ತೆಲುಗಕ್ಷರ ೧೩೧ ಮತ್ತು ೨೩೮ ನೇ ಪತ್ರಗಳು ಸ್ವಲ್ಪ ಮುರಿದಿವೆ. ಹುಳು ಹೊಡೆದು ಪತ್ರಗಳಲ್ಲಿ ರಂಧ್ರ ಬಿದ್ದಿವೆ. ಸಣ್ಣಕ್ಷರ.

1028

ಕೆ.೩೬೯/೩	**ಬಸವ ರಗಳೆ**	ರಗಳೆ
೮" × ೧.೮"	?	?
೬–೧೧ ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ಶ್ರೀವರಾಜ ದೇವರಾಜ ಸಿದ್ಧಸಾಧ್ಯ ಯಕ್ಷ ರ
ಕ್ಷೋ ವಿಹಂಗರಾಟ್ಪತಂನಗಸೋಮಧೂಮ ಕರ್ಮರು
ಜೀವಿತೇಶ ವಿದೃತಪಾಶ ಸೇವಿತೊ ವಿದ್ಯಾಂಘ್ರಿರಾ
ಜೀವ ನಿಂಮ ನಾಂ ಪೊಗಳ್ವೆ ಶ್ರೀ ವೃಷಾದಿ ನಾಯಕಃ ಪ್ರಸಿದ್ಧ ಭಾವ
ಶರಣು ಬಸವಾ ॥ ೧ ॥

ತವಾತಾಂಘ್ರಿ ಸೇವತಾಗದಾವದಾವ ಶರಣು ಬಸವ ॥ ೨ ॥

ಅಂತ್ಯ : ಗುರು ಬಸವ ಲಿಂಗ ಬಸವಂ। ಚರಬಸವಂ ತೀರ್ಥ ಬಸವನಗಣಿತ ಮಹಿ
ಮೋತ್ಕರಸಪ್ರಸಾದ ಬಸವ। ಶರಣಯ್ಯ ಶರಣು ಶರಣು ಸಂಗನ ಬಸವ ॥೧೪॥
ಶರಣಸ್ತವಮೆನಲೊಪ್ಪುವ
ಶರಣ ಗಣೋತ್ಸಹದ ರಗಳೆಯಂ ಪಠಿಸಲು ವಿ
ಸ್ತರಿಸಿ ಬರದೋದಿ ಕೇಳಿದೊ
ಡೆ ತಾಂ ಸದ್ಭಕ್ತಿ ಬಸವನೀವಂ ಕಾಯ್ಪಂ ॥ ೧೫ ॥
ಶರಣು ಬಸವರಗಳೆ ॥ ಕಂದ ॥ ಸಂಪೂರ್ಣ ಮಂಗಳ ಮಹಾ ಶ್ರೀ ಶ್ರೀ ಶ್ರೀ.

ವಿಷಯ : ಬಸವ ಸ್ತುತಿ

ವಿಶೇಷ : ಗ್ರಂಥವು ಬಹಳ ಶಿಥಿಲವಾಗಿದೆ. ಬಸವ ರಗಳೆಯೊಂದಿಗೆ ಗುರು, ಷಡಾಕ್ಷರಿ, ಮನೋವಿಕಾರ ನಿರಸನ, ಭಕ್ತಿ ಭಿನ್ನಹ ರಗಳೆಗಳೂ ; ಬಸವ ಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ ; ಶಂಕರದೇವ, ಮಂತ್ರ ಮಹತ್ವ, ಮರುಳುದೇವ, ಪ್ರಭುಲಿಂಗರ ಕಂದ ಗಳೂ ; ಅಕ್ಷರಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ; ಶತಕತ್ರಯವೂ ; ಮಲ್ಹಣ ಸ್ತೋತ್ರವೂ ಇವೆ.

1029

ಕೆ.ಬಿ. ೨೮೯/೨ **ಬಸವಲಿಂಗನಾಮಾಷ್ಟೋತ್ತರ** ಉತ್ಸಾಹ ರಗಳೆ
೬.೧" × ೩.೮" ಪಾಲ್ಕುರಿಕೆ ಸೋಮ ? ?
೪೪–೫೧ ಪತ್ರ ೧೩ ಪಂಕ್ತಿ ೧೨ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ॥ ಬಸವಲಿಂಗ ನಾಮಾಷ್ಟೋತ್ತರಂ
ಪ್ರಾರಂಭಂ ॥ ಶುಭಮಸ್ತು ॥
ಶ್ರೀ ಮಹಾವೃಷಾಧಿಪ ಪ್ರಸಿದ್ಧನಾಮ ಬಸವಲಿಂಗ ॥ ೧ ॥
ಧಾಮ ನಿಧಿ ಶಿತೇಂದು ಕೋಟಿಧಾಮ ಶೀಮ ಬಸವಲಿಂಗ ॥ ೨ ॥
ಸತ್ವರಜಸ್ತಮೋ ಗುಣಪ್ರಚಾರ ದೂರ ಬಸವಲಿಂಗ ॥ ೩ ॥
ತತ್ವಮಸಿಪದ್ವೈತ್ಯ ವಚನ ಧರ್ಮಯುಕ್ತ ಬಸವಲಿಂಗ ॥ ೪ ॥

ಅಂತ್ಯ : ನೂರೆಂಟು ಪೆಸರನಾಳ್ದ ಧರಣಿಯೊಳು ಬಸವಲಿಂಗ ॥ ೧೧೦ ॥
ಮೂರು ಲೋಕದೊಡೆಯ ನೀನು ಪರಮ ಮಹಿಮ ಬಸವಲಿಂಗ ॥ ೧೧೧ ॥

ಕಂ || ಗುರು ಬಸವಲಿಂಗ ದೇವರ
ವರಮುಹಿಮಾಷ್ಟೋತ್ತರ ಶತಕ ನಾಮ ಸ್ತೋತ್ರಂ
ಬರದೋದಿ ಜಪಿಸಿದವರ್ಗ್ಗಂ
ಪರಮೇಷ್ಟಾರ್ಥಗಳನೀವ ಶಿವಬಸವೇಶ ||
ಬಸವಲಿಂಗ ನಾಮುಸ್ತೋತ್ರಂ ಸಂಪೂರ್ನ್ನಂ || ಶ್ರೀ ||

ವಿಷಯ : ಬಸವಸ್ತುತಿ.

ವಿಶೇಷ : ಸ್ಫುಟ ಬರಹ, ಪ್ರತಿ ನಾಮವೂ ಬಸವಲಿಂಗ ಎಂದು ಮುಗಿಯುತ್ತದೆ. ಇದೇ ಪುಸ್ತಕದಲ್ಲಿ ಗಣ ಸಹಸ್ರನಾಮ, ಹಾಡುಗಳು, ಕಲ್ಯಾಣ ಪಟ್ಟಣದ ಮಹಾತ್ಮ್ಯೆ, ನುಲಿಯ ಚಂದಯ್ಯನವರ ಕಥೆಗಳಿವೆ : ಬಸವಲಿಂಗ ನಾಮಾಷ್ಟೋತ್ತರವಾದ ಮೇಲೆ ೫೨ ರಿಂದ ೫೭ ನೇ ಪತ್ರದವರೆಗೆ ಕೆಲವು ಹಾಡುಗಳೂ, ೫೭ ರಿಂದ ೬೦ ನೇ ಪತ್ರದವರೆಗೆ ಲಿಂಗಾಷ್ಟಕವೂ, ೬೦ ರಿಂದ ೬೨ ನೇ ಪತ್ರದ ವರೆಗೆ ಬಸವ ಸ್ತುತಿಯೂ ಇದ್ದು ಬಳಿಕ ೬೨ ನೇ ಪತ್ರದಲ್ಲಿ ಕಲ್ಯಾಣ ಪಟ್ಟಣದ ಮಹಾತ್ಮ್ಯೆ ಪ್ರಾರಂಭವಾಗಿದೆ.

1030

ಕೆ. ಬಿ. ೩೨೧/೨	**ಬಸವ ಶತಕ**	ಹಾಡು
೬.೪ × ೪.೧″	ಯೋಗಾನಂದ	ಸು ೧೭೫೦
೧೨–೨೪ ಪತ್ರ	೧೧ ಪಂಕ್ತಿ	೨೬ ಅಕ್ಷರ

ಆದಿ : ಬಸವ ಶತಕ । ಗುರು ಶಿಷ್ಯರ ಸಂವಾದಾ ||
ಶ್ರೀ ಶಿವಾಥವ ಶಶಿಶೇಖರ ಯಂನಯ
ಭಾವ ರೂಪವಾದ ಬಸವ ಜಗದೀ
ಭಕ್ತಿ ಮುಕ್ತಿಯಿತ್ತು ಬಾರೆನಲ್ ಬಂದರೆ
ಪರಮ ಗುರುವೆ ಸಲಹು ಬಸವಪ್ರಭುವೇ || ೧ ||

ಹೀಗೆ ಶಂಭು ಪೇಳೆಯೆಂನ ಜ್ಞಾನವು ನಿಂಮ
ಚರಣ ಯುಗಳದಲ್ಲಿ ಸತತವಿರಲಿ
ಯಿಳೆಗೆ ಪೋಗಿ ಬರುವೆಯೆಂದಾಗ
ಬಂದ ಶ್ರೀ ಪರಮುಗುರುವೆ ಸಲಹು ಬಸವಪ್ರಭುವೇ || ೨ ||

ಅಂತ್ಯ : ಚಕ್ರವಾಕವೃತ್ತಾ ||
ರಜತ ಗೋತ್ರಧಾಮವಾಸ ರಾಜರಾಜ ಮಿತ್ರನೆ
ಅಜ ಹರೀಂದ್ರ ಮೌನಿ ನಿರ್ಜರಾದಿ ವ್ಯೂಹಸ್ತುತ್ಯನೆ

ಭಕ್ತರಕ್ಷಯೋಗಿ ಚಿತ್ತಪದ್ಮ ಮಧ್ಯವಾಸನೆ
ಭುಜಗಭೂಷ ಪಾಪನಾಶೋಷ ಭೂತಿಪಾಲಯಿಾಶನೇ || ೧೧೧ ||
ಶತದಶಕ ಗೀತ ಪದ್ಯಗ
ಳ್ಹಿತದಿಂ ಶಶಿ ಚಕ್ರವಾಕಯನಿಸುವ ವೃತ್ತದ
ಅತಿಶಯ ಪ್ರಸೂನಸ್ತಬಕದ
ಕ್ಷಿತಿಯೊಳ್ ಬಸವೇಶನಂಘ್ರಿಗೀಗರ್ಪಿಸಿದೆ ||

ಗದ್ಯಾ|| ಯಿದು ಪರಮೇಷ್ಠಿ ಹೃಷಿಕೇಶಾಷ್ಟದಿಕ್ಪಾಲಕಾದಿ ಸಮಸ್ತ ಸುಪರ್ವಾಣ ಪುರದ್ವಿಷ ಮಸ್ತಕ ಮಂಡನ ಕಿರೀಟ ಮಣಿಮಯೂಖನಿಕರನೀರಾಜನ ರಾಜನೂನಂಘ್ರಿ ಸರಸೀರುಹ ಶುಭ್ರಾಭ್ರ ಮುಕ್ತ ಕರ್ಪುರ ಪ್ರಾಲೇಯ ವಜ್ರೇಂದುದು....ರ್ಣ ತಾರ ಮಂದಾರ ಕುಂದ ಪುಂಡರೀಕ ಸುದಾಗ್ಧ ಕಂಬು ಹಂಸ ಡಿಂಡೀರ ನಿರ್ಜಿತ ಮಂದಹಾಸ ವಿಲಾಸಾನನ ಹೇಮಕೂಟ ಪಾರ್ಥಿವ ಶ್ರೀ ವಿರುಪಾಕ್ಷವುತ್ತಮಾಂಗ ಭೂಷಣ ಶುಭ್ರಾಂಶೋನ್ವಯೋದ್ಭವ ವರತರಿ ಮೇಲಾದ್ಯಕ್ಷ ಚೆಂನರಾಜಾತ್ಮಜ ಬಸವರಾಜಾನುಜ ಯೋಗಾನಂದಾಖ್ಯರಚಿತ ಬಸವಶತಕ ಸಂಪೂರ್ಣಃ ||

ವಿಷಯ : ಬಸವ ಸ್ತುತಿ.

ವಿಶೇಷ : ಅತ್ಯಂತ ಶಿಥಿಲ ಪ್ರತಿ. ಪತ್ರಗಳನ್ನು ಹುಳು ತಿಂದಿರುವುದರಿಂದ ರಂಧ್ರಗಳು ಬಿದ್ದು ಮಧ್ಯೆ ಮಧ್ಯೆ ಅಕ್ಷರಗಳು ಲುಪ್ತವಾಗಿವೆ. ಪ್ರತಿ ಹಾಡೂ 'ಪರಮ ಗುರುವೆ ಸಲಹು ಬಸವ ಪ್ರಭುವೆ ಎಂದು ಮುಗಿಯುತ್ತದೆ. ಇದೇ ಪುಸ್ತಕದಲ್ಲಿ ವಿರೂಪಾಕ್ಷ ಶತಕ ಮತ್ತು ಮಾನಸ ಶತಕ(ತೆಲುಗು)ಎಂಬ ಕೃತಿಗಳಿವೆ. ಅಂತ್ಯದ ಆರು ಪತ್ರಗಳಲ್ಲಿ ಗುರುಸ್ತುತಿ ಮತ್ತು ಮೇಹರೋಗಕ್ಕೆ ಔಷಧ ಇವೆ.

1031

ಕೆ ಬಿ ೪೫೨	**ಬಸವ ಶಿಖಾಮಣಿ**	ಸಾಂಗತ್ಯ
೮.೩" × ೬.೫"	ರತ್ನಕವಿಕಂಠ	?
೧–೧೧೧ ಪತ್ರ	೧೬ ಪಂಕ್ತಿ	೨೧ ಅಕ್ಷರ

ಆದಿ : ಬಸವ ಶಿಖಾಮಣಿ ಕಾವ್ಯ ಬರದೋದುವುದಕ್ಕೆ ಶುಭಮಸ್ತು || ರಾಗ || ಶರಷಟ್ಪದ || ಸಂಗೀತ ||

ಪದನು ||
ಶ್ರೀಗುರುರಾಯನೆ ನಿತ್ಯನಿಃಕ್ಕಲನೆನ್ನ
ಶ್ರೀಗುರು ಮೂರ್ತಿಚಿನ್ಮಯನೆ

ಶ್ರೀಗುರುರಾಜ ಪುರದ ಪ್ರಭುದೇವರ
ಶ್ರೀಘನಾಂಘ್ರಿಯ ಬಲಗೊಂಬೆ ॥೧॥

x x x x

ಧರೆಯೊಳು ರಾಜಪೌರದ ಪ್ರಭುದೇವರ
ಕರಕಮಲದಿ ಜನಿಸೀದ
ಪುರವ ಶಟ್ಟಿಯ ಮಲ್ಲಣ್ಣನಾತ್ಮಜನಾದ
ವರದನೀಕೃತಿಯ ಮುದದಿಂದ ॥೧೬॥

ಅಂತ್ಯ: ಬಸವ ಶಿಖಾಮಣಿ ಕಾವ್ಯವ ಪೇಳಿದ
ರಶಿಕನವನು ಆರೆನಲೂ
ಶಶಿಧರನ ಭಕ್ತ ರತ್ನಕವಿಕಂಠ
ಉಸುರಿದ ಕೇಳಿ ಸಜ್ಜನರೂ ॥೧೯೬॥

x x x x

ಕೇಳಿ ಸಜ್ಜನರು ಬಸವಣ್ಣನೀ ಪರಿ ಭಕ್ತಿ
ಮೇಳದಿ ಪಾವಾಡ ಮೆರೆದು
ಬಾಳಾಕ್ಷ ಸಂಗಮನೊಳಗೈಕ್ಯವಾದಂಥ
ಯೇಳುಸಂಧಿಗೆ ಶರಣಾರ್ಥಿ ॥ ೨೦೧ ॥

ಅಂತು ಸಂಧಿ ಯೇಳಕ್ಕಂ ಪದನು ೧೨೧೯ಕ್ಕಂ ಮಂಗಳ ಮಹಾಶ್ರೀ.
"ಕಾಪೀ ಮಾಡಿದವನು" (ತಾ॥ 25-1-1939) K.S.ಶ್ರೀಕಂಠಸಾಸ್ತ್ರಿ—
ಕಿರುಗುಂದ

ವಿಷಯ : ಬಸವಣ್ಣನ ಕಥೆ.

ವಿಶೇಷ : ಗ್ರಂಥದ ಆರಂಭದ ಪುಟಗಳಲ್ಲಿ "ಬಸವ ಶಿಖಾಮಣಿ (ಮಲ್ಲಣ್ಣನಾತ್ಮಜ ರತ್ನಾಕವಿಕಂಠವಿರಚಿತ) ಕಲ್ಯಾಣದಲ್ಲಿರುವ ಬಸವಮಠದ ಶ್ರೀ ಶ್ರೀ ವಿರೂಪಾಕ್ಷಸ್ವಾಮಿಗಳವರಿಂದ ಕ್ಯೂರೇಟರವರು ತಂದ ಪ್ರತಿಯ ಮೇಲೆ ಕಾಪಿಯಾಗಿದೆ" ಎಂದು ಬರೆದಿದೆ.

1032

ಕೆ. ಬಿ. ೮೭/೬	**ಬಸವ ಸ್ತೋತ್ರದ ಗದ್ಯಇತ್ಯಾದಿ**	ಕಂದ, ವೃತ್ತ, ಶ್ಲೋಕ
೭.೯" × ೬.೪"	ಪಾಲ್ಕುರಿಕೆ ಸೋಮನಾಥ	ಸು. ೧೨೦೦
೧–೨೯ ಪತ್ರ	೧೨ ಪಂಕ್ತಿ	೨೩ ಅಕ್ಷರ

ಆದಿ : ಶ್ರೀರಸ್ತು ॥ ಬಸವ ಸ್ತೋತ್ರದ ಗದ್ಯ ಬರೆಯುವದಕ್ಕೆ ಶುಭಮಸ್ತು
ಮಾಲಿನೀವೃತ್ತ ॥ ಶ್ಲೋ ॥ ಜಯಜಯ ಬಸವಾಖ್ಯ ಸ್ವಾನುಭೂತೈಕ ಸೌಖ್ಯಾ

ಪ್ರಮಥಗಣ ಪವಿತ್ರಾ ಪ್ರಸ್ಫುರದ್ಭಕ್ತಿಗೋತ್ರಾ
ಪ್ರಣಮಿತ ಬುಧವಾರ್ಯಾ ಸ್ಫಾರದೈಶ್ವರ್ಯಧುರ್ಯಾ
ಪ್ರಥಿತ ವೃಷಭರೂಪಭ್ರಾಜಮಾನಪ್ರತಾಪಃ ॥ ೧ ॥
ಅಪಿಚ ॥ ಶಿವ ಶೃಙ್ಗಾರ । ಆದಿ ಪದವಿಸ್ತಾರ । ಇಹಪರ ಸುಖಾಧಾರ ।
ಕ್ಷರ ದುರಿತಾಕ್ಷಮಕ್ಷಯ ಜನ ಸ್ಥಿತಿ ಕಾರಣ ಕಾರಣ ಕ್ಷಯಾ

ಅಂತ್ಯ : ಧ್ವರ ಗಣನಾಯಕಾಕ್ಷಯ ಭವ ಕ್ಷಯರೋಗ ಭಿಷಕ್ಷಮಕ್ಷಪಾ
ಕ್ಷರಸಕಲಾಙ್ಕಜೂಟಕ್ಷಪಿತ ಪ್ರತಿಪಕ್ಷ ಸುರಾಸುರಕ್ಷಮಾಂ
ಕುರಿತಕಟಾಕ್ಷವೀಕ್ಷಣಕ್ಷಕಾರನುತಾಂ ಬಸವೇಶ ಪಾಹಿ ಮಾಮ್ ॥ ೩೮ ॥

ಕಂದ ॥ ಇತಿ ಭಾವನ್ನಕ್ಷರ ಸಂ
ಸ್ತುತಿ ಸಙ್ಕಲಿತಾಕ್ಷರಾಙ್ಕಿತಸ್ತೋತ್ರವುಮಾ
ಪತಿ ನಿಮಗರ್ಪ್ಪಿಸಿದೆ ಸ
ದ್ಧೃತಿಯಿಂ ಪಾಲ್ಕುರಿಕೆ ಸೋಮಕೃತಿ ಬಸವೇಶಾ ॥ ೩೯ ॥

x x x x

ಶಿವಮಸ್ತು ಭಕ್ತಿ ವಿಭವೋ
ಧ್ರುವಮಸ್ತುವಕ್ಷ ಕಾರಾಂಕ ಪಠಣ ಶ್ರವಣ
ಸ್ತವನಾಶಕ್ತರಿಗೆ ಮಹೋ
ತ್ಸವವಸ್ತು ವಾಕ್ಸಿದ್ಧಿರಸ್ತು ಶಿವ ಬಸವೇಶಾ ॥

ಅಕ್ಷರಾಂಕ ಗದ್ಯ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಶಿವಸ್ತುತಿ, ನೀತಿ.

ವಿಶೇಷ : ಸುಂದರ ಲಿಪಿ. ಇದೇ ಪುಸ್ತಕದಲ್ಲಿ ಮರುಳದೇವರ ಕಂದ, ಲಿಂಗಸ್ತೋತ್ರ ಷಟ್ಪದಿ, ಷಡಕ್ಷರಿಯ ಕಂದ, ಮಿಶ್ರಸ್ತೋತ್ರ, ಶಂಕರದೇವರ ಕಂದವೆಂಬ ಗ್ರಂಥಗಳಿವೆ. ಬಸವ ಸ್ತೋತ್ರದ ಗದ್ಯ ಇತ್ಯಾದಿಯಲ್ಲಿ ಪಞ್ಚಪ್ರಕಾರ ಗದ್ಯ, ನಮಸ್ಕಾರ ಗದ್ಯ, ಅಷ್ಟೋತ್ತರ ಶತನಾಮ ಗದ್ಯ, ಷಟ್ಸ್ಥಲ ನಾಮಗದ್ಯ, ಷಟ್ಸ್ಥಲ ಗದ್ಯ, ಉದಾಹರಣ ಗದ್ಯ, ಅಕ್ಷರಾಙ್ಕನ ಗದ್ಯ ಎಂಬ ಕೃತಿಗಳಿವೆ. ಆದಿಯು ಬಸವ ಸ್ತೋತ್ರ ಗದ್ಯದ ಭಾಗವೂ ಅಂತ್ಯವು ಅಕ್ಷರಾಂಕನ ಗದ್ಯದ ಭಾಗವೂ ಆಗಿದೆ.

1033

ಕೆ. ೩೨೩/೧	**ಬಸವಸ್ತೋತ್ರದ ತ್ರಿವಿಧಿ**	ತ್ರಿವಿಧಿ (?)
೫.೪″ × ೨″	ಸಿದ್ಧರಾಮ	ಸು ೧೧೬೦
೨ ಮತ್ತು ೧೬ನೆಯ ಪತ್ರ	೧೧ ಪಂಕ್ತಿಗಳು	೨೮ ಅಕ್ಷರ

ಆದಿ: ನನಂತ ಶ್ರೀ ಪಾದಕ್ಕೆ ಯಿಂತೊಂದಿಸಿ ಸುಖಿಯಪ್ಪ........

ನಾದಿಗುರು ಬಸವಂಣ ವೇದಕ್ಕಾಭೇದ್ಯನೂ ಬಸವಂಣನೂ
ನಾದಬಿಂದು ಕಲಾತೀತ ಬಸವ....ಯೆಂನಾನಾರಾಧ್ಯ
ಗುರುಬಸವ ಯೋಗಿನಾಥಾ || ೧೦ ||

ಅಂತ್ಯ: ಯಿಂತು ಬಸವಸ್ತವವ ಸಂತಾತಂ ನೆನೆದಿದರನಿ
ಶ್ಚಿಂತನಾದೆನ್ನೈ ಸುಖತರದಲೇ
ಸಚ್ಚಿದಾನಂದಗುರು ಬಸವಂಣನಾ
ಣತೆಯಲ್ಲಿ ವಚ್ಚತ ನಿನಗಾನು ಯೋಗಿನಾಥಾ || ೧೨೫ ||
ಬಸವ ಸ್ತೋತ್ರದ ತ್ರಿವಿಧಿ ಸಮಾಪ್ತ ಮಂಗಲ ಮಹಾಶ್ರೀ.

ವಿಷಯ: ಬಸವಸ್ತುತಿ

ವಿಶೇಷ: ಎರಡೇ ಎರಡು ಪತ್ರಗಳು. ಶಕಟರೇಫದ ಪ್ರಯೋಗವಿದೆ. ೩ರಿಂದ ೧೫ರ ವರೆಗಿನ ಪತ್ರಗಳು ಲುಪ್ತ. ಇದೇ ಕಟ್ಟಿನಲ್ಲಿ ಅಷ್ಟಾವರಣ ಸ್ತೋತ್ರದ ತ್ರಿವಿಧಿ, ಮಿಶ್ರಸ್ತೋತ್ರದ ತ್ರಿವಿಧಿಗಳೆಂಬ ಇತರ ೧೬ ಗ್ರಂಥಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳಾಗಿವೆ.

1034

ಕೆ. ೩೬೯/೬	**ಬಸವ ಸ್ತೋತ್ರದ ತ್ರಿವಿಧಿ**	ತ್ರಿವಿಧಿ
೮″ × ೧.೮″	ಸಿದ್ಧರಾಮ	ಸು. ೧೧೬೦
೨೬–೩೭ ಪತ್ರ	ಪಂಕ್ತಿ	೪೧ ಅಕ್ಷರ

ಆದಿ : || ಕಂದ || ಬಸವೇಶನೆ ಬಸವರಾಜನೆ
ಬಸವಂಣನೆ ಬಸವ ತಂದೆ ಬಸವ ಕೃಪಾನಿಧಿ
ಬಸವ ಪರಮೇಶ್ವರೀಶ್ವರ
ಬಸವ ಪ್ರಮಥಾದಿದೇವ ರಕ್ಷಿಸು ಬಸವಾ || ೧ ||

ಪ್ರಥಮಂತು ಬಸವಂಣ ದ್ವಿತಿಯಂತು ಲಿಂಗಾವು
ತೃತಿಯಂತು ತತ್ವ ಬ್ರಹ್ಮಾಂಡವೆಲ್ಲಾ
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ
ಭಕ್ತಿನಾದೆನು ಗುರುವೆ ಯೋಗಿನಾಥಾ || ೨ ||

ಅಂತ್ಯ : ಯಿಂತು ಬಸವಸ್ತವವ ಸಂತತಂಗೆನೆದಿಗ ನಿ
ಶ್ಚಿಂತವಾದೆನ್ನೈ ಸುಖತರದಲ್ಲಿ
ಸಚ್ಚಿದಾನಂದ ಗುರು ಬಸವಂಣನಾಣತೆಯಲ್ಲಿ
ವಚ್ಚತ ನಿಮಗಾನು ಯೋಗಿನಾಥ || ೧೨೫ ||

ಬಸವ ಸ್ತೋತ್ರದ ತ್ರಿವಿಧಿ ಸಂಪೂರ್ಣ ಮಂಗಳಮಹಾಶ್ರೀ.

ವಿಷಯ : ಬಸವೇಶ್ವರನ ಸ್ತೋತ್ರ.

ವಿಶೇಷ : ಗರಿಗಳ ಅಂಚು ಮುರಿದಿವೆ. ಪ್ರಾಸವನ್ನು ಕೆಲವು ಕಡೆ ಎರಡೆರಡು ಪಾದಗಳಿಗೆ ಅನುಸರಿಸಿದೆ. ಈ ಕಟ್ಟಿನಲ್ಲಿ ಬಸವ ಸ್ತೋತ್ರದ ಜೊತೆಯಲ್ಲಿ ಗುರು, ಷಡಕ್ಷರಿ, ಬಸವ, ಮನೋವಿಕಾರ, ಭಕ್ತಿಬಿನ್ನಹ ರಗಳೆಗಳೂ, ಮಿಶ್ರ ಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ, ಶಂಕರದೇವ, ಮಂತ್ರಮಹತ್ವ, ಮರುಳುದೇವ, ಪ್ರಭುಲಿಂಗನ ಕಂದಗಳೂ,ಅಕ್ಷರ ಮಾಲಿಕಾ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ, ಶತಕ ತ್ರಯವೂ, ಮಲ್ಹಣಸ್ತೋತ್ರವೂ ಇವೆ.

1035

ಕೆ. ೧೮೮/೯	**ಬಸವಸ್ತೋತ್ರದ ತ್ರಿವಿಧಿ (ಸಟೀಕು)**	ತ್ರಿವಿಧಿ, ಗದ್ಯ
೧೭.೬″ × ೨″	ಸಿದ್ಧರಾಮು	ಸು ೧೧೬೦
೫೮-೫೯ ಪತ್ರ	೧೧ ಪಂಕ್ತಿ	೯೨ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯನಮಃ ‖ ಬಸವ ಸ್ತೋತ್ರದ ತ್ರಿವಿದಿಯ ಟೀಕೆ ‖ ಬಸವ । ಬಸವೇಶ್ವರನ । ಸ್ತೋತ್ರದ । ಸ್ತುವಿತ್ಯದ । ತ್ರಿವಿಧಿ । ಶಿವತತ್ವ ಸದಾಶಿವ ತತ್ವ ಮಹೇಶ್ವರ ತತ್ವಂಗಳನವ ಗ್ರಹಿಸಿಕೊಂಡು ತೋರುವ ತ್ರಿವಿಧ ಲಿಂಗಾನುಭವಿಗಳಿಗೆ ಶಿವಾನುಭಾವವನು ವಿರಳವಿಲ್ಲದೆ ಅವಿರಥಂ ಸೂಚಿಸಿ ಕೊಡುವುದೀಗ । ತ್ರಿವಿದಿ ‖ ಕಂದ ‖ ಚಿದ್ಬಿಂದು ‖ ಬಸವೇಶನೆ ಬಸವರಾಜನೆ । ಬಸವಂಣನೆ ಬಸವತಂದೆ ಬಸವ ಕೃಪಾಸಿಧಿ । ಬಸವ ಪರಮೇಶ್ವರೀಶ್ವರ । ಬಸವ ಪ್ರಮಥಾದಿ ದೇವ ರಕ್ಷಿಸು ಬಸವಾ ‖ ಟೀಕೆ ‖ ಬಸವೇಶನೆ । ತ್ರಿವಿಧ ತನುಗಳಿಗೆ ವೊಡೆಯನಾದಂಥಾ । ಬಸವರಾಜನೆ । ತ್ರಿವಿಧಾತ್ಮರುಗಳಿಗೊಡೆಯ ನಾದಂಥಾ । ಬಸವಂಣನೆ । ತ್ರಿಪುಟಿ ಜ್ಞಾನಕ್ಕೊಡೆಯನಾದಂಥಾ । ಬಸವ ತಂದೆ । ತ್ರಿವಿಧ ತತ್ವಂಗಳಿಗೊಡೆಯನಾದಂಥ । ಬಸವ ಕೃಪಾನಿಧಿ । ಶುದ್ಧ ಸಿದ್ಧಪ್ರಸಿದ್ಧವೆಂಬ ತ್ರಿವಿಧ ಪ್ರಸಾದಕ್ಕೆ ಕಡಲವಾದಂಥಾ । ಬಸವ ಪರಮೇಶ್ವ ರೀಶ್ವರ । ಅಂಗತತ್ವ ಲಿಂಗತತ್ವಂಗಳವ ಗ್ರಹಿಸಿಕೊಂಡ ಷಟ್ಸ್ಥಲಾಧೀಶ್ವರ ನಾದಂಥಾ । ಬಸವಪ್ರಮಥಾದಿದೇವ । ಚಿತ್ಕರಣಂಗಳಿಗೊಡೆಯನಾದಂಥ । ಬಸವಾ । ನಾದಬಿಂದು ಕಲಾಸ್ವರೂಪನಾದ । ಯಲೆ ಬಸವೇಶ್ವರನೆ । ಮಾಂ। ಯೆಂನ। ರಕ್ಷಿಸು । ಪಾಲಿಸು । ತ್ರಿವಿಧಿ । ತ್ರಿಪದಿ ‖ ಪ್ರಥಮಂತು ಬಸವಂಣ ದ್ವಿತೀಯಂತು ಲಿಂಗವು । ತ್ರುತೀಯಂತು ತತ್ವ ಬ್ರಹ್ಮಾಂಡವೆಲ್ಲಾ । ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ ಭಕ್ತನಾದೆನು ಗುರುವೆ ಯೋಗಿನಾಥಾ ‖ ಟೀಕೆ ‖ ಪ್ರಥಮಂತು ಬಸವಣ್ಣ । ಸ್ಥೂಲತನುವಿನಲ್ಲಿ ಯಿಷ್ಟಲಿಂಗವಾಗಿ ಸಾಹಿತ್ಯವುಬ ಸವನೆಂಬಗ್ರಜನು ।

ಅಂತ್ಯ : ಭಂಡಿಗಾಲಿಯು ಕಟ್ಟಿ ಮಂಡಲವನಾಳಿದನೂ । ಚಂಡಕೀರ್ತಿಯುದಂಡ ಮಾರ್ತಂಡನು । ಗಂಡುಗಲಿ ಬಸವನ ಕಂಡು ಯೆಂನಯ ಭವವ । ತುಂಡಿಸಿದೆನೈ ಗುರುವೆ ಯೋಗಿನಾಥ ॥ ಟೀಕೆ ॥ ಭಂಡಿ । ದೇಹವೆಂಬ ಸಗಟಕೆ । ಗಾಲಿಯ ಕಟ್ಟಿ । ಕ್ರಿಯಾಜ್ಞಾನಂಗಳೆಂಬ ಚಕ್ರವ ಸಂಬಂಧಿಸಿ । ಮಂಡಲವ ॥

ವಿಷಯ : ಚನ್ನಬಸವ ಸ್ತುತಿಯೊಂದಿಗೆ—ವೀರಶೈವ ತತ್ವವಿಚಾರ ಮಂಡನೆ.

ವಿಶೇಷ : ಅಸಮಗ್ರ. ಇಲ್ಲಿಗೆ ಈ ತ್ರಿವಿಧಿ ನಿಲ್ಲಿಸಲ್ಪಟ್ಟು ಮುಂದೆ ಕರಸ್ಥಲನಾಗಲಿಂಗದೇವರ ತ್ರಿವಿಧಿಯ ಬರಹ ಆರಂಭವಾಗಿದೆ. ೫೯ ನೇ ಪತ್ರದಲ್ಲಿರುವ ೨ ನೆಯ ಯೋಗಿನಾಥಾಂಕಿತ ಪದ್ಯದ ಟೀಕೆಯಲ್ಲಿ 'ಯೋಗಿನಾಥ'ನೆಂಬುದಕ್ಕೆ ಚನ್ನಬಸವೇಶ್ವರನೆಂದೇ ಅರ್ಥ ಮಾಡಲಾಗಿದೆ. ಶಕಟರೇಫ ಬಳಸಿದೆ. ಇದರೊಂದಿಗೆ ಕರಸ್ಥಲದ ನಾಗಲಿಂಗ ದೇವರ ತ್ರಿವಿಧಿ (ಸಟೀಕು), ಏಕೋತ್ತರ ಶತಸ್ಥಲ ಮೊದಲಾದ ಇತರ ೧೫ ಗ್ರಂಥಗಳಿವೆ.

1036

ಕೆ. ೪೬೮/೧೩	**ಬಸವ ಸ್ತೋತ್ರದ ತ್ರಿವಿಧಿ**	ತ್ರಿವಿಧಿ
೧೫."೩ × ೧"	ಸಿದ್ಧರಾಮ	ಸು ೧೧೬೦
೩೯–೫೩ ಪತ್ರ	೪ ಪಂಕ್ತಿ	೫೦ ಅಕ್ಷರ

ಆದಿ : ಬಸವ ಸ್ತೋತ್ರದ ತ್ರಿವಿಧಿ ॥ ಕಂದ ॥ ಬಸವೇಶನೆ ಬಸವರಾಜನೆ । ಬಸವಂಣನೆ ಬಸವ ತಂದೆ ಬಸವ ಕೃಪಾನಿಧಿ । ಬಸವ ಪರಮೇಶ್ವರರೀಶ್ವರ । ಬಸವ ಪ್ರಮಥಾದಿದೇವ ರಕ್ಷಿಸು ಬಸವಾ ॥ ೧ ॥ ತ್ರಿವಿದಿ ॥ ಪ್ರಥಮಂತು ಬಸವಂಣ ದ್ವಿತಿಯಂತು ಲಿಂಗಾವು । ತ್ರುತಿಯಂತು ತತ್ವ ಬ್ರಹ್ಮಾಂಡಕ್ಕೆಲ್ಲ । ಅಕಳಂಕ ಗುಣನಿಧಿ ಚಿದಾನಂಥ ಬಸವಂಗೆ । ಭಕ್ತನಾದೆನು ಗುರುವೆ ಯೋಗಿನಾಥ ॥ ೨ ॥

ಅಂತ್ಯ : ಯಿಂತು ಬಸವಸ್ಥವವ ಸಂತತಂ ನೆನೆದೀಗ । ನಿಶ್ಚಿಂತನಾದೆನೈ ಸುಖತರದಲ್ಲಿ ಸಚ್ಚಿಥಾನಂಥ ಗುರುಬಸವಂಣನಲಿ ವಚ್ಚತ ನಿನಗಾನು ಯೋಗಿನಾಥಾ ॥೧೨೫॥ ಬಸವಸ್ತೋತ್ರದ ತ್ರಿವಿಧಿ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಬಸವ ಸ್ತೋತ್ರ.

ವಿಶೇಷ : ಒಟ್ಟು ೧೨೫ ತ್ರಿವಿಧಿಗಳಿದ್ದು ಸಮಗ್ರವಾಗಿದೆ. ಪ್ರತಿಯಲ್ಲೆಲ್ಲೂ ಕರ್ತೃವಿನ ನಾಮೋಲ್ಲೇಖನವಿಲ್ಲ. ೪೪ ಮತ್ತು ೪೯ ನೇ ಪತ್ರಗಳು ಸ್ವಲ್ಪ ತ್ರುಟಿತವಾಗಿವೆ. ಈ ಕಟ್ಟನಲ್ಲಿ ಮನೋವಿಕಾರ ನಿರಸನ ರಗಳೆ, ಷಟ್ಸ್ಥಲ ತಿಲಕ, ಪ್ರಸ್ತಾವದ ಷಟ್ಪದಗಳು ಮೊದಲಾದ ಇತರ ಗ್ರಂಥಗಳಿವೆ.

1037

ಕೆ. ಬಿ. ೯೦/೩ **ಬಸವ ಸ್ತೋತ್ರದ ಷಟ್ಪದಿ** ಭಾಮಿನಿ, ವಾರ್ಧಕ
೭.೮" × ೬" ಚೆನ್ನಂಜೇದೇವರು ?
೧–೪೭ ಪತ್ರ ೧೨ ಪಂಕ್ತಿ ೧೮ ಅಕ್ಷರ.

ಆದಿ : ಚೆನ್ನಂಜೇದೇವರು ಸೇರಿಸಿದ ಬಸವ ಸ್ತೋತ್ರದ ಷಟ್ಪದಿ ||
ಭಾಮಿನಿ || ಬಸವ ಶರಣೆನೆ ಪಾಪವಳಿವುದು
ಬಸವ ಶರಣೆನೆ ತಾಪವಾಱುಗು
ಬಸವ ಶರಣೆನೆ ಪರಮಪಾವನಭೂತಿ ಸಂದಿಸುಗೂ
ಬಸವ ಶರಣೆನೆ ಭಕ್ತಿ ದೊರಕುಗು
ಬಸವ ಶರಣೆನೆ ಸಾರ್ಗುಸುಸ್ಥಿತಿ
ಬಸವ ಶರಣೆನೆ ವಚನರಚನಾಸಿದ್ಧಿ ವರ್ತಿಸುಗೂ || ೧ ||

ಅಂತ್ಯ : ಭಕ್ತಿಯಿಂ ಬಸವಚಾರಿತ್ರಮಂ ಕೇಳ್ವವ
ರ್ಗೆತ್ತಣದು ವಿಷಸರ್ಪ ನೃಪಚೋರ ಭೂತವಪ
ಮೃತ್ಯು ಮಾರಣಮೋಹನೋಚ್ಚಾಟನ ದ್ವೇಷಣ ಪ್ರೇತ ಪೈಶಾಚಿಕಾ
ಕೃತ್ತಜಲಶಸ್ತ್ರ ಸಂಕಟ ಶತ್ರುದಾರಿದ್ರ್ಯ
ಸುತ್ತಿ ಮುತ್ತಿದ ಕಿಚ್ಚು ಭಯಗಳಿವು ಮೊದಲಾಗಿ
ಮೊತ್ತವೆಂದಱಿವುದಿದ ತಿಳಿದು ಬಸವೇಶ್ವರನ ಭಜಿಸಿ
ಬದುಕುವುದೆಲ್ಲರು || ೧೧೧ ||
ಬಸವ ಷಟ್ಪದಿ ಸ್ತೋತ್ರಂ ಸಂಪೂರ್ಣಂ |

ವಿಷಯ : ಬಸವೇಶ್ವರನ ಸ್ತುತಿಸಂಗ್ರಹ.

ವಿಶೇಷ : ಶಕಟರೇಫದ ಬಳಕೆಯಿದೆ. ಇದರೊಂದಿಗೆ ಮಿಶ್ರಷಟ್ಪದಿಸ್ತೋತ್ರ, ಮಿಶ್ರ ಸ್ತೋತ್ರ ಎಂಬ ಕೃತಿಗಳಿವೆ.

1038

ಕೆ. ಬಿ. ೩೫೧/೩ **ಬಸವಾಷ್ಟಕ, ಇತ್ಯಾದಿ** ಸ್ತೋತ್ರ
೮" × ೬.೨" ? ?
೯೫–೧೦೫ ಪತ್ರ ೧೬ ಪಂಕ್ತಿ ೨೦ ಅಕ್ಷರ

ಆದಿ : ಬಸವಾಷ್ಟಕ ಬರೆಯುವದಕ್ಕೆ ಶುಭಮಸ್ತು
ಶ್ರೀ ಮಹಾ ವೃಷಾಧಿಪ ಪ್ರಸಿದ್ಧನಾಮ ಬಸವಲಿಂಗ || ೧ ||
ಧಾಮನಿಡಿಶಿತೆಂದು ಕೋಟಿಧಾಮ ಶಿವ ಬಸವಲಿಂಗ || ೨ ||

ಸತ್ವ ರಜ ತಮೋಗುಣ ಪ್ರಚಾರ ದೂರ ಬಸವಲಿಂಗ || ೩ ||
ತತ್ವಮಸಿ ಪದೈಕ್ಯ ವಚನ ಧರ್ಮ ಯುಕ್ತಿ ಬಸವಲಿಂಗ || ೪ ||

ಅಂತ್ಯ : ಗಣಿತವಿಲ್ಲದಂತ ಪ್ರಮಥಗಣಕೆ ಶ್ರೇಷ್ಠ ಬಸವರಾಜ
ಪ್ರಣವ ರೂಪ ಮಹಿಮ ಪುರುಷ ಬಸವ ಪಾಹಿ ಮಾಂ || ೧೬ ||
ಧರಣಿಐ ನೆಲೆ ವಾಸ ಗುರುವು ಚಂನವೀರ ದೇವ
ಕರಪುರಿ ಯಿಷ್ಟಲಿಂಗ ಬಸವ ಪಾಹಿ ಮಾ || ೧೭ || ಶ್ರೀ ಶ್ರೀ ಶ್ರೀ

ವಿಷಯ : ಬಸವನ ಸ್ತುತಿ

ವಿಶೇಷ : ಈ ಗ್ರಂಥದ ಜೊತೆಯಲ್ಲಿ ಗುಂಡು ಬ್ರಹ್ಮಯ್ಯಗಳ ಸುವ್ವಿ, ಜೋಗುಳ ಪದ, ಬಸವೇಶ್ವರ ರಗಳೆ, ಗಣಾಷ್ಟಕ, ಬಸವ ಪಾವಡ, ನುಲಿಯ ಚಂದಯ್ಯ ಗಳ ವಚನ, ಹಾಡುಗಳು, ಪುರಾತನ ದೇವಿಯರ ತ್ರಿಪದಿ, ಪುಷ್ಪಾಂಜಲಿಯ ಸ್ತೋತ್ರ, ಇತ್ಯಾದಿ ಗ್ರಂಥಗಳಿವೆ. ಆದರೆ ಗ್ರಂಥದ ಕೊನೆಯಲ್ಲಿ ಮಿಶ್ರ ವಿಷಯಕ್ಕೆ ಸಂಬಂಧಿಸಿದ ಕೆಲವು ಪತ್ರಗಳಿವೆ.

1039

ಕೆ.ಬಿ. ೫೦೬/೩	**ಬಸವೇಶ್ವರ ಚರಿತ್ರೆ**	ಭಾಮಿನೀ ಷಟ್ಪದಿ
೭.೨" × ೫.೮"	?	?
೨೧೪–೨೨೬ ಪತ್ರ	೧೫ ಪಂಕ್ತಿ	೧೫ ಅಕ್ಷರ

ಆದಿ : ಶ್ರೀ x x ಬಸವೇಶ್ವರ ಚರಿತ್ರೆ ಬರಿಯುವದಕ್ಕೆ ಶುಭಮಸ್ತು | ನಿರ್ವಿಘ್ನ ಮಸ್ತು.
ಗ್ರಂಥ || ಆದಿ ಅನಾದಿ ರೂಪಾಯ ನಿರ್ಗುಣಂ ಗುಣಾತ್ಮನೇ
ಸಮಸ್ತ ಲೋಕನಾಥಾಯ ಮಮ ಪ್ರಭೂ || ೧ ||

x x x x

ಭಾಮಿನಿ ಷಟ್ಪದಿ || ರಾಗಾ ಮಲಹರಿ ||
ಶ್ರೀ ಬಸವಲೀಲಾ ವಿನೋದವ
ಶ್ರೀ ಬಸವ ಘನತೇಜ ಮಹಿಮೆಯ
ಶ್ರೀ ಬಸವ ಪುಂಣ್ಯಾಭಿಚರಿತೆಯ ಗಿರಿಜೆ ಕೇಳೆಂದ || ಪ ||

x x x x

(೨೨೧ನೆಯ ಪತ್ರ) || ೩೮ || ಪ್ರಥಮ ಸ್ಥಲ ೧ ಕ್ಕೆ ಸಾಕ್ಷಿ ಪದಾಸಹಾ ೫೮ಕ್ಕೆ ಮಂಗಳಮಸ್ತು || ಶ್ರೀ ಶ್ರೀ. ಶ್ರೀ ಗುರುಬಸವಲಿಂಗಾಯನಮಃ
ಸಾಕ್ಷಿ || ಬ್ರಹ್ಹ ವಿಷ್ಣು ಸುರೇಂದ್ರಾಣಾಂ ಸರ್ವಧ್ಯಾನ ಪದದ್ವಯಂ
ವೇದಾಗಮಾರ್ತನಿವೃತಂ ಪುತ್ರಮಂ ವೃಷಭಸ್ಥಲಂ || ೧ ||

ಅಂತ್ಯ : || ೧೫ || ಮರದು ಬಸವನ ನೆನೆದನಾದಡೆ
ಹರಿವುದೈ ಶತಕೋಟಿ ಪಾತಕ
ಮರದು ಬಸವನ ನೋಡಿ ನೆನದಡೆ ಮರಳಿ ಭವವಿಲ್ಲಾ

ಮರದು ಬಸವನ ಪೂಜೆ ಮಾಡಲು
ಕರಿಗೊರಳನವರೊಳಗೆ ಬೆರಸಿಹ
ಮರದು ಬಸವ ಪ್ರಸಾದಗೊಂಡೊಡೆ ಬಸವನೊಳಗೈಖ್ಯಾ || ೧೬ ||

ವಿಷಯ : ಬಸವೇಶ್ವರ ಮಹಿಮೆ

ವಿಶೇಷ : ಶಿವಗಿರಿಜಾ ಸಂವಾದಾತ್ಮಕ. ಅಸಮಗ್ರ.

ಇದರೊಂದಿಗೆ

೨೨ ಪದಗಳೂ (ವಿವಿಧ), ಪ್ರೌಢರಾಯನ ಕಾವ್ಯವೂ, ಬಸವೇಶ್ವರ ರಗಳೆ, ಚನ್ನಬಸವೇಶ್ವರನ ಅಷ್ಟಕ, ಅಲ್ಲದೆ ಕೊಡಗಿನ ಮಠದ ದುರಸ್ತಿ ಲೆಕ್ಕ ಇತ್ಯಾದಿ ಗ್ರಂಥಗಳಿವೆ.ಮಧ್ಯದಲ್ಲಿ ಕೆಲವು (೨೩೦–೨೫೮) ಪತ್ರಗಳಲ್ಲಿ ಬರವಣಿಗೆಯಿಲ್ಲ.

1040

ಕೆ.ಬಿ. ೪೫೮	**ಬಸವೇಶ್ವರನ ಕಾವ್ಯ**	ಸಾಂಗತ್ಯ
೮.೨" × ೬.೫"	ಬಸವಲಿಂಗ	?
೧–೮೦೮ ಪುಟ	೧೬ ಪಂಕ್ತಿ	೧೨ ಅಕ್ಷರ

ಆದಿ : ಬಸವೇಶ್ವರನ ಕಾವ್ಯ

ಶ್ರೀ ಮದ್ಭಕ್ತ ಸುಧಾಬ್ಧಿ ಸೋಮಹರಿ ನೇತ್ರಾಬ್ಜಾಂಕ ಪಾದಾಂಬುಜಾ
ಸೋಮಾರ್ಕಾನಿಲ ಜೀವ ಪಾವಕ ರಸಾಕಾಶಾಂಬು ಸದ್ಗೋತ್ರಸು
ತ್ರಾಮ ಶ್ರೀಶ ವಿರಿಂಚಿ ಮುಖ್ಯ ಸುರಸಂದೋಹಾರ್ಚಿತಾಂಘ್ರಿದ್ವಯಾ
ಕಾಮೋದ್ಗರ್ವಪಯೋಧಿ ಕುಂಭಜ ಮಹಾನಂದೀಶ್ವರಾ ಪಾಹಿ ಮಾಂ ||
ಶ್ರೀ ಶಿವನ ಚಿತ್ರಭಾಂಗನೆ
ಶ್ರೀ ಶಿವನೊಳ ಹೊರಗೆ ತೊಳಪ ವಿಮಲ ಜ್ಯೋತಿ
ಶ್ರೀ ಶಿವನ ಧರ್ಮವಾಹನ
ಶ್ರೀ ಶಿವನಪರಾವತಾರ ಜಯ ಜಯ ಬಸವಾ ||

x x x x

ಕೃತಿ ಬಸವೇಶನುನ್ನತ ಚಾರಿತ್ರಮೀ
ಕೃತಿಗೆ ಕರ್ತನು ಬಸವೇಶಾ
ಶಿಥಿನೀಲಕಂಠರೀ ಕೃತಿಯ ಲಾಲಿಪರೀ
ಕೃತಿಯ ಬಸವಲಿಂಗನುಸಿರ್ದಾ || ೩೧ ||

ಅಂತ್ಯ : ಯಿದು ವೀರಶೈವ ಚಿನ್ನಿಧಿ ಬಸವೇಶನ
ಪದಪದ್ಮ ಭೃಂಗ ಸದ್ವಿಮಲಾ
ಹೃದಯ ಬಸವಲಿಂಗ ಮುದದೆ ಪೇಳಿದ ಕಾವ್ಯ

ವಿದು ಪತ್ತೊಂಭತ್ತನೆಯ ಸಂಧಿ ॥ ೧೫೭ ॥
ಅಂತು ಸಂಧಿ ೧೯ ಕ್ಕಂ ಪದನು ಪ್ರದಕ್ಷಿಣ
ಪದವನುಳಿದು ೩೦೮೬ ಕ್ಕಂ ಮಂಗಳಮಹಾ ॥ ಜಯ ಸಂವತ್ಸರದ ಮಾಘ ಮಾಸದ ಮೃಗಶಿರೆ ನಕ್ಷತ್ರದ ಶುದ್ಧದಶಮಿ ಬುಧವಾರದಲ್ಲು ಬಸವೇಶ್ವರನ ಕಾವ್ಯ ಬರೆದು ಸಮಾಪ್ತಿಯಾದುದು. ಮಂಗಳ ಮಹಾ.

ವಿಷಯ : ಬಸವೇಶ್ವರನ ಕಥೆ.

ವಿಶೇಷ : ಶಕಟರೇಫದ ಬಳಕೆಯಿದೆ. "ಬೇಲೂರು ತಾಲ್ಲೋಕು ಬಿಕ್ಕೋಡು ಮಠದ ಶ್ರೀ ಶ್ರೀ ಸದಾಶಿವಸ್ವಾಮಿಗಳವರಿಂದ ಬಂದಿದ್ದ ಪುಸ್ತಕದ ಕಾಪಿ" ಎಂದು ಆದಿಯ ಒಂದು ಪತ್ರದಲ್ಲಿದೆ.

1041

ಕೆ. ೪೬೮/೧೧	**ಬಸವೇಶ್ವರನ ನೂರೆಂಟು ನಾಮ**	ಹಾಡು
೧೫.೩" × ೧"	?	?
೩೫–೩೭ ಪತ್ರ	೪ ಪಂಕ್ತಿ	೫೦ ಅಕ್ಷರ

ಆದಿ : ಬಸವೇಶ್ವರನ ನೂರೆಂಟು ನಾಮ
ಜಪಿಸ ಬಲ್ಲವರಾರು ಸಂತ್ತತ ಬಸವನಾಮುಮಂ
ವಿಪುಳತರ ವಿಮಳ ಭಕ್ತಿಗ್ನಾನ ಮೋಕ್ಷಮಂ
ತಪನ ಶತಕೋಟಿಪ್ರಕಾಶ ಬಸವೇಶ ನೀ ವಲಿದು ಸಹಜವೆಂದು ನಂಬಿ ॥ಪಲ್ಲ॥

ಅಂತ್ಯ : ಆದಿ ಗಣನಾಥ ನಿರ್ಮ್ಮಲ ಪರಂಜ್ಯೋತಿ ಗ್ನಾನೋದಯ
ಪವಿತ್ರ ಗೋತ್ರಂ ವಿಚಿತ್ರಂ ಬಸವಂ । ನಾಥಿ ಜಂಗಮ ಹೃದಯ
ತೋಷನೆಂದೆಂಬ್ಬ ನೂರೆಂಟ್ಟು ನಾಮವನಾವಗಂವೋಧಿ
ಬರಧಡೆ ಕೇಳಿ ಕೊಂಡಾಡಿ ಜಪಿಶಿದಡೆ । ಸಾಧ್ಯಮಪ್ಪಧು
ಪರಮ ಸುಖ । ಭೋಗ ರುದ್ರ ಪದವಾದಿಯಾಗಿಹ ಸಂಪದವ
ಪಡೆಧೂ । ಗುರು ನಿರಂಜನ ಲಿಂಗದೊಡವೆರ್ವನೂ ॥ ೫ ॥

ವಿಷಯ : ಬಸವನ ನಾಮಾವಳಿ.

ವಿಶೇಷ : ಈ ಕಟ್ಟಿನಲ್ಲಿ ಶರಣೆಯರ ನಾಮ, ಬಸವ ಸ್ತೋತ್ರದ ತ್ರಿವಿಧಿ ಇತ್ಯಾದಿ ಗ್ರಂಥಗಳಿವೆ.

1042

ಕೆ .ಎ. ೨೧೨/೨ **ಬಸವೇಶ್ವರನ ಪಂಚ ಸ್ತೋತ್ರ (ಸಟೀಕು)** ಷಟ್ಪದಿ

೧೨.೮" × ೭.೮" ? ಸು. ೧೫೫೦

೧–೫೯ ಪತ್ರ ೨೨ ಪಂಕ್ತಿ ೨೨ ಅಕ್ಷರ

ಆದಿ : ಬಸವೇಶ್ವರನ ಪಂಚಸ್ತೋತ್ರ
ಜಯ ಜಯ ಜರಾಮರಣ ಜನ್ಮವರ್ಜಿತ ಹರಣ
ಜಯ ಜಯ ಪರಾತ್ಪರವೆ ಜಯತು ಪಾವನ ಗುರುವೆ ।
ಜಯತೆಂದು ಬಸವರಾಜನ ಪದಯುಗ್ಮಮಂ ಸ್ತುತಿಪೆನನವರತ ಮುದದಿಂ ॥೧॥

ಟೀಕು ॥ ಜರಾಮರಣ । ಜನ್ಮವರ್ಜಿತ ಹರಣ, ಜಯಜಯ, ಜರ ।
ಮುಪ್ಪು । ಮರಣ । ಲಯ । ಜನ್ಮ । ವುತ್ಪತ್ಯಂಗಳು । ವರ್ಜಿತ ।
ಯಿಲ್ಲದ । ಹರಣ । ಪ್ರಾಣವನ್ನುಳ್ಳಂಥಾ ॥

ಅಂತ್ಯ : ಹಂಸ ಶ್ರವಣನ ಕಲಿತ ಹಂಸನೆ ।
ಹಂಸವಾದನೆ ಹಂಸ ಶಿರಕರ
ಹಂಸಗೊಂದಣ ಹೃದಯ ಹಂಸದಿ ನೆಲಸಿದಕಳಂಕಾ ॥
ಹಂಸಪಾವಕ ಹಂಸಲೋಚನ
ಹಂಸಗಮನ ಸಖ ಹಂಸರಿಪುಪಿತ
ಹಂಸರೂಪನೆ ಹಂಸವೀವುದು ನಿಂಮ ಕೃಪೆಯೊಲಿದು ॥ ೫೭ ॥

ಟೀಕು ॥ ಹಂಸ ಶ್ರವಣನ । ಕಂಣೆ ಕಿವಿಯಾಗುಳ್ಳ ಸರ್ಪಂಗಳಿಂದ

x x x x

ರಿಪು । ವೈರಿಯಾದ ವೀರಭದ್ರ ಸ್ವಾಮಿಗಳಿಗೆ । ಪಿತಾ ತಂದೆ ಯಾದಂಥಾ ।
ಹಂಸರೂಪನೆ । ಮೋಕ್ಷ ಸ್ವರೂಪನಾದಂಥಾ ದೇವನೆ । ನಿಂಮಕೃಪೆಯೊಲಿದು।
ನಿಂಮ ಕರುಣವಿಟ್ಟು । ಹಂಸ

ವಿಷಯ : ಶಿವಮಹಿಮೆ ಹಾಗೂ ಬಸವಸ್ತುತಿ.

ವಿಶೇಷ : ೩೭ನೆಯ ಪದ್ಯದ ವರೆಗೆ ವಾರ್ಧಕ ಷಟ್ಪದಿ, ಅಲ್ಲಿಂದ ಮುಂದಕ್ಕೆ ಭಾಮಿನಿ ಷಟ್ಪದಿಯಲ್ಲಿದೆ. ಪ್ರಣಮ ಸಂಬಂಧದ ವಿಚಾರವಾಗಿ ಕೊನೆಯಲ್ಲಿ ಎರಡು ಪತ್ರಗಳಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಇದೇ ಪುಸ್ತಕ ದಲ್ಲಿ ಭಾವಚಿಂತಾರತ್ನವೆಂಬ ಮತ್ತೊಂದು ಕೃತಿಯಿದೆ.

1043

ಕೆ. ಎ. ೧೪೭/೨	**ಬಸವೇಶ್ವರನ ಪವಾಡಗಳು**	ಗದ್ಯ
೧೪.೧" × ೮.೯"	ಮರುಳ ಸಿದ್ಧ	ಸು. ೧೭೦೦
೧–೬ ಪತ್ರ	೨೦ ಪಂಕ್ತಿ	೪೨ ಅಕ್ಷರ

ಆದಿ : ಶ್ರೀಮದನುಪಮ ಕಲ್ಯಾಣ ಪುರವರಧೀಶ ಮಹಾಮಹಿಮ ಬಸವರಾಜದೇವರು ಯಿವರು ಶಿವನಾಗ್ನೆಯಿಂದ ನಂದಿಕೇಶ್ವರ........ಲೋಕದಲ್ಲಿ ಮಾದರಸ ಮಾದ ಲಾಂಬೆಯರ ಗರ್ಭದಲ್ಲಿ ಬಸವನಾಮದಲವತರಿಸಿ ಕೆಳಗೆ ವುದಹರಿಸಿದ ಪ್ರಕಾರ ೩೬ ಪವಾಡಗಳ ನಡಸಿ ಕಪ್ಪಡಿ ಸಂಗಮನಾಥ ಲಿಂಗದಲ್ಲಿ ಐಕ್ಯರಾದರು.

ಅಂತ್ಯ : ದೇಶಮಧ್ಯದಲ್ಲಿ ಆಕಳ....ಳಕಳ್ಳರು ಕದ್ದುಕೊಂಡು ಹೋಗಲು ಕೊಡುವಾತ ಸಂಗ ಕೊಂಬುವಾತ ಸಂಗನೆಂದು ವಚನ ಹಾಡಿ ಅವರನ ಭಕ್ತರನ ಮಾಡಿದ್ದರು. ಸಂಬಂಧ, ವಬ್ಬ ಕಳ್ಳನು ರಾತ್ರಿ ಮನಿಗೆ ಬಿದ್ದು ತಾನು ನೀಲಲೋಚನೆ ಮಲಗಿರ್ದಾಗ ವಸ್ತ್ರವ ಸುಲಿದುಕೊಳಲು ಸಂಗಮರೂಪನೆಂದಾಡಿ ಆ ಕಳ್ಳನ್ನ ಜಂಗಮನ್ನ ಮಾಡಿದ್ದುದಯ....ಸಲ ಬಸವರಾಜನು ಮತ್ತೊಂದು ದಿನ ರಾತ್ರಿ ಯಲ್ಲಿ ಕಳ್ಳ ಬಂದು ದ್ರವ್ಯವ :ಸುಲಿಯುವಾಗ ಯಚ್ಚತ್ತು ಸಂಗನೆಂದು ವೊಟ್ಟೆ ಕಟ್ಟಿ ಹೊರಿಸಿ ಜಂಗಮನ್ನ ಮಾಡಿದ್ದು ವಚನ ಸಂಬಂಧ.

ವಿಷಯ : ಬಸವಣ್ಣನವರ ಪವಾಡಗಳು.

ವಿಶೇಷ : ಹುಳು ಹೊಡೆದು ಅತ್ಯಂತ ಶಿಥಿಲವಾಗಿದೆ. ಪತ್ರದ ಒಂದುಕಡೆ ಬರೆದಿದೆ. ಇದರೊಂದಿಗೆ ಅರುವತ್ತು ಮೂವರು ಪುರಾತನರ ಚರಿತ್ರೆಯಿದೆ.

1044

ಕೆ. ಎ. ೧೮೪/೨	**ಬಸವೇಶ್ವರ ಪುರಾಣದ ಕಥಾಸಾಗರ**	ಗದ್ಯ
೧೨.೫" × ೭.೮"	ಉತ್ತರದೇಶದ ಬಸವಲಿಂಗ	ಸು. ೧೬೦೦
೫೪–೪೦೩ ಪುಟ	೨೦ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ। ಬಸವೇಶ್ವರನ ಪುರಾಣದ ಕಥಾಸಾಗರ. ಶ್ರೀ ಮದಗಣಿತ ಗಣಾಭಿಮಾರಮಣ ಪೂಜಾಪರಾಯಣರಾದ ವೇದಾಗಮ ಪುರಾಣೇತಿಹಾಸ ಪ್ರವೀಣರಾದ ಪರಶಿವಾದ್ವೈತ ಜ್ಞಾನಸ್ವರೂಪರಾದ ವೇದ ವೇದಾಂತೋಪಾದಿತ ತ್ರಿವಿಧ ಪ್ರಸಾದೋಪಭೋಗಿಗಳಾದ ರಾಜಾದಿ ಸಕಲ ಶಿವಭಕ್ತರುಗಳಿಂ ಪೂಜಿಸಿಕೊಳಲ್ಪಟ್ಟ x x x ಕಥಾಸಾಗರವೆಂಬ ಪೆಸರಿಟ್ಟು ಬಸವಾದಿ ಪ್ರಮಥರ ಕರುಣದಿಂದ ಮಾಡಿದೆವು ॥ ಶ್ರೀ ॥

ನಂದೀಶ್ವರನ ಉತ್ಪತ್ತಿ॥ ಬ್ರಹ್ಮಂಗೆ ನಾಲ್ಕು ಯುಗವು। ಎರಡು ಸಾವಿರ ಬಾರಿ ತಿರುಗಲು। ಒಂದು ದಿನ।

ಅಂತ್ಯ: ಆಗ ಕಲ್ಪತರು ಪಟ್ಟಾವಳಿ ರತ್ನಾಭರಣಂಗಳ ಅಮೃತ ವೊದಲಾದ ದಿವ್ಯಾನ್ನವ

ಕೊಡಲು। ಆ ಸೋಪಸ್ಕರಂಗಳಿಂದ ಮದುವೆಯ ಮಾಡಿ ಕೊಡಲು। ಸ್ಕಂಥ ಗಿರಿಯಲ್ಲಿ ಸತಿಪತಿಗಳು ಸುಖದಲ್ಲಿದ್ದರೂ॥ ಶ್ರೀ॥ ೩೬೩॥ x x x x ಈ ಬಸವೇಶ್ವರನ ಪುರಾಣದ ಕಥಾಸಾಗರವ ಭಕ್ತಮಾಹೇಶ್ವರರು ಓದಿ ಕೇಳಿ ಸಂತೋಷಿಸುವುದು॥ ಅಂತು ಕಥೆ ೪೬೨ಕ್ಕಂ ಮಂಗಳ ಮಹಾಶ್ರೀ.

ವಿಷಯ : ಶಿವಶರಣರ ಕಥೆಗಳು.

ವಿಶೇಷ : ಇದೇ ಪುಸ್ತಕದಲ್ಲಿ ಭುವನ ಕೋಶ ಮತ್ತು ಭೈರವೇಶ್ವರನ ಕಾವ್ಯದ ಕಥೆಗಳು (ಭಾಗ ೧) ಎಂಬ ಗ್ರಂಥಗಳಿವೆ.

1045

ಕೆ. ೩೨೫/೧೭	**ಬಸವೇಶ್ವರ ಪುರಾಣದ ನಾಂದ್ಯ**	ಭಾಮಿನೀಷಟ್ಪದಿ
೯.೫" × ೨"	ಭೀಮಕವಿ	೧೩೬೯
೫೧–೫೩ ಪತ್ರ	೧೧ ಪಂಕ್ತಿ	೫೩ ಅಕ್ಷರ

ಆದಿ : ಬಸವೇಶ್ವರನ ಪುರಾಣದ ನಾದ್ಯ ॥
ಶ್ರೀಗುರುವೆ ದೀಕ್ಷಾಗುರುವೆ ರ
ಕ್ಷಾಗುರುವೆ ಶಿಕ್ಷಾಗುರುವೆ ಸ
ರ್ವಾಗಮೋಕ್ತಕಳಾಗುರುವೆ ಶಿವಯೋಗ ದಮ್ರ್ಮಾರ್ತ್ರ
ಭೋಗ ಗುರುವೇ ತ್ಯಾಗ ಗುರುವೆ ಸು
ಧೀ ಗುರುವೇ ವಾಚಾಗುರುವೆ ಭವ
ರೋಗಹರ ಶರಣಾಗು ಬಸವ ಮಹಾಗುರುವೆ ಯಮಗೆ ॥೧॥

ಅಂತ್ಯ : ಯಿದು ಸಕಲ ಮಾಹೇಶ್ವರಾಮಳ
ಪದ ಪಯೋಜ ಪರಾಗ ಮದಷ
ಟ್ಪದಿಯೆನಿಪ ಪಾಲ್ಕುರಿಕೆ ಸೋಮೇಶ್ವರನ ಕಾರುಣ್ಯ
ವದವಿದಖಿಳ ಕಳಾ ಪ್ರಪೂರಿತ
ಹೃದಯ ಭೀಮಕವಿ ಪ್ರಣೀತಾ
ದ್ಭುದಯ ಬಸವಪುರಾಣ ಕಥೆಯೊಳಗಷ್ಟಮಾಶ್ವಾಸಾ ॥೩೫॥
ಬಸವ ಪುರಾಣದ ನಾದ್ಯ ಸಮಾಪ್ತ ಮಂಗಳ ಮಹಾಶ್ರೀ

ವಿಷಯ : ಈ ಪುರಾಣದ ನಾಂದೀ ಪದ್ಯಗಳು.

ವಿಶೇಷ : ಇದೇ ಕಟ್ಟಿನಲ್ಲಿ ಶಿವಲಿಂಗನಾಂದ್ಯ, ದೇವಿನಾಂದ್ಯ ಮೊದಲಾದತರ ೨೪ ಗ್ರಂಥಗಳಿವೆ.

1046

ಕೆ. ಬಿ. ೫೦೬/೨ **ಬಸವೇಶ್ವರ ರಗಳೆ** ಉತ್ಸಾಹ ರಗಳೆ

೭.೨" × ೫.೮" ಪಾಲ್ಕುರಿಕೆ ಸೋಮ ಸು ೧೧೯೫

೨೦೬–೨೦೭ ಪತ್ರ ೧೪ ಪಂಕ್ತಿ ೨೨ ಅಕ್ಷರ

ಆದಿ : ಶ್ರೀ ಗುರುಬಸಲಿಂಗಾಯನಮಃ ॥ ಬಸವೇಶ್ವರ ರಗಳೆ ಬರಿಯುವುದಕ್ಕೆ
ನಿರ್ವಿಘ್ನಮಸ್ತು ॥
ಬಸವೇಶನೆ ಬಸವರಾಜನೆ
ಬಸವಂಣನೆ ಬಸವತಂದೆ ಬಸವ ಕೃಪಾನಿಧಿ
ಬಸವ ಪರಮೇಶ್ವರೇಶ್ವರ
ಬಸವ ಪ್ರಮಥಾದಿದೇವ ರಕ್ಷಿಸು ಬಸವ ॥ಪ॥
ಶರಣಸ್ತವ ಕಲ್ಪ ಕುಜಾಂ
ಕುರಪದ ಸಭಾವಿಜಾತನವ ಕುಶಮಷ್ಟೋ
ತ್ತರ ಶತನಾಮಂಗಳ ಬಸ
ವರಸಂಗರ್ಪಿಸಿದ ಪಾಲ್ಕುರಿಕೆಯ ಸೋಮಾಂಕಂ ॥೧॥

ಅಂತ್ಯ : ಶರಣಸ್ತವಮೆನಲೊಪ್ಪುವ
ಶರಣಗಣೋತ್ಸಾಹದ ರಗಳೆಯಂ ಪಠಿಸಲು ವಿ
ಸ್ತರಿಸಲು ತಾಂ ಬರದೋದಲು
ವರ ಸದ್ಭಕ್ತಿರತಿಯಂ ಬಸವನೀವಂ ಕಾಯ್ವಂ ॥೧೫॥

ವಿಷಯ : ಬಸವೇಶನಾಮದ ಮಹಿಮೆ.

ವಿಶೇಷ : ಸಮಗ್ರ ಶರಣಸ್ತವವೆಂದೂ ಇದಕ್ಕೆ ಹೆಸರಿದ್ದಂತಿದೆ. ಅಷ್ಟೋತ್ತರ ಶತನಾಮವೆಂದೂಹೆಸರಿಸಿದೆ. ಇದರೊಂದಿಗೆ ಒಟ್ಟು ೨೨ (ಪದಗಳೂ) ಹಾಡುಗಳೂ, ಪ್ರೌಢರಾಯನ ಕಾವ್ಯ, ಬಸವೇಶ್ವರ ಚರಿತ್ರೆ, ಚನ್ನಬಸವೇಶ್ವರನ ಅಷ್ಟಕ, ಕೊಡಗಿನ ಮಟದ ದುರಸ್ತಿ ಲೆಕ್ಕ ಇತ್ಯಾದಿ ಗ್ರಂಥಗಳೂ ಇವೆ.

1047

ಕೆ ೪೬೯ **ಬಸವೇಶ್ವರ ವಚನಗಳು** ವಚನ

೧೯.೩"×೨" ಬಸವಣ್ಣ ೧೧೬೦

೧–೭೬ ಪತ್ರ ೮ ಪಂಕ್ತಿ ೬೬ ಅಕ್ಷರ

ಆದಿ : ಬಸವಣ್ಣ ದೇವರ ವಚನವ ಬರವುದಕ್ಕೆ ಸುಭ...............

ಪ್ರಥಮದಲ್ಲಿ ಪಿಂಡಸ್ಥಲ ॥ ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತೆ

ಯಿದ್ದಿತ್ತು | ಸಸಿಯೊಳಗಣ ರಸದ ರುಚಿಯಂತೆ ಯಿದ್ದಿತ್ತು | ನನೆಯೊಳಗಣ ಪರಿಮಳದಂತೆ ಯಿದ್ದಿ........ಯ ಸ್ನೇಹದಂತೆ ಯಿದ್ಧಿತ್ತೂ || ೧ ||

ಅಂತ್ಯ : ಅಂತರಂಗ ಬಹಿರಂಗ ಆತ್ಮಸಂಗವೊಂದೆ ಅಯ್ಯಾ || ನಾದಬಿಂದು ಕಳಾತೀತ ಆದಿಯಾದಾರ ನೀನೆ ಅಯ್ಯಾ | ಆರೂಡದ ಕೂಟದ ಸುಖವ | ಕೂಡಲ ಸಂಗಯ್ಯಾ ತಾನೆ ಬಲ್ಲಾ || ೪೦ ||

ಅಇಕ್ಯ ಸ್ಥಲಸಮಾಪ್ತಂ ಮಂಗಳ ಮಹಾಶ್ರೀ

ಭಕ್ತಿ ಸ್ಥಲಕೆ ಸೇರಿದ ವಚನ ೫೨೪ ಮಹೇಶ್ವರ ಸ್ಥಲಕೆ ಸೇರಿದ ವಚನ ೨೪೦ ಪ್ರಸಾದಿ ಸ್ಥಲಕ್ಕೆ ಸೇರಿದ ವಚನ ೩೦ ಪ್ರಾಣಲಿಂಗಿ ಸ್ಥಲಕ್ಕೆ ಶೇರಿದ ವಚನ ೫೮ ಶರಣ ಸ್ಥಲಕ್ಕೆ ಶೇರಿದ ವಚನ ೬೫ ಐಕ್ಯ ಸ್ಥಲಕ್ಕೆ ಶೇರಿದ ವಚನ ೪೦ ಅಂತು ಸ್ಥಲ ೬ ಕ್ಕಂ ಮಿಶ್ರ ೩೬ ಕ್ಕಂ ಶೇರಿದ ವಚನ ೯೫೬ ಕ್ಕಂ ಮಂಗಳ ಮಹಾಶ್ರೀ. ಶಾಲಿವಾಹನ ಸಕಬ್ದ೧೮೭೫ ಸಂದ ಜಯನಾಮ....ಹ ಶ್ವರದ ಅದಿಕ ವೈಶಕ ಬ ೧೦ ಬುಧವಾರ ದಿವಸದಲ್ಲಿ ಬಸವಣ್ಣ ದೇವರ ವಚನ ಸಮಾಪ್ತ ಮಂಗಳ ಮಹಾಶ್ರೀ. ಅರಿಕೂಟಾರದ ದೇವಾಂಗದ ಬಸವಂಣನ ಮಾದೈಯ್ಯನ ಮಗ ಚಂನಬಸವಂಣ ಬಗ....ಲ್ಲಿ ವಕ್ಕಲಿದ್ದಾಗ ಬರದ ಬಸವಂಣ ದೇವರ ವಾಚನ ಸಂಪೂರ್ನ್ನರ್ಣಂ ಮಂಗಳ ಮಹಾಶ್ರೀ.

ವಿಷಯ : ಷಟ್ಸ್ಥಲಸಿದ್ಧಾಂತದ ವಿಚಾರ (ವೀರಶೈವತತ್ವ).

ವಿಶೇಷ : ಗರಿಗಳು ಅಂಚಿನಲ್ಲಿ ತ್ರುಟಿತವಾಗಿವೆ. ಅಲ್ಲಲ್ಲಿ ಹುಳು ತಿಂದಿದೆ. ಮೊದಲ್ಕ ಎರಡು ಗರಿಗಳು ಮುರಿದಿವೆ. ಶಕಟ ರೇಫವಿದೆ. (ಶಾಲಿವಾಹನ ಶಕ. ೧೮೭೫ ಕೆ ಜಯ ಸಂವತ್ಸರವಾಗುವುದಿಲ್ಲ. ಕ್ರಿ.ಶ. ೧೭೭೪ನೇ ವರ್ಷ ಜಯಸಂವತ್ಸರ. ಈ ವರ್ಷದಲ್ಲಿ ವೈಶಾಖ ಮಾಸವು ಅಧಿಕವಾಗಿರುವುದಲ್ಲದೆ, ಬಹುಳ ನವಮಿಯು ಬುಧವಾರವಾಗಿರುವುದರಿಂದ, ಈ ದಿವಸ ನವಮಿ ಕಳೆದು ದಶಮಿ ತಿಥಿಯು ಬಂದಾಗ ಈ ಕೃತಿಯನ್ನು ಬರೆದು ಮುಗಿಸಿರಬಹುದೆಂದು ತಿಳಿದು ಬರುತ್ತದೆ.

1048

ಕೆ.ಎ. ೧೮೮	**ಬಸವೇಶ್ವರ ವಚನಗಳು**	ವಚನ
೧೨.೬″ × ೭.೬″	ಬಸವಣ್ಣ	೧೧೬೦
೧–೮೮ ಪತ್ರ	೨೦ ಪಂಕ್ತಿ	೨೮ ಅಕ್ಷರ

ಆದಿ : ಬಸವರಾಜದೇವರು ನಿರೂಪಿಸಿದ ಷಟ್ಸ್ಥಲದ ವಚನವು ಪ್ರಥಮದಲ್ಲಿ ಭಕ್ತಿಸ್ಥಲ ಪಿಂಡಸ್ಥಲ ವಚನವು.

ಉದಕದೊಳು ಬೈಚಿಟ್ಟ ಬೈಕೆಯರೆಚ್ಚಿನಂತೆ ಇದ್ದಿತು | ಸಸಿಯೊಳಗಣ ರಸದ ರುಚಿಯಂತೆ ಯಿದ್ದಿತು || ನನೆಯೊಳಗಣ ಪರಿಮಳದಂತೆ ಯಿದ್ದಿತು ಕೂಡಲ

ಸಂಗಮದೇವ ಕನ್ನೆಯ ಸ್ನೇಹದಂತೆ ಇದ್ದಿತು ॥ ೧ ॥

ಅಂತ್ಯ : ಮಿಥ್ಯವನಳಿದುಳಿದ ಸತ್ಯಪ್ರಸಾದಿ ಅಂಜನವಿಲ್ಲದ ನಿರಂಜನ ಪ್ರಸಾದಿ ದುಷ್ಟವಳಿದಘನಾನಂದ ಪ್ರಸಾದಿ ಅನಿತ್ಯನಿಲ್ಲದ ನಿತ್ಯಪ್ರಸಾದಿ। ಖಂಡಿತವಿಲ್ಲದ ಅಖಂಡಿತಪ್ರಸಾದಿ ಕೂಡಲಸಂಗಮದೇವರಲ್ಲಿ ತಾನೆ ಪ್ರಸಾದಿ ॥ ೪೨ ॥ ಐಕ್ಯಸ್ಥಲಸಮಾಪ್ತ. ಭಕ್ತಿಸ್ಥಲಕ್ಕೆ ಸೇರಿದ ವಚನ ೫೨೭ ಮಹೇಶ್ವರ ಸ್ಥಲಕ್ಕೆ ಸೇರಿದ ವಚನ ೨೪ ಪ್ರಸಾದಿ ಸ್ಥಲಕ್ಕೆ ಸೇರಿದ ವಚನ ೩೦ ಪ್ರಾಣಲಿಂಗಿ ಸ್ಥಲಕ್ಕೆ ಸೇರಿದ ವಚನ ೫೮ ಶರಣ ಸ್ಥಲಕ್ಕೆ ಸೇರಿದ ವಚನ ೬೫ ಐಕ್ಯಸ್ಥಲಕ್ಕೆ ಸೇರಿದ ವಚನ ೪೨. ಅಂತು ಸ್ಥಲಕ್ಕೆ ಮಿಶ್ರ ೩೭ ಸ್ಥಲಕ್ಕೆ ಸೇರಿದ ವಚನ ೯೬ಕ್ಕಂ ಬಸವರಾಜದೇವರು ನಿರೂಪಿಸಿದ ಷಡುಸ್ಥಲ ಸಂಪೂರ್ಣ ಮಂಗಳಮಹಾ॥ ಮಲ್ಲಿಕಾರ್ಜುನ ಸದ್ಭಾಕ್ಯಂ ನಮಃ ರಕ್ತಾಕ್ಷಿ ಸಂವತ್ಸರದ ವೈಶಾಖ ಶುದ್ಧ ೩ರಲ್ಲು ಬೆಸಗಿ ಮಠದ ದೇವರು ಸಿದ್ಧಲಿಂಗೈಯ್ಯ ಮಗ ಪರ್ವತೈಯ್ಯನು ಬರೆದದ್ದು.

ಬಸವೇಶ್ವರ ವಚನ ಸಂಪೂರ್ಣಂ ಮಂಗಳಮಹಾಶ್ರೀ

ವಿಷಯ : ವೀರಶೈವ ಷಟ್ಸ್ಥಲ ಸಿದ್ಧಾಂತ.

ವಿಶೇಷ : ಕೆಲವು ಪತ್ರಗಳ ಅಂಚಿನಲ್ಲಿ ಹುಳು ತಿಂದು ರಂಧ್ರಗಳಾಗಿವೆ.

1049

ಕೆ. ೧೮೮/೧	**ಬಸವೇಶ್ವರ ವಚನಸಾರಾರ್ಥ (ಟೀಕು ಸಹಿತ)**	ವಚನ–ಟೀಕು
೧೭.೬″ × ೨″	ಪರ್ವತ ಶಿವಯೋಗಿ	?
೧–೧೮ ಪತ್ರ	೧೨ ಪಂಕ್ತಿ	೯೨ ಅಕ್ಷರ

ಆದಿ :........ರ ದೇವರ ವಚನ ಸಾರಾರ್ಥ ॥ಗ್ರಂ॥ ನಮಸ್ತ್ರಿಮೂರ್ತಿ ರೂಪಾಯ। ನಾದಬಿಂದು ಕಳಾತ್ಮನೇ।ನಮಃ ಷಟ್ಸ್ಥಲ ರೂಪಾಯ ಶಾಂತವೀರಾಯ ತೇ ನಮಃ ॥ ೧ ॥ ಬಸವೇಶ್ವರ ದೇವತಾ ವಚ ಸಾರಾರ್ಥ॥ ಪ್ರಥಮದಲ್ಲಿ ಪಿ...............ಂಚ್ಚಿನಂತಿದ್ದಿತ್ತು। ಸಸಿಯೊಳಗಣ ರಸದ ರುಚಿಯಂತಿದ್ದಿತ್ತು। ಕೂಡಲಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು ॥ ಟೀಕೆ ॥ ಉದಕದಲ್ಲಿ ವಡಬಾಗ್ನಿಯಿರ್ದು। ಆವುದಕವನ ಶೋಷಣಂ ಗೆಯ್ಯದೆ........ಷಯ ರಸ ಸೀತಳೀಕೃತಮಪ್ಪ ಪಿಂಡದ ಮಧ್ಯದಲ್ಲಿ ಚಿದಗ್ನಿಸ್ವರೂಪವಾದ ವಸ್ತುವಿರ್ದುರ ಹಸ್ತವಾಗಿರ್ಪುದೆಂಬುದೀಗ। ವುದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿ ದ್ದಿತೆಂಬ ಶಬ್ದಕ್ಕರ್ತ........ಲ ತತ್ವಸ್ವರೂಪಮಪ್ಪ ಪಿಂಡದ ಮಧ್ಯದಲ್ಲಿ

ಅಂತ್ಯ : ॥ ೨೩ ॥ ಆದಿಯಾಧಾರದ। ಶಿವಶಕ್ತಿಸ್ವರೂಪವಾದ ವಿಶ್ವಜೀವನು। ನಾರಾಯಣನ ಪ್ರಕೃತಿಯನು ಗೆದ್ದಂಥಾ। ಧನುಜಿತನು। ಕಾಮುಚಾಪವನು

ಗೆದ್ದಂಥಾ | ಸ್ವರ್ಜಿತನು | ಸ್ವರ್ಗ ಪ್ರಪಂಚನು ಗೆದ್ದಂಥಾ | ಸೂತ್ರಾರ್ಜಿತನು | ಜ್ಞಾನಸೂತ್ರದಿಂದೆ ಪಡೆಯಲ್ಪಟ್ಟಂಥಾ | ನೃಜಿತನು | ಆತ್ಮರ ಪ್ರಪಂಚನು ಗೆದ್ದಂಥಾ | ವುರ್ವರಾಜಿತನು | ಭೂಪತಿಗಳ ಪ್ರಪಂಚನು ಗೆದ್ದಂಥಾ | ಗೋಜಿತನು | ಯಿಂದ್ರಿಯಂಗಳನು ಗೆದ್ದಂಥಾ | ಅಶ್ವಜಿತನು | ಪ್ರಾಣವಾಯುವಿನ ಪ್ರಕೃತಿಯನು ಗೆದ್ದಂಥಾ | ಅರ್ಜಿತನು | ಅರಿಷಡ್ವರ್ಗಂಗಳನು ಗೆದ್ದಂಥಾ | ಸುಸಂವೇದ್ಯನು | ಜ್ಞಾನದಿಂದೆ ತಿಳಿಯಿಸಿಕೊಳಲ್ಪತಕ್ಕಂಥಾ | ವೇದನಾದಾತೀತನು ವೇದನಾದಂಗಳನು ಮೀಱಿದಂಥಾ | ತುರೀಯ | ಸಕಲತ ತ್ವತ್ತ್ರೋತ್ತ್ರೀರ್ನನಾದಂಥಾ | ಪರಾನಂದ | ಶ್ರೇಷ್ಟಾನಂದವನುಳ್ಳಂಥಾ | ನಿರವಯ | ಅವಯವಂಗಳೇನು ಯಿಲ್ಲದೆಯಿರ್ದಂಥಾ | ಸೂರ್ಯಕೋಟಿ | ಅನೇಕಾದಿತ್ಯರುಗಳ ಪ್ರಭೆಯ ಸ್ಫುರಣೆ | ಬೆಳಗಿನ | ಪ್ರಕಾಶದ ಸಹಸ್ರಕಿರಣ | ಸಾವಿರ ಮಯೂಖಂಗಳ | ಅಗ್ರಪಟಲದ | ಅಗ್ರ | ವುಪರಿಯ | ಪಟಲದ | ಸಮೂಹದ | ಬೆಳಗು | ಚಿತ್ಪ್ರಕಾಶವು ಕೂಡಲಸಂಗಯ್ಯ | ಪರಶಿವ ಲಿಂಗವು | ॥ ೨೪ ॥ ಶ್ರೀಶ್ರೀಶ್ರೀಶ್ರೀಶ್ರೀ ॥ ಶ್ರೀ ಗುರುವೇ ಗತಿ ॥ ಬಸವೇಶ್ವರನ ವಚನದ ನುಡಿಗಳು ॥ ಜಲಬುದ್ಬುದಾಕಾರಮಪ್ಪ ಪಿಂಡದ ಮಧ್ಯದಲ್ಲಿ

x x x x x x

ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆಂನ ಬಾಳುವೆಯೆಂಬ ಶಬ್ದಕ್ಕರ್ಥ | ವುಡುಹನ ಮಾಡಿತ್ತು | ಕ್ರಿಯಾಜ್ಞಾನ ರಹಿತನಾಗಿಸಿತ್ತು | ದೇಹಾತ್ಮರುಗಳಿಗೆ ಅಗಲಿಕೆಯಾಗಿ ಶರೀರವು ಭೂಮಿಯ ಮೇಲೆ ಪಥನವಾದ ಬಳಿಕ ಯೆಂಬುದೀಗ ಬೆಡಗಿನ ಕೀಲಕಳದು ಕಿಡದ ಬಳಿಕಯೆಂಬ ಶಬ್ದಕ್ಕರ್ಥ | ತಱಿಸಲಿವೋದನು |

ವಿಷಯ : ವೀರಶೈವ ಸಿದ್ಧಾಂತ ಷಟ್ಸ್ಥಲ ವಿಚಾರ.

ವಿಶೇಷ : ೧೭ನೇ ಪತ್ರದಿಂದ ಮುಂದಿನ ಪತ್ರಗಳಲ್ಲಿ 'ಬಸವೇಶ್ವರನ ವಚನದ ನುಡಿಗಳು (ಸಟೀಕು) ಅಸಮಗ್ರವಾಗಿವೆ. ಪತ್ರ ೯ರಲ್ಲಿ ಭಕ್ತಸ್ಥಲದ ೧೧೯ ವಚನಗಳ ಟೀಕು ಮುಗಿದ ಬಳಿಕ ॥ ೧೧೯ ॥ ಶ್ರೀ ಮತ್ಷಟ್ಸ್ಥಲಾದ್ವೈತ ವಿದ್ಯಾ ಪ್ರಮೋದಿತ ಶ್ರೀ ವೀರಮಾಹೇಶ್ವರ ಬಾಲೇಂದುಪುರದ ಹರೀಶ್ವರ ಶಾಂತ ವೀರೇಶ್ವರ ಚಿದ್ಗರ್ಭ ಸಂಭವ ಪರ್ವತ ಶಿವಯೋಗೀಶ್ವರ ವಿರಚಿತಮಪ್ಪ ಬಸವೇಶ್ವರ ದೇವರ ವಚನ ಸಾರಾರ್ಥ ಭಕ್ತಿಸ್ಥಲ ೧೫ ಹದಿನಯ್ದರೊಳ್ ಸಂಪೂರ್ಣಂ ॥ ಶ್ರೀ ॥ ಇಂನು ಮಹೇಶ್ವರ ಸ್ಥಲ ॥ x x x x ॥" ಎಂದು ಟೀಕಿನಲ್ಲಿದೆ. ಪ್ರತಿಸ್ಥಲಾಂತ್ಯದಲ್ಲಿಯಾಗಲಿ ಆದಿಯಲ್ಲಾಗಲಿ ಈ ಉಲ್ಲೇಖವಿಲ್ಲ. ಈ ಒಂದೆಡೆ ಮಾತ್ರ ಉಲ್ಲೇಖವಿರುತ್ತದೆ. ಒಂದನೇ ಪತ್ರ ಮುರಿದು ಅರ್ಧ ಲುಪ್ತವಾಗಿದೆ. ಶಕಟರೇಫದ ಬಳಕೆಯಿದೆ. ಈ ಗ್ರಂಥದೊಂದಿಗೆ ಏಕೋತ್ತರ ಶತಸ್ಥಲದ ಟೀಕೆ, ಪದಮಂತ್ರಗೋಪ್ಯಮೊದಲಾದ ಇತರ ೧೫ ಗ್ರಂಥಗಳಿವೆ.

1050

ಕೆ. ೭೫/೭ **ಬಸವೇಶ್ವರ ಸ್ತೋತ್ರದ ವಚನಗಳು** ವಚನ
೧೦.೭" × ೨.೨" ಚೆನ್ನಂಜೇದೇವರು ?
೧೨೪–೧೩೨ ಪತ್ರ ೧೯ ಪಂಕ್ತಿ ೮೫ ಅಕ್ಷರ

ಆದಿ : ಬಸವೇಶ್ವರನ ಸ್ತ್ರೋತ್ರದ ವಚನಂಗಳು ॥ ಧರೆಯಾಕಾಶ ತಾರಾಮಂಡಲ ಸಪ್ತ ಸಮುದ್ರಂಗಳಿಲ್ಲದಂದು । ವೊಂದು ಮಹಾವೃಕ್ಷವಿದ್ದಿತ್ತಯ್ಯಾ । ಆ ವೃಕ್ಷವ ಕಂಡು ನಾನು । ಓಂ ನಮಃ ಶಿವಾಯಯನುತಿರ್ದ್ದೆನು। ಆ ವೃಕ್ಷದಿಂದ ಷಡುಸಾದಾಖ್ಯಂಗಳು ಪುಟ್ಟಿದವು। ಆಷಡುಸಾದಾಖ್ಯಂಗಳ ನೆಳಲಿನಲ್ಲಿ ಕುಳ್ಳಿರ್ದ್ದ ನಾನು। ಬಸವಾ ಬಸವಾ ಬಸವಾ ಎನುತಿರ್ದ್ದೆನು ಕಾಣಾ ಗೊಹೇಶ್ವರಾ ॥ ೧ ॥

ಅಂತ್ಯ : ಅರ್ಚ್ಚಿಸಲು ಬೇಡವದ ಪೂಜಿಸಲು ಬೇಡವದ । ನಿತ್ಯ ಜಪತಪ ನಿನಗೆ ಬೇಡಾ । ಸಚ್ಚಿದಾನಂದ ಗುರು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಬಸವಾಕ್ಷರ ತ್ರಯವ ನೆನೆ ನಿನಗೆ ನಿತ್ಯಪದವು ॥

ವಿಷಯ : ಬಸವೇಶ್ವರನ ಸ್ತುತಿ

ವಿಶೇಷ : ಸಮಗ್ರ. ೧೨೨+೧=ವಚನಗಳು ಇವೆ. ಚೆನ್ನಂಜೇದೇವರು ವಿವಿಧ ವಚನಕಾರರ ವಚನಗಳನ್ನು ಸಂಕಲಿಸಿದ್ದಾರೆ. ಶಕಟರೇಫದ ಬಳಕೆಯಿದೆ. ಇದರೊಂದಿಗೆ ಮಿಶ್ರ ಸ್ತೋತ್ರದ ವಚನ, ಏಕೋತ್ತರ ಶತಸ್ಥಲ ಮೊದಲಾದ ಇತರ ೧೨ ಗ್ರಂಥಗಳಿವೆ.

1051

ಕೆ. ಬಿ. ೨೧೪ **ಬಾಣಾಸುರನ ಕಾಳಗ** ಯಕ್ಷಗಾನ
೭.೯" × ೬.೩" ವಿಷ್ಣು ೧೯ ನೇ ಶತಕ
೧–೪೭ ಪತ್ರ ೧೩ ಪಂಕ್ತಿ ೨೨ ಅಕ್ಷರ

ಆದಿ : ಬಾಣಾಸುರನ ಕಥೆ ಬರೆಯುವದಕ್ಕೆ ಶುಭಮಸ್ತು
ಕಂದ ॥ ಶ್ರೀಮಾಕಾಂತಂ ಸದ್ಗುಣ
ಧಾಮಂ ಸುರಪೂಜಿತಾಂಘ್ರಿಯುಗಳ ಸರೋಜಂ
ಸೋಮಾರ್ಕವಹ್ನಿನೇತ್ರಂ
ಪ್ರೇಮದೊಳೆನಗೀಗೆ ಮತಿಯನತಿಸೌಖ್ಯದೊಳ್ಳಂ ॥ ೧ ॥
x x x x
ಮುದದಿಂದ ಭಾಗವತ ಪೌರಾಣದೊಳಗೆ
ಪದುಮಲೋಚನನು ಬಾಣನ ಕರವ ಥರೆಗೆ ॥ ೭ ॥
ಯಿಳುಹಿದಾ ಕಥನವನು ಯಕ್ಷಗಾನದಲೀ

ಅಂತ್ಯ : ಭೂಮಿಯಮರರ ಕುಲದಿ ಜನಿಸಿದ
ರಾಮಪುತ್ರನ ವಿಷ್ಣುವೆಂಬವ
ಶ್ರೀ ಮಹಾಲಿಂಗನ ಪದದ್ವಯ। ತಾಮರಸದ ॥ ೪೩೩ ॥

x x x x

ಶಂಖ ಸುದರ್ಶನ ಧಾರಳಿಗೆ
ಪಕಜಪಾಣಿಗೆ ಪಾವನೆಗೆ
ಕಿಂಕರನಿಕರವ ಸಂತತ ಸಲಹುವ
ಶಂಖರಿ ಶ್ರೀಮುಖಾಂಬಿಕೆಗೆ ॥ ೪೪೦ ॥
ಬಾಣಾಸುರನ ಕಾಳಗ ಸಮಾಪ್ತಕ್ಕೆ ಮಂಗಳ ಮಹಾಶ್ರೀ ॥

ವಿಷಯ : ಶ್ರೀ ಕೃಷ್ಣನು ಬಾಣಸುರನೊಡನೆ ಯುದ್ಧಮಾಡಿದ ಕಥೆ.

ವಿಶೇಷ : ದಪ್ಪಕ್ಷರ. ಈ ಗ್ರಂಥ ಮುಗಿದ ಮೇಲೆ ಬಭ್ರುವಾಹನ ಕಾಳಗ (ಯಕ್ಷಗಾನ)ದ ಒಂದು ಪತ್ರವಿದೆ.

1052

ಕೆ.ಬಿ. ೪೦೭	**ಬಾಣಾಸುರನ ಕಾಳಗ**	ಯಕ್ಷಗಾನ
೯.೨" × ೭"	ವಿಷ್ಣು	೧೯ನೇ ಶತಕ
೪–೮೫ ಪತ್ರ	೧೦ ಪಂಕ್ತಿ	೧೧ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ॥
ಸೌಂಮ್ಯನಾಮ ಸಂವತ್ಸರದ ಮಾರ್ಗೀಶರ ಶುದ್ಧ ೧೧ ಸೋಮವಾರದಲ್ಲು ಭಾಸ್ಕರನ ಹೇಗೆ ಭಾಗವತದೊಳಗಣಾ ಭಾಣಾಸುರನ ಕಾಳಗ ಬರಿಯುವದಕ್ಕೆ ಶುಭಮಸ್ತು ॥

ವೃತ್ತಾ ॥ ಶ್ರೀಮಾಕಾಂತಂ ಸದ್ಗುಣ
ಥಾಮಂ ಸುರವರ ಪೂಜಿತಾಂಘ್ರಿಸರೋಜಂ
ಸೋಮಾರ್ಕಾನನನೀಶಂ
ಪ್ರೇಮದೊಳೆನಗೀಗ ಮತಿಯನು ವಿಘ್ನೇಶಂ ॥
ಮುದದಿ ಭಾಗವತಾಖ್ಯ ಪೌರಾಣದೊಳಗೇ
ಪದುಮಲೋಚನನು ಭಾಣನ ಕರವ ಧರೆಗೇ ॥ ೬ ॥
ಯಿಳುಹಿದಾ ಕಥನವನು ಯಕ್ಷಗಾನದಲಿ

ಅಂತ್ಯ : ಭೂಮಿಯಮರರ ಕುಲದಿ ಜನಿಸಿದ
ರಾಮಪುತ್ರನು ವಿಷ್ಣುಯೆಂಬವ
ಶ್ರೀಮಹಾಲಿಂಗನ ಪದದ್ವಯ ತಾಮರಸದಾ ॥ ೨ ॥

x x x x

ರಮಣಿಗೆ ಹರಿಣಾಕ್ಷಿಯರೆಲ್ಲರು
ಕುಂದಣದಾರತಿಯಾ ಬೆಳಗೀರೆ ಶೋಭಾನೆ ॥ ೮೫ ॥
ಅಂತೂ ಬಾಣಾಸುರನ ಕಾಳಗ ಸಂಪೂರ್ಣ ಮಂಗಳ ಮಹಾಶ್ರೀ

ವಿಷಯ : ಶ್ರೀಕೃಷ್ಣನು ಬಾಣಾಸುರನೊಡನೆ ಯುದ್ಧಮಾಡಿದ ಕಥೆ.

ವಿಶೇಷ : ಹುಳು ತಿಂದಿದೆ. ಶಿಥಿಲ ಪ್ರತಿ. ೧–೪ ಪತ್ರಗಳಲ್ಲಿ ಬರವಣಿಗೆಯಿಲ್ಲ.

1053

ಕೆ. ಎ. ೨೮೯/೪	**ಬಾಣಾಸುರನ ಪೂಜೆ**	ಸಾಂಗತ್ಯ
೧೨.೬" × ೭.೯"	ಕನಕದಾಸ	ಸು. ೧೫೫೦
೩೦–೩೬ ಪತ್ರ	೨೨ ಪಂಕ್ತಿ	೧೮ ಅಕ್ಷರ

ಆದಿ : ಹೊಂದಾವರೆಗೊಳಾ ಹೊತರೆದ್ದು ತುಲಸಿಯಾ
ನಂದನ ನಾಟ್ಯ ನರ್ತನದೀ
ಸಂದರುಶದಲೊಪ್ಪುವ ಸ್ವಾಮಿಯ ತುರ್ತು
ಮುಂದಣ ಪ್ರತಿ ಪೇಳು ಮುದದೀ ॥ ೧ ॥
ಲೀಲೆಗಾತಿಯರ ಮುಸಕದಲ್ಲಿ ಮೆರವ ಪೂ
ಮಾಲೆ ಮದ್ವಲ್ಲಭೆ ಕೇಳೂ
ಬಾಲೆಯ ಕೈಲಾಗಿಲಿ ಬಾಣ ಮಜ್ಜನ
ಶಾಲೆಯ ಸಾದ್ವನತ್ರಿಯ ॥ ೨ ॥

ಅಂತ್ಯ : ಭೂಪ ನಂನಭಿಮತವಹುದು ಬಿಡಾರಕೆ
ಪೋಪೆವ ನಾವು ಪೆಳ್ಯನಲೂ
ಚಾಪಲತ್ವದಲುಪಚರಿಸಿ ಪಾರ್ವತಿಯ ಪ್ರಾ
ಣೋಪನ ಬೀಳ್ಕೊಟ ಮುದದೀ ॥ ೭೦ ॥
ವರಮೋಹನತರಂಗಿಣಿಯೆಂಬ ಕಾವ್ಯವ
ಬರದೋದಿ ಕೇಳಿದ ಜನರಾ
ತರಣಿಚಂದ್ರಮರಾಳನ ಸತ್ತುವೆಯಿತ್ತು
ಹೊಗಪ ಲಕ್ಷ್ಮಿಯಕಾಂತ ಬಿಡದೆ ॥ ೭೩ ॥

ವಿಷಯ : ಬಾಣಾಸುರನ ಕಥೆ.

ವಿಶೇಷ : ಇದು ಕನಕದಾಸರ ಮೋಹನ ತರಂಗಿಣಿಯ ಒಂದು ಭಾಗ. ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ. ಇದರೊಂದಿಗೆ ಸಂಕ್ಷೇಪ ರಾಮಾಯಣ, ಸಂಕ್ಷೇಪ ಭಾರತ, ಅಂಗದ ಸಂಧಾನ, ವಿಭೀಷಣ ಶರಣಾಗತಿ ಎಂಬ ಗ್ರಂಥಗಳೂ ಇವೆ.

1054

ಕೆ.ಬಿ. ೪೮೦ **ಬಾಲಕೃಷ್ಣ ಚರಿತಂ** ನಾಟಕ

೮.೫" × ೬.೬" ವೇಂಕಟಾರ್ಯ ಅಧುನಿಕ

೧–೩೩ ಪತ್ರ ೧೯ ಪಂಕ್ತಿ ೨೦ ಅಕ್ಷರ

ಆದಿ : ಶ್ರೀ ಹನುಮದ್ವೇಕಂಟಾಖ್ಯ ಕವಿಕೃತಂ ಬಾಲಕೃಷ್ಣ ಚರಿತಂ (ನಾಟಕಂ)
ಪ್ರಥಮಾಂಕಂ
(ನಾಂದ್ಯಂತದೊಳ್ ಸೂತ್ರಧಾರಂ ಪ್ರವೇಶಿಪಂ)
ಸೂತ್ರಧಾರಂ–ಶಂಖಕ್ಷೀರನಿಭಂ ಮೊದಲ್ ಕೃತದೊಳಾ ದೈತ್ಯಾರಿ ನಾರಾಯಣಂ
ಲಕ್ಷ್ಮೀಶಂ ತ್ರಿಪದಾರ್ಪಿತ ತ್ರಿಭುವನಂ ಸ್ವರ್ಣಪ್ರಭಂ ತ್ರೇತೆಯೊಳ್
ರಾಮಂ ದ್ವಾಪರದೊಳ್ ದಶಾಸ್ಯಶಮನಂ ದೂರ್ವಾಂಕುರ ಶ್ಯಾಮಲಂ
ಪಾಲಿಕ್ಕಂ ಜನಸನ್ನಿಭಂ ಕಲಿಯೊಳೆಮ್ಮಂ ನಾಡೆ ದಾಮೋದರಂ ॥ ೧ ॥

ಅಂತ್ಯ : ನಾರದಂ—ಭಗವನ್ನಾರಾಯಣನಾಣತಿಯಂತೆ,ಭರತವಾಕ್ಯಮಿದಕ್ಕೆ
ಕಂ ॥ ಜಲನಿಧಿವರೆಗಂ ಪರ್ಬಿದ
ಹಿಮಗಿರಿಯಿಂ ರಾಮಸೇತುವರೆಗಂ ನೆಗಳ್ದಾ
ಧರಣಿಯನೇಕಚ್ಛತ್ರ
ಪ್ರಲಸಿತಮಂ ರಾಜಸಿಂಹನಾಳ್ಗೆಮ ಸತತಂ ॥ ೨೦ ॥

(ಎಂದೆಲ್ಲರುಂ ಪೋಪರ್)
(ಪಂಚಮಾಂಕಮಿದು) (ಯವನಿಕಾಪತನಂ)
(ಕವಿವಾಕ್ಯಂ)—ಕಂ ॥ ಭಾಸನ ಕವಿರಾಜಮನೋ
ಲ್ಲಾಸನ ವರಬಾಲಕೃಷ್ಣಚರಿತಮನೊಲವಿಂ
ಲೇಸೆನೆ ವಿಬುಧರ್ಕಳ್ ಕರ
ಮೋಸರಿಸದೆ ಮೂಲಕೃತಿಗೆ ಪಳಗನ್ನಡದೊಳ್ ॥ ೨೧ ॥
ನೆಗಳ್ದಂ ಭಾರದ್ವಾಜ
ಪ್ರಬುದ್ಧ ಗೋತ್ರಂ ಹನೂಮದಾತ್ಮಜನೊವಜಂ
ವರಶಾತ್ತಾದ ಶ್ರೀವೈ
ಷ್ಣವ ಕುಲಜಂ ವೇಂಕಟಾರ್ಯನಭಿನವಭಾಸಂ ॥ ೨೨ ॥
(ಬಾಲಕೃಷ್ಣ ಚರಿತಂ ಸಂಪೂರ್ಣಂ)
ಶ್ರೀ ಕೃಷ್ಣಾರ್ಪಣಮಸ್ತು.

ವಿಷಯ : ಶ್ರೀ ಕೃಷ್ಣನು ಕಂಸನನ್ನು ಕೊಂದ ಕಥೆ.

ವಿಶೇಷ : ಈ ಪುಸ್ತಕದಲ್ಲಿ ಸಂತಾಪಶತಕಂ ಎಂಬ ಕೆ. ಬಿ. ೪೮೧ ನೇ ನಂಬರಿನ

ಗ್ರಂಥವಿದೆ. ಆದಿಯಲ್ಲಿ ಮುನ್ನುಡಿ ಮತ್ತು ಪಾತ್ರದ ವಿವರಗಳಿವೆ. ಮಧ್ಯದಲ್ಲಿ ಕೆಲವು ಕಡೆಗಳಲ್ಲಿ ತಪ್ಪುಗಳನ್ನು ತಿದ್ದಿರುವುದಲ್ಲದೆ ಬೇರೆ ಕಾಗದದ ಮೇಲೆ ಸರಿಯಾದ ಪಾಠವನ್ನು ಬರೆದು ಅದನ್ನು ಅಲ್ಲಲ್ಲಿ ಅಂಟಿಸಿರುತ್ತಾರೆ.

1055

ಕೆ.ಬಿ. ೪೫೧ **ಬಾಲಕ್ರೀಡಾ ಕಥೆ** ಸಾಂಗತ್ಯ

೮.೩" × ೬.೪" ಖ್ಯೆಲಪ್ಪ ?

೧–೩೪೮ ಪುಟ ೧೬ ಪಂಕ್ತಿ ೧೨ ಅಕ್ಷರ

ಆದಿ : ಬಾಲಕ್ರೀಡಾ ಕಥೆ

ಸಾರಂಗಧರ ದನುಜಾರಿ ದೈತ್ಯರ ಶಿರ
ಹಾರವಳಿಯಧರ ಗರುಡಾ
ಯೇರಿದ ಕಮಲನಾಭನ ವಿಷ್ಣು ಕರುಣಿಸು ಕು
ವರನ ಮತಿಗೆ ಮಂಗಳವಾ ॥೧॥

x x x x

ನಿರಮಿಸುವೆನು ಬಾಲಕ್ರೀಡಾ ದಸ್ಮಸ್ಕಂದ
ಅರಸಿನ ಪ್ರಭೆಯ ಬಿದ್ದಂತೆ
ಹಿರಿಯರು ಶಾಸ್ತ್ರ ಬಲ್ಲ ಪುಂಡ ಬಿರಿದಿನ
ಪರಮಜ್ಞಾನಿಗಳು ಲಾಲಿಪುದೂ ॥೯॥

ಯತಿ ಪ್ರಾಸ ಗಣನೇಮದೊಳು ಬೀಳಬಿದ್ದರೆ
ಮತಿವಂತರೋದಿ ತಿದ್ದುವುದೂ
ಸ್ತುತಿ ನಿಂದ್ಯ ಬೇಡಿ ಸರ್ವರಿಗೆ ವಂದನೆಮಾಡಿ
ಕಥೆಯ ನಿರ್ಮಿಸಿದ ಖ್ಯೆಲಪ್ಪಾ ॥೧೦॥

ಅಂತ್ಯ : ಪರಿಪೂರ್ಣವಾಯಿತು ವರಸಂವತ್ಸರವು ಯೀ
ಶ್ವರನಾಮ ಆಶ್ವಯುಜ ಮಾಸಾ
ಗುರುಹೋರ್ಯದಲಿ ಬ್ರಹಸ್ತವಾರ ತಿಥಿ ಅಷ್ಟಮಿ
ಮೆರೆವತಿ ಶುಕ್ಲಪಕ್ಷದಲಿ ॥
ನಿತ್ಯನಕ್ಷತ್ರವುತ್ತರಾಷಾಢ ದಿವಸಂ
ಬತ್ತಾಸವ್ಯಾಳದಲಿ
ವುತ್ತುಮಲಗ್ನ ಮೂರ್ಥದಲಿ ದಸ್ಮಸ್ಕಂದ
ಶಾಸ್ತ್ರವಾಯಿತು ಸಂಪೂರ್ಣ ॥

x x x x

ವ್ಯಾಳಶಯನ ಘನನೀಳರಾಘವ ಜಯ

ಖೂಳ ದಾನವರ ಥಾರಾರಾ
ಬಾಳಸಂತರ ಕಂಠಮಾಳಾ ದೈತ್ಯರ ಶಿರ
ಖೇಳ ನಾಟಕ ಜಯ ಜಯತೂ
ಅಂತು ಸಂಧಿ ೧೬ಕ್ಕಂ ಪದನು ೧೩೦೮ಕ್ಕಂ ಮಂಗಳಮಹಾ

ವಿಷಯ : ಶ್ರೀಕೃಷ್ಣಾವತಾರದ ಕಥೆ.

ವಿಶೇಷ : "ಯಿೂ ಪುಸ್ತಕ ಆರದು ಯೆಂದರೆ ಬಸವಣ್ಣಗುಡಿ ಮಠದ ಚನ್ನಬಸಪ್ಪನವರ ಪುತ್ರನಾದ ಗುರುಶಿದ್ದಪ್ಪ ಪಟ್ಟದೇವರ ಅನುಜ ಶಿಷ್ಯನಾದ ವಿರೂಪಾಕ್ಷೈಯ್ಯನು ಬರದಿದ್ದನು. ತಪ್ಪುತಡಿಯಿದ್ದರೆ ಬಲ್ಲವರು ತಿದ್ದುವದು. ಶಾಲಿವಾಹನ ಸಕ್ಕು ೧೭೭೪ ಪರಿಧಾವಿನಾಮು ಸಂವತ್ಸರ ಅಧಿಕಭಾದ್ರ ಶುಧ್ಧ ೯ ಸೋಮವಾರ ಚಂದ್ರಹೋರೆಯಲ್ಲಿ ಮುಗಿಯಿತು. 13-12-38" ಎಂದು ಅಂತ್ಯದಲ್ಲಿದೆ.

1056

ಕೆ.೩೮೨/೩	**ಬಾಲಗ್ರಹ ಚಿಕಿತ್ಸೆ**	ಗದ್ಯ
೯.೩" × ೧.೩"	?	?
೩೬-೪೭ ಪತ್ರ	೫ ಪಂಕ್ತಿ	೩೬ ಅಕ್ಷರ

ಆದಿ : ಬಾಲಗ್ರಹ ಶಿಕಿಚ್ಚೆ
೧ ದಿನ ೧ ತಿಂಗಳು ೧ ವರ್ಷಕ್ಕೆ ಹಿಡಿವ ಗ್ರಹದ ಹೆಸರು। ಸುಮರತಿಯೆಂಬದೆ ....ಜ್ವರ ಬರುವುದು। ಕಾಕಜ್ವರ। ಅಳುವದು। ಮೇಲೆ ನೋಟ। ತುಟಿ ವಣಗುವದು। ವ್ಯೆ ತಂಣ್ಣಗೆಯಿ........ಲೆಯ........ಣದು ॥ ಯಿದಕ್ಕೆ ಶಿಕಿಚ್ಚೆ ॥ ಬಲಿ । ಹಳ್ಳದೊಳಗೆ ಯರಡುದಡದ ಮಂಣಂ ತಂದ್ದು ಸ್ತ್ರೀ ಪ್ರತುಮೆಯಂ ಮಾ....ಬೆಳಿ ವಸ್ತ್ರಮಂ ಅರ್ಪ್ಪಿಸಿ ಗಂಧಾಕ್ಷತೆಯಂ ಪುಷ್ಪ ಧೂಪ ದೀಪ ತಾಂಬೂಲ ನೆನಗಡಲೆ ಬೇಳೆ ಅಂನ್ನ ಮೊಸ....ತುಪ್ಪ । ಬೆಲ್ಲ ಪಟ ೨ ಯರಡು ಸೆರೆ ನೀರು ಪಂಚ್ಚಬಿಲ್ವದ ನೀರು ಪ್ರೋಕ್ಷಣೆಯಂ ಮಾಡಿ ಪೂಜೆಯಂ ಸಮರ್ಪಿಸಿ........ಮುಖದಿಂದ ಮೂರುವೇಳೆಯಿಳಿಯಿಶಿ ಅದಕ್ಕೆ ಮಂತ್ರಾ ॥

ಅಂತ್ಯ : ಓಂ ನಮೋ ಖಗರಾವಣಾಯ ಸುಂದರಿ ಯೇಹಿಯೇಹಿ ಬಲಿಗ್ರಹಣ ಬಾಲಕ ಮುಂಚ್ಚ ಮುಂಚ್ಚಯಿ ಸ್ವಾಹಾ ಯಂದು ಚೀಟನು ಬರದು ಆ ಪುತ್ತಳಿಯ ಮೇಲೆ ಪ್ರೋಕ್ಷಶಿ ಯಿಳಿಯಂ ತೆಗೆಯುವುದು. ಬಾಲಗ್ರಹವುಚ್ಚಾಟಣವಹುದೂ। ಬ್ರಾಹ್ಮಣರಿಗೆ ಸ್ವರ್ನ್ನದಾನವಂ ಮಾಡಿ ಹಂನ್ನೆರಡುವರುಷದ ಯಂತ್ರ ಸ್ಥಾಪ್ಯವಂ ಮಾಡಲು ಸರ್ವಗ್ರಹವು ಬಿಟ್ಟು ಸುಖಿಯಹದೂ ॥ ಯಂತ್ರಾ ॥

ವಿಷಯ : ಯಂತ್ರಮಂತ್ರಗಳಿಂದ ಬಾಲಗ್ರಹವನ್ನು ಉಚ್ಚಾಟನೆಮಾಡುವ ಕ್ರಮ.

ವಿಶೇಷ : ಓಲೆಗಳು ಮುರಿದಿವೆ. ಅಸಮಗ್ರಪ್ರತಿ. ಪ್ರತಿಪತ್ರದಲ್ಲೂ ಒಂದೊಂದು

ಯಂತ್ರವಿದೆ. ಇದೇ ಕಟ್ಟಿನಲ್ಲಿ ಸ್ವರಚಿಂತಾಮಣಿ, ನರಪಿಂಗಲಿ, ಸಾಮುದ್ರಿಕ ಲಕ್ಷಣ, ಜ್ಯೋತಿಷ ಸಂಗ್ರಹ ಎಂಬ ಕೃತಿಗಳಿವೆ.

1057

ಕೆ. ೨೮೪/೧	**ಬಾಲಚಿಕಿತ್ಸೆ**	ಗದ್ಯ
೧೦.೯" × ೧.೯"	?	?
೧೨೪–೧೩೬ ಪತ್ರ	೧೧ ಪಂಕ್ತಿ	೪೫ ಅಕ್ಷರ

ಆದಿ : ಬಾಲ ಚಿಕಿತ್ಸೆ। ಶ್ರೀಮಜ್ಜಿನೇಂದ್ರ ಪದಕಮಲ
ಕಾ ಮಾನಿತದೇ........ರಣಾ
ಪ್ರೇಮತಿನೆಱಗಿ ಜಗಜ್ಜನ
ಕಾಮಿತಮಂ ಬಾಲವೈದ್ಯಮಂ ವಿರಚಿಸಿದಂ ॥೧॥

ಹುಟ್ಟಿದದಿನಂ ಮೊದಲಾಗಿ ಹತ್ತುದಿನಂ ಹನ್ನೆರಡು ತಿಂಗಳು ಹದಿನಾಱು ವರ್ಷದ ರಿಯಂತರ ಪಿರಿದ ದೇವತೆಯರ ಹೆಸರುಮಂ ರೂಪಿನ ಕ್ರಮುಮಂ ವಿಕಾರಮಂ ಅದಕ್ಕೆ ಮಂತ್ರಮಯಂತ್ರ ಓಷದಿಯಂ ಬಲಿಯಂ ದೂಪಮಂ ಲೇಪಮಂ ಯಿರುಸುವ ರಿಕ್ಷಮಂ ದಿಕ್ಕುಮಂ

ಅಂತ್ಯ : ಓಂ ನಮೋ ಭಗವತೆ ದೂದವಿ ಎಹಿ ಬಲಿಗ್ರಂಹ=
ಬಾಲಕಂ ಮುಂಚ=ಸ್ವಾಹಾ।...............
ಶ್ರೀನೇಮಿಚಂದ್ರಾಯ ನಮಃ।

ವಿಷಯ : ಬಾಲಗ್ರಹಚಿಕಿತ್ಸೆಯ ವಿಧಾನ.

ವಿಶೇಷ : ಇದರೊಂದಿಗೆ ಚತುರಾಸ್ಯನಿಘಂಟು ಮತ್ತು ಬಾಹಟೋಕ್ತಗಣಪಾಠ ಎಂಬ ಎರಡು ಗ್ರಂಥಗಳಿವೆ. ಶಕಟರೇಫವ ಬಳಕೆ ಇದೆ.

1058

ಕೆ.ಬಿ. ೩೬೬	**ಬಾಲಭಾರತಂ**	ವಿವಿಧಷಟ್ಪದಿ
೮" × ೬.೬"	ಕೆ. ರಾಮಸ್ವಾಮಯ್ಯಂಗಾರ್	೧೯೦೩
೧–೨೪೬ ಪತ್ರ	೨೪ ಪಂಕ್ತಿ	೧೫ ಅಕ್ಷರ

ಆದಿ : ಬಾಲಭಾರತ
ಪ್ರಥಮ ಸಂಧಿ (ಭಾಮಿನಿ ಷಟ್ಪದಿ)

ಅತ್ರಿಯೆನೆ ಪೆಸರಾಂತ ಮುನಿಪನ
ನೇತ್ರದಿಂದುದುಭವಿಸಿ ವರನ
ಕ್ಷತ್ರನಾಥನೆನುತ್ತಮಾ ಕೆಳೆಗೆಱೆಯನೆಂದೆನುತಂ
ಧಾತ್ರಿಯಲಿ ಮೆರೆಯುತ್ತೆ ಕೈರವ
ಮಿತ್ರನೆನಿಸಿದನವನೆ ದಾನವ
ಶತ್ರುವಿನ ವಾಮಾಕ್ಷಿಯೆಂಬರು ಚಂದ್ರಮನನೊಲಿದು ॥ ೧ ॥

ಅಂತ್ಯ : ಜನಪತಿ ಮತ್ಸ್ಯ ವರ ಗೋ
ಧನಮಂ ಕೈಕೊಣ್ಡು ಮಿಕ್ಕ ಬಲದೊಡನಿರುಳಂ
ಮನದೊಲವಿಂ ನೂಂಕಿದನಾ
ಜನಪದಮಾರ್ಗದೊಳೆ ಕೌಮುದಿ ನಿರೀಕ್ಷಿಸುತಂ ॥ ೯೮ ॥

ಮಂಗಳಮದು ಲೋಕಕೆ
ರಂಗೇಶನ ಕರುಣದಿಂದೆ ಕೌಂತೇಯರ್ತಾಂ
ಪೊಂಗುವ ಹರ್ಷದೊಳಾಳ್ದರ್
ಕೆಂಗುಡಿಯಿಂ ಮಿಳಿರ್ವ ಬೆಳ್ಳಿಯಂತೆವೊಲಾಗಳ್ ॥ ೯೯ ॥

ಇದು ಪತ್ತನೆಯ ಸಂಧಿ.

x x x x

ವಿರುತ ನೇತ್ರ ವಸು ಹಿಮಾಂಶುಗ
ಳತಿಶಯದಿಂ ನೆಗಳ್ದ ಶಾಲಿವಾಹನ ಶೋಭ
ಕೃತುವತ್ಸರದ ಯುಗಾದಿ
ತಿಥಿಯೊಳ್ಬರೆದತ್ತು ಬಾಲಭಾರತಮೆನ್ನಿಂ ॥ ೧೪ ॥

ನರಪತಿ ದಯೆಯಿಂ ಸುಜನರ
ಪೊರೆಯುತೆ ದುರ್ಜನರ ಶಿಕ್ಷಿಸುತ್ತಿರ್ಪೇಂದುಂ
ಪರಿಪೂರ್ಣಸುಖದಿನೊಪ್ಪುಗೆ
ಧರೆಯ ಜನಂ ಬಳೆಗೆ ವಿದ್ಯೆಯೆಲ್ಲರೊಳನಿಶಂ ॥ ಶ್ರೀ

ವಿಷಯ : ಮಹಾಭಾರತದ ಕಥೆ.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರೆದಿದೆ. ‘ ಮಾಗಡಿ A.V. ಸ್ಕೂಲ್ ಹೆಡ್ ಮಾಸ್ಟರ್ ಕೆ. ರಾಮಸ್ವಾಮಯ್ಯಂಗಾರ್ಯರಿಂದ ಕನ್ನಡಿಸಲ್ಪಟ್ಟದ್ದು –1903 ಮೈಸೂರು ಶ್ರೀಮನ್ಮಹಾರಾಜಾ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಆಳುವ ಮಹಾಸ್ವಾಮಿಗಳವರ ದಿವಾನ್‌ಸಾಹೇಬರು ಸರ್ ಪಿ. ಎನ್.

ಕೃಷ್ಣಮೂರ್ತಿ C.I.E. ಯವರ ಮಹಾ ಸನ್ನಿಧಿಯ ಪೋಷ್ಯ ವರ್ಗಕ್ಕೆ ಸೇರಿದ ಸೇವಕನಿಂದ ಅತ್ಯಂತ ವಿನಯಪೂರ್ವಕವಾಗಿ ಅರ್ಪಿಸಲ್ಪಟ್ಟಿದೆ ಎಂದು ಪುಸ್ತಕದ ಆದಿಯಲ್ಲಿದೆ. ಪತ್ರ ೨೩೨–೨೪೧ರ ವರೆಗೆ ಕಲ್ಲಚ್ಚಿನಲ್ಲಿದೆ.

1059

ಕೆ.ಬಿ. ೧೨೧ **ಬಾಲಲೀಲೆ** ಯಕ್ಷಗಾನ

೭.೭″ × ೬″ ಲಿಂಗರಾಜ ೧೮೫೦

೧–೫೬ ಪತ್ರ ೧೪ ಪಂಕ್ತಿ ೧೮ ಅಕ್ಷರ

ಆದಿ : ಬಾಲಲೀಲಾ ಕಂಸವಧಾ–ನಾಂದಿ

ಕಂದ || ದಕ್ಷಾಧ್ವರ ವಿಧ್ವಂಸನ
ಸಾಕ್ಷಾತ್ಕೃತಧೂಳಿ ಕೇಳಿಕೃತ್ಯಂ ನಿತ್ಯಂ
ತ್ರ್ಯಕ್ಷಾತಪರ್ದ ಪ್ರಭವಂ
ರಕ್ಷಿಸಲೆಮ್ಮನು ವೀರಭದ್ರಂ ಭದ್ರಂ || ೧ ||

x x x x

ಕಂದ || ಕಲಿಕಲ್ಮಷ ಕಾಂತಾರ
ಪ್ರಳಯ ಪ್ರದಮಲ್ತೆ ಕೃಷ್ಣವರ್ತ್ಮಯದರಿಂ
ಸಲೆ ಭಾಗವತದಿ ಮೆರೆಯುವ
ಜಲಜಾಕ್ಷಂಗೈದ ಕಂಸವಧೆಯಂ ಪೇಳ್ವೆಂ || ೧೨ ||

ಅಂತ್ಯ : ವಾರ್ಧಕ ||

ಪರಮ ಸಂಭ್ರಮದಿಂದ ಸೆರೆಬಿಡಿಸಿ ಜನನಿಜನ
ಕರ ನಮಿಸುತವರಾಜ್ಞೆಯಿಂದುಗ್ರ ಸೇನಂಗೆ
ವಿರಚಿಸುತ ಮಧುರಾಧಿಪತ್ಯ ಪಟ್ಟಾಭಿಷೇಕಕವ ಜಯ ಜಯಧ್ವನಿಯೊಳು
ಸುರರರಳ ಸರಿಯ ಸುರಿಯಲ್ಬೆರಸುತಗ್ರಜನ
ಧರಣಿಯಂ ಪಾಲಿಸುತಿರ್ದನಾ ಮುರವೈರಿ
ಶರಣಸಂಸಾರಿ ಕಂಸಾರಿಯೆನುತಾ ಪರೀಕ್ಷಿತಗೆ ಶುಕಯೋಗಿ ಪೇಳ್ದಂ || ೪೬೦ ||

x x x x

ಕಂದ || ಕರರಸರಂಧ್ರಾಂಭೋನಿಧಿ
ಪರಿಮಿತ ಕಲ್ಯಬ್ದಮವನಿಯೊಳ್ಕಳಿಯಲ್ ಶ್ರೀ
ವರನೆಸೆಗಿದ ಕಂಸವಧಾ
ಚರಿತಮ ಭಾಪೆನಲು ಲಿಂಗಭೂಪತಿ ಪೇಳ್ದಂ || ೪೬೪ ||

ಶ್ರೀ ಕೃಷ್ಣಬಾಲಲೀಲಾ ನಾಟಕ ಸಂಪೂರ್ಣಂ ||

ವಿಷಯು : ಶ್ರೀ ಕೃಷ್ಣನು ಕಂಸನನ್ನು ಕೊಂದ ಕಥೆ.

ವಿಶೇಷ : ಸುಂದರ ಬರಹ, ಪತ್ರಗಳ ಅಂಚಿನಲ್ಲಿ ಹುಳು ತಿಂದಿದೆ.

1060

ಕೆ. ೩೦೦/೧	**ಬಾಲಶಿಕ್ಷೆ**	ಗದ್ಯ
೧೨" × ೧.೩"	?	?
೧.೨೭ ಪತ್ರ	೩ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ ರಮಾ ಶ್ರೀ ಒನಾಮಾ ಸಿವಾಯ ಸಿಧಂ ನಾಮು ಅ ಆ ಇ ಈ ಉ ಊ ರು ಝು ಎ ಎ ಏ ಐ ಓ ಔ ಅಂ ಅಃ ಕ ಖ ಗ ಘ ಜ ಚ ಛಾ ಜ ಝು ಞ ಟ ಠ ಡ ಢ ಣ, ತ ಥ ದ ಧ ನ, ಪ ಫ ಬ ಭ ಮ—

ಅಂತ್ಯ : ಪಾಡ್ಯಾ ಯುಗಧಿ ಪಾಡ್ಯಾ | ೧. ಬಿಧಿಗೆ ಭಾನ ಬಿಧಿಗೆ | ೨. x x x x x x | ಶೆಕ್ರತಿ | ಮಾಕರ ಶೆಂಕ್ರತಿ || ರಾತ್ರಿ ಶಿವರಾತ್ರಿ || ಯಿವು ೧೮ ವರುಷವರಷಕೆ | ಬರುವಂತ್ತಾ ಪರು ಪಾಡ್ಯಾ ಪುಣ್ಯತಿಥಿಗಳೂ | ಶ್ರೀ ಶ್ಯಾರಥಾ ಗುರುಭ್ಯೋನಮಃ ||

ವಿಷಯು : ಮಗ್ಗಿ, ಕೋಷ್ಟಕ, ಸಂವತ್ಸರ ಇತ್ಯಾದಿಗಳ ವಿವರಣೆ.

ವಿಶೇಷ : ೨೩ನೆಯ ಪತ್ರದಲ್ಲಿ ಒಂದೇ ಕಡೆ ಬರೆದಿದೆ. ೨೮ನೆಯ ಪತ್ರದಲ್ಲಿ ಲೋಹ ಗಳನ್ನು ಶುದ್ಧಿಮಾಡುವ ಕ್ರಮವನ್ನು ತಿಳಿಸಿದೆ. ಇದೇ ಕಟ್ಟಿನಲ್ಲಿ ಮಾನಾಮಿಯ ಪದಗಳಿವೆ.

1061

ಕೆ. ಬಿ. ೨೦೧	**ಬಾಹಟ ಟೀಕೆ**	ಶ್ಲೋಕ. ಟೀಕು
೭.೫" × ೬.೧"	ಕೃಷ್ಣರಾಜ	೧೭೫೦
೧–೧೬೦ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಕಂದಪದ್ಯ—

ಧರಿಸಿದ ಪೆರೆನೊಸಲಿನ ಪೊಸ
ದೆರೆಯಿಂ ಕರೆಯಂಟದಂತೆ ಶಿರದೊಳ್ಮೆರೆದುಂ
ಸುರರಟ್ಟುಳಿಗಾ ಗರಳದ
ಕರೆಯಂ ಕೊರಳಲ್ಲಿ ತಾಳ್ದನೆಮ್ಮಂ ಪೊರೆಗುಂ ||
ಇಂತೆಂದಿಷ್ಟದೇವತಾ ಪ್ರಾರ್ಥನೆಯಂ ಮಾಡಿ

ಶ್ಲೋ ||ರಾಗಾದಿ ರೋಗಾಂ ಸತತಾನುಷಕ್ತಾ
ನಶೇಷಕಾಯ ಪ್ರಸೃತಾನಶೇಷಾನ್
ಚಿತ್ಸೌಖ್ಯ ಮೋಹಾ ರತಿದರ್ಾ
ಜಘಾನ ಯೋ ಪೂರ್ವ ವೈದ್ಯಾಯ ನಮೋಸ್ತು ತಸ್ಮೈ ||
ಆಚಾರ್ಯಾನುಗ್ರಹ.......ದಾದಿಯಲಿ ಶಿಷ್ಟಾಚಾರ ಪರಿಪಾಲನಾರ್ಥವಾಗಿ ನಮುಸ್ಕಾರರೂಪ ಮಂಗಳಮಂ ಪೇಳಿದನದೆಂತೆನೆ—ಸತತಾನುಷಕ್ತಾ |ಸ್ಥೂಲ ಶರೀರಸಂಭವಂಗಳಾದ ರೋಗಂಗಳಾದರೆ ಒಂದು ವೇಳೆಯಲ್ಲಿದ್ದು ಮತ್ತೊಂದು ವೇಳೆಯಲ್ಲಿರದಂಥವು |

ಅಂತ್ಯ : || ಕಂದ || ರಂಗಯ್ಯನೆಂಬ ಪಂಡಿತ
ಪುಂಗವನೀ ಸರ್ಪ ವೈದ್ಯಜನ ವಿಜ್ಞಾನ
ಕ್ಕಂಗವೆನೆ ಕೂಡಿಸಿದನುರೆ
ಸಂಗತಿಯಂ ಪೇಳಿ ಬಾಹಟಕ್ಕೀ ಟೀಕಂ||

ವೃ || ಪದವಾಕ್ಯಪ್ರಮಿತಿಪ್ರಸಿದ್ಧಗುಣವೇಲಾಬದ್ಧಹೃದ್ವಾರ್ಥಿಯಾ
ದದುರುಹಾಪ್ರಚುರ ಪ್ರಬಂಧವನ ಸಂದೋಹಕ್ಕೆ ದಾವಾಗ್ನಿಯಾ
ದ ದಲತ್ಪಂಕಜಗಂಧ ಬಂಧುರವಚಂ ಕೃಷ್ಣಕ್ಷಿತೀಶಂ ಜಗ
ದ್ವಿದಿತಂ ಬಾಗಿರೆ ಬಾಹಟಕ್ಕೆಸಗಿದಂ ಕರ್ಣಾಟವಾಕ್ಟೀಕೆಯಂ ||

ಶ್ಲೋ ||ಕಲಾವಬ್ದೇ ಗತೇ ರಾಜ ಜವೆ ಪ್ಲವ ಶರನ್ಮುಖೆ |
ಬಾಹಟಸ್ಯ ಕೃತಾ ಟೀಕಾ ಕೃಷ್ಣೇಶೇನ ಕ . . ಭಾಷಯ ||
ಇದು ಸದಾಶಿವ ಪದಾರವಿಂದ ಮಿಲಿಂದಾಯಮಾನ ಮಾನಸನಾದ ಕೃಷ್ಣ ನರೇಂದ್ರನಿಂ ವಿರಚಿತಪ್ಪ ಬಾಹಟದಲ್ಲಿ ದ್ವಿತೀಯ ಸ್ಥಾನದಾರನೆಯಧ್ಯಾಯದ ಟೀಕೆಯು ಸಮಾಪ್ತಂ ಸರ್ವಂ ಸಂಪೂರ್ಣಂ ಮಂಗಳಮಹಾಶ್ರೀ.

ವಿಷಯ : ವೈದ್ಯ ಗ್ರಂಥ.

ವಿಶೇಷ : ಇದು ಬಾಹಟನ ಗ್ರಂಥಕ್ಕೆ ಕನ್ನಡದ ಟೀಕು.

1062

ಕೆ. ೨೭೪/೩ **ಬಾಹಟೋಕ್ತ ಗಣಸಾರ** ಶ್ಲೋಕ, ಟೀಕು

೧೦.೯" × ೧.೯" ? ?

೧೦೧–೧೦೭ ಪತ್ರ ೧೨ ಪಂಕ್ತಿ ೬೦ ಅಕ್ಷರ

ಆದಿ : ಬಹಟೋಕ್ತ ಮದನಾದಿ ಗಣ
ಮಥನಮಧುಕಳಂಬ್ವಾ ನಿಂಬಬಿಂಬೀ ವಿಶಾಲಾ

ತ್ರಪುಸತುಟಜಮೂರ್ವಾ ದೇವದಾಳೀ ಕ್ರಿಮಿಘ್ನಂ
ವಿದುಲದಹನ ಚಿತ್ರಾಕೋಶವತ್ಯಾ ಕರಂಜಃ
........ವಚ್ಛೈಲಾ ಷರ್ಷಪಶ್ಚರ್ದನಾನಿ ||
ಟೀ || ಮದನಂ ಮಗ್ಗಾರೆ | ಮಧುಕ | ಯಷ್ಟಿಮಧುಕ
ಲಂಬ್ವಾ | ಕಹಿಸೋರೆ | ನಿಂಬ | ಬೇವು

ಅಂತ್ಯ : ತ್ರಯತ್ರಿ ಶಮಿತಿಸ್ಸಂಖ್ಯಾ ಗಣಾನಾಂ ನಾಮಸಂಜ್ಞಕಂ
ತದ್ಗಣಂ ಮೌಷಧಂ ಕುರ್ಯಾದ್ಗದಗಜ ಪಂಚಾನನಂ ||
ಬಾಹಟೋಕ್ತ ಗಣಪಾಠಂ ಸಂಪೂರ್ಣಂ ||

ವಿಷಯ : ವೈದ್ಯ ಶಾಸ್ತ್ರ (ಬಾಹಟನ ಗಣಪಾಠದ ಟೀಕು).

ವಿಶೇಷ : ಶಿಥಿಲ ಪ್ರತಿ. ಗ್ರಂಥ ಮುಗಿದ ಮೇಲೂ ಕೆಲವು ಚಿಕಿತ್ಸಾಕ್ರಮಗಳು ಬರೆಯಲ್ಪಟ್ಟಿವೆ. ಇದರೊಂದಿಗೆ ಬಾಲಚಿಕಿತ್ಸೆ, ಚತುರಾಸ್ಯ ನಿಘಂಟು ಎಂಬ ಗ್ರಂಥಗಳೂ ಇವೆ.

1063

ಕೆ.ಎ. ೧೨೫	**ಬಿಜ್ಜಳರಾಯ ಚರಿತ್ರೆ**	ಸಾಂಗತ್ಯ
೧೩.೧" × ೮.೧"	ಧರಣಿ ಪಂಡಿತ	ಸು ೧೬೫೦
೧–೩೦ ಪತ್ರ	೩೨ ಪಂಕ್ತಿ	೨೮ ಅಕ್ಷರ

ಆದಿ : ಬಿಜ್ಜಳರಾಯ ಚರಿತ್ರೆ—
ಸಾಂಗತ್ಯ || ಶ್ರೀ ಪುರದೀಶ ದಯಾಕೋಶ ಭವನಾಶ
ವಾಸುಗಿಪತಿ ನುತಚರಣಾ
ತ್ರಿಸಪ್ತ ಮುಕ್ತಿ ಅಧಿಪತಿ ಆದಿ ಜಿ
ನೇಶ ಸಲಹೋ ಭವ್ಯಜನರಾ || ೧ ||
ಜೈನ ಶಾಸನವಾರ್ಧಿ ವರ್ಧನ ಚಂದ್ರಮಾ
ಜೈನ ಶಿಂಶಾನ್ವಯ ತಿಲಕಾ
ಜೈನ ಮಾರ್ಗಾನಂದ ಪರನೆಂದೆನಿಸುವ
ಜೈನ ಬಿಜ್ಜಳ ಕಥ ಕೇಳಿ || ೨ ||

ಅಂತ್ಯ : ಯಿಂನು ಬಿಜ್ಜಾಳನ ಕಥೆಯೂ ವಿಜಯಂಮಿಯು
ತಂನ ತಾಲುಗೆ ಪೇಳ್ದನಾಗ
ಚಂನಾಗಿ ವಿಸ್ತಾರವಾಗಲೆಂದು ಧರಣೇಂದ್ರ
ನಂನಿಯಿಂ ಪೇಳ್ದನಾ ಕೃತಿಯಾ || ೧೪೮ ||

x x x x

ಕಂಡು ಪೇಳಿದುದೆಲ್ಲಿಯಂದು ಯಂನದಿರಿ
ಪುಂಡರೀಕಾಕ್ಷಿ ಪದ್ಮಾಂಬಿಕೆ
ಕಂಡು ಪೇಳಿದುದಲ್ಲಿ ಧರಣೇಂದ್ರಗೆ ಪೇಳಿದಯಲ್ಲಾದೆ
ಕೊಂಡಾಡಿ ಬಲ್ಲ ಕೋವಿದರೆಲ್ಲಾ || ೧೫೨ ||

ಅಂತು ಸಂಧಿ ೧೨ ಕಾಂ ಪದ ೧೩೭೧ ಕಾಂ ಮಂಗಳ ಮಹಾ

ವಿಷಯ : ಬಿಜ್ಜಳರಾಯನ ಕಥೆ.

ವಿಶೇಷ : ಮೋಡಿ ಅಕ್ಷರ.

1064

ಕೆ. ೪೨೩	**ಬಿಡಿ ಪದಗಳು**	ಹಾಡು
೧೦.೯" × ೧೩"	?	?
೧–೨೦೩ ಪತ್ರ	೫ ಪಂಕ್ತಿ	೪೦ ಅಕ್ಷರ

ಆದಿ : ಬಿಡಿ ಪದದ ಪುಸ್ತಕಕ್ಕೆ ಶುಭಮಸ್ತು ||
ಶ್ರೀ ಲಕ್ಷ್ಮೀರಮಣನ ದಿವ್ಯ ಪಾದಪದ್ಮವೇ ಗತಿ || ರಾಗ | ನಾಟಿ ||
ಗಜ ಮುಖನೆ ಗರ್ವ ಗಣನಾಥ ವಂದಿತ ಶರಣು
ತ್ರಿಜಗರೆಲ್ಲಾರ ಕೈಯ್ಯಾ ಪೂಜಿಪನೆ ಶರಣು
ಅಜಗಣಾ ಹರಿ ರುದ್ರ ಆದಿವಂದಿತ ಶರಣು
ಮಜಗ ಭಾಪುರೆಯನಲು ಮತಿಗೆ ಮಂಗಳನೇ ಶರಣು || ೧ ||

ಅಂತ್ಯ : ದೇಸಿಗ ಪದರಜ ಧುಳಿಯ ಧರಿಸುತ್ತಾ
ಮೀಸಲ ಗ್ನಾನಗಂಗೆಯ ಕಲಕೀ ದಿ
ವ್ಯಾ ಸಿವರಾಮ ಗುರುಪಾದ ಯುಕ್ತಿಯೊ
ಳಾಸುರ ವನದೊಳಗಾಡುವ ಮದ ಸೊಕ್ಕಿದಾನೆ ಬಂತು || ೩ ||
ಶ್ರೀ.

ವಿಷಯ : ವಿವಿಧ ಹಾಡುಗಳು.

ವಿಶೇಷ : ಗರಿಗಳು ತ್ರುಟಿತವಾಗಿವೆ. ಹುಳುಗಳು ತಿಂದಿವೆ. ೨೯ ರಿಂದ ೪೯,೫೫,೮೨, ೯೦ ರಿಂದ ೯೩, ೯೭, ೯೮, ೧೦೩ ರಿಂದ ೧೨೩, ೧೨೬ ರಿಂದ ೧೩೩, ೧೬೬, ೧೭೨ ಈ ಕ್ರಮಾಂಕದ ಪತ್ರಗಳಿಲ್ಲ. ೬೪–೬೬ ನೆಯ ಪತ್ರಗಳು ಮುರಿದಿವೆ. ಸುಂದರ ಬರಹ.

1065

ಕೆ.ಎ. ೨೬೮	**ಬಿಳಿಗಿಲ ಅರಸರ ಚರಿತ್ರೆ**	ಚಂಪು
೧೨.೭" × ೮"	?	ಸು ೧೭೦೦
೧–೫೮ ಪುಟ	೨೪ ಪಂಕ್ತಿ	೨೨ ಅಕ್ಷರ

ಆದಿ : ಬಿಳಿಗಿಲ ಅರಸರ ಚರಿತ್ರೆ.

ಶ್ರೀ ಗಣಾಧಿಪತಯೇ ನಮಃ । ಬಿಳಿಗಿಲರಸಗಳ ವಂಶಾವಳಿ ಬರೆಯುವುದಕ್ಕೆ ಶುಭಮಸ್ತು ॥

ವಾರ್ಧಕ ಷಟ್ಪದಿ

ಐಸೂರ ಪಟ್ಟಣವನಾಳ್ವ ಭೂಪಾಲಕಂ....
........ವೈಯ್ಯೊಳಾ ಮದನ....ಭೋಗದೋಳ್ದೇವೇಂದ್ರಾ
ನೈಸಿರಿಯೊಳಂ ಕುಬೇರನ ಗೆಲ್ದು ಸತ್ಯಭಾಷಾ ಹರಿಶ್ಚಂದ್ರನೆನಿಸಿ
ಆ ಸಂಪದಂಗಳ ಜಯಿಸಿ ರಣವಿಜಯಕರ
ಭಾಸುರ ಗುಣಾಭರಣ ಭೂಷಿತಾಂಡಣ್ಣ ನೃಪ
ಲೇಸಾಗಿ ಧರೆಯ ಪಾಲಿಸುತಿರಲು ತತ್ಪುತ್ರ ಪಾರಿಪ್ಪಭೂಪನಾದಂ ॥ ೧ ॥

ಅಂತ್ಯ : ಪರವು ಬಲವಂತ ಧರಣೀ
ಶ್ವರಚೂಡಾರತ್ನ ಬಸವಭೂಪನ ಕೊರಳೋಳ್
ಮಿರುಗಲ್ ಮುಕ್ತಾಹಾರಂ
ಪರನೃಪರಿಂಗಾಯ್ತು ನಿತ್ಯ ಮುಕ್ತಾಹಾರಂ ॥ ೨೮ ॥

ವಿಷಯ : ಬಿಳಿಗಿಲ ಅರಸರ ವಿಚಾರ.

ವಿಶೇಷ : ಗ್ರಂಥವು ಅಸಮಗ್ರ, ಮಧ್ಯದಲ್ಲೂ ಗ್ರಂಥ ಪಾತವಿದೆ.

1066

ಕೆ.ಎ. ೧೨೭	**ಬುಕ್ಕರಾಯನ ಚರಿತ್ರೆ**	ಗದ್ಯ
೧೩" × ೮.೧"	?	೧೮೧೧
೧-೨೯ ಪತ್ರ	೩೩ ಪಂಕ್ತಿ	೩೮ ಅಕ್ಷರ

ಆದಿ : ಬುಕ್ಕರಾಯ ಚರಿತ್ರೆ—

ಪಂಪಾತೀರದಲ್ಲಿ ವಿದ್ಯಾನಗರವನ್ನು ಬುಕ್ಕರಾಯರವರು ಆಳುತ್ತಾಯಿರುವಾಗ್ಯೆ ಆತನ ಪ್ರದಾನಿಯಾದ ಚಿಕ್ಕಪ್ಪಪೊಡೆಯರು ಶಾಲಿವಾಹನ ಶಕ ೧೨೮೬ನೆಯ ಕ್ರೋಧಿ ಸಂವತ್ಸರದಲ್ಲಿ ಆ ವಿದ್ಯಾನಗರಕ್ಕೆ ತೆಂಕಲು ಪ್ರಾಂತ್ಯದಲ್ಲಿ ನಂದ್ಮೇಲತಾಲೋಕದೊಳಗೆ ದೇವರ ಗುಡ್ಡದ ಬಳಿಯಲ್ಲಿ ಕಂಬುಗಿರಿ ದೇವರ ಗುಡ್ಡದೊಳಗೆ ಹುಟ್ಟಿ ಬರುತ್ತಾಯಿದ್ದ ಪಾಂಡುನದಿಯನ್ನು ನೋಡಿ x x x x ನೀರು ತುಂಬಿ ಎರಡು ತೂಬುಗಳು ಹಿಡಿಯದೆ ಪೂರ್ಣವಾಗಿ ಹರಿಯುತ್ತಾಇತ್ತು.

ಅಂತ್ಯ : ವೈನೆರೆದ ಹುಡುಗಿಯರನ್ನ ಮದುವೆಮಾಡಿಕೊಳ್ಳರು ವಂಬತ್ತು ವರುಷದೊಳಗಾಗಿ ಹೆಂಣುಗಳು ಯಿದ್ದರ್‍ರೆ ಪ್ರಸ್ತಮಾಡಿಕೊಳ್ಳುವದೂ ಕಾಲಪ್ರಮಾಣದಿಂದ ಗಂಡ ಸತ್ತರ್‍ರೆ ತಾವಿ ಕೂಡಾವಳಿ ಮಾಡುವ ಸಂಪ್ರದಾಯವಿಲ್ಲಾ ಸತ್ತರೆ ಸಮಾದಿ ವಿನಹಾ ದಾನಮಾಡರು ಯಿಾಪ್ರಕಾರ ಯಿವರ ವಂಶಾವಳಿ ಸಂಪೂರ್ಣ ಮಂಗಳಮಹಾಶ್ರೀ.

ವಿಷಯ : ಪಾಳೆಗಾರ ಬುಕ್ಕರಾಯನ ಕಥೆ.

ವಿಶೇಷ : ಮೋಡಿ ಅಕ್ಷರ.

1067

ಕೆ. ೨೫೩	ಬೃಹಜ್ಜ್ಞಾತಕ ಟೀಕು	ಶ್ಲೋಕ, ಟೀಕು
೮″ × ೧.೮″	?	?
೧–೨೦೦ ಪತ್ರ	೮ ಪಂಕ್ತಿ	೩೩ ಅಕ್ಷರ

ಆದಿ : ಬೃಹಜ್ಜ್ಞಾತಕಾ । ಯಿಾ ಜಾತಕದ ವ್ಯಾಖ್ಯಾನ ॥

ಯೋಖಿಲಾತ್ಮಾ ಜಗತ್ಸೃಷ್ಟಿಸ್ಥಿತಿ ಸಂಹಾರಕೃತ್ಪ್ರಭುಃ ।
ಸ ನೈಕಕಿರಣಾ ದೇವೋ ರವಿರಿಷ್ಟಂ ದದಾತು ನಃ ॥
ಹೋರಾತಂತ್ರ ವಿತಾರಾಯ ಶಾಸ್ತ್ರ ಪೋತೋ ನಿರೂಪಿತಃ ।
ವರಾಹಮಿಹಿರೇಣಸ್ಯ ವ್ಯಾಖ್ಯಾಸ್ಯಾಮ್ಯಹಮುತ್ತರಂ ॥
ಮೂರ್ತಿತ್ವೇ ಪರಿಕಲ್ಪಿತಃ ಶಶಿಭೃತೋ x x x
x x x ತ್ರೈಲೋಕ್ಯದೀಪೋ ರವಿಃ ॥ ೧ ॥

ಈ ಶಾಸ್ತ್ರದಲ್ಲಿ ಕೆಲವು ಸಂಬಂಧಾಭಿಧೇಯ ಪ್ರಯೋಜನಗಳು ಹೇಳಲುಪಡುತ್ತಂ ಯಿದ್ಧಾವು । ವಾಚ್ಯವಾಚಕ ಭಾವವು ಸಂಬಂಧವು । ವಾಚ್ಯವೆಂದರೆ ಅರ್ಥ । ವಾಚಕವೆಂದರೆ ಶಬ್ದ । ಅಥವಾ ಉಪಾಯೋಪೇಯ ಲಕ್ಷಣಃಸಂಬಂಧಃ। ಉಪಾಯವೆಂದು ಈ ಶಾಸ್ತ್ರ। ಉಪೇಯವೆಂದು ಈ ಜ್ಞಾನ ಮತ್ತೆ ಅಭಿದೇಯವನೂ ಹೇಳೀನು। ಅಭಿಧೇಯವೆಂದು ರಾಶಿಸ್ವರೂಪ ಹೋರಾ ದ್ರೇಕ್ಕಾಣ x x x x ದ್ರೇಕ್ಕಾಣ ಸ್ವರೂಪ ಇವೀಗಲೆ ಅಭಿಧೇಯ.

ಅಂತ್ಯ : ಹೋರಾಫಲವು ಲಗ್ನಾಧಿಪತಿಗೆ ಸಮಾನವು ಯಂದರ್ಥ। ಲಗ್ನ ದೆಶೆಯ ಫಲವು ಲಗ್ನಾಧಿಪತಿಗೆ ಹೇಳಿದ ಫಲ ತಾನೆ। ಯಂದರ್ಥ ॥ ಸಾರಾವಳಿಯಲ್ಲಿ ಆದಿತ್ಯಾದಿ ಗ್ರಹಗಳು ಯಲ್ಲರು ಉಚ್ಚರಾಶಿಗಳಲ್ಲಿ ಇದ್ದ ಫಲಗಳನೆ ಬೇರೆ ಹೇಳೀನು ॥ ಸ್ವೋಚ್ಚೆ ನೀಚೇ ತ್ರಿಕೋಣೇಚ ಕೇಂದ್ರೇ ಶತ್ರು ಗೃಹೇ ತಥಾ ಪಂಚಪ್ರಕಾರ ಸಂಯುಕ್ತಾ ದಶಾ ಭಾನೋಃ ಪ್ರತೀರ್ತಿತಾ ॥

ತಂನ ಉಚ್ಚದಲ್ಲಿಯೂ ನೀಚದಲ್ಲಿಯೂ। ಮೂಲತ್ರಿಕೋಣದಲ್ಲಿಯೂ ಶತೃಕ್ಷೇತ್ರದಲ್ಲಿಯೂ ಹೀಗೆ ರಾಶಿಗಳಲ್ಲಿಯೂ। ಆದಿತ್ಯನಿದ್ದಾಗ ೫ ಪ್ರಕಾರ। ಆದಿತ್ಯನ ದಶಾಫಲ ಯಂದರ್ಥ ॥

ವಿಷಯ : ಫಲಜ್ಯೋತಿಷ. ವರಾಹಮಿಹಿರಾಚಾರ್ಯ ಕೃತ ಬೃಹಜ್ಜಾತಕದ ಕನ್ನಡ ಟೀಕೆ.

ವಿಶೇಷ : ಅಸಮಗ್ರಪ್ರತಿ; ಆದಿಯಿಂದ ದಶಾಪ್ರಕರಣದಲ್ಲಿ ಸ್ವಲ್ಪ ಭಾಗದವರೆಗೆ ಗ್ರಂಥ ಇದೆ.

1068

ಕೆ. ಬಿ. ೪೪೮	**ಬೆಡಗಿನ ವಚನಗಳು (ಸಟೀಕಾ)**	ವಚನ
೬.೫" × ೭.೪"	ಎಲ್ಲ ಪುರಾತನರು	?
೧–೨೫೦ ಪತ್ರ	೨೬ ಪಂಕ್ತಿ	೨೨ ಅಕ್ಷರ

ಆದಿ : ಯಲ್ಲಾ ಪುರಾತನರು ನಿರೂಪಿಸಿದ ಬೆಡಗಿನ ವಚನ ॥
ಪ್ರಥಮದಲ್ಲಿ ಕೋಲಶಾಂತೈಯ್ಯಗಳ ವಚನ ॥
ಮೂರುಮೊಲೆಯನುಂಡು ಬಂದವ ಯಿರ್ಾೈದ ಕಂಡು। ಬಂಧವ ನೀನಾರು ಹೇಳಾ। ಸಂದಿಲ್ಲದ ಪಟ್ಟಣದಲ್ಲಿ ಬಂದು ನೊಂದೆಯಲ್ಲಾ ಅಂದಿನ ಬೆಂಬಳಿಯ ಮರದು ಯಿಂದಿನ ಸಂದೇಹಕ್ಕೊಡಲಾಗಿ। ಯಿಾ ಉಭಯದ ಸಂದ ನಿಂನ ನೀನರಿ ಪುಂಣ್ಯಾರಣ್ಯದಹನ ಭೀಮೇಶ್ವರ ಲಿಂಗ ನಿರಂಗ ಸಂಗಾ ॥
ಟೀಕು ॥ ಸಂಸಾರ ವಿಷಯ ರಸೋದಕ ತುಂಬಿಕೊಂಡಿಹ ತನುತ್ರಯಂಗಳೆಂಬುದೀಗ ಮೂರು ಮೊಲೆಯೆಂಬ ಶಬ್ದಕ್ಕರ್ಥ। ಆ ತನುತ್ರಯ ಸಂಮಂಧವಾದ ಜೀವಾತ್ಮನು ಆ ದೇಹೇಂದ್ರಿಯ ವಿಷಯಸುಖವನನುಭವಿಸುತಿರ್ದನೆಂಬುದೀಗ ವುಂಡೂ ಯೆಂಬ ಶಬ್ದಕ್ಕರ್ಥ ॥

ಅಂತ್ಯ : ಆ ಪರಬ್ರಹ್ಮವು ನಿರವಯಲಾಗಿದ್ದೀತು ಶರಣನ ಸುಗ್ನಾನದ್ರುಷ್ಟಿಗೆಂಬುದೀಗ ಬಟ್ಟಬಯಲಾಗಿದ್ದೀತುಯೆಂಬ ಶಬ್ದಕ್ಕರ್ಥ। ಆ ನಿರವಯ ಪರಬ್ರಂಹದಲ್ಲಿ ಸಮರಸೈಕ್ಯವಾಗಿ ಬೆರಸಿದ ಶರಣನು ನಾಮಲಿಂಗದಲ್ಲಿ ಬೆರಸಿದೆನೆಂಬ ಚಿಂತೆ ನಷ್ಟವಾಯಿತ್ತೆಂಬುದೀಗ। ಆ ಬಟ್ಟಬಯಲೊಳಗೆ ಹತ್ತಿ ಹೋಗುತ್ತಿರಲಾಗಿ ನಾನೆತ್ತಹೋದೆನೆಂದರಿಯೆನಯ್ಯಾ ಬಸವಪ್ರೀಯ್ಯಾ ಕೂಡಲಸಂಗಮದೇವಾ ಯೆಂಬ ಶಬ್ದಕ್ಕರ್ಥ ॥ ೪ ॥ ಅಂತು ವಚನ ೪೭೭ಕ್ಕಂ ಮಂಗಳ ಮಹಾಶ್ರೀ ॥

ಪರೀಧಾವೀ ಸಂವತ್ಸರದ ಚೈತ್ರ ಬ ೨ರಲ್ಲು ನಾನೂರ ಬೆಡಗು ಸಮಾಪ್ತಃ||ಶ್ರೀ||

ವಿಷಯ : ವೀರಶೈವ ತತ್ತ್ವಪ್ರತಿಪಾದಕ ವಚನಗಳಿಗೆ ಅರ್ಥವಿವರಣೆ.

ವಿಶೇಷ : ಕೈಯಿಂದ ತಯಾರಿಸಿದ ಕಾಗದದಲ್ಲಿ ಗ್ರಂಥವನ್ನು ಬರೆದಿದೆ. ಕೆಲವು ಓಲೆ ಪ್ರತಿಗಳಲ್ಲಿರುವಂತೆಯೇ ಈ ಪ್ರತಿಯಲ್ಲೂ ಪ್ರತಿ ಪಂಕ್ತಿಗೂ ಕ್ರಮಾಂಕವನ್ನು ಕೊಡಲಾಗಿದೆ. ಆರಂಭದ ಎರಡು ಪ್ರತ್ಯೇಕ ಪತ್ರಗಳಲ್ಲಿ ವಿಷಯಸೂಚಿ ಯಿದೆ. ಇದರಲ್ಲಿ ಒಟ್ಟು ೪೨ ಮಂದಿ ಪುರಾತನರ ವಚನಗಳು ಸಂಗೃಹೀತ ವಾಗಿರುವಂತೆ ತಿಳಿದುಬರುತ್ತದೆ. ಪ್ರತಿ ವಚನಕಾರರ ವಚನಗಳು ಆರಂಭ ವಾಗುವ ಪತ್ರಸಂಖ್ಯೆಯನ್ನು ಈ ವಿಷಯಸೂಚಿಯಲ್ಲಿ ಕೊಟ್ಟಿದೆ. ಈ ಪುಸ್ತಕಕ್ಕೆ ಬಟ್ಟೆಯಿಂದ ತಯಾರಿಸಿದ ಸುಭದ್ರವಾದ ಚಿತ್ರಿತಕವಚವಿದೆ.

1069

ಕೆ. ೬೨೯/೧	**ಬೆಡಗಿನ ಪದಗಳು**	ಹಾಡು
೬.೫" × ೨"	ಶಿವಲಿಂಗ ದೇವ	?
೧–೩೫ ಪತ್ರ	೧೧ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ ಗುರುವೇ ಗತ್ತಿ || ಪೀಠಿಕಾ ಬೊಲ್ಲಿ || ಶ್ರೀಮದ್ದೇಶಿಕ ಚೆಂನವೀರಾ
ಚರ್‍ಯರು | ಆ....ಹಾಸಕಲ ಪುರಾತನರ ಗೀತಕ್ಕೆ
ನೇಮಿಸಿಯು ಸೂಚನಾರ್ತ್ಥ ಪದಂಗಳನುವನಿಂ ಸ್ಥಲವಿಟ್ಟು
ಯಿಾ ಮಹಿಮೆಯೊಳು ಪೊಸತೆನಿಸಿ ಸಂಗ್ರಹಿಸಿಯು
ಪ್ರೇಮದಿ ಶಿವಲಿಂಗದೇವಂ ವೊರೆದನು ||
ನಾಮವಿದರ ಶಿವಯೋಗ ಪ್ರದೀಪಿಕೆ ಶರಣರು ಅವಧರಿಸಿ....ಪ್ರಥಮದಲ್ಲಿ |
ಗುರು ಪಾವನೆ |

ಅಂತ್ಯ : ಕರ್ಪುರ ಮಂಟಪದೊಳು ಕರ್ಪುರ ಕಂಭದ ವೈಲೆ
ಕಪ್ಪುರ ಜ್ಯೋತಿಯ ಬೆಳಗಿನ ಬೆಳಗು
ಕಪ್ಪುರ ಮಪ್ಪುರ ಯೋಗದರ್ಪಣ ಸುಗ್ನಾನಲಿಂಗ
ಕಪ್ಪುರ ನಿರ್ವಾಣಿ ಪ್ರಿಯ ಬೋಳೇಶಹೆಂ ||
ಸೂ || ಸ್ವಾನುಭಾವ ತ್ರೈನಾಳ ಯೋಗದೊಳು
ಗ್ನಾನ ಶೂನ್ಯ ಶಿವ....ಣಾಹೆ || ೩ ||
ವಚನ ಜೋಡು ೭೩ ಕಂ ಪದನು ೩೧೩ ಕಂ ಬೆಡಗಿನ ಶ್ಪರ ಪದಂಗಳು
ಸಂಪೂರ್ನ ಮಂಗಳ ಮಹಾಶ್ರೀ

ವಿಷಯ : ವೀರಶೈವ ಹಾಡುಗಳು.

ವಿಶೇಷ : ೧೨ ನೆಯ ಗರಿಯು ಮುರಿದು ಹೋಗಿದೆ. ಇದೇ ಕಟ್ಟಿನಲ್ಲಿ ನಕ್ಷತ್ರ ಚೂಡಾಮಣಿ ಮತ್ತು ಶಾಸ್ತ್ರ ವಿಚಾರವೂ ಇವೆ. ಕೆಲವು ಗರಿಗಳು ಶಿಥಿಲ ವಾಗಿವೆ.

1070

ಕೆ.ಎ. ೨೨೬	**ಬೇತಾಳಪಂಚವಿಂಶತಿ ಕಥೆಗಳು**	ಕಂದ, ವಚನ
೯.೯" × ೭"	ಚಂದ್ರಗುಪ್ತ	ಸು. ೧೭೫೦
೧–೧೩೬ ಪುಟ	೨೩ ಪಂಕ್ತಿ	೨೬ ಅಕ್ಷರ

ಆದಿ : ಶ್ರೀ ಬೇತಾಳ ಪಂಚವಿಂಶತಿ ಕಥೆಗಳು.

ಪದ್ಯ ॥ ಶ್ರೀಮದ್ಗಿರಿಸುತೆಯರಸಂ
ಸೋಮಧರಂ । ಯುರಗ ಭೂಷಣಂ । ಹರಿವಂದ್ಯಂ
ಕಾಮಾಂತ್ರಕ ನಮಗೀವ ಮ
ನೋಮುದಮಂ ಕರುಣಿಸೊಲ್ದು । ಭಾಗ್ಯೋದಯಮಂ ॥

ಟೀ ॥ ವೋ ಪರಮೇಶ್ವರನೆ ನೀನು ಹೇಮಗಿರಿಯ ಕಂನಿಕೆಗೆ ಅರಸಾದವನು । ಚಂದ್ರನ ಶಿರೋಭೂಷಣವಾಗಿ ದರಿಶಿದವನುಂ । ಸರ್ಪಗಳ ಭೂಷಣವಾಗಿದ್ದವ ನುಂ ನು ।

ಅಂತ್ಯ : ಮಾಯೋಪಾಯದಿಂದ ನಿಂನಂ ನಂಬಿ ಯಂನಂ ತನಗೆ ಪಿಡಿತಂದು ಕೊಡು ಕಳುಹಿದ ನೀನದನಂನರಿಯೆ ಯೆಂದೆನಲಾ ವಿಕ್ರಮಂ ಮಹಾ ಬೆರಗಾಗಾ ಬೇತಾಳನಂ ಬೆಸಗೊಳಲಾ ಭೇತಾಳಂ ವಿಕ್ರಮನೊಡನೆ ಯಿಾ ವೃತ್ತಾಂತವಂ ಸವಿಸ್ತಾರವಾಗಿ ಪೇಳುವೆ ಕೇಳೆಂದಂದನು ॥
ಯಿತಿ ಭೇತಾಳ ಪಂಚವಿಂಶತಿ ಕಥೆಗಳೊಳಗಣ ಯಿಪ್ಪತ್ತೈದನೇ ಕಥೆ ಸಂಪೂರ್ಣ ॥—

x x x x

ಸಕಲ ಕಾರ್ಯಗಳಿಂದಲು ನೃಪಗಜ ಕಂಠೀರವನೆಂದೆನಿಶಿಕೊಂಡು ಮಹಾ ನೀತಿಯಾಗಿ........

ವಿಷಯ : ಬೇತಾಳಗಳ ಕಥೆ.

ವಿಶೇಷ : ಕೊನೆಯ ಭಾಗಗಳು ಲುಪ್ತ, ತ್ರುಟಿತ, ತೆಲುಗು ಲಿಪಿ, ಕೆಲವು ಪತ್ರಗಳ ಒಂದೊಂದು ಪಾರ್ಶ್ವಗಳಲ್ಲಿ ಆಂಗ್ಲ ಭಾಷೆಯ ಟಿಪ್ಪಣಿಯೂ ಇದೆ.

1071

ಕೆ. ೪೧೭/೧ **ಬ್ರಹ್ಮ ಗೀತಾ ಟೀಕು** ಟೀಕು

೧೭" × ೧.೬" ತಿಮ್ಮರಾಯ ಸೂರಿ ?

೫–೩೨ ಪತ್ರ ೭ ಪಂಕ್ತಿ ೭೫ ಅಕ್ಷರ

ಆದಿ : ಗಳಸ್ಸಾತಿಕ ರಾಜಸಾಂಶಗಳ ಪರಿಣಾಮ ರೂಪವಾದ ಲಿಂಗ ಶರೀರ....ಕ್ಕೆ ಉತ್ಪತ್ತಿಃ ಉತ್ಪತ್ತಿಯು ಅರ್ಥಾತ್ ಅಧಿಕವಾಗಿ ಉಕ್ತೇತಿ ಹೇಳಲಪಟ್ಟಿತು ಯಂದು ದ್ರಷ್ಟವ್ಯಂ ನೋಡಿಕೊಳ್ಳಲು......................ಆ ಪ್ರಾಣ ಶಬ್ದ ವಾಚ್ಯವಾದ ಹಿರಣ್ಯಗರ್ಭನ ದೆಶೆಯಿಂದ ಮನಃ ಪಂಚೀಕರಣ ವಿಷಯವಾದ ಮನಸ್ಸು ಉತ್ಪನ್ನಂ ಹುಟ್ಟಿತು. ತತಶ್ಚ ಅನಂತರದಲ್ಲಿ ಸತ್ಯಂ ಸತ್ಯ....ನಿಷ್ಠಾ ಕಾಶವೇ ಮೊದ......................................ಪಂಚೀಕೃತ ಪಂಚಮಕ್ಕು ಭೂತಗಳು ಉತ್ಪನ್ನಾನಿ ಹುಟ್ಟಿದವು—

ಅಂತ್ಯ : ಅತಿಶೋಭನಂ| ಅತ್ಯಂತ ಮಂಗಳಕರವಾದ| ಆಶು| ಶೀಘ್ರವಾಗಿ| ಶೋಕ | ಮೋಹೋಪಲಸ್ಯ....ಶೋಕ | ದುಃಖ ಮೋಹ ಅಜ್ಞಾನ ಈ ಶೋಕ ಮೋಹಗಳೆಂಬ ಶಿತಿಯ | ಭೇದಕಂ | ಭೇದಿಸುವ | ಸತ್ಯಸುಖಬೋಧವಸ್ತುವಂ ಸಚ್ಚಿದಾನಂದಾತ್ಮಕನಾದ ವಸ್ತುಲಾಭವನುಂಟುಮಾಡುವ | ಯೀ ಅರ್ಥವು| ವೇದಮಾನ ನಿತ್ಯಸ್ಯ ವೇದ ಪ್ರಮಾ................ನಿರತನಾದ ಪುರುಷನಿಗೆ | ನಿಶ್ಚಯವಾಗುತಲಿದೆ | ಇತಿ ಶ್ರೀ ಕೌಂಡಿನ್ಯಗೋತ್ರಾಭಿಧ ಸುಧಾಕರ ಶ್ರೀ ರಂಗನಾಥೋಪಾಧ್ಯಾಯತನೂಜ ತಿಮ್ಮರಾಯಸೂರಿ ವಿರಚಿತಾಯಾಂ ಬ್ರಹ್ಮ ಗೀತಾ ಕರ್ನಾಟಕ ಟೀಕಾಯಾಂ ಷಷ್ಠೋಧ್ಯಾಯಃ|| ಸಾಂಬಶಿವಾರ್ಪಣ ಮಸ್ತು ||

ವಿಷಯ : ತತ್ತ್ವ ಪ್ರತಿಪಾದಕವಾದ ಬ್ರಹ್ಮಗೀತೆಯ ಕನ್ನಡ ಟೀಕೆ.

ವಿಶೇಷ : ಅತ್ಯಂತ ಶಿಥಿಲ ಮತ್ತು ಅಸಮಗ್ರಪ್ರತಿ ; ಇದರೊಂದಿಗೆ ಕೈವಲ್ಯೋಪನಿಷತ್ತಿನ ಕನ್ನಡ ಟೀಕೆಯೂ ಇದೆ.

1072

ಕೆ. ೨೩೯ **ಬ್ರಹ್ಮಗೀತಾ ವ್ಯಾಖ್ಯಾನ(ಸಟೀಕು)** ಟೀಕು

೧೦.೫" × ೨.೧" ? ?

೮–೨೦೫ ಪತ್ರ ೧೦ ಪಂಕ್ತಿ ೪೮ ಅಕ್ಷರ

ಆದಿ : ....ನಿರುಪಾಧಿಕಮಿತಿ ವೇದ್ಯಸ್ಯದಭ್ರತ್ವಂ | ಯಿಾ ಪ್ರಕಾರದಿಂದ ಸ್ವಾತ್ಮರೂಪವಾಗಿ ಸ್ವಕೀಯವಾದ ಅಹಂಭ್ರಮಕ್ಕೆ ಪಾರಮಾರ್ಥಿಕ ವಿಷಯ

ವಾದ........ಪವಾಗಿ ಉಪದೇಶಾ ಮಾಡಪಟ್ಟ ಬ್ರಂಹ್ಮನ ಶಿಷ್ಯನು ತಿಳಿದು ಕೊಂಬೋ ಸಮಯದಲ್ಲಿ ಅಹಂ ಮಾಂ ಬ್ರಹ್ಮಂ ಜಾನಾಮಿ ನಾನು ನಂನ್ನ ಬ್ರಂಹ್ಮಲು ಯಂದು ತಿಳಿದುಕೊಂಡೆನು.

ಅಂತ್ಯ : ಜಗದ್ರೂಪತಯೇತ್ಯಾದಿಯಿಂದಾ। ವಿದ್ಯಾವಿದ್ಯಾದಿ ಭೇದೇನ। ಭಾವಾ ಭಾವಾವಿಭೇದತಂ। ಗುರುಶಿಷ್ಯಾದಿ ಭೇದೇನ ಬ್ರಂಹ್ಮಯ್ಯೈವ ಪ್ರತಿಭಾನತೇ। ಬ್ರಂಹ್ಮ ಸರ್ವ್ವಮಿತಿ। ಜಾನಂ ಬ್ರಂಹ್ಮಪಾಪ್ತೇಸ್ತು ಸಾಧನಂ।

ವಿಷಯ : ವೇದಾಂತ.

ವಿಶೇಷ : ಅಸಮಗ್ರ; ೪೫, ೫೦, ೯೪, ೯೫, ೧೦೨, ೧೦೩ ಮತ್ತು ೧೦೫ನೆಯ ಗರಿ ಗಳಿಲ್ಲ. ೭೯, ೮೦ ಮತ್ತು ೧೨೬ನೆಯ ಗರಿಗಳ ಒಂದೇ ಪಾರ್ಶ್ವದಲ್ಲಿ ಬರೆದಿದೆ. ೬೫ ಮತ್ತು ೮೧ನೆಯ ಗರಿಗಳ ಒಂದು ಕಡೆ ಎರಡು ಪಂಕ್ತಿಗಳನ್ನು ಮಾತ್ರ ಬರೆದಿದೆ. ೧೦೧, ೧೩೨ ಮತ್ತು ೧೪೯ನೆಯ ಗರಿಗಳ ಅರ್ಧ ಭಾಗಗಳು ಮಾತ್ರ ಇವೆ.

1073

ಕೆ.ಬಿ. ೩೯೬/೧	**ಬ್ರಹ್ಮಾಂಡಲಕ್ಷಣ**	ಗದ್ಯ
೬.೮" × ೪.೪"	?	?
೧–೩ ಪತ್ರ	೩೨ ಪಂಕ್ತಿ	೨೬ ಅಕ್ಷರ

ಆದಿ : ವಿವೇಕಚಿಂತಾಮಣಿಯೊಳಗಣ ಬ್ರಹ್ಮಾಂಡಲಕ್ಷಣ ಬರೆಯುವುದಕ್ಕೆ ಶುಭ ಮಸ್ತು। ಮತ್ತಮಂ ಬ್ರಹ್ಮಾಂಡಭುವನಾದಿಗಳ ಲಕ್ಷಣಮೆಂತೆನೇ ಪಂಚೀಕರಿ ಶಿದ ಮೂಲತತ್ವದ ದಶಾಂಶದೇವವ ದೇಶದೊಳುಂದು ಕೋಟಿಯೋಜನದಳ ತ್ತಿಯ ಘಟ್ಟದ ಸುವರ್ಣಮಯವಾದ ಹಕನುಳ್ಳೈದೆಂದರ್ಬುದ ಯೋಜನಸ್ಥೂಲ ಮಾದ ನೂರುಕೋಟಿಯೋಜನ ಪ್ರಮಾಣನ ವಿಶಾಲೋನ್ನತಮಾದೊಳ ವಳಯ

ಅಂತ್ಯ : ಭೂಮಿಗಳುಳ್ಳವಾಗಿ ಪ್ರಾಕಾರ ಪುರಗೋಪುರಾದಿ ವಿಚಿತ್ರ ರಚನೆಗಳಿಂ ಸಕಲಭೋಗ ಸಾಧನಗಳಿಂ ಸಂಪನ್ನಮಾಗಿ ಸರ್ಗಲೋಕ ಸಮಾನಮಾಗಿರ್ಪ ವವಕ್ಕೆ ಬಲ ಅತಿಬಲ ಬಲವಾನ್ ಬಲವಿಕ್ರಮ ಬಲೇಶ ಬಲಶಾಲಿ ಬಲಾಧ್ಯಕ್ಷ ರೆಂಬವರೆ ಕ್ರಮದಿಂ ಕರ್ತುಗಳಾಗಿರ್ಕ್ಕುಂ ॥

ವಿಷಯ : ತತ್ವ (ವಿವೇಕ ಚಿಂತಾಮಣಿಯಲ್ಲಿರುವ ಬ್ರಹ್ಮಾಂಡದ ಲಕ್ಷಣ).

ವಿಶೇಷ : ಇದೇ ಪುಸ್ತಕದಲ್ಲಿ ಕೈವಲ್ಯಪದ್ಧತಿ, ಗಣಾಷ್ಟಕ (ಸಂ), ಸಂಕ್ಷೇಪ ಭಾರತ ಎಂಬ ಗ್ರಂಥಗಳೂ ಇವೆ.

1074

ಕೆ. ೮೯/೧	**ಬ್ರಹ್ಮೋತ್ತರ ಖಂಡ**	ಭಾಮಿನೀ ಷಟ್ಪದಿ
೧೦.೮″ × ೧.೮″	ಮಹಾದೇವ	ಸು ೧೭೦೦
೧–೧೭೦ ಪತ್ರ	೯ ಪಂಕ್ತಿ	೫೨ ಅಕ್ಷರ

ಆದಿ : ಬ್ರಹ್ಮೋತ್ತರಕಾಂಡೆ ಭಾಮಿನಿ ಷಟ್ಪದ.

ಸಾಸಲ ಶಂಭು ಸೋಮೇಶ್ವರನ ದಿವ್ಯ ಚರಣಾರವಿಂದವೇ ಗತಿ ॥

ಶ್ರೀ ಸೋಮರಾಜೈಯ್ಯನವರಿಗೆ ಗಿರಿರಾಯನು ಬರದುಕೊಟ್ಟ ಬ್ರಹ್ಮೋತ್ರ ಖಾಂಡದ ಪುಸ್ತಕ್ಕೆ । ಪುತ್ರಪೌತ್ರಪಾರಂಪರ್ಯವಾಗಿ ಆಚಂದ್ರಾರ್ಕಪರಿಯಂತರಂ ನಿರ್ವಿಘ್ನಮಸ್ತು ॥

ಪದ ॥ ಶ್ರೀಮದಮರಾಸುರಕಿರೀಟ
ಸ್ತೋಮ ಮಣಿಗಣನಿಕರಲಾಲಿತ
ಕೋಮಲಾರುಣ ಪಾದಪಂಕೇರುಹ ಮಹಾಕಾಯಾ
ಸಾಮಜಾನನ ಶುಂಭವಿಸು
ಪ್ರೇಮ ಕಾರಣ ಮೂರ್ತಿಯೊಲವಿಂ
ದೀ ಮಹಾಕೃತಿಗೀಗ ನಿರ್ವಿಘ್ನತೆಯ ಗಣನಾಥಾ ॥ ೧ ॥

x x x x

ಕಥೆಗೆ ನಾಯಕನೀಶ್ವರನು ಸ
ತ್ಕಥನ ಬ್ರಹ್ಮೋತ್ತರದ ಕಾಂಡ
ಸ್ಥಿತಮಹಾದೇವೈಕ ಭಕ್ತಿವಿಲಾಸವಿಸ್ತಾರಾ
ಕ್ಷಿತಿಯೊಳತಿಶಯ ಭಕ್ತಜನ ಸಂ
ತತಿಗೆ ಸೇವ್ಯವೆನಲ್ಕೆ ವರ ಸಂ
ಸ್ಕೃತವ ಕಂನಡಿಸಿದೆನು ಭಾಮಿನಿಯೆಂಬ ಷಟ್ಪದದೀ ॥ ೧೪ ॥

ಅಂತ್ಯ : ಸಕಲತೀರ್ಥಸ್ನಾನಫಲ ಸಲೆ
ಸಕಲ ಯೆಜ್ಞಮಹಾವ್ರತಃಫಲ
ಸಕಲ ದೇವಾರ್ಚನೆಯ ಫಲ ನುತಿ ಜಪ ತಪಃಫಲವೂ
ಸಕಲದಾರಾಧನೆಯ ಫಲ
ಸುಕರದಿಂ ಶಿವಕಥೆಯನತ್ಯಾ
ಶಕತಿಯಿಂ ಕೇಳಿದರಿಗಾದಪುದೆಂದನಾ ಸೂತಾ ॥ ೬೩ ॥

ಅಂತೂ ಸಂಧಿ ೩೧ಕ್ಕೆ ಪದನೂ ೧೯೪೫ಕ್ಕಂ ಮಂಗಳಮಹಾಶ್ರೀ.

ಶ್ರೀ ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕವರುಷಂಗಳು ೧೭೦೩ ನೆಯ ವರ್ತಮಾನಕ್ಕೆ ಸಲ್ಲುವ ಕ್ರೋಧಿನಾಮ ಸಂವತ್ಸರದ ಮಾರ್ಗಿಶರ ಬ ೮ ಯಲ್ಲು ಬ್ರಹ್ಮೋತ್ತರಕಾಂಡ ಪುಸ್ತಕ ಬರದಾಯಿತು । ಬರದಾತ । ಸಾಸಲ

ಸ್ಥಳದ ಪ್ರಭುಂಗಳಾದ | ಸೋಮರಾಜೈಯ್ಯನವರಿಗೆ | ಗಿರಿರಾಯನು ಬರದು ಕೊಟ್ಟು | ಆಚಂದ್ರಾರ್ಕಪರಿಯಾತರಂ ಪುತ್ರಪೌತ್ರಪಾರಂಪರ್ಯವಾಗಿಯಿರಲಿ ಯೆಂದು ಆಶೀರ್ವಾದಂಗೈದು ಬರದುಕೊಟ್ಟ ಬ್ರಹ್ಮೋತ್ರಕಾಂಡದ ಪುಸ್ತಕಕ್ಕೆ ಆಚಂದ್ರಾರ್ಕಪರಿಯಂತರಂ ನಿರ್ವಿಘ್ನಮಸ್ತು.

ವಿಷಯ : ಈಶ್ವರನ ಮಹಿಮೆ.

ವಿಶೇಷ : ಆದ್ಯಂತವಿದೆಯಾದರೂ ೨೩ರಿಂದ ೬೪ರವರೆಗಿನ ಗರಿಗಳು ಲುಪ್ತವಾಗಿವೆ. ಸುಂದರ ಬರಹ. ಇದೇ ಕಟ್ಟಿನಲ್ಲಿ ಷಡಕ್ಷರಮಹಿಮೆಯೆಂಬ ಗ್ರಂಥವೂ ಇದೆ.

1075

ಕೆ. ೪೩೮/೨	**ಬ್ರಹ್ಮೋತ್ತರ ಖಂಡ**	ಭಾಮಿನೀ ಷಟ್ಪದಿ
೧೯" × ೨.೨"	ಮಹಾದೇವ	ಸು. ೧೭೦೦
೧–೭೦ ಪತ್ರ	೧೨ ಪಂಕ್ತಿ	೮೮ ಅಕ್ಷರ

ಆದಿ : ಬ್ರಂಹ್ಮೋತ್ತ್ರರ ಖಾಂಡ ಬರಉದಕ್ಕೆ ಶುಭಮಾಂಗಲ್ಯವಸ್ತು ||
ಶ್ರೀಮದಮರಾಸುರ ಕಿರೀಟ
ಸ್ತೋಮ ಮಣಿಗಣ ಕಿರಣಲಾಲಿತ
ಕೋಮಲಾರುಣಪಾದ ಪಂಕೇರುಹ ಮಹಾಕಾಯಾ
ಸಾಮಜಾನನ ಶಾಂಬವೀ ಸು
ಪ್ರೇಮ ಕಾರಣಮೂರ್ತಿಯೊಲವಿಂ
ದೀ ಮಹಾಕೃತಿಗೀಗೆ ನಿರ್ವಿಘ್ನತೆಯ ಗಣನಾಥಾ ||೧||

ಅಂತ್ಯ : ಸಕಲ ತೀರ್ಥಸ್ನಾನ ತತ್ಪಲ
ಸಕಲಯಗ್ನ ವ್ರತಮಹಾಫಲ
ಸಕಲ ದೇವಾರ್ಚನೆಯ ನುತಿ ಜಪ ತಪಃ ಪಲಉ
ಸಕಲ ದಾನಾರಾದನೆಯ ಪಲ
ಸುಕರದಿಂ ಶಿವಕಥೆಯನತ್ಯಾ
ಸಕತಿಯಿಂ ಕೇಳಿದರಿಗಾದಪುದೆಂದನಾ ಸೂತಾ ||
ಅಂತೂ ಸಂಧಿ ೩೧ ಕ್ಕೆ ಪದ ೧೬೮೦ ಕ್ಕಂ....೪ಮಹಾ || ಶ್ರೀ ಜಯಭ್ಯುದಯ ಶಾಲಿವಾಹನ ಶಕವರುಶ ೧೬೮೦ ನೆಯ ಯಿಶ್ವರ ಸಂವತ್ಸರದ ಶ್ರಾವಣ.... ಭಾನುವಾರದಲು ಬರದು ಮುಗಿಸ್ತ ಬ್ರಂಹ್ಮೋತ್ತ್ರಖಾಂಡ ಪುಸ್ತಕಕ್ಕೆ ನಿರ್ವಿಘ್ನೆ ಮಸ್ತು || x x x x xಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷ ೧೬೮೦ ನೆಯ ಯಿಶ್ವರ ಸಂವಶ್ಚರದ ಚೈತ್ರಬ ೯ ಯು ಮುಂಗಳವಾರದಲ್ಲು ಡೊಂಗರೆಯ ಬಸವಪ್ಪನ....ವೀರಪ್ಪಗೆ ಪೆರುಡೂರ ಸಂಣನಾರಾಯಣನ ಮಗ ಅಂ....ತನು ಬರಕೊಟ್ಟ ಅತ್ಯಪುರಾಣ ಬ್ರಹ್ಮತ್ತ್ರರ ಕಡ್ತ ಪುಸ್ತಕ್ಕೆ ಸುಭಮಸ್ತು || ಶ್ರೀ ಶ್ರೀ

ವಿಷಯ : ಈಶ್ವರನ ಮಹಿಮೆ.

ವಿಶೇಷ : ೬೪,೬೫, ೬೬ ಮತ್ತು ೭೦ ನೇ ಪತ್ರಗಳು ತುದಿಯಲ್ಲಿ ಮುರಿದಿವೆ. ಈ ಗ್ರಂಥಾರಂಭಕ್ಕಿಂತ ಮೊದಲು ಆದಿತ್ಯಪುರಾಣ ಗ್ರಂಥವು ಈ ಕೋಶದಲ್ಲಿದೆ.

1076

ಕೆ. ೩೦೭	**ಬ್ರಹ್ಮೋತ್ತರ ಖಂಡ**	ಭಾಮಿನೀಷಟ್ಪದಿ
೧೭.೩" × ೧.೫"	ಮಹಾದೇವ	ಸು. ೧೭೦೦
೪–೧೭೩ ಪತ್ರ	೬ ಪಂಕ್ತಿ	೬೨ ಅಕ್ಷರ

ಆದಿ : ದಾನ ಸುವ್ರತ ಪೂಜೆ ವಿಮಲ। ಧ್ಯಾನ ಧರ್ಮಾಹ್ವಾನ........ಂಗಳಾದಿ
ಯಲೀ ॥೧೪॥ x x x x
ಅತಿಶಯದ ಭವಪಾಶ ಬದ್ಧಾ
ನ್ವಿತರೆನಿಪ ಜೀವರ್‍ರಿಗೆ ಮೋಕ್ಷ
ಸ್ತಿತಿಯನೀವರ್‍ರಿದೊಂದು ಕಾರಣ ರೂಪವೆಂದೊಲಿದೂ
ಪತಿರಹಿತವಾಗಿರ್ದಮ....ಮೋ
ನ್ನತಿಯ ಪಂಚಾಕ್ಷರಿಯನಾ ಪಾ
ರ್ವತಿಗೆ ಪೇಳ್ದನು ಮುಂನ ತರ್‍ರುಣ ಶಶಾಂಕಶೇಖರನೂ ॥ ೨೧ ॥

ಅಂತ್ಯ : ಕಾಶಿ ರಾಮೇಶ್ವರ ಚಿದಾಂಬರ
ಶ್ರೀಶೈಲ ಗೋಕರ್ನ ಮುಖ್ಯ ಮ
ಹಾ ಸಕಲ ತೀರ್ಥಗಳ ಮಿಂದಾ ದಿವ್ಯ ಲಿಂಗಗಳಾ
ಲೇಸೆನಿಪ ಶಿವರಾತ್ರೆಯೊಳಗುಪ
ವಾಸವನು ವಿರಚಿಸಿದ ಫಲವಹು
ದೀ ಸದಾಶಿವಕಥೆಯ ಕೇಳ್ದರ್‍ರಿಗೆಂದನಾ ಸೂತಾ ॥ ೬೨ ॥
ಸಕಲ ತೀರ್ಥಸ್ನಾನ ಫಲ
ಸಕಲ ಯಜ್ಞ ವ್ರತ ಮಹಾಫಲ
ಸಕಲ....ವಾರ್ಚನೆಯ ಫಲ...............ನತ್ಯಾ
ಸಕತೆಯಿಂ ಕೇಳಿದರ್‍ರಿಗಾದಪುದೆಂದನಾ ಸೂತಾ ॥ ೬೩ ॥
ಅಂತೂ ಸಂಧಿ ೩೧ ಕ್ಕಂ ಪದನೂ ೧೭೭೦ ಕ್ಕಂ ಜಯಮಂಗಳ ಮಹಾ ಶ್ರೀ
ಇತಿ ಶ್ರೀ ಬ್ರಂಹ್ಮೋತ್ತರ ಪುರಾಣ ಕಂನಡ ಭಾಮಿನೀ ಷಟ್ಪದಿಕಾಂಡೇ ಸರ್ವ
ನಿದರ್ಶನ ಕಥಾ ಪ್ರಸಂಗಂ ಸಂಪೂರ್ನಾ

ವಿಷಯ : ಈಶ್ವರನ ಮಹಿಮೆ.

ವಿಶೇಷ : ಸುಂದರ ಬರಹ. ಮೊದಲ ಮೂರು ಪತ್ರಗಳಿಲ್ಲ. ಕೆಲವು ಗರಿಗಳು ಮುರಿದು ತುಂಡಾಗಿದ್ದು ಅಂಚುಗಳಲ್ಲಿ ತ್ರುಟಿತವಾಗಿವೆ.

1077

ಕೆ. ೪೫೪ **ಬ್ರಹ್ಮೋತ್ತರ ಖಂಡ** ಭಾಮಿನೀ ಷಟ್ಪದಿ

೧೩.೩" × ೧.೧" ಮಹಾದೇವ ಸು ೧೭೦೦

೧–೧೬೦ ಪತ್ರ ೫ ಪಂಕ್ತಿ ೫೫ ಅಕ್ಷರ

ಆದಿ : ಬ್ರಂಹ್ಮೋತ್ತ್ರರಕಾಂಡವ ಬರವುದಕ್ಕೆ ಶುಭಮಸ್ತು ||

....

...................ಮ ಮಣಿಗಣ ಕಿರಣಲಾಲಿತ
ಕೋಮಲಾರುಣಪಾದ ಪಂಕೇರುಹ ಮಹಾಕಾಯಾ
ಸೋಮಜಾನನ ಶಾಂಭವಿ ಸು
ಪ್ರೇಮಕಾರಣಮೂರ್ತಿಯೋ........
...................ನಿರ್ವಿಘ್ನತೆಯ ಗಣನಾಥಾ || ೧ ||

x x x x

ಕಥೆಗೆ ನಾಯಕನೀಶ್ವರನು ಸ
ತ್ಕಥನ ಬ್ರಂಹ್ಮೋತ್ತ್ರರದ ಕಾಂಡ
ಸ್ತ್ರಿತಿಮಹಾದೈವೈಕ ಭಕ್ತಿವಿಲಾಸ ವಿಸ್ತಾರಾ
ಕ್ಷಿತಿಯೊಳತಿಶಯ ಭ........
ತತಿಗೆ ಸೇವ್ಯವೆನಲ್ಕೆ ವರಸಂ
ಸ್ಕೃತವ ಕಂನಡಿಸಿದೆನು ಭಾಮಿನಿಯೆಂಬ ಷಟ್ಪದದಿ || ೧೪ ||

ಅಂತ್ಯ : ತರುಣಿಯೊಳು...........
ದರುಶನದ ಮಹಿಮೆಯನು ವಿವರಿಸಿ
ಯುರುತರದ ಶಿವಭಕ್ತಿಮಾರ್ಗದಿ ಸಪ್ತಜನ್ಮದೊಳೂ
ಪಿರಿದು ಭೋಗವನುಂಡು ಕಡೆಯಲಿ
ಪರಮಗುರು........ಲಿಂಗನ
ಚರಣದೊಳು ದಂಪತಿಗಳೊಂದಿದರೆಂದನಾ ಸೂತಾ ||
ಅಂತು ಸಂಧಿ ೭ಕ್ಕಂ ಪದನೂ ೪೦೪ಕ್ಕಂ ಮಂಗಳಮಹಾಶ್ರೀ.
ಸೂಚನೆ || ಸಕಲಮುನಿಜನಗಳಿಗೊಲಿದು ಗೋ
ಪಿಕೆಯ ವರ ಸುಕುಮಾರನುಂನತ
ಭಕುತಿಯತಿಶಯದ ಮಹಿಮೆಗಳವ........

ವಿಷಯ : ಈಶ್ವರನ ಮಹಿಮೆ.

ವಿಶೇಷ : ಅಸಮಗ್ರ, ಕೆಲವು ಗರಿಗಳ ಅಂಚು ಮುರಿದಿದೆ. ೧–೧೪೭ ಪತ್ರದವರೆಗೆ

ಕ್ರಮಾಂಕವಿದೆ. ಮುಂದೆ ಕ್ರಮಾಂಕವಿಲ್ಲದ ೧೩ ಪತ್ರಗಳಿವೆ. ೫,೭, ೮, ೧೪, ೧೫, ೧೬, ೧೯, ೩೩, ೩೪, ೩೮, ೪೩, ೪೭, ೫೦, ೫೧, ೫೩, ೬೧, ೬೨, ೭೧, ೮೪, ೮೫, ೧೦೫, ೧೦೭, ೧೧೧, ೧೧೮—೧೨೪, ೧೨೬, ೧೩೨, ೧೩೯, ೧೪೦ ಕ್ರಮಾಂಕದ ಪತ್ರಗಳಿಲ್ಲ. ಬರಹ ಸುಂದರ.

1078

ಕೆ.ಎ. ೨೦೪	**ಬ್ರಹ್ಮೋತ್ತರ ಖಂಡ**	ಭಾಮಿನೀ ಷಟ್ಪದಿ
೧೨.೬" × ೮"	ಮಹಾದೇವ	ಸು ೧೭೦೦
೧—೨೯೯ ಪುಟ	೨೨ ಪಂಕ್ತಿ	೨೪ ಅಕ್ಷರ

ಆದಿ : ಬ್ರಹ್ಮೋತ್ತರಖಂಡ, ಭಾಮಿನೀಷಟ್ಪದ.

ಶ್ರೀಮದನ್ಮೃತ ಮಯೂಖಾ ವಿಲಸ
ದ್ವ್ಯೋಮ ಗಂಗಾತುಂಗವೀಚಿ
ಸ್ತೋಮ ಶೀಕರಸಿಕ್ತ ಕರ ಪಿಂಗಲಜಟಾಜೂಟಾ
ಹೈಮಗಿರಿ ಕಂನ್ಯಾ ಸುಮಂಗಳ
ಧಾಮ ಕೋಮಲ ವಾಮಗಾತ್ರದ
ರಾಮಣೀಯಕ ಮೂರ್ತ್ತಿ ಶಾಂತ್ತೇಶ್ವರನೆ ನಮೊಯೆಂಬೆ ‖ ೧ ‖

x x x x

ಕಥೆಗೆ ನಾಯಕನೀಶ್ವರನು ಸ
ತ್ಕಥನ ಬ್ರಹ್ಮೋತ್ತರದ ಖಾಂಡ
ಸ್ಥಿತಿ ಮಹಾದೇವಾಖ್ಯ ಭಕ್ತಿವಿಲಾಸ ವಿಸ್ತಾರಾ
ಕ್ಷಿತಿಯೊಳತಿಶಯ ಭಕ್ತಜನ ಸಂ
ತತಿಗೆ ಸೇವ್ಯವೆನಲ್ಕೆ ವರಸಂ
ಸ್ಕೃತವ ಕಂನಡಿಸಿದೆ ಸುಭಾಮಿನಿಯ ಷಟ್ಪದದಿಂ ‖ ೧೪ ‖

ಅಂತ್ಯ : ಸಕಲತೀರ್ಥಸ್ನಾನ ಸತ್ಫಲ
ಸಕಲಯಜ್ಞ ವ್ರತ ಮಹಾಫಲ
ಸಕಲದೇವಾರ್ಚನೆ ಫಲ ನುತಿ ಜಪ ತಪಃಫಲವೂ
ಸಕಲದಾನಾರಾಧನೆಯ ಫಲ
ಸುಕರದಿಂ ಶಿವಕಥೆಯನತ್ಯಾ
ಶಕತೆಯಿಂ ಕೇಳಿದರಿಗಾದಪುದೆಂದನಾ ಸೂತಾ ‖ ೬೬ ‖

ಅಂತು ಸಂಧಿ ೩೧ಕ್ಕಂ ಪದನು ೧೯೪೪ಕ್ಕಂ ಮಂಗಳಮಹಾ ‖ ಇತಿ ಶ್ರೀಮುಖ ಸಂವತ್ಸರದ ಮಾಘ ಶು ೫ ಲುಯ ಆದಿತ್ಯವಾರ ಮಹಾನಕ್ಷತ್ರದಲು ಬ್ರಹ್ಮೋತ್ಖಂಡ ಸಮಾಪ್ತಿಯಾಯ್ತು—ಶ್ರೀಗುರುವೇಗತಿ ‖

ವಿಷಯ : ಈಶ್ವರನ ಮಹಿಮೆ.

ವಿಶೇಷ : ನಡುವೆ ಗದ್ಯ ಮತ್ತು ರಗಳೆಗಳೂ ಇವೆ. ಕೆಲವು ಕಡೆ ಅಕ್ಷರಗಳು ಲುಪ್ತವಾಗಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಕವಿಯ ಗುರು ಶಾಂತಲಿಂಗೇಶನೆಂದು ತಿಳಿದುಬರುತ್ತದೆ. ಶಕಟರೇಫದ ಬಳಕೆಯಿದೆ.

1079

ಕೆ.ಬಿ. ೩೪೨	**ಬ್ರಹ್ಮೋತ್ತರ ಖಂಡ**	ಭಾಮಿನೀ ಷಟ್ಪದಿ
೮" × ೫.೭"	ಮಹಾದೇವ	ಸು ೧೭೦೦
೧–೧೬೧ ಪತ್ರ	೨೨ ಪಂಕ್ತಿ	೨೦ ಅಕ್ಷರ

ಆದಿ : ಬ್ರಹ್ಮೋತ್ತರಖಾಂಡ ಪಸ್ತುಕಪ್ರಾರಂಭ ॥ ಶುಭಮಸ್ತು ॥

ಶ್ರೀಮದಮರಾಸುರ ಕಿರೀಟ
ಸ್ತೋಮ ಮಣಿಗಣಕಿರಣ ಲಾಲಿತ
ಕೋಮಲಾರುಣಪಾದಪಂಕರುಹಮಹಾಕಾಯಾ
ಸಾಮಜಾನನ ಶಾಂಭವಿ ಸು
ಪ್ರೇಮಕಾರಣ ಮೂರ್ತಿಯೊಲವಿಂ
ದೀ ಮಹಾಕೃತಗೀಗೆ ನಿರ್ವಿಘ್ನತೆಯ ಗಣನಾಥಾ ॥

x x x x

ಕಥೆಗೆ ನಾಯಕನೀಶ್ವರನು ಸ
ತ್ಕಥನ ಬ್ರಂಹೋತ್ತರದ ಖಾಂಡ
ಸ್ಥಿತ ದುಹಾದೇವೈಕ್ಯ ಭಕ್ತಿವಿಲಾಸ ವಿಸ್ತಾರಾ
ಕ್ಷಿತಿಯೊಳತಿಶಯ ಭಕ್ತಜನ ಸಂ
ತತಿಗೆ ಸೇವ್ಯವೆನಲ್ಕೆ ವರ ಸಂ
ಸ್ಕೃತವ ಕಂನಡಿಶಿದೆನು ಭಾಮಿನಿಯೆಂಬ ಷಟ್ಪದದೀ ॥ ೧೪ ॥

ಅಂತ್ಯ : ಸಕಲತೀರ್ಥಸ್ನಾನತತ್ಫಲ

ಸಕಲಯಜ್ಞವ್ರತಮಹಾಫಲ
ಸಕಲದೇವಾರ್ಚನೆಯ ಫಲ ನುತಿ ಜಪ ತಪಃಫಲವೂ
ಸಕಲದಾನಾರಾಧನೆಯ ಫಲ
ಸುಕರದಿಂ ಶಿವಕತೆಯನು ಅತ್ಯಾ
ಶಕ್ತಿಯಿಂ ಕೇಳಿದರಿಗಾದಪುದೆಂದನಾ ಸೂತಾ ॥ ೬೫ ॥

ಅಂತು ಸಂಧಿ ೩೧ಕ್ಕಂ ಪದನು ೧೮೪೪ಕ್ಕಂ ಮಂಗಳಮಹಾಶ್ರೀ.

ವಿಷಯ : ಈಶ್ವರನ ಮಹಿಮೆ.

ವಿಶೇಷ : ನಡುವೆ ಗದ್ಯ ಮತ್ತು ರಗಳೆಗಳೂ ಇವೆ. ಈ ಗ್ರಂಥದಲ್ಲಿ ಮೊದಲು ಗಣಪತಿಯ ಸ್ತೋತ್ರ ಬರುತ್ತದೆ. ಕೆ.ಎ. ೨೦೪ನೇ ಗ್ರಂಥವನ್ನು ಇದರೊಂದಿಗೆ ಹೋಲಿಸಿದರೆ, ಪೀಠಿಕಾ ಸಂಧಿಯಲ್ಲಿ ಮಾತ್ರ ಪದ್ಯಗಳು ಅದಲುಬದಲಾಗಿವೆ. ೧೬೨ನೇ ಪತ್ರದಲ್ಲಿ ಶಿವಪೂಜಾಪಾತ್ರಗಳ ವಿವರವಿದೆ. ಅಂತ್ಯದಲ್ಲಿ ಕೆಲವು ಬರವಣಿಗೆಯಿಲ್ಲದ ಪತ್ರಗಳಿವೆ.

1080

ಕೆ. ೨೯೧	**ಬ್ರಹ್ಮೋತ್ತರಖಂಡ**	ಗದ್ಯ
೧೫.೮″ × ೧.೩″	ಚಾಮರಾಜ	೧೬೨೦
೧–೧೨೧ ಪತ್ರ	೭ ಪಂಕ್ತಿ	೭೫ ಅಕ್ಷರ

ಆದಿ : ಬ್ರಂಹ್ಮೋತ್ತರ ಖಂಡದ ಪುಸ್ತುಕಕ್ಕೆ ಶುಭಮಸ್ತು ॥ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪನಪ್ರತಿಮವೀರ ನರಪತಿ ಬಿರುದಂತೆಂಬರ ಗಂಡ ಶಂಖ ಚಕ್ರ ಮಕರ ಮರ್ತ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಅಂಕುಶ ಕುಠಾರ ಸಿಂಹಾ ಮೊದಲಾದ ನಾನಾಬಿರುದಾಂಕಿತರಾದ । ಯಾದವಕುಲತಿಲಕರಾದ। ಆತ್ರೇಯಸಗೋತ್ರ । ಆಶ್ವಾಲಯನ ಸೂತ್ರ । ಋಕ್ಶಾಖಾಧ್ಯಾಯಗಳಾದ। ಮಹೀಶೂರ ರಾಜವಡಯರೈಯ್ಯನವರ ಪೌತ್ರರಾದ ನರಸರಾಜ ಭೂಪಾಲಕರ ಪುತ್ರರಾದ। ಚಾಮರಾಜವಡಯರೈಯ್ಯನವರು ಸ್ಕಂದಪುರಾಣೋಕ್ತವಾದ । ಬ್ರಹ್ಮೋತ್ತರಖಂಡವಂನ್ನು ಕಂನಡಿಶಿದಂಥಾದ್ದಕ್ಕೆ ಶುಭಮಸ್ತು ಶ್ರೀ ॥

ವೃತ್ತಗ್ರಂಥ ॥ ಮಾಳಾ ಮಾಕ್ತಿಕ ಸಂನಿಭಾ ಪಟುಜಟಾವಲ್ಲೀಷು ಮಲ್ಲೀನಿಭಾಃ ।
ಕಂಠೇ ಹರರಿ ಹಾರಿಣೋಂಜಲಿಪುಟ ಫುಲ್ಲ ಪ್ರಸೂನಪ್ರಭಾಃ ॥
ಭೂಮಾ ಪಾತೀತ ಪುಷ್ಪವೃಷ್ಟಿಸದೃಶಾಸ್ತಾರಾ ವಿಭಾಷ್ಯಾಂಬರೇ ।
ಶಂಭೋರ್ವಃ ಶುಭದಾ ಭವಂತು ಸಟತೋ ಗಂಗಾಪಯೋ ಬಿಂದವಃ ॥

ಯಿಾ ಪ್ರಕಾರದಲ್ಲಿ ನಾಟ್ಯವನು ಆಡುತ್ತಂ ಯಿದ್ದಂಥಾ ಪರಮೇಶ್ವರನ ಜಟಾಮಕುಟದಲ್ಲಿ ಯಿದ್ದ ಗಂಗಾದೇವಿಯ ವುದಕಬಿಂದುಗಳು ನಿಮಗೆ ಮಂಗಳವಂ ಕೊಟ್ಟು ರಕ್ಷಿಸಲಿ ಯೆಂಬದೀಗ ಆಶೀರ್ವಾದ.

ಅಂತ್ಯ : ಭವರೋಗಕ್ಕೆ ದಿವ್ಯೌಷಧಮಾದಂಥಾದ್ದು । ಯಿಾ ಕಥೆಯನು ಯಾರು ಹೇಳುವರೋ । ಯಾರು ಕೇಳುವರೋ । ಅವರೆಲ್ಲರೂ ಧನ್ಯರಾಗಿ । ಶಿವಸಾಯುಜ್ಯವಂ ಪಡೆವರೆಂದ್ದು । ಸೂತ ಪೌರಾಣೀಕನೂ । ಶೌನಕಾದಿ ಮುನಿಗಳಿಗೆ । ನಿರೂಪಿಶಿದನೂ ॥ ಯಿದು ಶ್ರೀಮದ್ರಾಜಾಧಿರಾಜ ಪರಮೇಶ್ವರ ಚಾಮರಾಜವಡಯ್ಯರಯ್ಯನವರು । ಕರ್ನಾಟಕ ಭಾಷೆಯಿಂದ್ದಾ । ವಿರಚಿಶಿ

ದಂಥ್ಥಾ । ಸ್ಕಂಧಪುರಾಣೋಕ್ತವಾದ ಬ್ರಹ್ಮೋತ್ತರ ಖಂಡದಲ್ಲಿ । ಪುರಾಣ ಶ್ರವಣ ಮಹಿಮೆಯ ಹೇಳ್ದಲ್ಲಿಗೆ । ಅಧ್ಯಾಯ ೨೨ ಕ್ಕಂ ಮಂಗಳಮಹಾ ಶ್ರೀ

ವಿಷಯ : ಈಶ್ವರನ ಮಹಿಮೆ.

ವಿಶೇಷ : ಸುಂದರ ಬರಹ. ೧–೪೨ ರವರೆಗೆ ದಪ್ಪನಾದ ಅಕ್ಷರ. ಮುಂದೆ ಸಣ್ಣಗಿರುವ ಅಕ್ಷರದಿಂದ ಬರೆದಿದೆ.

1081

ಕೆ.ಎ. ೨೬೩ **ಬ್ರಹ್ಮೋತ್ತರಖಂಡ** ಗದ್ಯ

೧೧″ × ೫.೩″ ಚಾಮರಾಜ ೧೬೨೦

೧–೧೫೭ ಪತ್ರ ೧೨ ಪಂಕ್ತಿ ೨೮ ಅಕ್ಷರ

ಆದಿ : ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪನಪ್ರತಿಮ ವೀರ ನರಪತಿ । ಬಿರುದೆಂತೆಂಬರ ಗಂಡ ಶಂಖ ಚಕ್ರ ಮಕರ ಮತ್ಸ್ಯ ಶರಭ ಗಾಳ್ವ ಗಂಡಭೇರುಂಡ ಧರಣೀ ವರಾಹ ಹನುಮದ್ಗರುಡ ಅಂಕುಶ ಕುಠಾರ ಸಿಂಹ ಮೊದಲಾದ ನಾನಾ ಬಿರುದಾಂಕಿತರಾದ ಯಾದವಕುಲತಿಲಕರಾದ ಆತ್ರೆಯ ಗೋತ್ರದ ಆಶ್ವಲಾಯನ ಸೂತ್ರದ ಋಕ್ಯಾಖಾಧ್ಯಾಯಿಗಳಾದ ಮಹಿಶೂರವಡೆಯರ್ರೈಯ್ಯನವರ ಪೌತ್ರರಾದ ನರಸಭೂಪಾಲಕರ ಪುತ್ರರಾದ ಚಾಮರಾಜಯರ್ರೈಯ್ಯನವರ್‍ರು । ಸ್ಕಾಂಧಪುರಾಣೋಕ್ತವಾದ ಬ್ರಹ್ಮಸಂಹಿತೆಯಲ್ಲಿ ಯಿರುವವಂಥಾ ಬ್ರಂಹೋತ್ತರ ಕಾಂಡವಂನ್ನೂ ಕಂನ್ನಡಿಸಿದಂಥ್ಥಾದ್ದಕ್ಕೆ । ವ್ರತಗ್ರಂಥ । ಮೌಳಾ ಮೌಕ್ತಿಕ ಸಂನಿಭಾಃ ಪಟುಜಟಾವಲ್ಲೀಷು ಮಲ್ಲಿ ನಿಭಾ

ಕಂಠೇ ಹರವಿಲಾಸ ಮಂಜವೀ ಫುಲ್ಲಪ್ರಸೂನಪ್ರಭಾಃ ॥
ಭೂಮೌ ಪಾತಿತ ಪುಷ್ಪವೃಷ್ಟಿಸದೃಶಸ್ತಾರಾನಿಭಾಷ್ಯಾಂಬರೇ ।
ಶಂಭೋರ್ವ್ಃ ಶುಭದಾ ಭವಂತು ನಟತೋ ಗಂಗಾಪಯೋಬಿಂದವಃ ॥

ಯಿಾ ಪ್ರಕಾರದಲ್ಲಿ ನಾಟ್ಯವನ್ನು ಆಡುತ್ತಾ ಯಿದ್ದಂಥಾ ಪರಮೇಶ್ವರನ ಜಟಾ ಮಕುಟದಲ್ಲಿರ್ದ ಗಂಗಾದೇವಿಯ ಉದಕಬಿಂದುಗಳು ನಿಮಗೆ ಮಂಗಳವ ಕೊಟ್ಟು ರಕ್ಷಿಸಲಿಯೆಂಬುದೀಗ ಆಶೀರ್ವಾದ ॥

ಅಂತ್ಯ : ಭವರೋಗಕ್ಕೆ ಔಷಧನಾದಂಥಾದು । ಯಿಾ ಕಥೆಯನು ಆರು ಹೇಳುವರೊ ಆರು ಕೇಳುವರೊ ಆರು ಬರ್‍ರೆಯುವರೊ ಅವರೆಲ್ಲರೂ ಧನ್ಯರಾಗಿ ಶಿವ ಸಾಯುಜ್ಯವನು ಪಡವರೆಂದು ಸೂತಪುರಾಣಿಕರು ಶೌನಕಾದಿ ಮುನಿಗಳಿಗೆ ನಿರೂಪಿಶಿದರ್‍ರೂ ॥ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ x x x x x ಚಾಮರಾಜವಡೆಯರ್ರೈಯ್ಯನವರ್‍ರು ಸ್ಕಂಧಪುರಾಣೋಕ್ತವಾದ ಬ್ರಂಹ್ಮ ಸಂಹಿತೆಯಲ್ಲಿ ಬ್ರಂಹ್ಮೋತ್ತರ ಕಾಂಡವಂನ್ನು ಕರ್ನಾಟಕಭಾಷಾಕೃತ ಟೀಕಿ

ನಿಂದಾ ಪುರಾಣಶ್ರವಣ ಮಹಿಮೆಯಂ ಪೇಳ್ದಲ್ಲಿಗೆ ಅಧ್ಯಾಯ ೨೨ಕ್ಕಂ ಮಂಗಳ ಮಹಾಶ್ರೀ ॥ ಬ್ರಂಹ್ಮೋತ್ತರಕಾಂಡ ಸಮಾಪ್ತಾ ॥

ವಿಷಯ : ಈಶ್ವರನ ಮಹಿಮೆ.

ವಿಶೇಷ : ಮೋಡಿ ಅಕ್ಷರ.

1082

ಕೆ. ೪೨೭	**ಬ್ರಹ್ಮೋತ್ತರ ಖಂಡಾರ್ಥ**	ಗದ್ಯ
೧೪.೭" × ೧.೯"	ಏಕಾಮ್ರದೀಕ್ಷಿತ	ಸು ೧೭೦೦
೧–೭೬ ಪತ್ರ	೮ ಪಂಕ್ತಿ	೮೨ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ॥ ಪೂರ್ವದಲ್ಲಿ ಬ್ರಂಹ್ಮಕ್ಷೇತ್ರವಾದ ಪ್ರಯೋಗದಲ್ಲಿ........ದವಾದ ಪಾಪಹರವಾದ ವಿಷ್ಣುಕಥೆಯಂ ನಿಂನ್ನ ಉಪದೇಶದಿಂದ ಕೇಳ್ವೆವು, ಯಿಾಗ ಶಿವಮುಂತ್ರಂಗ್ಗಳ ಮೈಮೆ ಶಿವವೃತಂಗಳ ಮಹಾತ್ಮೆ ಶಿವಪೂಜೆಯ ಫಲ ಶಿವಪೂಜೆಯ ವಿಧಾನಮುಂ ನಮಗೆ ನಿರವಿಸು ಕೇಳಿ ಕೃತಾರ್ಥರಹೆವು.

ಅಂತ್ಯ : ಯಿಂತೀ ಸಕಲ ಸುರಾಸುರ ಕಿರೀಟತಟಘಟಿತ ಮಾಣಿಕ್ಯಪುಂಜರಂಜಿತ ಚಾರವಿಂದಾಸಾಮಂದಿ ವೀರಭದ್ರಲೀಲಾವತಾರಾ ಮುಂಮ್ಮಡಿ................ ಪಾಲನುಮತದಿಂ ಯೇಕಾಂಬ್ರದೀಕ್ಷಿತಂ ವಿರಚಿಸಿದ ಬ್ರಹ್ಮೋತ್ತರಾಖಂಡಾರ್ಥ ವಿವರಣದೊಳ್ ಪುರಾಣಶ್ರವಣಮಹಾತ್ಮೆಯಂ ಪೇಳ್ದುದೂ ಯಿಪ್ಪತ್ತ ಮೂರನೇ ಅಧ್ಯಾಯಾ ಯಿಂತೀ ಕಂನ್ನಡಭಾಷೆಯಿಂ ವಿರಚಿಸಿದ ಬ್ರಹ್ಮೋತ್ತರ ಖಂಡಾರ್ಥ ವಿವರಣ........... ಪುರಾಣಶ್ರವಣ ಮಹಾತ್ಮೆಯಂ ಪೇಳ್ದುದೂ ಯಿಪ್ಪತ್ತಮೂರನೇ ಅಧ್ಯಾಯಕ್ಕೆ ಮಂಗಳಮಹಾಶ್ರೀ.

ಸ್ವಭಾನು ಸಂವತ್ಸರದ ಅಧಿಕ ಶ್ರಾವಣ ಬ ೯ ಸೋಮವಾರ ಉದಯದಲ್ಲಿ.....

ವಿಷಯ : ಈಶ್ವರನ ಮಹಿಮೆ.

ವಿಶೇಷ : ಆದಿ–ಅಂತ್ಯದಲ್ಲಿ ಕೆಲವು ಗರಿಗಳು ತ್ರುಟಿತ. ಆದಿಯಲ್ಲಿ ೪ ಚಿತ್ರಗಳಿವೆ.

1083

ಕೆ.ಎ. ೧೪೮	**ಭಕ್ತವಿಜಯ**	ಗದ್ಯ
೧೧.೩" × ೭.೨"	?	?
೪೮೯ ಪತ್ರ	೨೪ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಭಕ್ತ ವಿಜಯ ಪ್ರಥಮಾಧ್ಯಾಯ—ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ ॥

ಜಯಜಯ ಭೀಮಾತೀತ ವಿಹಾರನೆ। ಭಕ್ತವತ್ಸಲನೆ ಕೃಪಾಸಾಗರನೆ।
ಚರಾಚರಗಳವಳಗಾವ್ಯಾಪಿಶೀ।ಸರ್ವಾತೀತನಾಗಿಯು ಬ್ಯಾರೆ ಇರುವೆ ನೀನು॥೧॥

x x x x

ಭಕ್ತವಿಜಯಗ್ರಂಥವನ್ನಾರಂಭಿಸಿ ಇರುವೆನು। ಇದಂ ನೀವೆಲ್ಲರು ಸಿದ್ಧಿಯಂ ಹೊಂದಿಸಬೇಕು। ಬಡವನ ಮನೆಯಲ್ಲಿ ಪ್ರಸ್ತವಂ ಆರಂಭಿಸಲು। ಹ್ಯಾಗೆ ಶ್ರೀಮಂತರು ಸಾಹಿತ್ಯವಂ ಮಾಡುವರೋ ॥ ೬ ॥

ಅಂತ್ಯ : ಬ್ಯಾಸರವಿಲ್ಲದೆ ವಿಶ್ವಾಸವಂನ ಹಿಡದು ನಿಂನ ದಾಸರ ಸ್ತುತಿಯಂನ್ನೆ ಮಾಡುವೆನೆಂದೆ ನಿರಂತರದಲ್ಲು ಅಪೇಕ್ಷಿಸುತ್ತಿರುವೆನು ॥ ೨೨೧ ॥ ಸ್ವಸ್ತಿ ಶ್ರೀ ಭಕ್ತಿವಿಜಯ ಗ್ರಂಥವು ಶ್ರವಣಮಾತ್ರದಿಂದಲೆ ಮನೋರಥವಂ ಪೂರೈಸುವದು। ಭಾವಿಕರಾದ ಪ್ರೇಮಳ ಭಕ್ತರು ಕೇಳತಕ್ಕದ್ದು ಐವತ್ತೇಳನೆ ಅಧ್ಯಾಯವಂ ರ ಸಾಲವಿದು ॥ ೨೨೨ ॥ ಶ್ರೀ ಪಾಂಡುರಂಗಾರ್ಪಣಮಸ್ತು ॥

ವಿಷಯ : ಜಯದೇವ, ತುಳಸೀದಾಸ, ಕಬೀರ ಮೊದಲಾದ ಭಕ್ತರ ಕಥೆ.

ವಿಶೇಷ : ಸ್ಫುಟ ಬರಹ, ಪತ್ರಗಳಿಗೆ ಕ್ರಮಾಂಕವಿಲ್ಲ.

1084

ಕೆ. ೬೩೯/೧	**ಭಕ್ತಾಧಿಕ್ಯ (ಸಟೀಕು)**	ಶ್ಲೋಕ, ಟೀಕು
೮.೫″ × ೧.೯″	?	?
೧–೩ ಪತ್ರ	೯ ಪಂಕ್ತಿ	೨೭ ಅಕ್ಷರ

ಆದಿ : ಶ್ರೀ ಗುರುವೇ ಗತಿ ಭಕ್ತಾಧಿಕ್ಯ ಬರವುದಕೆ ಶುಭಮಸ್ತು ॥ ಶಾರ್ದೂಲವೃತು॥
ಶ್ರೀ ನಂದೀಶ್ವರ ಭೃಂಗಿವೀರವೃಷಭಸ್ಕಂಧಾಸ್ತ್ರಧಾ ಶೈಲಜಾ
ಸ್ಫೂರ್ಜದ್ದಾರುಕ ರೇಣುಕಾದಿಕ ಗಣಾಸ್ಸಾನಂದ ಕುಂಭೋದ್ಭವಾ।
ಪೂರ್ಣಾನಂದ ಭ್ರುಂಗೋಪಮುಂನ್ಯ ಕಣಭುಗ್ಬಾ್ರಜದ್ದಧೀಚ್ಯಾದಯೋ
ಜೀಯಾಸುಸ್ಫುಟ ವೀರಶೈವ ನಿಯುತಾಃ ಪ್ರಾಂಚಃ ಪರಂ ಪಂಡಿತಾಃ ॥ ೧ ॥
ಸ್ಫುಟ ವೀರಶೈವನಿಯುತಾಃ।ಸ್ಫುಟ। ವ್ಯಕ್ತವಾದ। ವೀರಶೈವ। ವೀರಶೈವದಿಂದೆ। ನಿಯುತಾಃ। ಕುಡಲುಪಟಂಥಾ। ಪ್ರಾಂಚಃ। ಪೂರ್ವಿಕರಾದಂಥ। x x x x ಜೀಯಾಸುಃ। ಸರ್ವೋತ್ಕರ್ಷರಾಗಲಿ। ಜಿ ಜಯ ಇತಿ ಧಾತುಃ ॥

ಅಂತ್ಯ : ಭಿಂದಂತ್ಯೇವ ಕುಲಾಚಲಾ್ ಜಲನಿಧೀ್ ಕ್ಷಿಪ್ರಂ ಪಿಬಂತ್ಯಂಬರಂ
ವ್ಯತ್ಯಾಸಂ ಗಮಯಂತಿ ಭೂತಳಮಪಿ ಪ್ರಾಗ್ಭರ್ಗ ಭೃತಾ ಇಮೇ।
ಬ್ರಹ್ಮೇಂದ್ರಾ್ರದ್ಯಮೃತಾಂಧಸೋಪಿ ಚ ತೃಣೀಕುರ್ವಂತಿ ಕಿಂ ದುಷ್ಕರಂ
ತೇಷಾಮಿತ್ಯವದತ್ಪುರಾಣಮಿಹ ತೇ ಭಕ್ತಾಃ ಪ್ರಸೀದಂತು ಮೇ ॥ ೩ ॥
ಟೀಕು ॥ ಯೇ ಇಮೇ ಭರ್ಗ ಬೃತ್ಯಾಃ। ಯಾವ ಇ಼ ಶಿವಭಕ್ತರು।

ಕುಲಾಚಲರ್ಾ । ಸೀಮಾಚಲಂಗಳಂನು । x x x x ತೃಣೀಕೃತಂ ಬಂಹ್ಮ ಪುರಂದರಾಣಾಂ ಕಿಂ ದುಷ್ಕರಂ ಶಂಕರ ಕಿಂಕರಾಣಾಂ ।

ವಿಷಯ : ಶಿವಭಕ್ತರ ಮಹಿಮೆ

ವಿಶೇಷ : ಕೇವಲ ೩ ವೃತ್ತಗಳು ಮಾತ್ರ ಟೀಕು ಸಹಿತವಾಗಿವೆ. ಅಸಮಗ್ರ. ಇದರೊಂದಿಗೆ—ಮಧುರಮಂದಾರ (ಗುರುಭಕ್ತಚಾರಿತ್ರಾ) ಕಲ್ಯಾಲಾವೃತ್ತ ಇತ್ಯಾದಿ ೫ ಗ್ರಂಥಗಳಿವೆ.

1085

ಕೆ. ಬಿ.೩೨೭/೧	**ಭಕ್ತಾಧಿಕ್ಯ (ಸಟೀಕು)**	ಶ್ಲೋಕ, ಟೀಕು
೭.೫″ × ೫.೭″	?	?
೧–೪೮ ಪತ್ರ	೧೮ ಪಂಕ್ತಿ	೨೧ ಅಕ್ಷರ

ಆದಿ : ಶ್ರೀ ಗುರುವೆ ಭಕ್ತಾಧಿಕ್ಯರತ್ನಾವಳಿ ಬರೆಯುವುದಕ್ಕೆ ನಿರ್ವಿಘ್ನಮಸ್ತು ॥
ಶ್ರೀ ಗಣೇಶಾಯ ॥
ಶ್ರೀ ನಂದೀಶ್ವರ ಭೃಂಗಿವೀರ ವೃಷಭ ಸ್ಕಂಧಸ್ತಥಾ ಶೈಲಜಃ
ಸ್ಫೂರ್ಜದ್ದಾರುಕರೇಣುಕಾದಿಕಸ್ಯಾನಂದ ಕುಂಭೋದ್ಭವಾ ।
ಪೂರ್ಣಾನಂದ ಭೃಗೂಪಮಂಸ್ಯ ಕಣ ಭೃಗ್ಬಾ್ರಜದ್ದಧೀಚಾದ್ಯಯೋ
ಜೀಯ್ಯಾ ಸುಸ್ಫುಟ ವೀರಶೈವನಿಯುತಾಃ ಪ್ರಾಂಚಃ ಪರಂ ಪಂಡಿತಾಃ ॥
ಟೀಕು ॥ ಸ್ಫೂಟ ವೀರಶೈಯ್ವನಿಯುತಾಃ । ಸ್ಫೂಟ ವ್ಯಕ್ತವಾದ । ವೀರಶೈವ । ವೀರಶೈವದಲ್ಲಿ । ನಿಯುತಃ । ಕೂಡಲು ಪಟಂಥಾ ।

ಅಂತ್ಯ : ಯಸ್ಮಾದ್ಯಕ್ತ ಮಹಾತ್ಮ ಮಹಾನಿತರಾಂ ಕಾರ್ತ್ಸ್ನೇನ ಜಾಬಾಲುಕ ಮುಕ್ತಿಸ್ತೇನ ಭವೇದಿತಿ ಸ್ಮೃತಿವಚಃ ಶಂಖಾದೀನಾಂ ಚಿರ್ತ್ಯಪುನಃ ।
ತದ್ವಾಕ್ಯಸ್ಯ ವಿರೋಧಿ ದುರ್ಬಲಕಾ ಯಾಸ್ಯದ್ವಾದನಿಯಾಂಬುದೈಃ
ಶಿಷ್ಟೈರ್ವಸ ಮುಕ್ಯೈರನುಷ್ಠಿತಮಿದಂ ತತ್ಕಾರಣಾಂದ್ಧಾರಣಂ
ಟೀಕು ॥ ಯಸ್ಮಾತ್ । ಯಾವುದಾನೊಂದು ಕಾರಣದೆಶೆಯಿಂದ । x x x x x ಧಾರಣಂ । ಧರಿಸಲು ತಕ್ಕಂತಾದ್ದು ॥ ೯೪ ॥
ಶ್ಲೋಕ ॥ ಸಾಕ್ಷಾದ್ವೇದಶಿರೋ ನಿರುಪಿತಮಿದಂ ರುದ್ರಾಕ್ಷಮಾವಾವಲೆ ।
ಮ್ಮಾಹಾತ್ಮ್ಯಂ ಪರಮೋಕ್ಷಕಾರಣತಯಾ ಸೋದರ್ಯತೆ ಗ್ಣಾ್ಯನಿಭಿಃ
ಕಾಷ್ಠಾದಿ ಪ್ರಭವಾನ್ಮಣಿನಪಿ ॥ ಶ್ರೀ

ವಿಷಯ : ಶಿವಭಕ್ತರ ಮಹಿಮೆ.

ವಿಶೇಷ : ಇದೇ ಪುಸ್ತಕದಲ್ಲಿ ಅನುಭವರಸಾಯನ ಮತ್ತು ಗೌರಿ ಸಿದ್ಧೇಶ್ವರ ಸ್ವಾಮಿಯವರ ತ್ರಿವಿಧಿಯೂ ಇವೆ. ತೆಳುವು ಕಾಗದ. ೩೬,೩೭ ನೇ ಪತ್ರಗಳಲ್ಲಿ ಒಂದೇ ಕಡೆ ಬರವಣಿಗೆಯಿದೆ.

1086

ಕೆ. ೩೬೯/೫ **ಭಕ್ತಿಬಿನ್ನಹ ರಗಳೆ** ರಗಳೆ
೮" × ೧.೮" ಶಂಕರ ದೇವ ಸು ೧೬೨೦
೧೮–೨೫ ಪತ್ರ ೯ ಪಂಕ್ತಿ ೪೧ ಅಕ್ಷರ

ಆದಿ : ವೃತ್ತ—ಹಿಂದೆ ಸಹಸ್ರ ಲಕ್ಷ ಶತಕೋಟಿ ಭವಾಂತರ ಹೀನ ಯೋಗಿಯೋ
ಳ್ಬಂದೆನು ಭಾಗ್ಯದಿಂದೊರಕಿದುದೆಂತಕೇಕೆ ಮಾನವ ಜವವಿಂನು ನಾ
ಮುಂದಿದರೊಂದ ಸದ್ಗತಿಯನ್ನೈದೆವೆನೊ ಕಡೆಗೆಯ್ದುದಿರ್ಪೆನೋ
ಯೆಂದೆನುತಾಗಾಳುಂ ಮರುತ ಚಿಂತಿಸುತ್ತೈದೆನೆ ತಂದೆ ಶಂಕರಾ ॥ ೧ ॥
ರಗಳೆ ॥ ಶ್ರೀಮನ್ಮಹಾಪ್ರಮುಡರಾಯ ನಿರುಪಮ ಕಾಯ
ನಾಮ ರೂಪಕ್ರಿಯಾ ದೂರ ವಿರಹಿತ ಮಾಯಾ ॥ ೧ ॥

ಅಂತ್ಯ : ಶರುಣು ಶರಣಾರ್ತ್ತಿ ಶಂಕರಲಿಂಗ
ಶರಣಾರ್ತ್ತಿ ಶರಣಾರ್ತ್ತಿ ಶರಣು ಶಂಕರಲಿಂಗ ॥ ೧೩೯ ॥
ಕಂದ ॥ ಅಗಜೇಶ ನಿಂಮ ಪಾದವ
ಮಿಗೆ ಸಾರುವೆನೆಂಬ ಸರ್ವಜೀವರ ಮನಮಂ
ತೆಗೆದು ಕೊಂಡಿಪ ಮಾಯೆಯ
ತಗಹಂ ಬಿಡಿಸಾ ಪ್ರಸಂನ ಶಂಕರಲಿಂಗಾ ॥ ೧ ॥
ಭಕ್ತಿಬಿಂನಹದ ರಗಳೆ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ.

ವಿಷಯ : ಭಕ್ತಿ ಮತ್ತು ವೈರಾಗ್ಯದ ವರ್ಣನೆ.

ವಿಶೇಷ : ಗ್ರಂಥವು ತ್ರುಟಿತವಾಗಿದೆ. ಈ ಕಟ್ಟನಲ್ಲಿ ಭಕ್ತಿಬಿನ್ನಹ ರಗಳೆಯೊಂದಿಗೆ ಮಿಶ್ರಸ್ತೋತ್ರ, ಗುರು, ಷಡಕ್ಷರಿ, ಬಸವ, ಮನೋವಿಕಾರ ರಗಳೆಗಳೂ; ಬಸವಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ; ಶಂಕರದೇವ, ಮಂತ್ರಮಹತ್ವ, ಮರುಳುದೇವ, ಪ್ರಭುಲಿಂಗ ಕಂದಗಳೂ; ಅಕ್ಷರಮಾಲಿಕೆ ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ; ಶತಕತ್ರಯವೂ; ಮಲ್ಹಣ ಸ್ತೋತ್ರವೂ ಇವೆ.

1087

ಕೆ.ಬಿ. ೨೧೮ **ಭಕ್ತಿಮಾರ್ಗ ಸರೋವರ** ಹಾಡು
೭.೫" × ೬.೨" ಶಾಲ್ಯದ ಕೃಷ್ಣರಾಜ ೧೭೪೮
೨೦೧–೩೭೮ ಪತ್ರ ೧೧ ಪಂಕ್ತಿ ೨೧ ಅಕ್ಷರ

ಆದಿ : ಶ್ರೀಃ ॥ ಭಕ್ತಿಮಾರ್ಗ ಸರೋವರ ಬರೆಯುವದಕ್ಕೆ ಶುಭಮಸ್ತು ॥
ರಾಗ ॥ ರೇಗುಪ್ತಿ ॥ ಶಂಕರಾಯನ್ನಿಶಾಶ್ವತ ಫಲದನ ।

ಶಂಕರಾಯನ್ನಿರೋ || ಪಂಕಜಾರಿಯ ಶಿರೋಭಾಗದಿ ತಾಳ್ದನ ಶಂಕರಾ ಯನ್ನಿರೋ ||ಪಲ್ಲ||
ಸೀಗದರ್ಪಗೆಯೊಣ್ಮನಲಿ ಕುಳಿತಿರ್ಪನಾ ಶಂಕರಾಯನ್ನಿರೋ | ಪೂಗಣೆಯ ನರಸದಿಳಿವಿಲ್ಲದಾತನೇ | ಶಂಕರಾಯನ್ನಿರೋ | ಆಗಮಂಗಳೆ :ವಾರುವಗಳಾಗಿ ಮೆರೆವನ | ಶಂಕರಾ ಭೋಗೀಶ್ವರರೇ ಮೈಯ್ಯ ಭೂಷಣವೆನಿಪನ| ಶಂಕ ||೧||

ಅಂತ್ಯ : ಚಿಜ್ಜಳವಿಂಟೆ ವಾಸನಾವಿಷಯಗಳೆಂಬ| ಕಜ್ಜಲವ ಮಧುಬಿಂಬವ ಚಲ್ಲುತ| ಹಜ್ಜೆಹಜ್ಜೆಗೆ ಸ್ವಾತ್ಮಾರಸವೇರಿ ತಲೆಗೆ ನಿರ್ಲಜ್ಜೆಯ ಜಗ್ಗಿನ ಶಿವಯೋಗಿ ಗಜ ಗಳಿಗೆ || ೩ || ಸಂಸಾರವೆಂಬಾನಲವ ಕಿತ್ತು ವಿಷಯದ ಸಂಸರಣದ ನಿಗಳವ ಮುರಿದು ಸಂಸಾರಗತಿಯಲ್ಲಿ ಗೌರೀವಲ್ಲಭ ಪರಮ | ಹಂಸನ ಹೊಂದುವ ಶಿವ ಯೋಗಿಗಜಗಳಿಗೆ ಮಂಗಳಂ ಜಯ ಮಂಗಳಂ ಶುಭ ಮಂಗಳಂ ಶ್ರೀ

ವಿಷಯ : ಭಕ್ತಿಭಾವದ ಕೀರ್ತನೆಗಳು.

ವಿಶೇಷ : ನೋಡಿ ಅಕ್ಷರ.

1088

ಕೆ. ೫೨೦	**ಭಕ್ತಿರಸದ ಸೋನೆ**	ಸಾಂಗತ್ಯ
೧೦.೨" × ೨.೧"	ಪಂಚಯ್ಯ	ಸು ೧೬೫೦
೧–೪೬ ಪತ್ರ	೧೧ ಪಂಕ್ತಿ	೩೮ ಅಕ್ಷರ

ಆದಿ : ಭಕ್ತಿರಸದ ಸೋನೆಯು ಬರವುದಕ್ಕೆ ಸುಬಮಸ್ತು |
ಪರಮೇಶ್ವರನು ತಂನ ವಲಭೆ ಪಾರ್ವತಿಯೊಡನೆ ಪೇಳಿದ ನಾನುಸುರುವೆ ಲಾಲಿಸಿ ಸಿವ ಭಕ್ತಜನರೂ ||
ಶ್ರೀಗುರು ಪಂಚಾಕ್ಷರರೂಪ ಪರಮಾತ್ಮ
ನಾಗಭೂಷಣನಾಲಾಕ್ಷಾ
ನ್ನಾಘ ಚರ್ಮಂಬರ ನಗಧರದ್ರುಗುಪಾದ
ಸಾಗರಸುತನೇತ್ರ ಶರಣು || ೧ ||

ಸಿತಕಂಠನಂ ನೊಜಿಸತಿ ಪಾರ್ವತಿಗೆ ಉಂ
ನತ ಬಕ್ತಿರಸದ ಸೋನೆಯನೂ
ನುತಿಸಿ ಪೇಳಿದ ಚೆಲ್ವಕತ ರಸವನು ಸಿವ
ನತಿಸಯ ಭಕ್ತರು ಕೇಳಿ || ೨ ||

x x x x

ಭಕ್ತಿರಸದ ಸೋನೆ ಲಕ್ಷಣವೆಂತೆನೆ
ಮೌಕ್ತಿಕಮಣಿಗಳನೊದವಿ
ಮುಕ್ತಿಯಿಂದಲು ಸ್ವರಗೈದೊಲು ಪಂಚೈಯ್ಯ
ಮುಕ್ತಿಯ ಪೇಳಿದೆನೂ || ೨೮ ||

ಅಂತ್ಯ : ಯಿಂದೆಂಮ ಬಡತನ ಹೊಂದಲು ಯಡಹೂತ
ಮುಂದುಗಾಣರು ಕೇಳ್ಮಗನೇ
ಯೆಂದು ಪೇಳಲು ಕೊಂ........
....ಸಿ ಬರದರೋಲೆಯನು || ೭೬ ||
ಮರುಗದಿರೆಲೆ ತಾಯೆ ಸುರನೈರಾವತವನು
ತುರಿಯಾದಿ ತಂದು ನೋಂಪಿಯನೂ
ನೆರೆ ನೋನಿಸುವೆನೆಂದು ನರದನುವನು.......
....

ವಿಷಯ : ಶರಣರ ಭಕ್ತಿಭಾವಗಳ ಕಥೆ.

ವಿಶೇಷ : ಅಸಮಗ್ರ, ೩೧ರಿಂದ ಮುಂದಿನ ಪತ್ರಗಳು ಬಹು ತ್ರುಟಿತವಾಗಿವೆ. ಶಕಟ ರೇಫದ ಪ್ರಯೋಗವಿದೆ.

1089

ಕೆ.೫೮೮	**ಭಕ್ತಿರಸದ ಸೋನೆ**	ಸಾಂಗತ್ಯ
೧೪.೩" × ೨.೨"	ಪಂಚಯ್ಯ	ಸು. ೧೬೫೦
೧–೯೬ ಪತ್ರ	೧೦ ಪಂಕ್ತಿ	೭೮ ಅಕ್ಷರ

ಆದಿ : ಭಕ್ತಿರಸದ ಸೋನೆಯ ಬರವುದಕ್ಕೆ ಶುಭಮಸ್ತು ||
ಸೂಚನೆ|| ಪರಮೇಶ್ವರನು ತಂನ ವರಸತಿ ಪಾರ್ವತಿಗೆ ಭಕ್ತಿರಸಸೋನೆಯೆಂದು ಪೇಳ್ದನು
ಉಸುರುವೆನು ಲಾಲಿಪುದು ಭಕ್ತಜನರೂ ||
ಪದನೂ || ಶ್ರೀಗುರು ಪಂಚಾಕ್ಷರರೂಪ ಪರಮಾತ್ಮ
ನಾಗಭೂಷಣನನಲಕ್ಷಾ
ನಾಗಚಂಮ್ಮಾಂಬರನಗಧರ ದ್ರುಗಪಾದ
ನಾಗಸುತನೇತ್ರ ಶರಣೂ || ೧ ||

x x x x

ಭಕ್ತಿರಸದ ಸೋನೆ ಲಕ್ಷಣವೆಂತ್ರೆನೆ
ಮೌಕ್ತಿಕ ಮಣಿಗಳನೊದವಿ
ಯುಕ್ತಿಯಿಂದಲಿ ಸ್ವರಗ್ಟೆಯ್ದೊಲು ಪಂಚೈಯ್ಯ
ಮುಕ್ತಿಯ ಕತೆಯ ಪೇಳಿದೆನೂ || ೨೮ ||

ಅಂತ್ಯ : ಶರಣು ಗಂಗಾಧರ ಶರಣು ಗೌರೀಯ ಪ್ರಿಯ್ಯಾ
ಶರಣು ಶರಣರ ಬಾಂಧುವನೆ
ಶರಣು ರಕ್ಷ್ನಮಣಿ ಶರಣು ಪರುಷದ ಕಣಿ
ಶರಣು ನಿಂಮಣುಗನೆಂದೆಂದೂ || ೬೦ ||

ಅಂತು ಸಂಧಿ ೨೫ಕ್ಕಂ ಪದನು ೨೪೮೯ಕ್ಕಾಂ ಜಯ ಮಂಗಳಮಹಾಶ್ರೀ. ಶ್ರೀ ವೀರಭದ್ರಯಂ ನಮಃ || ಪಾರ್ಥಿವ ಸಂವತ್ಸರದ ಪಾಲ್ಗುಣ ಬ ೭ ಯು ಗುರುವಾರ ಮುಗಿದ ಭಕ್ತಿರಸದ ಸೋನೆ ಸಂಪೂರ್ನ ಮಂಗಳಮಹಾಶ್ರೀ. ಯಿಾ ಪ್ರತಿ ಬರಶಿದವರು ಬೆಂನವಳ್ಳಿ ವೀರಭದ್ರಪ್ಪಗೌಡರ್ರೂ ಯಿಾ ಪ್ರತಿ ಬರೆದಾತ ಪಂವಾರ ರಾಮೈಯ್ಯನು ಬರಕೊಟ್ಟ ಭಕ್ತಿರಸದ ಸೋನೆ ಪೊಸ್ತುಕಕ್ಕೆ ಆಚಂದ್ರಾರ್ಕಮಸ್ತು—ಶುಭಮಸ್ತು.

ವಿಷಯ : ಶರಣರ ಭಕ್ತಿಭಾವಗಳ ಕಥೆ.

ವಿಶೇಷ : ೨೧ನೇ ಪತ್ರ ಮುರಿದಿದೆ. ಕೆಲವು ಪತ್ರಗಳಲ್ಲಿ ಒಂದೇ ಕಡೆ ಬರವಣಿಗೆ ಇದೆ. ಬರವಣಿಗೆಯಿಲ್ಲದ ಪಾರ್ಶ್ವದಲ್ಲಿ ' ಯಿಾ ಪುಟ ತಿಳಿಪುಟ ' ಎಂದು ಬರೆದಿದೆ.

1090

ಕೆ. ಬಿ. ೪೬೪	**ಭಕ್ತಿರಸದ ಸೋನೆ**	ಸಾಂಗತ್ಯ
೮.೫" × ೬.೮"	ಪಂಚಯ್ಯ	ಸು ೧೬೫೦
೩–೧೧೪ ಪತ್ರ	೨೦ ಪಂಕ್ತಿ	೨೬ ಅಕ್ಷರ

ಆದಿ : .... ನೆಯನೂಸುರಿದನು || ೨೭ ||
ಭಕ್ತಿರಸದ ಸೋನೆ ಲಕ್ಷಾಣವೆಂತ್ತೆನೆ
ಮವುಕ್ತೀಕ ಮಣಿಗಾಳನೋದವೀ
ಮುಕ್ತಿಯಿಂದಲಿ ಸರಗೈದೋಲು ಪಂಚೈಯ್ಯಾ
ಮುಕ್ತೀಯ ಕಥೆಯ ಪೇಳಿದನೂ || ೨೮ ||

ಯಿಂನೀ ಕೃತಿಗೆ ಮೋದಲೊರ್ಸೀಪೆನೊಲಿದು ಭೂ
ಕಂನ್ನೆಯುಟ್ಟಂಬರದಂತ್ತೆ
ಬಿಂನ್ನವಿಲ್ಲದೆ ಸುತ್ತಾ ಮುಂನೀರು ಮುಸುಕಿಟ್ಟಾ
ದುಂನತಿಕೆಯ ನಾನೇನಂಬೆ || ೨೯ ||

ಅಂತ್ಯ : ಪರಮ ಸದ್ಗುರು ನಂಜೇಶ್ವರನ ಪ್ರೇಮದ ಶಿಷ್ಯ
ಕರುಣಿ ಪಂಚಾಕ್ಷರೈಯ್ಯಗಳಾ
ಕರಕಂಜದೊಳು ಮಂತ್ರವರದಿಂದ ಜನಿಸೀದಾ
ವರನಾಮವೆಂತ್ತೆಂದ್ಯನಲೂ || ೫೦ ||

ಸತಿಯು ವೀರಂಮ್ಮನ ಪತಿ ಬಸವ್ವೆಯ್ಯಾನಾ
ಸುತನು ಪಂಚ್ಛೈಯ್ಯನೆನಿಪಾನೂ
ಸಿತಕಂಠನೊರದೀ ಸಂನ್ನುತಿಸಿ ಪೇಳಿದ
ಸತ್ಕ್ರುತಿ ಮುಗಿದವು ಶರಣಾರ್‍ತ್ರಿ || ೫೧ ||
ಯಿಾಶನೊಪ್ಪಿದ ಬಸವೇಶನೊಪ್ಪಿದೀ ಸ
ರ್ವೇಶನೊಪ್ಪಿದ ಪಾರಶಿವನೂ
ಸಾಸಿರನಾಮನೊಪ್ಪಿದ ಗಾಣದೊಳು ಮಾ
ಹೇಶನೊಪ್ಪಿದನು ಶಂಕರನೂ || ೫೨ ||

ಪುಷ್ಪಗಂಧಿನಿ ಬಸವಪ್ಪೀನ ಕ್ರುತಿಕೆ ಚೆಲ್ವಾ
ಯಿಪ್ಪತ್ತೆದನೆಯ ಸಂದಿಗಳೂ
ವಪ್ಪವಾಗಿಯೇ ಮುಗಿದಿಪ್ಪಲ್ಲಿ ಶರಣರು
ಯಿಪ್ಪಲ್ಲಿ ಸಂಧಿ ಪೂರಯವೂ || ೫೩ ||
ಶರಣು ಮದ್ಗುರುವಿಗೆ ಶರಣು ಪ್ರಮಥರಿಗೆ
ಶರಣು ಜಂಗಮ ಮೊತ್ತ್ರಗಳಿಗೆ
ಶರಣು ಬಶವಾರ್‍ಯ್ಯ ಅಲ್ಲಮಪ್ರಭುರಾಯಾಗೆ
ಶರಣೆಂದು ಮುಗಿದೆ ಕಾವ್ಯವನೂ || ೫೪ ||

ಯಿದುವೆ ಭಕ್ತಿರಸದ ಕಾವ್ಯಾವ ಕೇಳ್ವರಿ
ಗಿದು ಅಮೃತಸೋನೆಗರದಂತ್ತೆ
ಯಿದನೋದಿ ಬರೆದು ಕೇಳ್ದಡೆ ಮುಕ್ತಿ ಸಾಮ್ರಾಜ್ಜ್ಯಶ್ರೀ
ಪದವೀವ ಪಾರ್ವತಿ ಕಾಂ || ೫೫ ||

ಅಂತು ಸಂಧಿ ೨೫ ಕ್ಕ ಅಕ್ಷರದಲ್ಲೂ ಯಿಪ್ಪತ್ತೈದಕ್ಕಂ ಪದನು ೨೪೧೪ ಕ್ಕಂ ಮಂಗಳ ಮಹಾ ಶ್ರೀ ಶ್ರೀ

ವಿಷಯ : ಬಸವಣ್ಣನ ಕಥೆ.

ವಿಶೇಷ: ಆರಂಭದ ಎರಡು ಪತ್ರಗಳಿಲ್ಲ. ೪೮ ನೆಯ ಕ್ರಮಾಂಕದ ಎರಡು ಪತ್ರಗಳಿವೆ. ಪತ್ರಗಳ ಅಂಚುಗಳನ್ನು ಹುಳು ತಿಂದಿದೆ. ಶಿಥಿಲ ಪ್ರತಿ.

1091

ಕೆ. ಎ. ೮೨	**ಭಕ್ತಿವಿಜಯ (ಭಾಗ ೧)**	ಗದ್ಯ
೧೨.೬" × ೭.೮"	?	?
೧–೧೭೨ ಪತ್ರ	೨೦ ಪಂಕ್ತಿ	೩೪ ಅಕ್ಷರ

ಆದಿ: ಶ್ರೀ ಭಕ್ತಿವಿಜಯವೆಂಬ ಗ್ರಂಥ—ಕನ್ನಡ ವಚನ ಕಾವ್ಯ ಶಿಲಾಯಂತ್ರದ ಪ್ರತಿಯ ಮೇಲೆ ಬರದಿದ್ದು ೧ ನೆಯ ಭಾಗ ಶ್ರೀ ಭಕ್ತಿ ವಿಜಯ ಗ್ರಂಥದ

ಸೂಚೀ ಪತ್ರದ ಅನುಕ್ರಮಣಿಕಾ ಭಕ್ತಿವಿಜಯುವೆಂಬ ಗ್ರಂಥವನ್ನು ಬರಿಯು ವದಕ್ಕೆ ಪ್ರಾರಂಭ : ಮೊದಲನೆ ಅಧ್ಯಾಯದಲ್ಲಿ—
ಉದ್ಧವ ಮೊದಲಾದ ನಿಜಭಕ್ತರಿಗೆ ಆಜ್ಞಾಪಿಸಿದ್ದು
ಶುಕ್ಲಾಮ್ಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ಸರ್ವ ವಿಘ್ನೋಪಶಾಂತಯೇ ||

x x x x

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ೧೮೦೫ ನೆ ಚಿತ್ರಭಾನು ಸಂವತ್ಸರದ ಜೇಷ್ಠ ಶುದ್ಧ ೩ ಸ್ಥಿರವಾರದುಲ್ಲು ಶ್ರೀಮನ್ಮಹಾ ಮಾತೂ ಶ್ರೀ ಸೀತಾವಿಲಾಸ ಸಂನಿಧಾನದ ಆಜ್ಞೆಯಿಂದ ಭಕ್ತಿವಿಜಯುವೆಂಬ ಗ್ರಂಥದೊಳ್ ಪೂರ್ವ ಪೀಠಿಕಾರಂಭಕ್ಕೆ ನಿರ್ವಿಘ್ನಮಸ್ತು ||
ಜಯ ಭೀಮಾತೀರ ವಿರಹನೆ ಭಕ್ತವತ್ಸಲನೆ ಕೃಪಾಸಾಗರನೆ ಚರಾಚರಂಗಳೊಳ್ ವ್ಯಾಪಕನಾಗಿದ್ದಾಗ್ಯೂ ಸರ್ವಾತೀತನಾದ ನಿನಗೋಸ್ಕರ ನಮಸ್ಕಾರವು||

ಅಂತ್ಯ : ಪೂರ್ವದೇಶದಲ್ಲಿ ಜಗನ್ನಾಥ ಈ ಮಹಾಸ್ಥಳಗಳಲ್ಲಿ ಚತುರ್ಭುಜದಿಂ ಯುಕ್ತನಾದ ಶ್ರೀ ಕೃಷ್ಣನು ಭಕ್ತಾಭೀಷ್ಟಗಳಂ ಕೊಡುತ್ತಲಿಧಾನೆ. ಅಂಥಾ ಸ್ವಾಮಿಯ ಚರಿತ್ರೆಯನ್ನೂ ಸ್ಥಿರಚಿತ್ತದಿಂದ ಲಾಲಿಸುವರಾಗಿ || ಮುಂದಿನ ಅಧ್ಯಾಯದಲ್ಲಿ ಅತಿ ಚಮತ್ಕಾರವಾದ ಅಕ್ರೂರನ ಅವತಾರವಾದ ಸುರದಾಸನ ಕಥೆ ಪೇಳಲ್ಪಡುವದು || ಆದರದಿಂ ಕೇಳುವರಾಗಿ x x x x x ಶ್ರೀ ಭಕ್ತಿ ವಿಜಯು ಗ್ರಂಥದೊಳ್ ಮೂವತ್ತೆರಡನೆಯ ಅಧ್ಯಾಯಕ್ಕೆ ಮಂಗಳ ಮಹಾ ಶ್ರೀ

ವಿಷಯ : ತುಳಸಿದಾಸ, ಜಯದೇವ, ಕಬೀರ ಮೊದಲಾದ ಭಕ್ತರ ಕಥೆ.

ವಿಶೇಷ : ಬರವಣಿಗೆ ಸುಂದರವಾಗಿದೆ. ಆದಿಯಲ್ಲಿ ಗ್ರಂಥದ ವಿಷಯಾನುಕ್ರಮಣಿಕೆ ಯಿದೆ. ಗ್ರಂಥದ ಮುಂದಿನ ಭಾಗವು ಕೆ.ಎ. ೮೩ (ಭಾಗ ೨) ರಲ್ಲಿದೆ.

1092

ಕೆ.ಎ. ೮೩	**ಭಕ್ತಿವಿಜಯು (ಭಾಗ ೨)**	ಗದ್ಯ
೧೨.೫" × ೭.೭"	?	?
೧–೧೫೪ ಪತ್ರ	೨೦ ಪಂಕ್ತಿ	೩೪ ಅಕ್ಷರ

ಆದಿ : ಭಕ್ತಿವಿಜಯು ಮೂವತ್ತುಮೂರನೇ ಅಧ್ಯಾಯ ಪ್ರಾರಂಭಃ
ಪಂಡರೀನಾಥನು ಸುರದಾಸನಿಗೆ ಮಥುರೆಯಲ್ಲಿ ದರ್ಶನವಂ ಕೊಟ್ಟದ್ದು.
ಕಲಿಯುಗದೊಳ್ ಸುರದಾಸನೆಂಬ ಭಕ್ತನ ಚರಿತ್ರೆಯು | ವಿಶೇಷವಾಗಿಯಿರುವದು | ಸಂತ ಸಜ್ಜನರು ಚಿತ್ತವಂನಿಟ್ಟು ಕೇಳಬೇಕೂ || ೧ || ದೇವರು ಶ್ರೀ ಕೃಷ್ಣಾವತಾರವಂ ಮಾಡಿ ದ್ವಾರಕಿಯಲ್ಲಿ ಯಿರುವಾಗ ಸತ್ಯಭಾಮೆಯು ಬಹಳ ಪ್ರೀತಿಪಾತ್ರಳಾಗಿ ಯಿರುತ್ತಿದ್ದಳು |

ಅಂತ್ಯ : ಅವರ ಚರಿತ್ರೆಯನ್ನು ಕೇಳಲು ವೈಕುಂಠನಾಯಕನು ಪ್ರಸನ್ನನಾಗುವನು ಯೆಂದನು । ಅದಂ ಕೇಳಿ ಸ್ವಲ್ಪ ಸಾಧನವನ್ನ ಹೇಳಿದರೆಂದು ದೇವತೆಗಳು ಆನಂದವಂಬಟ್ಟರು x x x x ಹಾಗೆಯೇ ಭಕ್ತಿವಿಜಯ ಗ್ರಂಥದಲ್ಲಿ ರುಕ್ಮಿಣೀಪತಿಯೇ ಬುಧ್ಧಿದಾತನು । ಆತನೇ ಗ್ರಂಥವನ್ನು ಬರೆಸಿದನು ॥ ಶಕಾಬ್ದ ೧೬೮೪ನೇ ಸಂದ ಚಿತ್ರಭಾನು ಸಂವತ್ಸರದ ವೈಶಾಖ ಬಹುಳ ದ್ವಾದಶಿಗೆ ಗ್ರಂಥವು ಸಿಧ್ಧಿಹೊಂದಿತು. x x x x ಬೇಸರವಿಲ್ಲದೆ ವಿಶ್ವಾಸ ವನ್ನು ಹಿಡಿದು ನಿನ್ನ ದಾಸರ ಸ್ತುತಿಯನ್ನೇ ಮಾಡುವೆನೆಂದೇ ನಿರಂತರದಲ್ಲೂ ಅಪೇಕ್ಷಿಸುತ್ತಿರುವೆನು ॥ ಸ್ವಸ್ತಿ ಶ್ರೀ ಭಕ್ತಿವಿಜಯ ಗ್ರಂಥವು ಶ್ರವಣ ಮಾತ್ರ ದಿಂದಲೇ ಮನೋರಥವಂ ಪೂರೈಸುವದು ಭಾವಿಕರಾದ ಪ್ರೇಮಳ ಭಕ್ತರು ಕೇಳ ತಕ್ಕದ್ದು । ಐವತ್ತೇಳನೇ ಅಧ್ಯಾಯಕ್ಕೆ ಮಂಗಳಮಹಾಶ್ರೀ x x x x ಭಕ್ತಿವಿಜಯ ಗ್ರಂಥವು ಸಮಾಪ್ತಮಾದುದು.

ವಿಷಯ : ಸೂರದಾಸ, ಏಕನಾಥ, ರಾಮದಾಸ ಮೊದಲಾದ ಭಕ್ತರ ಕಥೆ.

ವಿಶೇಷ : ಸುಂದರ ಬರಹ. ಈ ಗ್ರಂಥದ ಮೊದಲಭಾಗವು ಕೆ.ಎ. ೮೩ ನೆಯ ಮೊದಲ ಭಾಗದಲ್ಲಿದೆ.

1093

ಕೆ.ಎ. ೧೩೬	**ಭಕ್ತಿವಿಲಾಸದರ್ಪಣ**	ಗದ್ಯ
೧೨.೬"×೮"	ಕಳಲೆ ನಂಜರಾಜ	೧೭೪೦
೧—೮೧ ಪತ್ರ	೩೫ ಪಂಕ್ತಿ	೩೦ ಅಕ್ಷರ

ಆದಿ : ಭಕ್ತಿವಿಲಾಸದರ್ಪಣ ಕಳಲೆ ನಂಜರಾಜ ವಿರಚಿತ,

ಕಂದ ॥ ಅಜಗಾನನ ಪದಾರ್ಕಂ ಗಜಾನನಮಹರ್ನಿಶಂ
ಅನೇಕದಂತ ಭಕ್ತಾನಾಂ ಯೇಕದಂತಮುಪಾಸ್ಮಹೇ
ಜಯ ತ್ವಂ ದೇವಿ ಚಾಮುಂಡಿ ಜಯಭೂತಪಹಾರಿಣೀ
ಜಯತ್ಸರ್ವಗತೇ ದೇವಿ ಭದ್ರಕಾಳಿ ನಮೋಸ್ತು ತೇ ॥

ಮಹೀಶೂರ ಸೇನಾಧಿಪತಿ ದೊಡ್ಡರಾಜಪೌತ್ರ ವೀರರಾಜ ತನೂಜ ದಳಪತಿ ದೇವರಾಜಾನುಜ ಕಳಲೆ ನಂಜರಾಜನು ಕಾಂಚಿಕ್ಷೇತ್ರವಾಸಿಗಳಾದ ರುಷಿಗಳಿಗೆ ಅಗಸ್ತ್ಯರು ವುಪಮಂನ್ಯು ಮುನೀಂದ್ರರು ಶಿಷ್ಯರಿಗೆ ಬೋಧಿಸಿದ ಗ್ರಂಥವನ್ನು ನೈಮಿಷಾರಂಣ್ಯವಾಸಿಗಳಿಗೆ ಸೂತಪೌರಾಣಿಕರು ಪೇಳಿದ್ದಾ ಮಹೇಶ್ವರ ಭಕ್ತಿ ವಿಲಾಸವೆಂಬ ದರ್ಪಣವನು ಸಕಲ ಪಂಡಿತ ಪಾಮರರ ರಂಜನೆಯಾಗುವಂತೆ ಕರ್ನಾಟಕ ಟೀಕಿನಿಂದ ವಿರಚಿಸುವರೆ ಯಿಷ್ಟದೇವರ ಪ್ರಾರ್ಥನೆಗೈದು ವಿದ್ವಾಂಸ ರಿಗೆ ಪ್ರಾರ್ಥನೆಯನ್ನು ಮಾಡುತ್ತಾನೆ.

ಅಂತ್ಯ: ವುಪಮನ್ಯು ಮುನಿಗಳು ಶಿಷ್ಯರಿಗೆ ಹೇಳಿದ ಅರ್ಥವನ್ನು ಅಗಸ್ತ್ಯಮುನೀಂದ್ರರು ಕಾಂಚಿಕ್ಷೇತ್ರವಾಶಿಗಳಾದ ರುಷಿಗಳಿಗೆ ತಿಳುಹಿಶಿದರೆಂದುಲ್ಲೂ ತತ್ಪಾರಣಿಕರು ನೈಮಿಶಾರಂಣ್ಯವಾಸಿಗಳಾದ ಶೌನಕಾದಿ ರುಷಿಗಳಿಗೆ ನಿರೂಪಿಸಿದರು.

x x x x

ಭಕ್ತಿವಿಲಾಸದರ್ಪಣವೆಂಬ ಟೀಕಿನಲ್ಲಿ ವ್ಯಾಸಕೃತಮಾದ ಸ್ಕಂದೇಪಪುರಾಣದಲ್ಲಿ ಶಿವಭಕ್ತ್ಯಾ ಮಹಾತ್ಮ್ಯದಲ್ಲಿ ವೈರಾಗ್ಯರಹಸ್ಯವೆಂಬ ಐವತ್ತೈದನೇ ಅಧ್ಯಾಯ ಅರ್ಥಾ ನಿರೂಪಣಕ್ಕೆ ಮಂಗಳಮಹಾ ಭಕ್ತವಿಲಾಸದರ್ಪಣ ಸಂಪೂರ್ನ ಮಂಗಳಮಹಾಶ್ರೀ.

ವಿಷಯ : ಸ್ಕಾಂದಪುರಾಣದಲ್ಲಿ ಬರುವ ಮಹೇಶ್ವರ ಭಕ್ತಿವಿಲಾಸ.

ವಿಶೇಷ : ಮೋಡಿ ಬರಹ.

1094

ಕೆ.೧೪೭	**ಭಗವದ್ಗೀತಾ ಟೀಕು**	ಶ್ಲೋಕ, ಟೀಕು
೧೫.೮" × ೧.೫"	ವೆಂಕಟಕೃಷ್ಣ (?)	ಸು. ೧೭೦೦
೧–೧೦೨ ಪತ್ರ	೭ ಪಂಕ್ತಿ	೭೨ ಅಕ್ಷರ

ಆದಿ : ಭಗವದ್ಗೀತೆ ಕಂನಡ ವ್ಯಾಖ್ಯಾನಾ ಬರವ ಪುಸ್ತಕಕ್ಕೆ ಶುಭಮಸ್ತು ಶ್ರೀ ಪೀಠಿಕೆ ಶ್ರೀಮದ್ರಮಾರಮಣಿ ನಯನ ಕೈರವಾಮೃತ ಕಿರಣನಾದ ಶ್ರೀಕರ ಪದಾಶ್ರಿತ ಶರಣಜನವಿಪದ್ಧರಣನಾದ x x x x ಭೋಗಪುರವರನಿವಾಸನಾದ ಶ್ರೀ ಚಂನಕೇಶವನ ಅಂಶಭೂತನಾದ x x x x ಶ್ರೀರಂಗಪಟ್ಟಣಾಧ್ಯಕ್ಷ ನಸು ಮತೀವಲ್ಲಭನ ಸೇನಾರಮಣ x x x x ವೀರರಾಜೇಂದ್ರನು ಆಂಧ್ರವಂಶ ದೊಳ್ ಕಾಶ್ಯಪ ಗೋತ್ರತ್ತಂನನಾದ ವೆಂಕಟಕೃಷ್ಣಾಭಿಧಾನಮುಳ್ಳ ವಿದ್ವಜ್ಜ ನೋತ್ತಂಸನಂ ಕರದು x x x ಗೀತಾಭಾಷ್ಯವನನುಸರಂಗೈದು ಪೇಳ್ದ ನುಡಿ ಗಳನೆ। x x x x ಧೃತರಾಷ್ಟ್ರನು ಸಂಜಯನ ಕೇಳುತಾಯಿದ್ದಾನು। ಯೆಲೆ ಸಂಜಯನೇ ಧರ್ಮದ ಬೆಳಸಿರಿಗೆ ಕಾರಣ ಭೂಮಿಯಾದ ಕುರುಕ್ಷೇತ್ರದಲ್ಲಿ ಯುದ್ಧಾಪೇಕ್ಷೆಯಿಂದಾ ಕೂಡಲ್ಪಟ್ಟ ನಮ್ಮವರಾದ ಕೌರವರು ಪಾಂಡುರಾಯರ ಕುಮಾರರಾದ ಧರ್ಮರಾಯ ಮೊದಲಿದಂಥಾವರು ಯೇನಮಾಡಿದರೂ ಯೆಂದು ಕೇಳಲಾಗಿ ಸಂಜಯನು ಉತ್ತರವ ಪೇಳುತಾ ಯಿದ್ದಾನು

ಅಂತ್ಯ : ಕೇಳೈ ಅರ್ಜುನ ಯೀ ಪ್ರಕಾರದಲ್ಲಿ ಅತಿ ರಹಸ್ಯವಾದರ್ಥಉ ನಿನಗೆ ನನ್ನಿಂದಾ ಪೆಳ್ಪಟ್ಟುದಾಯಿತು। ಯಿದರರ್ಥವನಾರು ಕೇಳುತ್ತಿಹರು ಆರು ತಿಳಿಯುತ್ತಿಹರು ಅವರು ಕೃತಕೃತ್ಯರಹರು। ಸಾಕ್ಷಾತ್ತಾಗಿ ಯೀ ಅರ್ಥಸ್ವರೂ

ಪವೇ ನಾನಾದ ನನ್ನಿಂದಾ ನೀನು ಕೇಳಿದೆಯಾದ ಕಾರಣಾ ನೀನು ಧನ್ಯನೂ ಯೆಂಬಲ್ಲಿ ಸಂದೇಹವಿಲ್ಲವೆಂದು ಕೃಷ್ಣಸ್ವಾಮಿ ನಿರೂಪಿಸ್ತನೆಂಬಲ್ಲಿಗೆ ಅಧ್ಯಾಯ ಸಂಪೂರ್ಣ । ಇತಿ x x x ಶ್ರೀ ವೀರರಾಜೇಂದ್ರನಿಂ ನೇಮಿಸಿ ವಿರಚಿಸಲ್ಪಟ್ಟ ಶ್ರೀಮದ್ಭಗವದ್ಗೀತಾ ಕನ್ನಡಭಾಷಾವ್ಯಾಖ್ಯಾನದಲ್ಲಿ ಪುರುಷೋತ್ತಮ ಯೋಗಮಂ ಪೇಳ್ದುದು ಪಂಚದಶೋಧ್ಯಾಯಃ ॥

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ತತ್ತ್ವಗಳು.

ವಿಶೇಷ : ೧೮ ನೆಯ ಓಲೆ ಮುರಿದಿದೆ. ಅಸಮಗ್ರ.

1095

ಕೆ. ೯೧ **ಭಗವದ್ಗೀತಾ ಟೀಕು** ಟೀಕು

೧೪.೮″ × ೧.೩″ ? ?

೧-೧೪೮ ಪತ್ರ ೬ ಪಂಕ್ತಿ ೭೨ ಅಕ್ಷರ

ಆದಿ : ಶ್ರೀ ಹಯಗ್ರೀವಾಯ ನಮಃ

ಶ್ರೀಯಃ ಪತಿಯಾಗಿ ಜ್ಞಾನಾನಂದೈಕ ಸ್ವರೂಪನಾಗಿ ಸಮಸ್ತ ಕಲ್ಯಾಣಗುಣ ಪರಿಪೂರ್ಣನಾಗಿ x x x ಶ್ರೀಮನ್ನಾರಾಯಣನು x x ಭೂಲೋಕದ ಜನ ರನು ರಕ್ಷಿಸುವ ನಿಮಿತ್ತವಾಗಿ ಶ್ರೀಕೃಷ್ಣಾವತಾರಮನಂಗೀಕರಿಸಿ x x x ಸಮಸ್ತವೇದಾಂತ ಶಾಸ್ತ್ರಂಗಳಲ್ಲಿ ಹೇಳಿರುವ ಧರ್ಮವನು ಯೀ ಭಗವದ್ಗೀತೆ ಯಲ್ಲಿ ವ್ಯಕ್ತವಾಗಿ ಹೇಳಿದರು. x x x ಯೆಲೆ ಸಂಜಯನೆ ಧರ್ಮಭೂಮಿ ಯಾಗಿರುವ ಕುರುಕ್ಷೇತ್ರದಲ್ಲಿ ಯುದ್ಧವನು ಮಾಡಬೇಕೆಂದು ನೆರೆದಿರುವ ನಮ್ಮ ವರೂ ಪಾಂಡವರೂ ಯಾನಮಾಡಿದರು ಯಿಂತೆಂದು ಧೃತರಾಷ್ಟ್ರನು ಬೆಸಗೊಳ ಲಾಗಿ ಸಂಜಯನು ಹೇಳುತ್ತಿದ್ದಾನು ॥

ಅಂತ್ಯ : ಶ್ರೀಮನ್ನಾರಾಯಣಾಂಶದಿಂದುದಿಸಿದ ವೇದವ್ಯಾಸರ್ ಸಕಲವೇದಶಾಸ್ತ್ರಾರ್ಥಂ ಗಳನಾರೈದು ತಾಂ ತಿಳಿದ ಪಲಉ ತತ್ವಾರ್ಥಮಂ ಲೋಕಹಿತಾರ್ಥವಾಗಿ ಪವಣ್ಗೊಳಿಸಿದುವರಿಂದೀ ಮಹಾಭಾರತಮೇ ಪ್ರಬಲಮಾಗಿರ್ಕುಂ । x x x ಮೋಕ್ಷಧರ್ಮಂ ಸಕಲಾರ್ಥಪ್ರತಿಪಾದಕಮಾಗಿರ್ಕುಂ । ಆದೊಡೆ ಯೀ ಭಗವ ದ್ಗೀತೆ,

ಗೀತಾ ಸುಗೀತಾಕರ್ತವ್ಯಾ ಕಿಮನ್ಯೈಃ ಶಾಸ್ತ್ರಸಂಗ ಹೈಃ ।
ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ವಿನಿಸ್ಸೃತಾ ॥

ಯೆಂಬ ಮರ್ಯಾದೆಯಿಂ ಶ್ರೀಕೃಷ್ಣನ ದಿವ್ಯ ಮುಖಾರದಿಂದೋದ್ಭವಮಾಗಿರ್ಪು ದಱಿಂ ಸರ್ವೋತ್ಕೃಷ್ಟಮೆನಿಪುದು. ಅದಱಿಂದಂ ಸಕಲವೈದಿಕರುಂ ಗೀತೋ ಪನಿಷತ್ತೆಂದು ಪೇಳ್ವರ್, ತದ್ವ್ಯಾಖ್ಯಾತೃಗಳುಂ ಮೂವತ್ತೆರಡುಮುಪ

ನಿಷತ್ತುಗಳೊಡಗಿದಂ ವ್ಯಾಖ್ಯಾನಂಗೈದುರೆಂದಿದರ ಮಾಹಾತ್ಮ್ಯಂ | ಅದಱಿಂ ಗೀತಾಶಾಸ್ತ್ರಮೆ ಸರ್ವೋತ್ತಮಮಮಾಗಿರ್ಪುದು || ಶ್ರೀಃ ||

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ತತ್ತ್ವಗಳು.

ವಿಶೇಷ : ೭೪ನೆಯ ಪತ್ರದಲ್ಲೂ ೯೬ನೆಯ ಪತ್ರದ ಒಂದು ಭಾಗದಲ್ಲೂ ಅರ್ಧ ಪಂಕ್ತಿ ಮಾತ್ರ ಬರೆದಿದೆ. ೮೬,೧೨೩ ನೆಯ ಪತ್ರಗಳ ಅಂಚು ಮುರಿದುಹೋಗಿದೆ. ಶಕಟರೇಫ ಪ್ರಯೋಗವಿದೆ. ಕೊನೆಯಲ್ಲಿ ಕೆಲವು ಅನಿರ್ದಿಷ್ಟ ಪತ್ರಗಳಿವೆ.

1096

ಕೆ. ೩೦೬	**ಭಗವದ್ಗೀತಾ ಟೀಕು**	ಶ್ಲೋಕ, ಟೀಕು
೧೩.೧" × ೧.೫"	?	?
೧–೧೧೧ ಪತ್ರ	೭ ಪಂಕ್ತಿ	೫೬ ಅಕ್ಷರ

ಆದಿ : ಶ್ರೀ ಪತಿಯಾಗಿ ಜ್ಞಾನಾನಂದ ಸ್ವರೂಪನಾಗಿ ಸಕಲ ಕಲ್ಯಾಣ ಗುಣಗಣಪರಿಪೂರ್ಣನಾಗಿ x x x x ಶ್ರೀಮನ್ನಾರಾಯಣನು x x x x ಭೂಲೋಕದ ಜನರನು ರಕ್ಷಿಸುವ ನಿಮಿತ್ತವಾಗಿ ಶ್ರೀ ಕೃಷಾವತಾರಮನಂಗೀಕರಿಸಿ x x x ನಮ್ಮಂಥಾವರನು ರಕ್ಷಿಸುವದಕ್ಕಾಗಿ ಶ್ರೀ ಅರ್ಜುನಂಗೆ ಯುದ್ಧದಲ್ಲಿ x x x x ಸಮಸ್ತ ವೇದಾಂತ ಶಾಸ್ತ್ರಂಗಳಲ್ಲಿ ಹೇಳಿಯಿರುವ ಧರ್ಮವನು ಈ ಭಗವದ್ಗೀತೆಯಲ್ಲಿ ವ್ಯಕ್ತವಾಗಿ ಹೇಳಿದರೂ x x x x ಯೆಲೆ ಸಂಜಯನೆ ಧರ್ಮ ಭೂಮಿಯಾಗಿ ಯಿರುವ ಕುರುಕ್ಷೇತ್ರದಲ್ಲಿ ಯುದ್ಧವನು ಮಾಡಬೇಕೆಂದು ನೆರೆದಿರುವ ನಮ್ಮವರೂ ಪಾಂಡವರೂ ಯೇನ ಮಾಡಿದರೂ ಯಿಂತೆಂದು ಧೃತರಾಷ್ಟ್ರನು ಬೆಸಗೊಳಲಾಗಿ ಸಂಜಯನು ಹೇಳುತ್ತಿದ್ದನು. || ೧ ||

ಅಂತ್ಯ : ಆವ ಪ್ರದೇಶದಲ್ಲಿ ನೀಜೋನ್ನತರಾದ ಚೇತತಾಚೇತನಾಸ್ರುವಿಗೆ ಆವಾವ ಸ್ವಭಾವ ಉಂಟು ಆ ಸ್ವಭಾವಕೆಲಾ ಯೀಶ್ವರನಾದಂಥಾ ಸ್ವಸಂಕಲ್ಪಾಯತ್ತವಾದ x x x x ಶ್ರೀ ಕೃಷ್ಣನು ಯಿಹನು ಆವಲ್ಲಿ ಗಾಂಡೀವಿಯೆಂಬ ಧನುಸ್ಸ ಧರಿಸಿಕೊಂಡಿದ್ದಾಂಥಾ x x x x ಅರ್ಜುನನು ಯಿಹನು ಅವರಿಬ್ಬರಿಹ ದೇಶದಲ್ಲಿ ರಾಜ್ಯಲಕ್ಷ್ಮಿಯು ಜಯಉ ಉತ್ತರೋತ್ತರವಾಗಿ ಐಶ್ವರ್ಯಾಭಿವೃದ್ಧಿಯು ನ್ಯಾಯಉ ನಿಶ್ಚಲವೆಂದು ನನ್ನ ನಿಶ್ಚಯಉ || ಇದು ಭಗವದ್ಗೀತೆಯೊಳು ಹದಿನೆಂಟನೆಯ ಅಧ್ಯಾಯ ಸಮಾಪ್ತ ||

ವಿಷಯ : ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ಪಾರ್ಥಿವಸಂ || ಜ್ಯೇಷ್ಠ ಶುದ್ಧ ೧೨ ಭಾನುವಾರದಲ್ಲಿ ಇದನ್ನು ಬರೆದಿರುವದಾಗಿ ಕೊನೆಯಲ್ಲಿ ಬರೆದಿದೆ. ಕೆಲವು ಪತ್ರಗಳನ್ನು ಹುಳು ತಿಂದು ಅಲ್ಲಲ್ಲಿ ರಂಧ್ರ ಬಿದ್ದಿದೆ.

1097

ಕೆ. ೩೭೬/೧ **ಭಗವದ್ಗೀತಾ ಟೀಕು** ಶ್ಲೋಕ, ಟೀಕು

೮.೩" × ೧.೮" ? ?

೧–೧೧೫ ಪತ್ರ ೧೦ ಪಂಕ್ತಿ ೬೦ ಅಕ್ಷರ

ಆದಿ : ಶ್ರೀ ಹಯಗ್ರೀವಾಯ ನಮಃ |

ಶ್ರೀಯಃ ಪತಿಯಾಗಿ ಜ್ಞಾನಾನಂದೈಕಸ್ವರೂಪವಾಗಿ | ಸಮಸ್ತ ಕಲ್ಯಾಣಗುಣ ಪರಿಪೂರ್ಣನಾಗಿ | ಶ್ರೀ ವೈಕುಣ್ಠದಲ್ಲಿ ದಿವ್ಯಾಸ್ಥಾನಮಂಟಪದಲ್ಲಿ ರತ್ನ ಸಿಂಹ್ಯಾಸನಾರೂಢನಾಗಿ ನಿತ್ಯಮುಕ್ತರಿಂದ ಅನವರತ ಪರಿಚರ್ಯ್ಯಮಾಣ ಚರಣಯುಗಳನಾಗಿರುವ ಶ್ರೀಮನ್ನಾರಾಯಣನು ಬ್ರಹ್ಮ ಮೊದಲಾದ ಸಮಸ್ತ ಪ್ರಾಣಿಗಳನೂ ಸೃಜಿಸಿ ಅವರು ತನ್ನ ದಿವ್ಯಸ್ವರೂಪವನೂ ಧ್ಯಾನಮಾಡುವುದಕ್ಕೆ ಸಮರ್ತ್ಥರಲ್ಲದಿರಲಿಕ್ಕಾಗಿ ಅವರ ಮೇಲಣ ದಯೆಯಿಂದ ಅವರವರ ಲೋಕಂಗಳಲ್ಲಿ ಅವರವರಿಗನುಗುಣವಾದ ರೂಪವನು ಧರಿಸಿ x x x ಮೇಲಣ ಭಕ್ತಿಯೇ ಮೋಕ್ಷಕ್ಕುಪಾಯವೆಂದು ಸಮಸ್ತ ವೇದಾಂತಗಳಲ್ಲಿ ಹೇಳಿರುವ ಧರ್ಮ್ಮವನೂ ಯೀ ಭಗವದ್ಗೀತೆಯಲ್ಲಿ ವ್ಯಕ್ತವಾಗಿ ನಿರೂಪಿಸಿದರು |

ಅಂತ್ಯ : ಇದಱೊಳಂ ಭಗವದ್ವಿಷಯಮನೆ ಪ್ರತಿಪಾದಿಸುವುದಱಿಂ ಶ್ರೀವಿಷ್ಣುಸಹಸ್ರನಾಮಮುಂ ಮೋಕ್ಷದರ್ಮ್ಮಮುಂ ಭಗವದ್ಗೀತೆಯುಂ ಉತ್ತಮಂಗಳಾಗಿರ್ಪ್ಪವಿದಱೊಳ್ ಶ್ರೀವಿಷ್ಣುಸಹಸ್ರನಾಮಂ ಭಗವದಾರಾಧನ ಜಪಾದ್ಯುಪಯೋಗಮಾಗಿರ್ದ್ದೊಡಮದಱಿಂ ತತ್ವಹಿತ ಪುರುಷಾರ್ತ್ಥಂಗಳಂ ತಿಳಿವುದರಿದಾಗಿರ್ಕುಂ| x x x x ಅದಱಿಂದೀ ಗೀತಾಶಾಸ್ತ್ರಮೇ ಸರ್ವೋತ್ತಮಮಾಗಿರ್ಪ್ಪುದು || ಶ್ರೀ || ಕೃಷ್ಣಾಯ ಯಾದವೇಂದ್ರಾಯ ಜ್ಞಾನಮುದ್ರಾಯ ಯೋಗಿನೇ |
ನಾಥಾಯ ರುಕ್ಮಿಣೀಶಾಯ ನಮೋ ವೇದಾಂತವೇದಿನೇ ||ಶ್ರೀಃ||

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ಇದಾದಮೇಲೆ ೧೨ ಪತ್ರಗಳಲ್ಲಿ ಅಪೂರ್ಣವಾದ ನರಸಿಂಹ ಸಹಸ್ರನಾಮಾವಳಿ ಗ್ರಂಥವಿದೆ. ಬಳಿಕ ಮಧುರ ಮನನವೆಂಬ ಗ್ರಂಥವಿದೆ. ಆದಿಯಲ್ಲಿ ಕೆಲವು ಶುದ್ಧ ಹಾಗೂ ಅನಿರ್ದಿಷ್ಟ ಪತ್ರಗಳೂ ಇವೆ. ಶಕಟರೇಫದ ಬಳಕೆಯಿದೆ.

1098

ಕೆ. ೪೭೭ **ಭಗವದ್ಗೀತಾ ಟೀಕು** ವೃತ್ತ, ಟೀಕು

೭.೨"×೨.೨" ಚಿಕ್ಕುಪಾಧ್ಯಾಯ ೧೭ ನೆಯ ಶತಕ

೧–೧೯೫ ಪತ್ರ ೧೨ ಪಂಕ್ತಿ ೩೨ ಅಕ್ಷರ

ಆದಿ : ಶ್ರೀಮಶ್ಶೇಷ ಫಣಾಮಣಿದ್ಯುತಿಮಿಳನ್ಮೌಳಿ ಪ್ರಭಾಭಾಸುರಂ
ಸೋಮಾರ್ಕಾಗ್ನಿ ಸಹಸ್ರತೇಜಕಮುಖ್ಯಾನೇಕ ಬೃಂದಾರಕೋ

ದ್ದಾಮ ಸ್ತೋತ್ರ, ತಪಃಪ್ರಸಾದನವನೀ ನೀಳಾ ರಮಾಲಿಂಗನಾ
ಪ್ರೇಮಂ ಶ್ರೀ ಪರವಾಸುದೇವಮನಿಶಂ ರಕ್ಷಿಕ್ಕು ಭೂಚಕ್ರಮಂ ॥ ೧ ॥

x x x x

ಬಿರುದೆಂತೆಂಬರ ಗಂಡನೋರ್ವ ಭಗವದ್ಗೀತಾರ್ಥಮಂ ಟೀಕಿಸೆಂ
ದೊರೆಯಲ್ಕನ್ನಡದೊಳಾ ಕುಶಲನಂಬೋಜಾಂಬಕಂ ವಾಂಛೆಯಂ
ನರನೊಳ್ಪೇಳ್ದ ರಹಸ್ಯತತ್ವಮಖಿಲರ್ಗ್ಗಂ ಸೃಷ್ಟಿಮಪ್ಪಿಂತು ಭೂ
ಸುರವರ್ಯಂ ಚಿಕುಪಾಧ್ಯ ಮಂತ್ರಿ ಬರೆದಂ ಕರ್ಣಾಟದೊಳ್ ಟೀಕುಮಂ ॥ ೬ ॥

x x x x

ಶ್ರೀಯಃ ಪತಿಯಾಗಿ ನಿಖಿಲಹೇಯ ಪ್ರತ್ಯನೀಕನಾಗಿ x x x x x

ಅಂತ್ಯ : ಆವ ಪ್ರದೇಶದಲ್ಲಿ ನಿಜೋನ್ನತವಾದ ಚೇತನಾಚೇತನ ವಸ್ತುವಿಗೆ ಆವಾ ಸ್ವಭಾವ ಉಂಟು x x x x ಉತ್ತರೋತ್ತರ ಐಶ್ವರ್ಯಾಭಿವೃದ್ಧಿಯೂ ನ್ಯಾಯಮುಂ ನಿಶ್ಚಲಮೆಂದು ನನ್ನ ನಿಶ್ಚಯ ॥ x x x x ಯಿದು ಸಮಸ್ತ ಸರಸೀರುಹಭವ ಸುರಸಮುದಯ ಮಣಿಗಣ ಖಚಿತ x x x x ಚಿಕು ಪಾಧ್ಯಾಯ ಪ್ರಣೀತಮಪ್ಪಭಿನವ ಕರ್ನಾಟಕ ವಚನ ರಚನಾಭಿದಾನವಾದ ಶ್ರೀ ಭಗವದ್ಗೀತಾ ಸಂಗ್ರಹವ್ಯಾಖ್ಯಾನದೊಳ್ ಮೋಕ್ಷಯೋಗೋನಾಮ ಅಷ್ಟಾದಶೋಧ್ಯಾಯಃ ॥

ವಿಷಯ : ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ೪೫, ೬೦, ೮೮, ೧೧೭, ೧೪೧, ೧೬೪ ನೇ ಪತ್ರಗಳಲ್ಲಿ ಒಂದು ಕಡೆ ಮಾತ್ರ ಬರವಣಿಗೆ ಇದೆ. ಕೊನೆಯಲ್ಲಿ ಪ್ರತ್ಯೇಕವಾದ ೭ ಪತ್ರಗಳಲ್ಲಿ ಅಸಮಗ್ರ ವಾದ ಮತ್ತೊಂದು ಗೀತೆಯ ಕನ್ನಡ ಟೀಕು ಇದೆ.

1099

ಕೆ. ೭೮	**ಭಗವದ್ಗೀತಾ ಟೀಕು**	ಶ್ಲೋಕ, ಟೀಕು
೧೦.೮″ × ೧.೮″	ರಾಮಕೃಷ್ಣ ಸೂರಿ	೧೯ನೆಯ ಶತಕ
೧-೨೬೭ ಪತ್ರ	೧೦ ಪಂಕ್ತಿ	೪೫ ಅಕ್ಷರ

ಆದಿ : ಶ್ಲೋಕ ॥ ಶ್ರೀಮತ್‌ಕ್ಷೀರಪಯೋಧಿರಾಜತನಯಾ ಹೃತ್ಪದ್ಮಹಂಸಂ ಮುನಿ
ಸ್ತೋಮಾರಾಧಿತ ನಾರದಾದಿ ವಿಲಸದ್ಯೋಗೀಂದ್ರ ಸಂಸೇವಿತಂ ।
ಭೂಮಾನಂದ ಚಿದೇಕ ವಿಗ್ರಹಮಜಂ ಶ್ರೀವೆಂಕಟೇಶಾಧೀಶ್ವರಂ
ಪ್ರೇಮೋದ್ಭಾಸಿ ಕಟಾಕ್ಷದಿಂ ಸಲಹುಗೆ ಬ್ರಹ್ಮಾದಿದೇವಾಧಿಪ ॥
ಪರತತ್ವಬೋಧತರಣಿಯ
ನುರು ಭವಜಲಧಿಯ ದಾಂಟಿಸಿಯೆ ಭಕ್ತರನಾ
ದರದಿ ನಿಜಪದವನೈದಿ
ಪರಮಾತುರಂ ಬಾಲಕೃಷ್ಣ ವಿಭುವಿಗಭಿನಮಿಪೆಂ

ಹೇರಂಬ ಶಾರದಾ ಗುರು
ಸಾರಪದದ್ವಯಕೆ ನಮಿಸಿ ಗೀತಾಟೀಕೆಯ ಶ್ರೀರಾಮಕೃಷ್ಣವಿಬುಧಂ
ಶ್ರೀರಮಣನು ಕೊಟ್ಟ ಬೋಧದಿಂ ವಿರಚಿಸುವೆಂ ॥
ಶ್ರೀಮದಾದಿನಾರಾಯಣನು ಸಮಸ್ತ ಪ್ರಪಂಚವಂ ನಿರ್ಮಿಸಿ x x x
ಯಜ್ಞದಾನ ವೇದಾಧ್ಯಯನಾದಿ ಧರ್ಮವನುಪದೇಶಿಸಿದನು ॥

ಅಂತ್ಯ : ಯೋಗೇಶ್ವರಃ ಕೃಷ್ಣಃ— ಯೋಗಮಾಯಾಧೀಶ್ವರನಾದ ಕೃಷ್ಣನು ಯತ್ರ— ಆರಪಕ್ಷದಲ್ಲಿ ಯಿಥಾನೆಯೋ । ಧನುರ್ಧರಃ ಪಾರ್ಥಃ—ಗಾಂಡೀವವೆಂಬ ಧನುಸ್ಸನು ಧರಿಸಿಯಿಹಂಥಾ ಅರ್ಜುನನು ! ಯತ್ರ—ಆರೆ ಪಕ್ಷದಲ್ಲಿ ಯಿಥಾನೆಯೊ । ತತ್ರ-ಅವರ ಪಕ್ಷದಲ್ಲಿ । ಶ್ರೀಃ—ರಾಜ್ಯಲಕ್ಷ್ಮಿಯು । ಧ್ರುವಾ-ಸ್ಥಿರವಾಗಿಹುದು । ವಿಜಯಃ-ಜಯವೂ । ಅಲ್ಲಿ ಸ್ಥಿರವಾಗಿಹುದು । ನೀತಿಃ— ನ್ಯಾಯವೂ । ಅಲ್ಲಿ ಸ್ಥಿರವಾಗಿಹುದು । ಇತಿ–ಹೀಗೆಂದು । ಮೇ ಮತಿಃ–ನನ್ನ ಬುದ್ಧಿಯೂ ॥ ೭೮ ॥ ಇತಿ ಶ್ರೀ ಭಗವದ್ಗೀತಾ ಕರ್ಣಾಟಟೀಕಾಯಾಂ ರಾಮಕೃ........॥

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ೨೩೪ ನೆಯ ಪತ್ರದಲ್ಲಿ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆ ಇದೆ.

1100

ಕೆ. ೨೬೨	**ಭಗವದ್ಗೀತಾ ಟೀಕು**	ಶ್ಲೋಕ, ಟೀಕು
೧೦.೭" × ೧.೯"	ರಾಮಕೃಷ್ಣಸೂರಿ	೧೯ನೆಯ ಶತಕ
೧–೨೦೧ ಪತ್ರ	೧೦ ಪಂಕ್ತಿ	೫೮ ಅಕ್ಷರ

ಆದಿ : ಶ್ರೀ ಭಗವದ್ಗೀತಾವ್ಯಾಖ್ಯಾನ ಶ್ರೀಧರೀಯಸ್ವಾಮಿ ಕೃತಂ ಸುಬೋಧಿನೀ । ರಾಮಕೃಷ್ಣಸ್ವಾಮಿ ಕೃತಂ ಕರ್ನಾಟಕ ಭಾಷಾ ಟೀಕೂ—
ಶತಮುಖಪೂಜಿತಪಾದಂ
ಶತಧೃತಿ ಮನಸಾಪ್ಯಗೋಚರಾಕಾರಂ
ವಿಕಸಿತ ಜಲರುಹನೇತ್ರಂ
ಸೀತಾ ವಾಮಾಂಗಮಾಶ್ರಯೇ ರಾಮಂ ॥ ೧ ॥

x x x x ವಚನ ॥ ಟೀಕು ॥ ಶ್ರೀಮದಾದಿನಾರಾಯಣನು ಸಮಸ್ತ ಪ್ರಪಂಚಮಂ ನಿರ್ಮಿಸಿ ಆ ಪ್ರಪಂಚದ ಸ್ಥಿತಿಯಂ ಮಾಡಲಿಚ್ಛೈಸುತಿರ್ದವನಾಗಿ । x x x ವೇದಾಧ್ಯಯನಾದಿ ಧರ್ಮವನುಪದೇಶಿಸಿದನು.

ಅಂತ್ಯ : ಅಲ್ಲಿ ಸಾತ್ವಿಕಜ್ಞಾನಸ್ವರೂಪನು ಹೇಳುತ್ತಿದ್ದಾನೆ ।
ಶ್ಲೋಕ ॥ ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೆ ।
ಅವಿಭಕ್ತಂ ವಿಭಕ್ತೇಷು ತತ್ ಜ್ಞಾನಂ ವಿದ್ಧಿ ಸಾತ್ವಿಕಂ ॥

ಟೇ ॥ ಬ್ರಹ್ಮಾದಿ ಸ್ತಂಭಾತವಾದ ಪರಿಯಂತವಾದ ಪ್ರಾಣಿಗಳಲ್ಲಿ| ಅವಿಭಕ್ತಂ| ಸರ್ವತ್ರ | ಅನುಸ್ಯೂತವಾಗಿ | ಅವ್ಯಯಂ | ನಿರ್ವಿಕಾರವಾಗಿ ಇಹಂಥಾ | ಭಾವಂ | ಪರಮಾತ್ಮತತ್ವವನು | ಯೇನ | ಆವ ಜ್ಞಾನದಿಂದಾ | ವೀಕ್ಷತೇ | ವಿಚಾರಿಸುತ್ತಿದ್ದಾನೆ | ತದ್ಧ್ಯಾಣ್ಣ್ಯನಂ | ಆ ಜ್ಞಾನವು | ಸಾತ್ವಿಕಂ ವಿದ್ಧಿ | ಸಾತ್ವಿಕಜ್ಞಾನವಾಗಿ ತಿಳಿ ॥ ೨೦ ॥

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ಗ್ರಂಥಾರಂಭಕ್ಕೆ ಮೊದಲು ಒಂದೂವರೆ ಪತ್ರದಲ್ಲಿ ಪ್ರತ್ಯೇಕವಾದ ಪೀಠಿಕೆ ಯನ್ನು ಕೊಡಲಾಗಿದೆ. ಗ್ರಂಥ ಹದಿನೆಂಟನೆಯ ಅಧ್ಯಾಯದ ಮಧ್ಯದಲ್ಲಿ ನಿಂತಿದೆ. ಕೊನೆಯ ಮೂರು ಪತ್ರಗಳಿಗೆ ಕ್ರಮಾಂಕವಿಲ್ಲ.

1101

ಕೆ. ೩೭೩	**ಭಗವದ್ಗೀತಾ ಟೀಕು**	ಶ್ಲೋಕ, ಟೀಕು
೧೦.೫" × ೧.೯"	ರಾಮಕೃಷ್ಣಸೂರಿ	೧೯ನೆಯ ಶತಕ
೧–೨೦೮ ಪತ್ರ	೯ ಪಂಕ್ತಿ	೬೦ ಅಕ್ಷರ

ಆದಿ : ಭಗವದ್ಗೀತಾ ಟೀಕು — ಪೀಠಿಕಾ ॥

ಹರಿಃ ಓಂ॥ಶುಕ್ಲಾಂಬರಧರಂ ವಿಷ್ಣುಂ| ಯಾಕುಂದೇಂದು ತುಷಾರಹಾರ ಧವಳಾ|
ನಮಸ್ತೇ ಶಾರದಾದೇವಿ | ದೋರ್ಭಿರ್ಯುಕ್ತಾ ಚತುರ್ಭಿಃ |
ಗುರುರ್ಬ್ರಹ್ಮಾ ಗುರುರ್ವಿಷ್ಣುಃ |
ಸರ್ವವೇದಾಂತ ಸಿದ್ಧಾಂತ ಸಾರಂ ಸಂಗೃಹ್ಯ ಯುಕ್ತಿ ತಃ |
ಸರ್ವಲೋಕೋಪಕಾರಾಯ ಕೇಶವೇನಾರ್ಜುನ ಪ್ರತಿ ॥ ೧ ॥
ಸಮ್ಯಗುಕ್ತಾಂ ಪಾಪಹರಾಂ ಗೀತಾಮತಿಸುಖಾಸ್ಪದಾಂ |
ಸಾಭಿಪ್ರಾಯ ಸಟೀಕಾಂ ಚ ವಿಲಿಖ್ಯಾಮತಿಭಕ್ತಿಕಃ ॥ ೩ ॥

x x x x

ಹೇರಂಬ ಶಾರದಾಗುರು
ಸಾರಪದದ್ವಯಕ್ಕೆ ನಮಸ್ಕರಿಶಿ ಗೀತಾಟೀಕೆಯ
ಶ್ರೀ ರಾಮಕೃಷ್ಣವಿಬುಧಂ
ಧೀರಮಣಂ ಕೊಟ್ಟ ಬೋಧದಿಂದ ವಿರಚಿಸುವೆಂ ॥ ೫ ॥

ಶ್ರೀಮದಾದಿ ನಾರಾಯಣನು ಸಮಸ್ತ ಪ್ರಪಂಚಮಂ ನಿರ್ಮಿಸಿ ಆ ಪ್ರಪಂಚದ ಸ್ಥಿತಿಯಂ ಮಾಡಲಿಚ್ಛೈಸುತ್ತಿರ್ದವನಾಗಿ x x x ಯಜ್ಞ ದಾನ ವೇದಾ ಧ್ಯಯನಾದಿ ಧರ್ಮವನುಪದೇಶಿಸಿದನು.

ಅಂತ್ಯ : ಯತ್ರ ಯೋಗೀಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ |
ತತ್ರ ಶ್ರೀ ವಿಜಯೋ ಭೂತಿರ್ಧ್ರುವಾ ನೀತಿರ್ಮತಿಮಮ ॥

ಟೀಕು ॥ ಯೋಗೇಶ್ವರಃ । ಕೃಷ್ಣಃ । ಯೋಗಮಾಯಾಧೀಶ್ವರನಾದ ಕೃಷ್ಣನು । ಯತ್ರ । ಯೆಲ್ಲಿ ಆರ ಪಕ್ಷದಲ್ಲಿ ಯೆಂಬುದರ್ಥ । x x x ನೀತಿಃ। ನ್ಯಾಯವು। ಅಲ್ಲಿ ಸ್ಥಿರವಾಗಿಹುದು। ಇತಿ । ಹೀಗೆಂದು ಮಮ ಮತಿಃ। ನನ್ನ ಬುದ್ಧಿಯು॥೭೮॥ ಹರಿಃ ಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು x x x ಮೋಕ್ಷ ಯೋಗೋ ನಾಮ ಅಷ್ಟಾದಶೋಧ್ಯಾಯಃ । ಶ್ರೀಕೃಷ್ಣಾರ್ಪಣಮಸ್ತು ।

ಕೃಷ್ಣಂ ಕಮಲಪತ್ರಾಕ್ಷಃ ಪುಣ್ಯಶ್ರವಣಕೀರ್ತನಂ ।
ವಾಸುದೇವಂ ಜಗದ್ಯೋನಿಂ ಸೌಮಿ ನಾರಾಯಣಂ ಹರಿಃ ॥

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ನಂದಿನಾಗರಿ ಲಿಪಿ. ೮೨ ಮತ್ತು ೧೯೮ನೆಯ ಪತ್ರಗಳಲ್ಲಿ ಒಂದು ಕಡೆಯಲ್ಲಿ ಮಾತ್ರ ಬರವಣಿಗೆ ಇದೆ. ಕೊನೆಯ ಒಂದು ಪತ್ರದಲ್ಲಿ ಭಗವದ್ಗೀತಾಮಹಿಮೆಯ ಕೆಲವು ಶ್ಲೋಕಗಳಿವೆ. ಇದಾದ ಬಳಿಕ ಮೂರು ಶುದ್ಧ ಪತ್ರಗಳಿವೆ.

1102

ಕೆ. ೩೮೫	**ಭಗವದ್ಗೀತಾ ಟೀಕು**	ಶ್ಲೋಕ, ಟೀಕು
೧೫"×೧.೪"	ರಾಮಕೃಷ್ಣಸೂರಿ	೧೯ನೆಯ ಶತಕ
೧–೨೮೪ ಪತ್ರ	೫ ಪಂಕ್ತಿ	೭೦ ಅಕ್ಷರ

ಆದಿ : ಗೀತಾವ್ಯಾಖ್ಯಾನ ಬರವುದಕೆ ಶುಭಮಸ್ತು ॥

ಶ್ರೀಮತ್ಕ್ಷೀರಪಯೋಧಿ ರಾಜತನಯಾ ಹೃತ್ಪಾದ ಹಂಸ ಮುನಿ
ಸ್ತೋಮಾರಾಧಿತ ನಾರದಾದಿ ವಿಲಸ ಯೋಗೀಂದ್ರ ಸಂಸೇವಿತಂ
ಭೂಮಾನಂದ....ದೇಕವಿಗ್ರಹಮುಖಂ ಶ್ರೀವೆಂಕಟಾದ್ರೀಶ್ವರಂ
ಪ್ರೇಮೋದ್ಭಾಸಿ ಕಟಾಕ್ಷದಿಂ ಸಲಗುಹೆ ಬ್ರಹ್ಮಾದಿ ದೇವಾದಿಪಂ ॥
ಕಂ ॥ ಪರತತ್ವಬೋಧಾ ತರಣಿರ್ಹ
ನುರುಭವಜಲನಿಧಿಯ ಜಲದಾಂಟಿಶಿಂತು ಭ
ಕ್ತರನಾದರಿಸಿ ನಿಜಪದವನ್ನೈದಿ
ಪರಮಾತುರಂತು ಬಾಲಕೃಷ್ಣವಿಭುಗತಿ ನಮಿಸೇ ॥

x x x x

ವಚನ ॥ ಶ್ರೀಮದಾದಿನಾರಾಯಣನು ಸಮಸ್ತ ಪ್ರಪಂಚವಂ ನಿರ್ಮಿಸಿ ಆ ಪ್ರಪಂಚದ ಸ್ಥಿತಿಯಂ ಮಾಡಲಿಚ್ಛೈಸುತಿದ್ದವನಾಗಿ ಆ ಪ್ರಪಂಚ ಸ್ಥಿತ್ಯರ್ಥವಾಗಿ ಮರೀಚಿದಕ್ಷ x x x ಮೊದಲಾದ ಋಷಿಗಳನು ಸಮಸ್ತ ಪ್ರಾಣಿಗಳನ್ನೂ ಸ್ರುಜಿಸಿ ಅದರೊಳಗೆ ಮರಿಚ್ಯಾದಿ ನವಬ್ರಂಹ್ಮರಿಗೆ ಯಜ್ಞದಾನ ವೇದಾಧ್ಯಯನಾದಿ ಧರ್ಮವನುಪದೇಶಿಶಿದನು.

ಅಂತ್ಯ : ಶ್ಲೋ ॥ ಯತ್ರ ಯೋಗೀಶ್ವರಃ ಕೃಷ್ಣೋ ಯತ್ರ ಪಾರ್ಥೋ........
....ಧೃವಾ ನೀತಿರ್ಮತಿಮಮ ॥

ಟ ॥ ಯೋಗೀಶ್ವರಃ । ಕ್ರಿಷ್ಣಃ । ಯೋಗಮಯಾಧೀಶ್ವರನಾದ ಶ್ರೀಕೃಷ್ಣನು । ಯತ್ರ । ಆರ ಪಕ್ಷದಲ್ಲಿದ್ದಾನೆಯೋ x x x ನ್ಯಾಯವು ಅಲ್ಲಿ ಸ್ಥಿರವಾಗಿ ಯಿರುವದು ಯಿತಿ ಹೀಗೆಂದು । ಮೇ ಮತಿಃ । ನಂನ ಬುದ್ಧಿಯು । ೭೮ ॥ ಹರಿಃ ಓಂ ತತ್ಸದಿತಿ ಶ್ರೀಮನ್ಮಹಾಭಾರತೆ ಶತಸಹಸ್ರ ಸಂಹಿತಾಯಂ ವೈಯಾಶಿಕ್ಯಾಂ ಶ್ರೀಭೀಷ್ಮಪರ್ವಣಿ ಭಗವದ್ಗೀತಾಸೂಪನಿಷತ್ಸು । ಪರಬ್ರಂಹ್ಮ ವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕ್ರಿಷ್ಣಾರ್ಜುನ ಸಂವಾದೆ ಸರ್ವೋಪನಿಷದರ್ಥ ಪ್ರತಿಪಾದಕ ಪರಮಾರ್ಥನಿರ್ಣಯ

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ಕೆಲವು ಪತ್ರಗಳ ಅಂಚು ಮುರಿದಿದೆ. ಆರಂಭ ಮತ್ತು ಅಂತ್ಯದಲ್ಲಿ ಕೆಲವು ತಪ್ಪಾಗಿ ಬರೆದಿರುವ ಅನುಪಯುಕ್ತ ಪತ್ರಗಳಿವೆ. ಮಧ್ಯೆಮಧ್ಯೆ ಕೆಲವು ಗರಿಗಳು ಮುರಿದು ತುಂಡಾಗಿವೆ.

1103

ಕೆ. ೨೭೮	**ಭಗವದ್ಗೀತಾ ಟೀಕು**	ಶ್ಲೋಕ, ಟೀಕು
೧೪.೪″×೧.೮″	ಅನುಪಮಾನಂದಯೋಗಿ	೧೯ನೆಯ ಶತಕ
೧–೧೨೫ ಪತ್ರ	೬ ಪಂಕ್ತಿ	೫೪ ಅಕ್ಷರ

ಆದಿ : ....ರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥
ಯಲೆ ಸಂಜಯನೆ ಧರ್ಮಕ್ಷೇ........ಕಾರಣವಾದ ಕುರುಕ್ಷೇತ್ರೇ ಕುರುಕ್ಷೇತ್ರದಲ್ಲಿ ಯುಯುತ್ಸವಃ । ಯುಧವ ಮಾ....ಸಮವೇತಾಃ ಕೂಡಿದಂಥಾ । ಮಾಮಕಾಃ। ನಮ್ಮದು.....ಗಳು । ಪಾಂಡವಾಶ್ಚೈವ। ಧರ್ಮರಾಜ ಮೊದಲಾದಂಥಾವರು ! ಕಿಮಕುರ್ವತ । ಯೇನ....ಮಾಡಿದರು ॥

ಅಂತ್ಯ : ಯತ್ರ ಯೋಗೀಶ್ವರಃ ಕೃಷ್ಣಃ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿ........ಯೋಗೇಶ್ವರಃ। ಸರ್ವಪುರುಷಾರ್ಥಸಾಧನೋ ಪಾಯವಹ ಜೀವಪರಮಗುರುಗಳ ಏಕತ್ವಜ್ಞಾನಕ್ಕೆ ಒಡಯನಾಗಿದ್ದಾತನು ಕೃಷ್ಣಃ । ಕೃಷ್ಣನು । ಯತ್ರ । ....ಅರ್ಜುನನು। ಧನುರ್ಧರಃ । ಗಾಂಡೀವ ವೆಂಬ ಬಿಲ್ಲ ಧರಿಸಿಕೊಂಡಿದ್ದಾತನು । ತತ್ರ । ಆ ಪಾಂಡವರ ಪಕ್ಷದಲ್ಲಿ। ಶ್ರೀಃ। ಲಕ್ಷ್ಮಿಯು । ವಿಜಯಃ। ಗೆಲವು । ಭೂತಿಃ। ಸಮಗ್ರವಹ ಐಶ್ವರ್ಯವು। ಧ್ರುವಾ। ನೆಲ....ಡು ತೊಲಗದಿಹಂಥಾದು । ನೀತಿಃ। ನೀತಿಯು। ಮತಃ ....ಮನು। ನನ್ನ॥ ಯತ್ರ ಯೋಗೀಶ್ವರಃ ಕೃಷ್ಣಃ ಸ್ಥಿತ ಯತ್ರ ಧನುರ್ಧರಃ। ಪಾರ್ಥ ಸ್ಥಿರಃ ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮಮಂ ॥ ..... ರುವಿನ ಶಿಷ್ಯಶಿರೋಮಣಿಯಹ ಶ್ರೀನಾರಾಯಣಪ್ರಕಾಶ ಸದ್ಗುರುವಿನ ಶ್ರೀಪಾದ

ಪದ್ಮವರಭಕ್ತಿ ಮಕರಂದಮಧುಕರನಪ್ಪ ಶ್ರೀಮದನುಪಮಾನಂದಯೋಗಿ....
.... ಚಿತಮಪ್ಪ ಗೀತಾಪ್ರಕಾಶಿಕೆಯಲಿ ಸರ್ವಶಾಸ್ತ್ರಾಸ್ತ್ರನಿರ್ಣಯವಹ
x x x ಹದಿನೆಂಟನೆಯ ಅಧ್ಯಾಯ॥

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ತತ್ತ್ವಗಳು.

ವಿಶೇಷ : ೧, ೨, ೩, ೪, ೧೪, ೧೯, ೧೧೬ರಿಂದ ೧೨೫ ಪತ್ರಗಳು ಮುರಿದು ಹೋಗಿವೆ. ೧೧೩ನೆಯ ಪತ್ರದ ಒಂದು ಪಾರ್ಶ್ವದಲ್ಲಿ ಬರವಣಿಗೆ ಇಲ್ಲ. ಪ್ರತಿ ಶಿಥಿಲವಾಗಿದೆ.

1104

ಕೆ. ೪೧೦	ಭಗವದ್ಗೀತಾ ಟೀಕು	ಶ್ಲೋಕ, ಟೀಕು
೧೬.೫" × ೧.೫"	ಅನುಪಮಾನಂದಯೋಗಿ	೧೯ನೆಯ ಶತಕ
೧–೧೯೪ ಪತ್ರ	೫ ಪಂಕ್ತಿ	೬೬ ಅಕ್ಷರ

ಆದಿ : ಭಗವದ್ಗೀತೆ ವ್ಯಾಖ್ಯಾನ ಬರೆಯುವದಕ್ಕೆ ನಿರ್ವಿಘ್ನಮಸ್ತು.
ಹರಿಃ ಓಂ ಧೃತರಾಷ್ಟ್ರ ಉವಾಚ—
ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ॥
ಸಂಜಯ । ಯಲೆ ಸಂಜಯನೆ। ಧರ್ಮಕ್ಷೇತ್ರೇ। ಧರ್ಮ ಹುಟ್ಟುವುದಕ್ಕೆ ಕಾರಣ ವಾದ । ಕುರುಕ್ಷೇತ್ರೇ । ಕುರುಕ್ಷೇತ್ರದಲ್ಲಿ । ಯುಯುತ್ಸವಃ । ಯುದ್ಧವ ಮಾಡ ಲಿಚ್ಛೈಸಿ । ಸಮವೇತಾಃ। ಕೂಡಿದಂಥಾ। ಮಾಮಕಾಃ । ನಮ್ಮ ದುರ್ಯೋಧನ ಮೊದಲಾದ ಅರಸುಗಳು । ಪಾಂಡವಾಶ್ಚೈವ । ಧರ್ಮರಾಜ ಮೊದಲಾ ದಂಥಾವರು । ಕಿಮಕುರ್ವತ । ಯೇನು ಮಾಡಿದರು ॥ ೧ ॥

ಅಂತ್ಯ : ಯತ್ರ । ಯಾವದಾನೊಂದು ಪಕ್ಷದಲ್ಲಿ । ಯೋಗೇಶ್ವರಃ । ಸರ್ವಪುರುಷಾರ್ಥ ಸಾಧನೋಪಾಯವಹ ಜೀವಪರಮರುಗಳ ಯೇಕತ್ವಜ್ಞಾನಕ್ಕೆ ಒಡೆಯ ನಾಗಿದ್ದಾತನು x x x ತತ್ರ........ಪಕ್ಷದಲ್ಲಿ । ಶ್ರೀಃ । ಲಕ್ಷ್ಮಿಯು । ವಿಜಯ । ಗೆಲುವು । ಭೂತಿಃ । ಸಮಗ್ರವಹ ಐಶ್ವರ್ಯವೂ । ಧ್ರುವಾ । ನೆಲೆ.... ...... ಮತಿಃ । ಮತಉ । ಮಮ । ನನ್ನ.............ಧ್ರುವಾ ನೀತಿರ್ಮಮ ಮತಿಃ ॥ ೭೮ ॥ ಇಂತೆಂದು.........ಪ್ರಕಾಶಾ........ಶಿಷ್ಯಶಿರೋಮಣಿಯಹ ಶ್ರೀನಾರಾಯಣ........ಭಕ್ತಿಮಕರಂಪ ಮಧುಕರ........ನಂದಯೋಗೀಶ್ವರ ವಿರ ಚಿತಮಪ್ಪ ಶ್ರೀಗೀತಾಪ್ರಕಾಶಿಕೆಯಲ್ಲಿ ಸರ್ವಶಾಸ್ತ್ರಾರ್ಥನಿರ್ಣಯವಹ x x x ....ನೇ ಅಧ್ಯಾಯಃ ॥

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ತತ್ತ್ವಗಳು.

ವಿಶೇಷ : ಶಿಥಿಲ. ಕೊನೆಯ ಪತ್ರಗಳು ಅತಿಶಿಥಿಲ. ಅಂತ್ಯದಲ್ಲಿ ಬರೆಯುವಾಗ ಕೆಟ್ಟಿರುವ ೫ ಪತ್ರಗಳಿವೆ. ೧೫೭-೧೫೮ ಮತ್ತು ೧೭೫–೧೭೬ನೇ ಕ್ರಮಾಂಕದ ಪತ್ರಗಳ ಮಧ್ಯದಲ್ಲಿ ಕ್ರಮಾಂಕವಿಲ್ಲದ ಒಂದೊಂದು ಪತ್ರಗಳಿವೆ.

1105

ಕೆ.ಬಿ. ೪೨೫ ಭಗವದ್ಗೀತಾ ಟೀಕು (ಪ್ರಾಕೃತಾರ್ಥಸಂಗ್ರಹ) ಶ್ಲೋಕ, ಟೀಕು

೧೧" × ೪.೮" ಶ್ರೀನಿವಾಸಾಚಾರ್ಯ ೧೯ನೆಯ ಶತಕ

೧-೧೧೮ ಪತ್ರ ೧೩ ಪಂಕ್ತಿ ೪೪ ಅಕ್ಷರ

ಆದಿ : ಹನುಮದ್ಭೀಮಮಧ್ವಾರ್ಯ ಹೃತ್ಪಂಕಜಗತಂ ಹರಿಂ ।
ನತ್ವಾಸ್ಮದ್ಗುರುತುಷ್ಟ್ಯರ್ಥಂ ಬುದ್ಧಶುದ್ಧ್ಯೈ ಯಥಾಮತಿ ॥
ಪದ್ಮನಾಭಾರ್ಯಕುಲಜ ಶ್ರೀನಿವಾಸಾಭಿಧೋಹ್ಯಹಂ ॥
ಕರೋಮಿ ಭಗವದ್ಗೀತಾ ಪ್ರಾಕೃತಾರ್ಥಸ್ಯ ಸಂಗ್ರಹಂ ॥ ೩ ॥
ದುರ್ಬೋಧ ಮಹಿಮಾಗ್ರಂಥೋ ಸಾಹಸಂ ಕರವಾಣ್ಯಹಂ ।
ಪಾರಂ ಯಾತ್ವಸ್ಮದಾಚಾರ್ಯಗುರುಪಾದಕೃಪಾಬಲಾತ್ ॥
ಧೃತರಾಷ್ಟ್ರರಾಯನು ಈವಕ್ಷ್ಯಮಾಣವಾಕ್ಯವನ್ನು ಮಾತನಾಡಿದನು । ಯಲೋ ಸಂಜಯನೆ । ಧರ್ಮರೂಪವಾದ ಕುರುಕ್ಷೇತ್ರದಲ್ಲಿ । ಯುದ್ಧಮಾಡಲಿಕ್ಕೆ ಇಚ್ಛೆಯುಳ್ಳ ಮಿಳಿತರಾದ ನಮ್ಮಗಳ ಕಡೆಯವರೂನು । ಪಾಂಡವರುಗಳನು ಯೇನು ಮಾಡಿಯಾರು ॥ ೧ ॥

ಅಂತ್ಯ : ಹೀಗೆಂದು ಶ್ರೀವೇದವ್ಯಾಸದೇವರು ನನಗೆ ಉಪದೇಶಮಾಡಿದ್ದಾರಾದ್ದರಿಂದ ನೀನು ಪುತ್ರನಿಂದ ಸಹಿತನಾಗ್ಗಿ ಶ್ರೀಕೃಷ್ಣನನ್ನು ಶರಣಾತನಾಗ್ಗಿ x x x ಸರ್ವಸ್ವವೂ ಆ ಪಾಂಡವರಿಗೆ ಸಮರ್ಪಣ ಮಾಡೂ ಯಂದು ಸಂಜಯನು ಧೃತರಾಷ್ಟ್ರರಾಯನ ಕುರಿತು ಉಪದೇಶಮಾಡಿದ ಯಂಬ ಅರ್ಥ ಗ್ರಂಥಾಭಿಪ್ರಾಯ ಯೆಂದು ವೇದವ್ಯಾಸದೇವರು ಅಧಿಕಾರಿಜನರಗಳನ್ನು ಕುರಿತು ಹೇಳಿದ್ದು । ಇತ್ಯಶೇಷಮತಿಮಂಗಳಂ ॥ ಹರಿಃಓಂ ತತ್ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಪ್ರಾಕೃತಾರ್ಥಸಾರಸಂಗ್ರಹೇ ಅಷ್ಟಾದಶೋಧ್ಯಾಯಃ ॥
ಪರಿಧಾವ್ಯಾಹ್ವಯೇ ಅಷ್ಟೇ ಶುಭಾಮಾಸೇ ತ್ರಯೋದಶೇ
....ಚಾಂಗಾರಕೇ ವಾರೇ ಕೃಷ್ಣ ಪಕ್ಷೇ ಚ ಪುಣ್ಯದೇ
ಪದ್ಮನಾಭರ್ಯಕುಲಜ ಶ್ರೀನಿವಾಸಾಂಹಯೇನ ಚ
....ರಿಯತಃ ಕೃಷ್ಣ ಗೀತಾಯಾಃ ಪ್ರಾಕೃತಾರ್ಥಸ್ಯ ಸಂಗ್ರಹಃ ।
ತೇನ ಭವೇದಸ್ಯ................................
ಶ್ರಿಮಲ್ಲಕ್ಷ್ಮೀನೃಸಿಂಹಾ ....ಸದಾ ಮಮ ॥

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ದೇವನಾಗರಿ ಲಿಪಿ. ಪತ್ರಗಳು ಹುಳುಗಳಿಂದ ಶಿಥಿಲವಾಗಿವೆ.

1106

ಕೆ. ೨೫೪ | ಭಗವದ್ಗೀತಾ ಟೀಕು | ಶ್ಲೋಕ, ಟೀಕು
೧೦.೩″ × ೧.೬″ | ? | ?
೧–೧೨೭ ಪತ್ರ | ೧೦ ಪಂಕ್ತಿ | ೪೦ ಅಕ್ಷರ

ಆದಿ : ಹೇತವೇ ಜಗತಾಮೇವ ಸಂಸಾರಾರ್ಣವಸೇತವೆ ।
ಪ್ರಭವೆ ಸರ್ವವಿದ್ಯಾನಾಂ ಶಂಭವೇ ಗುರವೇ ನಮಃ ॥
ಧೃತರಾಷ್ಟ್ರಉವಾಚ–ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥
ಟೀಕು॥ಭೋ ಸಂಜಯ।ಯಲೆ ಸಂಜಯನೆ।ಧರ್ಮಕ್ಷೇತ್ರೇ।ಧರ್ಮಕ್ಷೇತ್ರವಾದ। ಕುರುಕ್ಷೇತ್ರೇ । ಕುರುಕ್ಷೇತ್ರದಲ್ಲಿ । ಸಮವೇತಾಃ । ಕೂಡಿದ್ದ । ಯುಯುತ್ಸವಃ ! ಯುದ್ಧಯಿಚ್ಛೆಯನುಳ್ಳ । ಮಾಮಕಾಃ । ನಮ್ಮವರೂ । ಪಾಂಡವಾಶ್ಚೈವ ಪಾಂಡವರೂ । ಕಿಂ । ಯೇನನ್ನು । ಅಕುರ್ವತ । ಮಾಡಿದರು ॥

ಅಂತ್ಯ: ಅಧಿಕಾರಿಯಹ ಸ್ವಯಂಪ್ರಕಾಶರೂಪನಹ ನನ್ನ ಸಂನಿಧಿಸತ್ತಾಮಾತ್ರದಿಂದಲೆ ಜೀವರ ಮೋಹಿಸುವ ಅವಿದ್ಯಾಲಕ್ಷಣವಹ ನನ್ನ ಮಾಯೆಯೂ ಸ್ಥಾವರ ಜಂಗಮಾತ್ಮಕವಹ ಜಗತ್ತನ್ನು ಸ್ತುತಿಸುತ್ತಂ ಯಿಹದೂ । ಆ ಪ್ರಕೃತಿರೂಪ ವಹ ಮಾಯಾಜ್ಯೇಷ್ಟೆನನ್ನಧೀನವಾಗಿಹ ಕಾರಣ ಜಗತ್ತು ಹುಟ್ಟುತ್ತಯಿರಲು ಕರ್ತೃತ್ವ ನನ್ನಲ್ಲಿ ಉಪಚಾರವಾಗಿಹುದು । ನಿತ್ಯ ಶುದ್ಧ........

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ಅಸಮಗ್ರ ಪ್ರತಿ. ೧೦೧ ಕ್ರಮಾಂಕದ ಎರಡು ಪತ್ರಗಳಿವೆ. ಇದರಲ್ಲಿ ಒಂದು ಪತ್ರದ ಒಂದೇ ಕಡೆಯಲ್ಲಿ ಬರವಣಿಗೆ ಇದೆ.

1107

ಕೆ. ಬಿ. ೪೧೩ | ಭಗವದ್ಗೀತಾ ಟೀಕು | ಶ್ಲೋಕ, ಟೀಕು
೯.೪″×೮.೩″ | ? | ?
೧–೭೭ ಪತ್ರ | ೨೪ ಪಂಕ್ತಿ | ೩೨ ಅಕ್ಷರ

ಆದಿ : ಪುರುಜಿತ್ । ಪುರುಜಿತ್ ಎಂಬ ರಾಯನು । ಕುಂತಿಭೋಜಃ । ಕುಂತಿಭೋಜ ರಾಯನು । ಶೈಬ್ಯಶ್ಚ । ಶೈಬ್ಯನು । ನರಪುಂಗವಃ । ಮನುಷ್ಯೋತ್ತಮನಾದಂಥಾ ಶ್ರೇಷ್ಠನು ॥ ೫ ॥
ಯುಧಾಮನ್ಯುಶ್ಚವಿತಾನ್ತಃ ಉತ್ತಮೌಜಾಶ್ಚವೀರ್ಯವಾನ್ ।
ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ ॥

ಅಂತ್ಯ : ಯಕ್ರ ಯೋಗೇಶ್ವರಃ ಕೃಷ್ಣ ಯತ್ರ ಪಾರ್ಥೋ ಧನುರ್ಧರಃ
ತತ್ರ ಶ್ರೀರ್ವಿಜಯೋಭೂತಿಧ್ರುವಾನೀತಿರ್ಮತಿರ್ಮಮಾ ॥ ೭೮ ॥

ಯತ್ರ ದಾವ ದಾವ ಕಡೆಯಲ್ಲಿ x x x ಇತಿ । ಹೀಗೆ । ಮಮಾ । ನೆಂನ್ನ । ಮತಿಃ । ಬುದ್ಧಿ । ಧ್ರುವಾ । ಘಟ್ಟಿಯಾದಂಥಾದ್ದು । ಇಷ್ಟಂನ್ನು ತಿಳುದು ನಿನ್ನ ಮಗ ದುರ್‍ಯೋಧನಗೆ ಬುದ್ಧಿಕಲಿಸಿ ಆಗ್ರಹಬಿಡಿಸಿ ಶ್ರೀಕೃಷ್ಣಾರ್ಜುನರ ಶರಣಾಗತರ ಮಾಡು । ಇಲ್ಲದಿದ್ದರೆ ಶ್ರೀಭೀಮಶೇನದೇವರ ಗಧೆಘಾಯಕ್ಕೆ ವಳ ಗಾಗಿಹೋದಾನು । ಪಾಂಡುವರಿಗೆ ಶ್ರೀಕೃಷ್ಣದೇವರ ಪ್ರಸಾದದಿಂದ ಧರ್ಮ ಮಾರ್ಗದಿಂದ ವಿಜಯವೆಂದು ತಿಳಿ ॥ ೭೮ ॥ ಹರಿರೋಂ ತತ್ಸದಿತಿ ಶ್ರೀಮನ್ಮಹಾ ಭಾರತೇ x x x x ಅಷ್ಟಾದಶೋಧ್ಯಾಯಃ ॥

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ತತ್ತ್ವಗಳು.

ವಿಶೇಷ : ದೇವನಾಗರಿ ಲಿಪಿ. ಪುಸ್ತಕ ಶಿಥಿಲ. ಸಿದ್ಧಾರ್ಥಿಸಂ ॥ ಪುಷ್ಯಶುದ್ಧ ೫ ಗುರು ವಾರದಲ್ಲಿ ಇದನ್ನು ಬರೆದಿರುವುದಾಗಿ ಅಂತ್ಯದಲ್ಲಿ ಬರೆದಿದೆ. ಮಾಧ್ವಮತಾನು ಯಾಯಿಗಳು ಈ ವ್ಯಾಖ್ಯಾನವನ್ನು ಬರೆದಿರುವಂತೆ ತಿಳಿದುಬರುತ್ತದೆ. ಆದಿಯಲ್ಲಿ ೧ನೇ ಅಧ್ಯಾಯದ ೪ ಶ್ಲೋಕಗಳ ಟೀಕೆಯಿಲ್ಲ. ೫ನೇ ಶ್ಲೋಕದ ಕೊನೆಯ ಅರ್ಧದಿಂದ ಗ್ರಂಥವು ಆರಂಭವಾಗಿದೆ.

1108

ಕೆ.ಬಿ. ೨೪೮	**ಭಗವದ್ಗೀತಾರ್ಥಪ್ರತಿಪಾದಕ ಕೀರ್ತನೆ**	ಶ್ಲೋಕ, ಟೀಕು
೭.೮″ × ೬.೪″	?	?
೧–೧೮ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಭಗವದ್ಗೀತಾರ್ಥಪ್ರತಿಪಾದಕ ಕೀರ್ತನ ಪ್ರಾರಂಭಃ ॥ ಶ್ರೀರಸ್ತು ॥
ಮೋಹನರಾಗೇಣ ಗೀಯತೆ ॥
ಮೂಲ । ಭಜ ಪಾರ್ಥಸಾರಥಿ ಮಯಿ ಚಿತ್ತಶರಣಂ ॥ ಪ ॥
ತ್ಯಜಾನರ್ಥಾರಿಷಡ್ವರ್ಗಂ ವಿಷಯಾಂ ಶ್ಚ ವಿರಸಾನ್ ॥
ಭಜಗಾರ್ಥ ॥ ಅನುಪಲ್ಲವಿ ॥

ಟೀಕು॥ಎಲೈ ಮನಸ್ಸೇ ನೀನು ಪಾರ್ಥಸಾರಥಿಯಾದ ಶ್ರೀಕೃಷ್ಣನನ್ನು ಸಂರಕ್ಷಕ ನನ್ನಾಗಿ ಸೇವಿಸು । ಅನರ್ಥಕಾರಣಗಳಾದ ಅರಿಷಡ್ವರ್ಗವನ್ನು ವಿರಸಗಳಾದ ವಿಷಯಗಳನ್ನೂ ಕೂಡ ಪರಿಹರಿಸು ! ಅರಿಷಡ್ವರ್ಗವೆಂದರೆ ಕಾಮವು ಕ್ರೋಧವು ಲೋಭವು ಮೋಹವು ಮದವು ಮತ್ಸರವು ಇವುಗಳು. ಕಾಮವೆಂದರೆ ಅಭಿಮತ ವಸ್ತುವಿನಲ್ಲಿ ರಾಗವು । ಕ್ರೋಧವೆಂದರೆ ಅನಭಿಮತದಲ್ಲಿ ದ್ವೇಷವು । ಲೋಭ ವೆಂದರೆ ಪ್ರಾಪ್ತವಸ್ತುವಿನಲ್ಲಿ ಸ್ನೇಹವು । ಮೋಹವೆಂದರೆ ಅವಿವೇಕವು । ಮದ ವೆಂದರೆ ಧನಾದಿಪ್ರಾಪ್ತಿಯಿಂದ ಉಂಟಾಗುವ ಮತ್ತತನವು । ಮತ್ಸರವೆಂದರೆ ಅನ್ಯರ ಸಂಪತ್ತನ್ನು ನೋಡಿ ಉಂಟಾಗುವ ದ್ವೇಷವು । ವಿಷಯಗಳೆಂದರೆ ಶಬ್ದ ರೂಪ ರಸ ಸ್ಪರ್ಶ ಗಂಧಗಳು ಶಾಸ್ತ್ರನಿಷಿದ್ಧಗಳೂ ಪರಿತ್ಯಾಜ್ಯಗಳೂ, ಶಾಸ್ತ್ರ ವಿಹಿತಗಳು, ಅಭ್ಯಾಸಯೋಗ್ಯಗಳು ॥

ಅಂತ್ಯ : ಮೂ॥ ಕಾಯಾದಿ ವಿರಚಿತಮಖಿಲಮಪಿ ಚ ಕರ್ಮ।
ಕೃಷ್ಣೇಽಸ್ತು ಪರಿಹೃತಸಂಸಾರ ತೃಷ್ಣೆ ॥
ವೆಂಕಟಗಿರಿವಾಸೆ ಪಾಲಿತನಿಜದಾಸೇ
ಶುಭಲಕ್ಷ್ಮೀಸುವಿಲಾಸೇ—ಶ್ರೀ ಶ್ರೀನಿವಾಸೇ॥
ಭಜ ಪಾರ್ಥ॥ ೩೦॥

ಟೀಕು॥ ಸರ್ವಕರ್ಮಸಂನ್ಯಾಸರೀತಿಯು॥ ಕಾಯಾದಿಗಳಿಂದ ಮಾಡಲ್ಪಟ್ಟಸಮಸ್ತ ಕರ್ಮವು ವೇಂಕಟಾಚಲಶಿಖರದಲ್ಲಿ ವಾಸವಂ ಮಾಡುತ್ತಲಿರುವಂಥಾ ಸಂರಕ್ಷಿಸಲ್ಪಟ್ಟ ಸ್ವದಾಸಜನರುಳ್ಳಂಥಾ ಮಂಗಳಕರವಾದ ಶ್ರೀದೇವೀವಿಲಾಸವುಳ್ಳಂಥಾ ಶ್ರೀ ಶ್ರೀನಿವಾಸನಾದಂಥಾ ಪರಿಹರಿಸಲ್ಪಟ್ಟ ಸಂಸಾರತೃಷ್ಣೆಯುಳ್ಳಂಥಾ ಶ್ರೀ ಶ್ರೀಕೃಷ್ಣನಲ್ಲಿ ಸಮರ್ಪಿತವಾಗಲಿಯಂದು ಮಾಡಲ್ಪಟ್ಟ ಸರ್ವಕರ್ಮಸಂನ್ಯಾಸವು॥ ಭಗವದ್ಗೀತಾರ್ಥ ಪ್ರತಿಪಾದಕ ಕೀರ್ತನಂ ಸಂಪೂರ್ಣಂ॥

ವಿಷಯ : ಭಗವದ್ಗೀತೆಯ ಅರ್ಥವನ್ನು ಪ್ರತಿಪಾದಿಸುವ ಕೀರ್ತನೆಗಳು ಮತ್ತು ಅದರ ಟೀಕು.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಕೆಲವು ಕಡೆ ತಪ್ಪುಗಳನ್ನು ತಿದ್ದಿದೆ.

1109

ಕೆ. ೧೮೭/೧	**ಭಗವದ್ಗೀತೆ**	ಭಾಮಿನೀಷಟ್ಪದಿ
೩.೮" × ೧.೮"	ನಾಗರಸ	೧೬೫೦
೧–೫೧ ಪತ್ರ	೮ ಪಂಕ್ತಿ	೬೬ ಅಕ್ಷರ

ಆದಿ : ಶ್ರೀ ಭಗವದ್ಗೀತೆ ಷಟ್ಪದಿ—ಅರ್ಜುನನಿಗೆ ಕೃಷ್ಣಸ್ವಾಮಿ ವುಪದೇಶಿಸಿದ ಸಂಸ್ಕೃತ ಭಗವದ್ಗೀತೆಯಂನ್ನು ಕಂನಡಿಶಿದ ಕಂನ್ನಡ ಭಗವದ್ಗೀತೆಯನ್ನು ಷಟ್ಪದಿಯ ವೋದುವ ಮೇರೆಗೆ ವೋದ್ರುವ ಭಗವದ್ಗೀತೆಗೆ ಮಂಗಳಮಹಾಶ್ರೀ ಶುಭಮಸ್ತು॥
ಅನ್ಯಶಾಸ್ತ್ರಸಮೂಹವದನು
ಮನ್ನಿಸದೆ ನೆರೆ ಬಿಟ್ಟು ಗೀತೆಯ
ನುನ್ನತದ ಹರಿತುಷ್ಟಗೋಸುಗ ಪರಸಿ ಪಾಡುವದೂ
ಸನ್ನಹಿತ ವರಶಾಸ್ತ್ರಮಯ ಸಂ
ಪನ್ನಶ್ರುತಿಯ ಸಕಲಧರ್ಮದಿ
ಪೂರ್ನವೀ ಶ್ರೀಗೀತೆಯನು ಅಭ್ಯಾಸಿಸೂದೆಂದಾ॥
ನಾಕು ವೇದಂಗಳಲಿ ಹರದಿಹ
ಬೇಕೆನಿಪ ಸಾರಾರ್ಥವನು ತೆಗ
ದಾ ಕಮಲಲೋಚನನು ಗೀತಾಶಾಸ್ತ್ರವನು ರಚಿಸೀ

ಲೋಕಮೂರನು ಸಲಹಬೇಕೆಂ
ದೀ ಕ್ರಿಯೊಪಾರ್ಥಂಗೆ ಹೇಳಿದ
ವ್ಯಾಕುಲತೆಯನು ಬಿಟ್ಟದನು ಕೇಳುವುದು ನೀವೆಂದಾ ||

ಅಂತ್ಯ : ಇತಿ ಪೀಠಿಕಾ ಪ್ರಕರಣಂಗಳು—
ಯೆಲ್ಲಿ ಯೋಗಂಗಳಿಗೊಡೆಯನಹ
ಸಲ್ಲಲಿತ ಶ್ರೀಕೃಷ್ಣನಿಹ ಮ
ತ್ತಲ್ಲಿ ಧನುವನು ಧರಿಸಿಕೊಂಡರ್ಜುನನು ನೆಲಸಿಹನು
ಅಲ್ಲಿಹಳು ಶ್ರೀಲಕ್ಷ್ಮಿ ಜಯಸಿರಿ
ಯೆಲ್ಲ ಪರಮೈಶ್ವರ್ಯನೀತಿಗ
ಳಲ್ಲಿ ನೆಲಸಿಹವೆಂನ ಮತ ಧೃತರಾಷ್ಟ್ರ ಕೇಳೆಂದಾ || ೭೯ ||
ಹರಿಃ ಓಂ ತತ್‌ಸದಿತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು x x x ಅಷ್ಟಾ
ದಶೋಧ್ಯಾಯಃ || x x x ಅಂತ್ತು ಅಧ್ಯಾಯ ೧೮ಕ್ಕಂ ಪದನು ೭೦೨ಕ್ಕಂ
ಮಂಗಳಮಹಾಶ್ರೀ ||

ವಿಷಯ : ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ತತ್ತ್ವಗಳು.
ವಿಶೇಷ : ಇದರೊಂದಿಗೆ ಮೋಹನತರಂಗಿಣಿಯೆಂಬ ಗ್ರಂಥವೂ ಇದೆ.

1110

ಕೆ. ೨೨೮ **ಭಗವದ್ಗೀತೆ (ಸಟೀಕು)** ಭಾಮಿನೀ ಷಟ್ಪದಿ, ಟೀಕು
೧೩.೪" × ೨.೨" ನಾಗರಸ ೧೬೫೦
೧–೧೪೧ ಪತ್ರ ೯ ಪಂಕ್ತಿ ೬೦ ಅಕ್ಷರ

ಆದಿ : ಭಗವದ್ಗೀತೆಯ ಟೀಕಾ ಸಹಾ ಬರವದಕ್ಕೆ ಶುಭಮಸ್ತು ||
ಧೃತರಾಷ್ಟ್ರೌವಾಚ–ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ|
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ || ೧ ||
ಹೇ ಸಂಜಯ | ಯಲೆ ಸಂಜಯನೆ | ಧರ್ಮಕ್ಷೇತ್ರೇ | ಧರ್ಮಕ್ಕೆ ಸ್ಥಾನವಾಗಿ
ದ್ದಂಥಾ | ಕುರುಕ್ಷೇತ್ರೇ | ಕುರುಕ್ಷೇತ್ರದಲ್ಲಿ | ಮಾಮಕಾಃ | ನನ್ನ ಕುಮಾರರು
ಗಳು | ಪಾಂಡವಾಶ್ಚೈವ | ಪಾಂಡುವಿನ ಕುಮಾರರುಗಳೂ | ಯುಯುತ್ಸವಃ|
ಯುದ್ಧವ ಮಾಡಲು ಯಿ ...ವರುಗಳಾಗಿ | ಕಿಮಕುರ್ವತ | ಯೇನು ಮಾಡಿ
ಯಾರೈ | ಯೆಂದು ಕೇಳಿದನು | ಯೆಂದು ಜನಮೇಜಯರಾಯನ ಕುರಿತು
ವೈಶಂಪಾಯನರು ನುಡಿದರು |

ಅಂತ್ಯ : ಯೆಲ್ಲಿ ಯೋಗಂಗಳಿಗೊಡೆಯನಹ
ಸಲ್ಲಲಿತ ಶ್ರೀಕೃಷ್ಣನಿಹ ಮ
ತ್ತಲ್ಲಿ ಧನುವನು ಧರಿಸಿಕೊಂಡರ್ಜುನನು ನೆಲಸಿದನೂ

ಅಲ್ಲಿಹಳು ಶ್ರೀ ಲಕ್ಷ್ಮಿ ಜಯಸಿರಿ
ಯಲ್ಲಿಹಳು ಪರಮೈಶ್ವರಿಯ ನೀತಿಗ
ಳಲ್ಲಿ ನೆಲಸಿಹವೆಂಬುದೆಂನಭಿಮತವು ಕೇಳೆಂದಾ || ೭೭ ||
ಕೇಳು ಜನಮೇಜಯ ಧರಿತ್ರೀ
ಪಾಲ ಕೃಷ್ಣ ಕೃಪಾಳು ಪಲುಗುಣ
ರುಭಯ ಸೇನೆಯ ಮಧ್ಯದಲಿ ರಥದಾ
ಮೇಲ ಸಂವಾದಿಸಿದ ಧರ್ಮವ
ಹೇಳಿದನು ಸಂಜಯನು ಕುರುಭೂ
ಪಾಲ ಧೃತರಾಷ್ಟ್ರಂಗೆ ಹರುಷದಲೆಂದು ಮುನಿ ನುಡಿದಾ ||
ಓಂ ತತ್ಸದಿತಿ ಪರಮಾರ್ಥ ತತ್ವ ನಿರೂಪಣ ಯೋಗೋ ನಾಮ ಅಷ್ಟಾದಶೋ
ಧ್ಯಾಯಃ ||

ವಿಷಯ : ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶಿಸಿದ ತತ್ತ್ವಗಳು.

ವಿಶೇಷ : ೧೩೬ ನೆಯ ಪತ್ರದ ಒಂದು ಕಡೆ ಅಂಚು ಮುರಿದು ಹೋಗಿದೆ.
"ಪೈಂಗಳ ನಾಮ ಸಂ|| ಫಾಲ್ಗುಣ ಶು ೧೫ ದಿವಸಕ್ಕೆ ಭಗವದ್ಗೀತೆಯ ಮೂಲಗ್ರಂಥ ಪದಾರ್ಥ ತದರ್ಥದ ಕಂನಡ ಷಟ್ಪದಿಯ ಪದಗಳನು ಸಿಂಗೈ ಭಾಗವತರ ಮಗ ನರಸೈಯನು ಬರವದು" ಎಂದು ಕೊನೆಯಲ್ಲಿದೆ.

1111

ಕೆ.ಎ. ೭೯	**ಭಗವದ್ಗೀತೆ**	ಭಾಮಿನೀ ಷಟ್ಪದಿ
೧೨.೯" × ೭.೮"	ನಾಗರಸ	೧೬೫೦
೧–೧೬೮ ಪತ್ರ	೧೯ ಪಂಕ್ತಿ	೨೪ ಅಕ್ಷರ

ಆದಿ : ಗೀತಾಭಾರತ | ಪೀಠಿಕೆ |
ಶ್ರೀ ಲಲಿತ ಶುಭಗಾತ್ರ ವಿಕಸಿತ
ನೀಲಸರಸಿಜನೇತ್ರ ವರಮುನಿ
ಬಾಲ ಸನ್ನುತಿಪಾತ್ರ ಸರ್ವೇಶ ಸುಚಾರಿತ್ರ
ಶೈಲಜಾವರ ನಾಮ ಪೃಥ್ವೀ
ಪಾಲ ವಂಶ ಲಲಾಮ ರಾಜಿತ
ನೀಲಮೇಘಶ್ಯಾಮ ರಕ್ಷಿಪುದೆನ್ನ ರಘುರಾಮಾ || ೧ ||

x x x x

ಯೋಗಿಕಾಶ್ಯಪ ಗೋತ್ರಸಂಭವ
ನಾಗಿರುವ ವಿಶ್ವೇಶ್ವರನ ಸುತ
ನಾಗರಸ ನಾನೊಮ್ಮೆ ಸದ್ಗುರುವಿಂಗೆ ವಂದಿಸಲು

ಆಗ ಶಂಕರಗುರು ನಿರೂಪಿಸ
ಲಾಗಿಯಾನಂದಾತ್ಮ ಪದದಿಂ
ಬೇಗ ಕನ್ನಡಿಸಿದೆನು ಗೀತಾರ್ಥವನು ಬುಧರೊಲಿಯೇ ॥ ೬ ॥

ಅಂತ್ಯ : ಯಲ್ಲಿ ಯೋಗಕ್ಕೊಡೆಯನಹ ಮಿಗೆ
ಸಲ್ಲಲಿತ ಶ್ರೀ ಕೃಷ್ಣನಹ ಮ
ತ್ತಲ್ಲಿ ಧನುವನು ಧರಿಸಿಕೊಂಡರ್ಜನನು ನೆಲಸಿಹನೋ
ಅಲ್ಲಿಹಳು ಮಹಾಲಕ್ಷ್ಮಿ ಜಯಸಿರಿ
ಯಲ್ಲಿ ಪರಮೇಶ್ವರನ ನೀತಿಗ
ಳಿಲ್ಲಿ ನೆಲಸಿಹದೆಂನ್ನ ಮತ ಧೃತರಾಷ್ಟ್ರ ಕೇಳೆಂದ ॥ ೭೯ ॥ ॥ ಪ ॥
ಕೇಳು ಜನಮೇಜಯ ಧರಿತ್ರೀ
ಪಾಲ ಕುರುಭೂಮಿಯಲಿ ಕೃಷ್ಣ ಕೃ
ಪಾಳು ಫಲುಗುಣರುಭಯಸೇನೆಯ ಮಧ್ಯದಲಿ ರಥವಾ
ಮೇಲೆ ಸಂವ್ವಾದಿಸಿದ ಧರ್ಮವ
ಹೇಳಿದನು ಸಂಜಯನು ಕುರುಭೂ
ಪಾಲ ಧೃತರಾಷ್ಟ್ರಂಗೆ ಹರುಷದಲೆಂದು ಮುನಿ ನುಡಿದಾ ॥ ೮೦ ॥
ಇತಿ ಶ್ರೀ ಭಗವದ್ಗೀತಾಸೂಪನಿಷತ್ಸು x x x x ಅಷ್ಟಾದಶೋಧ್ಯಾಯಃ ಸಮಾಪ್ತಃ। ಅಂತು ಅಧ್ಯಾಯ ೧೮ ಕ್ಕಂ ಪದನು ೭೩೭ ಕ್ಕಂ ಮಂಗಳ ಮಹಾಶ್ರೀ ॥

ವಿಷಯ : ಅರ್ಜುನನಿಗೆ ಶ್ರೀ ಕೃಷ್ಣನು ಬೋಧಿಸಿದ ತತ್ತ್ವಗಳು.

ವಿಶೇಷ : ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ. ಆರಂಭದ ಕೆಲವು ಪದ್ಯಗಳಲ್ಲಿ ತಪ್ಪುಗಳನ್ನು ತಿದ್ದಿದೆ. ಕೆಲವು ಕಡೆ ಪದ್ಯಗಳಿಗೆ ವಿಸಂವಾದಿಯಾದ ಸಂಸ್ಕೃತ ಭಗವದ್ಗೀತೆಯ ಶ್ಲೋಕಗಳನ್ನು ಪಕ್ಕದ ಪುಟದಲ್ಲಿ ಬರೆದಿದೆ. ಒಂದೊಂದು ಕಡೆ ಶಕಟರೇಫವಿದೆ.

1112

ಕೆ.ಎ. ೧೮೩/೪	**ಭಗವದ್ಗೀತೆ**	ಭಾಮಿನೀ ಷಟ್ಪದಿ
೧೧" × ೮"	ನಾಗರಸ	೧೬೫೦
೭೧–೧೬೮ ಪತ್ರ	೨೧ ಪಂಕ್ತಿ	೨೭ ಅಕ್ಷರ

ಆದಿ : ಶ್ರೀ ಮದ್ಭಗವದ್ಗೀತಾ ಭಾರತಾ ॥
ನಾರಾಯಣಂ ನಮಸ್ಕೃತ್ಯ ನರಂಚ್ಚೈವ ನರೋತ್ತಮಂ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥

x x x x

ಯೋಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ
ಸಂಜೀವಯತ್ಯಖಿಳ ಶಕ್ತಿಥರಸ್ವಧಾಮಾ ।
ಅಂನ್ಯಾಶ್ಚ ಹಸ್ತ ಚರಣ ಶ್ರವಣ ತ್ವಗಾದೀನ್
ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಂ || ೯ ||

|| ಪೀಟಿಕಾಧ್ಯಾಯ ||

ಶ್ರೀ ಲಲಿತ ಶುಭಗಾತ್ರ ವಿಕಶಿತಲ
ನೀಲ ಸರಸಿಜನೇತ್ರ ವರಮುನಿ
ಜಾಲ ಸಂನುತಪಾತ್ರ ಸರ್ವೇಶ್ವರ ಸುಚಾರಿತ್ರಾ
ಶೈಲಜಾಪ್ರಿಯನಾಮ ಪೃಥ್ವೀ
ಪಾಲ ವಂಶಲಳಾಮ ರಾಜಿತ
ನೀಲಮೇಘಶ್ಯಾಮ ರಕ್ಷಿಪುದೆಂನ ರಘುರಾಮ || ೧ ||

x x x x

ಯೋಗಿಕಾಶ್ಯಪ ಗೋತ್ರಸಂಭವ
ನಾ ಗರುವ ವಿಶ್ವೇಶ್ವರನ ಸುತ
ನಾಗರಸಗಾನೊಂಮೆ ಸದ್ಗುರುವಿಂಗೆ ವಂದಿಸಲೂ
ಆಗ ಶಂಕರಗುರು ನಿರೀಕ್ಷಿಸ
ಲಾಗಿಯಾನಂದಾತ್ಮ ಪದದಿಂ
ಜೇಗ ಕಂನ್ನಡಿಶಿದೆನು ಗೀತಾರ್ಥವನು ಬುದರೊಲಿಯೆ || ೭ ||

ಅಂತ್ಯ : ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ |
ತತ್ರ ಶ್ರೀರ್ವಿಜಯೋ ಭೂತಿರ್ಧೃವಾ ನೀತಿರ್ಮತಿರ್ಮಮ || ೭೮ ||
ಯೆಲ್ಲಿ ಯೋಗಂಗಳಿಗೊಡೆಯನಹ
ಸಲ್ಲಲಿತ ಶ್ರೀ ಕೃಷ್ಣನಿಹ ಮ
ತ್ತೆಲ್ಲಿ ಧನುವನು ಧರಿಸಿಕೊಂಡರ್ಜುನನು ನೆಲಸಿಹನು
ಅಲ್ಲಿಹಳು ಶ್ರೀಲಕ್ಷ್ಮಿ ಜಯಸಿರಿ
ಯಲ್ಲಿ ಪರಮೈಶ್ವರ್ಯ ನೀತಿಗ
ಳಲ್ಲಿ ನೆಲಸಿಹ ಕೃಷ್ಣನೆಲೆ ಧೃತರಾಷ್ಟ್ರ ಕೇಳೆಂದಾ || ೭ ||
ಧೃವಾನಿತಿರ್ಮತಿರ್ಮಮೇತಿ || ಹರಿ ಓಂ ತತ್ಸದಿತಿ ಶ್ರೀಮನ್ಮಹಾಭಾರತೆ
ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯ್ಯಾಸಿಕ್ಯಾಂ ಶ್ರೀ ಭೀಷ್ಮಪರ್ವಣಿ
ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಂಹ್ಮವಿದ್ಯಾಯಾಂ ಯೋಗಶಾಸ್ತ್ರೇ
ಶ್ರೀ ಕೃಷ್ಣಾರ್ಜುನ ಸಂವಾದೆ ಸಕಲೋಪನಿಷದರ್ಥ ಪ್ರತಿಪಾದಕ ಮೋಕ್ಷ
ಯೋಗೋ ನಾಮ ಅಷ್ಟಾದಶೋಧ್ಯಾಯಃ

ವಿಷಯ : ಅರ್ಜುನನಿಗೆ ಶ್ರೀ ಕೃಷ್ಣನು ಬೋಧಿಸಿದ ತತ್ತ್ವಗಳು.

ವಿಶೇಷ : ೧೬೯ ನೆಯ ಪತ್ರದಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಸಂಸ್ಕೃತ ಶ್ಲೋಕಗಳಿವೆ. ಮೂಲಭೂತವಾದ ಸಂಸ್ಕೃತ ಭಗವದ್ಗೀತೆಯ ಶ್ಲೋಕಗಳಿದ್ದು ಬಳಿಕ ಅದರ ಅನುವಾದ ರೂಪವಾದ ಕನ್ನಡ ಪದ್ಯಗಳಿವೆ. ಇದೇ ಪುಸ್ತಕದಲ್ಲಿ ಅನುಭವಾಮೃತ, ವೇದಾಂತ ಡಿಂಡಿಮ (ಸಂ), ನಕ್ಷತ್ರಮಾಲಿಕಾ (ಸಂ), ದ್ವಾದಶಮಂಜರೀ, ಅಪರಾಧ ಸ್ತೋತ್ರ—ಎಂಬ ಕೃತಿಗಳಿವೆ.

1113

ಕೆ.ಬಿ.೨೮	**ಭಗವದ್ಗೀತೆ**	ಭಾಮಿನೀಷಟ್ಪದಿ
೭.೭" × ೬.೩"	ನಾಗರಸ	೧೬೫೦
೧–೧೫೨ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಶುಭಮಸ್ತು ॥ ಭಗವದ್ಗೀತೆ ಬರೆಯುವದಕ್ಕೆ ನಿರ್ವಿಘ್ನಮಸ್ತು ॥

ತಂದೆ ನೀನೇ ಬಲ್ಲೆ ನಮಗಾ
ನಂದದಿಂದವೆ ಸಕಲ ಕರ್ಮದ
ಬಂಧ ಹರಿ ಬಂದನು ಕರುಣಿಶಿ ಕಾಯ್ದುದೊಲವಿನಲಿ ॥ ೧ ॥
ದಾನ ಜಪ ತಪ ತೀರ್ಥವಿಲ್ಲದೆ
ತಾನಖಿಳ ಯಜ್ಞಗಳಿಲ್ಲದೆ
ಧ್ಯಾನ ವೇದಾಧ್ಯಯನ ಸಕಲೇಂದ್ರಿಯದ ನಿಗ್ರಹದಾ
ಜ್ಞಾನಿಯಲ್ಲದೆ ಶಾಸ್ತ್ರಕೋವಿ
ಜ್ಞಾನವಿಲ್ಲದೆ ಮುಕ್ತಿ ನಮಗೆ ನಿ
ಧಾನದಿಂದೊದಗುವದೆ ಹೇಳೆಂದುದು ಮುನಿಸ್ತೋಮ ॥ ೨ ॥

x x x x

ವರ ಪರಬ್ರಂಹ್ಮವೆ ಮೊದಲೀ
ಶ್ವರನು ನಾ ಮಾಯೆಯೊಳು ತಾ ಗೋ
ಚರಿಸಿ ಸಕಲ ಚರಾಚರಂಗಳನೊಲಿದು ವಿಸ್ತರಿಸಿ
ಪರಿಪರಿಯ ಗುಣಮೂರ್ತಿಗಳಲವ
ತರಿಸಿ ಭಕ್ತರ ಕಾವ ಭರದಿಂ
ನರಗೆ ಸಾರಥಿಯಾದ ಕೃಷ್ಣನೆ ಸಲಹು ನೀ ಜಗವಾ ॥ ೩೮ ॥
ಪೀಠಿಕಾಧ್ಯಾಯ ಸಂಪೂರ್ಣಂ ॥

ಅರ್ಜುನ ವಿಷಾದಯೋಗ

ಉಭಯ ಬಲ ಮಧ್ಯದಲ್ಲಿ ವಿಶ್ವ
ಪ್ರಭು ನಿರೀಕ್ಷಿಸೆ ಪಾರ್ಥ ತಾನತಿ
ರಭಸದಿಂ ಶೋಕಿಶುತ ರಥದೊಳು ಬಿಲ್ಲನಿಳುಹಿದನು ॥ ಪದನೂ ॥

ಅಂತ್ಯ : ಕೇಳು ಜನಮೇಜಯ ಧರಿತ್ರೀ
ಪಾಲ ಕುರುಭೂಪಾಲ ಕೃಷ್ಣ ಕೃ
ಪಾಳು ಫಲುಗುಣರುಭಯ ಸೇನೆಯ ಮಧ್ಯದಲಿ ರಥವಾ
ಮೇಲೆ ಸಂವಾದಿಶಿದ ಧರ್ಮವ
ಹೇಳಿದನು ಸಂಜಯನು ಕುರುಭೂ
ಪಾಲ ಧೃತರಾಷ್ಟ್ರಂಗೆ ಹರುಷದಲೆ ನಿಂದು ಮುನಿ ನುಡಿದಾ ‖ ೩೯ ‖
ಹರಿಃ ಓಂ ತತ್ಸದಿತಿ ಶ್ರೀಮನ್ಮಹಾಭಾರತೆ ಶತಸಹಸ್ರ ಸಂಹಿತಾಯಾಂ ವೈಯ್ಯಸಿಕ್ಯಾಂ ಶ್ರೀ ಭೀಷ್ಮಪರ್ವಣಿ ಶ್ರೀಭಗವದ್ಗೀತಾಸೋಪನಿಷ ಬ್ರಂಹ್ಮ ವಿದ್ಯಾಯಾಂ ಯೋಗಶಾಸ್ತ್ರೇ ಶ್ರೀ ಕೃಷ್ಣಾರ್ಜುನ ಸಂವಾದೆ ಸಕಲ ಶಾಸ್ತ್ರಾರ್ಥ ನಿರ್ನಯ ಸರ್ವೋಪನಿಷದರ್ಥ ಪ್ರತಿಪಾದಕ ಮೋಕ್ಷಯೋಗೋ ನಾಮ ಅಷ್ಟಾದಶೋಧ್ಯಾಯಃ ‖
ಹದಿನೆಂಟನೆ ಅಧ್ಯಾಯದ ಕುಂ ತಲು ಸಹ ಪದನೂ ೭೧೪ ಕಂ
ಮಂಗಳಮಹಾ ಶ್ರೀ ‖

ವಿಷಯ : ಶ್ರೀ ಕೃಷ್ಣನು ಅರ್ಜುನನಿಗೆ ಬೋಧಿಸಿದ ತತ್ತ್ವಗಳು.

ವಿಶೇಷ : ಅಕ್ಷರಗಳು ಸ್ಫುಟವಾಗಿಯೂ ಸುಂದರವಾಗಿಯೂ ಇವೆ. ಇದು ಶ್ರೀಮದ್ಭಗವದ್ಗೀತೆಯ ಕನ್ನಡ ಭಾಷಾಂತರ.

1114

ಕೆ.ಬಿ. ೩೪೮	**ಭಗವದ್ಗೀತೆ**	ಶ್ಲೋಕ, ಪದ್ಯ
೭.೯" × ೬.೪"	ನಿರಕ್ಷರಕುಕ್ಷಿ	?
೫೯ + ೭೬ + ೩೭ ಪತ್ರ	೧೮ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ ವಿಧೀರವಿಪಾಹಿಪೇಶಶ
ಜೀವರಾತ್ಮ ಭವಾರ್ಕ ಶಶಿಧಿ
ದ್ದೇವರೃಷಿ ಗಂಧರ್ವ ಕಿನ್ನರ ಶಿದ್ಧ ಸಾಧ್ಯಗಣಾ
ಸೇವಿತ ಪದಾಂಬುಜ ಪರಾಪರ
ದ್ವಾವಿವನೌ ಪುರುಷಾಖ್ಯ ಭಕ್ತರ
ಕಾವ ಕರುಣಾಸಾಂದ್ರ ಕರುಣಿಸು ಮತಿಗೆ ಮಂಗಳವಾ ‖ ೧ ‖
ಧರ್ಮಜಗೆ ದೃತರಾಷ್ಟ್ರತನುಜರ
ಧರ್ಮಕೃತ ಮೂಲಕ ಧರಿತ್ರೀ
ವರ್ಮ ಪಾರ್ಥಿವಕುಲಲಲಾಮರು ನೆರದು ರಣದೊಳಗೆ
ಧರ್ಮಮಯ ಯುದ್ಧಾಖ್ಯಹಿಂಸಾ
ಕರ್ಮವನು ಬಾಂಧವರು ತಂಮೊಳು
ಪೇರ್ಮೆಇಂದಾಚರಿಸಲಳೆವಿಟ್ಟಿರಲು ಫಲಗುಣನೂ ‖ ೨ ‖

ಅಂತ್ಯ : ಈ ಮಹೀಮಂಡಲದಿ ದಿವಿಜೋ
ದ್ಧಾಮ ಯಾದವ ಕೃಷ್ಣಪಾರ್ಥರ
ಪ್ರೇಮ ಸಂವಾದಾಖ್ಯಾ ಗೀತಾ ಶಾಸನಾರ್ಥವನೂ
ಭೀಮ ತಂನರಮನೆಯ ಬಾಣಿಶಿ
ನಾಮ ನೈರಕ್ಷರ ಸುಕುಕ್ಷಿಗೆ
ನೇಮದಿಂದೊರದಿದ್ದ ಗುರು ಶ್ರೀನಿವಾಸ ವಿಠ್ಠಲನಾ ||
ಅಂತು ಸಂಧಿ ೧೭ ಕ್ಕಂ ಪದನೂ ೬೫೯ ಕ್ಕಂ ಮಂಗಳಮಹಾ ಶ್ರೀ ||
ಭೀಮ ಹನುಮಗೆ ಮಧ್ವನಾಮದ
ಲೀ ಮಹಿಮೆಯೊಳವತರಿಶಿ ಸುಜನ
ಪ್ರೇಮ ಗೀತಾಭಾಷ್ಯ ತಾತ್ಪರ್ಯವನು ವಿರಚಿಶಿದಾ
ಆ ಮಹಿಮ ದ್ವಾಪರದಿ ಬಂಣಿಶಿ
ನಾಮ ನೈರಕ್ಷರ ಸುಕುಕ್ಷಿಗೆ
ನೇಮದಿಂ ಕುರುಭೂಮಿಯೊಳು ಗೀತಾರ್ಥ ವಿವರಿಶಿದಾ || ೧ ||
ಆ ಮಹಾಭಾರತದ ಯುದ್ಧವಿ

x x x x

ನಾಮ ಮಹಿಮರೆಂದ ಅರಿದು ಸಜ್ಜನರಿದನು ಮಂನಿಪದೂ || ೨ ||
ಗೀತಾ ೭೦೦ ಶ್ಲೋಕಕ್ಕೆ ೬೪ ಶ್ಲೋಕ ಕಡಮೆ ಯಾವದೆಂದರೆ ಪ್ರಥಮಾಧ್ಯಾಯ ೪೭ ಎರಡನೇ ಅಧ್ಯಾಯದಲ್ಲಿ ೧೭ ಜಾತಾ ಬಾಕಿ ಶ್ಲೋಕಕ್ಕೆ ಪದ ಸಹಾ

ವಿಷಯ : ಅರ್ಜುನನಿಗೆ ಶ್ರೀ ಕೃಷ್ಣನು ಉಪದೇಶಿಸಿದ ತತ್ತ್ವಗಳು.

ವಿಶೇಷ : ಭಗವದ್ಗೀತೆಯ ಕನ್ನಡ ಪದ್ಯಾನುವಾದ. ಈ ಪುಸ್ತಕದಲ್ಲಿ ಕ್ರಮಾಂಕ ೧ ರಿಂದಲೇ ಪ್ರಾರಂಭವಾಗಿ ಮೊದಲು ೫೯ ಪತ್ರಗಳೂ ಅನಂತರ ೭೬ ಪತ್ರಗಳೂ ಬಳಿಕ ೩೭ ಪತ್ರಗಳೂ ಇವೆ. ಅಂತ್ಯದಲ್ಲಿರುವ ಎರಡು ಪತ್ರಗಳಲ್ಲಿ ಕೆಲವು ಸಂಸ್ಕೃತ ಶ್ಲೋಕಗಳಿವೆ.

1115

ಕೆ. ೨೭೪	**ಭರತೇಶ್ವರ ಚರಿತೆ**	ಸಾಂಗತ್ಯ
೨೮.೧" × ೨.೨"	ರತ್ನಾಕರವರ್ಣಿ	೧೫೫೭
೧–೨೦೧ ಪತ್ರ	೯ ಪಂಕ್ತಿ .	೧೨೭ ಅಕ್ಷರ

ಆದಿ : ....ಲಕ್ಷ್ಮೀರಮಣಾಯನಮಃ | ಶ್ರೀ ಪಂಚ ಪರಮೇಷ್ಟಿಭ್ಯೋ ನಮಃ ||
ಶ್ರೀಮದಾದಿಜಿನೇಂದ್ರಾಯನಮಃ x x x x
ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ
ಕಿರಣ ಸುಜ್ಞಾನ ಪ್ರಕಾಶಾ

ಸುರರ್ಕ್ಕಮುಕುಟಮಣಿ ರಂಜಿತ ಚರಣಾಬ್ಜ
ಶರಣಾಗು ಪ್ರಥಮ ಜಿನೇಶಾ ॥ ೧ ॥ [೧ ನೆಯ ಗರಿಯಿಂದ]
ಶ್ರೀ ಭರತೇಶ ವೈಭವವಿದು ಕೇಳಿರೋ
ಸೌಭಾಗ್ಯವಹುದಡಿಗಡಿಗೆ
ಶೋಭನವಹುದಿಂದ್ರ ಪದವಿಯಹುದು ಮೋಕ್ಷ
ಲಾಭವಹುದು ಕಟ್ಟಕಡೆಗೆ ॥ ೧೨ ॥

ಅಂತ್ಯ : ಯಿಂದಿಗಿಷ್ಟೆ ಲಾಭವೆಂದು ನಿಶ್ಚೈಸಿ ಹೃ
ನ್ಮಂದಿರದಮಲ ಚಿನ್ಮಯಗೆ
ವಂದಿಸಿ ಕಣ್ದೆರದನು ಹರುಷದೊಳೆದ್ದು
ನಿಂದನಾ ನಿಶ್ಯಂಕ ವೀರಾ ॥ ೬೫ ॥
ಜಯ ಜಯ ತ್ರಿಭುವನದೊಡೆಯ ನಂಮೊಡೆಯ ನಿಂ
ನಯ ಕೃಪೆಯಿಂದ ಕರ್ಮಗ

ವಿಷಯ : ಆದಿಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ಅಸಮಗ್ರ. ಶಿಥಿಲಪ್ರತಿ. ೧-೯೬, ೧೮೦-೧೮೨ ಮತ್ತು ೧೮೬-೨೦೧ ರ ವರೆಗೆ ಕ್ರಮಾಂಕ ಸರಿಯಾಗಿದೆ. ೧೬, ೬೩, ೧೭೫ ನೆಯ ಗರಿಗಳು ತುಂಡಾಗಿವೆ. ಅಂತ್ಯದಲ್ಲಿ ವಿಷಯ ಸೂಚಿಯ ಒಂದು ಗರಿಯಿದೆ. ಆಯಾ ಸಂಧಿಯ ಆರಂಭದಲ್ಲಿ ವಿಷಯ ಸೂಚನೆಯನ್ನು ಬರೆದಿದೆ.

1116

ಕೆ. ೨೭೫	**ಭರತೇಶ್ವರ ಚರಿತೆ**	ಸಾಂಗತ್ಯ
೨೫.೩" × ೨.೨"	ರತ್ನಾಕರವರ್ಣಿ	೧೫೫೭
೧-೮೫ ಪತ್ರ	೯ ಪಂಕ್ತಿ	೧೦೦ ಅಕ್ಷರ

ಆದಿ : ಬರುತಿಹ ಮಗನ ಸೌಭಾಗ್ಯವ ತಾಯಿ ತಂ
ನೆರಡು ಕಣ್ಗಿಳಿವಂತೆ ನೋಡಿ
ಹರುಷವೇರಿದಳು ಸಂಪೂರ್ನ್ನ ಚಂದ್ರನ ಕಂಡು
ಶರನಿಧಿ ಹೆಚ್ಚುವಂದದಲಿ ॥ ೪ ॥

x x x x

ಪಟ್ಟಣವನು ದಾಂಟಿ ಪಾಜ ನೋಡು ಬಲು
ಬಟ್ಟೆಬಯರಿಗಾಗಿ ನೃಪತಿ
ಪಟ್ಟದಾನೆಯನೇರಿ ಬರುತಿದ್ದನಿಲ್ಲಿಗೆ
ಪಟ್ಟಣ ಪಯಣಸಂಧಿ ॥ ೯೯ ॥

x x x x

ಅಂತೂ ಸಂಧಿ ೨೧ ಕ್ಕಂ ಪದ ೨೭೬೦ ಕ್ಕಂ ಮಂಗಳ ಮಹಾಶ್ರೀ

ಅಂತ್ಯ : ದೀಕ್ಷಾಗುರು ಚಾರುಕೀರ್ತಿ ಯೋಗೀಶ್ವರ
ಮೋಕ್ಷಾಗ್ರ ಗುರು ಹಂಸನಾಥಾ
ಅಕ್ಷೂಣ ವ್ಯವಹಾರ ನಿಶ್ಚಯದೊಳಗತಿ
ದಕ್ಷ ರತ್ನಾಕರ ಸಿಧ್ಧಾ ॥ ೧೧೩ ॥

x x x x

ಗುರು ಹಂಸನಾಥನಾಜ್ಞೆಯೊಳು ಸಿದ್ಧಾಂತದ
ತಿರುಳರಿದಾತ್ಮಲೀಲಾರ್ಥಾ
ಭರತೇಶವೈಭವವೆಂಬ ಕಾವ್ಯವ
ನೊರೆದೇನು ಸುಖಿಗಳಾಲಿಪುದೂ ॥ ೧೧೫ ॥

x x x x

ಪ್ರೇಮದಿಂದದನೋದಿದರೆ ಪಾಡಿದರೆ ಕೇ
ಳ್ದಾಮೋದವೆಯ್ದಿದರವರೂ
ನೇಮದಿ ಸುರರಾಗಿ ನಾಳೆ ಶ್ರೀಮಂದರ
ಸ್ವಾಮಿಯ ಕಾಣ್ಬರರ್ತ್ಥಿಯೊಳೂ ॥ ೧೨೧ ॥

ಅಂತೂ ಸಂಧಿ ೮೦ ಕ್ಕಂ ಪದ ೯೯೬೯ ಕ್ಕಂ ಮಂಗಳ ಮಹಾಶ್ರೀ

ವಿಷಯ : ಆದಿ ಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ಅಸಮಗ್ರ. ಆಯಾಯ ಸಂಧಿಯ ಆರಂಭದಲ್ಲಿ ವಿಷಯ ಸೂಚಿಯಿದೆ. ೬ ಮತ್ತು ೬೨ನೆಯ ಗರಿಗಳ ಅರ್ಧ ತುಂಡುಗಳು ಮಾತ್ರ ಇವೆ. ೧–೫, ೭–೯ನೆಯ ಗರಿಗಳು ಶಿಥಿಲವಾಗಿವೆ. ೩೧,೩೫ನೆಯಗರಿಗಳಲ್ಲಿ ಗ್ರಂಥಲೋಪವಿದೆ. ೫೦, ೫೮, ೬೧, ೬೯, ೭೧, ೭೮, ಮತ್ತು ೮೫ ನೆಯ ಗರಿಗಳ ಒಂದೇ ಪಾರ್ಶ್ವದಲ್ಲಿ ಬರೆದಿದೆ.

1117

ಕೆ.ಎ. ೨೪೨	**ಭರತೇಶ್ವರ ಚರಿತೆ, ೧ನೆಯ ಭಾಗ**	ಸಾಂಗತ್ಯ
೧೨.೮″ × ೮″	ರತ್ನಾಕರವರ್ಣಿ	೧೫೫೭
೧–೫೦೯ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಭರತೇಶ್ವರನ ಚರಿತ್ರೆ ಬರೆಯುವದಕ್ಕೆ ಶುಭಮಸ್ತು ॥
ಪರಮ ಪರಂಜ್ಯೋತಿ ಕೋಟಿಚಂದ್ರಾದಿತ್ಯಾ
ಕಿರಣಸುಜ್ಞಾನಪ್ರಕಾಶಾ
ಸುರರ ಮಕುಟಮಣಿರಂಜಿತ ಚರಣಾಬ್ಜ
ಶರಣಾಗು ಪ್ರಥಮ ಜಿನೇಶಾ ॥ ೧ ॥

x x x x

ಅಯಯ್ಯಾ ಚೆಂನ್ನಾದುದೆನೆ ಕಂನಡಿಗಾರು
ಅಯ್ಯಾ ಮಂಚಿದಿಯನೆ ತೆಲುಗಾ
ಅಯ್ಯಯ್ಯಾ ಯೊಪೊರ್ಲ್ಲಂಡೆಂದ ತುಳುವರು
ವೈಯುಬ್ಬಿ ಕೇಳಬೇಕೆಂದೂ ॥ ೭ ॥
ರಳ ಕುಳ ಸಿಥಿಲ ಸಮಾಸ ಮುಂತಾದವ
ರೊಳಗಿಲ್ಲಿ ಉಳ್ಳವರುಂಟೂ
ಕೆಲವಿಲ್ಲದವರುಪಿಲ್ಲವೇಕೆಂದರವರ ಕೋ
ಟಲೆಯನೆ ಹಾಡುಗಬ್ಬದೊಳೂ ॥ ೮ ॥

x x x x

ಶ್ರೀ ಭರತೇಶ ವೈಭವವಿದು ಕೇಳಿರೋ
ಸೌಭಾಗ್ಯಾವಹುದಡಿಗಡಿಗೆ
ಶೋಭನವಹುದಿಂದ್ರಪದವಿಯಹುದು ಮೋಕ್ಷ
ಲಾಭವಹುದು ಕಟ್ಟಕಡೆಗೆ ॥೧೨॥

ಅಂತ್ಯ : ಪ್ರೇಮದಿಂದಿದನೋದಿದರಿಗೆ ಕೇಳ್ದರಿಗೆ ಮ
ತ್ತಾವೋದವೆಯ್ದುವರೊಡನೆ
ಕ್ಷೇಮಾದಿ ಸುರರಾಗಿ ನಾಳೆ ಶ್ರೀಮಂದಾರ
ಸ್ವಾಮಿಯ ಕಾಣ್ಬರತ್ಥಿಯೊಳೂ ॥ ೧೪೨ ॥
ಹಸಿವು ತೃಷೆಯು ನಿದ್ರೆ ಮೊದಲಾದ ದುಃಖವ
ಹಸಗೆಡಿಸುವ ಶಕ್ತಿಯುಳ್ಳ
ಅಸಮವೈಭವನೆ ನಂನೆದೆಯೊಳಗಿರು ಮೋಕ್ಷ
ರಸಿಕ ಚಿದಂಬರಪುರುಷಾ ॥ ೧೪೩ ॥
ಅಂತು ಸಂಧಿ ೧೫ಕ್ಕಂ ಪದ ೧೯೬೨ಕ್ಕಂ ಮಂಗಳಮಹಾ

ವಿಷಯ : ಆದಿಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ಪತ್ರಗಳ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆಯಿದೆ. ೧೬ನೇ ಸಂಧಿಯಿಂದ ಮುಂದಣ ಭಾಗ ಕೆ.ಎ. ೨೪೩, ಕೆ.ಎ. ೨೪೪, ಕೆ.ಎ. ೨೪೫, ಕೆ.ಎ. ೨೪೬ ಈ ನಂಬರಿನ ಪುಸ್ತಕಗಳಲ್ಲಿದೆ. ಅಕ್ಷರಗಳು ವಿರಳವಾಗಿವೆ. ಗ್ರಂಥಾರಂಭದಲ್ಲಿರುವ ಪ್ರತ್ಯೇಕ ಪತ್ರದಲ್ಲಿ ಪ್ರತಿಸಂಧಿಯ ವಿಷಯಗಳನ್ನೂ ಸೂಚಿಸುವ ವಿಷಯಸೂಚಿಯಿದೆ. ಪ್ರತಿಯ ಕಾಲ ೧೬-೧-೧೯೧೧. ಪ್ರತಿಕಾರರು ಬಿ.ರಾಮಸ್ವಾಮಿ ಶಾಸ್ತ್ರಿಗಳು. ಇದರ ಮೂಲಪ್ರತಿಯ ಕಾಲ ಶಕ ೧೭೧೨ ಇರಬಹುದು. ಪ್ರಕೃತ ಪುಸ್ತಕದ ಆರಂಭದಲ್ಲಿ ಈ ಕೃತಿಯ ವಿಚಾರವಾಗಿ ಶ್ರೀಯುತ ಬಿ.ಎಂ. ಶ್ರೀಕಂಠಯ್ಯನವರು ಆಂಗ್ಲಭಾಷೆಯಲ್ಲಿ ಬರೆದಿರುವ ವಿಷಯಸಂಗ್ರಹದ ಒಂದು ಪ್ರತಿಯಿದೆ. ಇದರಂತೆ ಕವಿಯ ಕಾಲ ಕ್ರಿ.ಶ. ೧೬೬೫.

1118

ಕೆ.ಎ. ೨೪೩ **ಭರತೇಶ್ವರ ಚರಿತೆ, ೨ ನೆಯ ಭಾಗ** ಸಾಂಗತ್ಯ

೧೨.೮" × ೮" ರತ್ನಾಕರವರ್ಣಿ ೧೫೫೭

೫೧೦–೧೦೧೦ ಪತ್ರ ೧೧ ಪಂಕ್ತಿ ೨೦ ಅಕ್ಷರ

ಆದಿ : ಪೂರ್ವಾಭಿಷೇಕದ ಸಂಧಿ ||

ಕಣ್ಮುಚ್ಚಿ ನೋಡಿದರಾತ್ಮ ಸುಖವ ಕರೆ
ಗಾಣ್ಮೆಸುವಾನಂದ ರೂಪಾ
ತಣ್ಮಲೆಮುತ್ತಮ ಮತಿದೋರು ಸುಕೃತಾತ್ಮ
ರಾಣ್ಮ ನಿರಂಜನ ಸಿದ್ಧಾ || ೧ ||
ನುಡಿಯಲಳವೆ ಚಕ್ರನಾಥನ ಜಾಣ್ಮೆಯ
ಕಡುಶುಚಿದೇಹಿ ತಾನಹುದೂ
ಮಡದಿಯರೊಡನಿದ್ದೆನೆಂದು ಪೂಜೆಗೆ ಮುಂನ
ನಡೆದನು ಮಜ್ಜನಗೃಹಕೆ || ೨ ||

ಅಂತ್ಯ : ಪ್ರೇಮದಿಂದಿದನೋದಿದರೆ ಕೇಳಿದರೆ ಕೇ
ಳ್ದಾವೋದವೆಯ್ದುವರೊಲಿದೂ
ನೇಮಾದಿ ಸುರರಾಗಿ ನಾಳೆ ಶ್ರೀಮಂದಾರ
ಸ್ವಾಮಿಯ ಕಾಣ್ಬರರ್ಥಿಯೊಳೂ || ೧೪೫ ||
ಸಾಕ್ಷಿಯಲ್ಲದ ಸುಖದುಃಖಕೆ ನೀನಲ್ಲಿ
ಸಾಕ್ಷಾದನುಭಾವಿಯಲ್ಲ
ಮೋಕ್ಷವೆ ನೀನಲ್ತೆ ನಂನೊಳಗಿರು ನಿರಾ
ಪೇಕ್ಷ ಚಿದಂಬರ ಪುರುಷಾ || ೧೪೬ ||

ಅಂತು ಸಂಧಿ ೩೧ ಕ್ಕಂ ಪದ ೩೪೩೪ ಕ್ಕಂ ಮಂಗಳಮಹಾ.

ವಿಷಯ : ಆದಿ ಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ೧೬ ನೇ ಸಂಧಿಯಿಂದ ೩೧ ನೇ ಸಂಧಿ ಪೂರ್ತಿಯ ಕಥಾ ಭಾಗ ಈ ಪುಸ್ತಕದಲ್ಲಿದೆ. ೧ ರಿಂದ ೧೬ ಸಂಧಿಗಳ ಕಥೆ ಕೆ.ಎ. ೧೪೨ ನಂಬರಿನ ಪ್ರತಿಯಲ್ಲೂ ೩೨ ನೇ ಸಂಧಿಯಿಂದ ಮುಂದಣ ಕಥಾ ಭಾಗ ಕೆ. ಎ. ೧೪೪, ಕೆ.ಎ. ೧೪೫, ಕೆ.ಎ. ೧೪೬ ನಂಬರಿನ ಪ್ರತಿಗಳಲ್ಲೂ ಇದೆ. ಪುಸ್ತಕದ ಆದಿಯಲ್ಲಿರುವ ಪ್ರತ್ಯೇಕ ಪತ್ರದಲ್ಲಿ ೧೬ ನೇ ಸಂಧಿಯಿಂದ ೩೧ನೇ ಸಂಧಿ ಪೂರ್ತಿ ಪ್ರತಿ ಸಂಧಿಯ ವಿಷಯ ಸೂಚಿ ಇದೆ. ಅಕ್ಷರಗಳು ಸ್ಫುಟವಾಗಿಯೂ ವಿರಳವಾಗಿಯೂ ಇವೆ. ಪತ್ರಗಳ ಒಂದು ಕಡೆ ಮಾತ್ರ ಬರವಣಿಗೆ ಇದೆ.

1119

ಕೆ.ಎ. ೨೪೪ **ಭರತೇಶ್ವರ ಚರಿತೆ, ೩ನೆಯ ಭಾಗ** ಸಾಂಗತ್ಯ

೧೨.೮"X೮" ರತ್ನಾಕರವರ್ಣಿ ೧೫೫೭

೧೦೧೧–೧೪೯೭ ಪತ್ರ ೧೧ ಪಂಕ್ತಿ ೧೮ ಅಕ್ಷರ

ಆದಿ : ಭೂಚರಿಯರ ವಿವಾಹದ ಸಂಧಿ ||

ಪರಮಗುರು ಪರಮಾತ್ಮಾರಾಧ್ಯನೆ
ಪರವಸ್ತು ನಿನಗೆ ನಮೋಸ್ತು
ಪರಿಪಾಲಿಸೆನಗೆ ಸನ್ಮತಿಯನು ಸೌಖ್ಯತ
ತ್ಪರನೆ ನಿರಂಜನಸಿದ್ಧಾ || ೧ ||
ವಿನಮಿರಾಜಗೆ ಖೇಚರರಿಗೆ ಭೂಪರನರ
ಮನೆಯೊಳೌತಣವ ಮಾಡಿಸಿದಾ
ಘನತರಮುಡುಗೊರೆಯಿತ್ತು ಬೀಯಗರೆಂದು
ಬಿನದವನಾಡಿ ಮಂನಿಸಿದಾ || ೨ ||

ಅಂತ್ಯ : ಯಿಂಬಿಂದ ಪುತ್ರಪೌತ್ರರು ಸೊಸೆಯರ್ಕಳು
ತುಂಬಿ ಮತ್ತವರ ಸೊಸೆಯರೂ
ಅಂಬಿಕೆಯೊಡನೆ ಪಂತಿಯೊಳುಂಡು ತಣಿದರಿ
ದಂಬಿಕ ದರ್ಶನಸಂಧಿ || ೧೫೪ ||
ಯೀ ಜಿನಕಥೆಯನು || ೧೫೫ ||
ಪ್ರೇಮದಿಂದನೋದಿದರು || ೧೫೬ ||
ಮಾತುಮಾತಿಗೆ ದಿನದಿನಕೆ ಕ್ಷಣಕೆ ನವ್ಯ
ನೂತನ ಸುಖವನೆ ಮಾಳ್ಪ
ಸಾತಿಶ ನಂನೆದೆಯೊಳಿರಮೃತನಿ
ಕೇತ ಚಿದಂಬರ ಪುರುಷಾ || ೧೫೭ ||
ಅಂತು ಸಂಧಿ ೪೬ಕ್ಕಂ ಪದ ೫೬೮೪ ಕ್ಕಂ ಜಯಮಂಗಳ ಮಹಾಶ್ರೀ ||

ವಿಷಯ : ಆದಿಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ಪತ್ರಗಳ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆ ಇದೆ. ೩೨ನೇ ಸಂಧಿಯಿಂದ ೪೬ನೇ ಸಂಧಿ ಪೂರ್ತಿಯ ಕಥಾಭಾಗ ಈ ಪುಸ್ತಕದಲ್ಲಿದೆ. ಇದರ ಹಿಂದಣ ಕಥಾಭಾಗ ಕೆ.ಎ. ೨೪೨, ಕೆ.ಎ. ೨೪೩ನೇ ನಂಬರಿನ ಪ್ರತಿಗಳಲ್ಲೂ, ಮುಂದಣ ಕಥಾಭಾಗ ಕೆ.ಎ. ೨೪೫, ಕೆ. ಎ. ೨೪೭ ನಂಬರಿನ ಪ್ರತಿಗಳಲ್ಲೂ ಇದೆ. ಪ್ರಕೃತ ಪುಸ್ತಕದಲ್ಲಿರುವ ಸಂಧಿಗಳ ವಿಷಯಸೂಚಿ ಆದಿಯಲ್ಲಿರುವ ಪ್ರತ್ಯೇಕ ಪತ್ರದಲ್ಲಿದೆ. ಅಕ್ಷರಗಳು ಸ್ಫುಟವಾಗಿಯೂ ವಿರಳವಾಗಿಯೂ ಇವೆ.

1120

ಕೆ.ಎ.೨೪೫ | **ಭರತೇಶ್ವರ ಚರಿತೆ, ೪ನೆಯ ಭಾಗ** | ಸಾಂಗತ್ಯ

೧೨.೮" × ೮" | ರತ್ನಾಕರವರ್ಣಿ | ೧೫೫೭

೧೪೯೮—೧೯೯೩ ಪತ್ರ | ೧೨ ಪಂಕ್ತಿ | ೨೦ ಅಕ್ಷರ

ಆದಿ : ಕಾಮ ದೇವಸ್ಥಾನದ ಸಂಧಿ ||
ತಾಯಿಲ್ಲ ತಂದೆಯಿಲ್ಲಂಗವಿಲ್ಲರೆಯಿ
ಲ್ಲಾಯಾಸವಿನಿಸಿಲ್ಲದಭವಾ
ದಾಯದೋರೀಗ ಸನ್ಮತಿಯ ನಿರಘ ನಿ
ವರ್ಾಯ ನಿರಂಜನ ಸಿದ್ಧಾ ||೧||
ಜನನಿಯ ಕಂಡು ಸಂತಸವ ತಾಳ್ದವರಾ
ದಿನದೊಳು ಭೇರಿ ಸೂಳೈಸೆ
ಜನನಾಥ ದಂಡೆತ್ತಿ ನಡೆದನು ಧರೆಯ ತೆ
ಕ್ಕನೆ ತಂನ ಪಡೆ ತೀವಿ ನಡೆಯೆ ||೨||

ಅಂತ್ಯ : ಪ್ರೇಮದಿಂದನೋದಿದರೆ ಪೇಳಿದೆ ಕೇ
ಳ್ದಾಮೋದವೆಯ್ದಿದ ರೊಲಿದೂ
ನೇಮಾದಿ ಸುರರಾಗಿ ನಾಳೆ ಶ್ರೀಮಂದಾರ
ಸ್ವಾಮಿಯ ಕಾಣ್ಬರರ್ಥಿಯೊಳೂ ||೧೦೫||
ವಿದ್ಯಾ ರೂಪನೆ ವಿಕ್ರಮರೂಪನೆ
ಸದ್ಯೋಜಾತನೆ ಶಾಂತಾ
ಚೋದ್ಯ ಪುರುಷನೆ ಜಯಭವರೋಗ
ವೈದ್ಯ ಚಿದಂಬರ ಪುರುಷಾ ||೧೦೬||
ಅಂತು ಸಂಧಿ ೬೪ ಕ್ಕಂ ಪದ ೭೭೫೫ ಕ್ಕಂ ಮಂಗಳ ಮಹಾ

ವಿಷಯ : ಆದಿ ಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ೪೭ ನೇ ಸಂಧಿಯಿಂದ ೬೪ ನೇ ಸಂಧಿ ಪೂರ್ತಿಯ ಕಥಾ ಭಾಗ ಈ ಪುಸ್ತಕದಲ್ಲಿದೆ. ಇದರ ಹಿಂದಣ ಕಥಾ ಭಾಗಗಳು ಕೆ.ಎ. ೨೪೨, ಕೆ.ಎ ೩೪೩, ಕೆ.ಎ. ೨೪೪ ನೇ ನಂಬರಿನ ಪ್ರತಿಗಳಲ್ಲೂ, ಮುಂದಣ ಕಥಾ ಭಾಗ ಕೆ.ಎ. ೨೪೬ನೇ ನಂಬರಿನ ಪ್ರತಿಯಲ್ಲೂ ಇದೆ. ಈ ಪುಸ್ತಕದಲ್ಲಿರುವ ಸಂಧಿಗಳ ವಿಷಯ ಸೂಚಿ ಆದಿಯಲ್ಲಿದೆ. ಅಕ್ಷರಗಳು ಸ್ಫುಟವಾಗಿಯೂ, ವಿರಳವಾಗಿಯೂ ಇವೆ. ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರವಣಿಗೆ ಇದೆ.

1121

ಕೆ.ಎ. ೨೪೬ **ಭರತೇಶ್ವರ ಚರಿತೆ, ೫ನೇ ಭಾಗ** ಸಾಂಗತ್ಯ

೧೨.೮" × ೮" ರತ್ನಾಕರವರ್ಣಿ ೧೫೫೭

೧೯೯೪-೨೪೭೭ ಪತ್ರ ೧೨ ಪಂಕ್ತಿ ೨೨ ಅಕ್ಷರ

ಆದಿ : ವಿರಕ್ತಿಯ ಸಂಧಿ.

ಶ್ರೀಕಾರಬೋಧ ರತ್ನಾಕರ ದಿವ್ಯ ಗು
ಣಾಕರ ವಾಚಾಮಗವ್ಯಾ
ಲೋಕತ್ರಯಾಧಿಪ ಮತಿದೋರು ಸೂರ್ಯ್ಯ
ಪ್ರಕಾಶ ನಿರಂಜನ ಸಿದ್ಧಾ ॥ ೧ ॥
ಹಸ್ತಿನಪುರಪತಿ ಮೇಘೇಶ್ವರನು ಪ್ರ
ಶಸ್ತ ದೀಕ್ಷೆಯನಾಂತನೆಂದೂ
ಪ್ರಸ್ತುತ ವಾರ್ತ್ತೆಯು ಸಾಹಿತ್ಯ ಗೋಷ್ಟಿಯ
ಪ್ರಸ್ತಾವದೊಳು ಬಂದುದವಗೆ ॥ ೨ ॥

ಅಂತ್ಯ : ದೀಕ್ಷರು ಗುರು ಚಾರುಕೀರ್ತಿ ಯೋಗೀಶ್ವರ
ಮೋಕ್ಷಾಗ್ರ ಗುರು ಹಂಸನಾಥಾ
ಅಕ್ಷೂಣ ವ್ಯವಹಾರ ನಿಶ್ಚಯದೊಳಗತಿ
ದಕ್ಷ ರತ್ನಾಕರ ಸಿದ್ಧಾ ॥ ೧೧೩ ॥

x x x x

ಗುರು ಹಂಸನಾಥನಾಜ್ಞೆಯೊಳು ಸಿದ್ಧಾಂತದ
ತಿರುಳಾರಿದಾತ್ಮ ಲೀಲಾರ್ಥಾ
ಭರತೇಶವೈಭವಮೆಂಬ ಕಾವ್ಯವನಿದ
ನೊರೆದನು ಸುಖಿಗಳಾಲಿಪುದೂ ॥ ೧೧೫ ॥

x x x x

ವೃಷಭಮಾಸದಿ ತೊಡಗಿತು ಕುಂಭಮಾಸದಿ ಸ
ದ್ವಿಷಯದಿ ಕೃತಿ ಪೂರ್ನವಾಯ್ತು
ವೃಷಭಾಂಗ ಹಂಸನಾಥನೆ ಜಯ ಪರಮ ಪೌ
ರುಷನೆ ಚಿದಂಬರ ಪುರುಷಾ ॥ ೧೨೨ ॥
ಅಂತು ಸಂಧಿ ೮೦ ಕ್ಕಂ ಪದ ೯೯೯೬ ಕ್ಕಂ ಜಯ ಮಂಗಳ ಮಹಾ ॥
ಭರತೇಶ ಚಕ್ರವರ್ತಿಯ ವೈಭವ ರತ್ನಾ
ಕರಸಿದ್ಧನು ಮನ ಮೆಚ್ಚಿ
ವಿರಚಿಸಿದನು ತತ್ವಸಂಗವ ಭವ್ಯರೆ
ಲ್ಲರು ಕೇಳಿ ಸುಖವೈದಲೆಂದು ॥ ೧ ॥

x x x x

ಶ್ರೀ ಶಕವರುಷವು ಸಾಸಿರದೈನೂರ
ಲೇಸೆಂಭತ್ತೆರಡನೆಯಾ
ಶ್ರೀ ಶಾರ್ವರಿ ವರುಷದ ಶುಭತರ
ಭಾಸುರವಾಣಿಕ್ಯ ಪಟ್ಟಣದೊಡೆಯಾ ॥ ೩ ॥
ಶ್ರೀರಾತಿಪ್ರಭ ಜಿನನ ಶ್ರೀಪಾದಪದ್ಮಂಗಳ ಸಂನಿಧಿಯಲ್ಲಿ
ಶ್ರೀ ಪುರು ಪರಮೇಶ ಸುತನಾ
ಪಾಪವಿಚ್ಛೇದಿನಿಯೆಂಬ ಸಂಸ್ಕೃತಿಯ ಮ
ತ್ತೀಪರಿಯೊಳು ಲಿಖಿಯಿಸಿದಾ ॥ ೪ ॥

x x x x

ಪ್ರೀತಿ ಸಮಾನದೊಳಾವು ಬರೆದ ಸಚ್ಚರಿತವ
ಮತಿವಂತರಿಂತಿದರೊಳಗೆ
ರತಿಯಿಂದ ತಪ್ಪುಳ್ಳೊಡೆ ತಿದ್ದಿಕೊಂಬುದು
ಸುತರ ತಪ್ಪು ತಿದ್ದುವಂತೆ ॥ ೪೮ ॥

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೭೧೨ನೇ ಸಾಧಾರಣ ಸಂವತ್ಸರದ ಪುಷ್ಯ ಶುದ್ಧ ರವಿವಾರ ಭರತೇಶ್ವರನ ಸುಚರಿತ್ರೆ ಸಂಪೂರ್ಣವಾಗಿ ಬರೆದೆನೂ ॥ ಮಂಗಲ ಮಹಾ ಶ್ರೀ

ವಿಷಯ : ಆದಿಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ೬೫ ನೇ ಸಂಧಿಯಿಂದ ೮೦ ನೇ ಸಂಧಿ ಪೂರ್ತಿ, ಗ್ರಂಥದ ಕೊನೆಯ ವರೆಗಿನ ಕಥಾ ಭಾಗ ಈ ಪುಸ್ತಕದಲ್ಲಿದೆ. ಇದರ ಹಿಂದಣ ಕಥಾ ಭಾಗ ಕೆ.ಎ. ೨೪೨, ಕೆ.ಎ. ೨೪೩, ಕೆ.ಎ. ೨೪೪, ಕೆ.ಎ. ೨೪೫ ನೇ ನಂಬರಿನ ಪ್ರತಿಗಳಲ್ಲಿದೆ. ಈ ಪುಸ್ತಕದಲ್ಲಿರುವ ಸಂಧಿಗಳ ವಿಷಯ ಸೂಚಿ ಮತ್ತು ಈ ಗ್ರಂಥದ ವಿಚಾರದಲ್ಲಿ ಶ್ರೀಯುತ. ಬಿ.ಎಮ್. ಶ್ರೀಕಂಠಯ್ಯನವರು ಆಂಗ್ಲ ಭಾಷೆಯಲ್ಲಿ ಬರೆದಿರುವ ಸಂಕ್ಷಿಪ್ತಪರಿಚಯವು ಪುಸ್ತಕದ ಆರಂಭದಲ್ಲಿದೆ. ಅಕ್ಷರಗಳು ಸ್ಫುಟವಾಗಿಯೂ ವಿರಳವಾಗಿಯೂ ಇವೆ. ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರವಣಿಗೆ ಇದೆ.

1122

ಕೆ.ಬಿ. ೧೨೬	**ಭರತೇಶ್ವರ ಚರಿತೆ, ಭಾಗ ೧**	ಸಾಂಗತ್ಯ
೭.೭″ × ೬.೩″	ರತ್ನಾಕರವರ್ಣಿ	೧೫೫೭
೧–೨೩೬ ಪತ್ರ	೧೮ ಪಂಕ್ತಿ	೨೨ ಅಕ್ಷರ

ಆದಿ : ಸಂಧಿ ಸೂಚನೆಗಳು ॥

ಆಸ್ಥಾನ ಕವಿವಾಕ್ಯ ಮುನಿಭಕ್ತಿಕ್ರಮದಿಂದ
ಪ್ರಸ್ತುತಾರೋಗಣುಪ್ಪರಿಗೆ

ಉತ್ತಮ ರಾಜ ಲಾವಣ್ಯ
ಮತ್ತರಗಿಳಿ ನಿತ್ಯಾಳಾಪದ ಸಂಧಿ || ೧ ||
ಮನ್ನಣೆ ಸರಸದ ಸುಮ್ಯಾನ ವೀಣಾ
ಸನ್ನುತ ಪೂರ್ವನಾಟಕದ
ಉತ್ತರನಾಟಕ ತಾಂಡವ ವಿನ
ಯೋನ್ನತಿ ಶಯ್ಯಾಗೃಹದ || ೨ ||

x x x x

ವರಕವಿ ರತ್ನಾಕರ ವಿರಚಿತಮಪ್ಪ
ಭರತೇಶ ಸಂಗತಿಯೊಳಗೆ
ನೆರೆ ಸರ್ವ್ವರ ಮೋಕ್ಷದ ಸಂಧಿಯಂಬಲ್ಲಿಗೆ
ಪರಿಪೂರ್ನ್ನ ಸಂಧಿಸೂಚನೆಯೂ || ೧೪ ||

x x x x

ಪ್ರತಿಸಮಾನದೊಳಾರು ಬರೆದ ಸಚ್ಚರಿತವ
ಮತಿವಂತರಿಂತಿದ ತೊಳಗೆ
ರತಿಯಿಂದ ತಪ್ಪುಳ್ಳೊಡೆ ತಿದ್ದಿಕೊಂಬುದು
ಸುತರ ತಪ್ಪನು ತಿದ್ದುವಂತೆ || ೧೭ ||
ಸಂಧಿ ಸೂಚನೆ ಪದಗಳು ಸಮಾಪ್ತ ಮಂಗಳಮಹಾಶ್ರೀ

ಭರತೇಶ್ವರ ಚರಿತ್ರೆ ಪ್ರಾರಂಭಃ ||
ಪರಮಪರಂಜ್ಯೋತಿ ಕೋಟಿಚಂದ್ರಾದಿತ್ಯ
ಕಿರಣಸುಜ್ಞಾನಪ್ರಕಾಶ
ಸುರರ ಮಕುಟಮಣಿರಂಜಿತ ಚರಣಾಬ್ಜ
ಶರಣಾಗು ಪ್ರಥಮ ಜಿನೇಶಾ || ೧ ||

x x x x

ಅಯ್ಯಯ್ಯ ಚನ್ನಾದುದೆನೆ ಕನ್ನಡಿಗರು
ರಯ್ಯ ಮಂಚಿದಿಯೆನೆ ತೆಲುಗಾ
ಅಯ್ಯಯ್ಯ ಯೆಂಚ ಪೊಲ್ಲಾಂಡೆಂದು ತುಳುವರು
ವೈಯುಬ್ಬಿ ಕೇಳಬೇಕೆಂದು || ೭ ||
ಜಿಳ ಕುಳ ಸಿಥಿಲಸಮಾಸ ಮುಂತಾದವ
ರೊಳಗಿಲ್ಲ ಕೆಲವುಳ್ಳರುಂಟು
ಕೆಲವಿಲ್ಲದರುವಿಲ್ಲವೇಕೆಂದರವರ ಕೋ
ಟಲೆಯಾಕೆ ಹಾಡುಗಬ್ಬದೊಳ್ || ೮ ||

x x x x

ಶ್ರೀ ಭರತೇಶ ವೈಭವವಿದು ಕೇಳಿರೊ
ಸೌಭಾಗ್ಯವಹುದಡಿಗಡಿಗೆ
ಶೋಭನವಹುದಿಂದ್ರಪದವಿಯಹುದು ಮೋಕ್ಷ
ಲಾಭವಹುದು ಕಟ್ಟಕಡೆಗೆ || ೧೨ ||

ಅಂತ್ಯ : ಮತ್ತೆ ನೋವಿಲ್ಲ ನನ್ನಾಣೆ ತಾರೆಂದು ತಾ
ನೊತ್ತಿ ಮಗನನೀಸಿಕೊಂಡ
ಹತ್ತಿರೆ ಕುಳ್ಳಿರಿ ನನ್ನಾಣೆಯೆನಲಿಬ್ಬ
ರುತ್ತಮ ಸುತರು ಕುಳಿತರು || ೮೪ ||
ಒಮ್ಮೆ ತಂದೆಯು ನೋಡು.

ವಿಷಯ : ಆದಿಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ಈ ಪುಸ್ತಕವು ಅಸಮಗ್ರವಾಗಿದೆ. ಇದರ ಮುಂದಣ ಭಾಗದ ಕಥೆ ಕೆ.ಬಿ. ೧೫೪ ಮತ್ತು ಕೆ.ಬಿ. ೧೫೫ ನೇ ನಂಬರಿನ ಪುಸ್ತಕಗಳಲ್ಲಿದೆ. ಅಕ್ಷರಗಳು ಸ್ಫುಟವಾಗಿವೆ.

1123

ಕೆ.ಬಿ. ೧೫೪	**ಭರತೇಶ್ವರ ಚರಿತೆ, ಭಾಗ ೨**	ಸಾಂಗತ್ಯ
೭.೭" × ೬.೩"	ರತ್ನಾಕರವರ್ಣಿ	೧೫೫೭
೨೩೭–೪೭೫ ಪತ್ರ	೧೬ ಪಂಕ್ತಿ	೨೨ ಅಕ್ಷರ

ಆದಿ : ....ತೊಳುನುಡಿವುತ್ತ
ಸಮ್ಮುಖದವರನೀಕ್ಷಿಸುತ
ದಿಮ್ಮಿಸುತೆಗೆಗೊಮ್ಮೆ ತೊಡೆಗಳ ತಟ್ಟುತ
ಸುಮ್ಮಾನದೊಳಗಿರ್ದರವರು || ೮೫ ||
ನುಡಿಸುತ ಕುವರರಿಬ್ಬರನೊಯ್ಯನೊಮ್ಮೆ ಮೈ
ದಡಹುತ ತಾನೆ ಹೂಂಕೊಳುತ
ಹಡಪಿಗನಿಂದ ವೀಳಯವ ಕೊಡಿಸುತರ್ಥಿ
ನಡುತಿರ್ದನಾ ಪೆತ್ತ ತಂದೆ || ೮೬ ||

ಅಂತ್ಯ : ನೀ ನಿಳಿಯುವ ತೃಣವೆಂದು ಬಿಸುಟು ಬಂದೆ
ನಾನಿದ ಬಿಡಲಾರದ್ಹೈದೆ
ನೀನೀಗ ಗುರುವಾದೆ ನಾನೆನೆ
ಮಾನ ಜಾರಿತು ಕೇಳ್ದು ಮುನಿಗೆ || ೪೩ ||

ಝೋಂಪಿಪ ಶಲ್ಯ ಭೂತವ ವಾಕ್ಯಮಂತ್ರದಿ
ತಾಂ ಪೊರಮಡಿಸೆ ಚಕ್ರೇಶಾ
ತಂಪಾಯ್ತು ಚಿತ್ತ ತಳ್ಳಂಕ ಜಾರಿತು ಧ್ಯಾನ
ಸಂಪತ್ತು ಫಲಿಸಿತು ಋಷಿಗೆ || ೪೬ ||
ತನಗಂದು ವಿನಮಿಸುವ

ವಿಷಯ : ಆದಿಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ಈ ಪುಸ್ತಕವು ಅಸಮಗ್ರ. ಇದು ಕೆ.ಬಿ. ೧೨೬ ನೇ ನಂಬರಿನ ಪುಸ್ತಕದ ಮುಂದುವರಿದ ಭಾಗ. ಇದರ ಮುಂದಣ ಭಾಗದ ಕಥೆ ಕೆ. ಬಿ. ೧೫೫ ನೇ ನಂಬರಿನ ಪುಸ್ತಕದಲ್ಲಿದೆ. ಅಕ್ಷರಗಳು ಸ್ಫುಟವಾಗಿವೆ.

1124

ಕೆ.ಬಿ. ೧೫೫	**ಭರತೇಶ್ವರ ಚರಿತೆ, ಭಾಗ ೩**	ಸಾಂಗತ್ಯ
೭.೭"×೬.೩"	ರತ್ನಾಕರವರ್ಣಿ	೧೫೫೭
೪೭೬–೭೧೩ ಪತ್ರ	೧೬ ಪಂಕ್ತಿ	೨೨ ಅಕ್ಷರ

ಆದಿ...ತನ್ನ್ಮಗೆರಗಿದ
ಮುನಿಯೆಂದು ಮತ್ತಾತನೊಳಗೆ
ಮುನಿಯಾಗಿ ಸಂಕ್ಲೇಶವಾರೀತಗಿಲ್ಲ ರಾ
ಜನೊ ರಾಜಯೋಗಿಯೋ ಚಕ್ರಿ || ೪೭ ||
ನ್ಯೆಯ ಬೆತ್ತಲೆ ಮಾಡಿ........
ಕೈಯೆತ್ತಿ ನಿಂದನಾ ಮದನ
ಹುಯ್ಯಲ ರಾಯ ಬಿಡಿಸಿದನೆಂಬಾಗ........
ಸಯ್ಯಮವಾರದಿಬ್ಬರೊಳು || ೪೮ ||

ಅಂತ್ಯ : ಕವಿ ರತ್ನಶೇಖರರೆಂದೆಂಬ ಕವಿಗಳ
ಸ್ರವಕ ಸದ್ಗುಣಗಳನಾಂತ
ಕವಿ ರತ್ನಾಕರಸಿದ್ಧ ರಚಿಸಿದನು
ಕವಿತಾರ್ಣವ ಚಂದ್ರಿಕೆಯನು || ೨೫ ||
ಮೇದಿನೀ ರತ್ನವನಾದರದಿಂ ಜ
ವಾದಿಯೊಳ್ನಿರ್ಮಿಸಿದಂತೆ
ಈ ಧರೆಯೊಳು ರತ್ನಾಕರ ಕವಿಬ್ರಮ್ಹ
ಸೋದಿಸಿ ರಚಿಸಿದನಿದನು || ೨೬ ||

x x x

ವಾಣಿಗೆ ಜಾಣೆಗೆ ಮೋಕ್ಷನಿಶ್ರೇಣಿಗೆ
ಪಾಣಿಯೊಳ್ಪುಸ್ತುಕಯುತೆಗೆ
ಮಣಿದೆರಗಿ ನಾನು ಸುಜ್ಞಾನ ಪದವಿಯ
ಜಾಣೆನಿಂ ಪಡೆದೆನಿನ್ನೇನು ‖ ೪೮ ‖

ಪ್ರತಿಸಮಾನದೊಳಾವು ಬರೆದ ಸಚ್ಚರಿತವ
ಮತಿವಂತರಿಂತಿದರೊಳಗೆ
ರತಿಯಿಂದ ತಪ್ಪುಳ್ಳೊಡೆ ತಿದ್ದಿಕೊಂಬುದು
ಸುತರ ತಪ್ಪನು ತಿದ್ದುವಂತೆ ‖ ಶ್ರೀ ‖

ವಿಷಯ : ಆದಿಚಕ್ರವರ್ತಿಯಾದ ಭರತೇಶ್ವರನ ಕಥೆ.

ವಿಶೇಷ : ಅಸಮಗ್ರ ಪ್ರತಿ. ಈ ಭಾಗವು ಕೆ.ಬಿ. ೧೫೫ ನೆಯ ನಂಬರಿನ ಪುಸ್ತಕದ ಮುಂದುವರಿದ ಭಾಗ. ಸ್ಫುಟಾಕ್ಷರ.

1125

ಕೆ. ೨೨೩/೧	**ಭರ್ತೃಹರಿಶತಕದ ಟೀಕು**	**ಶ್ಲೋಕ, ಟೀಕು**
೧೧″ × ೧.೮″	?	?
೧–೩೦ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ಭರ್ತುಲಹರಿ ‖ ಅಥ ಚತುರ್ಥದ ಶಕೆ ಭೊಗಾಸ್ಥೈರ್ಯ ಮಾಹ ‖
ಶ್ಲೋಕ ‖ ಭೋಗೆ ರೋಗ ಭಯಂ ಕುಲೆ ಚ್ಯುತಿಭಯಂ ವಿತ್ತೇ ನೃಪಾಲಾದ್ಭಯಂ
ಮಾನೆ ಧೈನ್ಯಭಯಂ ಬಲೆ ರಿಪುಭಯಂ ರೂಪೆ ಜರಾಯಾ ಭಯಂ ।
ಶಾಸ್ತ್ರೇ ವಾದಭಯಂ ಗುಣೆ ಖಲಭಯಂ ಕಾಮೇ ಕೃತಾಂತಾದ್ಭಯಂ
ಸರ್ವಂ ವಸ್ತುಭಯಾನ್ವಿತಂ ಭುವಿ ನೃಣಾಂ ವೈರಾಗ್ಯಮೇವಾಭಯಂ ‖
ಟೀಕು ‖ ವನಿತಾದಿ ಭೋಗದಲ್ಲಿ ರೋಗಭಯಂ । ರೋಗಭಯಂ । ರೋಗ । ರೋಗದ ದೆಶೆಯಿಂದ ಭಯಂ । ಭಯವು । ಅಸ್ತಿ ಉಂಟು । ಕುಲೆ । ಕುಲದಲ್ಲಿ ಚ್ಯುತಿಭಯಂ । ನಾಶದೆಶೆಯಿಂದ । ಭಯಂ । ಭಯವು । ವಿತ್ತೇ ಧನದಲ್ಲಿ । ನೃಪಾಲಾನ್ । ಅರಶಿನ ದೆಶೆಯಿಂದ । ಭಯಂ । ಭಯವು । ಮಾನೆ । ಚಿತ್ತ ಸಮುನ್ನತಿಯಲ್ಲಿ । ದೈನ್ಯಭಯಂ । ದೈನ್ಯದ ದೆಶೆಯಿಂದ । ಭಯಂ । ಭಯವು । ಬಲೆ । ಬಲದಲ್ಲಿ । ರಿಪುಭಯಂ x x x x
ಭಯಂ ಭಯವು । ಆದ ಕಾರಣ ದೆಶೆಯಿಂದ । ಭುವಿ । ಭೂಮಿಯಲ್ಲಿ । ನೃಣಾಂ । ಮನುಷ್ಯರಿಗೆ । ಸರ್ವಂ ಸಕಲವಾದಂತ । ವಸ್ತು ವಸ್ತುವವು । ಭಯಾನ್ವಿತಂ । ಭಯದಿಂದ ಕೂಡಿ ಕೊಂಡಿದಂಥಾದು । ವೈರಾಗ್ಯಮೇವ । ವೈರಾಗ್ಯವೆ । ಅಭಯಂ । ಭಯರಹಿತವಾದಂಥಾದು ‖ ೧ ‖

ಅಂತ್ಯ : ದಾತೃತ್ವಂ ಪ್ರಿಯವಕ್ತೃತ್ವಂ ಧೀರತ್ವಮುಚಿತಜ್ಞತಾ ।
ಅಭ್ಯಾಸೇನ ನ ಲಭ್ಯಂತೆ ಚತ್ವಾರಃ ಸಹಜಾ ಗುಣಾಃ॥

ಟೀಕು ॥ ದಾತೃತ್ವಂ । ದಾತೃತ್ವವು । ಪ್ರಿಯವಕ್ತೃತ್ವಂ । ಸ್ನೇಹಿತರ ಮನೋಧರ್ಮವರಿತು ಅನುಗುಣ್ಯವಾಗಿ ನಡೆಕೊಂಬಂಥಾದು ಧೀರತ್ವಮುಚಿತಜ್ಞತ । ಧೀರತ್ವಂ । ಧೈರ್ಯಶಾಲಿಯಾಗಿರುವುದು । ವುಚಿತಗ್ನತಾ । ತಾರತಮ್ಯವರಿತು ನಡೆಸೋದು । ಅಭಾಸೇನ ನ ಲಭ್ಯಂತೆ । ಚತ್ವಾರಃ ಸಹಜಾ ಗುಣಾಃ । ಯೀ ನಾಲ್ಕು ಸಹಜ ಗುಣಗಳು । ಆಗ ಅಭ್ಯಾಸ ಮಾಡೆನೆಂದರೆ ಬರಲರಿಯದು ಯಂಬುದರ್ಥ ॥ ೧೬ ॥

ವಿಷಯ : ಭರ್ತೃಹರಿ ಸುಭಾಷಿತಗಳು.

ವಿಶೇಷ : ಇದಾದ ಮೇಲೆ ೫ ಪತ್ರಗಳಲ್ಲಿ ಕೆಲವು ಸಂಸ್ಕೃತ ಸುಭಾಷಿತಗಳು ಇವೆ. ಇದೇ ಪುಸ್ತಕದಲ್ಲಿ ನಾನಾರ್ಥ ಕಂದವೆಂಬ ಗ್ರಂಥವೂ ಇದೆ.

1126

ಕೆ. ಬಿ. ೪೦೮	**ಭರ್ತೃಹರಿ ಸುಭಾಷಿತ (ಕನ್ನಡ ಅನುವಾದ)**	ಕಂದ, ವೃತ್ತ
೬.೫" × ೪.೨"	ಬಸವಪ್ಪಶಾಸ್ತ್ರಿ	೧೯ನೇ ಶತಕ
೧–೧೬ ಪತ್ರ	೧೮ ಪಂಕ್ತಿ	೧೨ ಅಕ್ಷರ

ಆದಿ : ನೀತಿಶತಕವು । ಭರ್ತೃಹರಿ ಸುಭಾಷಿತ ।

ಕಂದಪದ್ಯ ॥ ಸ್ಥಾನಾದಿ ಪರಿಚ್ಛೇದವ
ನಾನದ ಸಚ್ಚಿತ್ಸುಖಾತ್ಮಮಾಗೆಸೆಯುವನೈ
ಜಾನುಭವದಿಂದಮೇ ತಿಳಿ
ವಾ ನಿರ್ಮಲಮಾದ ತೇಜಕಭಿನಮಿಸಿದಪೆಂ ॥ ೧ ॥

ಮೂರ್ಖ ಪದ್ಧತಿ.

ಕಂ ॥ ತಿಳಿವರ್ಗೆ ಮತ್ಸರಂ ಪಿರಿ
ದಿಳೆಯಾಣ್ಮರ ಖರ್ವಗರ್ವದೂಷಿತಹೃದಯರ್
ತಿಳಿವಿಲ್ಲದರಿನ್ನುಳಿದರ್
ಮುಳುಗಿತ್ತದರಿಂ ಸುಭಾಷಿತಂ ತಾನೊಡಲೊಳ್ ॥ ೨ ॥

ಅಂತ್ಯ : ಕಂ ॥ ಬನಮುಂ ಪಟ್ಟಣಮುಪ್ಪುದು
ಜನರೆಲ್ಲರ್ ಸ್ವಜನರಪ್ಪರೀ ನೆಲನೆಲ್ಲಂ
ಧನ ಕನಕ ವಸ್ತುಪೂರಿತ
ಮೆನಿಪುದಣಂ ಪೂರ್ವಪುಣ್ಯವುಳ್ಳಂಗನಿಶಂ ॥ ೧೦೧ ॥

ಕನ್ನಡ ಭರ್ತೃಹರಿ ಸುಭಾಷಿತವು ಸಂಪೂರ್ಣ ಮಂಗಳಮುಹಾಶ್ರೀ ॥

x x x x

ಕಂ || ನುತಗುಣ ಚಾಮ ಮಹೀಪತಿ
ಮತಿಸಚಿವ ನೃಸಿಂಹವರ್ಮನುತ್ಸಾಹಿಸೆ ಸಂ
ಸ್ಕೃತ ಭರ್ತೃಹರಿ ಸುಭಾಷಿತ
ಕೃತಿಯಂ ಬಸವಪ್ಪಶಾಸ್ತ್ರಿ ಕನ್ನಡಿಸಿದಪಂ || ೨ ||

x x x x

ಮೂರ್ಖಪದ್ದತಿ ೧ನೇ ಪಾ | ವಿದ್ಯುತ್ಪದ್ಧತಿ ೨ನೇ ಪಾ | ಶೌರ್ಯಪದ್ಧತಿ ೪ | ಅರ್ಥಪದ್ಧತಿ ೫ನೇ | ದುರ್ಜನಪದ್ಧತಿ | ೬ನೇ ಸಜ್ಜನಪದ್ಧತಿ | ೮ನೇ ಪರೋಪಕಾರಪದ್ಧತಿ ೧೦ನೇ | ಧೈರ್ಯಪದ್ಧತಿ ೧೨ನೇ | ದೈವಪದ್ಧತಿ ೧೩ನೇ.

ವಿಷಯ : ಭರ್ತೃಹರಿ ಸುಭಾಷಿತಗಳು.

ವಿಶೇಷ : ತೆಳುವು ಕಾಗದ. ಇದು ಭರ್ತೃಹರಿಯ ನೀತಿಶತಕದ ಪದ್ಯಾನುವಾದ. ಇದು ಅಚ್ಚಾಗಿದೆ.

1127

ಕೆ. ೭೦/೨	**ಭವನ ಭಿಕ್ಷಾಟನ**	ಭಾಮಿನೀ ಷಟ್ಪದಿ
೨೬.೮" × ೨.೨"	?	?
೬ ಪತ್ರ	೧೦ ಪಂಕ್ತಿ	೧೫೦ ಅಕ್ಷರ

ಆದಿ : ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಖವರುಷಂಗಳು ೧೭೬೩ ನೇ ಸಂದವರ್ತಮಾನ ಶಾರ್ವರಿ ಸಂವತ್ಸರದ ಶು. ೧೫ ಯಲ್ಲು ಭಾರತದ ಆದಿಯಲ್ಲಿ ಭವನ ಭಿಕ್ಷಾಟಣ ಬರೆಯುವುದಕ್ಕೆ ಶುಭಮಸ್ತು.

ಸೂಚನೆ || ತನಗೆ ಪುಟ್ಟಿದ ಮಗಳ ತಾನೇ
ಯನುಭವಿಸುವನು ಕಮಲಸಂಭವ
ನೆನುತ ಪಂಚಮಶಿರವನರಿದನು ಪಾರ್ವತೀರಮಣಾ ||

ಪದನೂ || ಶ್ರೀ ಗಿರಿಜೆ ಮುಖ ಕಮಲ ದಿನಕರ
ಭೋಗಿ ಭೂಷ ಭಸಿತ ಗಾತ್ರನು
ನಾಗಚರ್ಮಾಂಭರನು ಶಂಕರ ಮಂಗಳಾತ್ಮಕನು
ನಾಗವದನನ ಜನಕ ಕರುಣಾ
ಸಾಗರನು ನಿಗಮಾಗಮಾನ್ವಯ
ಯೋಗ ತ್ರಿಜಗೋದ್ಧರಣ ಮತಿಯನು ಕೊಡುವುದೆಮಗೊಲಿದು || ೧ ||

ಅಂತ್ಯ : ಕರಿಗೊರಳ ಶಶಿಯಸವ ಜೂಟದ
ವರಭಹಿತದ್ಯುತದವಳ ಕಾಯನ
ಪರಮಪಾವನ ಹರನ ಭಿಕ್ಷಾಟಣದ ವಿವರವನೂ

ವಿರಚಿಸಿದನೆಂತೆನಲು ದುರಿತ
ಕ್ಷರವ ಕೆಡಿಸುವ ಕಾರುಣಿಕ
ಶಿರವನು ಗದುಗಿನ ವೀರನಾರಾಯಣನ ಕರುಣದಲಿ || ೪೯ ||
ಅಂತು ಸಂಧಿ ೩ ಕ್ಕಾಂ ಪದನೂ ೧೭೦ ಕ್ಕಾಂ ಮಂಗಳ ಮಹಾಶ್ರೀ

ವಿಷಯ : ಶಿವನ ಭಿಕ್ಷಾಟನ ಲೀಲೆ.

ವಿಶೇಷ : ಅಕ್ಷರಗಳು ವಿರಳವಾಗಿಯೂ ಸುಂದರವಾಗಿಯೂ ಇವೆ. ಪಂಕ್ತಿಗಳಿಗೆ ಕ್ರಮಾಂಕವನ್ನು ಬರೆದಿಲ್ಲ. ಇದೇ ಕಟ್ಟಿನ ಆದಿಯಲ್ಲಿ ಕುಮಾರವ್ಯಾಸನ ಭಾರತ ಎಂಬ ಕೃತಿ ಇದೆ.

1128

ಕೆ. ೪೯೨ **ಭವನ ಭಿಕ್ಷಾಟನ** ಭಾಮಿನೀ ಷಟ್ಪದಿ

೧೪.೫" × ೨" ? ?

೧–೯ ಪತ್ರ ೧೦ ಪಂಕ್ತಿ ೯೦ ಅಕ್ಷರ

ಆದಿ: ಶ್ರೀ ಭಾರತ ಕಥಾಪ್ರಸಂಗದಲ್ಲಿ ಅಷ್ಟಾದಶ ಪರ್ವದೊಳ್ ಯೇಕಾದಶ ಪರ್ವ ಬರೆವುದಕ್ಕೆ ಅವಿಘ್ನಮಸ್ತು || ಭವನಭಿಕ್ಷಾಟಣ ||
ಪಲ್ಲ || ತನಗೆ ಪುಟ್ಟಿದ ಮಗಳ ತಾನೇ
ಯನುಭವಿಸುವನು ಕಮಲಸಂಭವ
ನೆನುತ ಪಂಚಮಶಿರವನರಿದನು ಪಾರ್ವತೀರಮಣಾ ||

ಪದಾ || ಶ್ರೀ ಗಿರಿಜೆ ಮುಖಕಮಲ ದಿನಕರ
ಭೋಗಿ ಭೂಷಣ ಭೂರಿಗಾತ್ರನು
ನಾಗಚರ್ಮಾಂಬರನು ಶಂಕರ ಮಂಗಳಾತ್ಮಕನೂ
ನಾಗವದನನ ಜನಕ ಕರುಣಾ
ಸಾಗರನು ನಿಗಮಾಗಮಾನ್ವಯ
ಯೋಗ ತ್ರಿಜಗೋದ್ಧರಣ ಮತಿಯನು ಕೊಡುವುದೆಮಗೊಲಿದೂ || ೧ ||

ಅಂತ್ಯ : ಕೇಳು ಜನಮೇಜಯ ಧರಿತ್ರೀ
ಪಾಲ ಯಿಾ ಗಯೆ ಮಹಿಮೆಯನು ನೆರೆ
ಹೇಳಲೆಂನಳವಲ್ಲ ಫಣಿಪತಿಗರಿದು ಬಂಣಿಸಲೂ
ಭಾಳಲೋಚನನಾಜ್ಞೆಯಲಿ ಸಂ
ಭಾಳಿಸಿದೆನೀ ಕಥೆಯನೆಂದುರೆ
ಹೇಳಿದನು ಭೂಪತಿಯ ಕರ್ಮವನು ಪರಿಹರಿಸಿದನು ಮುನಿಪಾ || ೪೯ ||

ಕರಿಗೊರಳ ಶಶಿಯೆಸವ ಜೂಟದ
ವರಭಸಿತ ಧೃತಧವಳಕಾಯನ
ಪರಮಪಾವನ ಹರನ ಭಿಕ್ಷಾಟನದ ವಿವರವನೂ
ವಿರಚಿಸಿದೆನೆಂತೆನಲು ದುರಿತಾ
ಕ್ಷರವ ಕೆಡಿಸುವ ಕಾರುಣಿಕ ಸಿರಿ
ವರನು ಗದುಗಿನ ವೀರನಾರಾಯಣನ ಕರುಣದಲಿ ‖ ೫೦ ‖

ಅಂತು ಸಂಧಿ ೩ಕ್ಕಂ ಪದ ೧೭೦ಕ್ಕಂ ಮಂಗಳಮಹಾಶ್ರೀ ‖
ಶಿವನ ಭಿಕ್ಷಾಟನ ಸಮಾಪ್ತಂ ಶ್ರೀ ‖

ವಿಷಯ: ಶಿವನ ಭಿಕ್ಷಾಟನ ಲೀಲೆ.

ವಿಶೇಷ : ಅಕ್ಷರಗಳು ಸಣ್ಣ. ಪ್ರತಿಸಂಧಿಯ ಕೊನೆಯಲ್ಲೂ ಗದುಗಿನ ವೀರನಾರಾಯಣ ಎಂಬ ಅಂಕಿತವಿರುವುದರಿಂದ ಈ ಕೃತಿ ಕುಮಾರವ್ಯಾಸಕೃತವಿರಬಹುದೆಂದು ಕೆಲವರ ಅಭಿಪ್ರಾಯ. ಎರಡನೇ ಪತ್ರದ ಒಂದು ಪಾರ್ಶ್ವದಲ್ಲಿ ಅರ್ಧ ಮಾತ್ರ ಬರವಣಿಗೆ ಇದ್ದರೂ ಗ್ರಂಥಲೋಪವಿಲ್ಲ.

1129

ಕೆ. ೫೪೩	**ಭವನ ಭಿಕ್ಷಾಟನ**	ಭಾಮಿನೀ ಷಟ್ಪದಿ
೧೫.೪" × ೨.೧"	?	?
೬೮–೭೪ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಶಿವನ ಭಿಕ್ಷಾಟನ ಬರವುದಕ್ಕೆ ಶುಭಮಸ್ತು ‖
ಪಲ್ಲಾ ‖ ....ಮಗಳ ತಾನೇ
ಅನುಭವಿಸಿದನು ಕಮಲ ಸಂಭವ
ನೆನಲು ಪಂಚಮ ಶಿರವನರಿದನು ಪಾರ್ವತೀರಮಣಾ ‖
ಪದಾ ‖ ಶ್ರೀ ಗಿರಿಜೆ ಮುಖಕಮಲ ದಿನಕರ
ಭೋಗಿ ಭೂ...............ನು
ನಾಗಚರ್ಮಾಂಬರನು ಶಂಕರ ಮಂಗಳಾತ್ಮಕನು
ನಾಗವದನನ ಪಿತನು ಕರುಣಾ
ಸಾಗರನು ತ್ರಿಜಗಾಧಿಪನು ನಿಗ
ಮಾಗಮಾಂನ್ವಯ ತಿಲಕ ಮತಿಗೊಡುಗೆಮಗೆ.... ...‖

ಅಂತ್ಯ : ಭರವಸದಿ ಹರಿ ಬಂದು ಕಂಡೆನು
ವಿಧಿ ಕಪಾಲದ ಹದನ ಕರದಿಂ
ಧರಿಸಿ ತಂದನು ಗಯದಿ ಮೋಕ್ಷಂಗೈಸಿದನು ಬಳಿಕಾ

ಹರ ಕಪಾಲಿಯೆನುತ್ತ ಲೋಕದ
ನರರು ತತ್ ಕ್ಷೇತ್ರದಲಿ ತಂಮುಯ
ಪರಮು ಪಿತ್ರುಗಳನುದ್ಧರಿಸುವರು ರುಧ್ರ ಪಾದದಲಿ || ೪೮ ||
ಕೇಳು ಜನಮೇಜಯ ಧರಿತ್ರೀ
ಪಾಲ ಯಿಾ ಗಯೆ ಮುಹಿಮೆಯನು ನೆರೆ
ಹೇಳಲೆಂನಳವಲ್ಲ ಫಣಿಪತಿಗರಿದು ಬಂಣಿಸಲೂ
ಭಾಳಲೋಚನನಾಜ್ಞೆಯಲಿ ಸಂ
ಭಾಳಿಸಿದೆನೀ ಕಥೆಯನೆಂದುರೆ
ಹೇಳಿ ಭೂಪನ ಕರ ಕರ್ಮವನು ಪರಿಹರಿಸಿದನು ಮುನಿಪಾ || ೪೯ ||
ಕರಿಗೊರಲ ಶಶಿಯೆಸವ ಜೂಟದ
ವರಭಸಿತ ದ್ರುತದರಳ ಕಾಯನ
ಪರಮು ಪಾವನ ಹರನ ಭಿಕ್ಷಾಟನದ ವಿವರವನೂ
ವಿರಚಿಸಿದೆನೆಂತೆನಲು ಧುರಿತಾ
ಕ್ಷರವ ಕೆಡಿಸುವ ಕಾರುಣೀಕನ
ವರದಿ ಗದುಗಿನ ವೀರನಾರಾಯಣನ ಕರುಣದಲಿ || ೫೦ ||

ಅಂತು ಸಂಧಿ ೩ ಕ್ಕಂ ಪದ ೧೭೦ ಕ್ಕಂ ಮುಂಗಳ ಮುಹಾ ಶ್ರೀ ||

ವಿಷಯ : ಶಿವನ ಭಿಕ್ಷಾಟನ ಲೀಲೆ.

ವಿಶೇಷ : ಅತ್ಯಂತ ಶಿಥಿಲ ಪ್ರತಿ. ಕೆಲವು ಓಲೆಗಳ ಅಂಚು ಮುರಿದಿದೆ. ಸಂಧಿಯ ಕೊನೆಯಲ್ಲಿ 'ಗದುಗಿನ ವೀರನಾರಾಯಣ' ಎಂಬ ಅಂಕಿತವಿರುವುದರಿಂದ ಈ ಕೃತಿ ಕುಮಾರವ್ಯಾಸ ಕೃತವಿರಬಹುದೆಂದು ಕೆಲವರ ಅಭಿಪ್ರಾಯ.

1130

ಕೆ. ೫೦೩	**ಭವ್ಯಜನ ಚಿಂತಾಮಣಿ**	ಚಂಪು
೧೬.೬" × ೧.೮"	ಚಾರುಕೀರ್ತಿ ಪಂಡಿತಾಚಾರ್ಯ	೧೮೧೫
೧–೬೮ ಪತ್ರ	೯ ಪಂಕ್ತಿ	೮೪ ಅಕ್ಷರ

ಆದಿ : ಜಲಾಭಿಷೇಕದ ಕಥೆ || ಶ್ರೀ ಭವ್ಯಜನ ಚಿಂತಾಮಣಿ ಪುಸ್ತುಕ ಬರಿಯುದಕ್ಕೆ ನಿರ್ವಿಜ್ಞ್ನಮಸ್ತು || ವೃತ್ತಾ ||
ಶ್ರೀರಾಜಂ ರಾಜರಾಜಂ ಪ್ರಮುದಿತೆ ಸದ್ಬೋದತತ್ವಾಭಿದಾನಂ
ಚಾರಿತ್ರಾರ್ಣವ ಕ್ಷೀರಸಾರಸಕಲಂ ಶ್ರೀಮುದ್ಗಿರಾಭಾಷಿತಾ
ತದ್ರಾಜ್ಞಧ್ಬವ ವಕ್ತ್ರದಾನೆ ತುಹಿನಂ ಕ್ರಾಂತಂ ನಿಭಂ ಸಾರ್ವದೊಳ್
ಆರಾಧ್ಯಂ ಕುರುತೇ ಮುಯಾ ಶಿವಸುಖಂ ಪ್ರಾಪ್ತೋಯಭೀಷ್ಟತ್ರ್ತತೇ || ೧ ||

ಕಂದಾ || ಆದಿಯಲರಹಂತರ ಶ್ರೀ
ಪಾದಾಂಬುಜಕೆರಗಿ ನಿತ್ಯ ಸಿದ್ಧರ ಪದವಿಯಾ
ಸಾದಿಸಲೊಲಿದಾಚಾರ್ಯ್ಯರ
ವೋದದುಪಾಧ್ಯಾಯ ಸರ್ವಸಾಧುವ ನುತಿಪೇ || ೨ ||

x x x x

ವಚನ|| ಯಿಂತು ಪಂಚಪರಮೇಷ್ಠಿಗಳಂ ಸ್ತುತಿಯಿಸಿ ಬಾಹುಬಲಿಯಂ ನುತಿಪೆಂ||

x x x x

ವಚನ || ಬೆಳ್ಗುಳದಿ ದೇವನಂ ಭಜಿಸಿ ಶಾರದೆಯ ಪೊಗಳ್ವೆನೆಂತೆನಲ್ ||

x x x x

ದೇವರು ಶಾಸ್ತ್ರಂ ಮುನಿಗಳ
ಪಾವನತರವಂನು ಭಜಿಸಿ ಪಂಡಿತಾಚಾರ್ಯ
ರ್ಕ್ಕಾಮಿತ ಜನಚಿಂತಾಮಣಿ
ಯಾ ವಿರಚನೆಗೈದರಚ್ಚಕಂನಡದಿಂದಂ || ೧೩ ||

x x x x

ವಚನ || ಯಿಂತು ದೇವಶಾಸ್ತ್ರಗಣಧರರಂ ಯುಕ್ತಿ ಶಕ್ತ್ಯಾನುಸಾರದಿಂ ಭಜಿಸಿ ತದಾನುಸಾರ ಶ್ರೋತೃಮುಕ್ಯನೆಂತಪ್ಪನೆನಲ್ || ೪ ||

ಅಂತ್ಯ : || ೩೮ || ವ || ಯಿಂತನೇಕ ಸ್ತ್ರೋತ್ರಂಗೈದೊಂದಿಸಿ ಭೂಯಾತ್ಪುನದರ್ಶನ ವೆಂದು ಗಣದರರಿಂ ಬೀಳ್ಕೊಂಡತ್ಯೋತ್ಸಾಹದಿಂ ಬೇಳಿವೆರಸು ರಾಜಗ್ರಹ ಕೈದಿದನೂ ||

x x x x

ಕರಿಪುರ ಗಿರಿ ಶಶಿ ಶಂಕೆಯ
ನೊರಿಸಿದರಿಂ ಶಾಲಿವಾಹನಶಖವರುಷದೊಳುಂ
ಚರಿಸುವ ವಿವಾಕ್ಯದ ವಾ
ತ್ಸರದಲಿ ಭಾದ್ರಪತ ಶುದ್ಧ ತ್ರಯೋದಸಿ ದಿನಕಂ || ೪೦ ||

ವಿರಚಿತ ಪ್ರತಿ ಸಂಪೂರಣೆ
ಗರಿಯೆಲು ಬೆಳ್ಗುಳದಿ ಬಾಹುಬಲಿ ಸಂನಿದಿಯಲಿ
ದರೆಯೊಳಗೆಲ್ಲಾ ಜನಗಳು
ಬರೆದೋದಲಿ ಭವ್ಯಜನ ಸುಚಿಂತಾಮಣಿಯಾ || ೪೧ ||

ಗದ್ಯ || ಯಿದು ವಿದಮರೇಂದ್ರ ಮಕುಟತಟಗಟಿತ ಮಣಿಗಣಕಿರಣ ಮಾಲಾ ಪ್ರಭಂದ ಭಗವಶ್ಚಾರುಚರಣಾರವಿಂದ್ವದ್ವಂದವಂದಿತ ಮತ್ತಮದುಕಾರಾಯ ಮಾನ ಶ್ರೀ ಮಶ್ಚಾರುಕೀರ್ತಿಪಂಡಿತಾಚಾರ್ಯವಿರಚಿತಮಪ್ಪ ಭವ್ಯಚಿಂತಾ

ಮಣಿಯೊಳಿದುವೆ ಶಾಸ್ತ್ರದಾನಾ ವರ್ಣನಂ ಷೋಡಶಾಶ್ವಾಸಂ ॥ ಅಂತು ಸಂಧಿ ೧೬ಕಂ ಪದನೂ ೧೨೫೦ಕ್ಕಂ ವಚನ ೫೨೬ಕಂ ಮಂಗಳಮಹಾಶ್ರೀ ॥

ವಿಷಯ : ಜೈನ ತತ್ತ್ವಪ್ರತಿಪಾದಕ ಕಥೆಗಳು.

ವಿಶೇಷ : ಅಕ್ಷರಗಳು ಸುಂದರವಾಗಿವೆ. ೪ ಮತ್ತು ೫೨ನೇ ಪತ್ರಗಳು ಲುಪ್ತವಾಗಿವೆ.

1131

ಕೆ.ಬಿ. ೨೬	**ಭವ್ಯಜನ ಚಿಂತಾಮಣಿ**	ಚಂಪು
೭.೬" × ೬.೩"	ಚಾರುಕೀರ್ತಿ ಪಂಡಿತಾಚಾರ್ಯ	೧೮೧೫
೧–೨೪೭ ಪತ್ರ	೧೫ ಪಂಕ್ತಿ	೧೫ ಅಕ್ಷರ

ಆದಿ : ಶ್ರೀರಸ್ತು ॥

ಶ್ರೀ ರಾಜಂ ರಾಜರಾಜಂ ಪ್ರಮುದಿತ ಸದ್ಬೋಧ ತತ್ವಾಭಿಧಾನಂ
ಚಾರಿತ್ರಾರ್ಣವ ಕ್ಷೀರಸಾರ ಸಕಲಂ ಶ್ರೀಮದ್ಗಿರಾಭಾಷಿತಾ ।
ತದ್ರಾಜ್ಞೋದ್ಭವ ವಸ್ತ್ರಧಾರಿ ತುಹಿನಕ್ರಾಂತಂ ನಿಭಂ ಸಾರ್ವದೊಳ್
ಆರಾಧ್ಯಂ ಕುರುತೇ ಮಯಾ ಶಿವಸುಖಂ ಪ್ರಾಪ್ತೋಯಭೀಷ್ಟಾರ್ಥತೇ ॥
ಕಂದ ॥ ಆದಿಯಲರಹಂತರ ಶ್ರೀ
ಪಾದಾಂಬುಜಕೆರಗಿ ನಿತ್ಯ ಸಿದ್ಧರ ಪದವಿಯ
ಸಾಧಿಸಲೊಲಿದಾಚಾರ್ಯರ
ಮೋದದುಪಾಧ್ಯಾಯ ಸರ್ವಸಾಧುವ ನುತಿಪೇಂ ॥

x x x x

ವಚನಂ ॥ ಇಂತು ಪಂಚಪರಮೇಷ್ಠಿಗಳಂ ಸ್ತುತಿಸಿ ಬಾಹುಬಲಿಯಂ ನುತಿಪೇ॥

x x x x

ವ॥ ಬೆಳ್ಗುಳದಧಿದೇವನಂ ಭಜಿಸಿ ಶಾರದೆಯಂ ಪೊಗಳ್ವೆನೆಂತೆನಲ್ ॥

x x x x

ದೇವರು ಶಾಸ್ತ್ರಂ ಮುನಿಗಳ
ಪಾವನತರಮುನ್ನು ಭಜಿಸಿ ಪಂಡಿತಾಚಾರ್ಯರ್
ಕಾವಿತ ಜನಚಿನ್ತಾಮಣಿ
ಯಾ ವಿರಚನೆಗೈದರಚ್ಚ ಕನ್ನಡದಿಂದಂ ॥ ೩ ॥

x x x x

ಇಂತು ದೇವ ಶಾಸ್ತ್ರಗಣಧರರಂ ಯುಕ್ತಿಶಕ್ತ್ಯಾನುಸಾರದಿಂ ಭಜಿಸಿ ತದನು ಸಾರ ಶ್ರೋತೃಮುಖ್ಯನೆಂತಪ್ಪನೆನಲ್ ॥

ಅಂತ್ಯ : ಇಂತನೇಕ ಸ್ತೋತ್ರಂಗೈದೊಂದಿಸಿ ಭೂಯಾತ್ಪುನರ್ದರ್ಶಮೆಂದು ಗಣಧರರಿಂ ಬೀಳ್ಕೊಂಡತ್ಯುತ್ಸಾಹದಿಂ ಚೇಳಿಸೀವೆರಸು ರಾಜಗೃಹಕ್ಕೈದಿದನೂ ॥

x x x x

ಕರಿ ಪುರ ಗಿರಿ ಶಶಕಾ ಸಂಖ್ಯೆಯು
ನೊರಸಿದನಿನ್ನಾಲಿವಾಹಶಕವರುಷದೊಳುಂ
ಚರಿಸುವ ವಿವಾಖ್ಯದ ವ
ತ್ಸರದಲಿ ಭಾದ್ರಪದ ಶುದ್ಧ ತ್ರಯೋದಶಿ ದಿನಕಂ ॥
ಧರೆಯೊಳಗೆಲ್ಲಾ ಜನಗಳು
ಬರೆದೋದಲಿ ಭವ್ಯಜನ ಸುಚಿಂತಾಮಣಿಯಾ ॥
ಗದ್ಯಂ ॥ ಇದು ವಿದಮರೇಂದ್ರ ಮಗುಟ ತಟಘಟಿತ ಮಣಿಗಣ ಕಿರಣಮಾಲಾ ಪ್ರಬಂಧ ಶ್ರೀಮದ್ಭಗವಚ್ಚಾರುಚರಣಾರವಿಂದ ದ್ವಂದ್ವವಂದಿತ ಮತ್ತ ಮಧುಕರಾಯಮಾನ ಶ್ರೀಮಚ್ಚಾರುಕೀರ್ತ್ತಿ ಪಂಡಿತಾಚಾರ್ಯ ವಿರಚಿತಮಪ್ಪ ಭವ್ಯಜನಚಿನ್ತಾಮಣಿಯೊಳಿದುವೆ ಶಾಸ್ತ್ರದಾನವರ್ಣನಂ ಷೋಡಶಾಸ್ವಾಸಂ ॥ ಶ್ರೀಃ ॥
ಯುವ ಸಂವತ್ಸರದ ಕಾರ್ತ್ತೀಕ ಶುದ್ಧ ಪಂಚಮಿ ಸೋಮವಾರ ಚಂದ್ರಸಾಗರ ವರ್ಣಿ ಬರೆದು ಬೆಳ್ಗುಳದ ಮಠಕ್ಕೆ ವೊಪ್ಪಿಸಿದ ಭವ್ಯಜನಚಿನ್ತಾಮಣಿ ಸಂಪೂರ್ಣಂ ಮಂಗಲಮಹ ಎಂದಿದೆ ॥ ಶ್ರೀ ॥
ಮಹೀಶೂರ ಮಹಾರಾಜ ಭಾಗಧೇಯ ಪ್ರಕಾಶಿನೇ
ವಾಣೀವಿಲಾಸರೂಪಾಯ ಭಾಂಡಾಗಾರಾಯ ಸುಂದರಂ ।
ಲಿಖಿತಂ ಶ್ರೀನಿವಾಸೇನ ಗೀತಾಕಾಸಾರ ವಾಸಿನಾ
ಭಾರತೀ ಭಾಗ್ಯಭವನ ಶಾಲಾಧ್ಯಕ್ಷೇಣ ಸಾದರಂ ॥
ಮಾನ್ಮಥಾಶ್ವಯುಜೇ ಮಾಸಿ ಪೂರ್ಣಿಮಾ ಗುರುವಾಸರೇ
ಪೂರ್ಣ್ಣೋऽಭವದ್ಭವ್ಯಜನ ಚಿನ್ತಾಮಣಿರಯಂ ಶುಭಃ ॥

ವಿಷಯ : ಜೈನ ತತ್ತ್ವಪ್ರತಿಪಾದಕ ಕಥೆಗಳು.

ವಿಶೇಷ : ಮೋಡಿ ಅಕ್ಷರ. ಪ್ರತಿಯ ಕಾಲ 3-10-1895. ಆದ್ಯಂತ ಪತ್ರಗಳು ಶಿಥಿಲ.

1132

ಕೆ.ಎ. ೩೨	**ಭವ್ಯಾಮೃತ**	ಕಂದ
೧೨.೯″ × ೮″	?	?
೧-೫ ಪತ್ರ	೨೫ ಪಂಕ್ತಿ	೨೬ ಅಕ್ಷರ

ಆದಿ : ಭವ್ಯಾಮೃತ ಬರಿಯುವುದಕ್ಕೆ ನಿರಂತರಾಯೋಸ್ತು ॥
ಶ್ರೀಮದ್ಗುರು ಯೋಗಿವಂದ್ಯಂ
ಕಾಮಾಂತಕ ಕಾಲವಿಜಯ ಗುಣಗಣನಿಳಯಂ
ಸ್ವಾಮಿ ಪರಮಾತ್ಮದೇವನ
ಪ್ರೇಮದೊಳೊಂದಿಪೆ ಸರಾಗಿಯಾದಪ್ಪು ದಿನಂ ॥ ೧ ॥

ಜೀವನು ತಂನೊಳಗಿರುತಿಹ
ಪಾವನ ಪರಮಾತ್ಮ ಗುಣವ ತಂನಿಂದಲೆ ತಾ
ಭಾವಿಸವೆ ಭವಸಮುದ್ರದೊ
ಳಾವಾಗಲು ತೊಳಲುತಿಹನು ಕರ್ಮದವಶದಿಂ || ೨ ||
ಇದಚೇತನ ಪುದ್ಗಲ ಮ
ತ್ತದು ಚೇತನ ಜೀವನೆಂಬ ಯರಡರ ತೆರನಂ
ಪದರಹಿತನಾಗಿ ನಿಚ್ಚಂ
ಅದನೇ ಚಿಂತಿಸುವ ಜೀವ ತೊಲಗುಗು ಭವದಿಂ || ೩ ||

ಅಂತ್ಯ : ದಿವ್ಯಜ್ಞರಾದ ಮನುಜರು
ಅವ್ಯಯ ಸುಖದಲ್ಲಿ ಪ್ರೀತಿಯುಳ್ಳಂತವರುಂ
ಭವ್ಯಾಮೃತವಿಾ ಸ್ತೋತ್ರಮು
ಭವ್ಯರು ನಿತ್ಯದಲು ವೋದಿ ಭಾವಿಸುತಿರ್ಕ್ಕೆಂ || ೧೦೯ ||
ನೂರೆಂಟು ಪದನುವಿದರೊಳು
ಸಾರತರಾತ್ಮ ಸ್ವರೂಪವೊಂದೇ ಮುಖ್ಯಂ
ಆಱೊಬ್ಬರೊಂದಿದವರಿಗೆ
ಮೂಱೇ ಭವ ತಡವಡೆಂಟು ಭವದೊಳ್ಮೋಕ್ಷಂ || ೧೧೦ ||
ಭವ್ಯಾಮೃತವಾಸಂನ
ಭವ್ಯಂಗಮೃತೋಪಮಾನವಿದು ತಾನಾ
ಭವ್ಯಂಗೆ ಕಾಳುಕೂಟಂ
ನವ್ಯ ಜಿನೇಶ್ವರನ ವಚನ ನಂಬಿರೆ ವೋಕ್ಷಂ || ೧೧೧ ||
ನೂರಹಂನ್ನೊಂದಕ್ಕಂ ಜಯಮಂಗಳ ಮಹಾಶ್ರೀ ||

ವಿಷಯ : ಜೈನ ತತ್ತ್ವ.

ವಿಶೇಷ : ಶಕಟರೇಫದ ಬಳಕೆ ಇದೆ. ಅಕ್ಷರಗಳು ಸ್ಫುಟವಾಗಿಯೂ ವಿರಳವಾಗಿಯೂ ಇವೆ.

1133

ಕೆ. ೫೫೪	**ಭವ್ಯಾಮೃತ ಮಹಾಪುರಾಣ**	ಚಂಪು
೧೪" × ೧.೬"	ಚಂದ್ರಸಾಗರ ವರ್ಣಿ	?
೧–೭೫ ಪತ್ರ	೮ ಪಂಕ್ತಿ	೬೪ ಅಕ್ಷರ

ಆದಿ : ಸೌಮ್ಯಸಂ। ಕಾರ್ತಿಕ ಬ ೧೦ ಗುರುವಾರದಲ್ಲು ಭವ್ಯಾಮ್ರುತ ಬರೆಯುವದಕ್ಕೆ ಶುಭಮಸ್ತು || ವೃತ್ತ ||

ಶ್ರೀಮಂತಂ ದೇವ ದೇವಂ ಸಕಲಗುಣನಿಧಿಂ ಸರ್ವಲೋಕೈಕವಂದ್ಯಂ
ಕಾಮಾಂದಃ ಕಲಿಚಂಡ ತೇಜವಿಮಲಂ ಜ್ಞಾನಾಬ್ಜ ಮಿತ್ರೋದಯಂ
ಪ್ರೇಮಂ ಭವ್ಯಜನ ಪ್ರಮೋದ ನಿರುತಸ್ಸದ್ಧರ್ಮ ಉದ್ಯೋಗನಂ
ಶ್ರೀ ಮುಕ್ತಿಪ್ರದ ಚಂದ್ರನಾಥ ನಮಗೀಗಿಷ್ಟಾರ್ತ್ಥ ಸಂಸಿದ್ಧಿಯಂ ॥ ೧ ॥

x x x x

ಯಲ್ಲಾ ಗಣಧರರಡಿದಳ
ಪಲ್ಲವಕಾನೆರಗಿ ಯಿೂಗ ಧರ್ಮ್ಮಾಂಮೃತಮಂ
ಸೊಲ್ಲಿದ ನಯಸೇನ ಮುನಿ
ವಲ್ಲಭಗತಿ ಭಕ್ತಿಭರದಿ ಯರಗುವೆ ನಿರುತಂ ॥

ವ ॥ ಯಿಂತಾದಿ ಕರ್ತ್ತೃಗಳಂ ನುತಿಶಿ ನಯಸೇನದೇವ ವಿರಚಿತಮಪ್ಪ ಧರ್ಮ್ಮಾಮೃತ ಮಹಾಕಾವ್ಯ ಪ್ರಗಲ್ಭರಲ್ಲದೆಲ್ಲರಿಗಗೋಚರವಾದುದರಿಂ ಅಚ್ಚಕಂನಡ ಕಂದ ವೃತ್ತ ವಚನದಿಂ ವಿರಚಿಸಲೆಲ್ಲರುಂ ತಿಳಿದು ಸನ್ಮಾರ್ಗ ಕೈತರಲೆಂದು ಚಂದ್ರಸಾಗರಿವರ್ಣಿಂಯು ಭವ್ಯಾಮೃತವೆಂಬ ಪೆಸರಿಂ ವಿರಚಿಸಲ್ಪೇಡಿ ಪಂಚ ಪರಮೇಷ್ಟಿಗಳಂ ಶಾರದೆಯಂ ಆಚಾರ್ಯರಂ ಸ್ತುತಿಶಿ ವಂದಿಸಿ ಮುಂದಣ ಕಥೆಯಂ ಪೇಳ್ವೆನದೆಂತೆನಲ್ಮಗದನಾಯಕಂ ಚೇಳಿನೀವೆರಸು ಸಮವಸರಣ್ಕೈದಿ ಶ್ರೀ ವರ್ಧಮಾನಸ್ವಾಮಿಗೆರಗಿ ಗಣಧರ ಗೊಂದಿಸಿ ಮನುಷ್ಯಕೋಷ್ಠದೊಳ್ಕುಳ್ಳಿರ್ದು ಕೈಗಳಂ ಮುಗಿದು ॥

ಅಂತ್ಯ : ವೃ ॥ ಜನಕೆಲ್ಲಂ ಹಿತಮಾಗಿ ರಾತ್ರಿ ಪಗಲೊಳ್ಸಂನ್ಮಾರ್ಗವವೆಂದೋದುವೇ ಮನಮಂ ಪುಟ್ಟಿಸಿ ಚಂದ್ರನಾಥ ಸೂರ್ಯ ಧರೆಯಿಂನಿರ್ಪಂತೆ ಯಿೂ ಲೋಕದೊಳ್ ಘನ ಮಾರ್ಗಪ್ಪವೊಲೆಲ್ಲರಾಲಯಗಳೊಳ್ ಚೌವೀಸ ತೀರ್ತ್ಥಂಕರಾ ವನಜಾಂಘ್ರೀ ಕೃಪೆಯಂನ್ನು ಬೇಡಿ ಭಜಿಸಿದ್ಬದ್ರಂ ಶುಭಂ ಮಂಗಳಂ ॥

ಕಂ ॥ ಪುರ ಪುರ ಗಿರಿಶಂಖೆಯೊ
ಳಿರುತಿಹ ಶಖಾಬ್ದದಲ್ಲಿ ಬಂದಿಹ ಸಂವ
ತ್ಸರವು ಸೌಮ್ಯ ನಾಮದೊ
ಳೊರೆದಂ ಪುಷ್ಯ ಶುಧ್ಧ ಅಷ್ಟಮಿ ದಿನಕಂ॥

ಗದ್ಯಾ ॥ ಶ್ರೀಮದಮರೇಂದ್ರ ಮಕುಟತಟಘಟಿತ ಮಣಿಕಿರಣ ವಾರಿಧಾರಾ ವಿಲುಳಿತ ಭಾಗವ ಚಾರುಚರಣಾರವಿಂದ ಧ್ವಂದ್ವವಂದಿತ ಮತ್ತ್ರಮಘುಕ ರಾಯಮಾನ ಶ್ರೀಮಚ್ಚಂದ್ರಸಾಗರವರ್ಣಿ ವಿರಚಿತಮಪ್ಪ ಭವ್ಯಾಂಮೃತ ಮಹಾಪುರಾಣದೊಳಿದುವೆ ಆತಿಕಾಂಕ್ಷಾದಿಕಾರಃ ಚತುರ್ದಶಸ್ವಾಶಂ ॥ ಶಾಲೀ ವಾಹನಶಾಖಬ್ದಃ ೧೭೭೧ ನೆ ಸೌಮ್ಯನಾಮಸಂ। ಹಿಮಂತ ರುತುಕಾಲೆ ಪುಷ್ಯಮಾಸೆ ಶುಕ್ಲಪಕ್ಷೆ ನೌಮಿ ಭಾನುವಾರ ಸೂರ್ಯೋದಯವಾದ ಘಳಿಗೆ

ಯೆರಡಕ್ಕೆ ತೋವಿನಕೆರೆ ವೀರಭದ್ರಪ್ಪನವರ ಪುಟ್ಟಣ್ಣನು ಉರುಡುಗೆರೆಯಲ್ಲಿ ಬರೆದ ಭವ್ಯಾಮೃತ ಮಹಾಪುರಾಣಕೆ ಮಂಗಳ ಮಹಾ ॥

ವಿಷಯ : ಜೈನ ತತ್ತ್ವಪ್ರತಿಪಾದಕ ಕಥೆಗಳು.

ವಿಶೇಷ : ಪ್ರತಿಯಕಾಲ ಕ್ರಿ. ಶ. ೧೮೮೯. ಪ್ರತಿಯ ಆದಿಯಲ್ಲಿರುವ ಓಲೆಯಲ್ಲಿ ಕಥೆಗಳ ವಿಷಯಸೂಚಿ ಇದೆ. ೯ ಸಂಕೀರ್ಣ ಓಲೆಗಳಿವೆ.

1134

ಕೆ. ೪೪೩/೧	**ಭಾಗವತ**	ಗದ್ಯ
೧೮.೬" × ೨.೫"	ನಾರಾಯಣ	೧೪೫೦
೧-೧೩೪ ಪತ್ರ	೧೩ ಪಂಕ್ತಿ	೯೦ ಅಕ್ಷರ

ಆದಿ : ಶುಭಮಸ್ತು । ಶ್ರೀಮದ್ಭಾಗವತವಂನ್ನು ವಾಕ್ಯರೂಪಿನಲ್ಲಿ ಬರೆವದಕ್ಕೆ ಆಯುರಾರೋಗ್ಯ ಅಯಿಶ್ವರ್ಯ್ಯಮಸ್ತು ॥ ಶ್ರೀಮದ್ಭಾಗವತ ಮಹಾಪುರಾಣವಂನ್ನು ಕರ್ನ್ನಾಟಕಭಾಷಾ ಧ್ವನಿಯಿಂದ । ನನ್ನ ಮತಿಗೆ ಗೋಚರವಾದಂತೆ ಅಂತರಾತ್ಮನಾದ ಶ್ರೀ ವಾಸುದೇವ ಪ್ರೇರಣೆಯಿಂದ ವಿಸ್ಥಾರವಾಗಿ ಅಭಿವರ್ನ್ನಿಸುತ್ತಂಯಿಹೆನೂ x x x x ಈ ಶ್ರೀಮದ್ಭಾಗವತ ಸಂಹಿತಾರ್ಥತಾತ್ಪರ್ಯ್ಯವು ಕರ್ನ್ನಾಟಭಾಷಾಪದ್ಧತಿಯೆಂದು ತಿಳಿಯದಿಜ಼ x x x x ಅಜ಼ವುಳ್ಳವರನುಜ್ಞೆಯಲ್ಲಿ ಶ್ರೀಮದ್ಭಾಗವತರಹಸ್ಯವನು ಅಭಿವರ್ನ್ನಿಸುತ್ತಾಯಿಹೆನು.

ಅಂತ್ಯ : ನಾರದ ಮುನೀಂದ್ರರು । ಅಧಿಕಪವಿತ್ರಮಾದ ಧ್ರುವಚಾರಿತ್ರವನು ಹೇಳಿದರು । ನಿನಗದ ಯಿಾಗ ನಾನು ಹೇಳಿದೆನು । ಯಿದು ಹರಿತುಷ್ಟಿಪ್ರದ । ಆಶ್ರಿತರ್‍ಉಂದ ತುಷ್ಟಿಪ್ರದಲೂ । ಯಿದು ಮಹಾಮಂಗಳ ಸುಖಪ್ರದ । ಧನಪ್ರದ । ಆಯುಃಕೀರ್ತಿಕರ । ಸ್ವಸ್ಯಾನ ಸುಮತಿಪ್ರದ । ವಾಂಛಿತಪ್ರದ । ಸ್ವರ್ಗ್ಗಾಪವರ್ಗ್ಗಪ್ರದವಲಾ । ಯಿಾ ಧ್ರುವಚಾರಿತ್ರಲೂ ॥

ವಿಷಯ : ಪ್ರಪಂಚಸೃಷ್ಟಿ, ಸೂರ್ಯ-ಚಂದ್ರವಂಶದ ರಾಜರ ಕಥೆ.

ವಿಶೇಷ : ಚತುರ್ಥ ಸ್ಕಂಧದ ಒಂಬತ್ತನೆಯ ಅಧ್ಯಾಯದವರೆಗೆ ಮಾತ್ರವಿದೆ. ೪೫ರಿಂದ ೬೦ನೆಯ ಗರಿಯವರೆಗೆ ಗರಿಯ ಅಂಚಿನಲ್ಲಿ ತ್ರುಟಿತ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಚಾಮರಾಜೋಕ್ತಿವಿಲಾಸವೆಂಬ ಗ್ರಂಥವೂ ಇದೆ.

1135

ಕೆ.ಎ.೧೯೧	**ಭಾಗವತ (೧-೪ ಸ್ಕಂಧ)**	ಗದ್ಯ
೧೨.೫" × ೭.೭"	ನಾರಾಯಣ	ಸು. ೧೪೫೦
೧-೨೪೦ ಪತ್ರ	೨೦ ಪಂಕ್ತಿ	೨೩ ಅಕ್ಷರ

ಆದಿ : ಶ್ರೀಮತೇ ರಾಮಾನುಜಾಯ ನಮಃ॥ ಶ್ರೀಮದ್ಭಾಗವತವನ್ನು ವಾಕ್ಯರೂಪಿನಲ್ಲಿ ಬರೆವುದಕ್ಕೆ ಆಯುರಾರೋಗ್ಯಮಸ್ತು॥ ಶ್ರೀಮದ್ಭಾಗವತ ಮಹಾ ಪುರಾಣ

ವನು ಕರ್ಣಾಟಕ ಭಾಷಾ ಪದ್ಧತಿಯಿಂದ ನನ್ನ ಮತಿಗೆ ಗೋಚರವಾದಂತೆ ಅಂತರಾತ್ಮನಾದ ಶ್ರೀ ವಾಸುದೇವಪ್ರೇರಣೆಯಿಂದ ವಿಸ್ತಾರವಾಗಿ ವರ್ನಿಸುತ್ತಂ ಇಹೆನು. ಸಕಲವಿಷ್ನ ನಿವಾರಣನಾದ ಸುರಾಸುರ ಸೇವಿತ x x x x ಶ್ರೀ ನಾರಾಯಣನ ಗುಣ ಚಾರಿತ್ರವನಭಿವರ್ನ್ನಿಸುವೆನು. ಮತಿಯನಿತ್ತು ರಕ್ಷಿಸು ||

ಅಂತ್ಯ : ಮೈತ್ರೇಯರು ಕರುಣಿಸಿದರೆಂದು ಶುಕಯೋಗೀಂದ್ರರು ರಾಜೇಂದ್ರಂಗೆ ನಿರೂಪಿಸಿದ ವೃತ್ತಾಂತಮಂ ಸೂತರು ಜಗದ್ಧಿತಾರ್ಥಮಾಗಿ| ನೈಮಿಶಾರಂಣ್ಯಾಂ ಪುಣ್ಯ ಕ್ಷೇತ್ರದಲ್ಲಿ ಶೌನಕಾದಿಗಳಿಗೆ ಪೇಳಿದರೆಂಬಲ್ಲಿಗೆ|| ಶ್ರೀಮದ್ಭಾಗವತ ಮಹಾ ಪುರಾಣದಲ್ಲಿ ಚತುರ್ಥಸ್ಕಂಥದಲ್ಲಿ | ವಚನ ಪ್ರಬಂಧವ್ನಾಗಿ ವಿರಚಿಸಲ್ಪಟ್ಟ ತಾತ್ಪರ್ಯದಲ್ಲಿ ನವದಶೋಧ್ಯಾಯಂ ಸಮಾಪ್ತಂ|| ಸ್ವಸ್ತಿಪ್ರಜಾಭ್ಯಃ ಕಾಯೇನ ವಾಚಾ ಚತುರ್ಥಸ್ಕಂಥವು ಸಮಾಪ್ತಂ ಶ್ರೀ||

x x x x

ಶ್ರೀಹರಿದಾಸೋತ್ತಮ ಶ್ರೀನಾರಾಯಣ ಕವೀಂದ್ರ ಶ್ರೀಮದ್ಭಾಗವತ ಮಹಾ ಪುರಾಣ ಸಂಹಿತಾರ್ಥದಲ್ಲಿ ವಚನ ಪ್ರಬಂಧಮಾಗಿ ವಿರಚಿಸಲ್ಪಟ್ಟ ತಾತ್ಪರ್ಯ ದಲ್ಲಿ || ಚತುರ್ಥಸ್ಕಂಥಂ ಸಮಾಪ್ತಂ||

ವಿರೋಧಿಕೃತು ಸಂವತ್ಸರದ ಆಶ್ವೀಜ ಶುದ್ಧ ೧೩ ಮಹಿಶೂರ ನಗರದ ಲಕ್ಷ್ಮೀ ರಮಣಸ್ವಾಮಿಯವರ ದೇವಸ್ಥಾನದ ಸ್ಥಾನೀಕ ಲಕ್ಷ್ಮಪ್ಪನವರ ಮಗ ಕೃಷ್ಣಯ್ಯನು ತಾನು ತನಗೆ ಬರೆದುಕೊಂಡ ವಾಕ್ಯಭಾಗವತದ ಪುಸ್ತಕ ೧ ಕ್ಕೆ ಸ್ಕಂಥ ೪ ಬರೆದು ಸಮಾಪ್ತಿಯಾಯಿತು. ಜಯಮಂಗಳ ಮಹಾಶ್ರಿ.

ವಿಷಯ : ಪ್ರಪಂಚಸೃಷ್ಟಿ, ಸೂರ್ಯ-ಚಂದ್ರ ವಂಶದ ರಾಜರ ಕಥೆ.

ವಿಶೇಷ : ಶಕಟರೇಫವಿದೆ. ಸುಂದರ ಬರಹ.

1136

ಕೆ. ೧	**ಭಾಗವತ**	ಭಾಮಿನೀ ಷಟ್ಪದಿ
೨೬.೧"×೨.೧"	ಚಾಟುವಿಠಲನಾಥ	ಸು. ೧೫೩೦
೧–೨೩೪ ಪತ್ರ	೧೪ ಪಂಕ್ತಿ	೧೫೫ ಅಕ್ಷರ

ಆದಿ :.....ಪ್ರಥಮಸ್ಕಂದ | ಪಲ್ಲವಾ ||

ಸೂತನರುಹಿದನಧಿಕಗುಣ ವಿ
ಖ್ಯಾತ ಶೌನಕ ಮುಖ್ಯಮುನಿಗಳಿ
ಗೋತು ಪರಮರಹಸ್ಯವಹ ಭಾಗವತ ಸಂಹಿತೆಯಾ ||

ಪದನೂ || ಶ್ರೀವರನು ಶಾಶ್ವತನಖಿಳ ವೇ
ದಾವಳಿ ಸಂಸ್ತುತ್ಯ.................
....

....
....
......................ಮಾಳ್ಕೆ ಯೋಗಕ್ಷೇಮವನು ನಮಗೇ || ೧ ||

ಅಂತ್ಯ : ಯದುಕುಲದಲಂಕುರಿಸಿ ನಂದನ
ಸದನದಲಿ ಪಲ್ಲವಿಸಿ ಸುರರ
ಭ್ಯುದಯದಲಿ ನವ್ರಿದೆದ್ದು ಧರಣಿಯ ಸಲಹಿದಾ ಫಲವಾ
ಸದುಹೃದಯರೊಳಗಾದ ಫಲಸಂ
ಪದವು ಗೋಪೀನಾಥ ನಾಮದ
ವಿಧಿತ ಕಲ್ಪದೃವವೆಮಗೆ ಮಾಳ್ಪುದು ಮನೋರಥವಾ || ೪೪ ||
ಭಯಂ ಸಂಧಿ ೨೬ಕ್ಕೆ ಪದನು ೯೦ ಕ್ಕೆ ಮಂಗಳ ಮಹಾಶ್ರೀ.

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ೧೨ ಸ್ಕಂಧಗಳು ಪೂರ್ತಿ ಗ್ರಂಥವಿದೆ. ಪತ್ರದ ಮಧ್ಯದಲ್ಲಿರುವ ರಂಧ್ರವು ದೊಡ್ಡದಾಗಿ ಕೆಲವು ಕಡೆ ಅಕ್ಷರಗಳು ಲುಪ್ತವಾಗಿವೆ. ಸಣ್ಣಕ್ಷರ. ಮೊದಲಿನ ಮೂರು ಗರಿಗಳ ಅಂಚು ಮುರಿದಿದೆ. ಕೊನೆಯಲ್ಲಿ ಮೂರು ರಕ್ಷಾಪತ್ರಗಳಿವೆ.

1137

ಕೆ. ೭೭	**ಭಾಗವತ**	ಭಾಮಿನೀ ಷಟ್ಪದಿ
೧೯.೭" × ೨"	ಚಾಟುವಿಠಲನಾಥ	ಸು. ೧೫೩೦
೧–೧೯೩ ಪತ್ರ	೧೦ ಪಂಕ್ತಿ	೭೮ ಅಕ್ಷರ

ಆದಿ : ಶ್ರೀ ಕೃಷ್ಣಾ ನಿಂನ ಪಾದಾರವಿಂದವೇ ಗತಿ || ನಂಜಯನವರ ಭಾಗವತದ ಪೊಸ್ತಕಕೆ ಶುಭಮಸ್ತು ||
ಸೂತನಱುಹಿದನಖಿಳಗುಣವಿ
ಖ್ಯಾತ ಶೌನಕ ಮುಖ್ಯಮುನಿಗಳಿ
ಗೋತು ಪರಮರಹಸ್ಯ ಭಾಗವತ ಸಂಹಿತೆಯಾ ||
ಶ್ರೀವರನು ಶಾಶ್ವತನಖಿಳ ವೇ
ದಾವಳಿ ಸಂಸ್ತುತ್ಯನಮಿತ ಗು
ಣಾವಲಂಬನನಂಬುಜೋದ್ಭವ ಮುಖ್ಯಸುರವಂದ್ಯಾ
ದೇವದೇವನಶೇಷ ಧರಣೀ
ದೇವ ಗೋದ್ವಿಜ ರಕ್ಷಣಾರ್ದ್ದಕೃ
ತಾವತಾರನು ಮಾಳ್ಕೆ ಯೋಗಕ್ಷೇಮನು ನಮಗೇ || ೧ ||

ಅಂತ್ಯ : ಬೇಡು ವರವನು ಮಗನೆ ತಂನನು
ಜೋಡುಮಾಡದಿರಾದಡೆಂದನು
ಕಾಡಿದಪೆ ಮಿಗೆ ಮೆಚ್ಚಿದೆನು ನೀ ಮಾಳ್ಪ ಸಂಸ್ತುತಿಗೆ

ನೋಡುವರೆ ನಿಂನಂದದವನು
ರೂಢಿಯಲಿ ಭಕುತರನು ಕಾಣೆನು
ಬೇಡು ತಂನಾಣೆನುತ ನಿತ್ಯಾತುಮನು ನೇಮಿಸಿದಾ || ೫೪ ||
ಅಂತೂ ಅಧ್ಯಾಯ ೯ಕ್ಕಂ ಪದನೂ ೪೭೦ಕ್ಕಂ ಮಂಗಳಮಹಾಶ್ರೀ.

ವಿಷಯ : ಜಗತ್ಸೃಷ್ಟಿ, ಸೂರ್ಯವಂಶ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ ಮತ್ತು ಶಿಥಿಲಪ್ರತಿ. ೧, ೨, ೯೧ನೆಯ ಪತ್ರಗಳು ಮುರಿದಿವೆ. ೧೭೬ರಿಂದ ಮುಂದಿನ ಪತ್ರಗಳು ತ್ರುಟಿತವಾಗಿವೆ. ಶಕಟರೇಫವಿದೆ. ೯ನೆಯ ಅಧ್ಯಾಯದ ಮುಂದೆ ಇನ್ನೂ ೧೨ ಪದ್ಯಗಳಿವೆ.

1138

ಕೆ. ೯೬	**ಭಾಗವತ**	ಭಾಮಿನೀ ಷಟ್ಪದಿ
೧೪.೮" × ೧.೮"	ಚಾಟುವಿಠಲನಾಥ	ಸು. ೧೫೩೦
೧-೨೪೪ ಪತ್ರ	೯ ಪಂಕ್ತಿ	೧೦೫ ಅಕ್ಷರ

ಆದಿ : ಶ್ರೀಗೋಪಾಲಕೃಷ್ಣಾಯನಮಃ || ಶುಭಮಸ್ತು ||
................ಕ್ಷತ್ರಕುಲಭಾ
ರವನು ಧರಿಯಿಸಲರ್ತಿಯದಬುಜೋ
ದ್ಭವಗೆ ಬಿಂನೈಸಿದನು ಬಲಿದುದು ಮೇಲೆ ಸುರಕಾರ್ಯಾ ||

ಪದ || ಓ ಯೆನಲು ಗೋವಿಂದ ಕೇಶವ
ನಾಯೆನಲು ನರಹರಿ ಜನಾರ್ದ್ದ....
........ಯನಲು ಮಧುಸೂಧನಾಯ ತ್ರಿವಿಕ್ರಮಾಯೆಂಬಾ
ಶ್ರೀಯೆನಲು ಶ್ರೀಕೃಷ್ಣ ವಿಷ್ಣುವೆ
ವಾಯೆನಲು ವಸುದೇವನಂದನ
ಯಾಯೆನಲು ಯಾದವಶಿರೋಮಣಿ ಕರುಣಿಸುವುದೆಂದಾ || ೧ ||

ಅಂತ್ಯ : ಯಿದು ಪರಮ ಮಂಗಳ ಮಹೋದಯ
ವಿದು ಸಹಾಯಕ್ಕೀರ್ತ್ತಿವರ್ದ್ಧನ
ವಿದು ಮುಕುಂದ ಪದಾಬ್ಜ ಭಕ್ತಿಪವಸುಖಪ್ರದವೂ
ಯಿದನು ವೋದುವ ಕೇಳುವಾ ಸದು
ಹೃದಯರನು ರಕ್ಷಿಸುಗೆ ಕಾರುಂ
ಣ್ಯದಲಿ ನೆರ್ರೆ ನಿತ್ಯಾತ್ಮನಾರಾಯಣನು ಮನವೊಲಿದೂ ||

ಶ್ರೀಮದ್ಭಾಗವತೇ ಮಹಾಪುರಾಣೇ ದ್ವಾದಶಸ್ಕಂಧೇ ದ್ವಿತೀಯೋಧ್ಯಾಯಃ ||
ಉಭಯಸಂಧಿ ೨ಕ್ಕಂ ಪದ ೯೩ಕ್ಕಂ ಮಂಗಳಂಶ್ರೀ || ದ್ವಾದಶಸ್ಕಂಧಂ ಸಮಾಪ್ತಂ ||

ಅಂತೂ ಸ್ಕಂಧ ೩ಕ್ಕಂ ಸಂಧಿ....ಕ್ಕಂ....ಪದಕ್ಕಂ ಶ್ರೀ

ವಿಷಯ : ಜಗತ್ಸೃಷ್ಟಿ, ಸೂರ್ಯವಂಶ-ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ ಪ್ರತಿ, ೧೧೫-೧೬೩ರವರೆಗೆ ಮತ್ತು ೧೭೪-೨೦೦ ರ ವರೆಗೆ ಗರಿಗಳಿಲ್ಲ. ಆದರೆ ೧೮೨ನೆಯ ಗರಿ ಮಾತ್ರವಿದೆ. ಗರಿಗಳ ಅಂಚುಗಳನ್ನು ಹುಳು ತಿಂದಿದೆ.

1139

ಕೆ. ೯೭	**ಭಾಗವತ**	ಭಾಮಿನೀಷಟ್ಪದಿ
೧೩.೧" × ೧.೯"	ಚಾಟುವಿಠಲನಾಥ	ಸು. ೧೫೩೦
೧-೧೩೨ ಪತ್ರ	೯ ಪಂಕ್ತಿ	೫೭ ಅಕ್ಷರ

ಆದಿ : ಶ್ರೀಮತೇ ರಾಮಾನುಜಾಯ ನಮಃ || ಭಾಗವತ ಪುಸ್ತಕ ||
ಶ್ರೀಗಣಾಧೀಶರನು ಸಂನ್ನುತ
ಯೋಗಿಭೋಗಿ ಫಲಪ್ರದಾಯಕ
ನೀಗೆಮಗೆ ಯಿಷ್ಟಾರ್ಥವನು ನಿರ್ವಿಘ್ನದಾಯಕವಾ
ಭೋಗಿ ಭೋಗ ವಿಭೂಣನು ಸಕ
ಲಾಗಮೈಕ ಸ್ತುತ್ಯಗುಣ
ಸಾಗರನ ಕಾರುಂಣ್ಯನಿಧಿ ನಿರ್ವಿಘ್ನೇಶನೊಲವಿನಲಿ || ೧ ||

ಅಂತ್ಯ : ಭಕ್ತಿಯೋಗವನಿಂತು ನಿಜಸು
ವ್ಯಕ್ತಯೋಗವನೊರೆದೆನೆರಡೂ
ಮುಕ್ತಿಧನವವ್ಪಸಿದ್ಧಿ ಸಲೆರಡರೊಳಗೊಂದೂ
ಮುಕ್ತರೆಂದರಿ ಮೇಲೆ ವಿಷಯ ವಿ
ರಕ್ತಿಯನು ಯೋಗದ್ವಯಕ್ಕುಪ
ಯುಕ್ತಿಯನು ಹೇಳುವೆನು ನಿತ್ಯಾತ್ಮಾವಗನು ಪದವಾ || ೬೧ ||
ಸಂಧಿ ೧೩ ಕಂ ಪದನು ೬೩೭ ಕಂ ಮಂಗಳ ಮಹಾಶ್ರೀ

ವಿಷಯ : ಜಗತ್ಸೃಷ್ಟಿ, ಸೂರ್ಯವಂಶ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ, ೨೭ನೆಯ ಗರಿಯಿಲ್ಲ. ಅಂತ್ಯದ ಮೂರುಗರಿಗಳ ಒಂದು ಪಾರ್ಶ್ವದ ಅಂಚು ಮುರಿದಿದೆ. ಆದಿ ಅಂತ್ಯದಲ್ಲಿ ರಕ್ಷಾಗರಿಗಳಂತೆ ಮೂರು ಮೂರು ಗರಿಗಳನ್ನು ಸೇರಿಸಿದೆ. ಅವು ಕಮಲಾಚಲ ಮಹಾತ್ಮೆಗೆ ಸಂಬಂಧಿಸಿದವು.

1140

ಕೆ. ೨೫೬ ಭಾಗವತ ಭಾಮಿನೀಷಟ್ಪದಿ

೨೫.೧"×೨" ಚಾಟುವಿಠಲನಾಥ ಸು. ೧೫೩೦

೧–೩೭೭ ಪತ್ರ ೧೩ ಪಂಕ್ತಿ ೧೨೬ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ । ಭಾಗವತ............ತಪೋನಿಧಿಃ । ವೇದ ವ್ಯಾಸಾಯ ನಮಃ ॥ ನಿರಂತರಾಯೋಸ್ತು ॥

ಪಲ್ಲ ॥ ಸೂತನರುಹಿದನಖಿಳಗುಣ ವಿ
ಖ್ಯಾತ ಶೌನಕ ಮುಖ್ಯಮುನಿಗಳಿ
ಗೋತು ಪರಮರಹಸ್ಯವಹ ವರಭಾಗವತ್ಸಂಹಿತೆಯಾ ॥
ಪದನು................
ದಾವಳಿಸಂಸ್ತುತ್ಯನಮಿತ ಗು
ಣಾವಲಂಬನನಂಬುಜೋದ್ಭವ ಮುಖ್ಯಸುರವಂದ್ಯಾ
ದೇವದೇವನಶೇಷ ಧರಣೀ
ದೇವ ಗೋದ್ವಿಜ ರಕ್ಷಣಾರ್ಥ ಕೃ
ತಾವತಾರನು ಮಾಳ್ಕೆ ಯೋಗಕ್ಷೇಮವನು ನಮಗೆ ॥ ೧ ॥

ಅಂತ್ಯ : ಯದುಕುಲದೊಳಂಕ್ಕುರಿಸಿ ನಂದನ
ಸದನದಲಿ ಪಲ್ಲವಿಸಿ ಸುರರ
ಭ್ಯುದಯದಲಿ ನಿಮಿರೆದ್ದು ಕುಸುಮಿತವಾಯಿತು ಶ್ರುತಿಗಳಲೀ
ಸದುಹೃದಯಗೊಳಗಾದ ಫಲ ಸಂ
ಪದವ ಗೋಪೀನಾಥ ನಾಮದ
ವಿದಿತ ಕಲ್ಪದ್ರುಮ ನಮಗೆ ಮಾಳ್ಪದು ಶುಭೋದಯವಾ ॥ ೪೪ ॥
ವುಭಯಂ ಅಧ್ಯಾಯ ೨೫ಂ ಪದನು ೯೧೫ಂ ಮಂಗಳ ಮಹಾಶ್ರೀ.
ತಾರಣನಾಮ ಸಂವತ್ಸರದ ಪುಷ್ಯ ಬ ೧೦ ಮ್ರುಗೆಶೂರ ನಿರ್ರಿತ್ನಾಪುಗೊಂಕ್ಲಗಳ
ದಲ್ಲಿ ರಾಜಶ್ರೀ ಬೆಳಗಲಿ ದಾಸರಾಜಯ್ಯ ಅರಸಿನವರ್ರಿಗೆ ಬೇಲಿದ ಶ್ಯಾನ
ಭೋಗ ರಾಯಪ್ಪರು ಪೀಯ್ಯ ಬರದುಕೊಟ್ಟ ಭಾಗವತ ದಶಮಸ್ಕಂಧ ಯೇಕಾ
ದಶಸ್ಕಂಧ ದ್ವಾದಶಸ್ಕಂಧ ೩ಕ್ಕೆ ಶ್ರೀರಸ್ತು ಮಂಗಳಾನಿ ಭರಂತ್ತು ಶ್ರೀ.

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ೧೨ನೇ ಸ್ಕಂಧದಲ್ಲಿ ೨ ಸಂಧಿಗಳು ಮಾತ್ರ ಇವೆ. ಬರಹ ಬಹು ಸೂಕ್ಷ್ಮ ವಾಗಿದೆ. ಆದಿ ಅಂತ್ಯದ ಒಂದೆರಡು ಗರಿಗಳನ್ನು ಬಿಟ್ಟರೆ ಉಳಿದೆಲ್ಲವೂ

ಚೆನ್ನಾಗಿವೆ. ಆರಂಭ ಮತ್ತು ಅಂತ್ಯದ ಪತ್ರಗಳಲ್ಲಿ ಎರಡೆರಡು ರೇಖಾಚಿತ್ರ ಗಳಿವೆ.

1141

ಕೆ. ೨೬೯ **ಭಾಗವತ** ಭಾಮಿನೀಷಟ್ಪದಿ

೧೮.೧" × ೧.೬" ಚಾಟುವಿಠಲನಾಥ ಸು. ೧೫೩೦

೧-೩೪೦ ಪತ್ರ ೭ ಪಂಕ್ತಿ ೬೮ ಅಕ್ಷರ

ಆದಿ : ಶ್ರೀಗೋಪಾಲಕೃಷ್ಣಾಯ ನಮಃ ॥ ಭಾಗವತದಲ್ಲಿ ದಶಮಸ್ಕಂಧದ ಪೊಸ್ತುಕ ಬರೆಯುವುದಕ್ಕೆ...ಶ್ರೀ
ಶುಭಮಸ್ತೂ ॥
ಶ್ರೀವರನು ಶಾಶ್ವಿತನಖಿಳ ವೇ
ದಾವಳಿ ಸಮಸ್ತುತ್ಯನಮಿತ ಗು
ಣಾವಲಂಬನನಂಬುಜೋದ್ಭವ ಮುಖ್ಯ ಸುರವಂದ್ಯಾ
ದೇವ ದೇವ ಸಶೇಷ ಧರಣೀ
ದೇವ ಗೋದ್ವಿಜರಕ್ಷ ಕೃ
ತಾವತಾರನೆ ಮಾಳ್ಪೆಮಗೆ ಯೋಗಕ್ಷೇಮುವನು ॥

ಅಂತ್ಯ : ಬಾಡಿದುತ್ಪಲವನ........ಗೆ ಶಶಿ
ಮೂ........ಬಂದಂತ್ತಾಯ್ತು ಸೆರೆವನೆ
ಕೂಡೆ ಮಂಗಳವಾಯ್ತು ನಿರ್ಬಂ........ದ ಸಂಕ್ಲೇಶಾ
ವೋಡಿದುದು ನೃಪರಿಂಗೆ ತನುಬಲ
ಗೂಡಿದುದು ಬಡನದಿಗಳಿಂಗಾ
ಗಾಢ........ದ ವೃಷ್ಟಿ ಪುಷ್ಟಿಯನೀದ ತೆರನಾಯ್ತು ॥ ४೧ ॥

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ, ಶಿಥಿಲಪ್ರತಿ.

1142

ಕೆ. ೩೦೮ **ಭಾಗವತ** ಭಾಮಿನೀಷಟ್ಪದಿ

೧೩.೪" × ೨" ಚಾಟುವಿಠಲನಾಥ ಸು. ೧೫೩೦

೧-೧೮೪ ಪತ್ರ ೧೫ ಪಂಕ್ತಿ ೬೮ ಅಕ್ಷರ

ಆದಿ : ಶ್ರೀ ಭಾಗವತಾ ಬರವುದಕ್ಕೆ ಜಯಮಂಗಳ ಮಹಾಶ್ರೀ.

ಶ್ರೀಗಣಾಧೀಶ್ವರನು ಸಂನುತ
ಯೋಗಭೋಗ ಫಲಪ್ರದಾಯಕ
ನೀಗ ನಮಗಿಷ್ಟಾರ್ಥವನು ನಿರ್ವಿಘ್ನದಾಯಕವಾ
ಭೋಗಿ ಭೋಗ ವಿಭೂಷಣನು ಸಕ
ಲಾಗಮೈಕಸ್ತುತ್ಯ ಗುಣಗಣ
ಸಾಗರನು ಕಾರುಂಣ್ಯನಿಧಿ ವಿಘ್ನೇಷನೊಲವಿನಲಿ ॥ ೧ ॥

ಅಂತ್ಯ : ಉತ್ತಮನೆ ಹೇಳಿದೆನು ನಿನಗೆ ಮ
ರುತ್ತುಗಳ ಮಂಗಳವೆನಿಸಿದು
ತ್ಪತ್ತಿಯನು ಹರಿಗುಣಚರಿತ್ರ ಸುಖೋಪಪತಿಯನೂ
ಮ್ರುತ್ಯುಭಯ ಹರಡಿದು ಸದಾಯುಃ
ಕೀರ್ತಿಕರವಭ್ಯುದಯಕರವಿದು
ತತ್ವನಿಧಿ ನಿತ್ಯಾತ್ಮ ಗೋಪೀನಾಥನೊಲವಿನಲಿ ॥ ೩೬ ॥
ಇತೀ ಶ್ರೀಮದ್ಭಾಗವತೇ ಮಹಾಪುರಾಣೇ ಷಷ್ಟಸ್ಕಂಥೇ ಷೋಡಷೋಧ್ಯಾಯಃ॥
ಪದ ೬೩೩ಕಂ ಮಂಗಳಮಹಾಶ್ರೀ.

ವಿಷಯ : ಜಗತ್ಸೃಷ್ಟಿ, ಸೂರ್ಯವಂಶ ಮತ್ತು ಚಂದ್ರವಂಶ ರಾಜರ ಕಥೆ

ವಿಶೇಷ : ಅಸಮಗ್ರ. ೧೬ನೇ ಅಧ್ಯಾಯದ ಮುಂದೆಯೂ ೩ ಪದ್ಯಗಳಿವೆ.

1143

ಕೆ. ೩೩೬	**ಭಾಗವತ**	ಭಾಮಿನೀಷಟ್ಪದಿ
೧೨.೭″ × ೨.೨″	ಚಾಟುವಿಠಲನಾಥ	ಸು. ೧೫೩೦
೧-೨೧೩ ಪತ್ರ	೧೨ ಪಂಕ್ತಿ	೬೦ ಅಕ್ಷರ

ಆದಿ : ಭಾಗಪತದ ದಶಮಸ್ಕಂಥವ ಬರೆಯುವುದಕ್ಕೆ ನಿರ್ವಿಘ್ನಮಸ್ತು
ಪಲ್ಲವ ॥ ಅವನಿದುಷ್ಟಕ್ಷತ್ರ ಕುಲಭಾ
ರನನು ಸೈರಿಸಲರಿಯದಬುಜೋ
ದ್ಭವಗೆ ಬಿಂನೈಸಿದರೆ ಬಲಿದುದು ಮೇಲೆ ಸುರಕಾರ್ಯಾ ॥
ಪದನು ॥ ಹೇಳಿದಿರಿ ನೀವೆನಗೆ ತಾ ದಿರ
ಕೇಳಿದೆನಲಾ ಸೋಮಸೂರ್ಯರ
ಪೀಳಿಗೆಯ ಭೂಪೋತ್ತಮರ ಪಾವನ ಚರಿತ್ರವನೂ
ಹೇಳಬೇಹುದು ತನಗೆಯದು ಭೂ
ಪಾಲರನ್ವಯದೊಳಗೆ ಲಕ್ಷ್ಮೀ ।
ಲೋಲನವತರಿಸಿದ ಕಥೆಯನದನೆಂದನಾ ಭೂಪಾ ॥ ೧ ॥

ಅಂತ್ಯ : ರಾಮುನಭಿವರ್ಣಿಸಿದನಾ ಸು
ಪ್ರೇಮತನು ಗೋಕುಲ ವಿರಹ
ಕ್ಷಾಮುವನು ಗೋಪಿಯರ ಬಹಳ ಮನೋನುರಾಗವನೂ
ಸೌಮನಸ್ಯದಲವರು ಕಳುಹಿದ
ಕಾಮುಧೇನು ಸುವರ್ನರತ್ನ
ಸ್ತೋಮುವನು ತೋರಿಸಿದನಾ ನಿತ್ಯಾತ್ರ ಕೃಷ್ಣಂಗೆ || ೩೯ ||
ಅಂತೂ ಸಂಧಿ ೮೫ ಕ್ಕಂ ಪದನು ೪೦೭೨ ಕ್ಕಂ ಮಂಗಳ ಮಹಾಶ್ರಿ.

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ, ೨ ರಿಂದ ೧೨, ೯೮, ೯೯ ಮತ್ತು ೧೪೭ ನೆಯ ಗರಿಗಳಿಲ್ಲ.

1144

ಕೆ. ೫೪೭ **ಭಾಗವತ** ಭಾಮಿನೀಷಟ್ಪದಿ

೨೦" × ೨.೨" ಚಾಟುವಿಠಲನಾಥ ಸು. ೧೫೩೦

೧–೨೦೨ ಪತ್ರ ೯ ಪಂಕ್ತಿ ೯೦ ಅಕ್ಷರ

ಆದಿ : ಶ್ರೀಮುದ್ಭಾಗವತ ಪುರಾಣ ಬರಉದಕ್ಕೆ ಶುಭಮಸ್ತು ||
ವಾಲ್ಮೀಕಿ ನಾರದ ಪರಾಶರ ಶುಕ ಕಪಿಲಾಂಗೀರಸ ಭೃಗು ಮರೀಚಿಮುನಿರ್ಭೀಮ
ವಂದನೀಯ್ಯ ಶುಕ ವ್ಯಾಸ ವಶಿಷ್ಟನತ್ಯಾರಂಶಕ್ಕೆ ಪೌತ್ರ ಮಮ ಕಲ್ಮಶಂ ಪರಾ
ಶಾರಾತ್ಮಜಂ ವೊಂದೆ ಶುಕತಾತಂ ತಪೋನಿಧಿ ಶ್ರೀ ವೋಂ ನಮೋ ಭಗವತೇ
ಭ್ಯೋಂ ನಮಃ || ಪ್ರಥಮುಸ್ಕಂಧ ಪ್ರಾರಂಭಾ ||

ಪಲ್ಲವ || ಸೂತವರುಹಿದನಿಂತು ಗುಣ ವಿ
ಖ್ಯಾತಶೌನಕಮುಖ್ಯ ಮುನಿಗಳಿ
ಗೋತು ಧರ್ಮರಹಸ್ಯ ವರಭಾಗವತ ಸಂಸ್ಥಿಯಾ ||

ಪದನೂ || ಶ್ರೀವರನು ಶಾಶ್ವತನಖಿಳ ವೇ
ದಾವಳಿ ಸಂಸ್ತುತ್ಯನಮಿತ ಗು
ಣಾವಲಂಬನನಂಬುಜೋದ್ಭವ ಮುಖ್ಯಸುರವಂದ್ಯಾ
ದೇವದೇವ ಶೇಷಧರಣೀ
ದೇವ ಗೋದ್ವಿಜ ರಕ್ಷಣಾರ್ಥ ಕೃ
ತಾವತಾರನು ಮಾಳ್ಕೆ ಯೋಗಕ್ಷೇಮುವನು ನಮುಗೆ || ೧ ||

ಅಂತ್ಯ : ಯಿದು ಪರಮ ಮಂಗಳ ಮಹೋದಯ
ವಿದುವೆ ನಾರಾಯಣ ಪರಾಯಣ
ರಾದಿತ ಪುಂಣ್ಯಚರಿತ್ರವಿದನೋದುವದು ಮಹಾತ್ಮರಿಗೆ
ಮುದದಲಿದನಾಲಿಸುವ ಪುಂಣ್ಯಾ
ಸ್ಪದರೆನಿಪ ಮರ್ತ್ಯರಿಗೆ ನ್ರುಪಸಂ
ಪದವನೀವನು ದೇವನಿತ್ಯಾಮಸುಜ ನಿಜಸುಖವಾ || ೪೩ ||
ಅಂತು ಸಂಧಿ ೧೮ಕ್ಕಂ ಪದ ೬೯೮ಕ್ಕಂ ಮಂಗಳಂಶ್ರೀ ಚತುರ್ಥಸ್ಕಂಧಸಮಾಪ್ತಂ।
ಸ್ಕಂದನಾಳಿಕೆ ಸಂಧಿ ೫೦ಕ್ಕೆ ಪದ ೨೪೪೫ಕ್ಕಂ ಮಂಗಳಮಹಾಶ್ರೀ.

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ, ಸ್ಫುಟಬರಹ.

1145

ಕೆ. ೫೪೮	**ಭಾಗವತ**	ಭಾಮಿನೀ ಷಟ್ಪದಿ
೧೯.೫" × ೨.೧"	ಚಾಟುವಿಠಲನಾಥ	ಸು. ೧೫೩೦
೧–೨೧೧ + ೧–೧೦೦ ಪತ್ರ	೬ ಪಂಕ್ತಿ	೭೬ ಅಕ್ಷರ

ಆದಿ : ಶ್ರೀ ಗಣಾಧಿಪತಯೇನಮಃ || ಶ್ರೀಮದ್ಭಾಗವತ ಬರವುದಕ್ಕೆ ಶುಭಾಮಸ್ತು ||
ಪ್ರಥಮಾರಭ್ಯವಾಗಿ ಬರದಂತ್ತಾ ಶ್ರೀವಾಸುದೇವನ ಸ್ಮರಣೆಯ ಪುಸ್ತಕಕ್ಕೆ
ಶುಭಾಮಸ್ತು || ಭಾಮಿನಿಷಟ್ಪದಿ

ಪಲ್ಲ || ಸೂತನರುಹಿದನಧಿಕ ಗುಣವಿ
ಖ್ಯಾತ ಶೌನಕ ಮುಖ್ಯ ಮುನಿಗಳಿ
ಗೋತು ಪರಮ ರಹಸ್ಯವನು ವರಭಾಗವತ ಸಂಹಿತೆಯಾ ||

ಪದನೂ || ವೋಯೆನಲು ಗೋವಿಂದ ಕೇಶವ
ವಾಯೆನಲು ನರಹರಿ ಜನಾರ್ಧನ
ಮಾಯೆನಲು ಮಧುಸೂದನಾಯಾ ತ್ರಿವಿಕ್ರಮಾಯಂಬಾ
ಶ್ರೀಯನಲು ಶ್ರೀಕ್ರಿಷ್ಣ ವಿಷ್ಣುವೆ
ವಾಯೆನಲು ವಸುದೇವನಂದನ
ಮಾಯೆನಲು ಮಾಧವ ಶಿರೋಮಣಿ ಕರುಣಿಸುವುದೆಂದಾ || ೧ ||

ಅಂತ್ಯ : ಅಂತು ಸಂಧಿ ೧೩ ಪದನು ೫೦೦ಕ್ಕಂ ಮಂಗಳಮಹಾಶ್ರೀ

x x x x

ರಾಯಮುನಿ ನಾರಾಯಣನೊ ಮುನಿ
ರಾಯ ಮಾರ್ಕಂಡೇಯ್ಯ ದತ್ತಾ
ತ್ರೇಯನೋ ಯಾರುಣಮಿಯೋ ಚ್ಯವನನೋ ಪತಂಬಿರಿಯೋ
ಆ ಯಶೋನಿಧಿ ಯಗ್ಞ್ಯವಲ್ಕನೊ
ಯಾಯತಮುಶ್ರುತದೇವನೊ ಮೈ
ತ್ರೇಯನೋ ಕವುಶಿಕನೊ ಗಾಲವನೋ ರಿತಧ್ವಜನೊ ॥ ೯ ॥

ವಿಷಯ : ಜಗತ್ಸ್ರುಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ, ಅಕ್ಷರ ಚೆನ್ನಾಗಿದೆ. ಸಂಧಿ ಪ್ರಾರಂಭವಾಗುವ ಗರಿಯ ಒಂದು ಅಂಚಿನಲ್ಲಿ ಆ ಸಂಧಿಯ ಕಥೆಯನ್ನು ಸೂಚಿಸಿದೆ.

1146

ಕೆ. ೫೯೭	**ಭಾಗವತ**	ಭಾಮಿನೀ ಷಟ್ಪದಿ
೨೦.೩" × ೨.೩"	ಚಾಟುವಿಠಲನಾಥ	ಸು. ೧೫೩೦
೧–೧೯ ಳ ಪತ್ರ	೧೦ ಪಂಕ್ತಿ	೯೫ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ॥ ಭಾಗವತದ ಷಷ್ಟಸ್ಕಂದವ ಬರವುದಕ್ಕೆ ನಿರ್ವಿಘ್ನಮಸ್ತು॥ ಭಾಗವತದ ಷಷ್ಟಸ್ಕಂದದಲ್ಲಿ ಬರುವ ಅಜಾಮಿಳನ ಪ್ರಸಂಗಾ॥

ಪಲ್ಲ ॥ ಹೇಳಿದನು ಮುನಿನಾಥನಾ ನ್ರುಪ
ಮೌಲಿಮಣಿಗೆ ಮಹಾ ಘನಿಕರೋಂ
ನ್ಮೂಲಿನೈಕ ಸಮರ್ಥವಹ ಹರಿನಾಮ ನಿಷ್ಕ್ರುತಿಯಾ ॥

ಪದ ॥ ವರಮುನಿಪ ಚಿತ್ತೈಸು ಸುಮನಂ
ತರವನಾ ಸ್ವಾಯಂಭೂವಾದ್ಯರ
ಚರಿತವನು ತತ್ಪುತ್ರ ಪೌತ್ರಾದ್ಯಮಳ ಚರಿತವನೂ
ಧರೆಯ ಸಪ್ತ ದ್ವಿಪಸಾಗರ
ಗಿರಿ ನದೀ ವನ ವರುಷ ಭೂವದ
ಸ್ತರಣವನು ಕರುಣಿಸಿದೆ ಜ್ಯೋತಿಶ್ಚಕ್ರ ಸಂತತಿಯಾ ॥ ೧ ॥

ಅಂತ್ಯ : ಆವನಿದನೋದುವನು ಕೇಳುವ
ನಾವನೀ ಶಶಿವಂಶಭೂಪರ
ಪಾವನಾಮಳ ಚರಿತವನು ಹರಿಗುಣ ಸುಚರಿತವನೂ

ಆ ವಿಪುಳ ಪುಂಣ್ಯಾತ್ಮರನು ದುರಿ
ತಾವಳಿಯನಪಹರಿಸಿ ಕ್ರುಪೆಯಲಿ
ಕಾವನಾ ಸಿತ್ಯಾತ್ಮ ಕ್ರುಷ್ಣನನಂತ ಗುಣವನಧೀ || ೨೭ ||

ಅಂತ್ತೂ ಸಂಧಿ ೨೪ಕ್ಕಂ ಪದ ೧೩೨೫ಕ್ಕಂ ಮಂಗಳಮಹಾಶ್ರೀ || ಶ್ರೀಮದ್ಭಾಗವತ ಪುಸ್ತುಕ ೨ಕ್ಕಂ ವಾಲೆ ೩....ಕ್ಕಂ | ಸ್ಕಂಧ ೯ಕ್ಕಂ ಸಂಧಿ ೧೪೦ಕ್ಕಂ ಪದ ೮೨೬೮ ಮಂಗಳ ಮಹಾಶ್ರೀ

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ, ೧೨ನೆಯ ಗರಿ ಮುರಿದಿದೆ. ಸಂಧಿ ಪ್ರಾರಂಭವಾಗುವ ಗರಿಯ ಒಂದು ಅಂಚಿನಲ್ಲಿ ಆ ಸಂಧಿಯ ಕಥಾ ಸೂಚನೆ ಇದೆ.

1147

ಕೆ. ೬೦೮	**ಭಾಗವತ** (೬–೯ ಸ್ಕಂಧಗಳು)	ಭಾಮಿನೀ ಷಟ್ಪದಿ
೧.೬" × ೧.೫"	ಚಾಟುವಿಠಲನಾಥ	ಸು. ೧೫೩೦
೧–೩೨೭ ಪತ್ರ	೮ ಪಂಕ್ತಿ	೭೪ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ || ಭಾಗವತಾ ಷಷ್ಠ ಮಹಾಸ್ಕಂದಾ ಬರೆಯುವದಕೆ ಶುಭಮಸ್ತು ||

ಶ್ರೀರಸ್ತು || ಹೇಳಿದನು ಮುನಿ............
....
....
ಪದನೂ || ವರ ಮುನಿಪ ಚಿತ್ತವಿಸು ಮುಂನ್ವಂ
ತರವನಾ ಸ್ವಾಯಂಭುವಾದ್ಯರ
ಚರಿತ.......................................
.... ನವ
ವರುಷ ಭುವನಾಸ್ತರಣವನು
ಕರುಣಿಸಿದೆ ಜ್ಯೋತೀಶ್ಚಕ್ರ ಸಂಸ್ತಿತಿಯಾ || ೧ ||

ಅಂತ್ಯ : ಯದುಕುಲದಲಂಕುರಿಸಿ ನಂದನ
ಸದನದಲಿ ಪಲ್ಲವಿಸಿ ಸುರರ
ಭ್ಯುದಯದಲಿ ನಿಮಿರ್ದ್ದೆದ್ದು ಕುಸುಮಿತವಾಯ್ತು ಶೃತಿಗಳಲಿ
ಸದುಹೃದಯರೊಳಗಾದ ಫಲ ಸಂ
ಪದವ ಗೋಪೀನಾಥ ನಾಮದ
ಲಿದಿತ ಕಲ್ಪಧೃಮನೆಮಗೆ ಮಾಳ್ಪದು ಮನೋರಥವಾ || ೩೦ ||

ಅಂತೂ ಸಂಧಿ ೨೩ಕಂ ಪದನೂ ೧೦೩೧ಕಂ ಮಂಗಳ ಮಹಾಶ್ರೀ
x x x ಅಂತೂ ಸ್ಕಂದ ೯ಕ್ಕಂ ಸಂಧಿ ೧೩ಲಕ್ಕಂ ಪದನೂ ೬೩೫೭ಕ್ಕಂ ಮಂಗಳ ಮಹಾಶ್ರೀ

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಸದ ರಾಜರ ಕಥೆ.

ವಿಶೇಷ : ಮೊದಲ ಎರಡು ಗರಿಗಳು ಮತ್ತು ೧೨ಂನೇ ಗರಿ ತ್ರುಟಿತ. ಕ್ರಮಾಂಕದ ಮೇಲ್ಭಾಗದಲ್ಲಿ ಆಯಾ ಸ್ಕಂದದ ಮೊದಲನೆಯ ಅಕ್ಷರವನ್ನು ಬರೆದಿದೆ.

1148

ಕೆ. ೬೦೯	**ಭಾಗವತ**	ಭಾಮಿನೀ ಷಟ್ಪದಿ
೧೫.೬″ × ೧.೪″	ಚಾಟುವಿಠಲನಾಥ	ಸು. ೧೫೩೦
೧-೩೬೯ ಪತ್ರ	೮ ಪಂಕ್ತಿ	೬೩ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ॥ ದಶಮಸ್ಕಂದಾ ಬರೆಯುವದಕೆ ಶುಭವಸ್ತು ॥
ಧರಣಿ ದುಷ್ಟಕ್ಷತ್ರಕುಲ ಭಾ
ರವನು ಸೈರಿಸಲರಿಯದಬುಜೋ
ದ್ಭವಗೆ ಬಿಂನ್ನೈಸಿದಳು ಬಲಿದುದು ಮೇಲೆ ಸುರಕಾರ್ಯ್ಯಾ ॥
ಪ॥ ವಿಗ್ನವಾರುಧಿಗಾ ಘಟೋದ್ಭವ
ವಿಘ್ನಪಂನಗಕುಲಕೆ ಪತಿ
ವಿಘ್ನಕಾನವಕಾ ದವಾನಳ ವಿಘ್ನತಿಮಿರ ರವೀ
ವಿಘ್ನ ಮೇಘಾವಳಿಗೆ ಮಾರುತ
ವಿಘ್ನನೆಂಬ ನಗಕ್ಕೆ ಘನಪವಿ
ವಿಘ್ನಗಜ ಪಂಚಾಸ್ಯ ಯಿಷ್ಟಾರ್ಥವನು ಕೊಡು ನಮಗೇ ॥ ೧ ॥

ಅಂತ್ಯ : ಕರ್ತುವಿದಕೆ ಹರೀತಕೀ ಪುರ
ಭರ್ತು ಗೋಪೀನಾಥಾನಾಗ್ನಾ
ಕರ್ತು ಲೇಖನ ನಾನು ಕೃತಿ ನಿಂತಿದೆ ನಿಧಾನಿಸಲೂ
ವಕ್ತ್ರುವಿನ ಗುಣದೋಷ ಲೇಖನ
ಕರ್ತುವಿಂಗೆತ್ತಣದು ವಚನನಿ
ಯೋಕ್ತ್ರನಿತ್ಯಾತುಮನೆ ರಕ್ಷಿಸುಗಖಿಳ ಭೂತಳವಾ ॥ ౩೫ ॥
ಅಂತು ಸಂಧಿ ೧೦೬ಕಂ ಪದನೂ ೪ಲ೦೫ ಕಂ ಮಂಗಳ ಮಹಾಶ್ರೀ

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಭಾಗವತ ದಶಮ ಸ್ಕಂದದಿಂದ ಗ್ರಂಥ ಪ್ರಾರಂಭವಾಗಿದೆ. ಕೆಲವು ಗರಿಗಳು ಶಿಥಿಲ. ಮಧ್ಯದಲ್ಲಿ ಕೆಲವು ಪತ್ರಗಳಿಲ್ಲ. ಸಂಧಿ ಪ್ರಾರಂಭವಾಗಿರುವ ಗರಿಯ ಒಂದು ಅಂಚಿನಲ್ಲಿ ಆ ಸಂಧಿಯ ವಿಷಯಸೂಚಿ ಇದೆ.

1149

ಕೆ. ೩೦೩/೧	**ಭಾಗವತ**	ಯಕ್ಷಗಾನ
೧೧.೭" × ೧.೫"	?	?
೧–೧೧೬ ಪತ್ರ	೫ ಪಂಕ್ತಿ	೩೨ ಅಕ್ಷರ

ಆದಿ : ನದಾ ನಂದಾನಾವಂದಿತ ಮುಂನಿಜನ ಮಂದಹಾಸವದನಾ | ರಮಾ | ಪಾಹಿ ಮದನ ಗೋಪಾಲ್ಲ ಮುಕುಂದ | ಪಾಲ್ಲೀತ ಮುಚುಕುಂದಾ || ೧ || ಪಲ್ಲಾ ||

x x x x

ಭಾಗವತದಲ್ಲಿ ದಶಮಸ್ಕಂದದಿ ಕಥಾ ಪ್ರಾರಂಭಃ ಬರೆಯುದಕ್ಕೆ ನಿರ್ವಿಗ್ನ ಮಸ್ತೂ ||

ಶ್ಲೋಕಾ || ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸಂನವದನಂ ಧ್ಯಾಯೇ ಸರ್ವವಿಘ್ನೋಪಶಾಂತಯೇ ||

x x x x

ಕಂದ ಪದ್ಯಾ || ಭಾಗವತ ಪೌರಾಣಮುಂ ಪೇಳ್ದ |
ಯೋಗೀಶರಂ ನೆನೆವೆ ನಾಂ ಕ್ರು..........ಪರಮು |
ಭಾಗವತರಂ ಮುಂನ್ನಿಸುವೆನು |
ಯೋಗಿಕುಲ ಸಂನುತರಾದವರಂ ಭಾವಿಶಿ ಪಡವೆ... ತತಿಯ ಗತಿಯಂ ||

ಅಂತ್ಯ : ನಂದನರಶಿ ಮರವೆ ತಿಳಿದು ಯದ್ದು ನಿಂತಳೂ
ಚಂದ್ರ ಬಂದು ತೆರಳೆ ಆನಂದ ಪಟ್ಟಳೂ
ಕಂದನಂನ್ನು ಕರದುಕೊಂಡು ಮುದ್ದುನಿಟ್ಟಳೂ
ಬಂಧುಪುಲ್ಲೀಗಿರೀಶ ರಾಮಾನುಜಾರ್ಯ ವಿಠಲನಂನ್ನು ಸುಂದರಾಂಗಿ ನೋಡಿ ಆಶ್ಚರ್ಯಪಟ್ಟಳೂ || ೫ || ಶ್ರೀ

ವಿಷಯ : ಶ್ರೀ ಕೃಷ್ಣನ ಮಹಿಮೆ.

ವಿಶೇಷ : ಸಮಗ್ರ. ಅಂಚಿನಲ್ಲಿ ಗರಿಗಳು ಮುರಿದಿವೆ. ಅಲ್ಲಲ್ಲಿ ಹುಳು ತಿಂದಿದೆ. ಗ್ರಂಥದ ಮೊದಲಲ್ಲಿ ಭಾಗವತದ ಕಥೆಗೆ ಸಂಬಂಧಿಸಿದ ೯ ಪತ್ರಗಳಿವೆ. ಇದರೊಂದಿಗೆ ‘ ಐರಾವತ ’ವೆಂಬ ಮತ್ತೊಂದು ಗ್ರಂಥವಿದೆ.

1150

ಕೆ.ಎ. ೨೬೨	**ಭಾಗವತ** ೧೦ನೇ ಸ್ಕಂಧ	ಯಕ್ಷಗಾನ
೧೦.೫″ × ೮.೫″	?	?
೧–೫೦೧ ಪುಟ	೨೨ ಪಂಕ್ತಿ	೧೩ ಅಕ್ಷರ

ಆದಿ : ಶ್ರೀ ಲಕ್ಷ್ಮೀವೆಂಕಟೇಶಾಯ ನಮಃ ॥ ಭಾಗವತ ದಶಮ ಪ್ರಾರಂಭ ॥
ಶ್ರೀಕಾಂತಾಂಬಕನಲ ನೀರಜವ್ಯಗಾತಾನಂದ ದಾತಾಶ್ರೀತಾ
ನೀ ಕಾಂಬೋರುಹ ಲೋಕಬಂಧು ಕರುಣಾಪಾಂಗಾಲಿ ತಾ........ನಾಂಡಗೆ
ಪಾಕಾರಿ ಪ್ರಮುಖಾಮರಸ್ತೋ ....ದ ಪ್ರಾಣಾತ್ಮ ಜಾಧಶನಂ
ನೇಕಾಂತಾ ಮೇಭಕ್ತನೆಂದೆನಶಿನಸೌ ರಕ್ಷಿಸೈ ಮಾಧವಾ ॥

ಅಂತ್ಯ : ದಾನವವಂಶ ಕುಠಾರಗೆ ನಿರ್ಮಲ
ವೇಣುಗೋಪಾಲ ಶ್ರೀ ಕೃಷ್ಣರಾಯಗೆ ॥ ೩ ॥
ಶೋಭಾನೆ ಶೋಭಾನವು ॥ ಶ್ರೀ
ವಿಜಯನಾಮ ಸ(ರ)ದೊ x x x x ೧೦ಮಂಗಳವಾರದಲ್ಲು ಸಂಪೂರ್ಣ
16-1-1894

ವಿಷಯ : ಶ್ರೀಕೃಷ್ಣ ಮಹಿಮೆ.

ವಿಶೇಷ : ೧ರಿಂದ ೧೬೭ ಪುಟಗಳು ಒಂದು ಭಾಗವೂ, ಮುಂದೆ ೫೦೧ನೆಯ ಪುಟದ ವರೆಗೆ ಮತ್ತೊಂದು ಭಾಗವೂ ಆಗಿದೆ. ಎರಡನೆ ಭಾಗದ ಅಳತೆ=೧೦.೭″ × ೭″ ಎರಡನ್ನೂ ಒಂದಾಗಿ ಬಂಧಿಸಿದೆ. ಅಕ್ಷರಗಳು ಬಹು ಮೋಡಿ.

1151

ಕೆ.ಬಿ. ೪೧೮/೧	**ಭಾಗವತ** (ಪೂರ್ವಾರ್ಥ)	ಗದ್ಯ
೮.೯″ × ೭″	?	?
೧೪೯ ಪತ್ರ	೧೭ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ । ಓಂ । ಭಾಗವತ ದಶಮಸ್ಕಂದ ಬರ್‍ರಿಯುವದಕ್ಕೆ ನಿರ್ವಿಘ್ನಮಸ್ತು ॥ ಶುಕಾಚಾರ್ಯರ ಕುರ್‍ರಿತ್ತು ಪರೀಕ್ಷಿತರ್‍ರಾಯನು ವಂದು ಪ್ರಸ್ನೆ ಯಂನು ಮಾಡಿದ । ಯೇನೆಂತ್ತೆಂದರೆ ಆ ಹಿಂದಕ್ಕೆ ಅಷ್ಟಮಸ್ಕಂದ ನವಮ ಸ್ಕಂದಗಳಲ್ಲೀ ಸೂರ್ಯವಂಶದ ರಾಯರುಗಳ ವಿಸ್ತಾರವಂನ್ನು ನಿರೂಪಿಶಿ ಯಿರಲ್ಲಾ ಮುಂದ್ದೆ ಯದುವಂಶದಲ್ಲೀ ಶ್ರೀ ನಾರಾಯಣನು......ವತ್ತಾರದಲ್ಲೀ ಹ್ಯಾಗೆ ಹುಟ್ಟಿದಾ । ಯೆಂಬ ಚೆರಿತ್ರೆಯನ್ನೂ ಮಾಡಿದಾ । ಆ ಕಥೆಯಂನ್ನು ನನಗೋಸ್ಕರ ವಿಸ್ತಾರವಾಗಿ ಹೇಳಬೇಕೆಂದು ಕೇಳಲು ಶುಕ್ರಾಚಾರ್ಯರು ಸಂತೋಷಪಟ್ಟು ನಾನಾ ಪ್ರಕಾರವಾದ ಸಕಲ ಕಥೆಯಂನ್ನು ಹೇಳಿದೆ.

ಅಂತ್ಯ : ಆ ಮಾತು ಕೇಳಿ ಭಗವಂತ್ತ ನುಡಿದನ್ನು ಯಲೈ ಮಹಾತ್ಮನಾದ ಯಮುನ ಸ್ವಕರ್ಮವಂಶದಿಂ ನಿಂನ ಲೋಕಕ್ಕೆ ಬಂದು ಯಿರುವ ನಂಮ್ಮಂ ಗುರುಪುತ್ರನಂ ಕರದುಕೊಂಡು ಬಾರೈಯ್ಯ ನಂನ ಆಗ್ನಾಪುರಸ್ಕರಿಶಿ ಕರದುಕೊಂಡು ಬಂದ ವನು............

ವಿಷಯ : ಶ್ರೀ ಕೃಷ್ಣನ ಕಥೆ.

ವಿಶೇಷ : ದಶಮಸ್ಕಂಧದ ಪೂರ್ವಾರ್ಧ ಮಾತ್ರ ಈ ಭಾಗದಲ್ಲಿದೆ. ತ್ರುಟಿತ, ಶಿಥಿಲ. ಓದಲು ಬಹು ಕಷ್ಟ. ಮೋಡಿ ಅಕ್ಷರ. ಪತ್ರಗಳಿಗೆ ಕ್ರಮಾಂಕವಿಲ್ಲ.

1152

ಕೆ.ಬಿ. ೪೧೮/೨ **ಭಾಗವತ** (ಉತ್ತರಾರ್ಧ) ಗದ್ಯ

೯.೮" × ೭.೫" ? ?

೧೬೨ ಪತ್ರ ೧೬ ಪಂಕ್ತಿ ೨೨ ಅಕ್ಷರ

ಆದಿ : ಯಂಬ ಭಗವದ್ವಾಖ್ಯವಂ ಕೇಳೀ ಯಮುನು ಹಾಗೆ ಆಗಲ್ಲಿ ಯಂಬದಾಗಿ ಕರದುಕೊಂಡು ಬಂದು ಪಟ್ಟಿ ಶಿರನ್ನು ರಾಮಕೃಷ್ಣರು ಆ ಕೋಮಾರಂನ್ನು ಕರದುಕೊಂಡು ಬಂದು ಗುರುವಿಗೆ ವರಿಶಿ ಯಿಂನೇನ್ನು ನಿಂಮ್ಮ ಮನಶಿನಲ್ಲಿ ಯಿದೆಯ್ಯೋ ಆರಂನಾಗ್ನ್ಯಾಪಿಸ್ಸೂ ಯಂದು ಕೇಳಿದರು.

ಅಂತ್ಯ : ಪರೀಕ್ಷಿತನೆ ಕೇಳು ಶ್ರೀ ಕೃಷ್ಣನು ಯದುವಂಶದಲ್ಲಿ ಜನಿಶಿ ಲೋಕಪಾವನ ನಾದ ತಂನ ಕೀರ್ತಿರೂಪ ಪಾದತೀರ್ಥದಿಂದ ತಂನ ಪಾದದಲ್ಲಿ ಹುಟ್ಟಿದಂತ್ಥಾ ಗಂಗೆಯುಂನ್ನು ಸ್ವಲ್ಪವಂನಾಗಿ ಮಾಡಿದನು, ಮತ್ತು ಶ್ರೀ ಕೃಷ್ಣನು ತನ್ನಲ್ಲಿ ದ್ವೇಷವ ಮಾಡಿದಂಥಾವವರಿಗೆ.

ವಿಷಯ : ಶ್ರೀ ಕೃಷ್ಣನ ಕಥೆ.

ವಿಶೇಷ : ದಶಮ ಸ್ಕಂಧದ ಉತ್ತರಾರ್ಧ ಭಾಗ ಮಾತ್ರವಿದೆ. ಪ್ರತಿಯು ತ್ರುಟಿತ, ಶಿಥಿಲ, ಮೋಡಿ ಅಕ್ಷರ. ಓದಲು ತುಂಬಾ ಕಷ್ಟ. ಪತ್ರಗಳಿಗೆ ಕ್ರಮಾಂಕವಿಲ್ಲ.

1153

ಕೆ. ೧೬ **ಭಾಗವತದ ಟೀಕು** (ಸೂಕ್ತಿವಿಲಾಸ) ಶ್ಲೋಕ, ಟೀಕು

೮.೩" × ೧.೯" ಚಿಕ್ಕದೇವರಾಜ- ೧೬೮೦

೧–೧೪೧ ಪತ್ರ ೧೦ ಪಂಕ್ತಿ ೪೦ ಅಕ್ಷರ

ಆದಿ : ಯಿದರ ಸಂಗ್ರಹಂ ॥ ಯಿಾ ರೀತಿಯಲ್ಲಿ ನಾರದಮುನೀಶ್ವರಂ । ಬ್ರಂಹ್ಮ ದೇವನಂ ಕುರಿತು ಯೆಲೆ ಬ್ರಂಹ್ಮದೇವನೆ । ಲೋಕಸೃಷ್ಟಿಗೆ ನೀನೆ ಕರ್ತ ನಾದ ಕಾರಣಂ। ನಿನಗಿಂದಮುತ್ಕ್ರುಷ್ಟನಾದ । ಸರ್ವೇಶ್ವರನ ಸ್ವರೂಪಮು ।

ನಾನರಿಯೆ | ನದನೆನಗೆ ತಿಳಿಪೆಂದು | ಪ್ರಸ್ತ್ರೈತ್ರೈಯಲಾಗಿ ಆ ಸರ್ವನ್ನಾತ್ಮಪ್ರರ ನಾದ | x x x ಶ್ರೀ ನರಪತಿ ಚಿಕದೇವರಾಜ ಸೂಕ್ತಿವಿಲಾಸದಲ್ಲಿ ಶ್ರೀಮದ್ಭಾಗವತದ ದ್ವಿತೀಯ ಸ್ಕಂದದ ವರಣದಲ್ಲಿ| ಅಯ್ದುದನೆಯ ಆಶ್ವಾಸಕ್ಕೆ ಮಂಗಳಂ ಶ್ರೀ ||

ಅಂತ್ಯ : ಸಾಂಮ್ರಾಜಶ್ಚಿಕದೇವರಾಜನೃಪತೇಃ ಪ್ರೌಢ ಪ್ರತಾಪ ಸ
ತ್ಕೀರ್ತೆ ೯ರಾಶ್ರಿತ ಕಲ್ಪಕ ಕ್ಷಿತಿರುಹ ಸ್ಸರ್ವ್ವಜ್ಞ ಚೂಡಾಮಣೇಃ |
ಆಶ್ವಾಸಃ ಕ್ರುತಿಷು ಪ್ರಸಂನ ಮಧುರೋಪ್ಯಷ್ಟಾದಶಃ ಶೋಭತೇ
ಕರ್ಣ್ನಾಟೋಕ್ತಿ ಮಯೋಶ್ಯ ಸದ್ವಿವರಣೆ ಸ್ಕಂಧೆ ತೃತೀಯೆ ಶುಭೆ ||
ಯಿತ್ಯಾಷ್ಟಾದಶೋಧ್ಯಾಯಃ ಶ್ರೀ—(೧೩೯ ನೆಯ ಪತ್ರ)

x x x x

ಶ್ರೀ ಮಹಾ ವರಾಹನಂ ಕುರಿತು | ಬಿಂನ ವಿವರದೇತೆನೆ | ಯೆಲೆ ಸರ್ವೇಶ್ವರ | ಯಜ್ಞಂಗಳನೆ ಶರೀರವಾಗಿಯುಳ್ಳವನಾಗಿ | ಸಕಲಲೋಕ ರಕ್ಷಣಾರ್ಥ ವಾಗಿ

ವಿಷಯ : ಜಗತ್ಸೃಷ್ಟಿ, ಸೂರ್ಯ ಮತ್ತು ಚಂದ್ರವಂಶದ ರಾಜರ ಕಥೆ.

ವಿಶೇಷ : ಅಸಮಗ್ರ. ೨, ೧೨೬ ನೆಯ ಗರಿಗಳು ಮುರಿದಿವೆ.

1154

ಕೆ.೩೭	**ಭಾಗವತದ ಟೀಕು**	ಶ್ಲೋಕ, ಟೀಕು
೧೩·೩″ × ೧.೪″	?	?
೧—೨೧೨ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಕೃಷ್ಣ ಕಥಾಮೃತವ ಬರವುದಕ್ಕೆ ಶುಭ ಮಂಗಳ ಶ್ರೀ.
ಪ್ರವರ್ತಿತಃ ಪರಾನಂದಾ ಕೃಷ್ಣ ಕ್ರೀಡಾನುವರ್ಣಿತಾ ||
ಅನಿರ್ವೃತ್ಯಪರಾನಂದ ಪದಾರೋಪೋನುವರ್ತತೆ ||
ಟೀಕು || ದಶಮಸ್ಕಂಥದಲ್ಲಿ ಪ್ರವೃತ್ತಿಮಾರ್ಗದಿಂದ ಪರಮಾನಂದನಾದ ಶ್ರೀ ಕೃಷ್ಣನ ಕ್ರೀಡೆಯು ವರ್ಣಿಸಲ್ಪಟ್ಟಿತ್ತು | ಯಿನ್ನು ಏಕಾದಶಸ್ಕಂಥದಲ್ಲಿ ಶ್ರೀ ಕೃಷ್ಣನ ಚರಿತೆಯುನ್ನು ನಿವೃತ್ತಿ ಮಾರ್ಗದಿಂದ ಹೇಳುತಲೆ ವೈಕುಂಠ ಪದಾ ರೋಹಣವು ಹೇಳಲು ಪಡುತಿದ್ದಿತು | ಆಪಕ್ಷೋಸ್ಕರವಾಗಿ ಪೂರ್ವ ಸ್ಕಂಥಾರ್ಥ ವನು ಯರಡು ಶ್ಲೋಕದಿಂದಾ ಅನುವದಿಸ್ತಿದ್ದಾನು ||೧||

ಅಂತ್ಯ : ಆರೂಪ ಪ್ರಳಯ ಕಾಲದ ಅಹಂಕಾರದಿಂದಾ ತಿರಸ್ಕರಿಸಿಕೊಂಡು ವಾಯುವಿನಲ್ಲಿ ಲಯವಹುದು। ಆ. ಪ್ರ. ಕಾಲಪ್ರೇರಿತವಾದ ಆಕಾಶದಿಂದ ಗ್ರಸ್ತವಾಗಿ ಸ್ಪರ್ಶತನಾತ್ಮತ್ರಿಯಾಗಿ ಆಕಾಶದಲ್ಲಿ ಗ್ರಸ್ತವಾಹದು। ಆ ಆಕಾಶವು ತಾಮಸಾಹಂಕಾರದಿಂದಾ ಗ್ರಸ್ತವಾಗಿ ಶಬ್ದತನ್ಮಾತ್ರೆಯಲ್ಲಿ ಲಯವಹುದು। x x x x ಇಂದ್ರಿಯಗಳು ತಮಗೆ ಪ್ರವರ್ತಕವಾದ ದೇವತೆಗಳಲ್ಲಿ ಲಯವನೈದುವದು। ಆ ಇಂದ್ರಿಯ.........

ಕಾರ್ಯಕಾರಣ ದೃಷ್ಟಾಂತವಹ ನನ್ನಿಂದ ಹೇಳಲುಪಟ್ಟಿತ್ತು । ಏಕಾಕಾರ ಶ್ಲೋಕಾ॰। ಪ್ರತ್ಯಕ್ಷತ್ರಿಯೇನೇ ದದರ್ಶ ತಂ ತದ್ಯಮಾತ್ಮ್ಯಯಃ। ಸಾಂಖ್ಯ ಪ್ರಖ್ಯಾತತಸ್ತಸ್ಮೈ ಹರಯೆ....... ....ಗವತೆ ಮಹಾ ಪುರಾಣೇ ಯೇಕಾದಶಸ್ಕಂಧೇ ಚತುರ್ವಿಂಶೋಧ್ಯಾಯಃ

ವಿಷಯ : ಶ್ರೀ ಕೃಷ್ಣನ ಕಥೆ.

ವಿಶೇಷ : ನಂದಿ ನಾಗರಿ ಲಿಪಿ. ಪುಸ್ತಕ ಶಿಥಿಲ.

1155

ಕೆ. ಬಿ. ೧೫೨	**ಭಾಗವತ ಮಹಾಪುರಾಣಂ (ಸಟೀಕು)**	ಶ್ಲೋಕ, ಗದ್ಯ
೮″ × ೬″	?	?
೩೫ ಪತ್ರ	೧೨ ಪಂಕ್ತಿ	೧೭ ಅಕ್ಷರ

ಆದಿ : ಅಧ್ಯಾ ೭

ಓಂ। ಏವಂ ದೈತ್ಯ ಸುತೈಪೃಷ್ಟೋ ಮಹಾ ಭಾಗವತೋ ಸುರಃ ॥
ಉವಾಚಸ್ಮಯಮಾನಸ್ತಾ ಸ್ಮರನ್ಮದನುಭಾಷಿತಂ ॥ ಶ್ರೀ ೧ ॥
ಮಹಾ ಭಗವದ್ಭಕ್ತನಾದ ಅಸುರ ಶರೀರ ಮಾತ್ರ ಉಳ್ಳ ಪ್ರಹ್ಲಾದನು। ಪೂರ್ವೋಕ್ತ ಪ್ರಕಾರವಾಗಿ। ಸಹಪಾಠಿಗಳಾದ। ದೈತ್ಯ ಸುತರಿಂದಾ। ಪ್ರಶ್ನೆಯಂ ಮಾಡಿಕೊಳ್ಳಲಪ್ಪಟ್ಟವನಾಗಿ । ನಾರದರಿಂ ಹೇಳಲಪಟ ಅರ್ಥವಂನ್ನು। ಸ್ಮರಿಸೂವಂಥವನಾಗಿ । ದೈತಸುತರಂನ್ನು। ಆಶ್ಚರ್ಯಬಡಿಸೂವಂಥವನಾಗಿ। ಮಾತನಾಡಿದನೂ ॥ ೨ ಶ್ರೀ ॥

ಅಂತ್ಯ : ವಿಷ್ಣು ಪಾರ್ಷದಾಃ ॥—॥ಅದ್ಯೈತದ್ಧರಿನರರು ಪಮುಸ್ಯತಂ ತೇ ದೃಷ್ಟಂನಃ ಶ್ರಣಪ ಸರ್ವಲೋಕಶರ್ಮ। ಸೋಯಂ ತೇ ವಿಧಿಕರ ಯೀಶ ವಿಪ್ರಶಪ್ತಸ್ಯೆದಂ ನಿಧನಮನುಗ್ರಹಾಯವಿದ್ಮಃ ॥—॥ ಯಲ್ವೆ ಶರಣ್ಯಪ್ರದನಾದ ಶ್ರೀ ಹರಿಯೆ। ಸರ್ವಲೋಕೋ ಸುಖಕರವಾದ। ಉದ್ಯುಕ್ತವಾದ। ಶ್ರೀ ನರಹರಿ ರೂಪಮೂ। ಯೀಗ ನಂಮ್ಮಿಂದ ಕಾಣಲಪ್ಪಟ್ಟಿತೂ। ಹತನಾದೆ! ಯೀ ದೈತ್ಯನು। ನಿಂನ್ನ ಆಗ್ನಾಧಾರಕನಾದ। ದ್ವಾರಪಾಲಕನು। ವಿಪ್ರರಾದ

ಸನಕಾದಿಗಳಿಂದಾ। ಶಪ್ತನಾಗಿ ಯಿದ್ದನೂ ಆತನ ವಧೆಯಂನ್ನು ಯೀಗ।
ಆತನ ಅನುಗ್ರಹಾರ್ಥವೆಂಬದಾಗಿ ನಾಉ ತಿಳಿಯಥೆವೆ ॥—॥ ಯಂಬದಾಗಿ
ಬ್ರಂಹ್ಮಾದಿ ದೇವತೆಗಳು ಶ್ರೀ ಲಕ್ಷ್ಮೀನರಶಿಂಹ್ಮ ಸ್ವಾಮಿಯವರಂನ್ನು
ಪ್ರತ್ಯೇಪ್ರತ್ಯೇಕವಾಗಿ ಸ್ತೋತ್ರವಂನು ಮಾಡಿದರು ಯಂಬದೀಗ ಅಧ್ಯಾಯರ್ಥಃ
॥ ೫೫ ॥ ಇತಿ ಶ್ರೀಮದ್ಭಾಗವತೇ ಮಹಾ ಪುರಾಣೇ। ಸಪ್ತಮಸ್ಕಂಧೇ ಪ್ರಹ್ಲಾದ
ಚರಿತ್ರೆ ಅಷ್ಟಮೋಧ್ಯಾಯಃ ॥ x x x
ಏವಂ ಸುರಾದಯಃ ಸರ್ವೇ ಬ್ರಹ್ಮೇಶಾನ ಪುರಸ್ಸರಾಃ।
ನೋಪೇತುಮಶಕಂನ್ಮನ್ಯೂ ಸಂರಂಭಸುದುರಾಸದಂ ॥

ವಿಷಯ : ಭಾಗವತ ಕಥೆ.

ವಿಶೇಷ : ೧—೧೬ ಮತ್ತು ೧–೧೯ ಪತ್ರಗಳಿವೆ. ಭಾಗವತ ಮಹಾ ಪುರಾಣದ ೭–೮ ಈ ಎರಡು ಅಧ್ಯಾಯಗಳು ಕನ್ನಡ ಟೀಕಿನಿಂದ ಇಲ್ಲಿ ಬರೆಯಲ್ಪಟ್ಟಿವೆ. ಗ್ರಂಥದ ಕೊನೆಯ ಪತ್ರದ ಹಿಂಬದಿಯಲ್ಲಿ 'ದೆ. ನರಸಿಂಹಯ್ಯ 18-4-99' ಎಂದು ಸಹಿ ಮಾಡಿದೆ.

1156

ಕೆ. ೨	**ಭಾರತ**	ಭಾಮಿನೀ ಷಟ್ಪದಿ
೨೪.೬" × ೨"	ಕುಮಾರವ್ಯಾಸ	ಸು. ೧೪೩೦
೨–೩೦೧ ಪತ್ರ	೧೧ ಪಂಕ್ತಿ	೧೩೦ ಅಕ್ಷರ

ಆದಿ : ಶ್ರೀ ಗದುಗಿನ ವೀರನಾರಾಯಣನೆ ಗತಿ ॥ ರಾಗ ॥ ಶಾಂತ್ರ ಮಲಹರಿ ॥
ರಾಯ ಜನಮೇಜಯಗೆ ವೈಶಂ
ಪಾಯಮುನಿ ಹೇಳಿದನು ಮುನಿದ್ವೈ
ಪಾಯನನು ಬಂಣ್ಣಿಸಿದ ಭಾರತ ವರ ಕಥಾವೃತವಾ ॥

ಪ ॥ ಸೂತನೈತಂದನು ಜಗದ್ವಿ
ಖ್ಯಾತಿ ಶೌನಕ ಮುಖ್ಯಮುನಿ ಸಂ
ಘಾತಿ ಪಾವನ ನೈಮಿಷಾರಂಣ್ಯಕ ವನಾಂತರಕೆ
ಆತನನು ಕಂಡುದು ತಪಶ್ವಿ
ವ್ರಾತ ಕುಶಲಕ್ಷೇಮ ಮಧುರ
ಪ್ರೀತಿ ವಚನಾವೃತದಿ ಸಂಭಾವನೆಯ ಮಾಡಿದರೂ ॥ ೧ ॥

ಅಂತ್ಯ : ಲಾಯದಲಿ ಹೊಕ್ಕಿಱಿದು ಕುದುರೆಯ
ಬೀಯ್ಯಮಾಡಿದನಂತ ಹಲಗೆಯ
ಘಾಯುಧದ ಧಾರೆಯಲಿ ಕೊಟ್ಟನು ಕುಂಜರವ್ರಜವಾ ॥

ರಾಯದಳದಲಿ ಮತ್ತೆ ನವ ಖಂ
ಡಾಯ ಮಾನವೆಯಾಯ್ತು ಪಾಂಡವ
ರಾಯಕಟಕವ ಕೊಂದನಶ್ವತ್ಥಾಮ ಬೇಸಜಿದೆ || ೩೯ ||

ವಿಷಯ : ಪಾಂಡವರು ಮತ್ತು ಕೌರವರ ಕಥೆ.

ವಿಶೇಷ : ಅಸಮಗ್ರ. ಮೊದಲ ಗರಿಯಿಲ್ಲ. ಆದಿಯಿಂದ ಗದಾಪರ್ವದ ೯ನೆಯ ಸಂಧಿಯಲ್ಲಿ ೩೯ ಪದ್ಯಗಳವರೆಗೆ ಮಾತ್ರವಿದೆ. ಅಲ್ಲಲ್ಲಿ ಗರಿಗಳು ತ್ರುಟಿತ. ಶಕಟರೇಫವಿದೆ.

1157

ಕೆ. ೭೦/೧	**ಭಾರತ**	ಭಾಮಿನೀ ಷಟ್ಪದಿ
೨೬.೮"X೨.೨"	ಕುಮಾರವ್ಯಾಸ	ಸು. ೧೪೩೦
೧—೩೫೨ ಪತ್ರ	೧೧ ಪಂಕ್ತಿ	೧೫೦ ಅಕ್ಷರ

ಆದಿ : ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ವರುಷಂಗಳು ೧೭೬೩ನೇ ಸಂದ ವರ್ತಮಾನ ಶಾರ್ವರಿ ಸಂವತ್ಸರದ ಪುಸ್ಯ ಶುದ್ಧ ೩ಯಲ್ಲು ಮಹಾಭಾರತ ಬರಯುವದಕ್ಕೆ ಶುಭಮಸ್ತು ||

ಪಲ್ಲಾ || ಸೂತನಭಿವರ್ನಿಸಿದನಮಲ
ಖ್ಯಾತ ಪೌಲೋಮವನು ತತ್ಕುಲ
ಜಾತ ಶೌನಕ ಮುಖ್ಯಮುನಿ ಸಭೆ ಮೆಚ್ಚಲೊಲವಿನಲಿ ||
ಶ್ರೀಮದಮರಪ್ರವರ ಮಕುಟ
ಸ್ತೋಮ ಮಣಿಗಣಕಿರಣ ಕೀರ್ಣೋ
ದ್ದಾಮ ನವ್ಯಪದಾಬ್ಜ ಪೀಠನನಂತ್ತಗುಣನಿಳಯಾ
ಭೂಮಿ ಭೂಸುರಗೋಸು ಧರ್ಮ
ಸ್ತೋಮಕಾರಣ ಮೂರ್ತಿಯಹ ಲ
ಕ್ಷ್ಮೀಮನೋರಮನೀಯ್ಯಮಗೆ ಯಿಷ್ಟಾರ್ಥಸಂಪದವಾ || ೧ ||

ಅಂತ್ಯ : ವೀರನಾರಾಯಣನೆ ಸುಕವಿಯು
ವೀರನಾರಾಯಣನೆ ಗಮುಕಿಯು
ವೀರನಾರಾಯಣನೆ ವಾದಿಯು ವಾಗ್ಮಿತಾನೆನಿಶಿ
ವೀರನಾರಾಯಣನೆ ಪೇಳ್ದನು
ವೀರನಾರಾಯಣನೆ ಕೇಳ್ದನು
ವೀರನಾರಾಯಣನೆ ಗದುಗಿನ ವೀರನಾರಾಯಣನಾ || ೨೬ ||
ಅಂತು ಗಧಾಪರ್ವ ೧ಕ್ಕೆ ಸಂಧಿ ೧೩ಕ್ಕಂ ಪನು ೬೩೭ಕ್ಕಾಂ ಮಂಗಳಮಹಾಶ್ರೀ

X X X X

ಸುಭಕೃತನಾಮ ಸಂವತ್ಸರಕಂ ಕಾರ್ತಿಕ ಶುಧ ೧ ಯು ಶುಕ್ರವಾರಂ ಮಹಾ ಭಾರತಂ ದಶಪರ್ವಂ ಸಂಪೂರ್ನಾ ॥ ಮಂಗಳಮಹಾ ಶ್ರೀ ॥
ಯಿದು ಬರದಾತ ಪುಷ್ಪಾಲ ವೆಂಕ್ಕರಾಜನ ಮಗ ವೈಯ್ಯರು ವೆಂಕಟರಾಜು ಬರಹ ಶ್ರೀರಾಮಾರ್ಪಣಮಸ್ತು ॥ ಹೊಂನಶಟ್ಟ ಮಗ ಕಟಿಗೆ ಸೇರುಗಾರ್ರ ತಿಂಮಪ್ಪನವರ ಅಳಿಯ ಕಟಿಗೆ ಲಕ್ಸ್ಮವೈಯ್ಯನಿಗೆ ಬರಕೊಟ್ಟ ಭಾರತ ಗ್ರಂಥ ಸಮಾರ್ಪಕಂ ॥ ಶ್ರೀ ರುಕ್ಮಿಣೀ ಸತ್ಯಭಾಮ ಸಮೇತ ಶ್ರೀಕೃಷ್ಣಮೂರ್ತಿ ಕಟಾಕ್ಷದಿಂದ ಅಷ್ಟೈಶ್ವರ್ಯಾಭಿವೃಧಿಕರವಾಗುವಂತೆ ಆಶೀರ್ವದಿಶಿ ಬರಕೊಟ್ಟ ಭಾರಥ ಗ್ರಥ ಸಂಪೂರ್ಣ ಮಂಗಳಮಹಾ ಶ್ರೀ.

ವಿಷಯ : ಪೌಲೋಮ, ಆಸ್ತಿಕಪರ್ವಗಳು ಮತ್ತು ಆದಿಪರ್ವದಿಂದ ಗದಾಪರ್ವ ಪೂರ್ತಿ ಮಹಾಭಾರತದ ಕಥೆ.

ವಿಶೇಷ : ಅಕ್ಷರಗಳು ವಿರಳವಾಗಿಯೂ ಸುಂದರವಾಗಿಯೂ ಇವೆ. ಪ್ರತಿ ಸಂಧಿಯಲ್ಲೂ ಆರಂಭವಾಗುವ ಸ್ಥಳದ ಪಕ್ಕದಲ್ಲಿ ಆ ಸಂಧಿಯಲ್ಲಿ ಬರುವ ಕಥೆಯ ಹೆಸರು ಬರೆದಿದೆ. ಪ್ರತಿ ಗರಿಯಲ್ಲೂ ಪಂಕ್ತಿಗಳಿಗೆ ಕ್ರಮಾಂಕವನ್ನು ಹಾಕಿದೆ. ಪ್ರತಿ ಪರ್ವವನ್ನು ಬರೆದು ಮುಗಿಸಿದ ದಿನದ ವಿವರವನ್ನು ಅಲ್ಲಲ್ಲೆ ಕೊಟ್ಟಿದೆ. ಇದೇ ಕಟ್ಟಿನ ಕೊನೆಯಲ್ಲಿ ಭವನ ಭಿಕ್ಷಾಟನವೆಂಬ ಮತ್ತೊಂದು ಕೃತಿಯಿದೆ.

1158

ಕೆ. ೯೮/೧	**ಭಾರತ** (ವಿರಾಟಪರ್ವ)	ಭಾಮಿನೀ ಷಟ್ಪದಿ
೧೨.೫." × ೧.೩"	ಕುಮಾರವ್ಯಾಸ	ಸು ೧೯೩೦
೧–೮೨ ಪತ್ರ	೬ ಪಂಕ್ತಿ	೫೪ ಅಕ್ಷರ

ಆದಿ : ....ಯನಮಃ । ಸುಭಮಸ್ತು............
ಕಾಯಿದರು ಸತ್ಯ........
....
.....................ನಗರಿಯಲಿ ॥
ಪಲ್ಲ ॥ ಕೇಳು ಜನಮೇಜಯ ಧರಿತ್ರೀ
ಪಾಲನ್ರುಪಜನಮುನಿಜನಂಗಳ
ಬೀಳುಕೊಟ್ಟನು ಭೂಮಿಪತಿ ಬಲವಂದು ಹುತವಹನಾ
ಮೇಲು ಶಕುನದ ಸುಭನೆ.... ... ...
....ಲಿಸುತ ಸಹೋಧರರು ಸಹಿತ ವ
ನಾಲ....ವ ಹೊರವಂಟ್ಟು ಸಾರಿದರೊಂದು ವಟಕುಜವಾ ॥ ೧ ॥

ಅಂತ್ಯ : (ಉಗನೆಯ ಗರಿ) ಯಿದಿರು ವಂದರು ಹರುಷದಲಿ ದ್ರೌ
ಪತಿಯ ಬಂಧವ ಪೈಕವನು ವಿ
ಸ್ತರಿಸಿ ಕಾಣಿಸಿಕೊಂಡ ನಿಖಿಳಾದೀಶ ಮಹೀಶ್ವರರಾ
ವೊದಕಿತಖಿಳಕ್ಷೋಣಿ ಬಲಸಂ
ಪದ....ವಸ್ತುಗಳ ಸೊಂ
ಪೊದವೆ ಕೈಗೈಯಿತ್ತು ಮದುವೆಯ ಮಂಗಳಾದ್ಭುದಯಾ || ೪೬ ||

ವಿಷಯ : ಪಾಂಡವರ ಅಜ್ಞಾತವಾಸ ಮತ್ತು ಅಭಿಮನ್ಯುವಿನ ವಿವಾಹದ ಕಥೆ.

ವಿಶೇಷ : ಅಸಮಗ್ರ. ಈ ಪರ್ವದ ಕಡೆಯ ೩೭ ಪದ್ಯಗಳಿಲ್ಲ. ಶಕಟರೇಫವಿದೆ. ತ್ರುಟಿತ. ಇದೇ ಕಟ್ಟಿನಲ್ಲಿ ಭಾರತ (ಕರ್ಣಪರ್ವ)ವೂ ಇದೆ.

1159

ಕೆ. ೯೮/೨	**ಭಾರತ** (ಕರ್ಣಪರ್ವ)	ಭಾಮಿನೀ ಷಟ್ಪದಿ
೧೧.೫" × ೧.೩"	ಕುಮಾರವ್ಯಾಸ	ಸು. ೧೪೩೦
೮೬ ಪತ್ರ	೫ ಪಂಕ್ತಿ	೪೭ ಅಕ್ಷರ

ಆದಿ : ....ಗಣ ದಿ ಪಾಯನಮಃ || ....ಯೆನಮಃ || ಶುಭಮಸ್ತು || ಶುಭಕ್ರತು ಸಂವತ್ಸರದ ಮಾಗ್ಯ ೧೩ ಯು ಗುರುವಾರ ಕರ್ನ್ನಪರ್ವಕ್ಕೆ ಪ್ರಾರಂಬಾ
ಶ್ರೀ ಶಂಕರಲಿಂಗಾಯನಮಃ

x x x x

ಕರ್ನಪರ್ವ್ವ
ರಾಯ ಕಟಕಾಚಾರಿಯನ ತರು
ವಾಯ ಸೇನಾ ಪಟ್ಟವನು ರಾ
ಧೇಯನಲ್ಲಿ ರಚಿಸಿದನು ಮುದದಲ್ಲಿ ಕಉರವರ ರಾಯಾ ||
ಪಥಾ || ಕೇಳು........ಧರಿತ್ರೀ
ಪಾಲ ತೆಗಧುದು............
ಪಾಳೆಯಕ್ಕೆ ಪರಿತೋಷ ಭೇದಸ್ತ್ರಿಮಿತ ವಿಗ್ರಾಹಾರೂ ||
ಕೋಲ ಗುರುವಿನ ಮರಣ ವಾರ್ತೆಯಾ
ಕಾ....ಸರ್ಪನ ತಂದು ಸಂಜೆಯ
ಹೇಳಿಗೆಯನೀಡಾಡಿದನುಧೃತರಾಷ್ಟ್ರನಿಧಿ....ಸಲಿ || ೧ ||

ಅಂತ್ಯ : ಯೆಲೆ ಧನಂಜಯ ನೀನೆ ಬಲು....
ಯುಳಿದವರು ರಣ....ಕುರು
ಬಲವನೊಬ್ಬನೆ ಕೇಣಿಗೊಂಡೆನು ಕಂನ್ನ ವೊದಲಾಗಿ

ಅಳುಕಿಸುವೆನೀಕ್ಷಣಕೆ ನಿಂನ
ಗ್ಗಳಿಕೆಯನು ನೋಡುವ.... ಪಾಲನ
ಬಳಲಿಕೆ....ಸು ನಡೆಯುಂದ....ಬೀವಾ ॥ ೪೧ ॥
ಅಂತೂ ಸಂಧಿ ೧೪ ಕ್ಕೆ ಪ ..೫೫೧ ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ಭಾರತ ಯುದ್ಧದಲ್ಲಿ ಕರ್ಣನು ಸೇನಾಪತಿಯಾಗಿ ಯುದ್ಧಮಾಡಿ ಮಡಿದ ಕಥೆ.

ವಿಶೇಷ : ಅಸಮಗ್ರ. ಕರ್ಣಪರ್ವದಲ್ಲಿ ೧೪ ಸಂಧಿಗಳು ಮಾತ್ರ ಇವೆ. ಶಕಟರೇಫ ವಿದೆ. ಅತ್ಯಂತ ತ್ರುಟಿತ ಪ್ರತಿ. ಇದೇ ಕಟ್ಟಿನಲ್ಲಿ ವಿರಾಟಪರ್ವವೂ ಆದಿಯಲ್ಲಿದೆ.

1160

ಕೆ. ೧೩೪/೨	**ಭಾರತ** (ಉದ್ಯೋಗಪರ್ವ)	ಭಾಮಿನೀ ಷಟ್ಪದಿ
೧೪.೫"×೧.೪"	ಕುಮಾರವ್ಯಾಸ	ಸು. ೧೪೩೦
೨–೫೫ ಪತ್ರ	೬ ಪಂಕ್ತಿ	೭೬ ಅಕ್ಷರ

ಆದಿ : ತೇದು ಹಣೆಯಲಿ ಬಡಿದು ದರ್ಭೆಯ
ಕೋದು ಸ್ವಸ್ಥಿಯ ಹಾಯಿಕುವುದು ಹಾರುವರ ಮಥವೆಂದಾ ॥ ೯ ॥
ಯನಲು ನಕ್ಕನು ದ್ರುಪದನಿದು ನಂ
ಮ್ಮನುಮತವು ಕಾಳಿಗದೊಳಲಗಿನ
ಮೊನೆಯೊಳಲ್ಲದೆಯಹಿಯ ಕೊಡುವನೆ ಕವುರವೇಶ್ವರನಾ
ವಿನುತ ಸಾತ್ಯಕಿ ಕೇಳು ನೆಲೆಯನು
ಜನಪರನ್ನಬರೆಭದೂತನ
ವಿನಯದಲಿ ಕಳುಹುವುದು ಸಾಮವ ಬೆಳೆಸಿ ನೋಡುವುದೂ ॥ ೧೦ ॥

ಅಂತ್ಯ : ಬಲದ ಮುಂಗಡೆ ಭೀಮನದು ಪಿಂ
ಗದಿಯೊಳಾತನ ಕಾಹು ಬೀಡಿನ
ಬಳಿಯಲಾರೈಕೆಗಳು ಸಾತ್ಯಕಿ ನಕುಲ ಪಾರ್ಥಂಗೇ
ಬಲಮಹಾಬುಧಿಯೊಳಗಿರುಳು
ತಳವಾರಿಕೆ ಹಿಡಿಂಬಿನದು ಪಾಂಡವ
ರುಳಿವು ಗದುಗಿನ ವೀರನಾರಾಯಣನ ಸುಯಿದಾನಾ ॥ ೪೮ ॥
ಅಂತು ಸಂಧಿ ೧೧ಕ್ಕಂ ಪದನು ೬೨೧ಕ್ಕಂ ನಿತ್ಯಮಂಗಳಾನಿಭವಂತು.

ವಿಷಯ : ಭಾರತ ಉದ್ಯೋಗಪರ್ವದ ಕಥೆ

ವಿಶೇಷ : ಗ್ರಂಥ ಮುಗಿದ ಮೇಲೆ—

ದೇವ ನಾರಾಯಣನು ಕಪಟದ
ಭಾವದಲಿ ವುದ್ಯೋಗ ಸಂಧಿಯ
ತೀವಿಮಾಡಲು ಬಂದು ವಿದುರನ ಮನೆಯ ಪಾಲುಂಡು
ಕೌರವನ ಸಭೆಗೈದು ಕ್ರಿಷ್ಣನು
ಐದು ಗ್ರಾಮವ ಬೇಡಿ ಕೊಡದಿರೆ
ಯುದ್ಧಕ್ಕೆ ಭಾಗೆಯನು ಮಾಡಿದನು ವುದ್ಯೋಗ ಪರ್ವದಲೀ ||

ಎಂಬ ಸಂಕ್ಷೇಪ ಭಾರತದ ಪದ್ಯವನ್ನು ಪ್ರತ್ಯೇಕವಾಗಿ ಬರೆದಿದೆ. ವಿಭವ ಸಂ|| ಫಾಲ್ಗುಣ ಬ ೧೦ ಸ್ಥಿರವಾರದಲ್ಲಿ ಇದನ್ನು ಬರೆದಿರುವುದಾಗಿ ಕೊನೆಯಲ್ಲಿ ತಿಳಿಸಿದೆ. ೬, ೧೨, ೨೩, ೪೫, ೫೨ ಈ ಕ್ರಮಾಂಕದ ಪತ್ರಗಳಿಲ್ಲ. ೯, ೫೧ ಈ ಪತ್ರಗಳ ಅಂಚು ಮುರಿದಿದೆ. ಇದರೊಡನೆ ಸಂಕ್ಷೇಪ ಭಾರತವಿದೆ.

1161

ಕೆ. ೧೬೩	**ಭಾರತ** (ವಿರಾಟಪರ್ವ)	ಭಾಮಿನೀ ಷಟ್ಪದಿ
೧೪.೯" × ೧.೯"	ಕುಮಾರವ್ಯಾಸ	ಸು. ೧೪೩೦
೨೯೦ ಪತ್ರ	೧೧ ಪಂಕ್ತಿ	೮೫ ಅಕ್ಷರ

ಆದಿ : || ಶುಭಮಸ್ತು || ವಿರಾಟ ಪರ್ವಕೆ ನಿರ್ವಿಘ್ನಮಸ್ತು || ಪಾಂಡವರು ವಿರಾಟ
ರಾಯನ ಪಟ್ಟಣಕ್ಕೆ ಹೊರಟ ಸಂಧಿ ||
ಸೂಚನೆ || ಕಾಯಿದರು ಸತ್ಯವನು ವನವಾ
ಸಾಯತವ ನೆರೆ ಗೆಲಿದು ಪಾಂಡವ
ರಾಯರೋಲೈಸಿದರು ಬಂದು ವಿರಾಟನಗರಿಯಲೀ ||
ಪದನೂ || ಕೇಳು ಜನಮೇಜಯ ಧರಿತ್ರೀ
ಪಾಲ ಮುನಿಜನ ಪರಿಜನಂಗಳ
ಬೀಳುಕೊಟ್ಟನು ಭೂಮಿಪತಿ ಬಲವಂದು ಹುತವಹನಾ
ಮೇಲು ಶಕುನದ ಚಾರು ನಿನದವ
ನಾಲಿಸುತ ಸೋದರರು ಸಹಿತವ
ನಾಲಯವ ಹೊರವಂಟ್ಟು ಸಾರಿದರೊಂದಾ ವಟಕುಜವಾ || ೧ ||

ಅಂತ್ಯ : ಚೋರನಿಂದಿಸಿ ಶಶಿಯ ಬೈದರೆ
ಕ್ಷೀರವನು ಕ್ಷಯರೋಗಿ ಹಳಿದಡೆ
ವಾರಣಾಸಿಯ ಹೆಳವನಿಂದಿಸಿ ನಕ್ಕರೇನಹುದೂ
ಭಾರತದ ಕಥನದ ಪ್ರಸಂಗವ
ಕ್ರೂರ ಕರ್ಮಿಗಳು ಕೇಳ್ದಡೆ
ಘೋರತರ ರಉರವವು....ಅವರಿಗೆ || ೨೩ ||

ಅಂತು ಸಂಧಿ ೧೩ಕಂ ಪದನೂ ೬೨೨ಕಂ ಮಂಗಳ ಮಾಹಾಶ್ರೀ—
ಶ್ರೀ ಮಚಿಂತ್ಯಾ ಗದುಗಿನ ವೀರನರಾಯ ಚರಣಾರವಿಂದ ಮಕರಂದ ಮಧು ಪಾನ ಪರೀಕ್ಷಿಪ್ರಾಜವಚೋ ಷಟ್ಪದ ನಿಕಾಯ ಕುಮಾರವ್ಯಾಸ ಯೋಗೀಂದ್ರ ವಿರಚಿತಮಪ್ಪ ಕರ್ನಾಟಕ ಭಾರತ ಕಥಾ ಮಂಜರಿಯೊಳ್ ಗಧಾಪರ್ವ ಸಂಪೂರ್ನ ಮಂಗಳ ಮಹಾ ಶ್ರೀ—

ವಿಷಯ : ಮಹಾಭಾರತದಲ್ಲಿ ಪಾಂಡವರ ಅಜ್ಞಾತವಾಸದಿಂದ ಗದಾಪರ್ವದ ಅಂತ್ಯದವರೆಗಿನ ಕಥೆ.

ವಿಶೇಷ : ವಿರಾಟಪರ್ವದಿಂದ ಪೂರ್ತ ಸಮಗ್ರ. ೩೨೪ನೆಯ ಗರಿಯಿಂದ, ಗರಿಯ ಕ್ರಮಾಂಕ ಆರಂಭವಾಗುವುದರಿಂದ ಮೊದಲ ಗರಿಗಳಲ್ಲಿ ಮೊದಲ ಪರ್ವಗಳು ಬರೆದಿದ್ದು ಅವು ಈ ಕಟ್ಟಿನಿಂದ ಬೇರೆಯಾಗಿರಬಹುದು. ಬರಹ ಸುಂದರ ವಾಗಿದೆ. ೩೨೪–೪೨೭ ವರೆಗಿನ ಗರಿಗಳಲ್ಲಿ ವಿರಾಟ ಮತ್ತು ಉದ್ಯೋಗ ಪರ್ವ ಗಳ ಕಥಾಭಾಗವೂ, ೧–೧೭೭ ಪತ್ರಗಳಲ್ಲಿ ಭೀಷ್ಮಪರ್ವದಿಂದ ಗದಾಪರ್ವದ ವರೆಗಿನ ಕಥಾಭಾಗವೂ ಇದೆ.

1162

ಕೆ. ೨೦೫ ಭಾರತ ಭಾಮಿನೀ ಷಟ್ಪದಿ
೧೨.೫″ × ೨.೧″ ಕುಮಾರವ್ಯಾಸ ಸು. ೧೪೩೦
೧–೨೮೧ ಪತ್ರ ೧೫ ಪಂಕ್ತಿ ೮೫ ಅಕ್ಷರ

ಆದಿ : ... .

ವೀರನಾರಾಯಣನೆ ಸುಕವಿ ಸೇ
ಖರಿ ಕುಮರವ್ಯಾಸ ಕೇಳುವ
ಸೂರಿಗಳು ಸನಕಾದಿಗಳು ಜಂಗಮಜನಾರ್ದನರೂ
ಚಾರುಗವಿತೆಯ ಬಳಕೆಯಲ್ಲ ವಿ
ಚಾರಿಸುವರಳವಲ್ಲ ಚಿತ್ತವ
ಧಾರು ಹೋ ಸರ್ವಗ್ನ್ಯರಾದರಿಗೆ ಸಲುಗೆ ಬಿಂನಪವಾ || ೮ ||

ಅಂತ್ಯ : ಸಕಲರುಶಿಮತದಲಿ ಕಥಾ ನಾ
ಯಕನ ಗಂಧಾಕ್ಷತೆಯೊಳರ್ಚಿಸಿ
ಮಕುಟಕರ್ಣಾಭರಣವೆನಿಸುವ ವಸ್ತ್ರಕನಕವನೂ |
ಭಕತಿಯಿಂದಲಿ ಯರ್ಘ್ಯ.... ದ್ಯಾ
ನಿಕರದಲಿ ಮಂನ್ನಿಸಿದರಾ ಮುನಿ
ಯುಕುತಿ ಮಿಗೆ ಹರಷಿದನು ಜನಮೇಜಯ ಮಹೀಪತಿಯಾ || ೨೪ ||

x x x

ಅಂತ್ತು ಸಂಧಿ ೧೩ ಪದ ೬೨೧ಕಂ ಗದಾಪರ್ವ ಸಮಾಪ್ತ ಮಂಗಳಮಹಾ ಶ್ರೀ .... ಮಾನ ಆನಂದ ಸಂವತ್ಸರದ ಶ್ರಾವಣ ಬ ೩ ಸೋಮವಾರದಲೂ ಸಾತಿಗ್ರಾಮದ ಚಿಕ್ಕದೇವರಸರ್ಮಮಕ್ಕಳು ಬೋಧಾನಸೂತ್ರ ಶ್ರೀ............ ....ಷ್ಮಪರ್ವ x x x ದಶಪರ್ವಉ ೧೦ಕೆ ಸಂಧಿ ೧೪೭ಕಂ ಪದ ಸಾ ೬೯೭೧ಕಂ ಶುಭಮಸ್ತು...............

ವಿಷಯ : ಕೌರವ ಪಾಂಡವರ ಕಥೆ.

ವಿಶೇಷ : ಶಿಥಿಲಪ್ರತಿ. ಗರಿಗಳ ಅಂಚು ಮುರಿದಿದೆ. ಸಂಧಿಯು ಪ್ರಾರಂಭವಾಗುವ ಗರಿಗಳ ಪಾರ್ಶ್ವಗಳಲ್ಲಿ ರೇಖಾಚಿತ್ರಗಳಿವೆ. ಶಕಟರೇಫದ ಬಳಕೆ ಇದೆ. ಗರಿಯ ಮಧ್ಯದಲ್ಲಿರುವ ಎರಡು ರಂಧ್ರಗಳಿಗೂ ಬೆಳ್ಳಿಯಕಟ್ಟನ್ನು ಹಾಕಿದೆ. ಪ್ರತಿಯ ಕಾಲ ಶಕ ೧೪೭೬. ಅಕ್ಷರಗಳು ಗುಂಡಾಗಿವೆ. ಈಗ ದೊರೆತಿರುವ ಕುಮಾರ ವ್ಯಾಸ ಭಾರತದ ಪ್ರತಿಗಳಲ್ಲಿ ಇದೇ ಅತ್ಯಂತ ಪ್ರಾಚೀನತಮವಾದುದು. ಪ್ರತಿ ಪರ್ವಕ್ಕೂ ಕ್ರಮಾಂಕ ಬೇರೆ ಬೇರೆಯಾಗಿ ಎಣಿಕೆಮಾಡಿದೆ.

1163

ಕೆ. ೨೧೦	**ಭಾರತ** (ಆದಿಪರ್ವ)	ಭಾಮಿನೀ ಷಟ್ಪದಿ
೧೩.೭" × ೧.೪"	ಕುಮಾರವ್ಯಾಸ	ಸು. ೧೪೩೦
೧–೧೨೫ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಶ್ರೀ ಯಾದವಾದ್ರೀಶಾಯ ನಮಃ ॥ ಆದಿಪರ್ವದ ಪಸ್ತುಕಕ್ಕೆ ನಿರ್ವಿಘ್ನ ಮಸ್ತು ॥
ಶುಕ್ಲಾಂ ಬರಧರಂ ವಿಷ್ಣು ಶಶಿವರ್ಣಂ ಚತುರ್ಭುಜಂ ।
ಪ್ರಸಂನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥
ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಜನಕ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರಾ ।
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರೆಯಣಾ ॥ ೧ ॥

x x x x

(೫ನೇ ಪತ್ರ) ರಾಗ! ನಾಟ॥ ರಾಯ ಜನಮೇಜಯಗೆ ವೈಶಂ
ಪಾಯಮುನಿ ಹೇಳಿದನು ಮುನಿದ್ವೈ
ಪಾಯನನು ಬಂಣಿಸಿದ ಭಾರತವರ ಕಥಾಮ್ರುತವಾ ॥

ಅಂತ್ಯ : ಅಂದು ತಾನೊಬ್ಬರನು ಕೇಳಿಸ
ದಂದು ಬೆಂದ ವಿಚಿತ್ರವೀರ್‍ಯನು
ಯಿಂದು ಕುಲವೆಡೆವರಿಯಿತಿಂದಿಗೆ ಭೂಪ ಕೇಳೆಂದಾ ।
ಮುಂದೆ ಬಂದುದನಿಂನ್ನು ಗೋಪೀ
ವೃಂದ ವಲ್ಲಭ ಮುರಳಿ ಹರಿದುದ
ಸಂಧಿಸುವನ್ಯೆ ವೀರನಾರಾಯಣನು ಕರುಣದಲಿ ॥ ೭೪ ॥
ಇತಿ ಶ್ರೀಮಹಾಭಾರತೇ ಶತಸಹಸ್ರ ಸಂಹಿತಾಯಾಂ ಶ್ರೀ ಆದಿಪರ್ವಣಿ ಶಾಂತಸ್ವರ್ಗಾರೋಹಣ ವಿಚಿತ್ರವೀರ್‍ಯ್ಯಮರಣ ಸಿಖಂಡಿ ಜನನವರ್ನಾನಾಂ ಶ್ರೀಕೃಷ್ಣ ಪೂಜ್ಯಾಸ್ತು ॥
ಅಂತು ಸಂಧಿ ೧೮ಕಂ ಶ್ಲೋಕ ೭ಕಂ ಪದನೂ ೧೨೧೬ಕಂ ಮಂಗಳಮಹಾ ಶ್ರೀ

ವಿಷಯ : ಭಾರತದ, ಆದಿಪರ್ವದ ಕಥೆಯಲ್ಲಿ ವಿಚಿತ್ರವೀರ್‍ಯನ ಮರಣದವರೆಗಿನ ಕಥಾಭಾಗ.

ವಿಶೇಷ : ಅಸಮಗ್ರ. ಸ್ಫುಟಾಕ್ಷರ. ಹುಳು ಹೊಡೆದು ಗರಿಗಳಲ್ಲಿ ಕೆಲವು ಕಡೆ ರಂಧ್ರ ಬಿದ್ದಿದೆ.

1164

ಕೆ. ೨೧೬/೨	**ಭಾರತ**	ಭಾಮಿನೀ ಷಟ್ಪದಿ
೧೪.೫"×೧.೪"	ಕುಮಾರವ್ಯಾಸ	ಸು. ೧೮೩೦
೨೪–೪೪ ಪತ್ರ	೬ ಪಂಕ್ತಿ	೪೮ ಅಕ್ಷರ

ಆದಿ : ಶ್ರೀ ವಾಗ್ದೇವ್ಯೈನಮಃ ॥
ಸಭೆಯಳೋಲಗದಲಿ ವಿರಿಂಚಿ
ಪ್ರಭುವಿನನುಮತದಿಂದ ಧರಣೀ
ವಿಭು ಮಹಾಕ್ರತುರಾಜ........ಲಿದು ಕೈಕೊಂಡಾ ॥
ಪದ ॥ ಕೇಳು ಜನಮೇಜಯ ಧರಿತ್ರೀ
ಪಾಲ ವಂಸ್ಥಿ ಜ್ವಾಲೆ ತೆಗದುದು
ಕೂಡೆ ಹೊಗ............ಳ ಝುಡಿಯೆ
ಮೇಲುಗಾಳೆಗದುಬ್ಬಿನಲಿ ಶಿರಿ
ಲೋಲ ಸಹಿತರ್ಜುನನು ವಿಕ್ರಮ
ದೇಳಿಗೆಯ ಪ..............................ರಕೆ ॥ ೧ ॥

ಅಂತ್ಯ : ಕಳುಹಿದನು ಸುರಮುನಿಯ ತೆರದೊ
ಳಿಳಿದು ದಂತಸ್ತ್ರಾಪ ಯಜ್ಞದ
ಬಲುಹು ನೆನ....ಗೆ ಕಂಪಿಸಿ ಕೈಯ್ಯಗಲ್ಲದಲೀ
ವೊಲೆದೊಲೆದು ಬಿಡೆ ಭಾವದಲಿ
ಕಳವಳಿಸಿಹದು........ತ್ತೆ....
ತಿಲಕ ಚಿಂತಿಸಿ ನೆನವುತಿರ್ದ್ದನು ವೀರನರೆಯಣನಾ || ೧೧೦ ||
ಶ್ರೀ ಮಂಗಳ ಮಹಾಶ್ರೀ—
ಬಲಿಮಥನ ಫಲುಗುಣರು ಸಹಿತ
ಗ್ಗಳೆಯನೇಕಾಂಗದಲಿ
ಕಲಿ ಜರಾಸಂಧನನು ಶೀಳಿದು ಬಿಸುಟನಾ ಭೀಮ||
ಪದನೂ ||

ವಿಷಯ : ರಾಜಸೂಯಯಾಗದ ಕಥೆ.

ವಿಶೇಷ : ಸಭಾಪರ್ವದ ವೊದಲ ಸಂಧಿ ಮಾತ್ರವಿದೆ. ಎರಡನೆ ಸಂಧಿಯ ಸೂಚನೆ ಯಿದೆ. ತ್ರುಟಿತ. ಆದಿಯಲ್ಲಿ ಮಗ್ಗಿಕೋಷ್ಠಕಗಳು, ಅಂತ್ಯದಲ್ಲಿ ಹರಿಭಕ್ತಿಸಾರ ವೆಂಬ ಮತ್ತೊಂದು ಗ್ರಂಥವೂ ಇವೆ. ೨೪ನೆಯ ಗರಿಯಲ್ಲಿ ಕಾಲುಭಾಗ ಮುರಿದು ಹೋಗಿದೆ.

1165

ಕೆ.೨೧೮	**ಭಾರತ** (ಆದಿಪರ್ವ)	ಭಾಮಿನೀ ಷಟ್ಪದಿ
೧೬.೩″ × ೧.೭″	ಕುಮಾರವ್ಯಾಸ	ಸು. ೧೪೩೦
೧–೩೨೪ ಪತ್ರ	೭ ಪಂಕ್ತಿ	೬೮ ಅಕ್ಷರ

ಆದಿ : ಶ್ರೀ ಗಣಾಧಿಪತಿಯೇ ನಮಃ ||
ಪದನ್ನು || ಶ್ರೀವನಿತೆಯರಸನೆ ವಿಮಲ ರಾ
ಜೀವಪೀತನೆ ಜನಕ ಜಗತಿ
ಪಾವನನೆ ಸನಕಾದಿ ಸಜ್ಜನ ನಿಕರದಾತಾರಾ
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನರಾಯಣಾ || ೧ ||

ಅಂತ್ಯ : ಧಾರುಣೀಶ್ವರರೈವರನು ಸುಕು
ಮಾರ ವರ್ಗವನಾ ಸುಭಧ್ರಾ
ನಾರಿಯನು ಪಾಂಚಾಲೆಯನು ತತ್ಸಕಲ ಭಾಂದವರಾ

ಸೂರಿಗಳ ಸಚಿವಾದಿ ನೃಪಪರಿ
ವಾರವನು ಪತಿಕರಿಶಿ ಬಂದನು
ದ್ವಾರಕಿಗೆ ಹರುಷದಲಿ ಗದುಗಿನ ವೀರನಾರಾಯಣಾ ॥ ೧೪೦ ॥
ಯಿತಿ ಶ್ರೀ ಮಹಾಭಾರತೇ ಶತಸಹಸ್ರ ಸಂಹ್ಮಿತಾಯಾಂ ಶ್ರೀಮತ್ಕುಮಾರಾ
ವ್ಯಾಸಯೋಗಿಂದ್ರ ವಿರಚಿತಮಪ್ಪ ಆದಿಪರ್ವಣಿಯೊಳು ಅಭಿಮಂನ್ಯು ಪಂಚ
ದ್ರ್ಪಾಪದೇಯರ ಜನನ ಶಸ್ತ್ರಲಾಭ ಖಾಂಡಾವನದಹನ ವರ್ನನಂ
ಸಂಪೂರ್ಣಂ ॥ ಅಂತು ಸಂದಿ ೪೨ಕ ಪದನೂ ೩೧೧೬ಕ್ಕಂ ಮಂಗಳಮಹಾ ಶ್ರೀ.

ವಿಷಯ : ಪಾಂಡವ ಕೌರವರ ಕಥೆಯ ಆದಿಪರ್ವದ ಭಾಗ.

ವಿಶೇಷ : ಆದಿಪರ್ವ ಸಮಗ್ರವಾಗಿದೆ. ಕೆಲವು ಗರಿಗಳು ಮುರಿದಿವೆ. ಹುಳು ತಿಂದಿವೆ. ೧೩, ೧೨೪ನೆಯ ಪತ್ರಗಳಿಲ್ಲ. ೧೬೭, ೩೭ನೆಯ ಪತ್ರಗಳು ಮುರಿದಿವೆ.

1166

ಕೆ. ೨೪೭	**ಭಾರತ (ಕರ್ಣಪರ್ವ)**	ಭಾಮಿನೀ ಷಟ್ಪದಿ
೧೨.೧" × ೧.೫"	ಕುಮಾರವ್ಯಾಸ	ಸು. ೧೪೩೦
೧–೧೭೬ ಪತ್ರ	೬ ಪಂಕ್ತಿ	೫೦ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ ॥ ಕರ್ನಪರ್ವ ಬರೆಯುವದಕ್ಕೆ ನಿರ್ವಿಘ್ನಮಸ್ತು॥
ಪಲ್ಲವಾ ॥ ರಾಯಕಟಕಾಚಾರ್ಯ್ಯನಾ ತರು
ವಾಯ ಸೇನಾಪಟ್ಟವನು ರಾ
ಧೇಯನಲಿ ರಚಿಸಿದನು ಮುದದಲಿ ಕೌರವರ ರಾಯಾ ॥
ಪದನೂ ॥ ಕೇಳು ಜನಮೇಜಯ ಧರಿತ್ರೀ
ಫಾಲ ತೆಗದುದು ಬಲವೆರಡು ನಿಜ
ಪಾಳೆಯಕೆ ಪರಿತೋಷದಲಿ ಭೇದಿಸಿಮಿತವಿಗ್ರಹರೂ
ಕೋಲಗುರುವಿನ ಮರಣವಾರ್ಥಾ
ಕಾಲಸರ್ಪನ ತಂದ್ದು ಸಂಜಯ
ಹೇಳಿಗೆಯ ನೀಡಾಡಿದನು ದುತರಾಷ್ಟ್ರನಿದಿರಿನಲೀ ॥ ೧ ॥

ಅಂತ್ಯ : ಕುರುಪತಿಯ ಕಡುಶೋಕಮುಯುಸಾ
ಗರದೊಳದ್ದಿಸಿ ಪಾಂಡ್ಡುಪುತ್ರರ
ಹೊರೆಗೆ ಬಂದನು ಕೃಷ್ಣ ಮಾಯೆಯ ಶೋಕಪಾವಕನಾ ।
ಮುರಿದು ಬ್ರಂಹ್ಮಾಜ್ನಾನದಿಂದೆ
ಚ್ಚರಿಸಿದನು ನಿಂನ್ನವರ ಯಾದವ
ರರಸ ಗದುಗಿನ ವೀರನಾರಾಯಣನ ಕರುಣದಲೀ ॥ ೫೭ ॥

ಅಂತ್ತು ಸಂಧಿ ೨೭ಕ್ಕಂ ಪದನೂ ೧೨೮ಂಕ್ಕಂ ಮಂಗಳಮಹಾ ಶ್ರೀ ||

ವಿಷಯ : ಭಾರತ ಯುದ್ಧದಲ್ಲಿ ಕರ್ಣನು ಸೇನಾಧಿಪತಿಯಾಗಿ ಯುದ್ಧಮಾಡಿ ಮಡಿದ ಕಥೆ.

ವಿಶೇಷ : ಕರ್ಣಪರ್ವವು ಮಾತ್ರ ಸಮಗ್ರ. ಅಂತ್ಯದಲ್ಲಿ ಕೆಲವು ಗರಿಗಳು ತ್ರುಟಿತ. ಸಂಧಿಗಳು ಪ್ರಾರಂಭವಾಗುವ ಕೆಲವು ಗರಿಗಳಲ್ಲಿ ಆ ಸಂಧಿಯ ವಿಷಯಸೂಚಿ ಇದೆ.

1167

ಕೆ. ೨೫೦	**ಭಾರತ**	ಭಾಮಿನೀ ಷಟ್ಪದಿ
೧೮.೪" × ೧.೮"	ಕುಮಾರವ್ಯಾಸ	ಸು. ೧೪೩೦
೧–೧೯೮ ಪತ್ರ	೧೦ ಪಂಕ್ತಿ	೮೫ ಅಕ್ಷರ

ಆದಿ : || ಶ್ರೀ ಸುಭಮಸ್ತು || ಆದಿಪರ್ವಂ ||
ಸೂಚನೇ || ಶ್ರೀವನಿತೆಯರಸನೆ ವಿಮಲ ರಾ
ಜೀವಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರದಾತಾರಾ
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರಾಣಾ || ೧ ||

ಅಂತ್ಯ : ಆದುದಭಿಮನ್ಯುವಿನ ಮದುವೆ ಮ
ಹಾದಯಾಂಬುಧಿ ಕೃಷ್ಣರಾಯನ
ಪಾದದರುಶನವಾಗಲಿಂಮಡಿಸಿತ್ತು ನಿಮ್ಮುದಯಾ
ಮೇದಿನಿಯನಾವೊತ್ತೆಯಿಟ್ಟೆವು
ಕಾದುಕೊಂಡೆವು ಸತ್ಯವನು ಮೇ
ಲಾದುದನು ನೀವ್ಬಲ್ಲಿರೆಂದನು ಭೂಪ ನರೆಯಣನಾ || ೮೬ ||
ಅಂತು ಸಂಧಿ ೧೧ಕ್ಕಂ ಪದನೂ—

ವಿಷಯ : ಭಾರತದ ಕಥೆಯಲ್ಲಿ ಆದಿಯಿಂದ ಅಭಿಮನ್ಯುವು ವಿವಾಹವಾಗುವವರೆಗೆ.

ವಿಶೇಷ : ಪ್ರತಿಯು ತ್ರುಟಿತ. ಹುಳು ತಿಂದಿದೆ. ಪೀಠಿಕಾ ಸಂಧಿಯನಂತರ ಪ್ರಾರಂಭವಾಗುವ ಆದಿಪರ್ವದ ಮೊದಲ ೪ ಪದ್ಯಗಳಿಲ್ಲ.

1168

ಕೆ. ೨೫೧	**ಭಾರತ**	ಭಾಮಿನೀ ಷಟ್ಪದಿ
೧೮.೨" × ೧.೯"	ಕುಮಾರವ್ಯಾಸ	ಸು. ೧೪೩೦
೧–೨೦೬ ಪತ್ರ	೧೦ ಪಂಕ್ತಿ	೯೦ ಅಕ್ಷರ

ಆದಿ : ವುದ್ಯೋಗ ಪರ್ವ.

ಪಲ್ಲವ ॥ ನಂಬಿದವರಿಗೆ ತಂನ ತೆತ್ತಿಹ
ನೆಂಬ......................
......................ಲಿದರ್ಜುನಗೆ ಮುರವೈರೀ ॥
ಪದನು ॥ ಕೇಳು ಜನಮೇಜಯ ಧರಿತ್ರೀ
ಪಾಲ ಕುಂತೀತನೆಯರುಂನತ
ದೇಳಿಗೆಯನೇನೆಂಬೆನೈ ಕಾರುಣ್ಯಸಿಂಧುವಲಾ
ಶ್ರೀಲತಾಂಗಿಯ ರಮಣನೈವರೊ
ಳಾಳೊಡೆಯರಾರೆಂಬ ಭೇದವ
ಬೀಳುಕೊಟ್ಟೀ ನಡಸುತಿರ್ಧನು ತಂನ ಮಯಿದುನರಾ ॥ ೧ ॥

ಅಂತ್ಯ : ವೇದಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನಫಲ ಕೃ
ತಾ............ಫಲವು ಜೋತಿಷ............ಮು ಯಾಗಫಲ
ಮೇದಿನಿಯನೊಲಿದಿತ್ತು ಫಲ ವ
ಸ್ತ್ರಾದಿ ಕನ್ಯಾದಾನಫಲವಹು
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೇ ॥ ೨೨ ॥
ಅಂತು ಸಂಧಿ ೧೩ಕ್ಕಂ ಪದನೂ ೬೨೮ಕ್ಕಂ ಮಂಗಳ ಶ್ರೀ ಶ್ರೀಮದಚಿಂತ್ಯ ಗದುಗಿನ ವೀರನಾರಾಯಣ ಚರಣಾರವಿಂದ ಮಕರಂದ ಮಧುಪಾನ ಪರಿಕ್ಷಿದ್ವ ಚೋಷಟ್ಪದಸಿಕಾಯ ಶ್ರೀಮತ್ಕುಮಾರ ವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ನಾಟಕ ಭಾರತ ಕಥಾಮಂಜರಿಯೊಳು ಗದಾಪರ್ವ ಸಮಾಪ್ತಂ ಮಂಗಳ ಮಹಾಶ್ರೀ ಪಾರಭವಸರಥ ಚಯಿತ್ರ ಸುದ ೧೫ ಮಿ ಶಸಿವಾರಧಿನ ಸಪುರ್ನ ಮಂಗಳಾ

ವಿಷಯ : ಮಹಾಭಾರತದಲ್ಲಿ ಕೃಷ್ಣಸಂಧಾನದಿಂದ ಆರಂಭವಾಗಿ, ದುರ್ಯೋಧನನು ಗದಾಯುದ್ಧದಲ್ಲಿ ಮಡಿದವರೆಗಿನ ಕಥೆ.

ವಿಶೇಷ : ತ್ರುಟಿತ, ಹುಳು ತಿಂದಿದೆ. ಸ್ಫುಟ ಬರಹ. ಕೊನೆಯಲ್ಲಿ ಪ್ರಕೃತ ಕೃತಿಗೆ ಸಂಬಂಧಿಸದ ನಾಲ್ಕೈದು ಗರಿಗಳಿವೆ.

1169

ಕೆ. ೨೬೬ ಭಾರತ ಭಾಮಿನೀ ಷಟ್ಪದಿ

೨೫.೬" × ೨.೨" ಕುಮಾರವ್ಯಾಸ ಸು. ೧೮೩೦

೧೮೩ ಪತ್ರ ೧೦ ಪಂಕ್ತಿ ೧೬೦ ಅಕ್ಷರ

ಆದಿ : ಶ್ರೀ ಗಣಾಧಿಪತಯೆ ನಮಃ ॥ ಧಾತುನಾಮ ಸಂವತ್ಸರದ ಭಾದ್ರಪದ ಬಹುಳ ೩ ಬುಧವಾರದಲ್ಲು ಮುದ್ದಮಲ್ಲನವರಿಗೆ ಗುರುಕಾರ್ ಬಸವಲಿಂಗಪ್ಪನವರ ಭಾವಮೈಯಿದ ನಂಜಪ್ಪನು ಬರದ ಭಾರತ ಆದಿಪರ್ವ ಪ್ರಾರಂಭಃ

x x x x ಶಿದ್ದಿರಸ್ತು "ಆದಿಪರ್ವ"

ಸೂಚನೆ ॥ ವೇದ ಪುರುಷನ ಸುತನ ಸ
ಹೋಥರನ ಹೆಂಮುಗನ ಮಗನ ತ
ಳೋಧರಿಯ ಮಾತುಳನ ಮಾವನನತುಳ ಬುಜಬಲದಿ
ಕಾದಿ ಜೈಸಿದನಂಣನವ್ವೆಯ
ನಾದಿನಿಯ ಜಠರದಲ್ಲಿ ಜನಿಸಿದ
ನಾದಿ ಮೂರುತಿ ಸಲಹು ಗದುಗಿನ ವೀರನಾರಯಣಾ ॥ ೧ ॥

x x x x

ಪೀಠಿಕಾ ಸಂಧಿ ೧ಕ್ಕಾಂ ಪದ ೨೬ಕ್ಕಂ ಮಂಗಳಮಹಾ ಶ್ರೀ ॥
ಸೂಚನೆ ॥ ತನಗೆ ಪುಟ್ಟಿದ ಮಗಳ ತಾನೇ
ಯನುಭವಿಸುವನು ಕಮಲಸಂಭವ
ನೆನುತಲೈದನೆ ಸಿರವನರಿದನು ಪಾರ್ವತೀರಮಣಾ ॥ ಪ ॥

ಅಂತ್ಯ : ವಿಲಗನಾಳುವನಾಗಿ ದೇಶವ
ಹಿಳಿದು ಹಿಂಡುತ ದಾನಧರ್ಮ್ಮವ
ನುಳಿದು ದೇವಬ್ರಾಂಹ್ಮರೆಂನದೆ ಕಂಡವರುಗಳನೂ
ಘಳಿಗೆ ಘಳಿಗೆಗೆ ದಂಡ ದೋಷವ
ಕೊಳುತ ಕಡೆಯಲದೋಗತಿಗಳೊಳ
ಗಿಳಿದು ಹೋಹುದು ನೀತಿಯೇ ಪೇಳೆಂದನಾ ಮುನಿಪಾ ॥ ೭೩ ॥
ಯೋಗಿಯಲ್ಲದ ಟಾವುಗಳಲಿ ನಿ
ಯೋಗಿ................

ವಿಷಯ : ಭಾರತದಲ್ಲಿನ ಆದಿ, ಸಭಾ, ಅರಣ್ಯ, ವಿರಾಟ ಮತ್ತು ಉದ್ಯೋಗ ಪರ್ವಗಳ ಕಥೆ.

ವಿಶೇಷ : ಆದಿಯಿಂದ ಉದ್ಯೋಗಪರ್ವದ ೪ನೆಯ ಸಂಧಿಯಲ್ಲಿ ೭೩ನೆಯ ಪದ್ಯದ ವರೆಗೆ ಮಾತ್ರವಿದೆ. ಆದಿಪರ್ವದ ೩ ನೆಯ, ಸಭಾಪರ್ವದ ೨೯ನೆಯ ಗರಿಗಳು ಸ್ವಲ್ಪಮಟ್ಟಿಗೆ ಹರಿದು ಹೋಗಿವೆ. ಆದಿಯ ೧೦, ಅರಣ್ಯದ ೩೨, ವಿರಾಟ ಪರ್ವದ ೭೩ ನೆಯ ಗರಿಗಳು ಮುರಿದು ತುಂಡಾಗಿವೆ. ಆದಿಯ ೭೯, ೯೩, ೯೬ ಮತ್ತು ಅರಣ್ಯಪರ್ವದ ೪೯ ನೆಯ ಗರಿಗಳಲ್ಲಿ ಒಂದು ಕಡೆ ಮಾತ್ರ ಬರೆದಿದೆ. ಆದಿಪರ್ವದ ಬರಹ ಸ್ವಲ್ಪ ದಪ್ಪಗಿದೆ, ಉಳಿದ ಮುಂದಿನ ಪರ್ವಗಳ ಅಕ್ಷರವು ಸ್ವಲ್ಪ ಸಣ್ಣಗಿದೆ. ಬರಹ ಸುಂದರವಾಗಿದೆ.

1170

ಕೆ. ೨೭೩	**ಭಾರತ (ಆದಿಪರ್ವ)**	ಭಾಮಿನೀ ಷಟ್ಪದಿ
೧೧" × ೧.೩"	ಕುಮಾರವ್ಯಾಸ	ಸು. ೧೪೩೦
೧–೧೪೧ ಪತ್ರ	೫ ಪಂಕ್ತಿ	೫೩ ಅಕ್ಷರ

ಆದಿ : ॥ ಶ್ರೀ ಯಾದವಾದ್ರೀಶಾಯ ನಮಃ ॥ ಆದಿಪರ್ವದ ಪುಸ್ತಕ ಬರಉದಕ್ಕೆ ನಿರ್ವಿಘ್ನಮಸ್ತು ॥

ಶುಕ್ಲಾಂಬರದರಂ ವಿಷ್ಣುಂ ಶಶಿವರ್ನಂ ಚತುರ್ಭುಜಂ ।
ಪ್ರಸಂನ್ನವದನಂ ಧ್ಯಾಯೇ ಸರ್ವ ವಿಘ್ನೋಪಶಾಂತಯೇ।
ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಜನಕ ಜಗಕರಿ
ಪಾವನನೆ ಸನಕಾದಿ ಸಜ್ಜನ ನಿಕರದಾತಾರಾ
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರೆಯಣಾ ॥ ೧ ॥

x x x x

ರಾಗ । ಶಾಂತಕಮಲಹರಿ ॥ ರಾಯ ಜನಮೇಜಯಗೆ ವೈಶಂ
ಪಾಯ ಮುನಿ ಹೇಳಿದನು ಮುನಿದ್ವೈ
ಪಾಯನನು ಬಂಣಿಸಿದ ಭಾರತ ವರ ಕಥಾಂಮ್ರುತವಾ॥

ಅಂತ್ಯ : ಅಂದು ತಾನೊಬ್ಬರನು ಕೇಳಿಸ
ದಂದು ಬೆಂದು ವಿಚಿತ್ರವೀರ್ಯ್ಯನು
ಯಿಂದುಕುಲವೆಡವರಿಯಿತಿಂದಿಗೆ ಭೂಪಕೇಳೆಂದಾ
ಮುಂದೆ ಬಂದುದನಿಂನ್ನು ಗೋಪೀ
ವೃಂದವಲ್ಲಭ ಮರಳಿ ಹರಿದುದ
ಸಂಧಿಸುವನ್ನೆ ವೀರನಾರಾಯಣನು ಕರುಣದಲಿ ॥ ೭೪ ॥

ಇತಿ ಶ್ರೀ ಮಹಾಭಾರತೇ ಶತಸಹಸ್ರಸಂಹಿತಾಯಾಂ ಶ್ರೀ ಆದಿಪರ್ವಣಿ ಶಾಂತ ಸ್ವರ್ಗಾರೋಹಣ ವಿಚಿತ್ರ ವೀರ್ಯಮರಣ ಶಿಖಂಡಿಯ ಜನನವರ್ನಾನಾಂ ಶ್ರೀಕ್ರುಷ್ಣ ಪೂಜ್ಯಾಸ್ತು ॥ ಸಂಧಿ ೧೮ ಕಂ ಶ್ಲೋಕ ೬ ಕಂ ಪದನೂ ೧೨೧೬ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ಮಹಾಭಾರತದ ಆದಿಪರ್ವದಲ್ಲಿ ವಿಚಿತ್ರವೀರ್ಯನ ಮರಣ ಮತ್ತು ಶಿಖಂಡಿಯ ಜನನದವರೆಗಿನ ಕಥಾಭಾಗ.

ವಿಶೇಷ : ಈ ಆದಿಪರ್ವ ಕೆ.೨೧೦ನೆಯ ಪ್ರತಿಯನ್ನು ಹೋಲುತ್ತದೆ. ಹುಳುಗಳು ತಿಂದು ಪ್ರತಿ ಶಿಥಿಲವಾಗಿದೆ. ೫೯, ೬೦ ನೆಯ ಪತ್ರಗಳಿಲ್ಲ. ೭೧, ೧೨೧, ೧೨೭ ಈ ಪತ್ರಗಳು ಮುರಿದಿವೆ. ೧೫೬, ೧೫೭ನೆಯ ಪತ್ರಗಳಲ್ಲಿ ಬರವಣಿಗೆ ಯಿಲ್ಲದೆ ಸ್ಥಳ ಬಿಟ್ಟಿರುವ ಕಡೆ ಇರಬೇಕಾದ ೬-೧೪ರ ವರೆಗಿನ ಪದ್ಯಗಳಿಲ್ಲ.

1171

ಕೆ. ೩೦೫	**ಭಾರತ**	ಭಾಮಿನೀ ಷಟ್ಪದಿ
೧೯.೩" × ೨.೨"	ಕುಮಾರವ್ಯಾಸ	ಸು. ೧೮೩೦
೧–೨೧೨ ಪತ್ರ	೧೦ ಪಂಕ್ತಿ	೮೦ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ॥ ಶ್ರೀ ಗದುಗಿನ ವೀರನಾರಾಯಣಸ್ವಾಮಿಯ ದಿವ್ಯ ಶ್ರೀ ಚರಣಾರವಿಂದವೆ ಗತಿ॥ ಕರ್ನಾಟಕದ ಭಾರತದ ಆದಿಪರ್ವ..........

ರಾಯ ಜನಮೇಜಯಗೆ ವೈಶಂ
ಪಾಯಮುನಿ ಹೇಳಿದನು ಮುನಿದ್ವೈ
ಪಾಯನಭಿವರ್ನಿಸಿದ ಭಾರತ ಕಥನ ಕೌತುಕವಾ ॥
ಪದನೂ ॥ ಶ್ರೀವನಿತೆಯರಸನೆ ವಿಮಲರಾ
ಜೀವ ಪೀಠನೇ ಜನಕ ಜಗಗತಿ
ಪಾವನನೆ ಸನಕಾದಿ ಸಜ್ಜನ ನಿಕರದಾತಾರಾ
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುಪಾತನ ಜನವ ಗದುಗಿನ ವೀರನಾರಾಯಣಾ ॥ ೧ ॥

ಅಂತ್ಯ : ಬಲದ ಮುಂಗುಡಿ ಭೀಮನದು ನಡು
ಗಲಿಯೊಳಾತನ ಕಾಹು ಬೀಡಿನ
ವಳಯದಾರೈಕೆಗಳು ಸಾತ್ಯಕಿ ನಕುಲ ಪಾರ್ಥರಿಗೆ
ಬಲ ಬಹಾಂಬುಧಿಯೊಳಗಿರುಳು ತರ
ವಳಿಕೆ ಹೈಡಿಂಬನದು ಪಾಂಡವ
ರುಳಿವು ಗದುಗಿನ ವೀರನಾರಾಯಣನ ಸುಯಿಧಾನಾ ॥ ೨೦ ॥

ಅಂತ್ಹೂ ಸಂಧಿ ೧೩ ಕ್ಕಂ ಪದನೂ ೭೮೯ ಕ್ಕಂ ಮಂಗಳ ಮಹಾಶ್ರೀ. ಶ್ರೀಮದ ಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದ ಮಕರಂದ ಮಧುಪಾಲ ಪರೀಕ್ಷಿತ ವಚೋ ಷಟ್ಪದಿ ನಿಕಾಯ ಶ್ರೀಮತ್ಕುಮಾರವ್ಯಾಸ ಯೋಗೀಂದ್ರ ವಿರಚಿತಮಪ್ಪ ಕರ್ನಾಟಕ ಮಹಾಭಾರತ ಕಥಾಮಂಜರಿಯೊಳು ಉದ್ಯೋಗ ಪರ್ವ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಭಾರತದ ಮೊದಲ ಐದು ಪರ್ವಗಳ ಕಥೆ.

ವಿಶೇಷ : ಅಲ್ಲಲ್ಲಿ ಗರಿಗಳು ಮುರಿದು ಹೋಗಿವೆ. ಅಂಚುಗಳಲ್ಲಿ ತ್ರುಟಿತ. ೨೧೨ ನೆಯ ಗರಿಯಲ್ಲಿ "ಸರ್ವಜಿತು ಸಂವತ್ಸರ ಚೈತ್ರ ಶು. ೧೪ ಯು ಚೆಂದ್ರ ವಾರ ಹಸ್ತನಕ್ಷತ್ರದ ಕರ್ಕಾಟಕ ಲಘ್ನದಲ್ಲಿ ಬರದು ಪೂರ್ನವಾಯಿತೂ ಶ್ರೀ" ಎಂದಿದೆ.

1172

ಕೆ. ೩೭೫	**ಭಾರತ**	**ಭಾಮಿನೀಷಟ್ಪದಿ**
೧೭.೫" × ೧.೫"	ಕುಮಾರವ್ಯಾಸ	ಸು. ೧೪೩೦
೧–೭೯ ಪತ್ರ	೭ ಪಂಕ್ತಿ	೮೬ ಅಕ್ಷರ

ಆದಿ : ಶ್ರೀಸದಾನಂದ ದತ್ತಾತ್ರೇಯ ನಮಃ ||
ಬಂದು ಕಂಡನು ಸಂಜಯ್ಯನು ಯೆಮ
ನಂದನನಲ್ಲಿಂದ ಮರಳಿದು
ಬಂದು ಕೌರವನೃಪತಿಗರುಹಿದನವರ ಮಾತುಗಳಾ ||
ಯೆಲೆ ಪರೀಕ್ಷಿತತನೆಯ ಕೇಳು....
....
ಪಲುಗುಣಗೆ ಕೈಗೊಡುವನೋ ಕೌರವರಿಗೊಳಗಹನೋ
ತಿಳಿ............ತಿರಲು ಬಲಗಂ
ಣಲುಗಿತಿದಿರಲಿ ಕೈಯ್ಯ ಗುಡಿಯಲಿ
ಸುಳಿದನೊಬ್ಬನು ಬಹಳ ಮಾಗ್ಗಶ್ರಮದ ಭಾರದಲಿ || ೧ ||

ಅಂತ್ಯ : ....ವೊಳ್ಳಿತ್ತೈ ಕುರು
ರಾಯನದ್ಭುದಯ ಪ್ರಪಂಚಕ
ಸಾಯಕದ ಸಂಧಾನವೊಡಬಡದೆಂನ ಚಿತ್ತದಲಿ
ಸಾಯಕವನೀನುರಕೆ ತೊಡು ನಿ
ರ್ದ್ದಾಯದಲಿ ಜಯವಹುದಲಾ ರಾ
ಧೇಯಯೆಂದನು ಶಲ್ಯನವನೀಪಾಲ ಕೇಳೆಂದಾ || ೧೫ ||

ವಿಷಯ : ಭಾರತದಲ್ಲಿ ಶ್ರೀ ಕೃಷ್ಣನ ಸಂಧಾನದಿಂದ ಕರ್ಣನು ಸೇನಾಧಿಪತಿಯಾಗಿ ಯುದ್ಧಮಾಡಿದ ವರೆಗಿನ ಕಥೆ.

ವಿಶೇಷ : ಅಸಮಗ್ರ. ಶಿಥಿಲಪ್ರತಿ. ಗರಿಗಳು ಮುರಿದಿವೆ. ಶಕಟರೇಫವಿದೆ. ಕರ್ಣ ಪರ್ವದ ೨೫ನೆಯ ಸಂಧಿ ೧೫ ನೆಯ ಪದ್ಯದವರೆಗಿನ ಕಥಾಭಾಗವಿದೆ.

1173

ಕೆ. ೫೪೦ **ಭಾರತ** ಭಾಮಿನೀಷಟ್ಪದಿ

೧೯.೭" × ೨.೫" ಕುಮಾರವ್ಯಾಸ ಸು. ೧೪೩೦

೧–೧೯೧ ಪತ್ರ ೧೨ ಪಂಕ್ತಿ ೪೬ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ॥ ಮಹಾಭಾರತ ಆದಿಪರ್ವ ಆದಿಯಾಗಿ ಬರವ ಪಸ್ತುಕಕ್ಕೆ ಆಚಂದ್ರಾರ್ಕಮಸ್ತು ॥ ವಿಕ್ರಮ ಸಂವತ್ಸರದ ಕಾರ್ತೀಕ ಶುದ್ಧ ೩ ಬುದವಾರ ಪ್ರಾರಂಭ ॥

ಶ್ರೀಸಕಲ ಜಗವಂದ್ಯವಂಕುಶ
ಪಾಶಮೋದಕ ಪರಶುಧರ ವಿ
ಘ್ನೇಶ ಗಜಮುಖ ಗಣಪ ಲಂಬೋದರ ಮಹಾಕಾಯಾ
ವಾಸವಾರ್ಜಿತ ಕಮಲಭವ ಗಿರಿ
ಜೇಶ ಹರಿಪೂಜಿತ ವಿನಾಯಕ
ಯಿಶಸುತ ರಕ್ಷಿಸುಗೆ ನಂಮನು ಪಾರ್ವತೀತನಯಾ ॥ ೧ ॥
ಶ್ರೀವನಿತೆಯರಸನು ವಿಮಳ ರಾ
ಜೀವ ಪೀಠನ ಪಿತನು ಜಗಕತಿ
ಪಾವನನು ಸನಕಾದಿ ಸಜ್ಜನ ನಿಕರದಾತಾರಾ
ರಾವಣಾಸುರಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನರ ಗದುಗಿನ ವೀರನಾರಯಣಾ ॥ ೨ ॥

ಅಂತ್ಯ : ಬಲದ ಮುಂಗುಡಿ ಭೀಮನದು....
ಗಳಿಯೊಳಾತನ ಕಾಹು ಬೀಡಿನ
ವಳಯುದಾರೈಕೆಗಳು ಸಾತ್ಯಕಿ ನಕುಲ ಪಾರ್ಥರಿಗೇ
ಬಲಮಹಾಂಬುಧಿಯೊಳಗಿರುಳು ಕರ
ವಳಿಕೆ ಹೈಡಿಂಬನದು ಪಾಂಡವ
ರುಳಿವು ಗದುಗಿನ ವೀರನಾರಾಯಣನ ಸ್ಕದಾನಾ ॥ ೪೯ ॥

ಅಂತು ಸಂಧಿ ೧೨೪ಕ್ಕಂ ಪದ ೭೪೫೫ಕ್ಕಂ ಮಂಗಳಮಹಾಶ್ರೀ.
ಅಂತೂ ಪರ್ವ ೫ಕ್ಕಂ ಸಂಧಿ ೮೦ಕ್ಕಂ ಪದನು ೪೭೨೭ಕ್ಕಂ ಮಂಗಳಮಹಾಶ್ರೀ.
ವಿಷು ಸಂವತ್ಸರದ ಆಶಾಢಶುದ್ಧ ೧೨ ವರೀಗೆ ಬರದ ಭಾರತಪರ್ವ ೫
ಬರದು ಸಂಪೂರ್ಣವಾದ ಭಾರತ ಪಸ್ತುಕಕ್ಕೆ ಆಚಂದ್ರಾರ್ಕಮಸ್ತು.

ವಿಷಯ : ಭಾರತದಲ್ಲಿ ಆದಿಯಿಂದ ಯುದ್ಧಕ್ಕೆ ಸೇನೆಯು ಸಿದ್ಧವಾದವರೆಗಿನ ಕಥೆ.

ವಿಶೇಷ : ಮೊದಲ ಐದು ಪರ್ವಗಳು ಸಮಗ್ರ. ಪ್ರತಿ ಸಂಧಿಯೂ ಪ್ರಾರಂಭವಾಗುವ ಗರಿಯ ಒಂದು ಅಂಚಿನಲ್ಲಿ ಆ ಸಂಧಿಯ ವಿಷಯಸೂಚಿ ಇದೆ. ೧೧೮ನೇ ಪತ್ರಕ್ಕೆ ಕ್ರಮಾಂಕ ಇಲ್ಲ. ಕ್ರಮಾಂಕ ೧೬೦ಕ್ಕೆ ಪ್ರತಿಯಾಗಿ ೧೫೦ ಎಂದು ಬರೆದು ಅದನ್ನೇ ಮುಂದುವರಿಸಿರುವುದರಿಂದ ಒಟ್ಟು ಪತ್ರಗಳ ಸಂಖ್ಯೆ ೨೦೧ ಆಗುತ್ತದೆ.

1174

ಕೆ. ೫೪೧	**ಭಾರತ**	ಭಾಮಿನೀಷಟ್ಪದಿ
೧೮ × ೨.೨"	ಕುಮಾರವ್ಯಾಸ	ಸು. ೧೪೩೦
೧–೩೪೧ ಪತ್ರ	೧೨ ಪಂಕ್ತಿ	೧೦೦ ಅಕ್ಷರ

ಆದಿ : ಶ್ರೀ ಗಣಾಧಿಪತಯೆ ನಮಃ ॥ ಚಿಲ್ಲುಗುಡ್ಡೆ ಸಿದ್ದಿವಿನಾಯಕ ಸ್ವಾಮಿಯವರ ಶ್ರೀ ಚರಣಾರವಿಂದವೇ ಗತಿ. ಪ್ರಮೋದ ಸಂವತ್ಸರದ ಆಶ್ವೀಜ..........ಡ ಮಹಾಭಾರತವ ಬರವುದಕ್ಕೆ ನಿರ್ವಿಘ್ನಮಸ್ತೂ ॥ ನಾಂದಿಪದ ॥

ಶ್ರೀ ವನಿತೆಯರಸನೆ ವಿಮಲರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರಾ
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರೆಯಣಾ ॥ ೧ ॥

x x x x

ಪಲ್ಲ ॥ ರಾಯ ಜನಮೇಜಯಗೆ ವೈಶಂ
ಪಾಯನನು ವಿವರಿಸಿದನಾ ದ್ವೈ
ಪಾಯನನು ವಿವರಿಸಿದ ಭಾರತ ಕಥನ ಕೌತುಕವಾ ॥

ಅಂತ್ಯ: ದೇವದುಂದುಭಿರವದ ಗಗನದ
ಹೂಮಳೆಯ ಪೂರದ ಸಮಸ್ತ ಜ
ನಾವಳಿಯ ಜಯಜಯದ ನಿರ್ಘೋಶ ಘಡಾವಣೆಯಾ

ದೇವಕಿಯು ವಸುದೇವ ರುಕುಮಿಣಿ
ದೇವಿಯಾದಿಯ ಹರ್ಷ ಠಾವಿನ
ಭಾವ ಮಿಗೆ ನಿಜಪುರವ ಹೊಕ್ಕನು ವೀರನಾರೆಯಣಾ || ೧೩ ||
ಅಂತು ಸಂಧಿ ೧೩ ಕ್ಕಂ ಪದ ೮೫೫ ಕಂ ಮಂಗಳಮಹಾಶ್ರೀ ಹೊರಬಲಿ ಕಾಳಯ್ಯನಾಯ್ಕರಿಗೆ ಸೋಮನ ಪಾಲಲ್ಲುಯಿರುವ ನಾರ್ಣಪ್ಪನ ಬರಕೊಟ್ಟ ಭಾರತಕ್ಕೆ ಆಚಂದ್ರಾರ್ಕಮಸ್ತು.

ವಿಷಯ : ಮಹಾಭಾರತದ ಆದಿಯಿಂದ ಸ್ತ್ರೀಪರ್ವದ ೧೩ನೇ ಸಂಧಿವರೆಗಿನ ಕಥಾ ಭಾಗ.

ವಿಶೇಷ : ಸಮಗ್ರ. ಕೆಲವು ಗರಿಗಳನ್ನು ಬಿಟ್ಟರೆ ಪ್ರತಿ ಉತ್ತಮ ಸ್ಥಿತಿಯಲ್ಲಿದೆ. ಬರಹವು ಸ್ಫುಟ. ೩,೫೫ನೇ ಗರಿಯ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆ ಯಿದೆ. ಇದರಲ್ಲಿ ದಶಪರ್ವಗಳು ಮಾತ್ರ ಕುಮಾರವ್ಯಾಸನಿಂದ ರಚಿತವಾಗಿವೆ.

1175

ಕೆ. ೫೪೨	**ಭಾರತ** (ಆದಿಪರ್ವ)	ಭಾಮಿನೀಷಟ್ಪದಿ
೧೫.೪" × ೨"	ಕುಮಾರವ್ಯಾಸ	ಸು. ೧೪೩೦
೧–೧೭೨ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : || ಶ್ರೀ ಗಣಾಧಿಪತಯೇ ನಮಃ || ಕಂನಡ ಕಾವ್ಯದಲ್ಲು ಶ್ರೀ ಮಹಾಭಾರಥ
ಬರವುದಕ್ಕೆ ಶುಭಮಸ್ತು || ನಿರ್ವಿಘ್ನಮಸ್ತೂ ||
ನಾಂಧಿ || ಪದಾ || ಶ್ರೀವನಿತೆಯರಸನೆ ವಿಮಳ ರಾ
ಜೀವ ಪೀಠನ ಪಿಥನೆ ಜಗತೀ
ಪಾವನನೆ ಸನಕಾದಿ ಸಜ್ಜನ ನಿಕರದಾತಾರಾ
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನರ ಗದುಗಿನ ವೀರನಾರಾಯಣಾ ||

x x x x

ಯಿಂತ್ರೀ ನಾಂದಿಪದ ಸಮಾಪ್ತಃ ||| ಶ್ರೀ
ಪಲ್ಲಾ || ರಾಯ ಜನಮೇಜಯಗೆ ವೈಶಂ
ಪಾಯಮುನಿ ಹೇಳಿದನು ಮುನಿದ್ವೈ
ಪಾಯನನು ವಿರಚಿಸಿದ ಭಾರಥ ಕಥನ ಕವುತಕವಾ ||

ಅಂತ್ಯ : ಧಾರುಣೀಶ್ವರರೈವರನು ಸುಕು
ಮಾರವರ್ಗವನಾ ಸುಭದ್ರಾ
ನಾರಿಯನು ಪಾಂಚಾಲೆಯನು ತತ್ಸಕಲಭಾಂದವರಾ
ಸೂರಿಗಳ ಶಚಿವಾದಿ ನೃಪ ಪರಿ
ವಾರವನು ಪತಿಕರಿಸಿ ಬಂದನು
ದ್ವಾರಕಿಗೆ ವರುಷದಲಿ ಗದುಗಿನ ವೀರನಾರಾಯಣಾ || ೬೮ ||
ಅಂತ್ಯೂ ಸಂಧಿ ೧೯ ಕ್ಕಂ ಪದ ೯೫೦ ಕ್ಕಂ ಮಂಗಳ ಮಹಾಶ್ರೀ. ಆದಿಪರ್ವ ಸಮಾಪ್ತ.

ವಿಷಯ : ಮಹಾಭಾರತದಲ್ಲಿ ಆದಿಪರ್ವದ ಕಥೆ.

ವಿಶೇಷ : ಬರಹ ಸುಂದರ. ೮೫, ೮೬, ೧೩೧, ೧೬೪-೧೭೨ ಈ ಗರಿಗಳು ತ್ರುಟಿತ. ೧೩೫ನೇ ಗರಿಯ ಒಂದು ಕಡೆ ಮಾತ್ರ ಬರವಣಿಗೆಯಿದೆ.

1176

ಕೆ. ೫೬೭	ಭಾರತ	ಭಾಮಿನೀಷಟ್ಪದಿ
೨೪.೯"×೧.೪"	ಕುಮಾರವ್ಯಾಸ	ಸು. ೧೪೩೦
೩–೩೧೩ ಪತ್ರ	೧೨ ಪಂಕ್ತಿ	೧೧೦ ಅಕ್ಷರ

ಆದಿ : ಯಲೆ ಹುತಾಶನ ಭೂತಭಾವನ
ಯಲೆ ಸಮಸ್ತ ಪ್ರಾಣಿ ಜೀವನ
ಯಲೆ ಚರಾಚರ ಚೇಟರಾಶಿ ಸಮಸ್ತ ರಾಶಿ
ಯಲೆ ನವೀನನೆ ಲೋಕಪಾಲನೆ
ಹೊಳಹುದೋರು ಮಹಾತ್ಮಯನು ತಾ
ನಳಿನನಭವನಾಖ್ಯಾತಿಸಲು ವೈದೋರಿದನು ವಹ್ನಿ ||೧೨ ||

ಅಂತ್ಯ : ವೀರನಾರಾಯಣನೆ ಸುಕವಿಯು
ವೀರ ನಾರಾಯಣನೆ ಗಮುಕಿಯು
ವೀರನಾರಾಯಣನೆ ವಾ....ವಾಗ್ಮಿ ತಾನೆನಿಸಿ
ವೀರನಾರಾಯಣನೆ ಪೇಳ್ದನು
ವೀರನಾರಾಯಣನೆ ಕೇಳ್ದನು
ವೀರನಾರಾಯಣನೆ ಗದುಗಿನ ವೀರನಾರಾಯಣನಾ || ೨೪ ||
ಅಂತು ಗದಾಪರ್ವ ವಂದಕ್ಕೆ ಸಂಧಿ ೧೫ ಕ್ಕಂ ಪದನೂ ೬೩೪ ಕ್ಕಂ ಮಂಗಳ ಮಹಾಶ್ರೀ.

ವಿಷಯ : ಮಹಾಭಾರತದ ಆದಿಯಿಂದ ಗದಾಪರ್ವಾಂತ್ಯದವರೆಗಿನ ಕಥಾಭಾಗ.

ವಿಶೇಷ : ಅಸಮಗ್ರ ಮತ್ತು ತ್ರುಟಿತ. ಅಲ್ಲಲ್ಲಿ ಗರಿಗಳು ತುಂಡಾಗಿವೆ. ಅಕ್ಷರಗಳು, ಗುಂಡಗಿವೆ. ಇದರಲ್ಲಿ ಪೌಲೋಮ ಪರ್ವದ ಕಥೆಯೂ ಇದೆ. ೨, ೬, ೧೨, ೨೧, ೧೧೭, ೧೩೨, ೧೪೪, ೧೬೩, ೧೭೧, ೨೫೩, ೨೮೨, ೨೮೭—ಈ ಪತ್ರಗಳು ಮುರಿದಿವೆ. ೧, ೯, ೧೭, ೪೦, ೪೮, ೫೭, ೫೮,೭೪, ೮೨–೯೯, ೧೦೦, ೧೨೦, ೧೨೨–೧೩೦, ೧೩೪–೧೩೬, ೧೫೯, ೧೬೬, ೧೬೭, ೧೬೯-೧೭೦, ೧೭೫, ೧೭೬, ೧೭೮, ೧೮೧-೧೮೭, ೧೮೯, ೧೯೩-೨೦೪, ೨೦೭, ೨೧೬,೨೧೭, ೨೨೧-೨೨೪, ೨೨೬, ೨೨೯, ೨೩೧, ೨೩೨, ೨೩೫, ೨೪೭, ೨೬೦-೨೬೨, ೨೬೫, ೨೭೩-೨೭೯, ೨೮೩-೨೮೭, ೨೯೬, ೩೦೪—ಈ ಕ್ರಮಾಂಕಗಳ ಪತ್ರಗಳಿಲ್ಲ.

1177

ಕೆ. ೫೯೬	**ಭಾರತ**	**ಭಾಮಿನೀಷಟ್ಪದಿ**
೧೯.೭" × ೨.೩"	ಕುಮಾರವ್ಯಾಸ	ಸು. ೧೪೩೦
೧–೨೩೬ ಪತ್ರ	೧೦ ಪಂಕ್ತಿ	೧೧೦ ಅಕ್ಷರ

ಆದಿ : ಸ್ವಸ್ತಿ ಶ್ರೀರಾಘವೇಂದ್ರ ಗುರುಭ್ಯೋ ನಮಃ ॥ ನಿರ್ವಿಘ್ನಮಸ್ತು॥ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷ ಸಲುವ ಪ್ರಜೋತ್ಪತ್ಯ ನಾಮ ಸಂವತ್ಸರದ ಕಾರ್ತಿಕ ಶು ೭ ಯು ಗುರುವಾರ ಉತ್ರಾಷಾಡ ನಕ್ಷತ್ರ ತೊಲಾ ಲಗ್ನದಲ್ಲಿ ಶ್ರೀಮನ್ಮಹಾಭಾರತ ಪುರಾಣ ಮಂಜರಿಯೊಳು ಪವುಲೋಮ ಪರ್ವ ಆದಿಯಾಗಿ ಬರವ ಹಾಗೆ । ಕುಂಮುಸೆ ಕಲ್ಯಾಣಸಿಂಗ ಹಜಾರ್ರಿಯರ ಪುತ್ರ ಬಹದರ ಸಿಂಗನವರ ಮಗ ಗಂಗಾಧರ್ರ್ಯಯನು ಗ್ರುಹರಕ್ಷಾರ್ಥವಾಗಿ ಬರೆವ ಬಗ್ಗೆ ನೇಮುಕವಾಗಿ ಮಾಡಿದರ ಬರವಾತ

x x x x

ನಾಂದಿ ॥ ಶ್ರೀವನಿತೆಯರಸನೆ ವಿಮಳ ರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರದಾತಾರಾ
ರಾವಣಾಸುರ ಮಥನ ಶ್ರವಣ ಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನರ ಗದುಗಿನ ವೀರನಾರೆಯಣಾ ॥ ೧ ॥

ಅಂತ್ಯ : ವೇದಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನಫಲ ಕ್ರು
ತ್ಯಾದಿ ತಪಸಿನ ಫಲವು ಜ್ಯೋತಿಷ್ಟೋಮ ಯಾಗಫಲಾ

ಮೇದಿನಿಯನೊಲಿದಿತ್ತ ಫಲ ಕಂ
ನ್ಯಾದಿದಾನ ಸಹಸ್ರ ಫಲವಹು
ದಾದರದಿ ಭಾರತವ ಕೇಳ್ವರಿಗೆಂದು ಮುನಿ ನುಡಿದಾ ॥ ೬೩ ॥

ಅಂತ್ಯೂ ಸಂಧಿ ೩೬ ಕಂ ಪದ ೧೮೩೫ ಕಂ ಮಂಗಳ ಮಹಾಶ್ರೀ ಅರಂಣ್ಯಾ ಪರ್ವ ಸಮಾಪ್ತ "ಶ್ರೀ ಕೃಷ್ಣಾರ್ಪಣಮಸ್ತು" ಯಿಾ ಪುಸ್ತಕಕ್ಕೆ ಪವು ಲೋಮದ ಆದಿಯಾಗಿ ಪರ್ವ ಆರಕ್ಕೆ ಸಂಧಿಯಲ್ಲಿ ೧೦೨ ಪದ ೫೮೮೦ಕ್ಕೆ ಮಂಗಳ ಮಹಾ । ಯಿ । ಆಂಗೀರಸ ಸಂವತ್ಸರದ ಜೇಷ್ಟ ಬ ೧೩ ಲು । ಯಿಕ್ಕೇರಿ ಹೋಬಳಿ ವಳಗಣ ತಡಕೋಡಿ ಶೀಮೆದೇವಾಸದ ಗ್ರಾಮದ ಕೆರೆ ಕೈಯ್ಯ ತಿಮ್ಮಪ್ಪನ ಮಗ ಸುಬ್ಬಯ್ಯನು । ಕುಂಮಸೆ । ಕಲ್ಯಾಣ ನಿಂಗಹಚಾರ್ರಿ ಮಗ ಬಹದರ ಶಿಂಗದ ಪುತ್ರ ಗಂಗಾಧರ್ರಯ್ಯಗೆ ಬರಕೊಟ್ಟ ಭಾರತಾಂಮ್ರುತ ಶರಧಿಯೊಳಗೆ ಕಂನಡ ಪ್ರಾಕ್ರುತವಂನ್ನು ಬರದು ಮುಗಿದಲ್ಲಿದೆ । ಶ್ರೀಕೃಷ್ಣಾರ್ಪಣಮಸ್ತು ॥

ವಿಷಯ : ಮಹಾಭಾರತದಲ್ಲಿ ಪೌಲೋಮಪರ್ವದಿಂದ ಅರಣ್ಯಪರ್ವದ ವರೆಗಿನ ಕಥಾಭಾಗ.

ವಿಶೇಷ : ಅಕ್ಷರ ಸುಂದರವಾಗಿದೆ. ಕೆಲವು ಪತ್ರಗಳಿಗೆ ಒಂದಂಚಿನಲ್ಲಿ ರೇಖಾಚಿತ್ರ ವಿದೆ. ೨೫, ೧೮೮, ೨೧೮ ಈ ಪತ್ರಗಳ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆ ಇದೆ.

1178

ಕೆ. ೬೧೦	**ಭಾರತ**	ಭಾಮಿನೀಷಟ್ಪದಿ
೧೭.೩" × ೧.೪"	ಕುಮಾರವ್ಯಾಸ	ಸು ೧೪೩೦
೧–೩೪೨ ಪತ್ರ	೭ ಪಂಕ್ತಿ	೬೮ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ॥ ಭಾರತ ಯುದ್ಧಪಂಚಕಾ ॥ ಭೀಷ್ಮಪರ್ವಾ ॥ ಶುಭಮಸ್ತು ॥

ಸೂಚನೆ ॥ ವೈರಿಭಟ ಕುಲವಿಲಯರುದ್ರನು
ದಾರ ತೇಜೋನಾ ಭದ್ರನಾ ಭಾ
ಗೀರಥಿಯ ಸುತ ಧರಿಸಿದನು ಕುರುಶೇನೆಯೊಡೆತನವಾ ॥
ಪದನೂ ॥ ಕೇಳು ಜನಮೇಜಯ ಧರಿತ್ರೀ
ಪಾಲ ಕೌರವರಾಯನಲ್ಲಿಗೆ
ಕಾಳಗದ ಕಾತರಿಗರಟ್ಟಿದ ಮಾತರೈತಂಮಾ

ಹೇಳಿದರು ಕುರುಭೂಮಿಯಲಿ ರಿಪು
ಜಾಲದುದಯವನಂದು ಕುರುಕುಲ
ಮೌಳಿ ಬರಿಶಿದ ಪರಿಮಿತಕೆ ತಂನಾಪ್ತಮಂತ್ರಿಗಳಾ ॥ ೧ ॥

ಅಂತ್ಯ : ವೇದಪುರುಷನ ಸುತನ ಸುತನ ಸ
ಹೋದರನ ಮೊಮ್ಮಗನ ಮಗನ ತ
ಳೋದರಿಯ ಮಾತುಳನ ಮಾವನ ಸಮರಭೂಮಿಯಲೀ
ಕಾದಿ ಗೆಲಿದನ ಅಂಣನಮ್ವೆಯ
ನಾದುನಿಯ ಜಠರದಲಿ ಜೆನಿಸಿದ
ಆದಿಮೂರುತಿ ಸಲಹು ಗದುಗಿನ ವೀರನಾರಯಣಾ ॥ ೪೪ ॥

X X X X

ಅಂತೂ ಸಂಧಿ ೧೩ಕಂ ಪದನೂ ೬೪೦ ಕಂ ಮಂಗಳಮಹಾಶ್ರೀ ॥ ಗದ್ಯಾ ॥ ಯಿತಿ ಶ್ರೀಮದಚಿಂತ್ಯಾ ಗದುಗಿನ ವೀರನಾರಾಯಣ ಚರಣಾರವಿಂದ ಮಕರಂದ ಮಧುಪಾನ ಪರೀಕ್ಷಿದ್ವಾಜೋಷಟ್ಪದನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ನಾಟಕ ಭಾರತಕಥಾಕುಸುಮ ಮಂಜರಿಯೊಳ್ ಗದಾಪರ್ವ ಸಂಪೂರ್ನಂ ॥ ಕ್ರೋಧಿ ಸಂವತ್ಸರದ ಕಾರ್ತಿಕ ಬ ೧೦ಯಲ್ಲು ಜಂಗಮಕೋಟೆ ತಾಲೂಕು ಕಸಬಾ ಸುಗುಟೂರು ಸ್ತಳ ಶಾನುಭೋಗಾ ಭಾಸ್ಕರಪ್ಪನವರ ಕೊಮಾರ ಗುಂಡಪ್ಪನ ತಂದ್ಮೂಲ ಲಕ್ಷ್ಮೀನರಸನು ಪುತ್ರ ಪೌತ್ರ ಪಾರಂಪರ್ಯವಾಗಿ ವೋದಿಕೊಳುವುದಕೆ ಬರದಂಥಾ ಭಾರತಯುದ್ಧ ಪಂಚಕ ಪುಸ್ತಕಕ್ಕೆ ಆಯು ಐಶ್ವರ್ಯಾಭಿವೃದ್ಧಿರಸ್ತು.

ವಿಷಯ : ಮಹಾಭಾರತದ ಭೀಷ್ಮ, ದ್ರೋಣ, ಕರ್ಣ, ಶಲ್ಯ ಮತ್ತು ಗದಾಪರ್ವಗಳ ಕಥೆ.

ವಿಶೇಷ : ಸುಂದರ ಬರಹ. ಸಂಧಿ ಪ್ರಾರಂಭವಾಗುವ ಪತ್ರಗಳ ಒಂದು ಅಂಚಿನಲ್ಲಿ ಸಂಧಿಯ ಕಥಾಸೂಚನೆಯಿದೆ.

1179

ಕೆ.ಎ. ೫೭	**ಭಾರತ**	ಭಾಮಿನೀಷಟ್ಪದಿ
೧೨.೧" × ೮.೩"	ಕುಮಾರವ್ಯಾಸ	ಸು. ೧೪೩೦
೧-೭೩೩ ಪುಟ	೩೩ ಪಂಕ್ತಿ	೧೪ ಅಕ್ಷರ

ಆದಿ : ಭಾರತವು, ಆದಿಪರ್ವ, ಭಾಮಿನಿ ಷಟ್ಪದಿ ೧. ಸಂಧಿ.
ಶ್ರೀವನಿತೆಯರಸನೆ ವಿಮಲರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರಾ ॥

ರಾವಣಾಸುರ ಮಥನ ಸವಣ ಸು
ಥಾ ವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರಾಯಣಾ || ೧ ||

X X X X

೨. ಸಂಧಿ.

ಸೂಚನೆ || ರಾಯ ಜನಮೇಜಯಗೆ ವೈಶಂ
ಪಾಯ ಮುನಿ ಹೇಳಿದನು ಮುನಿದೊಯಿ
ಪಾಯನಭಿವರ್ಣಿಸಿದ ಭಾರತ ವರ ಕಥಾಮೃತವಾ ||
ಪದ || ಸೂತನೈತಂದನು ಜಗದ್ವಿ
ಖ್ಯಾತ ಶೌನಕ ಮುಖ್ಯ ಮುನಿ ಸಂ
ಘಾತ ಪಾವನ ನೈಮಿಶಾರಣ್ಯಕ ವರಾಶ್ರಮಕೇ
ಆತನನು ಕಂಡುದು ತಪಸ್ವೀ
ವ್ರಾತ ಕುಶಲ ಕ್ಷೇಮ ಮಧುರ
ಪ್ರೀತಿ ವಚನಾಮೃತದಿ ಸಂಭಾವನೆಯ ಮಾಡಿದರೂ || ೧ ||

ಅಂತ್ಯ : ಆದುದಭಿಮನ್ಯುವಿನ ಮದುವೆ ಮ
ಹಾ ದಯಾಂಬುಧಿ ಕೃಷ್ಣರಾಯನ
ಪಾದದರುಶನವಾಗಲಿಮ್ಮಡಿಸಿತ್ತು ನಮ್ಮುದಯಾ
ಮೇದಿನಿಯ ನಾವತ್ತೆಯಿಟ್ಟೆವು
ಕಾದುಕೊಂಡೆವು ಸತ್ಯವನು ಮೇ
ಲಾದುದನು ನೀ ಕರುಣಿಸೆಂದರು ವೀರನರಯಣನಾ || ೪೫ ||

ಅಂತು ಸಂಧಿ ೧೦ಕ್ಕೆ ಪದ ೬೪೪ಕ್ಕಂ ಮಂಗಳಂ.

ವಿರಾಟಪರ್ವ ಸಂಪೂರ್ಣವು.

ವಿಷಯ : ಪಾಂಡವ ಕೌರವರ ಜನನದಿಂದ ಅಭಿಮನ್ಯುವಿನ ಮದುವೆಯ ವರೆಗಿನ ಭಾರತದ ಕಥೆ.

ವಿಶೇಷ : ನಾಲ್ಕು ಪರ್ವಗಳು ಸಮಗ್ರ. ಕಲ್ಲಚ್ಚಿನ ಪ್ರತಿ. ಇದನ್ನು ೧೮೫೧ ರಲ್ಲಿ ಮಂಗಳೂರಿನಲ್ಲಿ ಛಾಪಿಸಲಾಗಿದೆ.

1180

ಕೆ.ಎ. ೨೨೭ ಭಾರತ ಭಾಮಿನೀಷಟ್ಪದಿ
೧೪.೨" × ೯.೨" ಕುಮಾರವ್ಯಾಸ ಸು. ೧೮೩೦
೧–೨೭೧ ಪುಟ ೪೧ ಪಂಕ್ತಿ ೪೬ ಅಕ್ಷರ

ಆದಿ : ಶ್ರೀ ಭಾರತ |
ಶ್ರೀ ಗಣಾಧಿಪತಯೇ ನಮಃ ||

ಸೂಚನೆ ॥ ಸೂತನಭಿವರ್ನಿಸಿದನಮಲ
ಖ್ಯಾತ ಪೌಲೋಮುವನು ತತ್ಕುಲ
ಜಾತ ಶೌನಕ ಮುಖ್ಯ ಮುನಿಸಭೆ ಮೆಚ್ಚಲೊಲವಿನಲಿ ॥
ಶ್ರೀಮದಮರ ಪ್ರವರ ಮಕುಟ
ಸ್ತೋಮ ಮಣಿಗಣ ನಿಕರ ಕರ್ಣೋ
ದ್ದಾಮ ದಿವ್ಯ ಪದಾಬ್ಜ ಪೀಠನನಂತ್ತಗುಣ ನಿಲಯಾ
ಭೂಮಿಸುರ ಗೋನಿಲಯವಹ ಸುಮನ
ಸ್ತೋಮ ಕಾರಣ ಮೂರ್ತಿಯಹ ಲ
ಕ್ಷ್ಮೀಮನೋಹರನೀಗೆಮಗೆ ಯಿಷ್ಟಾರ್ಥ ಸಂಪದವಾ ॥ ೧ ॥

ಅಂತ್ಯ : ದೂತರುಗಳೈತಂದುದಾ ಜೀ
ಮೂಜಿ ಕೀಚಕಗೊಂದೆ ಪಥವೆಂ
ದಾತಗಳುಪಚರಿಸಿದರೆಂಬುದ ಹೇಳು ಕುರುನೃಪತಿ ॥ ೨೫ ॥
ಭೀತನಾದನು ಕರಸಿಂಗಾ
ಜಾತ ಮೊದಲಾದಖಿಲ ಜನರಿಗೆ
ಮಾತಸೆಂದಬು ಕೇಳಿದಂತ್ತರ ಬಿಂನಪಾದ ಹದನಾ ॥
ಅಂತು ಸಂಧಿ ೪ ಕ್ಕಂ ಪದ ೨೩೦ ಕ್ಕಂ ಮಂಗಳ ಮಹಾಶ್ರೀ.
(ಇಲ್ಲಿಂದ ಮುಂದೆ ೫ ನೇ ಸಂಧಿಯಲ್ಲಿ ೧೫ ಪದ್ಯಗಳಿವೆ.)

ವಿಷಯ : ಭಾರತದ ಆದಿಯಿಂದ ವಿರಾಟಪರ್ವದಲ್ಲಿ ಕೌರವನು ಕಳುಹಿಸಿದ ಮಲ್ಲರನ್ನು ಭೀಮನು ಗೆದ್ದ ಭಾಗದವರೆಗಿನ ಕಥೆ.

ವಿಶೇಷ : ಕೊನೆಯ ಎರಡು ಪತ್ರಗಳು ತ್ರುಟಿತ. ೨೫೭ ರಿಂದ ಮುಂದಿನ ಪತ್ರಗಳಲ್ಲಿ ಹುಳು ಹೊಡೆದು ರಂಧ್ರ ಬಿದ್ದಿದೆ. ತೆಲುಗು ಲಿಪಿ. ಈ ಪ್ರತಿಯಲ್ಲಿರುವ ಕಥೆಯು ಮುಂದುವರಿದ ಭಾಗ ಕೆ. ಎ. ೨೨೮ ನೇ ನಂಬರಿನ ಪ್ರತಿಯಲ್ಲಿದೆ.

1181

ಕೆ.ಎ. ೨೨೮ ೧	**ಭಾರತ**	ಭಾಮಿನೀಷಟ್ಪದಿ
೧೭″ × ೧೦.೬″	ಕುಮಾರವ್ಯಾಸ	ಸು. ೧೪೩೦
೧–೧೨೮ ಪುಟ	೪೭ ಪಂಕ್ತಿ	೪೨ ಅಕ್ಷರ

ಆದಿ : ಸಾರಥಿಯ ಶಿವ ಕೊಟ್ಟನಾದರೆ
ಮಾರಿಗುರ್ಬಸವಾಗಲಂತಕ
ನೂರ ತುಂಬಿಸೆ ಹಬ್ಬವಾಗದೆ ರಣಪಿಶಾಚರಿಗೆ

ದೋರೆಗರುಳಲಿ ದಾನವರ ವಡ
ಲಾರೆ ತುಂಬದೆ ಡೊಳ್ಳ ನೂಕದೆ
ಭೂರಿಭೇತಾಳರಿಗೆ ಹೋಹದೆ ಬರಿಯ ರಣವೆಂದಾ ॥ ೨೯ ॥

ಅಂತ್ಯ : ಕೈದಣಿಯ ಹೊಯಿದರಿಯ ಸೀಳಿದು
ಬಾಯಿದಣಿಯ ಮೂದಲಿಸಿ ಪೆರ್ಚಿದು
ವೈದಣಿಯೆ ರಿಪುಭಟನ ವೈಲವಿಗಾಯವನು ಪಡದೂ
ಹೋಯ್ದು ಮೂಳೆಯ ಸುರಿವ ರಕುತದ
ತುಯ್ದು ರಕ್ತಾಂಬರದಿ ತಾನಿರ
ಲೈದಿ ಕುರುಪತಿ ಬಂದು ಕಂಡರೆ ಧಂನ್ಯನಾನೆಂದಾ ॥ ೪೨ ॥
ಅಂತು ಸಂಧಿ ೮ಕ್ಕಂ ಪದ ೨೭೮ಕ್ಕಂ ಮಂಗಳಂ ಶ್ರೀ.

ವಿಷಯ : ಪಾಂಡವ ಕೌರವರ ಕಥೆಯಲ್ಲಿ ವಿರಾಟಪರ್ವದಿಂದ ಕರ್ಣಪರ್ವದ ವರೆಗಿನ ಕಥೆ.

ವಿಶೇಷ : ಅಸಮಗ್ರ. ವಿರಾಟಪರ್ವದ ೭ನೆಯ ಸಂಧಿಯ ಮಧ್ಯಭಾಗದಿಂದ ಕರ್ಣ ಪರ್ವ ೮ನೆಯ ಸಂಧಿಯವರೆಗೆ ಮಾತ್ರ ಇದೆ. ಮುಂದೆ ೯ನೆಯ ಸಂಧಿಯಲ್ಲಿ ೩ ಪದ್ಯಗಳಿವೆ. ಆದಿ, ಅಂತ್ಯದ ಕೆಲವು ಪತ್ರಗಳನ್ನು ಹುಳು ತಿಂದಿದೆ. ಇದೇ ಪುಸ್ತಕದಲ್ಲಿ ಶುಕಸಪ್ತತಿ ಕಥೆಯೂ ಇದೆ. ತೆಲುಗು ಲಿಪಿ. ಮಧ್ಯದಲ್ಲಿ ಕೆಲವು ಶುದ್ಧ ಪತ್ರಗಳಿವೆ.

1182

ಕೆ. ೩೯೪/೧	**ಭಾರತ**	ಭಾಮಿನೀಷಟ್ಪದಿ
೧೯.೪" × ೨.೧"	ತಿಮ್ಮಣ್ಣಕವಿ	೧೫೧೦
೧–೧೫೦ ಪತ್ರ	೧೧ ಪಂಕ್ತಿ	೧೦೩ ಅಕ್ಷರ

ಆದಿ : ಶ್ರೀ........ಶಾರದಾ ಗುರುಭ್ಯೋ ನಮಃ॥ ....ಕಂನಡ ಭಾರತದಲ್ಲಿ ಶಾಂತಿ ಪರ್ವಾ ॥ ಬರಯುದಕಾ ನಿರ್ವಿಘ್ನಮಸ್ತು ॥ ರಾಮುಸ್ವಾಮಿಯವರ ದಿವ್ಯ ಚರಣಾರವಿಂದವೇ ಗತ್ತಿ ॥
ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರದಾತಾರಾ
ರಾವಣಾಸುರ ಮಥನ ಶ್ರವಣ ಸು
ಧಾ ವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರ್ರೆಯಣಾ ॥ ೧ ॥

x x x x

ಯೆನೆ ಹಸಾಧವೆನುತ್ತ ಕೈಕೊಂ
ಡನಘ ಭಾರತ ಕಥೆಯ ಕಡಮೆಯ
ಜನಪನರಸಯು ಕ್ರುಷ್ಣರಾಯನಿಗಂಕಿತವ ಮಾಡೀ
ಮನವೊಲಿದು ಕವಿಭಾನು ಭಟವರ
ತನುಜ ತ್ರಿಂಮಂಣನಖಿಳ ವಿದ್ವ
ಜ್ಜನ ನಲಿವವೊಲು ಪೇಳ್ದ ಮುಂದಣ ವರಕಥಾಂಮ್ರುತವಾ || ೨೯ ||

ಅಂತ್ಯ : ನರಸಭೂಪನ ಕ್ರುಷ್ಣರಾಯಗೆ
ವರ ಯಶವು ನಿಲುವಂತೆ ಕವಿ ಭಾ
ಸ್ಕರತನೂಜನುಜನು ತ್ರಿಂಮ್ಮಣಾರ್‍ಯನು ಪೇಳ್ದ ಭಾರತಉೀ
ಪರಮಹರ್‍ರುಷವ ಕೊಡುತ ಕೇಳ್ದಾ
ದರಿಸಿದವರ್‍ರೆಲ್ಲರಿಗೆ ಸುಶ್ರೀ
ಕರವೆನಿಸಿ ಶುಭವೆನಿಸಿಯಾಚೆಂದ್ರಾರ್ಕವೆಸದಿರಲೀ || ೮೯ ||
ಸ್ವರ್ಗಾರೋಹಣಾ ಸಮಾಪ್ತ ಜಯಮಂಗಳಮಹಾ ಶ್ರೀ ಶಾಂತಿಪರ್ವ ೧ಕೆ| ಸಂಧಿ ೧೦ಕೆ | ಪದಾ ೧೦೫೬ ಆನುಶಾಸನಪರ್ವ ೧ಕೆ ಸಂಧಿ ೧೨ಕೆ ಪದಾ ೧೧೪೦ ಅಶ್ವಮೇಧಪರ್ವ ವಂ ೧ಕೆ | ಸಂಧಿ ೯ಕೆ ಪದಾ ೯೭೫ | ಆಶ್ರಮವಾಸ ಪರ್ವ ೧ಕೆ | ಸಂಧಿ ೪ಕೆ | ಪದ ೪೨೯ ಮುಸಲಪರ್ವ ೧ಕೆ | ಸಂಧಿ ೩ಕೆ | ಪದ ೨೩೩ ಮಹಾ..........|
ಅಂತ್ತು ಪರ್ವ ೭ಕ್ಕೆ ಸಂಧಿ ೪೦ಕ್ಕೆ ಪದಾ ೩೯೫೦ಕ್ಕೆ ಜಯಮಂಗಳಮಹಾಶ್ರೀ ಯಿಾ ಕೃಷ್ಣರಾಯಭಾರತಾವ ಬರದವನು ಹರಿತಸಗೋತ್ರದ ಆಲ್ಯಾಯ ಸೂತ್ರದ ಯಜುಶ್ಯಾಖಾದ್ಯಾಯದ ಬೆಳ್ಳೂರ ಕಪ್ಪೈಯನವರಿಗೆ ಪುತ್ರನಾದ ಸಿವೈಯನವರಿಗೆ ಪುತ್ರನಾದ ಕಪುನರಸಿಂಹ್ಯನು ಬರದ ಪಂಚಮ ವೇದಕ್ಕೆ ಜಯಮಂಗಳಮಹಾಶ್ರೀ–ಕಲಿಯುಗದ ಪ್ರಥಮಪಾದದ ಅಸ್ಮಿರ್ಂ ವರ್ತಮಾನದ ರೌದ್ರಿ ನಾಮ ಸಂವತ್ಸರದ ಆಸ್ವೀಜ ಬ ೫ ಸೋಮವಾರ ದಿವಸ ಉದಯ ವಾದ ಯಂಟನೇ ಗಳಿಗೆಯಲ್ಲಿ ನಾನು ನಂನ್ನ ಸ್ವಂತವಾಗಿ ಬರದ ಭಾರತದ ಪಸ್ತುಕಕ್ಕೆ ಜಯಮಂಗಳಮಹಾಶ್ರೀ.

ವಿಷಯ : ಭಾರತದಲ್ಲಿ ಶಾಂತಿಪರ್ವದಿಂದ ಮುಂದಿನ ಕಥೆ.

ವಿಶೇಷ : ಸಮಗ್ರ; ಆದರೆ ಅಲ್ಲಲ್ಲಿ ತ್ರುಟಿತ. ೪೯ನೆಯ ಪತ್ರ ಲುಪ್ತ. ೬೯ನೆಯ ಪತ್ರದಲ್ಲಿ ೯೮ರಿಂದ ೧೧೬ ಮತ್ತು ೮೨ನೆಯ ಪತ್ರದಲ್ಲಿ ೩೧ರಿಂದ ಆ ಸಂಧಿ ಪೂರ್ತ ಪದ್ಯಗಳಿಲ್ಲ. ೮೨ನೆಯ ಪತ್ರ ಎರಡಿವೆ. ೮೮ನೆಯ ಪತ್ರವು ತುಂಡಾಗಿದೆ. ಇದೇ ಕಟ್ಟಿನಲ್ಲಿ ಐರಾವತವೆಂಬ ಇನ್ನೊಂದು ಕಾವ್ಯವಿದೆ.

1183

ಕೆ. ೫೪೪ | ಭಾರತ | ಭಾಮಿನೀಷಟ್ಪದಿ
೧೫.೪" × ೨" | ತಿಮ್ಮಣ್ಣಕವಿ | ಸು. ೧೫೧೦
೧–೬೭ ಪತ್ರ | ೮ ಪಂಕ್ತಿ | ೬೦ ಅಕ್ಷರ

ಆದಿ : ಶ್ರೀಮನ್ಮಹಾಭಾರಥ ಹದಿನೆಂಟೂ ಪರ್ವ ಬರವುದಕ್ಕೆ ಶುಭಾವುಸ್ತು ||
ಪವುಲೋಮುಪರ್ವ........ವುದಕ್ಕೆ ಶುಭಾವುಸ್ತು ||
ಪಲ್ಲಾ || ಸೂತನಭಿವರ್ನಿಸಿದನಮುಳ
ಖ್ಯಾತ ಪವುಲೋಮುವನು ತತ್ಕುಲ
ಜಾತ ಶವುನಕ ಮುಖ್ಯ ಮುನಿಸಭೆ ಮೆಚ್ಚಲೊಲವಿನಲಿ ||
ಪದಾ || ಶ್ರೀಮದಮರಪ್ರವರ ಮುಕುಟ
ಸ್ತೋಮ ಮಣಿಗಣ ಕಿರಣ ಕೀರ್ನೋ
ದ್ದಾಮವಿದ್ಯಾ ಪದಾಭ್ಜ ಪೀಠನನಂತಗುಣನಿಳಿಯಾ
ಭೂಮಿಸುರ ಗೋ ದ್ವಿಜ ಸುಧರ್ಮ
ಕ್ಷೇಮಕಾರಣ ಮೂರ್ತಿಯಹ ಲ
ಕ್ಷ್ಮೀಮನೋರಮ ನೀನೆ ನಮಗಿಷ್ಟಾರ್ಥಸಂಪದವಾ || ೧ ||

ಅಂತ್ಯ : ....
........ವೇದವ್ಯಾಸಶಂಣ್ಮುಖ
ಸಿರಿಗಿರಿಜೆ ಸುರನಾಥ ಸನಕಾದಿಗಳು ಧಿಗಧಿಪರೂ
ಹರಿಹರರು ಕಮಲಜನು ರವಿ ಶಶಿ
ಧರಣಿ ಶುಕ ಕವಿವರರು ಯಿಷ್ಟಾರ್ಥವನು
ಕರುಣಿಸಿ ಶುಭಮತಿಯನೊಲಿದಿತ್ತು ರಕ್ಷಿಪುದೂ || ೪೭ ||
ಅಂತು ಸಂಧಿ ೧೩ಕ್ಕಂ ಪದ ೫೪೬ಕ್ಕಂ ಮಂಗಳಮಹಾಶ್ರೀ. ಆಸ್ತೀಕಪರ್ವ ಸಮಾಪ್ತ.

ವಿಷಯ : ಪೌಲೋಮ ಮತ್ತು ಆಸ್ತಿಕಪರ್ವಗಳ ಕಥೆ.

ವಿಶೇಷ : ಸ್ಫುಟಾಕ್ಷರ. ೨ ಪರ್ವಗಳು ಸಮಗ್ರ. ಆದಿ, ಅಂತ್ಯದ ಕೆಲವು ಗರಿಗಳು ತ್ರುಟಿತ.

1184

ಕೆ. ೫೪೫ | ಭಾರತ | ಭಾಮಿನೀಷಟ್ಪದಿ
೧೮.೬" × ೨.೨" | ತಿಮ್ಮಣ್ಣ ಕವಿ | ಸು. ೧೫೧೦
೧–೨೨೦ ಪತ್ರ | ೧೦ ಪಂಕ್ತಿ | ೧೦೩ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ||ಪೌಲೋಮ ಪರ್ವ ಬರಉದಕ್ಕೆ ನಿರ್ವಿಘ್ನಮಸ್ತು

ಶ್ರೀ ಗುರವೇ ಗತಿ ||
ಪಲ್ಲವ || ಸೂತನಭಿವರ್ನಿಸಿದನಮಲ
ಖ್ಯಾತ ಪೌಲೋಮವನು ಸತ್ಕುಲ
ಜಾತ ಶೌನಕ ಮುಖ್ಯ ಮುನಿಜನ ಮೆಚ್ಚಲೊಲವಿನಲಿ ||
ಪದನೂ || ಶ್ರಿ ಮದಮರಾದಿ ವರ ಮಕುಟ
ಸ್ತೋಮಣಿಗಣ ಕಿರಣ ಕೀರ್ನೋ
ದ್ಧಾಮ ದಿವ್ಯಪದಾಬ್ಜ ಪೀಠನನಂತಗುಣನಿಳಯಾ
ಭೂಮಿಸುರ ಗೋ ದ್ವಿಜ ಸುಧರ್ಮ
ಕ್ಷೇಮ ಕಾರಣಮೂರ್ತಿಯಹ ಲ
ಕ್ಷ್ಮೀ ಮನೋರಮನೀಗೆ ನಮಗಿಷ್ಟಾರ್ಥಸಂಪದವಾ || ೧ ||

ಅಂತ್ಯ : ನರಸಭೂಪನ ಕೃಷ್ಣರಾಯಗೆ
ವರಯಶಉ ನಿಲುವಂತೆ ಕವಿ ಭಾ
ಸ್ಕರ ತನೂಜನು ತಿಂಮಣಾರ್ಯನು ಪೇಳ್ದ ಭಾರತವೂ
ಪರಮ ಹರುಷಉ ಕೊಡುತ ಕೇಳ್ದಾ
ದರಿಸಿದವರೆಲ್ಲರಿಗೆ ಘನ ಸು
ಸ್ಥಿರವೆನಿಸಿ ಶುಭವೆನಿಸಿಯಾಚಂದ್ರಾರ್ಕವೆನಿಸಿರಲಿ || ೬೪ ||

ಅಂತು ಸಂಧಿ ೧೧ ಕ ಪದ ೧೦೨೫ ಕ್ಕೆ ಮಂಗಳ ಮಹಾಶ್ರೀ ಪೌಲೋಮ ಪರ್ವ ಸಂಧಿ ೩ ಕೆ ಪದ ೧೫೫ ಆಸ್ತಿಕಪರ್ವ ಸಂದಿ ೧೪ ಕೆ ಪದ ೭೭೫ ಶಾಂತಿ ಪರ್ವ ಸಂದಿ ೧೩ ಕೆ ಪದ ೧೫೭೫ ಅನುಶಾಸನೀಕ ಪರ್ವ ಸಂದಿ ೧೩ಕೆ ಪದ ೧೫೫೫ ಅಶ್ವಮೇದ ಪರ್ವ ಸಂದಿ ೧೨ ಕೆ ಪದ ೧೫೫೫ ಆಶ್ರಮವಾಸ ಪರ್ವ ಸಂದಿ ೬ ಕ್ಕೆ ಪದ ೬೪೫ ಮುಸಲ ಪರ್ವ ಸಂದಿ ೪ ಕ್ಕೆ ಪದ ೪೫೫ ಸ್ವಗಾ೯ ರೋಹಣ ಪರ್ವ ಸಂದಿ ೧೧ ಕ್ಕಂ ಪದ ೧೦೭೫ ಕ್ಕೆ ಅಂತು ಪರ್ವ ೮ ಕ್ಕೆ ಪದ ೯೧೭೫ ಕ್ಕಂ ಮಂಗಳ ಮಹಾಶ್ರೀ ಅಲಿಗೆ ಸಂಣಯ್ಯ ನಾಯಕರಿಗೆ ಕಜಿಮಣಿ ನಾರ್ಣಪ್ಪನು ಬಹುದಾಂನ್ಯ ಸಂವತ್ಸರದ ಮಾರ್ಗಿ ಶ್ರ ಬ ೧೦ ಲು ಬರಕೊಟ್ಟ ಉತ್ತರಭಾರತ ಪುಸ್ತಕಕ್ಕೆ ಆಚಂದ್ರಾರ್ಕಮಸ್ತೂ || ಶ್ರೀ ||

ವಿಷಯ : ಮಹಾಭಾರತದಲ್ಲಿ ಪೌಲೋಮ ಆಸ್ತೀಕ ಪರ್ವ ಮತ್ತು ಗದಾಪರ್ವ ದಿಂದ ಮುಂದಿನ ಎಂಟು ಪರ್ವಗಳ ಕಥೆ.

ವಿಶೇಷ : ಬರಹ ಸ್ಫುಟವಾಗಿದೆ.

1185

ಕೆ. ೫೪೬ **ಭಾರತ** ಸು. ೧೫೧೦

೧೯.೫" × ೨.೫" ತಿಮ್ಮಣ್ಣ ಕವಿ ಭಾಮಿನೀಷಟ್ಪದಿ

೧-೨೦೪ ಪತ್ರ ೧೦ ಪಂಕ್ತಿ ೯೨ ಅಕ್ಷರ

ಆದಿ : ಶ್ರೀ ಗಣಾದಿಪತಯೇ ನಮಃ ॥ ಭಾರಥ ಶಾಂತಿಪರ್ವ ಬರವುದಕ್ಕೆ ಶುಭಮಸ್ತು

ಶ್ರೀ ಮಹಿಮೆಯಹ ದಕ್ಷಿಣಾಂಗದಿ
ವಾಮಭಾಗವನಪ್ಪಿಯಾತ್ಮಾ
ರಾಮ ಸುಖಿಯಂದೆನಿಪ ಪಂಪಾತೀ ವಿರೂಪಾಕ್ಷ
ಕಾಮಿತಾರ್ಥವ ಕೊಡುವ ಬಾಹಳಾ
ಪ್ರೇಮದಲಿ ರಕ್ಷಿಸಲಿ ನ್ರುಪಸು
ತ್ರಾಮ ನರಸನ್ರುಪಾಲನಂದನ ಕ್ರುಷ್ಣರಾಯನನೂ ॥

x x x x

ಯನೆ ಹಸಾದವೆನುತ್ತ ಕೈಕೊಂ
ಡನಗ ಭಾರತ ಕಥೆಯ ಕಡಮೆಯ
ಜನಪ ನರಸಯ ಕ್ರುಷ್ಣರಾಯನಿಗಂಕಿತವ ಮಾಡಿ
ಮನವಲಿದು ಕವಿ ಭಾನುಭಟ್ಟರ
ತನುಜ ತಿಂಮಣನಖಿಳ ದ್ವಿಜ
ಜನರರಿವವೊಲು ಪೇಳಿದನು ಮೇಲಣ ಕಥೆಯದೆಂತೆನಲೂ ॥ ೨೭ ॥
ಪೀಠಕಿ ಸಂಧಿ ಸಮಸ್ತ ಮಂಗಳ ಮಹಾಶ್ರೀ ।

ಅಂತ್ಯ : ನರಸ ಭೂಪನ ಕ್ರುಷ್ಣರಾಯಗೆ
ಪರ ಯಶವು ನಿಲುವಂತೆ ಕವಿ ಭಾ
ಸ್ಕರ ತನೂಜನು ತಿಂಮಣಾರ್ಯನು ಪೇಳ್ದ ಭಾರತಲೂ
ಪರಮ ಹರುಷಲು ಕೊಡುತ ಕೇಳ್ದಾ
ದರ್ರಿಸಿದವರೆಲ್ಲರ್ರಿಗೆ ಘನಸು
ಸ್ತಿರವೆನಿಸಿ ಶುಭವೆನಿಸಿಯಾಚಂದ್ರಾರ್ಕವೆನಿಸಿರಲೀ ॥ ೬೪ ॥

ಅಂತು ಸಂದಿ ೧೧ ಕಂ ಪದ ೧೦೨೫ ಕ್ಕಾಂ ಮಂಗಳ ಮಹಾಶ್ರೀ ಶಾಂತಿಪರ್ವ ಸಂದಿ ೧೩ ಕ್ಕೆ ಪದ ೧೫೭೫ ಆನುಶಾಸನೀಕ ಪರ್ವ ಸಂದಿ ೧೩ ಕ್ಕೆ ೧೫೫೫ ಆಶ್ವಮೇದಪರ್ವ ಸಂದಿ ೧೨ ಕ್ಕೆ ಪದ ೧೫೫೫ ಆಶ್ರಿಮಪರ್ವ ಸಂದಿ ೬ ಕ್ಕೆ ಪದ ೬೪೫ ಮುಸುಲ ಪರ್ವ ಸಂದಿ ೪ ಕ್ಕೆ ಪದ ೪೫೫ ಸ್ವರ್ಗರೋಹಣ ಪರ್ವ ಸಂದಿ ೧೧ ಕೆ ಪದ ೧೦೨೫ ಕ್ಕಾಂ ಮಂಗಳ ಮಹಾಶ್ರೀ ॥ ಸ್ವಸ್ತಿಶ್ರೀ

ಜಯುಭ್ಯುದಯ ಶಾಲಿವಾಹನ ಶಖ ವರುಷ ೧೮೫೮ನೆ ಪರ್ಿ ವರ್ತಮಾನಕ್ಕೆ ಸಲುವ ಯುವ ಸಂವತ್ಸರದ ಶ್ರಾವಣ ಬ ೭ ಯು ಭಾನುವಾರ ದಿವಸ ತಾಸು ೫ ಲ್ಲು ಬರದ ಉತ್ರಭಾರತ ಪುಸ್ತಕಕ್ಕೆ ಶುಭಮಸ್ತು। ಕುಪ್ಪಳಿ ವಾಬ್ಯಗ ಉಡ್ರಿಗೆ ಕಂನಡ ಜೆಲ್ಲ ಉಡ್ಪಿ ತಾಲ್ಲೂಕ್ ಕೆಲ್ನಾಡ ಮಾಗಣೆ ಬೋರಾಡಿ ಅಂಕ್ಯಯನು ಬರಕೊಟ್ಟ ಭಾರತ ಪುಸ್ತಕ್ಕೆ ಶುಭಮಸ್ತು ॥

ವಿಷಯ : ಭಾರತದ ಶಾಂತಿಪರ್ವದಿಂದ ಸ್ವರ್ಗಾರೋಹಣ ಪರ್ವದವರೆಗಿನ ಕಥೆ.

ವಿಶೇಷ : ಸುಂದರ ಲಿಪಿ. ೭೪, ೧೮೧ ಕ್ರಮಾಂಕದ ಎರಡೆರಡು ಗರಿಗಳಿವೆ.

1186

ಕೆ. ೨೩೬	**ಭಾರತ** (ಶಾಂತಿಪರ್ವ)	ಗದ್ಯ
೨೪.೩" × ೨.೩"	ಚಿಕ್ಕದೇವರಾಜ	೧೬೮೦
೧–೧೬೭ ಪತ್ರ	೮ ಪಂಕ್ತಿ	೧೦೫ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ ॥

ಗಜಾನನಂ ಭೂತಗಣಾಧಿಸೇವಿತಂ
ಕಪಿತ್ಥ ಜಂಭೂಫಲಸಾರ ಭಕ್ಷಿತಂ
ವುಮಾಸುತಂ ಶೋಕವಿನಾಶ ಕಾರಣಂ
ನಮಾಮಿ ವಿಘ್ನೇಶ್ವರ ಪಾದಪಂಕಜಂ ॥

x x x x

ಶಾಂತಿ ಪರ್ವದ ರಾಜದರ್ಮದ ಟೀಕೂ ॥

ಕೇಳಿರೈ ಶೌನಕಾದಿ ಮುನಿಗಳಿರಾ। ಆ ರೀತಿಯಲ್ಲಿ ಪಾಂಡವರೆಲ್ಲರುಂ। ಬಾಲ್ಯಾರಭ್ಯಮಾಗಿ। ಕೀರ್ತ್ತಿಪ್ರಧಾನರೆನಿಶಿ। ಬರ್ದುಂಕ್ಕಬೇಕೆಂಬುದನೇ। ಸಿದ್ದವಿಟ್ಟು ಜನನಾರಭ್ಯಮಾಗಿ।

ಅಂತ್ಯ : x x x x ಸತ್ಯ ಪರಾಕ್ರಮನುಮೆನಿಸಿ ನೆಗಳ್ತೆವಡೆದ ಚಿಕದೇವ ಮಹಾರಾಜ ಪ್ರಣೀತಮಾದ ಮಹಾಭಾರತದ ಶಾಂತಿಪರ್ವದ ರಾಜಧರ್ಮದ ವಿವರಣದೊಳ್ ೯೪ ನೆ ಅಧ್ಯಾಯಂ ಮಂಗಳ ಮಹಾಶ್ರೀ.

x x x x

ದುಷ್ಟಸ್ವಭಾವನಲ್ಲದಿರ್ಪ ನೃಪಂ ತಂನ ಬಲಮುಂ ತಿಳಿದು। ದುರ್ಬಲನಾದ ಶತೃವಿನೊಡನೆ ಯುದ್ಧಮನೆಸಗವೇಳ್ಕುಂ ಪ್ರಬಲನೊಡನೊರ್ಮೆಯುಂ ವಿರೋಧ ಮನೆಸಗಲಾಗದು ॥

ವಿಷಯ : ಭಾರತದ ಶಾಂತಿಪರ್ವದೊಳಗಿನ ರಾಜಧರ್ಮ.

ವಿಶೇಷ : ಅಸಮಗ್ರ, ಸುಂದರಾಕ್ಷರ. ೯೪ ನೆಯ ಅಧ್ಯಾಯದಿಂದ ಮುಂದಣ ಭಾಗಕ್ಕೆ ಸಂಬಂಧಿಸಿದ ಒಂದು ಗರಿಯು ಮಾತ್ರ ಇದೆ.

1187

ಕೆ.ಎ. ೧೭೮	**ಭಾರತ (ಶಾಂತಿಪರ್ವ)**	ಗದ್ಯ
೧೨.೮″ × ೮″	ಚಿಕ್ಕದೇವರಾಜ	೧೬೮೦
೧–೬೦೮ ಪತ್ರ	೧೮ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಮನ್ಮಹಾಭಾರತದ ಶಾಂತಿಪರ್ವಂ, ರಾಜಧರ್ಮಂ ಶ್ರೀಗಣಾಧಿಪತಯೇ ನಮಃ । ಶ್ರೀವೇದವ್ಯಾಸಾಯ ನಮಃ । ಶ್ರೀ ಕೇಳಿರೈ ಶೌನಕಾದಿ ಮುನಿಗಳಿರಾ। ಆ ರೀತಿಯಲ್ಲಿ ಪಾಂಡವರೆಲ್ಲರುಂ ಬಾಲ್ಯಾರಭ್ಯಮಾಗಿ ಕೀರ್ತಿ ಪ್ರಧಾನರೆನಿಸಿ ಬರ್ದುಂಕಬೇಕೆಂಬುದನೇ ಸಿದ್ಧವಿಟ್ಟು ಜನನಾರಭ್ಯಮಾಗಿ ತಮಗೆ ಧೃತರಾಷ್ಟ್ರನ ಮಕ್ಕಳಿಸಗಿದಂಥ ವಿಷಾನ್ನ ಪ್ರದಾನ । ಲಾಕ್ಷಾಗೃಹದಾಹ ಸರ್ವ ಸ್ವಾಪಹರಣ। ದ್ರೌಪದೀ ಕೇಶಾಂಬರ ಕರ್ಷಣಾದಿ ನಾನಾವಿಧೋಃಪದ್ರವಂಗಳಂ ಸಹಿಸಿಕೊಂಡು ರಾಜ್ಯಮಂ ನೀಗಿ ವನವಾಸಮಂ ಮಾಡಿಕೊಂಡಿರ್ಪ ಸಮಯದಲ್ಲಿ

ಅಂತ್ಯ : ನೀನುಮವನಂತೆ ಧರ್ಮದಿಂ ಪ್ರಜಾಪಾಲನಂಗೆಯ್ದು ಪುಣ್ಯಲೋಕಂಗಳಂ ಸಂಪಾದಿಸು ಎಂದು ಭೀಷ್ಮಂ ಧರ್ಮರಾಯಂಗೆ ನಿರವಿಸಿದನೆಂಬ ಕಥೆಯಂ ವೈಶಂಪಾಯನಮುನಿ ಜನಮೇಜಯಂಗೆ ಪೇಳ್ದನೆಂದು ಸೂತಪೌರಾಣಿಕಂ ಶೌನಕಾದಿಗಳ್ಗೆ ನಿರವಿಸಿದನು.

ಗದ್ಯ ॥ ಇಂತು ಯಿದು ಶಿಖರೀಶ ನಾರಾಯಣ ಚರಣಾರವಿಂದ ಚಂಚರೀಕಾಯಮಾನಾಂತಃಕರಣನುಂ x x x x ಸತ್ಯಪರಾಕ್ರಮನುಮೆನಿಸಿ ನೆಗಳ್ತೆವಡೆದ ಚಿಕ್ಕದೇವ ಮಹಾರಾಜ ವಿರಚಿತಮಪ್ಪ ಶ್ರೀಮನ್ಮಹಾಭಾರತದ ಶಾಂತಿಪರ್ವದ ರಾಜಧರ್ಮ ವಿವರಣದೊಳ್ ತೊಂಭತ್ತು ಮೂರನೆಯ ಅಧ್ಯಾಯಾರ್ಥ ನಿರೂಪಣಂ

ತೊಂಭತ್ತು ನಾಲ್ಕನೆಯ ಅಧ್ಯಾಯಂ

ಈ ಅಧ್ಯಾಯದಲ್ಲಿ ಒಂದು ಪತ್ರ ಮಾತ್ರ ಬರೆಯಲ್ಪಟ್ಟಿದೆ. ಉಳಿದ ಗ್ರಂಥವು ಮಾತೃಕೆಯಲ್ಲಿ ಯಿಲ್ಲ. ಅಸಂಪೂರ್ಣಂ.

ವಿಷಯ : ಮಹಾಭಾರತದ ಶಾಂತಿಪರ್ವದಲ್ಲಿ ಬರುವ ರಾಜಧರ್ಮ ವಿಚಾರ.

ವಿಶೇಷ : ಅಸಮಗ್ರ, ಎರಡು ರೀತಿಯ ಬರಹಗಳಿವೆ. ಒಂದು ಮೋಡಿ, ಮತ್ತೊಂದು ಸುಂದರ. ಶಕಟರೇಫವಿದೆ. ಅಲ್ಲಲ್ಲಿ ಅಕ್ಷರಗಳು ಲುಪ್ತ. ದಪ್ಪಕ್ಷರ.

1188

ಕೆ. ಎ. ೭೦ ಭಾರತ ವಾರ್ಧಕ ಷಟ್ಪದಿ

೧೨.೬" × ೭.೮" ಲಕ್ಷ್ಮಕವಿ ೧೭೨೩

೧-೬೩೩ ಪುಟ ೩೧ ಪಂಕ್ತಿ ೨೩ ಅಕ್ಷರ

ಆದಿ : ಶ್ರೀ ನಂಜುಂಡೇಶ್ವರ ಸ್ವಾಮಿಯವರ ದಿವ್ಯ ಶ್ರೀ ಪಾದಾರವಿಂದವೆ ಗತಿ
|| ಶುಭಮಸ್ತು ||

....

.....................ಕಾರುಣ್ಯ ಘನ
ಸೋಮಾರ್ಕ್ಯ ನೇತ್ರ ಸುಪವಿತ್ರ ಶುಭಗಾತ್ರ ಕಲ್ಯಾಣ ಸದ್ಗುಣನಿರ್ಮ್ಮಳಾ
ಗೋಮಿನೀ ರಮಣ ಗೋವರ್ಧನೋದ್ಧಾರ ಜಿತ
ಕಾಮ ಸುಖ ದೇವಾದಿ ದೇವ ವಂದಿತ ಸಾರ್ವ್ವ
ಭೌಮ ಖಗಪುರವರ ಪ್ರೇಮ ಚಂನಿಗರಾಯ....೧೧||

x x x x

ಲೋಕತ್ರಯಂ ತನ್ನ ಶೇಷಮೆಂದನು ಬಾಣ
ಸಾಕುಳಿದ ಕವಿಗಳಂನೆಣಿಸುವೆನೆಯೆಂದ ನಂ
ದಾಕುಮಾರ ವ್ಯಾಸನವರ ನುಡಿಯುಂನತೆಯ ಕೈಕೊಂಡು ಖಗಪುರದೊಳೂ
ಶ್ರೀಕ ಚೆನ್ನರಾಯನವರಂಬೆತ್ತು ತಾಂ
ಬೇಕಾದ ವರ್ನ್ನ ವಸ್ತುಕ ಕಾವ್ಯಮಂ ಪೇಳ್ವ
ವ್ಯಾಕರಣ ಪಾಂಡಿತ್ಯದಿಂದುಳಿದ ಕುಕವಿಗಳು ತೃಣವೆಂದನಾ ಲಕ್ಷ್ಮನೂ
|| ೧೬ ||

ಅಂತ್ಯ : ಶೇಷ ವಾಸುಗಿಯಾದ ಸರ್ಪ್ಪಗಳ್ ಕರ್ನ್ನವು
ಹಾ ಸಂಗರಕ್ಕೆ ಬಲವಾದರಾದಾನ ವಾ
ದೀಶರೊಳ್ ದಯಶೀಲರಾದವರ್ ಪಾರ್ಥನ ವಿಶೇಷ ಜಯಮಂ ಜಯಸಿದರ್
ರಾಸಿ ಸಂವತ್ಸರಗಳಾ ತರಣಿಜನ ಗೆಲವ
ಸೂಸಿ ನೆನಸಿದರು ಪಂಚೀಭೂತವರ್ಜುನನ
ಲೇಸ ಹಾರೈಸಿದರು ಕೇಳು ಧೃತರಾಷ್ಟ್ರ ವೀರೋಧ್ಧಾರ ರತಿ ಕಲಹವಾ || ೬ ||
ಯಿಲ್ಲಿಂದಾ ಮುಂದಕ್ಕೆ ಮೂಲ ಪ್ರತಿಯಲ್ಲಿ ಗ್ರಂಥ ಹೋಗಿಧೆ.

ವಿಷಯ : ಪಾಂಡವ ಕೌರವರ ಕಥೆ.

ವಿಶೇಷ : ಅಸಮಗ್ರ. ಕೆಲವು ಕಡೆ ಗ್ರಂಥಲೋಪವಿರುವುದರಿಂದ ಆ ಭಾಗಗಳಲ್ಲಿ ಅಲ್ಲಲ್ಲೇ ಸ್ಥಳಾವಕಾಶವನ್ನು ಬಿಟ್ಟಿದೆ. ಮಧ್ಯದಲ್ಲಿ ಕೆಲವು ಶುದ್ಧಪತ್ರಗಳೂ

ಇವೆ. ಕರ್ಣಪರ್ವದ ನಾಲ್ಕನೆಯ ಸಂಧಿಯವರೆಗೆ ಮಾತ್ರ ಇದೆ. ಶಕಟ ರೇಫವಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

1189

ಕೆ. ೧೫೫ **ಭಾರತ** (ತಾತ್ಪರ್ಯ, ಟೀಕು) ಗದ್ಯ

೧೪.೭" × ೨" ಕಳಲೆ ನಂಜರಾಜ ೧೭೪೦

೩೫–೨೫೦ ಪತ್ರ ೮ ಪಂಕ್ತಿ ೬೨ ಅಕ್ಷರ

ಆದಿ : ಶ್ರೀ ಶಿವಾಯ ನಮಃ ॥ ಅನಂತರದಲ್ಲಿ ವೈಶಂಪಾಯನ ಮುನೀಶ್ವರನೂ ಜನಮೇಜಯರಾಯನಂನೂ ಕುರಿತು ಯಿಂತೆಂದನೂ । ಕೇಳು ಜನಮೇಜಯನೇ । ಆ ಬಳಿಕಾ । ಮತ್ತೂ ಸಂಜಯನಿಂತೆಂದನೂ । ಯಲೈ ರಾಯನೇ ಯಿಾ ಪ್ರಕಾರದಲ್ಲಿ । ಪ್ರತಾಪಶ್ಯಾಲಿಯೂದ ದುರ್ಯೋದನನೂ । ಕರ್ನನ ಕೂಡೆ ನುಡಿದೂ । ಶತ್ರು ಶೇನಾ ಭಯಂಕರನಾಗಿ । ಮಹಾರಥನಾದ ಮಾದ್ರೀಪತೀ । ಸಮಿಾಪಕ್ಕೆ ಹೋಗಿ । ಸಾಷ್ಟಾಂಗ ದಂಡ ಪ್ರಣಾಮವಂನೂ ಮಾಡಿ ಪ್ರೇಮಾತಿಶಯವು ತೋರುವ ಹಾಗೆ । x x x x x ಆ ಕರ್ನನೂ ನಮಗೆ ಅಹಿತರಾದ ಪಾಂಡವರೆಲ್ಲರಂನೂ ಯುದ್ಧದಲ್ಲಿ ಸಂಹರಿಸುವುದಕ್ಕೆ ಸಂಶಯವಿಲ್ಲ.

ಅಂತ್ಯ : ಅದು ಹ್ಯೇಗೆಂದರೆ ಸನಾತನನಾಗಿ ಷಡ್ಗುಣ್ಯೈಶ್ವರ್ಯ ಸಂಪಂನನಾಗಿ। ಯಿರುವಾ ವಾಸುದೇವನೂ । ಸಕಲ ಕ್ರತುಮಯನಾದ್ದರಿಂದಾ । ಅಂತ್ಹಾ ದೇವದೇವನ ಕರುಣ ವಿಶೇಷದಿಂದಾ । ಭಾರಥ ಕತಾ ಪಾಯಣವಂನೂ ಮಾಡಿದಂತಾ ।ವರೂ । ಅಹಿಕಾಮುಷ್ಮಿಕಂಗಳಾದ ಸಕಲ ಸೌಖ್ಯಂಗಳಂನೂ ಅನುಬವಿಸುತಾ । ಶುಕವಾಗಿ ಯಿರುವರೂ ಯೆಂದೂ । ವೈಶಂಪಾಯಮುನೀಶ್ವರನೂ ಜನಮೇಜಯರಾಯಸಿಗೆ ವಿವರಿಸ್ತನೂ ಯೆಂದೂ । ನೈಮಿಶಾರಂಣ್ಯವಾಶಿಗಳಾದ ಶೌನಕಾದಿಗಳಿಗೆ ಶೂತಪುರಾಣಿಕನೂ । ವಿವರಿಸ್ತನೂ ॥ ಅಂತೂ ಅಧ್ಯಾಯ ೧೧೧ ಕಂ ಮಂಗಳ ಮಹಾಶ್ರೀ.—

ಯಿಂತೂ ಕರ್ನಾಟಕ ಭಾಷಾ ವಿರಚಿತವಾದ ಮ್ಯೆಹಿಶೂರ ಶೇನಾದಿಪ ದೊಡರಾಜ ಪೌತ್ರ । ವೀರರಾಜ ತನೂಜ । ದಳಪತಿ ದೇವರಾಜನುಜ ಕಳಲೆ ನಂಜರಾಜ ವಿರಚಿತವಾದ ಮಹಾಭಾರತ ತಾತ್ಪರ್ಯ ಟೀಕಿನಲ್ಲಿ ವ್ಯಾಸಕ್ರುತವಾದ ಲಕ್ಷ । ಗ್ರಂತ ಶಿಂಕೆಯುಳ ಸಂಹಿತೆಯಲ್ಲಿ। ಕರ್ನಪರ್ವದಲ್ಲಿ ನೂರ ಹಂನೊಂದನೇ ಅಧ್ಯಾಯದರ್ಥ ನಿರುಪಣಕ್ಕೆ ಮಂಗಳಮಹಾ ಶ್ರೀ.

ವಿಷಯ : ಕರ್ಣನು ಸೇನಾಧಿಪತಿಯಾಗಿ ಯುದ್ಧ ಮಾಡಿದ ಕಥೆ.

ವಿಶೇಷ : ಅಸಮಗ್ರ ಪ್ರತಿ. ಅಂತ್ಯದಲ್ಲಿ ಬರೆಯುವಾಗ ಅನುಪಯುಕ್ತವಾದ ೧೪ ಗರಿಗಳಿವೆ.

1190

ಕೆ. ೩೭೪ | ಭಾರತ (ತಾತ್ಪರ್ಯ ಟೀಕು) | ಗದ್ಯ

೨೫.೫" × ೨.೨" | ಕಳಲೆ ನಂಜರಾಜ | ೧೭೪೦

೧–೨೯೫ ಪತ್ರ | ೧೦ ಪಂಕ್ತಿ | ೧೧೦ ಅಕ್ಷರ

ಆದಿ : ಶ್ರೀ ನಂಜುಂಡೇಶಾಯ ನಮಃ । ಶ್ರೀ ಗೌರೀ ಕುಚಕಂಭಕುಂಕುಮಂ ಜಃ ಪಂಕಾಂಕಿತೋರಸ್ಥಳಂ । ವಾಗೀಶಾದಿಸುರೇಂದ್ರ ಮೌಳಿ ಮಣಿರು........ ಸರ್ವ್ವ ವಿಬುಧಜ್ಞಾರ್ತಾಧಿಕ ಪ್ರೇಮದಿಂ ॥
ಕಲಶಾಂಭೋಧಿಯನೊಂದುಗೂಡಿ ಮಥಿಸಲ್ಕಲ್ಪದ್ರು ಚಿಂತಾಮಣೀ
ವಿಲಸತ್ಕೌಸ್ತುಭ ಕಾಮಧೇನು ಕಮಲಾ ಪೀಯ್ಯೂಷ ಸಂದೋಹದಿಂ
ಲಲಿತಾಂಗಂ ದ್ವಿಜರಾಜನಲ್ಲುದಿಶಿದಂ ಲೋಕೈಕ ಮೋದಾಸ್ಪದಂ ॥ ಶ್ರೀ ॥
ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷಂಗಳು । ೧೬೬೪ ಸಂದ ವರ್ತಮಾನವಾದ । ದುಂದುಭಿ ಸಂವತ್ಸರದಲ್ಲಿ ।

x x x x

ಅದರಿಂದ ಯಿಾ ಮಹಾ ಭಾರತವಂ ಟೀಕಿಸಬೇಕೆನಲು। ಆ ನಂಜರಾಜೇಂದ್ರನು। ಮಹಾಪ್ರಸಾದವೆಂದು ವೊಡಂಬಟ್ಟು ನಂಜರಾಜೇಂದ್ರನು । ತಾನು ರಚಿಸುವಂಥಾ ಗ್ರಂಥಕ್ಕೆ ನಿರ್ವಿಘ್ನ ಪರಿಸಮಾಪ್ತಿಗೋಸುಗ ಶಿಷ್ಟಾಚಾರ ಪರಿಪ್ರಾಪ್ತ ಶಿವಧ್ಯಾನ ರೂಪ ಮಂಗಳವನಾಚರಿಶಿ ಸರಸ್ವತಿ ವಿಘ್ನೇಶ್ವರರಿಗೆ ಪ್ರಣಮಿಶಿ ।

x x x x

ನಂಜರಾಜ ವಾಣಿವಿಲಾಸವೆಂಬ ಮಹಾಭಾರತ ತಾತ್ಪರ್ಯ್ಯ ಟೀಕಂನೂ ಮ್ಮಾಡುವದಕ್ಕೆ । ಪ್ರಾರಂಭಿಸ್ತನೂ ॥ ಅದೆಂತೆನೆ ॥ ಶ್ರೀ ॥

ಅಂತ್ಯ : ವೈಶಂಪಾಯನ ಮಹಾಮುನೀಶ್ವರನು ಜನಮೇಜಯರಾಯನಿಗೆ ಹೇಳಿದ ಅರ್ಥವಂನೂ ನೈಮಿಶಾರಣ್ಯ ವಾಸಿಗಳಾದ । ಶೌನಕಾದಿ ಮಹಾ ಋಷಿಗಳಿಗೆ ಸೂತಪೌರಾಣಿಕನು ವಿವರಿಸ್ತನು ॥ ಶ್ರೀ ॥ ಯಿಂತು ಕರ್ನಾಟ ಭಾಷಾ ವಿರಚಿತವಾಗಿ ಶ್ರೀ ಮಹಿಶೂರ ಸೇನಾಧಿಪತಿ ದೊಡ್ಡರಾಜ ಪೌತ್ರ ವೀರರಾಜ ದಳಪತಿ ದೇವರಾಜ ತನುಜನು ಕಳಲೆ ನಂಜರಾಜ ವಿರಚಿತಮಾದ ವಾಣೀವಿಲಾಸವೆಂಬ ಮಹಾಭಾರತ ತಾತ್ಪರ್ಯ್ಯ ಟೀಕಿನಲ್ಲಿ ವ್ಯಾಸಕೃತ ಮೊದಲ ಲಕ್ಷ ಗ್ರಂಥ ಸಂಖ್ಯೆಯುಳ್ಳ ಸಂಹಿತೆಯಲ್ಲಿ ಆದಿಪರ್ವದಲ್ಲಿ ಸಂಭವ ಪರ್ವದಲ್ಲಿ ಖಾಂಡವದಾಹದಲ್ಲಿ । ಪರ್ವವೃತ್ತಾಂತ ವ್ಯಾಸಪೂಜಾ ವಿಧಾನ ವೆಂಬಲ್ಲಿಗೆ ಯಿಂನೂರನೆ ಆಧ್ಯಾಯದ ಅರ್ಥ ನಿರೂಪಣಕ್ಕೆ ಮಂಗಳ ಮಹಾ ಶ್ರೀ.

x x x x

ವಿತರಣ ವಿದಿತೋ ಯೋ ವೀರ ನಂಜಕ್ಷಿತೀಶಃ ।
ಸಕೀಲ ಸಕಲ ತುಷ್ಟ್ಯೈ ಸಾಧುಕರ್ನಾಟಕೋಕ್ತ್ಯಾ ॥
ಅಕಲಯದಮಲ ಶ್ರೀ ಭಾರತಾರ್ಥ ಪ್ರಕಾಶಂ ।
ವ್ಯಲಿಖದಿಹ ಹಿ ಪೂರ್ವಂ ಪರ್ವ ವೈಕುಂಠರಾಯಃ ॥
ನುತಜಯ ಶಕವರ್ಷಾನಂತರೋ ಪೋತ್ರಮಾಬ್ದೇ ।
ಸ್ಥಿರದಿನಯುಜಿ ಪೌಷೇ ಪೂರ್ಣಿಮಾ ಪುಷ್ಯಯೋಗೇ ॥
ಸ್ವರಚಿತ ಲಿಪಿಪಾತಾಕಾರ ವೈರೂಪ್ಯ ರೂಪಂ ।
ಕರಕೃತಮಪರಾಧಂ ಕ್ಷಂತು ಮರ್ಹಂತಿ ಸಂತಃ ॥
ಶ್ರೀಮತೇ ಲೋಕಾರ್ಯ್ಯ ಗುರವೇ ನಮಃ ॥

ವಿಷಯ : ಮಹಾಭಾರತದಲ್ಲಿ ಆದಿಯಿಂದ ಖಾಂಡವದಹನದವರೆಗಿನ ಕಥೆ.

ವಿಶೇಷ : ಸುಂದರ ಬರಹ. ಕೆಲವು ಗರಿಗಳ ಅಂಚುಗಳು ಮುರಿದಿದೆ. ಈ ಕೃತಿಗೆ ನಂಜರಾಜವಾಣೀವಿಲಾಸವೆಂಬ ಹೆಸರೂ ಇದೆ.

1191

ಕೆ. ೨೬೮	**ಭಾರತ**	ಗದ್ಯ
೩೬.೮" × ೨.೨"	ಮುಮ್ಮಡಿ ಕೃಷ್ಣರಾಜ	೧೮೦೦
೧–೩೩೩ ಪತ್ರ	೮ ಪಂಕ್ತಿ	೧೨೬ ಅಕ್ಷರ

ಆದಿ : ಶ್ರೀಮದ್ವರದರಾಜಾಯನಮಃ ॥ ಉದ್ಯೋಗಪರ್ವ ಬರಯುವದಕ್ಕೆ ಶುಭ ಮಸ್ತು ॥ ನಿರ್ವಿಘ್ನಮಸ್ತು ॥ ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲೀವಾಹನಶಕ ವರ್ಷಂಗಳು........ಸಂದ ವರ್ತಮಾನವಾದ ಚಿತ್ರಭಾನುನಾಮ ಸಂವತ್ಸರದ ವೈಶಾಖ ಬ ೫ ಶುಕ್ರವಾರದಲ್ಲೂ ಶ್ರೀ........ಪದಧಿಷ್ಠಾನುಭೂತ ಶ್ರೀಮನ್ಮಹಿ ಶೂರ ಮಹಾ ಸಂಸ್ಥಾನಮಧ್ಯ ದೇದೀಪ್ಯಮಾನ ವಿಕಲ ಕಲಾನಿಧಿ x x ಶ್ರೀಮತ್ಕೃಷ್ಣರಾಜವಡಯರವರು ಶ್ರೀಮನ್ಮಹಾಭಾರತದಲ್ಲಿ ಕೃಷ್ಣರಾಜ ವಾಣೀ ವಿಲಾಸವೆಂಬ ನಾಮಾಂಕಿತದಿಂದ ಕರ್ನಾಟಕ ಭಾಷೆಯಿಂದ ಲೋಕೋಪ ಕಾರಾರ್ಥವಾಗಿ ಉದ್ಯೋಗಪರ್ವವಂನ್ನು ವಿರಚಿಸುವರದೆಂತೆಂದೊಡೆ ॥
ಆ ಬಳಿಕ ವೈಶಂಪಾಯನ ಮುನೀಶ್ವರನು ಜನಮೇಜಯರಾಯನಂನು ಕುರಿತು ಯಿಂತೆಂದನೂ ॥

ಅಂತ್ಯ: ಆ ಸಮಯದಲ್ಲಿ ವೀರಾಗ್ರೇಸರನು ಧನ ಕನಕ ಕಲಶವಿಚಿತ್ರವಾಗಿ । ಸಕಲ ಸೈನ್ಯಂಗಳ ಮಧ್ಯದಲ್ಲಿ। ಅತ್ಯುಂನ್ನತವಾಗಿ ಕಾಣಲ್ಪಟ್ಟಿತು। ಆ ಬಳಿಕ ಪಾಂಡ್ಯನು ಸಾಗರಧ್ವಜವೂ ಚಂದ್ರಿಕಾಧವಳಂಗಳಾದ ಕುದುರೆಗಳು|ಮೆರೆಯಲು ವೈಡೂರ್ಯಮಣಿಫಣಖಚಿತವಾದ ಕಾರ್ಮುಕವಂನ್ನು ಸವರಿಶಿ ಗುಣಧ್ವನಿ ಯಂನ್ನು ಮಾಡುತ ದೃಷ್ಟಿದ್ಯುಮ್ನನಿಗೆ ಸಹಾಯವಾಗಿ ನಡದನೂ ।

ಆತನಲ್ಲದೆ ಗೋವಿಂದನು ಮೊದಲು ಪ

ವಿಷಯ : ಭಾರತ ಕಥೆಯಲ್ಲಿ ಶ್ರೀಕೃಷ್ಣನ ದೌತ್ಯದಿಂದ ದ್ರೋಣಪರ್ವದ ೨೧ನೆಯ ಅಧ್ಯಾಯದವರೆಗಿನ ಕಥೆ.

ವಿಶೇಷ : ಉದ್ಯೋಗಪರ್ವದಿಂದ ದ್ರೋಣಪರ್ವದಲ್ಲಿ ೨೧ ನೆಯ ಅಧ್ಯಾಯಕ್ಕೆ ಮುಗಿದು ಒಂದು ಗರಿಯಷ್ಟು ಮುಂದೆ ಬರೆದಿದೆ. ಅಸಮಗ್ರ. ಬಹು ಸುಂದರ ಬರಹ. ೨, ೬, ೩೩೨ ಮತ್ತು ೩೩೩ನೆಯ ಗರಿಗಳು ತ್ರುಟಿತ. ಈ ಕೃತಿಗೆ ವಾಣಿ ವಿಲಾಸವೆಂಬ ಹೆಸರು ಇದೆ. ೩೯೦ನೆಯ ಗರಿ ಪೂರ್ತಿ ಮತ್ತು ೪೮೯ನೆಯ ಗರಿಯ ಒಂದು ಪಾರ್ಶ್ವದಲ್ಲಿ ಬರವಣಿಗೆಯಿಲ್ಲ.

1192

ಕೆ. ೬೨	**ಭಾರತ**	ಭಾಮಿನೀಷಟ್ಪದಿ
೧೩.೧″ × ೨.೧″	?	?
೧–೧೬೧ ಪತ್ರ	೧೦ ಪಂಕ್ತಿ	೬೪ ಅಕ್ಷರ

ಆದಿ : ಶಾಂತಿಪರ್ವ ಬರೆಯುವದಕ್ಕೆ ನಿರ್ವಿಘ್ನಮಸ್ತು ॥ ಶಾಲಿವಾಹನಶಕೆ ೧೭........ ಸರಿಯಾದ ವಿಭನಾಮ ಸಂ॥ ಪಾಲ್ಗುಣಮಾಸ ಸುದ್ದ ೧೩ ಬುದವಾರದಲ್ಲು ಕಟ್ಟಿಗೆ ಲಕ್ಷುಮೈಯನವರ ಮನೆ ಪ್ರತಿ ಹೋಗಿಬಂದು ಯಿದ್ದದಕ್ಕೆ ೩ ಪರ್ವ ವಂನು ಚವಡಪ್ಪ ಬರದು ಶೇರಿಸಿ ಯಿರುವದಕ್ಕೆ ನಿವಿಘ್ನಮಸ್ತು ಶ್ರೀರಸ್ತು ಸುಬಮಸ್ತು ॥

ಪಲ್ಲಾ ॥ ರಾಯ ಜನಮೇಜಯಗೆ ವೈಶಂ
ಪಾಯ ಮುನಿ ಹೇಳಿದನು ಪಾಂಡವ
ರಾಯರಮಲಚರಿತ್ರವನು ಸುಪವಿತ್ರವನು ಧರೆಗೇ ॥
ಪ ॥ ವ್ಯಾಸವಚನ ಸರೋಜವೆನಿಪಿತಿ
ಹಾಸವನು ವರಕೃತಿ
ವಾಸುದೇವನ ಶುಕಸಾರಸೋಕ್ತಿಗಳ ಪರಿಮಳವಾ
ಲೇಸೆನಿಪ ಸಜ್ಜನಪರಂಷ್ಠ್ರಿಗೆ
ಮಿಾಸಲಳಿಯದ ಭಾರತಾಖ್ಯ ಮ
ಹಾಸರೋರುಹ ಮಾಳ್ಪೆಮಗಿಷ್ಟಾರ್ಥಸಂಪದವಾ ॥ ೧॥

ಅಂತ್ಯ : ನಿಂಮ್ಮ ಕೃಪೆಯಿಂದೆಮಗೆ ಮೋಹಿದ
ಕರ್ಮ ಹರಿದುದು ಯಿೣ ಶರೀರದ
ಕಲ್ಮಷವು ತೊಳಯಿತ್ತು ಹರದುದು ಮನದ........

ನಿಂಮ್ಮ ಸೊಂಮಿನ ಭಕ್ತರಾವೆಂ
ದೆಂಮ್ಮ ಹೊರದಿರಿ ಲೇಸೆನುತ ಮನ
ದಂಮುಗೆಯಲೊಲಿದೆರಗಿದನು ಮುನಿರಾಯನಂಘ್ರಿಯಲಿ || ೪೬ ||

x x x x

............ಒಕ್ಕೆ ಮಂಗಳಮಹಾಶ್ರೀ.
ಶ್ರೀ ಲಕ್ಷ್ಮೀನೃಸಿಂಹಾಯ ನಮಃ ||
ನಾಮದೊಳಗಧಿನಾಮ ಜಯ....
ನಾಮ ವರುಷದ ಭಾದ್ರಪತ ಬಹುಳ
ದರಿದಿವಸದಾ ಭೌಮವಾರದುದಯದಲಿ
ತಾಮರಸ....ನುದಯವಾದರೆ
ಯಾಮ ಶುಭಲಗ್ನದಲ್ಲಿ ಬರದನು
ಭೂಮಿಗತಿಶಯವೆನಿಪ ಕದಂಬಪುರದ ನಗರ್‍ರಿಯಲೀ ||

ವಿಷಯ : ಮಹಾಭಾರತದಲ್ಲಿ ಆದಿಯಿಂದ ಗದಾಪರ್ವದ ಅಂತ್ಯದವರೆಗಿನ ಕಥೆ.

ವಿಶೇಷ : ಕೆಲವು ಗರಿಗಳನ್ನು ಹುಳು ತಿಂದಿದೆ. ಆರಂಭದ ೯ ಗರಿಗಳನ್ನು ಒಬ್ಬರೂ ಮುಂದೆ ೧೨ರಿಂದ ಪೂರ್ತಿ ಇನ್ನೊಬ್ಬರೂ ಬರೆದಿರುತ್ತಾರೆ. ಗರಿಯ ಸಂಖ್ಯೆ ೯–೧೨ರ ವರೆಗೆ ಇಲ್ಲದಿದ್ದರೂ, ಗ್ರಂಥಲೋಪವಿಲ್ಲ. ೪೨ನೆಯ ಪತ್ರ ಮುರಿದಿದೆ.

1193

ಕೆ. ಬಿ. ೨೬೬	**ಭಾರತ ಕಥಾಸಂಗ್ರಹ**	ಗದ್ಯ
೮" × ೬.೪"	ಜಕಣಾಂಕ ನಾಯಕ	?
೧–೫೩ ಪತ್ರ	೨೫ ಪಂಕ್ತಿ	೩೩ ಅಕ್ಷರ

ಆದಿ : ಭಾರತಕಥಾ ಸಂಗ್ರಹಾ ಜಕಣಂಕ ನಾಯ್ಕ ವಿರಚಿತ ||
ಶ್ರೀ ಗಣಾಧಿಪತಯೇ ನಮಃ ಭಾರತದ ಕಥೆಯನ್ನು ಟೀಕು ಸಹಾ ವ್ಯಾಕ್ಯಾನಿಸಿದ ಜಕನಾಯಿಕನ ಬೊಂ || ಆದಿ ಪರ್ವದ ಕಥೆ ಪ್ರಾರಂಭಃ || ಟೀಕು || ಶ್ರೀ ವೇದವ್ಯಾಸಾಯ ನಮಃ ಸ್ರುತ ಶೃಂಗಾರ ಸಯಿಲಾಸ್ರಮದಲ್ಲಿ | ಶವುನಕಾದಿ ಮಹಾ ಮುನೀಶ್ವರರು ·ತಪಸ ಮಾಡುವದಲ್ಲಿ ಯಿರುತಿದ್ದ ವೇಳೆಯಲ್ಲಿ ರೋಮಹರುಷಣಿಯುಂಬ ಸೂತಪುರಾಣೀಕರು ಬಂದು ಆ ಮುನೀಂದ್ರರು ಯಿಾ ಶವುನಕಾದಿಗಳು ಯಿಾ ಪುರಾಣೀಕರ ಸಂಭಾವಿಸಿ ಯಲೆ ಪೌರಾಣಿಕೋತ್ತಮರಿರ ವುತ್ತುಮುವಹಂತ ಪುರಾಣವುಂಟೆ ಯುಂದರೆ x x x x x x
ಅದು ಪಂಚಮ ವೇದವೆನಿಸುವದು |

ಅಂತ್ಯ : ದೃತರಾಷ್ಠ ಗಾಂದಾರಿ ವಿದುರ ಸಂಜಯ ಪಾಂಡವರು ಕುಂತೀದೇವಿ ದ್ರೌಪತಿ

ಸುಭದ್ರಾದೇವಿ ವುತ್ತರದೇವಿಯರು ಸಹಿತ ವ್ಯಾಸದೇವರು ದವುನ್ಯರು ಸಹಿತ ವುದಕ ಕ್ರಿಯೆಗಳನ್ನು ಮಾಡುವುದಕ್ಕೆ ಗಂಗಾತೀರಕ್ಕೆ ಬಂದರು ಯಂದು ವೈಶಂಪಾಯ ಮಹಾಮುನಿಯು ಜನಮೇಜಯ ಮಹಾರಾಯಗೆ ಹೇಳಿದರೆಂದು ನಯಿಮಿಷಾರಂಣ್ಯವಾಸಿಗಳಾದ ಶೌನಕಾದಿ ರುಷಿಗಳಿಗೆ ತಿಳುಹಿದರು ಸೌತ ಪವುರಾಣಿಕರು ನಿರೂಪಿಸಿದರೆಂಬಲ್ಲಿಗೆ ಗಥಾಪರ್ವ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ : ಮಹಾಭಾರತದಲ್ಲಿ ಆದಿಯಿಂದ ಗದಾಪರ್ವದ ಅಂತ್ಯದವರೆಗಿನ ಕಥೆ.

ವಿಶೇಷ : ನೋಡಿ ಅಕ್ಷರ.

1194

ಕೆ. ೪೧೨ **ಭಾರತ ತಾತ್ಪರ್ಯನಿರ್ಣಯ** ಗದ್ಯ

೧೯.೪" × ೧.೫" ವಾದಿರಾಜ (?) ಸು. ೧೫೭೦

೪೫–೨೦೧ ಪತ್ರ ೮ ಪಂಕ್ತಿ ೧೦೦ ಅಕ್ಷರ

ಆದಿ : ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವೇದವ್ಯಾಸಾಯ ನಮಃ ॥ ತಾತ್ಪರ್ಯನಿರ್ಣಯದಲ್ಲಿ ಹಂನ್ನೊಂದನೇ ಅಧ್ಯಾಯ ॥ ಸೋಮವಂಶದ ಉತ್ಪತ್ತಿಯ ಹೇಳುತಿದ್ಧಾರೂ । ಬ್ರಂಹ್ಮದೇವರಿಂದ ಉತ್ಪಂನನಾದ ಅತ್ರಿ ಋಷೀಶ್ವರರ ಪುತ್ರನಾದ ಚಂದ್ರಮದೇವರಿಂದ ಬುಧದೇವರೂ । ಆತನ ಮಗ ಪುರೂರವಸ್ಸು । ಆತನ ಮಗ ಆಯುರಾಯನೂ । x x x ಅವರು ವಿಸ್ಣುಭಕ್ತರೂ ।

ಅಂತ್ಯ : ವೇದವ್ಯಾಸರಾಗ್ನೆಯಿಂದ । ಯಿಲ್ಲಿ ಹೇಳಿದ ವೇದವಾಕ್ಯ । ಪುರಾಣವಾಕ್ಯ । ಇತಿಹಾಸ ಕಥೆಗಳನೇನವೆ ಅವೆಲ್ಲಾ ವೇದನಿರ್ಣಯಗಳು । ಯೆಲ್ಲಾ ಕಥೆಗಳಿಗೆಲ್ಲಾ । ಶ್ರೇಷ್ಠಗಳೂ । ಧರ್ಮಾರ್ಥಕಾಮಮೋಕ್ಷಗಳ ಕೊಡುವಂಥ್ಥಾವು । ಯಿದರ ಮಹಿಮೆ....ದವನಾವಾತ ಅಭ್ಯಾಸವ ಮಾಡಿಹಾ ಆತಗೆ ಕ್ಷಿಪ್ರದಲ್ಲಿ ಪ್ರಸಂನನಹನೂ ॥ ಇತಿ ಶ್ರೀಮಹಾಭಾರತದ ತೀರ್ಥ ಭಗವತ್ಪಾದಾಚಾರ್ಯ ವಿರಚಿತೇ ಶ್ರೀಮರ್ಂಮಹಾಭಾರತ ತಾತ್ಪರ್ಯನಿರ್ಣಯೇ ದ್ವಾತ್ರಿಂಶೋಧ್ಯಾಯಃ ॥ ಅಧ್ಯಾಯ ೩೨ಕ್ಕೆ ಮಂಗಳ ಮಹಾ ಶ್ರೀ.

ವಿಷಯ : ಮಹಾಭಾರತದ ಕಥೆ.

ವಿಶೇಷ : ಅಲ್ಲಲ್ಲಿ ಪದಗಳು ಇಲ್ಲ. ಕೆಲವು ಗರಿಗಳನ್ನು ಹುಳು ತಿಂದಿದೆ. ೪೮, ೪೯ ಈ ಎರಡು ಗರಿಗಳಿಲ್ಲ.

1195

ಕೆ. ೧೮೪/೧೨ **ಭಾರತದಲ್ಲಿ ರಾಜನೀತಿ** ಭಾಮಿನೀಷಟ್ಪದಿ

೧೩.೫ × ೧.೮″ ಕುಮಾರವ್ಯಾಸ ಸು. ೧೪೩೦

೨೪೨–೨೫೦ ಪತ್ರ ೮ ಪಂಕ್ತಿ ೬೦ ಅಕ್ಷರ

ಆದಿ : ಸಭೆಯೊಳೋಲಗದಲಿ ವಿರಿಂಚಿ
ಪ್ರಭುವಿನನುಮತದಿಂದ ಧರಣೀ
ವಿಭು ಮಹಾಕ್ರತು ರಾಜಸೂಯ್ಯವನೊಲಿದು ಕೈಕೊಂಡಾ ॥ ಪಲ್ಲಾ ॥
ಕೇಳು ಜನಮೇಜಯ ಧರಿತ್ರೀ
ಪಾಲ ಖಾಂಡಾವನದ ವಹ್ನಿ
ಜ್ವಾಲೆ ತೆಗದುದು ಕೂಡೆ ಹೊಗದುದು ಹೊದರ ಹೊಸ ಮಳೆಯಾ
ಮೇಲುಗಾಳಿಗದುಬ್ಬಿನಲಿ ಸಿಡಿ
ಲೋಲ ಸಹಿತರ್ಜುನನು ವಿಕ್ರಮ
ದೇಳಿಗೆಯ ಪರಿತೋಷದಿಂದಲಿ ಮರಳಿದರು ಪಟ್ಟಣಕೆ ॥ ೧ ॥

ಅಂತ್ಯ : ಕಳುಹಿದನು ಸುರಮುನಿಯನು ಧರದೊ
ಳಿಳಿದುದಂತ್ತಸ್ಥಾಪಯಜ್ಞದ
ಬಲುಹ ನೆನೆದಡಿಗಡಿಗೆ ಕಂಪ್ಪಿಸಿ ಕೈಯ್ಯಗಲ್ಲದಲಿ
ವೊಲದೊಲದು ಬಿಡಿ ಭಾವದ ವಿಕಳ
ವಳಿಸಿಹದುಳಿಸಿ ಮತ್ತೆ ಭೂಪತಿ
ತಿಲಕ ಚಿಂತಿಸಿ ನೆನೆಉತಿರ್ದ್ದನು ವೀರ ನಾರಾಯಣಾ ॥ ೯೫ ॥

ವಿಷಯ : ರಾಜನೀತಿ.

ವಿಶೇಷ : ೨೪೩, ೨೪೪, ೨೪೫ನೆಯ ಪತ್ರಗಳು ಮುರಿದಿವೆ. ಇದರೊಂದಿಗೆ, ಕಿರಾತಾರ್ಜನರ ಕಾಳಗ, ಅಂಗದ ಸಂಧಾನ, ಸುಭಾಷಿತ (ಸಂ), ಸೋಮಾರಾಧ್ಯರ ಶತಕ, ರತ್ನಾಕರ ಶತಕ, ಅರವತ್ತು ಮೂವರ ತ್ರಿವಿಧಿ, ಶಿವವಿಷ್ಣು ಕೀರ್ತನೆಗಳು, ಮಾನಸಪೂಜೆ (ಸಂ), ಗುರುಶಿಷ್ಯವಾದ, ಸದ್ಗುರು ರಹಸ್ಯ, ಕಾಲಜ್ಞಾನ ಎಂಬ ಗ್ರಂಥಗಳೂ ಇವೆ.

1196

ಕೆ. ೩೬೬/೬ **ಭಾರತ ನಿಘಂಟು** ಕಂದ

೮.೭″ × ೨.೩″ ? ?

೧–೪ ಪತ್ರ ೧೧ ಪಂಕ್ತಿ ೪೫ ಅಕ್ಷರ

ಆದಿ : ಭಾರತ ನಿಘಂಟು ॥ ಕಂದ ॥

ಭಾರತದೊಳ್ಕವಿರಾಜ ಕು
ಮಾರವ್ಯಾಸಂ ನೆಗಟ್ದಿ ಶಬ್ದಂಗಳ
ನಾರೈದುಸುರ್ವೆಂ ನಿಜದಿಂ
ಧೀರರಿದಂ ಮೆಚ್ಚಿ ಮನದೆಗೊಳ್ವುದು ಮುದದಿಂ ॥ ೧ ॥
ಭಾರತದೊಳ್ಪಿನ ನುಡಿಯಂ
ಚಾರು ಸುದೇಸೀಯ್ಯವೆಂಬ ಭಾಷಾಂತರಮಂ
ಸೂರಿಜನ ಮೆಚ್ಚಿ ಪೇಟ್ದಿಂ
ಧಾರುಣಿಯೊಳ್ ಕೋವಿದರ್ಗ್ಗೆ ಮುದವೊದಗುವಿನಂ ॥ ೨ ॥

ಅಂತ್ಯ : ಅರುವತ್ತೇಳಂ ಕಂದದೊ
ಳುರುವ ಮಹಾಭಾರತ ವರ್ನಕ ಕೃತಿಯೊ
ಳುಱುಗಿಹ ಶಬ್ದಾರ್ಥಕ್ಕೊ
ಸ್ಕರವಾಗಿಯ ಪೇಟ್ದೆನಖಿಳ ಶಬ್ದಾಂತರಮಂ ॥ ೬೭ ॥
ಇದನೋದಿ ಕೇಳಿದರ್ಗಂ
ಸದಮಲ ಮತಿ ಮುಕ್ತಿ ಬುದ್ಧಿಯೇಕಾತ್ರ್ಮಗಳುಂ
ಮುದದಿಂ ದೊರಕೊಳ್ವುದು ಶ್ರೀ
ಸುದತೀವರ ಹರಿ ವಿರಿಂಚಿಗಳ ಕುರುಣದೊಳಂ ॥ ೬೮ ॥
ಭಾರತ ನಿಘಂಟು ಸಮಾಪ್ತ ಮಂಗಳ ಮಹಾ ಶ್ರೀ

ವಿಷಯ : ಕುಮಾರವ್ಯಾಸ ಭಾರತದಲ್ಲಿ ಬರುವ ಕೆಲವು ಕ್ಲಿಷ್ಟ ಪದಗಳ ಅರ್ಥ.

ವಿಶೇಷ : ಱ ಮತ್ತು ೞ ಈ ಲಿಪಿಗಳ ಪ್ರಯೋಗವಿದೆ. ಇದೇ ಕಟ್ಟನಲ್ಲಿ ಶಬ್ದಾರ್ಥ ರತ್ನಾಕರ, ಪದ್ಯ ನಾನಾರ್ಥ, ಏಕಾಕ್ಷರ ನಿಘಂಟು, ನಾನಾರ್ಥ ರತ್ನಾಕರ (ಸಟೀಕಾ), ಧನಂಜಯ ನಿಘಂಟು (ಸಟೀಕಾ), ಕರ್ಣಾಟಕ ಶಬ್ದ ಮಂಜರಿ ಎಂಬ ಕೃತಿಗಳಿವೆ. ಕೊನೆಯಲ್ಲಿ ಈ ಕಟ್ಟಿಗೆ ಸಂಬಂಧ ಪಡದ ೧೦೪ರಿಂದ ೧೧೦ ವರೆಗಿನ ಕ್ರಮಾಂಕವುಳ್ಳ ಓಲೆಗಳಲ್ಲಿ ಕೆಲವು ಪದಗಳಿಗೆ ಅರ್ಥವಿದೆ. ಇದು ಅಪೂರ್ಣ.

1197

ಕೆ.ಎ. ೨೫೪/೫	**ಭಾರತ ನಿಘಂಟು**	ಕಂದ
೧೨.೯″ × ೮″	?	?
೧–೨೨ ಪತ್ರ	೧೨ ಪಂಕ್ತಿ	೧೪ ಅಕ್ಷರ

ಆದಿ : ಭಾರತ ನಿಘಂಟು ॥ ಕಂದ ॥

ಶ್ರೀ ವಾಗ್ವಲ್ಲಭೆಯಂ ರಾ
ಜೀವೋದ್ಭವನರಸಿಯಂ ಸುವಿದ್ಯಾಂಬುಧಿಯಂ
ದೇವತ್ರಯ ಪೂಜಿತೆಯಂ
ಭಾವಿಸಿ ಭಯ ಭಕ್ತಿಯಿಂದ ಭಜಿಸುವೆನನಿಶಂ ॥ ೧ ॥

॥ ಕಂದಂ ॥ ಭಾರತದೊಳ್ ಕವಿರಾಜ ಕು
ಮಾರವ್ಯಾಸಂ ಪೊನೆಳ್ದ ಶಬ್ದಂಗಳ ನಾ
ನಾರ್ಥ್ಯೆದುಸುರ್ವ್ವೆಂ ನಿಜದಿಂ
ಧೀರರಿದಂ ಮೆಚ್ಚಿ ಮನದೆ ಗೊಳ್ವುದು ಮುದದಿಂ ॥ ೨ ॥

ಅಂತ್ಯ : ಅರುವತ್ತೇಳುಂ ಕಂದದ
ಉರುತರ ಭಾರತದ ಕೃತಿಯೊಳಿರುತಿಹ ಶಬ್ದಾ
ರ್ಥ ರಹಸ್ಯ ಪರಿಷ್ಕೃತಿಗೋ
ಸ್ಕರವಾಗಿಯೆ ಪೇಳ್ದೆನಖಿಲ ಶಬ್ದಾಂತರಮಂ ॥ ೬೭ ॥
ಇತಿ ಕರ್ಣಾಟಕ ಭಾರತ ನಿಘಂಟು ಸಂಪೂರ್ಣಂ ॥

ವಿಷಯ : ಕುಮಾರವ್ಯಾಸ ಭಾರತದಲ್ಲಿ ಬರುವ ಕೆಲವು ಕ್ಲಿಷ್ಟ ಪದಗಳ ಅರ್ಥ.

ವಿಶೇಷ : ಈ ಪುಸ್ತಕದಲ್ಲಿ ಶಬ್ದಾಗಮ, ಕರ್ಣಾಟಕ ಶಬ್ದಸಾರ, ಕರ್ಣಾಟಕ ಸಂಜೀವನ, ರನ್ನ ನಿಘಂಟು, ಕರ್ಣಾಟಕ ಸಂಜೀವಿನಿ, ಕವಿ ಕಂಠಾಹಾರ, ನಾನಾರ್ಥ ರತ್ನಾಕರ ಎಂಬ ಕೃತಿಗಳಿವೆ. ಪತ್ರಗಳ ಒಂದೇ ಕಡೆ ಬರೆದಿದೆ.

1198

ಕೆ. ಬಿ. ೨೯೦/೫	**ಭಾರತ ನಿಘಂಟು**	ಕಂದ,
೭.೬" × ೬.೩"	?	?
೨೭–೩೪ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಭಾರತ ನಿಘಂಟು ಬರೆಯುವದಕ್ಕೆ ಶುಭಮಸ್ತು ॥
ಶ್ರೀ ವಾಗ್ವಲ್ಲಭೆಯಂ ರಾ
ಜೀವೋದ್ಭವನರಶಿಯಂ ಸುವಿದ್ಯಾಂಬುಧಿಯಂ
ದೇವತ್ರಯ ಪೂಜಿತೆಯಂ
ಭಾವಿಸಿ ಭಯಭಕ್ತಿಯಂದ ಭಜಿಸುವೆನನಿಶಂ ॥ ೧ ॥
ಭಾರತದೊಳ್ ಕವಿರಾಜ ಕು
ಮಾರವ್ಯಾಸಂ ಪೊನೇಳ್ದ ಶಬ್ದಂಗಳ ನಾ
ನಾರ್ಥ್ಯೆದುಸುರ್ವೆಂ ನಿಜದಿಂ
ಧೀರರಿದಂ ಮೆಚ್ಚಿ ಮನದೆ ಗೊಳ್ವುದು ಮುದರಿಂ ॥ ೨ ॥

x x x x

ಅಡಬಳವೆಂದೆನೆ ಮಾಂಸಂ
ಪಡಿಸಣಮೆನೆ ಪರೀಕ್ಷೆ ಕಡುಹೆನೆ ಕಡುಶೌರ್ಯಂ
ಕಡುಪೆನೆ ಪರಾಕ್ರಮಂ ಮುಂ
ಕುಡಿಯನೆ ಅವಘಡಕೆ ನಾಮವೆಂದರಿಗೆ ಬುಧರ್ || ೪ ||

ಅಂತ್ಯ : ಪಿಡಿ ಸವಡಿಯನಲ್ಪೆಣ್ಗಜ
ಪುಡಿಯಂದೊಡೆ ಪರಳುಗಾಯಿ ಬಗ್ಗೆನೆ ವ್ಯಾಘ್ರಂ
ಪೊಡೆಯನಲುದರಂ ಮಿಗೆ ಯಾ
ಜಡಿಯಲಾಷಾಡವೆಂದರಿಗೆ ಬುಧರ್ || ೬೫ ||
ಇತಿ ಕರ್ಣಾಟಕ ಭಾರತ ನಿಘಂಟು ಸಂಪೂರ್ಣಕ್ಕೆ ಮಂಗಳ ಮಹಾ ಶ್ರೀ.

ವಿಷಯ : ಕುಮಾರ ವ್ಯಾಸ ಭಾರತದಲ್ಲಿ ಬರುವ ಕೆಲವು ಕ್ಲಿಷ್ಟ ಪದಗಳ ಅರ್ಥ.

ವಿಶೇಷ : ಇದರೊಂದಿಗೆ ಶಬ್ದ ರತ್ನಾಕರ, .ಪದ್ಯ ನಾನಾರ್ಥ, ಏಕಾಕ್ಷರ ನಿಘಂಟು, ಕರ್ಣಾಟಕ ಧಾತುಗಳು, ಧನಂಜಯ ನಿಘಂಟು, ಕನ್ನಡ ಶಬ್ದ ಮಂಜರೀ ಟೀಕಾಸುಧಾ, ಶಬ್ದಮಂಜರೀ, ವಿಶೇಷ ವಿಷಯಗಳು ಎಂಬ ಗ್ರಂಥಗಳು ಇವೆ. ತೆಳುವು ಕಾಗದ.

1199

ಕೆ.ಬಿ. ೪೨೯/೧	**ಭಾರತ ನಿಘಂಟು**	ಕಂದ
೭.೭″ × ೬″	?	?
೧–೯ ಪತ್ರ	೧೫ ಪಂಕ್ತಿ	೧೪ ಅಕ್ಷರ

ಆದಿ : ಕರ್ನಾಟಕ ಭಾರತ ನಿಘಂಟು ಬರಿಯುವದಕ್ಕೆ ನಿರ್ವಿಘ್ನಮಸ್ತು ||
ಶ್ರೀ ವಾಗ್ವಲ್ಲಭೆಯಂ ರಾ
ಜೀವೋದ್ಭವನರಸಿಯಂ ಸುವಿದ್ಯಾಂಬುಧಿಯಂ
ದೇವತ್ರಯಪೂಜಿತೆಯಂ
ಭಾವಿಸಿ ಭಯಭಕ್ತಿಯಿಂದ ಭಜಿಸುವೆನನಿಶಂ || ೧ ||
ಭಾರತದೊಳ್ ಕವಿರಾಜ ಕು
ಮಾರವ್ಯಾಸಂ ಪೋನೇಳ್ದ ಶಬ್ದಂಗಳ ನಾ
ನಾರ್ಥೈದುಸುರ್ವೆಂ ನಿಜಂ
ಧೀರರಿದಂ ಮೆಚ್ಚಿ ಮನದೆ ನೋಳ್ಪುದು ಮುದದಿಂದಂ || ೨ ||

ಅಂತ್ಯ : ಪಿಡಿ ಸವಡಿಯನಲ್ ಪೆಣ್ಗಜ
ಪುಡಿಯಂದೊಡೆ ಪರಳುಗಾಯಿ ಬಗ್ಗೆನೆ ವ್ಯಾಘ್ರಂ
ಪೊಡೆಯೆನಲುಧರಂ ಮಿಗೆ
ಜಡಿಯನಲ್ಕಾಷಾಡಮಾಸವೆಂದರಿಗೆ ಬುಧರ್ || ೬೪ ||

ಯಿತಿ ಕರ್ನಾಟಕ ಭಾರತ ನಿಘಂಟು ಶ್ರೀನಿವಾಸನ ವಹಿಗೆ ಬರೆದು ಸಮಾಪ್ತ ಮಂಗಳ ಮಹಾಶ್ರೀ ||

ವಿಷಯ : ಕುಮಾರವ್ಯಾಸ ಭಾರತದಲ್ಲಿ ಬರುವ ಕೆಲವು ಕ್ಲಿಷ್ಟ ಪದಗಳ ಅರ್ಥ.

ವಿಶೇಷ : ಇದರೊಂದಿಗೆ ಕನ್ನಡ ಧಾತುಪಾಠ, ಶಬ್ದರತ್ನಾಕರ, ನಾನಾರ್ಥಕಂದ, ಚತುರಾಸ್ಯನಿಘಂಟು, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ(ಸಟೀಕು), ಕರ್ಣಾಟಕ ಧಾತುನಿರ್ಣಯ ಎಂಬ ಗ್ರಂಥಗಳೂ ಇವೆ.

1200

ಕೆ. ೧೯೪/೧ **ಭಾವಚಿಂತಾರತ್ನ** ವಾರ್ಧಕಷಟ್ಪದಿ

೧೧.೨" × ೧.೯" ಗುಬ್ಬಿಯ ಮಲ್ಲಣಾರ್ಯ ೧೫೧೩

೧೪೪–೧೮೦ ಪತ್ರ ೧೦ ಪಂಕ್ತಿ ೫೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ|| ಸತ್ಯೇಂದ್ರಚೋಳನ ಕಾವ್ಯ ಭಾವಚಿಂತಾರತ್ನ || ವಾರ್ಧಿಕಷಟ್ಪದ || ರಾಗ ನಾಟಿ ||
ಪಲ್ಲವ || ಶ್ರೀವಿಮಲ ಗುಹನಮರ ಗುಂಡ ಮಲ್ಲೇಶ್ವರನ
ಸೇನಾನಿಮಿತ್ಯದಿಂದಿಳೆಯೊಳೊಗೆದಾ ಪ್ರಣವ
ಜೀವ ಪಂಚಾಕ್ಷರಿಯ ಬಿತ್ತರಿಸಿದ ಕುಲಚ್ಚರೆಯಗಾನಂದದಿಂದಾ ||
ಪದ|| ಶ್ರೀ ಗುರು ಸದಾನಂದ ವಾಗೀಶ ವರದ ತುಹಿ
ನಾಗಜಾರ್ಧಾಂಗ ಮಹಿಮಾ ಗರಿಮ ಚರಣ ಸಖ
ಲಾಗಮಸ್ತುತ್ಯ ಶಶಿಭಾಗಭೂಷಿತ ಮಕುಟಯೋಗಿಜನಹೃಂನಿವಾಸಾ
ರಾಗಾದಿ ರಹಿತ ಸುಖಸಾಗರನಲಾ ನೀನು
ಭೋಗ ಮಲ್ಲೇಶ ಬಿಡದೀಗಳೆಂನಯ ಕ್ರುತಿಯ
ಭೂಗ ಘನ ದಿಗ್ಭರಿತವಾಗಿ ಪಸರಿಸುವಿನಂ ಸಾಗಿಸುವುದಳ್ಕರಿಂದೆ || ೧ ||

ಅಂತ್ಯ : ಬಾಣ ಗುಣ ವಾರ್ಧಿ ವಿದ್ದು ಸಂದ ಶಕವರುಷದಿಂ
ಮೇಣು ಸಂವತ್ಸರಂ ಶ್ರೀಮುಖಂ ಕಾರ್ತ್ತೀಕ ದು
ರೀಣವಹ ಶುದ್ಧ ಸಪ್ತಮಿ ಶುಕ್ರವಾರವಾ ಶ್ರವಣ ನಕ್ಷತ್ರದಲ್ಲಿ
ಜಾಣೆನಿಂ ನಾಗಲಿಂಗಯ್ಯಗಳ ಸುತ ಶಿವ
ಪ್ರಾಣಿ ನಿಂಗಪ್ಪನಣುಗಂ ಚೇರೆಮಾಂಕಗ
ಕ್ಷೀಣವೆನೆ ಮಲ್ಯಣಾರ್ಯಂ ನಿರೂಪಿಸಿದನೀ ಭಾವಚಿಂತಾರತ್ನಮಂ || ೫೮ ||

x x x x

ಯಿದು ಸಕಲಭಕ್ತಪದ ಪಂಕೇಜರೇಣುವು
ಸ್ತದ ಮಲ್ಲಣಾರ್ಯ್ಯನಾ ಚೇರಮಾಂಕಂಗೆ ಪೇ
ಳಿದ ಭಕ್ತ ಸತ್ಯೇಂದ್ರ ಚೋಳಕೃತಿ ಭಾವಚಿಂತಾರತ್ನವನುಳಕರ್ಣಾ
ಹೃದಯಮಸ್ತಕ ವದನ ಸರ್ವಾಂಗ ಸೌಖ್ಯಕಾ
ಸ್ಪದವಖಿಳ ಸಜ್ಜನರ್ಗೆ ಪಂಚಾಕ್ಷರಿಯ ಮಹ
ತ್ವದ ಬೋದೆಯಂದಡೋದಿದ ಕೇಳಿದರ್ಗಿಷ್ಟಸಿದ್ಧಿ ಸರ್ವರಿಗಪ್ಪುದೂ ॥ ೬೩ ॥
ಅಂತು ಸಂಧಿ ೯ಕ್ಕಂ ಪದನೂ ೩೭೧ಕ್ಕಂ ಮಂಗಳಮಹಾಶ್ರೀ.

ವಿಷಯ : ಸತ್ಯೇಂದ್ರಚೋಳರಾಜನ ಕಥೆ.

ವಿಶೇಷ : ಬರಹ ಸುಮಾರಾಗಿದೆ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ರಾಜೇಂದ ವಿಜಯವೆಂಬ ಮತ್ತೊಂದು ಗ್ರಂಥವಿದೆ.

1201

ಕೆ. ೬೩೦	ಭಾವಚಿಂತಾರತ್ನ (ಸಟೀಕು)	ವಾರ್ಧಕಷಟ್ಪದಿ, ಟೀಕು
೧೪.೪" × ೨"	ಗುಬ್ಬಿಯ ಮಲ್ಲಣಾರ್ಯ	೧೫೧೩
೧–೧೨೦ ಪತ್ರ	೧೨ ಪಂಕ್ತಿ	೮೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಭಾವಚಿಂತಾರತ್ನದ ವ್ಯಾಖ್ಯಾನ ಬರೆಉದಕ್ಕೆ ಸುಭಮಸ್ತು ॥ x x x x
ಪಲ್ಲವ ॥ ಕಳಿಪರ್ತ್ರ ಕುಟ್ಮಳ ಕುಸುಮ ಶಲಾಟುಫಳ ಮಾಧುರ್ಯರಸವನೊಳ ಕೊಂಡು । ಮಡಲಿಡಿದು ಕುಡಿನಡೆವ ನಿಡಿವಳ್ಳಿಯಂಕೆತೆಸೆವ ಪುಸ್ತಕದೊಗಣ ಅಕ್ಷರ ಅಕ್ಷರ ಮಧ್ಯದಲ್ಲಿ ಅರ್ಥವಡಗಿರ್ದು ವಿಸ್ತರಿಸುವ ಹಾಂಗೆ x x x

ಶ್ರೀ ವಿಮಲ ಗುಹನಮರ ಗುಂಡ ಮಲ್ಲೇಶ್ವರನ
ಸೇವಾ ನಿಮಿತ್ಯದಿಂದಿಳೆಯೊಳಗೆದಾ ಪ್ರಣವ
ಜೀವ ಪಂಚಾಕ್ಷರಿಯ ಬಿತ್ತರಿಸಿದಂ ಕುಲಶ್ಚರಿಯಗಾನಂವದಿಂದೆ ॥
ಟೀ ॥ ಶ್ರೀ । ಐಶ್ವರ್ಯಮಯವಾದ । ವಿಮಲ । ನಿತ್ಯತ್ವವನುಳ್ಳ । ಗುಹಂ । ಷಣ್ಮುಖ ದೇವರು। ಅಮರ ಗುಂಡಮಲ್ಲೇಶ್ವರನ। x x x x x ಬಿತ್ತರಿಸಿದಂ। ಬಿತ್ತರಿಸಿದನೆಂಬುದರ್ಥ ॥

ಅಂತ್ಯ : ಬಾಣ ಗುಣ ವಾರ್ಧಿ ವಿಧು ಸಂದ ಶಕವರುಷದಿಂ
ಮೇಣಮಲ ವತ್ಸರಂ ಶ್ರೀಮುಖಂ ಕಾರ್ತಿಕದು
ರೀಣ........ಕ್ರವಾರವಾ ಶ್ರವಣ ನಕ್ಷತ್ರದಲ್ಲಿ ....

ಜಾಣನಾ ನಾಗಲಿಂಗಾಂಹ್ವಯನ ಸುತ ಶಿವ
ಪ್ರಾಣಲಿಂಗಪ್ಪನಾತ್ಮಜ ಚಾರಮಯ್ಯಂಗ
ಕ್ಷೀಣವೆನೆ ಮಲ್ಯಣಾರ್ಯ್ಯಕ ನಿರೂಪಿಸಿದನೀ ಭಾವಚಿಂತಾರತ್ನವಂ ||೫೮||
X X X X
ಪ || ಇದು ಸಕಲ ಭಕ್ತಪದಪಂಕೇಜ ರೇಣುಮ
ಸ್ತದ ಮಲ್ಲಣಾರ್ಯರಾ ಚಾರಮಾಂಕಂಗೆ ಬೆಸ
ಸಿದ ಕಾವ್ಯ ಸತ್ಯೇಂದ್ರಚೋಳ ಕೃತಿ ಭಾವಚಿಂತಾರತ್ನವಮಳ ಕರ್ನಾ
ಹೃಯ ಮಸ್ತಕವದನ ಸರ್ವಾಂಗ ಸೌಖ್ಯಕಾ
ಸ್ಪದವಖಿಳ....ಸುಜನರ್ಗೆ ಪಂಚಾಕ್ಷರಿಯ ಮಹ
ತ್ವದ ಬೋಧೆಯೆಂದೋದಿದೊಡೆ ಕೇಳಿದರಿಗಿಷ್ಟಸಿದ್ಧಿ ಸರ್ವರಿಗಪ್ಪುದು ||೬೫||

ದುರ್ಮತಿ ಸಂವತ್ಸರದ | ಶ್ರಾವಣ ಶುದ್ಧ ಸೋಮವಾರೇಕಾದಶಿ ಮೂಲ ನಕ್ಷತ್ರ ಧನುರ್ರಾಶಿ ನಿಷ್ಕಂಬಯೋ ತೈತುಲ ಕರಣ ವಂಭತ್ತಾಶಿನಲ್ಲಿದ್ದ ಅಮೃತಗಳಿಗೆ ಬ್ರಹಸ್ಪತಿ ಸತ್ಯವ್ಯಾಳದ ಸಾವಿಂತ್ರಿಕೆಯೆಂಬ ಪಂಚಂಗ ಹಾರ್ವಕದಲ್ಲಿ ಬ್ರಹವಾರದ ಪಟ್ಟಗಂಬಳಿ ಸಿದ್ಧಲಿಂಗಸ್ವಾಮಿಯವರು ಮಾಡಿದ ಟಿಪ್ಪಣವ ಬರೆದು ಸಮಾಪ್ತಿಯ ಮಾಡಿದೆ ಚಿಂತಾರತ್ನ ಟೀಕು ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಸತ್ಯೇಂದ್ರಚೋಳರಾಜನ ಕಥೆ.

ವಿಶೇಷ : ಕೆಲವು ಗರಿಗಳ ಅಂಚು ಮುರಿದಿದೆ. ಈ ಕಟ್ಟಿನಲ್ಲಿ ಬೇರೆ ಬೇರೆ ಅಳತೆಯ ಗರಿಗಳಿವೆ. ಮಧ್ಯದಲ್ಲಿ ಕ್ರಮಾಂಕ ಸರಿಯಾಗಿಲ್ಲ. ಒಟ್ಟು ಪತ್ರ ಸಂಖ್ಯೆ ೧೨೧. ಕೊನೆಯಲ್ಲಿ ಗ್ರಂಥಕ್ಕೆ ಸಂಬಂಧಪಡದ ಎರಡು ಗರಿಗಳಿವೆ.

1202

ಕೆ.ಎ. ೭೫	**ಭಾವಚಿಂತಾರತ್ನ**	ವಾರ್ಧಕ ಷಟ್ಪದಿ
೧೨.೬" × ೭.೮"	ಗುಬ್ಬಿಯ ಮಲ್ಲಣಾರ್ಯ	೧೫೧೩
೧–೫೮ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ಭಾವಚಿಂತಾರತ್ನ ಕಾವ್ಯ ಬರೆಯುವದಕ್ಕೆ ನಿರ್ವಿಘ್ನಮಸ್ತು (ವಾರ್ಧಿಕಷಟ್ಪದಿ)
ಶ್ರೀವಿಮಲಗುಹನಮರಗುಂಡ ಮಲ್ಲೇಶ್ವರನ
ಸೇವಾನಿಮಿತ್ಯದಿಂದಿಳೆಯೊಳೊಗೆದಾ ಪ್ರಣವ
ಜೀವ ಪಂಚಾಕ್ಷರಿಯ ಬಿತ್ತರಿಸಿದಂ ಕುಲಶಿರಿಯಗಾನಂದದಿಂದಾ
ಪದನೂ || ಶ್ರೀಗುರು ಸದಾನಂದವಾಗೀಶವರದ ತುಹಿ
ನಾಗಜಾರ್ಧಾಂಗ ಮಹಿಮಾ ಗರಿಮ ಚರಣ ಸಕ
ಲಾಗಮಸ್ತುತ್ಯ ಶಶಿಭಾಗಭೂಷಿತ ಮಕುಟಯೋಗಿಜನಹೃನ್ನಿವಾಸಾ

ರಾಗಾದಿರಹಿತ ಸುಖಸಾಗರನಲಾ ನೀನು
ಭೋಗಮಲ್ಲೇಶ ಬಿಡದೀಗವೆನ್ನಯ ಕೃತಿಯ
ಭೂ ಗಗನ ದಿಗ್ಭರಿತವಾಗಿ ಪಸರಿಸುವಿನಂ ಸಾಗಿಸುವುದಳ್ಕರಿಂದೆ ॥ ೧ ॥

ಅಂತ್ಯ : ಬಾಣ ಗುಣ ವಾರ್ಧಿ ವಿಧು ಸಂದ ಸಕವರುಷದಿಂ
ಮೇಣವಮಲವತ್ಸರಂ ಶ್ರೀಮುಖಂ ಕಾರ್ತ್ತೀಕ ದು
ರೀಣವಹ ಶುದ್ಧಸಪ್ತಮಿ ಶುಕ್ರವಾರವಾ ಶ್ರವಣ ನಕ್ಷತ್ರದಲ್ಲಿ
ಜಾಣನಾ ನಾಗಲಿಂಗಾಹ್ವಯಂನ್ನ ಸುತ ಶಿವ
ಪ್ರಾಣಿಲಿಂಗಪ್ಪನಾತ್ಮಜ ಚೇರಮಾಂಕಂಗೆ ಯ
ಕ್ಷೀಣವೆನೆ ಮಲ್ಲಣಾರ್ಯ್ಯಂ ನಿರೂಪಿಸಿದನೀ ಭಾವಚಿಂತಾರತ್ನಮಂ ॥ ೫೯ ॥

x x x x

ಯಿದು ಸಕಲಭಕ್ತ್ರಪದ ಪಂಕೇಜರೇಣುವ
ಸ್ಪದ ಮಲ್ಯಣಾರ್ಯ್ಯನಾ ಚೇರಮಾಂಕಂಗೆ ಬೆಸ
ಸಿದ ಭಕ್ತ ಸತ್ಯೇಂದ್ರಚೋಳಕೃತಿ ಭಾವಚಿಂತಾಕಮಮಳ ಕರ್ನ್ನ
ಹೃದಯಮಸ್ತಕವದನ ಸರ್ವ್ವಾಂಗಸೌಖ್ಯಕಾ
ಸ್ಪದವಖಿಳ ಸಜ್ಜನರ್ಗ್ಗೆ ಪಂಚಾಕ್ಷರಿಯ ಮ
ತ್ಪದ ಬೋಧೆಯುಂದೋದಿದೊಡೆ ಕೇಳಿದರಿಗಿಷ್ಟಸಿದ್ಧಿ ಸರ್ವ್ವರಿಗಪ್ಪುದೂ ॥೬೪॥

ಅಂತು ಸಂಧಿ ೯ಕ್ಕಂ ಪದನು ೩೦೭೩ಕ್ಕಂ ಮಂಗಳಮಹಾ ಶ್ರೀಮದಸ್ಮದ್ಗುರು ದಕ್ಷಿಣಾಮೂರ್ತಿಯೇ ನಮಃ ॥ಶ್ರೀ ಭಾವಚಿಂತಾರತ್ನಂ ಸಂಪೂರ್ಣವಾದುದು.

ವಿಷಯ : ಸತ್ಯೇಂದ್ರಚೋಳರಾಜನ ಕಥೆ.

ವಿಶೇಷ : ಸ್ಫುಟ ಬರಹ. ಶಕಟರೇಫವಿದೆ.

1203

ಕೆ. ಎ. ೨೧೨/೧	**ಭಾವಚಿಂತಾರತ್ನ**	ವಾರ್ಧಕ ಷಟ್ಪದಿ
೧೨.೮″ × ೭.೮″	ಗುಬ್ಬಿಯ ಮಲ್ಲಣಾರ್ಯ	೧೫೧೩
೧–೮೮ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ : ಸತ್ಯೇಂದ್ರ ಚೋಳನಕಾವ್ಯ ಭಾವಚಿಂತಾರತ್ನ "ವಾರ್ಧಿಕ ಷಟ್ಪದಿ"
ರಾಗ ನಾಟಿ ।
ಪಲ್ಲ ॥ ಶ್ರೀ ವಿಮಲ ಗುಹನಮರಗುಂಡ ಮಲ್ಲೇಶ್ವರನ
ಸೇವಾನಿಮಿತ್ಯದಿಂದಿಳೆಯೊಳೊಗೆದಾ ಪ್ರಣವ
ಜೀವ ಪಂಚಾಕ್ಷರಿಯ ಬಿತ್ತರಿಸಿದಂ ಕುಲ ಚೆರೆಯಗಾನಂದದಿಂದಾ ॥

ಪದ ॥ ಶ್ರೀಗುರು ಸದಾನಂದ ವಾಗೀಶ ವರದ ತುಹಿ
ನಾಗಜಾರ್ದ್ಧಾಂಗ ಮಹಿಮಾಗರಿಮ ಚರಣ ಸಕ
ಲಾಗಮಸ್ತುತ್ಯ ಶಶಿಭಾಗ ಭೂಷಿತ ಮಕುಟಯೋಗಿಜನಹೃನ್ನಿವಾಸಾ
ರಾಗಾದಿರಹಿತ ಸುಖಸಾಗರನಲಾ ನೀನು
ಬೋಗ ಮಲ್ಲೇಶ ಬಿಡದೀಗವೆಂನಯ ಕೃತಿಯ
ಭೂಗಗನದಿಗ್ಪರೀತವಾಗಿ ಪಸರಿಸುವಿನಂ ಸಾಗಿಸುವುದಳ್ಕರಿಂದೆ ॥ ೧ ॥

ಅಂತ್ಯ : ಬಾಣಗುಣವಾರ್ಧಿ ವಿಧು ಸಂದ ಶಕವರುಷದಿಂ
ಮೇಣು ಸಂವತ್ಸರಂ ಶ್ರೀಮುಖಂ ಕಾರ್ತಿಕದು
ರೀಣವಹ ಶುದ್ಧ ಸಪ್ತಮಿ ಶುಕ್ರವಾರವಾ ಶ್ರವಣ ನಕ್ಷತ್ರದಲ್ಲಿ
ಜಾಣೆನಿಂ ನಾಗಲಿಂಗಯ್ಯಗಳ ಸುತಶಿವ
ಪ್ರಾಣಲಿಂಗಪ್ಪನಣುಗಂ ಚರಮಾಂಕಗ
ಕ್ಷೀಣವೆನೆ ಮಲ್ಲಣಾರ್ಯಂ ನಿರೂಪಿಸಿದನೀ ಭಾವಚಿಂತಾರತ್ನಮಂ ॥ ೫೮ ॥

x x x x

ಇದು ಸಕಲಭಕ್ತಪದ ಪಂಕೇಜರೇಣು ಮ
ಸ್ತದ ಮಲ್ಲಣಾರ್ಯ್ಯನಾ ಚೇರಮಾಂಕಂಗೆ ಪೇ
ಳಿದ ಭಕ್ತ ಸತ್ಯೇಂದ್ರಚೋಳಕೃತಿಭಾವಚಿಂತಾರತ್ನವಮಳ ಕರ್ನಾ
ಹೃದಯ ಮಸ್ತಕವದನ ಸರ್ವಾಂಗ ಸೌಖ್ಯಕಾ
ಸ್ಪದವಖಿಳ ಸಜ್ಜನರ್ಗೆ ಪಂಚಾಕ್ಷರಿಯ ಮಹ
ತ್ವದ ಬೋಧೆಯಂದಡೋಡಿದ ಕೇಳಿದರಿಗಿಪ್ಪ ಸಿದ್ಧಿ ಸರ್ವರಿಗಪ್ಪುದು॥ ೬೩ ॥
ಅಂತು ಸಂಧಿ ೯ಕ್ಕಂ ಪದನು ೩೭೧ಕ್ಕಂ ಭಾವಚಿಂತಾರತ್ನ ಸಮಾಪ್ತ
ಮಂಗಳ ಮಹಾಶ್ರಿ ॥

ವಿಷಯ : ಸತ್ಯೇಂದ್ರಚೋಳರಾಜನ ಕಥೆ.

ವಿಶೇಷ : ಅಕ್ಷರ ಸ್ಫುಟವಾಗಿದೆ. ಶಕಟರೇಫದ ಪ್ರಯೋಗವಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಇದೇ ಪುಸ್ತಕದಲ್ಲಿ ಬಸವೇಶ್ವರನ ಪಂಚಸ್ತೋತ್ರವೂ ಇದೆ.

1204

ಕೆ.ಎ. ೨೨೨ **ಭಾವಚಿಂತಾರತ್ನ** (ಸಟೀಕು) ವಾರ್ಧಕಷಟ್ಪದಿ, ಟೀಕು
೧೨" × ೭.೫" ಗುಬ್ಬಿಯ ಮಲ್ಲಣಾರ್ಯ ೧೫೧೩
೧–೪೬೬ ಪುಟ ೨೫ ಪಂಕ್ತಿ ೨೩ ಅಕ್ಷರ

ಆದಿ : ಶ್ರೀ ಗುರು ಶಂಭುಲಿಂಗ ಪರಬ್ರಂಹ್ಮ ಸಾಂಬಸದಾಶಿವ ಮಹಾಲಿಂಗ ಮೂರ್ತಯೇ ನಮಃ ॥ x x x x

ಸತ್ಯೇಂದ್ರಚೋಳರಾಯನ ಕಾವ್ಯ ಭಾವಚಿಂತ್ರಾರತ್ನವೆಂಬ ದ್ವಯನಾಮದ
ವ್ಯಾಖ್ಯಾನವ ಬರವುದಕ್ಕೆ ಶುಭಮಸ್ತು ||
ಸತ್ಯೇಂದ್ರ ಚೋಳರಾಯನ ನಿತ್ಯೇಂದ್ರ ಚೋಳರಾಯನೆಂಬ ಶಿವಶರಣನ |
ಕಾವ್ಯಶಬ್ದವು ಭಾವಚಿಂತಾರತ್ನವೆಂಬ ಭಾವಾರ್ಥ ಚಿತ್ರಾರ್ಥ ಸ್ವರೂಪಾರ್ಥ

x x x x

ಶ್ರೀ ವಿಮಲ ಗುಹನಮರಗುಂಡಮಲ್ಲೇಶ್ವರನ
ಸೇವಾನಿಮಿತ್ಯದಿಂದಿಳೆಯುಳೊಗೆದಾ ಪ್ರಣಾಮ
ಜೀವ ಪಂಚ್ಚಾಕ್ಷರಿಯ ಬಿತ್ತರಿಸಿದಂ ಕುಲಚರಿಯಗಾನಂದದಿಂದಾ
ಟೀಕು || ಶ್ರೀ | ಗ್ನಾನದಾನ ಸತ್ಕರವುಳ್ಳ | ವಿಮಲ | ನಿರ್ಮಲವಾದ x x x
ಬಿತ್ತರಿಸಿದಂ | ವಿಸ್ತರಿಸಿದನು ಯೆಂಬುದರ್ಥ |

ಅಂತ್ಯ : ಪದ || ಬಾಣಗುಣವಾರ್ಧಿವಿದು ಸಂದ ಸಕವರುಷದಿಂ
ಮೇಣಮಲ ವತ್ಸರಂ ಶ್ರೀಮುಖಂ ಕಾರ್ತಿಕದು
ರೀಣವ ಶುದ್ಧ ಸಪ್ತಮಿ ಶುಕ್ರವಾರವಾ ಶ್ರವಣ ನಕ್ಷತ್ರದಲ್ಲೀ
ಜಾಣನಹ ನಾಗಯುಗಳಂ ಸುತ ಶಿವ
ಪ್ರಾಣಲಿಂಗಪ್ಪನಣುಗಂ ಚರವ್ಯೈಯ್ಯಂಗ್ಗ
ಕ್ಷೀಣವೆನೆ ಮಲ್ಯಣಾರ್ಯ್ಯಂ ನಿರೂಪಿಸಿದನೀ ಭಾವಚಿಂತಾರತ್ನಮಂ ||೫೮||

x x x x

ಯಿದು ಸಕಲ ಭಕ್ತಪದ ಪಂಕ್ಕೇಜರೇಣು ಮ
ಸ್ತಕ ಮಲ್ಯಣಾರ್ಯ್ಯನಾ ಚಾರಮಾಂಕಂಗೆ ಬೆಸ
ಸಿದ ಭಕ್ತ ಸತ್ಯೇಂದ್ರಚೋಳ ಕ್ರುತಿ ಭಾವಚಿಂತ್ರಾರತ್ನದಮುಳ ಕರ್ಣಾ
ಹೃದಯ ಮಸ್ತಕ ವದನ ಸರ್ವಾಂಗ ಸೌಖ್ಯಕಾ
ಸ್ಪದವಖಿಳ ಸುಜನರ್ಗೆ ಪಂಚಾಕ್ಷರದ ಮಹ
ತ್ವದ ಬೋಧೆಯಿಂದೋದಿದೊಡೆ ಕೇಳಿದರಿಗಿಷ್ಟಸಿದ್ಧಿ ಸರ್ವರಿಗಪ್ಪುದೂ ||
ಅಂತ್ತೂ ಸಂಧಿ ೯ಕಾಂ ಪದನು ೩೬೩ಕ್ಕಂ ಮಂಗಳ ಮಹಾಶ್ರೀ.

ವಿಷಯ : ಸತ್ಯೇಂದ್ರ ಚೋಳರಾಜನ ಕಥೆ.

ವಿಶೇಷ : ಅಕ್ಷರ ಸಣ್ಣ. ಕೊನೆಯ ಐದಾರು ಪತ್ರಗಳನ್ನು ಅಲ್ಲಲ್ಲಿ ಹುಳು ಕೊರೆದಿದೆ.
೬೪, ೧೦೮, ೩೩೮, ೩೬೭–ಈ ಪುಟಗಳಲ್ಲಿ ಬರವಣಿಗೆಯಿಲ್ಲ.

1205

ಕೆ. ೨೯	**ಭಾಷಾಕುಸುಮಮಂಜರೀ**	ಶ್ಲೋಕ, ಗದ್ಯ
೧೬.೩"×೧.೬"	ರಾಮಬ್ರಹ್ಮಾನಂದ	೧೯ನೆಯ ಶತಕ
೧–೬೯ ಪತ್ರ	೭ ಪಂಕ್ತಿ	೨೦ ಅಕ್ಷರ

ಆದಿ : ಭಾಷಾಕುಸುಮಮಂಜರೀ ಬರೆವುದಕ್ಕೆ........ಘ್ನಮಸು ||

ಶ್ರೀರಾಮಚಂದ್ರ ಭವತಾಪಹಾರಿಣಂ ।
ಸ್ವಯಂ ಪ್ರಕಾಶಾಖ್ಯ ಗುರುಂ ಗಣೇಶ್ವರಂ ॥
ಸ್ಮೃತ್ವಾ ಚ ವಾಣೀಂ ನಿಗಮಾಂತ ನಿರ್ಣಯಂ ।
ಕರ್ನಾಟಭಾಷಾ ವಚನೈಃ ಸ್ಫುಟಂ ಬ್ರುವೇ ॥

ಟೀಕು ॥ ತಾಪತ್ರಯವೆಂಬ ಸೂರ್ಯತಾಪವನಪಹರಿಸುವ ಶ್ರೀರಾಮಚಂದ್ರನು ಅಂತರ್ಯಾಮಿಯಾಗಿ ಹಿತಾಹಿತಗಳ ಬುದ್ಧಿಗೆ ತೋರಿಸುವಂ........x x x

ಶ್ಲೋಕಾ ॥ ನಾನಾವೇದಾಂತಸಿದ್ಧಾಂತಾನ್ ಸಂಗೃಹ್ಯಾಜ್ಞಾಬಲಾದ್ಧರೇಃ ।
ವಕ್ಷ್ಯೇತಿ ಮಂದಬೋಧಾರ್ಥಂ ಭಾಷಾಕುಸುಮಮಂಜರೀಂ ॥

ಟೀಕು॥ ಸಕಲರ ಬುದ್ಧಿಪ್ರೇರಕನಾದಾ ಶ್ರೀ ರಘುನಾಥನ ಆಜ್ಞೆ ಇಂದ ಪ್ರೇರಿಸಲು x x x ಅದರಿಂದ ಈ ಭಾಷಾಗ್ರಂಥಕ್ಕೆ ಭಾಷಾಕುಸುಮಮಂಜರೀಯೆಂಬ ಹೆಸರು

ಅಂತ್ಯ : ಈ ಪ್ರಕಾರಾ ಭಾಷಾಕುಸುಮಮಂಜರಿಯೆಂಬ ವೇದಾಂತಪ್ರಕರಣ ಸರ್ವ ಶಾಸ್ತ್ರೋಪನಿಷದರ್ಥದ ನಿರ್ಣಯ । ಯೆಂಬಲ್ಲಿಗೆ ತಾತ್ಪರ್ಯ ॥

ಶ್ರೀ ॥ ಇತಿ ಶ್ರೀ ರಾಮಬ್ರಂಹ್ಮಾನಂದಸರಸ್ವತಿಗುರು ವಿರಚಿತವಾದ ಭಾಷಾ ಕುಸುಮಮಂಜರಿಯಲ್ಲಿ ಇಪ್ಪತ್ತಾರನೇ ವಿಕಾಸಃ ॥

ಗ್ರಂಥ ॥ ರಾಮಚಂದ್ರಾಙ್ಘ್ರಿಯುಗಳೇ ಭಾಷಾಕುಸುಮಮಂಜರಿ ಸಮರ್ಪಿತ ಮಯಾ ಶಕ್ತ್ಯಾ ತೇನ ಪ್ರೀತೋಸ್ತು ರಾಘವಃ॥

ವಿಷಯ : ನಾನಾ ವೇದಾಂತ ಸಿದ್ಧಾಂತ ನಿರ್ಣಯ.

ವಿಶೇಷ : ನಂದಿನಾಗರಿ ಲಿಪಿ. ಕೆ. ೧೮೩/೧ನೆಯ ಪ್ರತಿಯ ಕೊನೆಯಲ್ಲಿರುವ ' ಗುರು ಸ್ತುತಿ 'ಇದರಲ್ಲಿಲ್ಲ. ೪೬ನೆಯ ಪತ್ರದ ಹಿಂಭಾಗ ಖಾಲಿ. ೪೭ನೆಯ ಕ್ರಮಾಂಕದ ಎರಡು ಪತ್ರಗಳಿವೆ. ೬೬ನೆಯ ಪತ್ರ ಮುರಿದಿದೆ. ಕೆಲವು ಪತ್ರಗಳು ಹುಳು ತಿಂದು ಶಿಥಿಲವಾಗಿವೆ.

1206

ಕೆ. ೧೮೩	**ಭಾಷಾಕುಸುಮಮಂಜರೀ**	ಶ್ಲೋಕ, ಗದ್ಯ
೧೫.೪" × ೧.೫"	ರಾಮಬ್ರಹ್ಮಾನಂದ	೧೯ನೆಯ ಶತಕ
೧-೧೦೭ ಪತ್ರ	೬ ಪಂಕ್ತಿ	೫೪ ಅಕ್ಷರ

ಆದಿ : ಓಂ ।

ಶ್ರೀರಾಮಚಂದ್ರಂ ಭವತಾಪಹಾರಿಣಂ
ಸ್ವಯಂಪ್ರಭಾಖ್ಯಂ ಚ ಗುರುಂ ಗಣೇಶ್ವರಂ
ಸ್ಮೃತ್ವಾ ಚ ವಾಣೀಂ ನಿಗಮಾಂತನಿರ್ಣಯಂ
ಕರ್ಣಾಟಭಾಷಾವಚೈನೆ ಸ್ಫುಟಂ ಬ್ರುವೆ ॥ ೧।
ನಾನಾವೇದಾಂತಸಿದ್ಧಾಂತ ಸಂಗೃಹ್ಯಜ್ಞಾ ಬಲಾದ್ದರೇಃ
ಪಕ್ಷ್ಯೆಹಿಮದಂ ಬೋಧಾರ್ಥಂ ಭಾಷಾಕುಸುಮಮಂಜರಿಂ ॥ ೨ ॥

ಶ್ರೀರಾಮಚಂದ್ರಾತಿಕೃಪಾವಸಂತೇ ಪ್ರಾಪ್ತೇ ದಯಾಕಲ್ಪ ಶತಾದ್ಭವಾಗುರೋ।
ವಿಜ್ಞಾನಗಂಧಾಮೃತಸತ್ಫಲಾ ಜರಾ ವಿಭಾತಿ ಭಾಷಾ ಕುಸುಮಾಚ್ಛಮಂಜರಿ॥
ಯೀ ಪ್ರಕಾರದಲ್ಲಿ ಗುರುದೇವತಾನಮಸ್ಕಾರವಂಗೈದು ಅತಿಮಂದಾಧಿಕಾರಿಗಳಂ ಜನ್ಮಮರಣಸಂಸಾರ ಬಂಧದಿಂ ಬಿಡಿಸಿ ನಿಜಾನಂದಸ್ವರೂಪ ಸಿದ್ಧಿಯಾಗುವಂತೆ ಅವರನನುಗ್ರಹಿಸಲೋಸ್ಕರ ಶ್ರೀಮದ್ರಾಮಬ್ರಂಹ್ಮಾನಂದಸರಸ್ವತಿಗುರುಸ್ವಾಮಿಗಳವರು ಅತಿಮಂದಾಧಿಕಾರಿಗಳನನುಗ್ರಹಿಸಲೋಸುಗ ಭಾಷಾಕುಸುಮ ಮಂಜರಿಯೆಂಬ ಅಧ್ಯಾತ್ಮ ಪ್ರಕರಣವ ನಿರೂಪಿಸ್ತ್ತರೂ ॥

ಅಂತ್ಯ : ರಾಮಬ್ರಂಹ್ಮಾನಂದ ಯೋಗಿವರ್ಯೈವಿರಚಿತ ಪಠೇದ್ಯಸ್ತು ಸಿದ್ಧಯಸ್ತಸ್ಯ ದಾಸಿಕಾಃ ॥ ೯ ॥
ಇತಿ ಶ್ರೀ ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಸರ್ವತಂತ್ರಸ್ವತಂತ್ರ ಶ್ರೀಮತ್ಸ್ವಯಂ ಪ್ರಕಾಶಾನಂದಸರಸ್ವತಿ ಪೂಜ್ಯ ಶಿಷ್ಯರಾದ ಶ್ರೀಮದ್ರಾಮಬ್ರಂಹ್ಮಾನಂದಸರಸ್ವತಿಗುರು ವಿರಚಿತವಾದ ಭಾಷಾಕುಸುಮಮಂಜರಿಯಲ್ಲಿ ಜೀವನ್ಮುಕ್ತಸ್ವರೂಪನಿರೂಪಣವೆಂಬ ಯಿಪ್ಪತ್ತಾರನೇ ವಿಕಾಸ ॥
ನಷ್ಟೋಮೋಹಸ್ಮೃತಿಲಬ್ಧಾ ತತ್ವಸಾಧನಯಾಚ್ಯುತ ।
ಸ್ತಿತೋಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತದಾ ॥ ೩೦ ॥ ಶ್ರೀ

ವಿಷಯ : ನಾನಾವೇದಾಂತ ಸಿದ್ಧಾಂತ ನಿರ್ಣಯ.

ವಿಶೇಷ : ಇದೇ ಕಟ್ಟನಲ್ಲಿ ಗೀತಾಸಾರದ ತೆಲುಗು ಟೀಕೆ ಎಂಬ ಕೃತಿ ಇದೆ. ಪ್ರಕೃತ ಗ್ರಂಥದಲ್ಲಿ ೨೩ನೇ ಕ್ರಮಾಂಕದ ಎರಡು ಪತ್ರಗಳಿವೆ. ೩೩ನೆಯ ಪತ್ರದಲ್ಲಿ ಒಂದುಸಾಲು ಮಾತ್ರ ಇದೆ. ಕೆಲವು ಪತ್ರಗಳನ್ನು ಹುಳು ಹೊಡೆದು ರಂಧ್ರಗಳು ಬಿದ್ದಿವೆ.

1207

ಕೆ. ೨೨೬	**ಭಾಷಾಕುಸಮ ಮಂಜರೀ**	ಶ್ಲೋಕ, ಗದ್ಯ
೮.೧"×೧.೫"	ರಾಮ ಬ್ರಹ್ಮಾನಂದ	೧೯ನೆಯ ಶತಕ
೧–೧೨೪ ಪತ್ರ	೮ ಪಂಕ್ತಿ	೪೦ ಅಕ್ಷರ

ಆದಿ : ಶುಭಮಸ್ತು ॥........ ...ಕುಸುಮ ಮಂಜರಿ ಬರವುದಕ್ಕೆ ನಿರ್ವಿಘ್ನಮಸ್ತು ॥
ಅಖಂಡ ಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಂ ।
ತತ್ಪದಂ ದರ್ಶಿತಂ............ಶ್ರೀ ಗುರುವೇ ನಮಃ ॥
ಶ್ರೀ ರಾಮಚೆಂದ್ರಂ ಭವ ಕಾಪಹಾರಾ ....ಕೃತ್ವಾಚ ವಾಣೀ
ನಿಗಮಾಂತ ನಿರ್ನಯಂ ಕರ್ನಾಟ ಭಾಷಾ ವಚನೈ ಸ್ಫುಟಂ ಬ್ರುವೇ ॥
ಟೀ ॥....................ಸೂರ್ಯ ತಾಪವನಪಹರಿಸುವ ಶ್ರೀ ರಾಮಚೆಂದ್ರನೆಂಬ ಚೆಂದ್ರನಂನು ಅಂತರ್ಯಾಮಿಯಾಗಿ ಹಿತಾಹಿತ ಬುದ್ಧಿಗೆ ತೋರಿಸುವಂಥಾ.... ಸ್ವಯಂ ಪ್ರಕಾಶವೆಂಬ ಗುರುವಂನು ಸಕಲ ವಿಘ್ನ ನಿವಾರಕನಾದ ವಿಘ್ನೇಶ್ವರ

ನಂನು ಸಕಲ ರಹಸ್ಯಾರ್ಥಗಳ ತೋರಿಸುವ ಸರ........ಗಳಿಂದಲೂ ಮನಸ್ಸು ದೊಡ್ಡದಾದ ಕಾರಣ। ಅಂಥಾ ಶುದ್ಧವಾದ ಮನಸ್ಸಿನಿಂದಾ ನೆನಸಿ ಯಿವರ ಅನುಗ್ರಹದಿಂದ ಮೂಢರಾದ ....ರಕ್ಷಿಸುವದಕ್ಕೋಸ್ಕರ............ಗಳನು ಕರ್ನಾಟ ಭಾಷೆಯಿಂದಾ ಗ್ರಂಥವ ಸ್ಪಷ್ಟವಾಗಿ ಹೇಳೀವೂ ಯೆಂಬುದು ಶ್ಲೋಕಾರ್ಥ ॥ ಯಿಾ ಮಾಡಿದ ಗ್ರಂಥಕ್ಕೆ ಹೆಸರೇನು । ಯಿದ ವೋದುವವರು ಯಾರು ಯೆಂದರೆ ನಿರೂಪಿಸೀವೂ ॥

ಶ್ಲೋ ॥ ನಾನಾ ವೇದಾಂತ ಸಿದ್ಧಂತಾನ್ ಸಂಗೃಹ್ಯಾಗ್ನಾ ಬಲಾದ್ಧರೇಃ ।
ವಕ್ಷ್ಯೈತಿ ಮಂದ ಜೋದಾರ್ಥಂ ಭಾಷಾಕುಸುಮ ಮಂಜರೀಂ ॥

x x x x x x x ಶ್ರೀ ಮದ್ರಾಮ ಬ್ರಂಹ್ಮಾನಂದ ಸರಸ್ವತೀ ಗುರುಸ್ವಾಮಿಗಳ ವರು ತಂಮಲ್ಲಿ ದೃಢ ಭಕ್ತಿಯುಂಟಾದ ಅತಿ ಮಂದಾಧಿಕಾರಿಗಳು ಪ್ರಾರ್ಥಿಸ ಲಾಗಿ ಭಾಷಾಕುಸುಮ ಮಂಜರಿಯೆಂಬ ಅಧ್ಯಾತ್ಮ ಪ್ರಕರಣಮಂ ನಿರೂಪಿಸು ತಾ ಯಿದ್ದಾರು.

ಅಂತ್ಯ : ನಂನ್ನ ಗುರುವೆ ದೊಡ್ಡವನು। ನಾನೆ ದೊಡ್ಡವನೆಂದು ಕೊಂಡಾಡುತಾ ಯಿರುವ ನೆಂಬುದು ಯಿಾ ಶಾಸ್ತ್ರಾರ್ಥ ನಿರ್ನಯ । ಯಿತಿ ಶ್ರೀ ಮದ್ರಾಮಬ್ರಂಹ್ಮಾ ನಂದಗುರು ಚರಣಾರವಿಂದಾಖ್ಯಾ ನಮಃ । ರಾಮಚೆಂದ್ರಾಂಘ್ರಿಯುಗಳೇ ಭಾಷಾಕುಸುಮಮಂಜರೀ ಸಮರ್ಪಿತಾ x x x x ಶ್ರೀಮತ್ಪರಮಹಂಸ ಪರಿವ್ರಾಜಕಚಾರ್ಯ ಸರ್ವ ತಂತ್ರ ಸ್ವತಂತ್ರ ಶ್ರೀಮದ್ರಾಮ ಬ್ರಂಹ್ಮಾನಂದ ಸರಸ್ವತೀ....ವಿರಚಿತ ಕರ್ನ್ನಾಟಕ ಭಾಷಾಕುಸುಮ ಮಂಜರಿಯಲ್ಲಿ ನಾನಾ ವೇದಾಂತ ಸಿದ್ಧಾಂತ ಸಕಲ ಶಾಸ್ತ್ರ ನಿರ್ನಯಾನುಭವ ಸಿದ್ಧಾಂತದೊಳು ಷಡ್ವಿಂಶತಿ ವಿಕಾಶಕ್ಕೆ ಮಂಗಳ ಮಹಾಶ್ರೀ.

ವಿಷಯ : ನಾನಾವೇದಾಂತ ಸಿದ್ಧಾಂತ ನಿರ್ಣಯ.

ವಿಶೇಷ : ಕೆಲವು ಪತ್ರಗಳನ್ನು ಹುಳು ಹೊಡೆದು ರಂಧ್ರಗಳು ಬಿದ್ದಿವೆ. ಕೆ ೧೮೩ನೆಯ ಪ್ರತಿಯಲ್ಲಿ ಗ್ರಂಥಾಂತ್ಯದಲ್ಲಿರುವ ' ಗುರುಸ್ತುತಿ ' ಈ ಪ್ರತಿಯ ಅಂತ್ಯದಲ್ಲಿಲ್ಲ. ೮೨ನೆಯ ಪತ್ರದ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆಯಿದೆ. ಕೆಲವು ಪತ್ರ ಗಳ ಅಂಚು ಮುರಿದಿದೆ.

1208

ಕೆ. ೫೫	**ಭಾಷಾಭೂಷಣ**	ಸೂತ್ರ, ವೃತ್ತಿ
೧೪" × ೧.೩"	ನಾಗವರ್ಮ	ಸು. ೧೧೪೫
೧–೨೦ ಪತ್ರ	೮ ಪಂಕ್ತಿ	೬೨ ಅಕ್ಷರ

ಆದಿ : ಶುಕ್ಲಾಂಬರಧರಂ ವಿಷ್ಣುಂ x x x ಶಾಂತಯೇ ॥ ಅಥ ಕರ್ಣಾಟಶಬ್ದ ಸಿದ್ಧಿಃ॥ ಅಥ ಶಬ್ದೋಯಂ ಮಂಗಳಾರ್ಥಃ । ಮಂಗಳಾದೀನಿ. ಸ್ತ್ರಾಣಿ ಪ್ರಥಂತೇ ಇತಿ ಕಾರಾರ್ಥೋವಾ । ಇಹ ಕರ್ಣಾಟ ವಿಷಯೇ ಶಬ್ದ ಸಿದ್ಧಿರಧಿಕ್ರಿಯತ ಇತ್ಯರ್ಥಃ॥

ಅಕಾರಾದಯಃ ಪ್ರಸಿದ್ಧಾ ವರ್ಣಾಃ ॥ ಅಕಾರಾದಯೋ ವರ್ಣಾ ಹಕಾರ ಪರ್ಯವಸಾನಾಃ ಪ್ರಸಿದ್ಧಾ ಇತಿ ವೇದಿತವ್ಯಾಃ ॥ ತೇಪ್ಯನಾಧಿಕಾಲಪ್ರಸಿದ್ಧ ತ್ವಾದನ್ಯಥಾ ನೋಪದೇಷ್ಟವ್ಯಾ ಇತ್ಯರ್ಥಃ ।

ಅಂತ್ಯ : ಲ ಅತೋ ನಿಪಾತಃ । ಹೃ ಇತ್ಯಭ್ಯುಪಗಮೇ । ಸಲರ್ಪರೇವಾವಧಾರಣೇ । ಹೃಲೇ ವಿತರ್ಕಭಾವನಾಮಂತ್ರಣೇಷು । ಹ್ರಸ್ವಾಂತೋಪಿ । ಅಸಂಪ್ರಹರ್ಷಾ ಶೋಭನ ಖೇದವಿಸ್ಮಯೇಷು ಅಃ ದುಃಖಸೂಚನೇ । ಉಃ ಅವಜ್ಞಾಯಾಂ । ಆಯ್ಯೆ ನಿಷಾದಾನುಕಂಪಾಪಹಾಸೇಷು । ಓಹೋ ನಿವಾರಣೇ । ಅರೆ ಅರೆಮೆ ಕ್ವಚಿತ್ಕದಾಚಿದರ್ಥೇ । ಅಲ್ತೇ ಸಂಪ್ರಶಾನುಮಾನಯೋಃ ॥ ೧೭ ॥
ಇತಿ ಕರ್ನಾಟವ್ಯಾಕರಣೇ ನಿಪಾತಾಧಿಕರಣಂ ದಶಮಃ ಪರಿಚ್ಛೇದಃ ॥

ವಿಷಯ : ಕನ್ನಡ ವ್ಯಾಕರಣ.

ವಿಶೇಷ : ಗ್ರಂಥಲಿಪಿ, ಸಂಸ್ಕೃತಭಾಷೆ. ಕೆಲವು ಗರಿಗಳ ಅಂಚಿನಲ್ಲಿ ರಂಧ್ರಗಳಿವೆ. ೨೦ನೆಯ ಪತ್ರದ ಮತ್ತೊಂದು ಪಾರ್ಶ್ವದಿಂದ ೨೭ನೆಯ ಪತ್ರದವರೆಗೆ ಸಂಸ್ಕೃತ ಶ್ಲೋಕಗಳಿವೆ.

1209

ಕೆ. ೨೧೩	**ಭಾಸ್ಕರ ಗಣಿತ**	ಶ್ಲೋಕ, ಪದ್ಯ, ಟೀಕು
೬.೮″ × ೧.೬″	?	?
೧–೮೬ ಪತ್ರ	೯ ಪಂಕ್ತಿ	೩೦ ಅಕ್ಷರ

ಆದಿ : ಭಾಸ್ಕರ ಗಣಿತದ ಪುಸ್ತುಕಕ್ಕೆ ಶುಭಮಸ್ತು ॥ ಗಣಿತ ॥ ಆಳುಭಾಗಾರ । ವಿಷಮ ಭಾಗಾರ । ರಾಣದಿತ್ಯ। ಬಾರಶಂಖ್ಯೆ। ಅಡಿಕೆ ಸೂತ್ರಾ । ಬಣ್ಣಂತರಾ॥ ಯಿವು ಮೊದಲಾದ ಲೆಖ್ಖಾಚಾರಗಳು ಗುಣಿಸಿ ಭಾಗಿಸುವ ವಿವರಾ ।
ಗಣಿತ ವೊಡ್ಡಿನ ಸೂತ್ರಾ ॥
ದತ್ತಾನ್ಯೈಕೈಕ ಸಹ ಜಿನಭವನೇ ತಾಂಭುದಾನೆ
ತಾರ್ನಷ್ಟಾಂ ವಸುತಿನಾಂ ಚತುರೋತ್ತರಂ ಚತ್ವಾರಿಂಸ
ಜಿನ ಗೃಹಾಣಾಂ ಕಿಂ ॥
ಬಸ್ತಿ ೧ಕ್ಕೆ ತಾವರೆ ಪುಪ್ಪ ೮ ಕೊಡುತ್ತಿರಲು ಬಸ್ತಿ ೧೪೪ ಬಸ್ತಿಗಳಿಗೆ ಕೊಟಂತ್ತಾ ತಾವರೆ ಪುಷ್ಪಾ ಯೆಷ್ಟಾಯಿತು ಯೆಂದರೆ ಗುಣಿಸಿ ಬಂದ ಲಭ್ಧ ೧೧೫೨ ತಾವರೆ ಪುಷ್ಪಾ ॥ ೧ ॥

ಅಂತ್ಯ : ದಿನ ೪ಕಕ್ಕೆ ಮುಂಮಾನಂ
ಅನವರತಂ ದೀಪಮಿರಲು ಮನುಕೊಳಗಳಂ
ದಿನ ಸಾಮಜ ರಂಧ್ರಕರಂ
ಅನುನಯದಿಂ ಗಳಿಗೆ ತಾಳ ಸಂಖ್ಯೆಯೊಳಕ್ಕುಂ ॥ ೮ ॥

ಟೀಕು ॥ ಮಾನ ೩ಕ್ಕೆ ದಿನ ೪ ಲ್ಲು ವುರಿಯಲು ೪ ಕೊಳಗಕ್ಕೆ ಯೆಷ್ಟು ಆಯಿತೆಂದರೆ ದಿನ ೨೯೪ ಗಳಿಗೆ ೪೦ ವುರಿಯಿತು । x x x x
ಗಿಣಿ ೧ ಮೂಸೊಲಗೆ ನವಣೆಮೆಯ ೩.೧೨ಲಾಂ ನವಣೆ ಗಿಣಿಯೆಷ್ಟು ಯೆಂದರೆ ೫೧೨೦ ॥

ವಿಷಯ : ಗಣಿತ ಶಾಸ್ತ್ರ.

ವಿಶೇಷ : ಮೊದಲು ಕೊನೆಗಳಲ್ಲಿ ಕೆಲವು ಶುದ್ಧ ಪತ್ರಗಳಿವೆ. ಕೊನೆಯಲ್ಲಿ ಹರೇ ಲಕ್ಷ್ಮೀಕಾಂತ ಎಂದು ಕೆಲವು ಪತ್ರಗಳಲ್ಲಿ ಸೀಸದ ಕಡ್ಡಿಯಲ್ಲೂ ಮತ್ತೆ ಕೆಲವು ಪತ್ರಗಳಲ್ಲಿ ಮಸಿಯಲ್ಲೂ ಬರೆದಿದೆ. ಇದೊಂದು ಗಣಿತದ ಸಂಗ್ರಹ ಪುಸ್ತಕ ಈ ಸಂಗ್ರಹದಲ್ಲಿ ಕೇಶವನ ಗಣಿತದ ಕೆಲವು ಉದಾಹರಣೆಗಳೂ ಇವೆ. ಕೊನೆಯಲ್ಲಿರುವ ಗಿಣಿಯ ಲೆಕ್ಕ ೧೨ನೆಯ ಪತ್ರದಲ್ಲಿ ಇದೆ. ಅಸಮಗ್ರ ಗ್ರಂಥ. ೭ನೇ ಪತ್ರ ಅರ್ಧ ಮಾತ್ರ ಇದೆ.

1210

ಕೆ. ೧೨೦	**ಭಿಕ್ಷಾಟನ ಚರಿತ್ರೆ**	ವಾರ್ಧಕ ಷಟ್ಪದಿ
೧೧.೮" × ೧.೪"	ಗುರುಲಿಂಗವಿಭು	ಸು. ೧೫೬೦
೧–೧೦೦ ಪತ್ರ	೬ ಪಂಕ್ತಿ	೫೫ ಅಕ್ಷರ

ಆದಿ : ಭಿಕ್ಷಾಟಣದ ಚರಿತೆಯಂ ಬರದೋದುವದಕ್ಕೆ ಶುಭಮಸ್ತು ॥ ಭಾವಿನಿ ॥
ದರೆಯೊಳಗೆ ಗೋಪಾಲಕ್ರಿಷ್ಣ ಹದಿನಾರು ಸಾ
ವಿರ ಗೋಪಿಯರೊಳಿಹುದ ನೋಡಬೇಕೆಂದು
ಪುರಹರನು ಭಿಕ್ಷಿಕನಾಗಿ ದ್ವಾರಾವತಿಗೆ ಬಂದ ಪರಿಯನೆ ವರ್ನಿಸುವೆನೂ ॥

ಟ್ಕೀ ॥ ಭೂಮಿಯಲ್ಲಿ ಗೋಉಗಳ ರಕ್ಷಿ.... ಕೃಷ್ಣನು ಹದಿನಾರು ಸಾವಿರ ಗೋಪಸ್ತ್ರೀಯರೊಡನೆ ವಿನೋದದಿಂದ ಸುಖಿಸುತಿರ್ಪುದ ನೋಡಬೇಕೆಂದು ಪ್ರೀತಿಯಿಂದಾ ಪುರಹರನಾದಾ ಶಿವನು ಭಿಕ್ಷುಕ ...ರಾವತಿಯೆಂಬ ಪಟ್ಟಣಕ್ಕೆ ಬಂದನು ಯೆಂಬುದೀ ಪಲ್ಲವದರ್ಥ ॥

ಪದನೂ ॥ ಶ್ರೀಮದಾಂಮೃತಮಯುಖ ಲೀಲಾಸಂಕಾವಸುತಸನಾಭಿ
ರಾಮಸುರ ಗಂಗಾತರಂಗೋತ್ರಮಾಂಗನಗಜಾಮನೋಹರ
ಕಾನೂರು ಕರ್ಮಾಂಧಕಾರ ಸಿರುಹರಣನೂ.
ಸಾಮಗಾನಪ್ರೇಮನಘಣಿತ ಸುರಾಸುರ
ಸ್ತೋಮವಂದಿತನೇನುವಂ ಸಲಹುಗನುದಿನಂ
ಶ್ರೀಮಹೇಶ್ವರ ಸದಾ ಕೈಲಾಶವಾಸಂ ಕೃಪಾಳು ನಂದ್ಪಿ ಗಿರಿಶಂ ॥

ಅಂತ್ಯ : ಗುರುವೆ ಜಯಜಯವೇರಿದ ಶಾಸ್ತ್ರಸಂಸ್ನುತಪಾತ್ರ
ಗುರುವೆ ಜಯಜಯ ನಿಜಾನಂದ ನಿರ್ಮಲಗಾತ್ರ
ಗುರುವೆ ಜಯಜಯ ವಿಶ್ವತೋರೂಪಾ ವಿಮಲಪ್ರತಾಪ ಮಾಯಾಪ್ತಲೋಪ

ಗುರುವೆ ಜಯಜಯ ಪರಮಪಾವನ ಗುಣೋಲ್ಲಾಷಾ
ಗುರುವೆ ಜಯಜಯ ನಿತ್ಯರಂಜನ ನಿತ್ಯಪರಿತೋಷಾ
ಗುರುವೆ ಜಯಜಯ ಶಿವಗ್ನಾನಿ ಬಷವೇಸಾ ಮುಮಹೃದೆಯಾಬ್ಜಸನ್ನಿವಾಶಾ॥
ಟ್ಕೀ ॥ ಶ್ರೀಗುರುವೆ । ವೇದಶಾಸ್ತ್ರಂಗಳಿಂದ ಸ್ತ್ರೋತ್ರಪಾತ್ರನಾದಾತನೆ ।
x x x x ಪುಣ್ಯಾತ್ಮರಾಗಬೇಕೆಂದು ಕವೀಶ್ವರನು ಅಭಿ
ವರ್ನಿಸುತಿರ್ಥಾನೂ ॥ ೬೪ ॥
ಅಂತು ಸಂಧಿ ೩ಕ್ಕಂ ಪದನೂ ೧೫೦ಕ್ಕಂ ಮಂಗಳಮಹಾಶ್ರೀ ಶುಕ್ಲ ಶಂವತ್ಸರದ
ಕಾರ್ತಿ ಭಹುಳ ೭ಮಿ ಸೋಮವಾರ ಮಖಾ ನತ್ರದಲ್ಲು ಶ್ರೀಮತು ಗುರು
ಶ್ವಾಮಿಯವರು ಚೆಂನ್ನಪ್ಪದೇವರ ಕಾರುಂಣ್ಯವರಕಟಾಕ್ಷವೆಂಭಮೃತಶೇವ್ಯಾ
ರಾದಂತ್ತಾ ದೇವಾಂಗದ ಬಸಪ್ಪನು ಭರದ ಭಿಕ್ಷಾಟನದ ಕಾವ್ಯಕ್ಕೆ ಶ್ರೀರಸ್ತು ॥

ವಿಷಯ : ಶಿವನು ಅಜಕಪಾಲವನ್ನು ಹಿಡಿದು ಭಿಕ್ಷೆಬೇಡಿದ ಕಥೆ.

ವಿಶೇಷ : ಬಹುಪಾಲು ಗರಿಗಳ ಅಂಚು ಮುರಿದಿದೆ. ಕೆಲವು ಗರಿಗಳಲ್ಲಿ ಹುಳುತಿಂದು ರಂಧ್ರಗಳು ಬಿದ್ದಿವೆ. ಅಕ್ಷರಗಳು ಸ್ಫುಟವಾಗಿವೆ. ವ್ಯಾಖ್ಯಾನಕಾರರ ಹೆಸರು ತಿಳಿದುಬರುವುದಿಲ್ಲ. ೩೯ನೆಯ ಪತ್ರ ಲುಪ್ತ.

1211

ಕೆ. ೩೮೬/೨	**ಭಿಕ್ಷಾಟನ ಚರಿತ್ರೆ**	ವಾರ್ಧಕ ಷಟ್ಪದಿ
೧೦.೫"×೨"	ಗುರುಲಿಂಗವಿಭು	ಸು. ೧೫೬೦
೧೨೫–೧೫೨ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ಶ್ರೀ x x x ಬಿಕ್ಷಾಟಣ ಬರವ ಬಗ್ಯೆ ಅವಿಘ್ನಮಸ್ತು ।
ಶ್ರೀಮದಮ್ರುತ ಮಯೂಖ ಲೇಖಾವತಂಸನಭಿ
ರಾಮ ಸುರ ಗಂಗಾತರಂಗೋತ್ತಮಾಂಗನಗ
ಜಾ ಮನೋಹರನುರು ಕರ್ಮಾಂಧಕಾರ ನಿರುಹರಣ ನಿತ್ಯಾನಶೂರಂ
ಸಾಮಗಾನಪ್ರೇಮನಗಣಿತ ಸುರಾಸುರ
ಸ್ತೋಮ ವಂದಿತ ನಂಮ್ಮುಮಂ ಸಲಹುಗನುದಿನಂ
ಶ್ರೀ ಮಹೇಶಂ ಸದಾ ಕೈಲಾಸವಾಸಂ ಕ್ರುಪಾಳು ನಂದಿ ಗಿರೀಶನೂ ॥ ೧ ॥
x x x x
ಪರಮಗುರು ಬಸವೇಶನಂ ಚೆಂನ್ನಬಸವನಂ
ವರ ಅಲ್ಲಮಾಚಾರ್ಯ್ಯನಂ ರೇವಣಾರ್ಯ್ಯನಂ
ಶರಣನುಂ ಮಡಿವಾಳ ಮಾಚಿದೇವೈನಂ ಸಿದ್ಧರಾಮನ ಮಾದಿರಾಜೈಯನಾ
ಧರೆಯೊಳಿವರೊಳಗಾದಿಯಾದಸಂಖ್ಯಾತರುಗಳ ಶ್ರೀ
ಚರಣಮಂ ನೆನದು ಬಲಗೊಂಡು ಪೇಳುವೆನು
ಮಾವರನ ಸ್ಮರ ಹರನನಜಕಪಾಲಾಕರನ ಭಿಕ್ಷಾ ಚರಿತೆಯಾ ॥ ೩ ॥

ಅಂತ್ಯ : ಕ್ಷಿತಿಯೊಳೀ ಬಿಕ್ಷಾಟಣದ ಚರಿತೆಯೆಂಬ ಸ
ತ್ಕೃತಿಯ ಮುದದಿಂದಲೋದುವರಿಂಗೆ ಕೇಳ್ದರಿಗೆ
ಪ್ರತಿಯ ಬರವರಿಗಾಯುರಾರೋಗ್ಯವೈಶ್ವರ್ಯ್ಯಮಂ ನೀವನಭವನೆಂದೂ
ಶ್ರುತಿಮತವಿಡಿದು ಪುರಾತನ ರುಷಿಪ್ರೋಕ್ತವಾಹ
ಕತನಮಂ ಶಿವಪುರಾಣಾರ್ಥಂಗಳಿಂದರಿದು
ಚತುರರಾಹಾಯೆಂದು ಪೊಗಳೆ ಕವಿರಾಯ ಗುರುಲಿಂಗವಿಭು ವಿರಚಿಸಿದನೂ
|| ೬೫ ||

ಗುರುವೆ ಜಯ ಜಯ ವೇದಶಾಸ್ತ್ರ ಸಂನ್ನುತಪಾತ್ರ
ಗುರುವೆ ಜಯ ಜಯ ನಿಜಾನಂದ ನಿರ್ಮಳಗಾತ್ರ
ಗುರುವೆ ಜಯ ಜಯ ವಿಶ್ವರೂಪಾ ವಿಮಲ ಪ್ರತಾಪ ಮಾಯಾಪಿಲಾಪ
ಗುರುವೆ ಜಯ ಜಯ ಪರಮಪಾವನ ಗುಣೋಲ್ಲಾಸಾ
ಗುರುವೆ ಜಯ ಜಯ ನಿರಂಜನ ನಿತ್ಯ ಪರಿತೋಷಾ
ಗುರುವೆ ಜಯ ಜಯ ಶಿವಜ್ಞಾನಿ ಬಸವೇಶ ಮಮಹೃದಯಾಬ್ಧಿ ಸಂನ್ನಿ
ವಾಸಾ || ೬೮ ||

ಅಂತು ಸಂಧಿ ೩ಕಂ ಪದನು ೧೫೫ಕಂ ಮಂಗಳ ಮಹಾಶ್ರೀ.

ವಿಷಯ : ಶಿವನು ಅಜಕಪಾಲವನ್ನು ಹಿಡಿದು ಭಿಕ್ಷೆಬೇಡಿದ ಕಥೆ.

ವಿಶೇಷ : ಪ್ರತಿ ಸುದೃಢವಾಗಿದೆ. ಇದರೊಂದಿಗೆ ಗೀತಗೋವಿಂದ ಟೀಕು ಎಂಬ ಗ್ರಂಥವಿದೆ.

1212

ಕೆ.ಬಿ. ೧೧	**ಭಿಕ್ಷಾಟನ ಚರಿತ್ರೆ**	ವಾರ್ಧಕ ಷಟ್ಪದಿ
೮.೪" × ೬.೫"	ಗುರುಲಿಂಗವಿಭು	ಸು. ೧೫೬೦
೧–೨೭ ಪತ್ರ	೧೫ ಪಂಕ್ತಿ	೨೫ ಅಕ್ಷರ

ಆದಿ : ಭಿಕ್ಷಾಟನ ಚರಿತ್ರ || ವಾರ್ಧಿಕ ಷಟ್ಪದಿಗೆ ಶುಭಮಸ್ತು.
|| ಪಲ್ಲ || ಧರೆಯೊಳಗೆ ಗೋಪಾಲಕೃಷ್ಣ ಹದಿನಾರು ಸಾ
ವಿರ ಗೋಪಿಯರೊಳಿಹುದ ನೋಡಬೇಕೆನುತ ಪುರ
ಹರನು ಭಿಕ್ಷಿತನಾಗಿ ದ್ವಾರಾವತಿಗೆಯಿತಂದ ಪರಿಯನದ ವರ್ನಿಸುವೆನೂ ||
ಪದ || ಶ್ರೀಮದಮೃತಮಯೂಖ ಲೇಖಾವಸಂತನಭಿ
ರಾಮಸುರ ಗಂಗಾತರಂಗೋತ್ತುಮಾಂಗನಗ
ಜಾಮನೋಹರ ಕರ್ಮಾಂಧಕಾರ ನಿರುಹಣಸೂರಾ

ಸಾಮುಗಾನ ಪ್ರೇಮನಗಣಿತ ಸುರಾಸುರ
ಸ್ತೋಮ ವಂದಿತನೆಂಮ ಸಲಹುಗನುದಿನಂ
ಶ್ರೀಮಹೇಶಂ ಸದಾ ಕೈಲಾಸವಾಸ ಕೃಪಾಳು ನಂದಿಗಿರಿವಾಸ ಬಸವೇಶ ॥ ೧ ॥

ಅಂತ್ಯ : ಗುರುವೆ ಜಯಜಯ ವೇದಶಾಸ್ತ್ರ ಸಂನುತಪಾತ್ರ
ಗುರುವೆ ಜಯಜಯ ನಿಜಾನಂದ ನಿರ್ಮಳಗಾತ್ರ
ಗುರುವೆ ಜಯಜಯ ವಿಶ್ವತೋರೂಪ ವಿಮಲಪ್ರತಾಪ ಮಾಯಾವಿಲೋಪಾ
ಗುರುವೆ ಜಯಜಯ ಪರಮಪಾವನಗುಣೋಲ್ಲಾಸ
ಗುರುವೆ ಜಯಜಯ ನಿರಂಜನ ನಿತ್ಯಪರಿತೋಷ
ಗುರುವೆ ಜಯಜಯ ಗುರುಶಂಕರೇಶ ಮಮ ಹೃದಯಾಬ್ಜಸನ್ನಿವಾಸಾ ॥ ೬೯ ॥
ಇತಿ ಭಿಕ್ಷಾಕೃತಿಯ ಸಂಧಿ ೩ರ ಪದನು ೧೭೫ಕ್ಕಂ ಮಂಗಳಮಹಾಶ್ರೀ.

ವಿಷಯ : ಶಿವನು ಅಜಕಪಾಲವನ್ನು ಹಿಡಿದು ಭಿಕ್ಷೆ ಬೇಡಿದ ಕಥೆ.

ವಿಶೇಷ : ೨, ೩ನೆಯ ಪತ್ರಗಳಲ್ಲಿ ಕೆಲವು ಪದ್ಯಗಳ ಚರಣದ ಭಾಗಗಳು ಲುಪ್ತವಾಗಿವೆ.

1213

ಕೆ.ಬಿ.೬೮	**ಭಿಕ್ಷಾಟನ ಚರಿತ್ರೆ**	ವಾರ್ಧಕ ಷಟ್ಪದಿ
೮″ × ೬.೪″	ಗುರುಲಿಂಗವಿಭು	ಸು. ೧೫೬೦
೧–೪೦ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ಗುರುಲಿಂಗಣಾಚಾರ್ಯರು ನಿರೂಪಿಸಿದ ಭಿಕ್ಷಾಟಣ ಚರಿತ್ರೆಯ ಬರೆವುದಕ್ಕೆ ನಿರ್ವಿಘ್ನಮಸ್ತು ॥
ಪಲ್ಲ ॥ ಧರೆಯೊಳಗೆ ಗೋಪಾಲ ಕೃಷ್ಣ ಹದಿನಾರು ಸಾ
ವಿರ ಗೋಪ ಸತಿಯರೊಳಿಹುದ ನೋಡಲೆಂದು ಪುರ
ಹರನು ದ್ವಾರಾವತಿಗೆ ಬಂದ ಭಿಕ್ಷಾಟಣದ ಚರಿತಮಂ ಬಣ್ಣಿಸುವೆನೂ
ಪದ ॥ ಶ್ರೀಮದುಮೃತ ಮಯೂಖ ಲೇಖಾವತಂಸನಭಿ
ರಾಮ ಸುರ ಗಂಗಾತರಂಗೋತ್ತಮಾಂಗನಗ
ಜಾ ಮನೋಹರನಮಿತ ಕರ್ಮಾಂಧಕಾರ ನಿರ್ಹರಣ ಪ್ರಚಂಡಸೂರಂ
ಸಾಮುಗಾನಪ್ರೇಮನಗಣಿತ ಸುರಾಸುರ
ಸ್ತೋಮ ವಂದಿತನೆಮ್ಮುಮಂ ಸಲಹುಗನುದಿನಂ
ಶ್ರೀ ಮಹೇಶಂ ಸದಾ ಕೈಲಾಸವಾಸಂ ಕೃಪಾಳು ವರ ನಂದಿಗಿರೀಶಂ ॥ ೧ ॥

ಅಂತ್ಯ : ಕ್ಷಿತಿಯೊಳೀ ಭಿಕ್ಷಾಟಣದ ಚರಿತೆಯೆಂಬ ಸ
ತ್ಕೃತಿಯ ಮುದದಿಂದೋದುವರಿಗೆಯುಂ ಕೇಳ್ದವರಿಗೆ ಪ್ರತಿಯು ಬರೆದವರಿಗಾ
ಯುರಾರೋಗ್ಯವೈಶ್ವರ್ಯಮನೀವನಭವನೆಂದು ॥ ಶೃತಿಯ ಮತವಿಡಿದು
ಪುರಾತನ ವಚನ ಋಷ್ಯುಕ್ತ। ಕಥನಮುಂ ಪುರಾಣದ್ಯರ್ಥಗಳನಱಿದು

ಚತುರರಹುದೆಂದು ಪೊಗಳ್ವಂತೆ ಕವಿರಾಯ ಗುರುಲಿಂಗವಿಭು ವಿರಚಿಸಿದನು
|| ೬೮ ||

X Z X X
ಗುರುವೆ ಜಯ ಜಯ ವೇದಶಾಸ್ತ್ರ ಸನ್ನುತಿ ಪಾತ್ರ
ಗುರುವೆ ಜಯ ಜಯ ನಿಜಾನಂದ ನಿರ್ಮಳ ಗಾತ್ರ
ಗುರುವೆ ಜಯ ಜಯ ವಿಶ್ವತೋರೂಪ ವಿಮಳ ಪ್ರತಾಪ ಮಾಯಾಲೋಪ
ಗುರುವೆ ಜಯ ಜಯ ಪರಮ ಪಾವನ ಗುಣೋಲ್ಲಾಸ
ಗುರುವೆ ಜಯ ಜಯ ನಿರಂಜನ ನಿತ್ಯಪರಿತೋಷ
ಗುರುವೆ ಜಯ ಜಯ ಶಿವಜ್ಞಾನಿ ಬಸವೇಶ ಮಮಹೃದಯಾಬ್ಜ ಸನ್ನಿವಾಸ
|| ೬೯ ||

ಅಂತು ಸಂಧಿ ೩ಕ್ಕಂ ಮಂಗಳ ಮಹಾ । ಭಿಕ್ಷಾಟಣದ ಕಾವ್ಯವು ಸಂಪೂರ್ಣ ಮಾದುದು || ಶ್ರೀ ||

ವಿಷಯ : ಶಿವನು ಅಜಕಪಾಲವನ್ನು ಹಿಡಿದು ಭಿಕ್ಷೆ ಬೇಡಿದ ಕಥೆ.

ವಿಶೇಷ : ಶಕಟರೇಫದ ಬಳಕೆ ಇದೆ. ಸುಂದರಾಕ್ಷರ.

1214

ಕೆ.ಬಿ. ೧೯೨ **ಭಿಕ್ಷಾಟನ ಚರಿತ್ರೆ** ವಾರ್ಧಕ ಷಟ್ಪದಿ, ಟೀಕು
೭.೯ × ೬.೩" ಗುರುಲಿಂಗವಿಭು ಸು. ೧೫೬೦
೧–೬೯ ಪತ್ರ ೨೦ ಪಂಕ್ತಿ ೨೦ ಅಕ್ಷರ

ಆದಿ : ಧಾತುನಾಮ ಸಂವತ್ಸರದ ಆಷಾಢ ಬ ೫ಯಲ್ಲು ಪ್ರಥಮ ಪ್ರಾರಂಭವಾಗಿ ಭಿಕ್ಷಾಟಣ ಚೆರಿತೆ ಬರೆಯುವದಕ್ಕೆ ನಿರ್ವಿಘ್ನಮಸ್ತೂ || ಭಾಮಿನೀ ಷಟ್ಪದಿ.
ಸೂಚನೆ || ಧರೆಯೊಳಗೆ ಗೋಪಾಲಕೃಷ್ಣ ಹದಿನಾರು ಸಾ
ವಿರ ಗೋಪಿಯರೊಳಿಹುದ ನೋಡಬೇಕೆಂದು ಪುರ
ಹರನು ಭಿಕ್ಷುಕನಾಗಿ ದ್ವಾರಾವತಿಗೆ ಬಂದ ಪರಿಯನು ವರ್ನಿಸುವೆನೂ ||
|| ಪದನೂ || ಟೀಕು || ಭೂಮಿಯಲಿ ಗೋವುಗಳು ರಕ್ಷಿಸಿದ ಕೃಷ್ಣನು । ಹದಿನಾರು ಸಾವಿರ ಗೋಪಿ ಸ್ತ್ರೀಯರೊಡನೆ ವಿನೋದದಿಂದ ಸುಖಿಸುತಿರ್ಪುದ ನೋಡಬೇಕೆಂದು ಪ್ರೀತಿಯಿಂದ ಪುರಹರನಾದ ಶಿವನು ಭಿಕ್ಷುಕನಾಗಿ ದ್ವಾರಾವತಿಯೆಂಬ ಪಟ್ಟಣಕ್ಕೆ ಬಂದನುಃಯೆಂಬುವುದೀ ಪಲ್ಲವದ ಅರ್ಥಾ.
||ಪ || ಶ್ರೀಮದಾಮೃತಮಯುಕರಿಲ ಸಂತಾವಸಂತಸನಾಭಿ
ರಾಮ ಸುರಗಂಗಾತ್ತರಂಗೋತ್ತಮಾಂಗನಗ
ಜಾಮನೋಹರ ತಾನುರುಜನ ಕರ್ಮಾಂಧಕಾರ ನಿರುಹರಣ ಶೂರಾ
ಸಾಮಗಾನಪ್ರೇಮನಗಣಿತ ಸುರಾಸುರ
ಸ್ತೋಮವಂದಿತನೆಂನ್ನುವಂ ಸಲಹುಗನುದಿನಂ
ಶ್ರೀಮಹೇಶ್ವರ ಸದಾ ಕೈಲಾಸವಾಸಂ ಕೃಪಾಳು ನಂದೀಗಿರೀಶನೂ ||

ಟೀಕು ॥ ಕವೀಶ್ವರನು ಕಾವ್ಯಪ್ರಾರಂಭದಲ್ಲಿ ಆಶೀರ್ವಾದ ನಮಸ್ಕಾರ ವಸ್ತುನಿರ್ದೇಶಂಗಳೆಂಬ x x x x x
ಯಂನ್ನುವಂ ಸಲಹುಗನುದಿನಂ । ಆವಾಗಲು ತಂನ್ನನು ಶಿವಭಕ್ತರನು ಸರ್ವ ಕಾಲವು ರಕ್ಷಿಸಲಿಯಂದು ಕವೀಶ್ವರನು ಕಾವ್ಯಪ್ರಾರಂಭದಲ್ಲಿ ಆಶೀರ್ವಾದವಂ ಮಾಡುತಿರ್ದಾನು ॥ ೧ ॥

ಅಂತ್ಯ : ಚತುರರಾಹಾಯಂದು ಪೊಗಳೆ ಕವಿರಾಯಗುರುಲಿಂಗವಿಭುವಿರಚಿಸಿದನೂ

x x x x ॥ ೬೧ ॥

ಗುರುವೆ ಜಯಜಯ ವೇದಶಾಸ್ತ್ರ ಸಂನ್ನುತಪಾತ್ರ ।

x x x x

ಬಸವೇಶ ಮನು ಹೃದಯಾಬ್ಜ ಸಂನ್ನಿವಾಸ ॥ ಟೀಕು ॥

ಶ್ರೀಗುರುವೆ ವೇದಶಾಸ್ತ್ರಂಗಳಿಂದ ಸ್ತೋತ್ರಪಾತ್ರನಾದಾತನೆ ನಿಜಾನಂದ

x x x x

ಕವೀಶ್ವರನು ಅಭಿವರ್ನಿಸುತರ್ಥನೂ ॥ ೬೪ ॥

ಅಂತು ಸಂಧಿ ೩ಕ್ಕಂ ಪದನು ೧೫೦ಕ್ಕಂ ಮೂಲಪ್ರತಿಯಿದ್ದ ಪ್ರಕಾರಕ್ಕೆ ಧಾತು ನಾಮ ಸಂವತ್ಸರದ ಕಾರ್ತೀಕ ಬಹುಳ ೩ವರಿಗೆ ಜಡೇ ಮಾದ್ಯೆಯನ ಶಿದ್ದಪ್ಪ ನವರಿಗೆ ಭಿಕ್ಷಾಟಣ ಚೆರಿತೆ ಬರೆದು ಪೂರೈಸಿದುದಕೆ ಜಯಮಂಗಳಮಹಾಶ್ರೀ.

ವಿಷಯ : ಶಿವನು ಅಜಕಪಾಲವನ್ನು ಹಿಡಿದು ಭಿಕ್ಷೆ ಬೇಡಿದ ಕಥೆ.

ವಿಶೇಷ : ದಪ್ಪ ಕಾಗದದಲ್ಲಿ ಬರೆದಿದೆ. ೪೯, ೫೦ನೆಯ ಪತ್ರಗಳು ಹರಿದಿವೆ. ಆದ್ಯಂತ ಪತ್ರಗಳೆರಡನ್ನು ಅಲ್ಲಲ್ಲಿ ಹುಳು ತಿಂದಿದೆ. ಟೀಕಾಕಾರನ ಹೆಸರು ತಿಳಿದು ಬರುವುದಿಲ್ಲ.

1215

ಕೆ. ೫೩೧/೧	**ಭೀಮಸೇನ ವಿಲಾಸ**	ಯಕ್ಷಗಾನ
೧೫.೫" × ೧.೫"	ಕವಿ ನಂಜಶೆಟ್ಟಿ	೧೮೦೦
೧–೮೦ ಪತ್ರ	೬ ಪಂಕ್ತಿ	೭೫ ಅಕ್ಷರ

ಆದಿ : ಶುಭಮಸ್ತು ॥ ವಿರಾಟಪರ್ವದಲ್ಲಿ ತೆಗೆದು ಕಂನಡದಿ ಭೀಮಸೇನನ ವಿಲಾಸ ವಂನ್ನು ಬರೆಯುವುದಕ್ಕೆ ಸುಭಮಸ್ತು ॥

• ಶ್ರೀ ಶೈಲಜಾದವನೆ ಶಿವಭಕ್ತ ಪ್ರಿಯಗೇ
ಭಾಷೆ ಪಾಲಕಮೂರ್ತಿ ರಿಪುಚಕ್ರವರ್ತಿ
ಬಾಗೀರತಿಯ ಪೊತ್ರ ಭವಹರನು ಚಿತ್ತಾ
ನಾಗಾಸುರನ ಕೊಂದೆ ನಿವಿಯುಕ್ತನಿಂದೆ

ಶೇವಕರ ಪಾಲಿಪನೆ ಶರಣು ಪರಶಿವನೇ
ಪಾವನನೆ ಪರಮೇಶ ಫಣಿರಾಜ ಭೂಷಾ:

x x x x

ಶ್ರೀಶೈಲ ಗಿರಿಶ್ರುಂಗಾಗ್ರ ಶಿಂಹಾಸನಾಚಾರ್ಯ
ಮಲ್ಲೇಶ ಪಾರ್ವತೀಶಾ ||

ವಚನಾ || ಯಿಂತೆಂದು ಪರಮೇಶ್ವರನ ಪಾದಾರವಿಂದಮಂ | ಯೇನೆಂದು ಕೊಂಡಾಡುತಿರ್ದಾನದೆಂತೆನೆ || ಜಂಪ್ಪೆ ||

ಶರಣು ಶರಣು ಮಹೇಶಾ ಶರಣು ಪಂನಗಭೂಷಾ
ಶರಣು ಅಗಸ್ತ್ಯೇಶ ಕೇಶ| ಶರಣು ಮಲ್ಲೇಶಾ || ೧ ||

x x x x

ವಚನಾ || ಯಿಂತೆಂದು ಯಿಷ್ಟದೇವತಾನಮಸ್ಕಾರಮಂ ಮಾಡಿ ಬಾಲಿಂದು ಪುರದರಸು ಚಾಮರಾಜೇಂದ್ರ ವಿಜಯಗುಣಸಾಂದ್ರನಂ ಕೊಂಡಾಡುವದೆಂತೆನೆ||

ಕಂದ ಪದ್ಯ || ಅಂಡ ಪದಿನಾಡ ರಾಯಂ
ಗಂಡರ ಗೂಳಿಗಳ ಗೂಳಿ ಗಂಡಭೇರುಂಡಂ
ಗಂಡಗಲಿ ಲಿಂಗರಾಯಂ ಪ್ರ
ಚಂಡ ಜಗಮಿಾರೇಳರೊಳಗಂ ಮೊಳಗಿರ್ಕುಂ ||

ವಚನಾ || ಯಿಂತಪ್ಪ ಪದಿನಾಡರಾಯ ಪಾಶ್ಚನಂ ಲಿಂಗರಾಜೇಂದ್ರ ಪರಬಲ ಮದಗಜಕಂಠೀರವಂ ಶುಭಗುಣಸಾಂದ್ರಂ ಚಾಮರಾಜೇಂದ್ರಭುಜಬಲ ದೋರ್ದಂಡಂ ಅತಿತಿಮಿರ ಮಾರ್ತಂಡನಂ ಲಿಂಗರಾಜೇಂದ್ರನ ವರ ಕುಮಾರನು ಬಲ್ಲಂತೆ ಪೊಗಳ್ವೆನು | x x x x ಯಿಂತೆಸೆವ ಪುರದೊಳು x x x x ಮಾರ ಸಮರೂಪ ಮಲ್ಲೈಯನ ವಲ್ಲಭೆಯು ನೀರೆ ಗುಣಗಂಭೀರೆ x x x x ಶಿರಿಯೊಳಗೆ ಲಕ್ಷ್ಮಿಯಂತೆನಿಪ ಉಣ್ಣಾಳಂಮ್ಮನೋರ ಗರ್ಭ ವಾರುಧಿಯೊಳು ಜನಿಶಿದ ರಂನಮಣಿದೇವನಂತೆ ಬೆಲೆಯೊಡದು ಕರಮೆಸದ ವರ ಕವಿಯ ನೆರೆಜಾಣ ಕವಿವೈರಿಗಳ ಗಂಟಲಗಾಣ ಪರಿಪರಿಯ ಕುಹಕ ಕವಿಯ ಕುಣಿಕುಣಿಶಿ ನಗಿಸುವಾ ಪರಮ ಸತ್ಕವಿಗಳೂಳಿಗದವನೂ ತಾನೆಂಬ ಬಿರಿದಿನಿಂ ಕವಿ ನಂಜಕೆಟ್ಟೆ ಯಿಾಕೃತಿಯಾ ಗನತರವಾಗಿಯೆ ಪೇಳ್ದನಿದ ಲಾಲಿ ಪುದು | x x x x x x ಯಿಂತೆಂದು ಹರ ಕವಿಗಳಂ ಪೊಗಳಿ ಸಂತಸವಡೆದನ ದೆಂತೆನೆ || x x x x x x ಹರ ಕವಿಗಳಂ ಹೃದಯದೊಳಗಿಂಬಿಟ್ಟು ಭೀಮ ಸೇನನಂ ವಿಲಾಸಮಂ ಪೇಳ್ವದಕ್ಕೆ ಪ್ರಾರಂಭದೊಳು ಮಹಂ ಮೇರು ಶರದಿ ವರ್ನನೆ ಯೇನೆಂದು ಪೇಳುತಿರ್ದಾರದೆಂತೆನೆ ||

ಅಂತ್ಯ : ಧರೆಗಧಿಕ ಭೀಮಸೇನನ ವಿಲಾಸ ಕೃತಿಯೆಂದು
ನೆರೆ ಮುದ್ದುಗೊಳಿಶಿ ಪೇಳಿದ ತಪ್ಪಿದರೆ ತಿದ್ದಿ
ಚರಣ ಚಮತ್ಕಾರ ರಸಭಾವ ಚಿತ್ರವು ನೇಮ
ಗುರು ಲಗುವು ಗುಣಚಲವು ಚಂದನಲಂಕ್ಕಾರ
ಯೆತಿ ಪ್ರಾಸುಗಳನರಿತವನಲ್ಲಾ ಬಲ್ಲ ವಿಭುದರೂ
ನಿಮ್ಮ ಕರುಣ ಪೇಳಿದನೆಂದು ಪ್ರೀತಿಯೊಳು ಲಾಲಿಪುದು ॥

x x x x

ಶಾಸ್ತ್ರದ ಮಾತುಗಳಲ್ಲದೆ ದಾತ್ರಿಯೊಳು ಕವಿಯು ಪೇಳ್ದ
ಕೌಂಸಲ ಸುತಿಗಳಾವ್ಮೃತೆಯ ಮಾಡಿದನಲಾ
ತ್ರಿನೇತ್ರ ನಂಜುಂಡ ಬಲ್ಲ ಮನಸು ನದಗೆಯಾ
ಪಲವು ಶಾಸ್ತ್ರಗಳ ಕವಿ ಕವಗೆಲವಿಂದಲಿ ಕವಿತೆಯೊಳೆಲ್ಲವ
ತಿಳಿದು ವಿಚಾರಿ ವಾಹಳಿವದನು ಕಲಿತ ಕೂಳಗೆ
ಯಿಳೆಯೊಳಗೆ ನರಕಂ ತಪ್ಪದು ಶಿದ್ದಂ ॥ ೩ ॥
ಬಲ್ಲವರು ವಿನಯದಿಂದಲಿ
ಚೆಲ್ಲೊಳಪುಗಳ ಅರಿತು ಮನದಿ ಲಾಲಿಶಿ ಪ್ರಮತದಿ
ಮೆಲ್ಲನೆ ಶಿರಗಳ ಕೂಗುತ
ಸೊಲ್ಲುಗಳೊಳದಂನು ತಿಳಿಯೆ ಮನಕಾನಂದಂ ॥ ೪ ॥
ಗ್ರಂ ॥ ಭೀಮಸೇನನ ವಿಲಾಸವ ಚಂದ್ರತಾರಾರ್ಕ್ಕ ಮಂಡಲಂ ಸ್ತಿರಂ ಶಿವಪ್ರಸಾದಕಮನಂ ರಂಜಕಂ। ಭೀಮಸೇನನ ವಿಲಾಸ ಸಂಪೂರ್ನಮಂಗಳಾ ಮಹಾಶ್ರೀ ॥ ಯಿಹಾ ಪುಸ್ತಕವಂನ್ನು ಬರೆದಾತ ಕೊಡಂಬ್ಬಿ ಚಂನಪ್ಪನವರ ಮೊಮ್ಮಗ ಚನ್ನಪ್ಪನ ಕೈ ಬರಹ.

ವಿಷಯ : ಭೀಮನು ಕೀಚಕನನ್ನು ಕೊಂದ ಕಥೆ.

ವಿಶೇಷ : ೪೧, ೪೨ನೇ ಪತ್ರಗಳು ಶಿಥಿಲವಾಗಿವೆ. ಇದೇ ಕಟ್ಟಿನಲ್ಲಿ ಪ್ರಭುಚರಿತ್ರೆ ಎಂಬ ಗ್ರಂಥವಿದೆ. ತೆಲುಗು ಲಿಪಿ.

1216

ಕೆ.ಎ. ೨೩೯	ಭುಜಬಲಿ ಚರಿತ್ರೆ (ಭಾಗ ೧)	ಸಾಂಗತ್ಯ
೧೨.೯" × ೮"	ಪಂಚಬಾಣ	೧೬೧೨
೧–೩೩೪ ಪತ್ರ	೧೨ ಪಂಕ್ತಿ	೨೨ ಅಕ್ಷರ

ಆದಿ : ಭುಜಬಲಿ ಚರಿತ್ರೆ॥ ಪೃಥುಗಿರಿಯಾದಿ ವರ್ನನೆ ॥
ವಿದ್ಯಾಗುದು ಬೆಳುಗುಳವ ಸ್ಥಾನಿಕ ಚಂನ್ನಪ್ಪಯ್ಯನ ಪಾದಕ್ಕೆ ನಮಸ್ಕಾರ ॥
ಶ್ರೀ ಸುರೋರಗನರರಾಜಿಪೂಜಿತಪಾದ
ಶ್ರೀಸುತಗಜಪಂಚಾಸ್ಯಾ

ಭಾಸುರಮೂರ್ತಿ ಬೆಳ್ಗುಳ ಪುರಪತಿ ಗುಂಮ
ಟೇಶ ಕೊಡೆನಗೆ ಸನ್ಮತಿಯಾ ॥ ೧ ॥
ಮೂದೇವರ ದೇವ ಮೂಜಗವಂದಿತ
ಆದಿಜಿನರ ಕುಮಾರಕನೆ
ಮೇದಿನಿಗತಿಶಯವೆನಿಪ ಬೆಳ್ಗುಳದ
ಆದೀಶ ಪಾಲಿಸೋ ಗುಂಮಟೇಶಾ ॥ ೨ ॥

x x x x

ಪ್ರಾಸಕ್ಕರವನರಿಯೆ ಕಾವ್ಯ ಛಂದಸ
ಲೇಸಾಗಿಯೋದಿದವನಲ್ಲಾ
ಮಾ....ಮಾಡದೆ ಬುಧರು ತಪ್ಪಿರೆ ತಿದ್ದಿ
ಲೇಸಾಗಿ ನಿಮಿಗೆ ಕೈಮುಗಿವೆ ॥ ೨೭ ॥

x x x x

ತಂಗಾಳಿಯ ತಂಪ ತರುಣಿಯಧರದಿಂಪ
ತಿಂಗಳ ಬೆಳಿಗಿನ ಸೊಂಪಾ
ಕಂಗೊಳಿಪುದು ಪಂಚಬಾಣನ ಕೃತಿ ಸುಜ
ನಂಗಳಿಗತಿಹರುಷವನೂ ॥ ೪೨ ॥
ಪೆಸರೆ ಪಾಲ್ಗೊಡೆಯನು ಯೆಱೆದುಂಬುದಂಬಿಲ
ದೆಸಕವಲ್ಲವು ಪಂಚಬಾಣಾ
ಯೆಸಗುವ ಕ್ರುತಿ ಪೂಸರದೊಲಹುದು ವೇದ
ವೊಸೆದುದಾಕರ್ಣ....ಮದಱಿಂ ॥ ೪೩ ॥
ನೂತನ ಕತೆಯೆನದಿರಿ ಕಬ್ಬನೂತನ
ನೂತನನೆ ಗುಂಮಟೇಶಾ
ನೂತನ ಕೃತಿಯಾದೊಡೆ ನಱಿಸಿಸುವಿನ
ಮಾತರ್ಥಿಯಹುದು ಚಿತ್ತೈಸಿ ॥ ೪೪ ॥

ಅಂತ್ಯ : ಇದು ಜಿನಪದ ಭಕ್ತಕುಲ ಕಮಲಾದಿತ್ಯ
ಚದುರ ಸತ್ಕವಿ ಪಂಚಬಾಣಾ
ಮುದದಿ ರಚಿಸಿ........ಲಿ ಚರಿತೆಯೊ
ಳೊದವಿ ರಂಜಿಸಿತಾಶ್ವಾಸಾ ॥ ೧೨೦ ॥
ಯಿದು ಭವ್ಯ ಹೃತ್ಕಮಲಾರ್ಕ ಮನೋರಥ
ಯಿದು ಬುಧರಾನಂದಭರಿತಾ
ಯಿದು ಸರ್ವಕರ್ಮವ ಕೆಡಿಸುವ ಸುಚರಿ
.... ॥ ೧೨೧ ॥

ಅಂತು ಸಂಧಿ ೧೨ಕ್ಕಂ ಪದನು ೧೪೪೩ಕ್ಕಂ ಮಂಗಳಮಹಾ ||

ವಿಷಯ : ಮದನ ಮತ್ತು ಭರತ ಚಕ್ರವರ್ತಿಯ (ಭುಜಬಲಿಯ) ಚರಿತ್ರೆ.

ವಿಶೇಷ : ಅಸಮಗ್ರ ಪ್ರತಿ. ೧೩ನೆಯ ಆಶ್ವಾಸದಿಂದ ಮುಂದಕ್ಕೆ ಕೆ.ಎ. ೨೪೦ನೆಯ ನಂಬರಿನ ಪುಸ್ತಕದಲ್ಲಿದೆ. ಶಕಟರೇಫದ ಬಳಕೆಯಿದೆ. ೧೨೨-೧೨೬, ೧೫೫-೧೬೦, ೨೯೦—೨೯೨, ೨೯೭-೩೦೦, ೩೦೬-೩೧೧ ಈ ಪತ್ರಗಳಲ್ಲಿ ಬರವಣಿಗೆಯಿಲ್ಲ. ಇದಲ್ಲದೆ ಮಧ್ಯೆ ಅನೇಕ ಕಡೆಗಳಲ್ಲಿ ಗ್ರಂಥಲೋಪವಿದೆ. ಗ್ರಂಥಾರಂಭಕ್ಕೆ ಮೊದಲು ವಿಷಯಸೂಚಿಯಿದೆ. ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರವಣಿಗೆ ಇದೆ.

1217

ಕೆ.ಎ. ೨೪೦	**ಭುಜಬಲಿ ಚರಿತ್ರೆ** (ಭಾಗ ೨)	ಸಾಂಗತ್ಯ
೧೨.೯" × ೮"	ಪಂಚಬಾಣ	೧೬೧೨
೩೩೫–೬೫೪ ಪತ್ರ	೧೩ ಪಂಕ್ತಿ	೨೨ ಅಕ್ಷರ

ಆದಿ : ಮದನಂಗೆ ಅಭಿಷೇಕವ ಮಾಡಿದ ಸಂಧಿ | ಶ್ರೀ ಬೆಟ್ಟದ ಬ್ರಹ್ಮರಾಯನೆ ಗತಿ||

ತ್ರಿದಶೇಂದ್ರ ಮಣಿಮೌಲಿತಾಟಿತಾಂಘ್ರಿದ್ವಯ
ಸದಮಲ ಸುಜ್ಞಾನವಾಸಾ
ವುದೆಯಾರ್ಕ್ಕಸಸಿಕೋಟಿಕಾಂತಿಪ್ರಕಾಶ ಸಂ
ಪದವೀಯೆನಗೆ ಗುಂಮಟೇಶಾ || ೧ ||
ವರ ಸಖವರುಸ ಸಾವಿರದ್ಯೆನೂಱ್ನಾಲ್ವತ್ತು
ಪರೀಧಾವಿ ಸಂವತ್ಸರದಾ
ನೆಱೆ ಚೈತ್ರಮಾಸ ಪೌರ್ನ್ನಮಿ ಯಿಂದುವಾರದಿ
ಅರುಹ ಗುಂಮಟ ಜಿನೇಶ್ವರಗೆ || ೧೦೬ ||
ಗುರುಶಾಂತವರ್ಣ್ನೀಶ ಮಸ್ತಕಪೂಜೆಯ
ನಿರದೆ ಮಾಡಿಸಿ ದೇಶದೊಳೂ
ಸ್ಥಿರಕೀರ್ತಿವಡೆದನು ಚಂದ್ರಸೂರ್ಯ್ಯರು ಭೂಮಿ
ಯಿರುವಂನಕ ಸಂತಸದಿ || ೧೦೭ ||

x x x x

ಇದು ಜಿನಪದ ಭಕ್ತಕುಲ ಕಮಲಾದಿತ್ಯ
ಚದುರ ಸತ್ಕವಿ ಪಂಚಬಾಣಾ
ಮುದದಿ ರಚಿಸಿದ ಶ್ರೀಭುಜಬಲಿ ಚರಿತೆಯೊ
ಳೊದವಿ ರಂಜಿಸಿತಾಸ್ವಾಸಾ ||
ಅಂತು ಸಂಧಿ ೧ಕ್ಕಂ ಪದನು ೧೯೯ಕ್ಕಂ ಮಂಗಳಮಹಾ ||
ಶ್ರೀ ಪಂಚಬಾಣ ಕವಿತೆಯ
ಪಾಪಂಜಯಮೆಂದು ಪೇಳ್ವರೀ ಧರಣಿಯೊಳಂ

ಪಾಪಂಜಯ ಪಂಚಗುರು ವ್ಯಾಕೀರ್ತನೆ
ಯಿಂದ ಕಳೆವುದಖಿಳಕಲುಷಮಂ ||

x x x x

ಮಚ್ಚಿದ ಮಾನಿನೆಂಣೆಂದೂ ಮನೆಗೆ ನೀನೆ ಬಂದೂ
ಹೊಚ್ಚ ಹೊಸ ಮಾತನಾಡೊ ಹರುಸಮಿಗಲು ಕೂಡೊ
ನಿಚ್ಚಕವಿಪಂಚಬಾಣನಿಗೆ ಮತಿಯಿೀವ ಜಾಣಾ
ಅಚ್ಚ ಮೋಹಿಬ್ರಹ್ಮರಾಯಾ ಅಬುಜಗಂಧಿಯಪ್ರಿಯಾ || ೩ ||

ವಿಷಯ : ಮದನ ಮತ್ತು ಭರತಚಕ್ರವರ್ತಿಯ (ಭುಜಬಲಿಯ) ಚರಿತ್ರೆ.

ವಿಶೇಷ : ಈ ಪುಸ್ತಕದಲ್ಲಿ ೧೩ನೆಯ ಆಶ್ವಾಸದಿಂದ ಗ್ರಂಥ ಪ್ರಾರಂಭವಾಗಿದೆ. ಕೆ.ಎ. ೨೪೯ನೆಯ ನಂಬರಿನ ಪುಸ್ತಕದಲ್ಲಿ ೧೩ನೆಯ ಆಶ್ವಾಸದವರೆಗಿನ ಗ್ರಂಥವಿದೆ. ೪೫೭ರಿಂದ ೪೮೦ರ ವರೆಗಿನ ಪತ್ರಗಳಲ್ಲಿ ಬರವಣಿಗೆಯಿಲ್ಲ. ಆ ಭಾಗದ ಗ್ರಂಥ ಲುಪ್ತವಾಗಿದೆ. ಇದಲ್ಲದೆ ಮಧ್ಯದಲ್ಲಿ ಕೆಲವು ಕಡೆ ಗ್ರಂಥಪಾತವಿದೆ. ಅಸಮಗ್ರ ಪ್ರತಿ. ಶಕಟರೇಫದ ಬಳಕೆಯಿದೆ. ಕೊನೆಯಲ್ಲಿ ೧೨ ಪತ್ರಗಳಲ್ಲಿ ಗ್ರಂಥಕ್ಕೆ ಸಂಬಂಧಪಡದ ಇದರ ಮೂಲ ಮಾತೃಕೆಯಲ್ಲಿ ತಾಳಪತ್ರಗಳಲ್ಲಿದ್ದುದನ್ನು ಬರೆದಿರುವಂತೆ ಕಂಡುಬರುತ್ತದೆ. ಪತ್ರಗಳ ಒಂದೇಕಡೆಯಲ್ಲಿ ಬರೆದಿದೆ.

1218

ಕೆ. ೬೩೮	**ಭುವನಕೋಶ**	ಗದ್ಯ
೬.೫″ × ೧.೮″	?	?
೧೪೪–೧೬೫ ಪತ್ರ	೧೫ ಪಂಕ್ತಿ	೪೪ ಅಕ್ಷರ

ಆದಿ : ಭುವನಕೋಶ ಬರವುದಕ್ಕೆ ಶುಭಮಸ್ತು ||
ಕಂದ || ಶ್ರೀ ವೀರಶೈವಾಂಮ್ರುತದ ಘನ
ಚಾರಿತ ಮುಂದೆನಿಪ ಭುವನಕೋಶದ ಪದನ ವಿ
ಚಾರದಿಂ ವಾಚ್ಯರೂಪಿಗೆ
ಸೇರಿಸುವೆನು ನಿಂಮ್ಮ ದಯದಿ ಗುರು ಶಾಂತೇಶಾ ||
ಶ್ರೀಮತ್ಪರಮೇಶ್ವರನ ಅನುಗ್ನೆಯಂ ದ್ವಿತೀಯ ಶಂಭುವಹ ನಂದಿಕೇಶ್ವರಂ.... ....ಬಿಜಯಂಗೆಯ್ದು ದಾರಾವನವೆನಿಸುವ ಆಶ್ರಮದಲ್ಲಿ ಯೆಂಭತ್ತೆಂಟು ಸಾವಿರ ಮುನೀಶ್ವರರ ಮಧ್ಯದಲ್ಲಿ ವೊಪ್ಪುತಿರ್ಪ ಅಗ್ರಗದ್ದುಗೆಯಲ್ಲಿ ಶಿವನು ಆನಂದ ದಿಂದ ಮುಹೂರ್ತಂಗೊಂಡಿರಲು x x x x ನಾವು ಬದುಕಿದೆವು ಯಂಬ ಬಹುವಿಧ ಸ್ತೋತ್ರಂಗಳಿಂದ ಬಿನ್ನಪಂಗೆಯ್ವುತಿರ್ದಪರು. ಅದೆಂತೆಂದಡೆ||

ಅಂತ್ಯ : ಶಾಕಿನಿ | ಢಾಕಿನಿ ಮರುಳಕಾಂಡ| ಬ್ರಾಂತು | ವಿಭ್ರಾಂತು | ವಿಕಾರ ಮೊದಲಾದವು ಜೆನಿಸಿದವು| ಯಿಾ ಅಜಾಂಡದ ಸಚರಾಚರಂಗಳೆಲ್ಲಾ ಕಾಶ್ಯಪನ

ಶ್ರುಷ್ಟಿಯುಂದರಿವುದು. ಯಿಂತಿವೆಲ್ಲವಕೆ ಪರಮ ಕಾರಣಂ ಸೂತ್ರಧಾರನೆನಿಸಿದ.

ವಿಷಯ : ಜಗತ್‌ಸೃಷ್ಟಿ ಮತ್ತು ಮೂರು ಲೋಕಗಳ ವಿಚಾರ.

ವಿಶೇಷ : ಅಸಮಗ್ರ ಪ್ರತಿ. ಸಣ್ಣಕ್ಷರ. ಕೊನೆಯಲ್ಲಿ ಜ್ಯೋತಿಶ್ಶಾಸ್ತ್ರಕ್ಕೆ ಸಂಬಂಧಪಟ್ಟ ಎರಡು ಪತ್ರಗಳೂ, ಮತ್ತು ಮೂರು ಶುದ್ಧ ಪತ್ರಗಳೂ ಇವೆ.

1219

ಕೆ.ಎ. ೧೮೪/೧	**ಭುವನಕೋಶ**	ಗದ್ಯ
೧೨.೫" × ೭.೮"	?	?
೧–೫೩ ಪುಟ	೨೦ ಪಂಕ್ತಿ	೨೪ ಅಕ್ಷರ

ಆದಿ : ಭುವನಕೋಶವು ||

ಶ್ರೀ ಪರಮೇಶ್ವರನ ಅನುಜ್ಞೆಯಿಂದಂ | ಶ್ರೀ ನಂದೀಶ್ವರಂ ಕೈಲಾಸದಿಂ ಬಿಜಯಂಗೆಯ್ದು ದಾರುವನವೆನಿಸುವ ಗೌತಮ ಆಶ್ರಮದ ಅಗಣಿತ ಮುನೀಶ್ವರರ ಮಧ್ಯದೊಳೊಪ್ಪುತಿರ್ದ ಅಗ್ರಗದ್ದುಗೆಯಲ್ಲಿ ಶಿವ ಸುಖಾನಂದ ಸ್ವರೂಪಂಗೊಂಡಿರಲು ಸನತ್ಕುಮಾರ ಮುಖ್ಯರಾದ ಮುನಿಸ್ತೋಮಂ ಸಂತೋಷದಿಂದಂ ಅತಿಸಂಭ್ರಮಿಸುತ್ತಂ ಭಸಿತಾದಿ ಅಂತರ್ಬಾಹ್ಯೋಪಚಾರಂಗೆಯ್ದು ಭಯಭರಿತ ಭಕ್ತಿಯಿಂ ದೀರ್ಘದಂಡ ಪ್ರಣುತರಾಗಿ ನಿಂದು ಕರಕಮಲಂಗಳಂ ಮುಗಿದು ಸ್ವಾಮಿಪರಮೇಶ್ವರನ ಪ್ರತಿಬಿಂಬಮೂರ್ತಿಯಮ್ಮನು ಕೃತಾರ್ಥರಂ ಮಾಡಿ ಕೃಪೆಯಿಂದಂ ಬಿಜಯಂಗೆಯ್ಯಲಾಗಿ ಬದುಕಿದೆ ಬದುಕಿದೆ ಯೆಂಬ ಬಹುವಿಧಸ್ತೋತ್ರಂಗಳಿಂದಂ ಬಿನ್ನಪಂಗೆಯ್ವುತಿರ್ದುದೆಂತೆಂದೊಡೆ—

ಅಂತ್ಯ : ಈ ಮರ್ತ್ಯರಲ್ಲಿ ಶ್ರೀಕಂಠೇಶ್ವರಂ ತನ್ನ ಭಕ್ತರುಗಳಿಗೆ ಪ್ರಸನ್ನತೆಯಾಗುವ ಕಾಲದಲ್ಲಿ ತಾನು ಉಮಾಮಹೇಶ್ವರನೆಂಬ ನಿಜವ ಕಾಣಿಸುತ್ತಂ ಪಂಚಮುಖಂ ಹದಿನೈದುನಯನಂ ದಶಭುಜದಿಂದೊಪ್ಪುತ್ತಿರಲು x x x ಜಯಜಯಘೋಷದಿಂ ಕೈಲಾಸಕ್ಕೆ ಬಿಜಯಂಗೆಯ್ದು ಪರಮೇಶ್ವರನ ಆವೃತವಾಗಿರ್ದ ಅಸಂಖ್ಯಾತಗಣಂಗಳ ಮಧ್ಯದಲ್ಲಿ ಶ್ರೀ ನಂದಿಕೇಶ್ವರಂ ಸದಾನಂದದಿಂದೊಪ್ಪುತ್ತಿರ್ದಪಂ ||

ಕಂ || ಇಂತು ಶಿವಲೋಕ ವಾಸ್ತಾ
ನಂತುವ ಮುನಿನಿವಹಕೊರೆದು ಕೈಲಾಸಕೆ ಸಲೆ
ಸಂತಸದೊಳೈಯ್ದಿ ಈಶನ ಗಣ
ತಿಂಥಿಣಿಯಲಿ ನಂದೀಶನಿರ್ದ ಶಿವನೊಲವಿಂದಂ || ೧ ||
ಭುವನಕೋಶ ಸಮಾಪ್ತ ಮಂಗಳಮಹಾ ಶ್ರೀ ||

ವಿಷಯ : ಸೃಷ್ಟಿ ಮತ್ತು ಲೋಕವಿಚಾರ.

ವಿಶೇಷ : ಇದೇ ಪುಸ್ತಕದಲ್ಲಿ ಬಸವೇಶ್ವರಪುರಾಣ ಕಥಾಸಾಗರ, ಭೈರವೇಶ್ವರ ಕಾವ್ಯದ ಕಥೆಗಳು, ಭಾಗ ೧ ಎಂಬ ಈ ಎರಡು ಗ್ರಂಥಗಳೂ ಇವೆ.

1220

ಕೆ.ಬಿ. ೩೨೦/೨	**ಭೂಚಕ್ರದ ವಿವರ**	ಗದ್ಯ
೩.೩" × ೨.೬"	?	?
೨೩–೪೯ ಪತ್ರ	೧೧ ಪಂಕ್ತಿ	೧೨ ಅಕ್ಷರ

ಆದಿ : ಭೂಚಕ್ರದ ವಿವರ ಪ್ರಾರಂಭಕ್ಕೆ ನಿರ್ವಿಘ್ನಮಸ್ತು ।–ಅನಂತ । ಅರ್ಭೂಧ । ತಮುಂಧ । ತಾರಜಾ । ತಂಡಜಾ । ಬಿಂನಜ । ಭಿಂನಯುಕ್ತ । ಅನ್ಯಯುಕ್ತ । ಅಮುಂಧಯುಕ್ತ । ಮಾಣಿರಣ । ಮಾನ್ಯರಣ । ವಿಶ್ವರಣ। ವಿಶ್ವವಸು । ಅಲಂಕೃತ । ಕೃತಾಯುಗಾ । ತ್ರೇತಾಯುಗ । ದ್ವಾಪರಯುಗ । ಕಲಿಯುಗ । ಯಿಂತ್ತಾ ಹದಿನೆಂಟು ಯುಗದಲ್ಲಿ । ಆವಾವ ವಸ್ತು ಯಿದ್ದೀತು ಯಂದರೆ ॥

ಅಂತ್ಯ : ಅಂತ್ತಾ ಮಾನಜರು ನಾಲ್ವತ್ತುಕೋಟಿ ಭಾರಿ ತಿರುಗಿದಡೆ ಪಾದಲೇಚನನಿಗೆ ವಂದುದಿನಾ । ಪಾದಲೇಚನರು ಯಂಟುಕೋಟಿ ಭಾರಿ ತಿರುಗಿದಡೆ ಅಂತ್ಥಾ ರೃದ್ರನಿಗೆ ವಂದುದಿನಾ

ವಿಷಯ : ದೇವರ ಸೃಷ್ಟಿಕ್ರಮ, ಯುಗವಸ್ತುಗಳು, ಸೂರ್ಯಚಂದ್ರವಂಶದ ರಾಜರು, ಪಾಂಚಭೌತಿಕವಿವರಾ, ಅಹೋರಾತ್ರ ಪ್ರಮಾಣಗಳು, ದೇವತೆಗಳ ಅಹೋರಾತ್ರಮಾನಗಳು ಇವುಗಳ ವಿವರ.

ವಿಶೇಷ : ಈ ಗ್ರಂಥಕ್ಕೆ ಮೊದಲು ಶಾರದಾ, ಕಲ್ಪವೃಕ್ಷ, ರಾಧಾಕೃಷ್ಣ ಇವರುಗಳ ವರ್ಣರಂಜಿತ ಚಿತ್ರಗಳೂ, ನಂಜುಂಡಶತಕವೂ, ಈ ಗ್ರಂಥಾನಂತರ ಜ್ಯೋತಿರ್ಮಯ ಶಾಂಭವಿಜ್ಞಾನ ದೀಕ್ಷಾಬೋಧೆ, ಕೋಶ ಪ್ರತಿಕೋಶದ ಟೀಕು ಸಹ ಇವೆ. ಕೊನೆಯಲ್ಲಿ ಬಾಲಕೃಷ್ಣನ ವರ್ಣರಂಜಿತ ಚಿತ್ರವೂ ಇದೆ. ಗ್ರಂಥ ಅಸಮಗ್ರ. ೫ ಶುದ್ಧ ಪತ್ರಗಳಿದ್ದು ಬಳಿಕ ಮುಂದಿನ ಗ್ರಂಥ ಪ್ರಾರಂಭವಾಗಿದೆ.

1221

ಕೆ.ಬಿ. ೪೩೭	**ಭೈರವಪುರಾಣ**	ಭಾಮಿನೀಷಟ್ಪದಿ
೮" × ೬.೪"	ಗೋಪೀನಾಥ	?
೧–೪೭೦ ಪುಟ	೧೨ ಪಂಕ್ತಿ	೨೨ ಅಕ್ಷರ

ಆದಿ : ಭೈರವ ಪುರಾಣ ಬರೆಯುವದಕ್ಕೆ ಶುಭಮಸ್ತು ॥

ಗಜಮುಖನೆ ಮೆರವೇಕದಂತನೆ
ನಿಜಗುಣೋನ್ನತ ಪರಶುಧಾರನೆ
ರಜಿತ ಗಿರಿಗೊಡೆಯನ ಕುಮಾರನೆ ವಿದ್ಯವಾರುಧಿಯೆ
ಅಜನು ಹರಿ ರುದ್ರಾಮರೇಂದ್ರರು
ಭಜಿಸುತಿಹರನವರತ ನಿನ್ನನು
ತ್ರಿಜಗವಂದಿತ ಗಣಪ ಪಾಲಿಸು ಮತಿಗೆ ಮಂಗಲವಾ ॥ ಪಲ್ಲ ॥ ನಾಂದಿ ॥

ಅಂತ್ಯ : ಕರ್ತುವಹ ಮೂರ್ಲೋಕ ಪುರವರ
ಭರ್ತು ಗೋಪೀನಾಥನಮಲ ಸು
ರೋತ್ತಮಾರ್ಜಿತ ಚರಣಭವ ವನದಹನ ದಾವಾಗ್ನೀ
ಸತ್ಯ ಚಿನುಮಯನೇಕನದ್ವಯ
ಚಿತ್ತ ಸಾಕ್ಷಿ ಸದಾ ಶಿವಾತ್ಮಕ
ಚಿತ್ತು ನಿತ್ಯಾನಂದ ಸುಖ ಪರಿಪೂರ್ಣ ಪರಬೊಮ್ಮಾ ॥ ೫೩ ॥
ಸಂಧಿ ಮೂವತ್ತಾಯಿದರೊಳು
ಸಂಧಿಸಿದ ಪದಗ್ರಹರನಾರ್ಮುಡಿ
ಯೊಂದಿರಲು ಭೈರವ ಪುರಾಣಕಥಾಮೃತಾಬ್ಧಿಯಲೀ
ಚಂದ್ರಶೇಖರ ಭೈರವೇಶ್ವರ
ಬಂದು ಸಹ್ಯಾದ್ರಿಯಲಿ ಭಕ್ತರ
ವೃಂದರಿಷ್ಟಾರ್ಥವನು ಕರುಣಿಸುತ್ತಿದ್ದನೆಂಬಲ್ಲೀ ॥ ೫೪ ॥
ಅಂತೂ ಸಂಧಿ ೩೦ಕ್ಕಂ ಪದ ೧೩೬೫ಕ್ಕಂ ಮಂಗಳಮಹಾ ಶ್ರೀ.

ವಿಷಯ : ಭೈರವೇಶ್ವರನ ಕಥೆ.

ವಿಶೇಷ : ಸ್ಫುಟ ಬರಹ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ತಪ್ಪುಗಳನ್ನು ಕೆಂಪು ಮಸಿಯಿಂದ ತಿದ್ದಿದೆ. ೫೮–೬೫ರ ವರೆಗಿನ ಪತ್ರಗಳಿಲ್ಲ. ಆ ಭಾಗದ ಗ್ರಂಥ ಲುಪ್ತವಾಗಿದೆ. ೨೨ನೆಯ ಕ್ರಮಾಂಕದ ಎರಡು ಪತ್ರಗಳಿವೆ. ೪೮–೫೨ರವರೆಗಿನ ಮತ್ತು ೧೨೦ನೆಯ ಪತ್ರಗಳು ಹುಳು ಹೊಡೆದು ರಂಧ್ರ ಬಿದ್ದಿದೆ.

1222

ಕೆ. ೧೮೦/೨	**ಭೈರವೇಶ್ವರಕಾವ್ಯ.**	ಸಾಂಗತ್ಯ
೧೧.೨" × ೧.೯"	ನಂಜುಂಡ	೧೫೫೦
೬೨–೧೨೦ ಪತ್ರ	೧೦ ಪಂಕ್ತಿ	೬೮ ಅಕ್ಷರ

ಆದಿ : ಭೈರವೇಶ್ವರ ಕಾವ್ಯ ॥ ವುತ್ಪಲಮಾಲಾ ವೃತ್ತ ॥

ಶ್ರೀಮದನೇಕಲೋಕಜನಕಂ ಹರಿಮುಖ್ಯಮರಾಳಿ ಸೇವಿತಂ
ಕಾಮುಮದಪ್ರಹಾರಿ ವರಸಾಸಲ ಸೋಮಯಲಿಂಗನಂಘ್ರಿ ಪೂ
ಜಾಮಹಚಿತ್ತನುಂನತ ಗುಣಾಂಬುಧಿ ಭೈರವದೇವನಂ ಸದಾ
ಪ್ರೇಮದೊಳೊಲ್ದು ಕೀರ್ತಿಸುವನಾವಪನಾತನೆ ಮುಕ್ತಿ ಮೂಲಿಗಂ ॥ ೧ ॥
ಪದ ॥ ಶ್ರೀವರನೇತ್ರ ರಾಜೀವಾಂಕ ಪಾದ ರಾ
ಜೀವೆ ಜವಾಶಂಬರಾರ್ಕಾ
ಜೀವನಲವನಿ ಸಂಜೀವನ ಸಯಲೋಕ
ಜೀವಾಂಗ ಜಯತು ಸೋಮೇಶಾ ॥ ೧ ॥

ಅಂತ್ಯ : ಗುರು ಸೋಮನಾಥನ ಕರುಣದಿಂ ಭೈರವೇ
ಶ್ವರನ ಚರಿತೆ ಪಂಚಸಂಧಿ
ವರವೃತ್ತವೈದು ಸಾಸಿರದ ಮೇಲಿಂನೂಱು
ಭರಿತ ಷಟ್ಪದವಿದು ಗಣನೆ ॥ ೧೬೧ ॥
ಅಂತು ಸಂಧಿ ೫ಕ್ಕಂ ಪದನು ೧೨೩೧ಕ್ಕಂ ಭೈರವೇಶ್ವರನ ಕಾವ್ಯ ಸಂಪೂರ್ನ ಮಂಗಳಮಹಾಶ್ರೀ. ರುದುರೋದ್ಗಾರಿ ಸಂವತ್ಸರ ಆಸ್ವೀಜಮಾಸದ ಸುದ್ಧ ಭೌಳ ಪಂಕ್ಷದ ಚತುರ್ದ್ದಸಿಯ ಸೋಮವಾರದಲ್ಲು ಭೈರವೇಶ್ವರನ ಕಾವ್ಯ ಸಮಾಪ್ತ ಮಂಗಳ ಶ್ರೀ.

ವಿಷಯ : ಭೈರವರಾಜನನ್ನು ಸೋಮೇಶನು ಕೈಲಾಸಕ್ಕೆ ಕರೆದೊಯ್ದ ಕಥೆ.

ವಿಶೇಷ : ಶಕಟರೇಫದ ಬಳಕೆಯಿದೆ. ಈ ಕಟ್ಟಿನಲ್ಲಿ ಪ್ರಭುಲಿಂಗಲೀಲೆ, ಪಂಚಾಶಿಕೆ, ಶಿವಯೋಗಪ್ರದೀಪಿಕಾ ಟೀಕೆ ಈ ಗ್ರಂಥಗಳಿವೆ. ಕೊನೆಯ ಎರಡು ಪತ್ರಗಳಲ್ಲಿ ಬೆಡಗಿನ ವಚನದಂತಿರುವ ಹಾಡುಗಳಿವೆ.

1223

ಕೆ. ೩೨೬	**ಭೈರವೇಶ್ವರ ಕಾವ್ಯ**	ಸಾಂಗತ್ಯ
೮.೯" × ೧.೮"	ನಂಜುಂಡ	೧೫೫೦
೧–೭೩ ಪತ್ರ	೧೦ ಪಂಕ್ತಿ	೫೦ ಅಕ್ಷರ
೨೧೪	ಭೈರವೇಶ್ವರ ಕಾವ್ಯ	

ಆದಿ : ಶ್ರೀಮದನೇಕ ಲೋಕಜನಕಂ ಹರಿಮುಖ್ಯಾಮರಾಳಿ ಸೇವಿತಂ
ಕಾಮುಮದ ಪ್ರಹಾರಿ ವರಸಾಸಲ ಸೋಮಯ ಲಿಂಗನಂಘ್ರಿಪೂ
ಜಾಮಹಾಚಿತ್ತನುಂನತಗುಣಾಂಬುಧಿ ಭೈರವದೇವನಂ ಸದಾ
ಪ್ರೇಮದೊಳೊಲ್ದು ಕೀರ್ತಿಸುವನಾತನೆ ಮುಕ್ತಿ ಮೂಲಿಗಂ ॥

ಪದನು ‖ ಶ್ರೀವರ ನೇತ್ರ ರಾಜೀವಾಂಕ ಪದರಾ
ಜೀವೆಜಮಾನಂಭರಾರ್ಕ್ಕ
ಜೀವನಲ್ಲದನಿದನಿ ಸಂಜೀವನ ಸಯಲೋಕ
ಜೀವನ ಜಯತು ಸೋಮೇಶ ‖ ೧ ‖

ಅಂತ್ಯ : ಪೇಳಿ ಶಿವಭಕ್ತರಾಳು ನಂಜುಂಡೇಶ
ಕೇಳುವುದದಿಕ ಸಜ್ಜನರು
ಬಾಳನೇತ್ರನ ಕ್ರುಪೆಯೇಳಿಗೆಯೊಡ..............ನಾತ್ರಿ ‖ ೧೬ ‖
ಗುರು ಶೋನಾಥನ ಕರುಣದಿಂ ಭೈರವೇ
ಶ್ವರನ ಚರಿತೆ ಪಂಚ ಸಂಧಿ
ವರವೃತ್ತವೈದು ಸಾ............
........ಷಟ್ಪದವಿದು ಗಣನೆ ‖
ಅಂತು ಸಂಧಿ ೫ಕ್ಕಂ ಪದನು ೧೨೫ಕ್ಕಂ ಮಂಗಳಮಹಾ ಶ್ರೀ—

ವಿಷಯ : ಸೋಮೇಶನು ಭೈರವೇಶನಿಗೆ ಒಲಿದು ಕೈಲಾಸಕ್ಕೆ ಕರೆದೊಯ್ದ ಕಥೆ.

ವಿಶೇಷ : ಶಕಟರೇಪದ ಬಳಕೆಯಿದೆ. ೩ ಮತ್ತು ೬೦ನೆಯ ಪತ್ರಗಳು ಮುರಿದು ಅರ್ಧಭಾಗ ಮಾತ್ರವಿದೆ. ಕೆಲವು ಪತ್ರಗಳ ಅಕ್ಕಪಕ್ಕಗಳು ಅಲ್ಲಲ್ಲಿ ಮುರಿದಿವೆ. ಪ್ರತಿಯು ಬಹು ಶಿಥಿಲವಾಗಿದೆ.

1224

ಕೆ. ೩೩೧/೧	**ಭೈರವೇಶ್ವರ ಕಾವ್ಯ**	ಸಾಂಗತ್ಯ
೧೪-೧" × ೧.೩"	ನಂಜುಂಡ	೧೫೫೦
೧–೭೦ ಪತ್ರ	೬ ಪಂಕ್ತಿ	೭೦ ಅಕ್ಷರ

ಆದಿ : ಭೈರವೇಶ್ವರ ದೇವರ ಕಾವ್ಯ ‖
ಶ್ರೀಮದನೇಕಲೋಕ ಜನಕಂ ಹರಿಮುಖ್ಯಾಮರಾಳಿ ಸೇವಿತಂ
ಕಾಮುಮದ ಪ್ರಹಾರಿ........ಸೋಮೆಯ ದೇವನಂಗ್ರಿ ಪೂ
ಜಾಮುಹಚಿತ್ತನುಂ ನತ ಗುಣಾಂಬುಧಿ ಭೈರವದೇವನಂ ಸದಾ
ಪ್ರೇಮದೊಳೊಲ್ದು ಕೀರ್ತಿಸುವನಾವವನಾತನೆ ಮುಕ್ತಿಮೂಲಿಗಂ ‖
ಪದ ‖ ಶ್ರೀವರನೇತ್ರ ರಾಜೀವಾಂಕ ಪದ ರಾ
ಜೀವೆ ಜಮಾನಾಂಬರಾರ್ಕ
ಜೀವಾನಲವನಿ ಸಂಜೀವನ ಸಯಲೋಕ
ಜೀವಾಂಗ ಜಯತು ಸೋಮೇಸಾ ‖ ೧ ‖

ಅಂತ್ಯ : ಹರುಷದಿಂದವೆ ನೋಡಿ ಬರೆದೋದಿದರೆ ವಿ
ಸ್ತರಿಸಿ ಪೇಳ್ದರೆ ಪಠಿಸಿದರೆ
ಗುರು ಶೋಮನಾಥನ ಕರುಣ ಸಂಬವಿಸೂದು
ದರೆಯೊಳಗಿದು ಸಿದ್ದವೆಂದೂ ॥ ೧೫೯ ॥
ಪೇಳಿದ ಶಿವಭಕ್ತರಾಳು ನಂಜುಂಡೇಸ
ಕೇಳುವುದಧಿಕ ಸಜ್ಜನರೂ
ಭಾಳನೇತ್ರನು ಕೃಪೆ ಯೇಳಿಗೆಯೊಡನೆ ಸಂ
ಮೇಳ ತಪ್ಪದು ಶರಣಾರ್ತ್ತಿ ॥ ೧೬೦ ॥
ಗುರು ಸೋಮನಾಥನ ಕರಣದಿಂ ಭೈರವೇ
ಶ್ವರನ ಚರಿತ ಪಂಚಸಂಧಿ
ವರ ವೃತ್ತವೈದು ಸಾಸಿರದ ಮೇಲಿಂನೂಱು
ಭರಿತ ಷಟ್ಪದವಿದು ಗಣೆನೆ ॥ ೧೬೧ ॥
ಅಂತು ಸಂಧಿ ೫ಕ್ಕಂ ಪದನು ೧೨೩೨ಕ್ಕಂ ಮಂಗಳಮಹಾ ಶ್ರೀ

x x x x x x

ವಿಸ್ವಾವಸು ಸಂವತ್ಸರದ ಚೈತ್ರ ಶು ೧೦ಲ್ಲು ಭೈರವೇಶ್ವರ ದೇವರ ಪುರಾಣಾಂಕಿತ ಸಪೂಪ್ತ ಮಂಗಳಮಹಾ ಶ್ರೀ

ವಿಷಯ : ಭೈರವರಾಜನಿಗೆ ಸಾಸಲ ಸೋಮೇಶನೊಲಿದು ಕೈಲಾಸಕ್ಕೆ ಕರೆದೊಯ್ದ ಕಥೆ.

ವಿಶೇಷ : ಈ ಪ್ರತಿಯಲ್ಲಿ ಶಕಟರೇಫದ ಬಳಕೆಯಿದೆ. ಆದಿಯ ೯ ಪತ್ರಗಳನ್ನು ಅಲ್ಲಲ್ಲಿ ಹುಳು ತಿಂದಿದೆ. ಇದರೊಡನೆ ಸೋಮನಾಥ ಚರಿತ್ರೆ ಎಂಬ ಕೃತಿಯಿದೆ. ೬, ೨೨, ೩೯, ೪೦, ೬೦–೬೭ ಈ ಪತ್ರಗಳ ಅಂಚು ಮುರಿದಿದೆ.

1225

ಕೆ. ೩೩೩/೧	**ಭೈರವೇಶ್ವರ ಕಾವ್ಯ**	ಸಾಂಗತ್ಯ
೧೦.೩" × ೧.೮"	ನಂಜುಂಡ	೧೫೫೦
೧–೭೪ ಪತ್ರ	೧೦ ಪಂಕ್ತಿ	೪೫ ಅಕ್ಷರ

ಆದಿ : ವೃತ್ತ ॥ ಶ್ರೀಮದನಕಲೋಕ ಜನಕ ಹರಿ ಮುಖ್ಯಾಮರಾಳಿ........
............ನತ ಗುಣಾಂಬುಧಿ ಭೈರವದೇವನಂ ಸದಾ
ಪ್ರೇಮದೊಳೊಲ್ದು ಕೀರ್ತ್ತಿ..........................

x x x x

ಳು ಭೈರವನಾ ಚರಿತವಾ
ಪೇಳುವೆ ರಸಭಾವದೇಳಿಗೆ ತಪ್ಪದೊಲ್
ಕೇಳಿ ಸುಖಿಪುದು ಸಜ್ಜನರೂ ॥ ೧೭ ॥

x x x x

ಕೃತಿನಾಮ ಸಾಸಲ ಪ್ರತಿ ಭೈರವಾಂಕನೆ
ಕೃತಿಗೆ ಕರ್ತನು ಸೋಮನಾಥಾ
ಕೃತಿಗೆ ಸಹಾಯಿಗಳ್ ಕ್ಷಿತಿಯ ಭಕ್ತರು ಪೇಳ್ದನುಂ
ನತಕವಿ ನಂಜುಂಡದೇವಾ ॥ ೨೨ ॥

ಅಂತ್ಯ : ಗುರು ಸೋಮನಾಥನ ಕರುಣದಿಂ ಭೈರವೇ
ಶ್ವರನ ಚರಿತೆ ಪಂಚಸಂಧಿ
ವರವೃತ್ತವೈದು ಸಾಸಿರದ ಮೇಲಿಂನೂಱು
ಭರಿತ ಷಟ್ಪದವಿದು ಗಣನೆ ॥ ೧೬೧ ॥

ಅಂತು ಸಂಧಿ ೫ಕ್ಕಂ ಪದನು ೧೨೫ಕ್ಕಂ ಭೈರವೇಶ್ವರನ ಚಾರಿತ್ರ ಸಮಾಪ್ತ ಮಂಗಳ ಮಹಾಶ್ರೀ. ಶ್ರೀ ವಿಕ್ರಮ ಸಂವತ್ಸರದ ಮಾಗ ಶು ೧ಲ್ಲು ೨ ಮೋಳ್ದಿ ಗಯ್ಯ ಬರದ ಭೈರವೇಶ್ವರ ಕಾವ್ಯ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಸೋಮೇಶ್ವರನು ಭೈರವೇಶ್ವರನಿಗೆ ಪ್ರಸನ್ನನಾಗಿ ಕೈಲಾಸಕ್ಕೆ ಕರೆದೊಯ್ದ ಕಥೆ.

ವಿಶೇಷ : ಮೊದಲ ಗರಿಯು ಒಂದು ತುಂಡು ಇದೆ. ಉಳಿದ ಗರಿಗಳಿದ್ದು ಸಂಪೂರ್ಣ ವಾಗಿದೆ. ಶಕಟರೇಫದ ಪ್ರಯೋಗವಿದೆ. ಈ ಗ್ರಂಥದ ಆರಂಭದಲ್ಲಿ ೬ ಗರಿಗಳು ಬೆಡಗಿನ ಕೋಲು ಪದದ್ದಾಗಿದೆ. ನನ್ನಯ್ಯಗಳ ಚರಿತ್ರೆ ಎಂಬ ಗ್ರಂಥವೂ ಇದೆ. ಆದಿಯಲ್ಲಿ ಚಿತ್ರಗಳಿಂದ ಕೂಡಿದ ಪತ್ರವೊಂದಿದೆ.

1226

ಕೆ.ಬಿ. ೮೮	**ಭೈರವೇಶ್ವರ ಕಾವ್ಯ**	ಸಾಂಗತ್ಯ
೭.೮″ × ೬.೨″	ನಂಜುಂಡ	೧೫೫೦
೧–೧೬೨ ಪತ್ರ	೧೨ ಪಂಕ್ತಿ	೧೭ ಅಕ್ಷರ

ಆದಿ : ಭೈರವೇಶ್ವರನ ಕಾವ್ಯವು.
(ವೃತ್ತ)–ಶ್ರೀಮದನೇಕಜನಕಂ ಹರಿಮುಖ್ಯಾಮರಾಳಿಸೇವಿತಂ
ಕಾಮಮದಾಪಹಾರಿ ವರಸಾಸಲ ಸೋಮಯ ಲಿಂಗನಂಘ್ರಿ ಪೂ
ಜಾಮಹಾಚಿತ್ತಸಂನ್ನುತಗುಣಾಂಬುಧಿ ಭೈರವದೇವನಂ ಸದಾ
ಪ್ರೇಮದೊಳೊಲ್ದು ಕೀರ್ತಿಸುವನಾವವನಾತನೆ ಮುಕ್ತಿಮೂಲಿಗಂ ॥ ೧ ॥

ಪದ ॥ ಶ್ರೀವರನೇತ್ರರಾಜೀವಾಂಕಪಾದರಾ
ಜೀವಾತ್ಮಗಗನಾಂಶುಮಾಲಿ
ಜೀವಾಗ್ನಿಭೂಮಿ ಸಂಜೀವನ ಶಯಲೋಕ
ಜೀವಾಂಗ ಜಯತು ಸೋಮೇಶ ॥ ೨ ॥

x x x x x

ಕೃತಿನಾಮ ಸಾಸಲಪತಿಭೈರವಾಂಕನ
ಕೃತಿಗೆ ಕರ್ತನೂ ಸೋಮನಾಥ
ಕೃತಿಗೆ ಸಾಹಾಯಿಗಳ್ ಕ್ಷಿತಿಯ ಭಕ್ತರು ಪೇಳ್ದಾ
ನುತಕವಿ ನಂಜುಂಡದೇವಾ ॥ ೨೨ ॥

ಅಂತ್ಯ : ಗುರುಸೋಮನಾಥನ ಕರುಣದಿಂ ಭೈರವೇ
ಶ್ವರನ ಚರಿತೆ ಪಂಚಸಂಧಿ
ವರವೃತ್ತವೈದುಸಾಸಿರದಮೇಲಿನ್ನೂಱು
ಭರಿತ ಷಟ್ಪದವಿದು ಗಣನೆ ॥ ೧೬೨ ॥
ಅಂತು ಸಂಧಿ ೫ಕ್ಕಂ ಮಂಗಳಮಸ್ತು ॥ ಭೈರವೇಶ್ವರಕಾವ್ಯವು ಸಂಪೂರ್ಣವು.

ವಿಷಯ : ಸಾಸಲುಪುರದ ಸೋಮೇಶ್ವರನು ಉನ್ನತಭೈರವೇಶನಿಗೊಲಿದು ಕೈಲಾಸಕ್ಕೆ ಕರೆದೊಯ್ದ ಕಥೆ.

ವಿಶೇಷ : ಶಕಟರೇಫದ ಬಳಕೆ ಇದೆ. ಮೊದಲನೆಯ ಪತ್ರ ಶಿಥಿಲ. ಸುಂದರಾಕ್ಷರ. ಅಂತ್ಯದಲ್ಲಿ ೬ ಶುದ್ಧ ಪತ್ರಗಳಿವೆ.

1227

ಕೆ. ೩೬೩	**ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ**	ಗದ್ಯ
೧೪.೫" × ೨"	ಶಾಂತಲಿಂಗ ದೇಶಿಕ	೧೬೭೨
೧–೧೫೪ ಪತ್ರ	೧೦ ಪಂಕ್ತಿ	೯೨ ಅಕ್ಷರ

ಆದಿ : ಶ್ರೀಗುರು x x ಭೈರವೇಶ್ವರನ ಕಾವ್ಯದ ಕಥಾಸೂತ್ರ ರತ್ನಾಕರವ ಬರವುದಕ್ಕೆ ಶುಭಮಸ್ತೂ॥ ಪ್ರಥಮದಲ್ಲಿ ಪೀಠಿಕಾಸೂತ್ರವೆಂತೆಂದಡೆ ಪೇಳುತಿರ್ದಪಂ॥ ಶ್ರೀಗುರು ಸದಾಮಳ ನಿತ್ಯನಿರಂಜನ ಪರಮಪಾವನ ನಿರ್ಗುಣ ನಿರಾವರಣ ನಿರವಯ ನಿರಾಮಯ ನಿರ್ದ್ವಂದ ನಿರ್ಭೇದ್ಯ-ನಿಃಪ್ರಪಂಚ ನಿಃಪ್ರತ್ಯ ವುಪಮಾತೀತ ನಿರುಪಾಧಿಕ ನಿರ್ವಿಕಾರ ನಿರ್ವಿಕಲ್ಪ ನಿಶ್ಚಲ ನಿಃಕಳಂಕ ಮಹಿಮಾನಂದಾರ್ಣವ ಕೃಪಾಮೃತೇಕ್ಷಣ ಪರಶಿವನುಂ x x x ರಜತಾ ಪರ್ವತಾಗ್ರದಲ್ಲಿ ನವರತ್ನಖಚಿತ ರಚಿತಮಪ್ಪ ದಿವ್ಯಸಿಂಹ್ವಪೀಠದಲ್ಲಿ ವುಮೆ ಸಮೇತನಾಗಿ ಮೂರ್ತ್ಥಂಗೆಯ್ದು।

ಅಂತ್ಯ : ಬಸವಾದಿ ಪುರಾತನರು ನಿರೂಪಿದ ಸೂಂನ್ಯಸಂಪಾದನೆ ಮೊದಲಾದ ವಚನಾಮೃತಸಾರದಲ್ಲಿ ಪೇಳುತಿರ್ದ ಕಂದ। ವೃತ್ತ। ಗ್ರಂಥಾ। ಶ್ರುತಿ। ಸ್ಮೃತಿ। ಪದ। ಪದ್ಯ। ವಚನ। ರಗಳೆ। ಷಟ್ಪದಿ। ತ್ರಿವಿಧೆ। ಚೌಪದ। ದಂಡಕ। ಅಷ್ಟಕ। ವಿಷಮುಪದ। ಪ್ರಬಂಧ। ವುದ್ದಂಡ ಷಟ್ಪದ। ಪಂಚರತ್ನ। ಸ್ವರಪದ। ತಾರಾವಳಿಗಳು ಮೊದಲಾದವರಲ್ಲಿ ಹೇಳಲ್ಪಟ್ಟ। ಕಥೆಗಳಂ ನೋಡಿ। ಪುರಾತರ ವಚನದ ಮೊಲ್ಪಂತ್ತಿವಿಡಿದು। ಕಾವ್ಯದ ಕಥೆ ಸಂಗ್ರಹಕ್ಕೆ ಬೇಕಾದವಂ ತೆಗದುಕೊಂಡು। ಸಂಗ್ರೈ....ದೆನು। ಯಿದು ಶರಣ ಸತಿಯು ರತಿ ಸಂಯೋಗಕ್ಕೆ ಪತಿಶಿವಲಿಂಗವೆಂಬ। ಅಪ್ರತಿಮ। ಕಂದರ್ಪ್ನೆಸವ। ಚತುರ ನೂತನ ಬಾಣವಿಧುವಾಗಿ ಸಂದ ಸಖವರುಷ ವಿರೋಧಿಕ್ರುತು ಸಂವತ್ಸರದ ಕಾರ್ತ್ತಿಕ ಬ ೧೦ ದಶಮಿ ವರಿಗೆ ಸಮಾಪ್ತ ಸಂಪೂರ್ಣವಾಯಿತ್ತಿದನು ಬರದೋದಿ ಪಠಿಸಿ ಲಾಲಿಸಿ ರಚಿಸುವ ಮಹಾನುಭಾವಿಗಳಾದ। ಸಕಲಸದ್ಭಾವ ವೀರಮಹೇಶ್ವರರುಗಳ ಶ್ರೀ ಪಾದಕಮಲಯುಗಳಕ್ಕೆ ಕಾವ್ಯದ ಕಥಾಮಣಿ ಸೂತ್ರ ರತ್ನಾಕರವೆಂಬ ಪುಷ್ಪವಂ ಸಮರ್ಪ್ಪಿಸಿ ನಮಿಸುತ್ತಂ। ಜಯಜಯತು ಶುಭಮಂಗಳವೆಂದು x x x ಭೈರವೇಶ್ವರನ ಕಾವ್ಯದ ಕಥಾಮಣಿ ಸೂತ್ರ ರತ್ನಾಕರಂ ಬರದುದು ಸಮಾಪ್ತಿ ಮಂಗಳ ಮಹಾ ಶ್ರೀ ಶ್ರೀ. ಸ್ವಸ್ತಿಶ್ರೀ ವಿಜಯಾದ್ಭುದಯ ಶಾಲಿವಾಹನ ಶಕವರುಷ ೧೬೫೯ ನೆ ಪರಿವಿದಾವಿ ಸಂವತ್ಸರದ ಕಾರ್ತಿಕ ಬ ೧೦ ಬುಧವಾರ ದಸಿವಿಗೆ ಮೂರು ಸಾವಿರದ ಬಸವಲಿಂಗ ದೇವರಿಗೆ। ಹೊಗರಿ ರುದ್ರಪ್ಪನ ಭಕ್ತಿಯಿಂದ ಬರಸಿಕೊಟ್ಟ ಕಥಾಗರ್ಭಕ್ಕೆ ಮಂಗಳಮಹಾ ಶ್ರೀ ಶ್ರೀ.

ವಿಷಯ : ಶಿವಶರಣರ ಕಥೆಗಳು.

ವಿಶೇಷ : ೧೩ನೆಯ ಪತ್ರವಿಲ್ಲ. ಕೊನೆಯ ಪತ್ರದ ಅಂಚು ಸ್ವಲ್ಪ ಮುರಿದು ಹೋಗಿದೆ. ಪ್ರತಿ ಚನ್ನಾಗಿದೆ.

1228

ಭೈರವೇಶ್ವರಕಾವ್ಯದ ಸೂತ್ರರತ್ನಾಕರ, ಭಾಗ ೧

ಕೆ.ಬಿ. ೧೦೧/೧	ಶಾಂತಲಿಂಗದೇಶಿಕ	ಗದ್ಯ
೭.೮" × ೬.೨"	?	೧೬೭೨
೧–೯೬ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಃ ಜಲಂಧರಾರಾತಯೇ ಪರಬ್ರಹ್ಮಣೆ ನಮಃ॥ ಕರಿಂದ್ರವಕ್ತ್ರಾಯ ನಮಃ ಭೈರವೇಶ್ವರನ ಕಾವ್ಯದ ಕಥಾಸೂತ್ರರತ್ನಾಕರವಂ ಬರೆವುದಕ್ಕೆ ಶುಭಮಸ್ತು. ನಿರ್ವಿಘ್ನಮಸ್ತು॥ ಪ್ರಥಮದಲ್ಲಿ ಪೀಠಿಕಾಸೂತ್ರವೆಂತೆಂದಡೆ ಪೇಳುತ್ತಿರ್ದಪಂ॥

ಶ್ರೀಗುರುಸದಾಮಳ ನಿತ್ಯನಿರಂಜನ ಪರಮಪಾವನ ನಿರ್ಗುಣ ನಿರಾವರಣ ನಿರಾವಯ ನಿರಾಮಯ ನಿರ್ದ್ವಂದ್ವ ನಿರ್ಭೇದ್ಯ ನಿಪ್ಪ್ರಪಂಚ ನಿಪ್ಪ್ರತ್ಯುಪನಾತೀತ ನಿರುಪಾಧಿಕ ನಿರ್ವಿಕಾರ ನಿರ್ವಿಕಲ್ಪ ನಿಶ್ಚಲ ನಿಷ್ಕಳಂಕ ಮಹಿಮಾನಂದಾರ್ಣವ ಕೃಪಾಮೃತೇಕ್ಷಣ ಪರಶಿವನುಂ, ನಿಷ್ಕಲ ನಿರಂಜನ ಶೂನ್ಯ ಮಹಾಲಿಂಗ ಸದಾಶಿವ ಈಶ್ವರ ಮಹೇಶ್ವರ ರುದ್ರರೆಂಬ ಪ್ರಭಾಮೂರ್ತಿಗಳಂ ತಾಳ್ದಂಥಾ x x x x x ತ್ಯಾಗ ಭೋಗ ವೀರವಿತರಣ ಪರಹಿತಚರಿತದಿಂದ ರಾಜ್ಯತೇಜ ಕೀರ್ತಿಪ್ರತಾಪದಿಂ, ರಾಜ್ಯವನಾಳಿದರಸುಗಳಾರೆಂದು ಕೇಳಲು ಭೈರವ ರಾಜನೊಳು ಪೇಳುತ್ತಿರ್ದ್ದಪಂ ॥ ಅದೆಂತೆಂದೊಡೆ ॥

ಅಂತ್ಯ : "ದ್ಯೂತವ್ಯಸನದಿಂದ ರಾಜ್ಯವಂ ಸೋತು ಕುಷ್ಠಿಯಾಗಿ ವೋಪಳನಗಲ್ದು ಕಾಮಾರಿಯಿಂ ಪುನೀತನಾದ ನಳನು ಯೆಂಬುದಕೆ ಕಥೆ" ಪೂರ್ವಾನ್ವಯದ ಕಥೆಯು ವುತ್ತರ ದಿಕ್ಕಿನಲ್ಲಿ ನಿಷಧಪುರದಲ್ಲಿ ಸೂರ್ಯನಮಗ ವೈವಸ್ವತಮನು ಅವನ ಮಕ್ಕಳಾದ ಅಂಸಾವಳಿಯಲ್ಲಿ ಎಂಭತ್ತು ಸಂತಾನದಾತ, ಅದಿತಿ, ಅವನ ಮಗ ನಿಷಧ, x x x x ತನ್ನ ಪೂರ್ವಾಪರಮಂ ಹೇಳಲು, ನನ್ನ ಮಗಳೆಂದರಿಯದೆ, ಭಂಗಪಡಿಸಿದೆವೆನುತ, ಮರುಗುತ್ತಿರಲು, ನಮ್ಮ ವಿಧಿ ಕಾಟದಿಂದ, ನಿಮಗೆ ನಾನು, ಹೇಳಲಿಲ್ಲವೆನಲು, ಕಲಿಯುಗದಲ್ಲಿ, ವಿಧಿ ತೊಲಗಿತ್ತು. ಮರಳಿ ದಮಯಂತಿಯ ಸ್ವಯಂವರಕ್ಕೆ, ಬರಲೆಂದು, ರುತುಪರ್ನಗೆ,

ವಿಷಯ : ಶಿವಶರಣರ ಕಥೆಗಳು.

ವಿಶೇಷ : ಇದು ಭೈರವೇಶ್ವರ ಕಾವ್ಯದ ಕಥೆಯ ಸೂತ್ರರತ್ನಾಕರದ ಮೊದಲ ಭಾಗ. ಕೆ.ಬಿ. ೧೦೧, ಭಾಗ ೨ ಎರಡನೆಯ ಮುಂದುವರಿದ ಭಾಗ. ಕೆ.ಬಿ. ೧೦೧ ಭಾಗ ೩ ಇದು ಮುಂದುವರಿದ ಮೂರನೆಯ ಭಾಗ. ಹೋಲಿಕೆಯನ್ನು ಕೆಂಪುಮಸಿಯಲ್ಲಿ ಗುರುತಿಸಲಾಗಿದೆ.

1229

ಕೆ.ಬಿ. ೧೦೧/೨ **ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ,** ಭಾಗ ೨ ಗದ್ಯ

೭.೪" × ೬.೨" ಶಾಂತಲಿಂಗ ದೇಶಿಕ ೧೬೭೨

೯೭–೪೪೪ ಪತ್ರ ೧೨ ಪಂಕ್ತಿ ೨೦ ಅಕ್ಷರ

ಆದಿ : ಹೇಳಿ ಕಳುಹಲೂ ರಥವನೇರಿ ಹೋಗುವಲ್ಲಿ ಕುಂಟು ಕುದುರೆಗಳ ಹೊಳೆವ ತೇಜಿಯಾ ಮಾಡಿ ರಥವನೇರಿ ಹಾಯಂದರೆ ನೂಱು ಗಾವುದ ಅಂತರದಲ್ಲಿ ಹೋಯಿತ್ತು. ಆಗ ಋತುಪರ್ನ ರಥ ಬೇಗ ನಡೆಯಿತ್ತು ನೀನಾರು ಯನಲು ಅವ ಸುಮ್ಮನಿರಲು ಕತ್ತಿಯನೊರೆಯ ಕಿತ್ತು ಹೊಯ್ವಾಗ ಮೈಯೊಳಗಿರ್ದ ಕಲಿಯು ವಿಧಿಯು ಕುಷ್ಠವು ತೊಲಗಿ ಹೋಗಲು ಮೊದಲ ಕಾಂತಿಯಾಯಿತ್ತು.

ಆಗ ರಥವ ನಡೆಸುವದ ನನಗೆ ಕಲಿಸಿದರೆ ನಾ ನಿನಗೆ ಲೆತ್ತವನಾಡುವದ, ಕಲಿಸೆಹೆನೆನಲೊಡಂಬಟ್ಟು ಕಲಿಸಲು ನಳನ ರಥದೊಳಗೆ ಕುಳ್ಳಿರಿಸಿ ಋತುಪರ್ನ ರಥ ಸಾರಥಿಯಾಗಿ ಕುತಾರ ದೇಶದ ಕೌಂಡಲ್ಯಪುರಕೆ ಹೋಗಿ ಇಳಿಯಲು x x x ಆಗ ನಳನು। ತನ್ನೂರ ಬೀದಿಯಲ್ಲಿ ಹೋಗುವಾಗ ಬಡಗಿ ಮಾಚಲದೇವಿಯರ ಕಂಡು ಈಕೆ ಮದುವೆಯಾಗಬೇಕೆಂತು। ಕ್ಷತ್ರಿಯ ಕುಲವ ಮಾಡಬಹುದೆ ಯಂದು ಹಾರುವರ ಕೇಳಲು। ಮಾಡಬಹುದೆನಲು। ಚಿನ್ನದ ಗೋವ ಮಾಡಿಸುತಿರ್ದನೂ.

ಅಂತ್ಯ : (ಪರಮುಹಂಸಯ್ಯನ ಮೇಲೆ ಕಱೆದ ಮಳೆಯೊಯೆಂಬುದಕ್ಕೆ ಕಥೆ) ಬ್ರಹ್ಮಾವಾರವೆಂಬ ಪುರದಲ್ಲಿ ಪರಮುಹಂಸಯ್ಯನೆಂಬ ಶರಣನು ಗೋವುಗಳ ಸಾಕಿ ತುಪ್ಪವಂ ಮಾಱಿ ಆದಱಿಂದ ಲಿಂಗಪೂಜೆಗೆ ಜಂಗಮಾರ್ಚನೆಗೆ ಸಾಧನಗಳನೊದವಿಸಿಕೊಂಡು ಶಿವಭಕ್ತಿದಾಸೋಹ ನಡೆಸುತ್ತಿರಲು ತೊಂಭತ್ತು ವರುಷ ಕಳೆದು ಮುಪ್ಪಾಗಲು x x x x ತಮ್ಮ ಕೈಯಲಿ ಪುಷ್ಪವ ತಂದು ಮುಪ್ಪಾದರೆಯು ಮಳೆ ಥಳಿಯನ್ನದೆ ಬಿಡದೆ ಪೂಜಿಸುವ ಲಿಂಗನಿಷ್ಠೆಗೆ ಶಿವನು ಮೆಚ್ಚಿದೆ ಬೇಡೆನಲು ಯನ್ನ ಮನದ ಭಕ್ತಿಗೆ ಮುಪ್ಪಿಲ್ಲ ತನು ಮುಪ್ಪಾಯಿತ್ತು ಯನ್ನ ತನುವೆಂಬ ಪುಷ್ಪವನೆ ಶ್ರೀಪಾದಕ್ಕರ್ಪಿಸಿಕೊಳ್ಳಯ್ಯ ಯನಲಾಗ ಪರಮುಹಂಸಯ್ಯನ ಮುಪ್ಪಿನ ಭಕ್ತಿಗೊಪ್ಪಿ ಕೈಲಾಸಕ್ಕೆ ಕರೆದೊಯ್ದ ಶಿವನು.

ವಿಷಯ : ಶಿವಶರಣರ ಕಥೆಗಳು.

ವಿಶೇಷ : ಇದು ಈ ಕೃತಿಯ ಎರಡನೆಯ ಭಾಗ. ಇದರ ಒಂದು ಮತ್ತು ಮೂರನೆಯ ಭಾಗಗಳು ಇದೇ ನಂಬರಿನ ಉಳಿದೆರಡು ಪುಸ್ತಕಗಳಲ್ಲಿವೆ. ಶಕಟ ರೇಫವಿದೆ. ಪ್ರತಿ ತುಂಬಾ ಶಿಥಿಲ. ಪತ್ರಗಳು ಬಿಡಿಬಿಡಿಯಾಗಿ ಇವೆ. ಬರವಣಿಗೆ ಸುಂದರವಾಗಿದೆ. ಹೋಲಿಕೆಮಾಡಿರುವ ಭಾಗವನ್ನು ಕೆಂಪು ಮಸಿಯಲ್ಲಿ ಗುರುತಿಸಲಾಗಿದೆ.

1230

ಕೆ.ಬಿ. ೧೧೧/೩ **ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ,** ಭಾಗ ೩ ಗದ್ಯ

೭.೫″ × ೬.೧″ ಶಾಂತಲಿಂಗದೇಶಿಕ ೧೬೭೨

೪೪೫–೭೭೨ ಪತ್ರ ೧೨ ಪಂಕ್ತಿ ೨೫ ಅಕ್ಷರ

ಆದಿ : ಕರದೊಯ್ದ ಶಿವನು ॥....ಶ್ರೀ. (ಹರಿ ಬೇವಲ್ಲಿ ಸುರಪ ಕರೆದ ಮಳೆಯೋಯೆಂಬುದಕ್ಕೆ ಕಥೆ)

ನಾರಾಯಣನು ದ್ವಾರಕಿಯಲ್ಲಿರುತ ಮಾರ್ಕಂಡೇಯಮುನಿಯ ಬೋಧೆಯಿಂದ ಉಪಮನ್ಯು ದೀಕ್ಷೆಯ ಪಡೆದು । ಇಂದ್ರನೀಲದ ಲಿಂಗವಂ ಶಿಖಿಯೊಳು

ಧರಿಸಿ ಪೂಜೆಯಂ ಮಾಡುತ್ತ ಶಿವಭಕ್ತರಾದ ಮುನಿಗಳಿಗೆ ದಾಸೋಹವ ಮಾಡುತ್ತಿರುವಾಗ ಹರಿಯ ಮನೆಗೆ ದೂರ್ವಾಸಮುನಿ ಭಿಕ್ಷಕ್ಕೆ ಬರಲು ವಂದಿಸಿ ಸರ್ವಸತ್ಕಾರವಂ ಮಾಡಿ ದೇವಾನ್ನ ದಿವ್ಯಾನ್ನವಂ ನೀಡಲು ಮುನಿ ಸಲಸಿ ಉಳಿದ ಪ್ರಸಾದವ ಕೃಷ್ಣ ಸೇವಿಸೆ ಪ್ರಕ್ಷಾಳನ ದ್ರವವಂ ಅಂಗಾಲಬಿಟ್ಟು ಸರ್ವಾಂಗಕ್ಕೆ ಲೇಪವ ಮಾಡಲು ವಜ್ರಕಾಯವಾಯಿತ್ತು. x x x x x ಆಗ ದೇವೇಂದ್ರನು ವೈರತ್ವದಿಂದ ಮಳೆಯ ಕರೆಯಲು ಕಿಚ್ಚು ನಂದಿ ಹೊಳೆ ಬಂದು ಮಂದಾಸನವ ತೇಲಿಸಿಕೊಂಡು ಹೋಗುವಲ್ಲಿ ಅರೆ ಬಂದ ಹೆಣನು ಜಗಕ್ಕೆ ದುರ್ವಾಸನೆಯಿಂದ ನಾರುತ್ತಿರಲು ವೈಷ್ಣವಾದಿಗಳು ಬಲೆಯನೊಡ್ಡಿ ಹಿಡಿದು ಆ ವಿಷ್ಣುವಿನ ನಾರುವ ಹೆಣನನೆ ಜಗನ್ನಾಥನೆಂದು ಪೂಜಿಸಲು ವಡ್ಡಿ ಜಗನ್ನಾಥನೆಂಬ ಪೆಸರಾಯ್ತು ॥

ಅಂತ್ಯ : ಶ್ರೀಗುರವೆ ಗತಿ ಈ ಕಥೆಗಳು ಸ್ಕಂದಪುರಾಣದೊಳಗಣ ಕಾಶೀಕಾಂಡ । ಕೇತಾರಕಾಂಡ । ಅಸುರಕಾಂಡ । ವೀರಮಾಹೇಂದ್ರಕಾಂಡ ಯುದ್ಧಕಾಂಡ । ವುಪದೇಶಕಾಂಡ ಮತ್ತೆ ಕೂರ್ಮಪುರಾಣ ಆದಿತ್ಯಪುರಾಣ ಗಾರುಡಪುರಾಣ ಲೈಂಗ್ಯಪುರಾಣ ಬ್ರಹ್ಮಪುರಾಣ ಪೂರ್ವರಾಮಾಯಣ । ಮಹಾಭಾರತ ಮೊದಲಾದವರ ಸಾಕ್ಷಿಯ ಕಥೆಗಳಲ್ಲದೆ ಕಲ್ಪಿತದ ಕಥೆಗಳಲ್ಲ ಸತ್ಯ ವುಚಿತ ಕಥೆಗಳು ಸಮಾಪ್ತಾ ಮಂಗಳಮಾಹ ॥

ವಿಷಯ : ಶಿವಶರಣರ ಕಥೆಗಳು.

ವಿಶೇಷ : ಶಕಟರೇಫವಿದೆ. ಹೋಲಿಕೆ ಮಾಡಿರುವ ಭಾಗವನ್ನು ಕೆಂಪುಮಸಿಯಲ್ಲಿ ಗುರುತಿಸಿದೆ. ಇದರ ಹಿಂದಿನ ಕಥಾಭಾಗ ಇದೇ ನಂಬರಿನ ಉಳಿದೆರಡು ಪುಸ್ತಕಗಳಲ್ಲಿದೆ.

1231

ಕೆ.ಎ. ೧೮೪/೩ **ಭೈರವೇಶ್ವರಕಾವ್ಯದ ಕಥೆಗಳು**, ಭಾಗ ೧. ಗದ್ಯ

೧೨.೫" × ೭.೮" ಉತ್ತರದೇಶದ ಬಸವಲಿಂಗ ಸು. ೧೬೦೦

೪೦೩–೪೫೩ ಪುಟ ೧೦ ಪಂಕ್ತಿ ೨೫ ಅಕ್ಷರ

ಆದಿ : ಇನ್ನು ಭೈರವೇಶ್ವರನ ಕಾವ್ಯದಲ್ಲಿ ಬಂದ ಕೆಲವು ಕಥೆಗಳನು ಬಸವೇಶ್ವರನ ಪುರಾಣದ ಕಥಾಸಾಗರದಲ್ಲಿ ವಿಸ್ತಾರವಾಗಿ ಬರೆದ ಕಾರಣ ಇನ್ನು ಬರೆಯಲಿಲ್ಲ ಅಲ್ಲಿಯೇ ನೋಡಿಕೊಂಬುದು ಭೈರವೇಶ್ವರನ ಕಾವ್ಯದಲ್ಲಿ । ಯೋಗಿಣಿ ವೃಂದ ಪದಾರವೆಂದೆ ಯೆಂಬುದಕ್ಕೆ ಕಥೆ ॥ ವಾರ್ಕವೆ । ಕುಬ್ಜೆ । ಸುರಾಪ್ರಿಯೆ । ಸುಕೇಶಿಸಿತ್ರಪಾತಿಕೆ । ಶಿಶುಘ್ನೆ । ಕಾಳಿ । x x x x ದಿವೋದಾಸನು ಕೈಲಾಸಕೆ ಹೋಗಲು । ಶಿವನು ಕಾಶಿಯಲ್ಲಿ ನಿಂದನೂ ॥ ೧ ॥

ಅಂತ್ಯ : ಆಗ ಇವರು ನನ್ನ ಲಿಂಗವ ಕೊಡಿ ಯಂಬರು ಆಕೆ ನನ್ನ ಗಂಡನ ಬಿಡಿ ಯಂಬಳು ಆಗ ಇಬ್ಬರು ತಿಲ್ಲವೇಣಾಂಧರರ ಬಳಿಗೆ ನ್ಯಾಯಕೆ ಹೋಗಲು ಅಲ್ಲಿರುವ ಪುರುಷನಾಗಿ ಸಂಭ

ವಿಷಯ : ಶಿವಶರಣರ ಕಥೆಗಳು.

ವಿಶೇಷ : ಇದೇ ಪುಸ್ತಕದಲ್ಲಿ ಭುವನಕೋಶ ಮತ್ತು ಬಸವೇಶ್ವರ ಪುರಾಣದ ಕಥಾ ಸಾಗರವೆಂಬೆರಡು ಇತರ ಗ್ರಂಥಗಳಿವೆ. ಈ ಪುಸ್ತಕದ ಮುಂದುವರಿದ ಭಾಗವು ಕೆ.ಎ. ೧೮೪ II ರಲ್ಲಿದೆ.

1232

ಕೆ.ಎ. ೧೮೪ II	**ಭೈರವೇಶ್ವರ ಕಾವ್ಯದ ಕಥೆಗಳು, ಭಾಗ ೨**	ಗದ್ಯ
೧೩.೨" × ೮.೪"	ಉತ್ತರದೇಶದ ಬಸವಲಿಂಗ	ಸು. ೧೬೦೦
೧–೧೦೬ ಪುಟ	೨೧ ಪಂಕ್ತಿ	೨೧ ಅಕ್ಷರ

ಆದಿ : ಒಬ್ಬ ಶೂದ್ರನು ಬೇಸಾಯವ ಮಾಡಿಕೊಂಡು ದಾರಿ ಬಡುಕೊಂಡು ಬದುಕುತ್ತಿರಲು, ಒಂದು ದಿನ ವ್ಯಾಧಿ ಬಂದು ಸಾವಾಗ, ನಮಗೇನು ಗತಿಯೆಂದು ಕೇಳಲು, ಹರಗಣೆಯ ಮಾಡಿ ಬದುಕಿ ಯನಲು, ಆವ ಹೊಲನ ಹರಗ ಹೇಳಿದುದು, ಹರಗಣಂಗಳ ನೆನದ ಫಲವಾಯಿತೆಂದು ಕೈಲಾಸಕ್ಕೆ ಒಯಿದರು ||೮೨||

ಅಂತ್ಯ : ಆಗ ನಂಬಿಯಣ್ಣ ಬಂದು ಎಡದಲ್ಲಿ ಕುಳ್ಳಿರಿಸಿಕೊಂಡು, ಪ್ರಸ್ನಹ ಮುಗಿದು, ಬಳಿಕ ಏಕಾಂತದಲ್ಲಿ ಚಂದ್ರಕಾಂತದ ಪ್ರತಿಮೆಯ ಚಂದ್ರನಪ್ಪುವಂತೆ ಪರವೆಯ ನಾಲಿಂಗಿಸಿಕೊಂಡಿರುವಾಗ, ಕುಚವ ಸ್ತ್ರಾನ ಶಂಕರಾ ಎಂದು ನುಡಿಸಲು, ತೆಗೆದುಕೊ ಎಂದು ನಂದಿಮುದ್ರೆಯ ಹೊನ್ನುಗಳ ಕೊಟ್ಟರು || ೩೧೫ ||
ಇಲ್ಲಿಗೆ ಭೈರವಾಂಕನ ಕಾವ್ಯದ ಕಥೆ, ಕಥಾಸಾಗರ ಸಂಪೂರ್ಣಂ ಮಂಗಳ ಮಹಾ || ಶ್ರೀ ಶ್ರೀ.
ಸಿದ್ಧಾರ್ಥಿ ಸಂವತ್ಸರದ ಪುಷ್ಯ ಶುದ್ಧ ಬಸದ ಹುಣ್ಣಿ ಚತುರ್ದಶಿ ಸೋಮವಾರ ಉದಯವಾದ || ೧೨ || ಘಳಿಗೆಗೆ ಓದಿಸುವ ಬಿದರಹಳ್ಳಿಯ ಮಠದಲ್ಲಿ ಕುಳಿತು ಮುಗಿಯ ಬರದ ಮಲ್ಲಪ್ಪದೇವರ ಹಸ್ತಾಂತರ. ಚಂದ್ರ ಚರ ನಗರರಂಬ ತ್ರೈಲೋಕ್ಯಕ್ಕೆ ಮುಖ್ಯರಾದ ಹುಲಿಗೆರೆಯ ಸಿಂಹಾಸನಕ್ಕೆ ಕರ್ತರಾದ ಪೊಡವಿಡಿಯ ಬಗೆಯ ಹಿರೇಮಠದ ಕಾಶಿದೇವರ ಶಿಷ್ಯರಾದ ಓದಿಸುವ ಮಲ್ಲಪ್ಪ ದೇವರು, ಪುತ್ರ ಮಿತ್ರ ಕಳತ್ರ ಧನ ಧಾನ್ಯ ಸಮೃದ್ಧಿಯಾಗಲೆಂದು ಹರಸಿ ಬರದುದಕ್ಕೆ ಶುಭಮಸ್ತು ||

ವಿಷಯ : ಶಿವಶರಣರ ಕಥೆಗಳು.

ವಿಶೇಷ : ಈ ಗ್ರಂಥವು ೮೨ನೆಯ ಕಥೆಯಿಂದ ಆರಂಭವಾಗಿದೆ. ಮೊದಲ ಭಾಗವು ಕೆ.ಎ. ೧೮೮೪/೩ ರಲ್ಲಿದೆ. ಶಕಟರೇಫದ ಬಳಕೆ ಇದೆ.

1233

ಕೆ.ಎ. ೨೫೪	ಭೈರವೇಶ್ವರ ಪುರಾಣ	ಚಂಪು
೧೩" × ೮"	ಸಿದ್ಧಲಿಂಗ ಶಿವಯೋಗಿ	ಸು. ೧೬೦೦
೧-೪೧೬ ಪತ್ರ	೧೬ ಪಂಕ್ತಿ	೧೪ ಅಕ್ಷರ

ಆದಿ : ರಾಜೇಂದ್ರವಿಜಯ ಪುರಾಣಂ ॥ ರಾಜನ್ಯರತ್ನಮಂ ಬರೆಉದಕ್ಕೆ ಶುಭಮಸ್ತು॥
ಸ್ರಗ್ಧರಾವೃತ್ತ ॥
ಶ್ರೀಮತ್ಸರ್ವೇಶ ನತೋತ್ಸವಯುತನಭವಂ ಭಕ್ತಕಲ್ಪೋರ್ವಿಜಂ ಸ
ತ್ಸೋಮಾಂಕಂ ಸರ್ವದೇವಪ್ರಕರನತಪದಂ ದೇವಗಂಗೋತ್ತಮಾಂಗಂ
ವಾಮಾರ್ದ್ಧಾಂಗ ಪ್ರಯುಕ್ತ ಸ್ಫುರಿತ ಗಿರಿಸುತಂ ಕಾಲಕಾಂತಾರದಾವಂ
ಪ್ರೇಮಂ ಕೈಮಿಕ್ಕು ರಕ್ಷಿಕ್ಕನವರತ ಗಣಾಗ್ರೈಪ್ಪಲಿಂಗಂ ಕೃಪಾಂಗಂ ॥ ೧ ॥

x x x x x

ಕೃತಿಯ ಪೆಸಭೈರವೇಶ್ವರ
ನತಿಶಯ ಪೌರಾಣಕಾವ್ಯಕಧಿಪತಿ ಶಂಕರ
ರತಿಯಿಂ ಪೇಳ್ದಂ ಬುಧ ಸಾ
ರತರ ಸಿದ್ಧಲಿಂಗ ಯೋಗಾರೂಢಂ ॥ ೨೯ ॥

ಅಂತ್ಯ : ತರಳ ॥ ಶರಣರಾಲಿಸಿ ಸೋಮವಾರವು ಬಂದಿಂದು ಮಹೇಶ್ವರಂ
ಗೊರೆವೆನುತೆ ಬರ್ಪೆ ತಿಂಗಳಿಗೊಲ್ದು ನಿಂಮೆಡೆಗೆಂದು ನಾಂ
ಭರಿತಮಾಯ್ತೆಯ್ದುವಡೆ ಶಾಂಭವ ಪುರಕೆನುತ್ತವರಂಘ್ರಿಗೊ
ಲ್ದೆರಗಿ ತತ್ಕೃಪೆಯಾಂತು ಧ್ಯಾನಿಸುತಿರ್ಪನೀಶ್ವರಾಜ್ಞೆಯಿಂ ॥ ೪ ॥
ಮುಂದೆ ಗ್ರಂಥವಿಲ್ಲಾ.

ವಿಷಯಂ : ಭೈರವರಾಜನ ಚರಿತ್ರೆ.

ವಿಶೇಷ : ಪತ್ರದ ಒಂದುಕಡೆ ಮಾತ್ರ ಬರವಣಿಗೆಯಿದೆ. ಶಕಟರೇಫವನ್ನು ಬಳಸಿದೆ. ಗ್ರಂಥದ ಆದಿಯಲ್ಲಿ ಪ್ರತ್ಯೇಕ ೪ ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ. ಗ್ರಂಥ ಅಸಮಗ್ರ. ಈ ಕೃತಿಗೆ ರಾಜೇಂದ್ರವಿಜಯಪುರಾಣವೆಂಬ ನಾಮಾಂತರವಿದೆ.

1234

ಕೆ. ೫೧೧ **ಮಕರಂಕಸೇನ ಚರಿತ್ರೆ** ಯಕ್ಷಗಾನ

೮.೨" × ೧.೮" ಲಿಂಗ ೧೯ನೆಯ ಶತಕ

೧–೫೩ ಪತ್ರ ೯ ಪಂಕ್ತಿ ೩೨ ಅಕ್ಷರ

ಆದಿ : ಮಕರಂಕಸೇನನ ಯಕ್ಷಗಾನ ಬರೆವುದಕ್ಕೆ ಶುಭಮಸ್ತು ||
ದ್ವಿಪದೆ || ಶ್ರೀಶೈಲಜಾರಮಣ ಶ್ರಿಷ್ಟಿಜನನಿರ್ಮಾಣ
ಭೂಸುರಾರ್ಚಿತಚರಣ ಭುಜಗರಾಜಹರಣ
ಗೋಕ್ಷೀರಾದ್ಯುತಿಗಾತ್ರ ಗೋತ್ರ ಭೇದ್ಯಸ್ತೋತ್ರ
ಸಾಕ್ಷಾತ್ರಿವಿಧನೇತ್ರ ಸತ್ಯಪಾಮೃತಪಾತ್ರ
ದೇವದೇವೋತ್ತುಂಗಾ ದಿವ್ಯ ಪ್ರಣಮಲಿಂಗ
ಸಾವಿತ್ರಿಗರ್ದಾಂಗ ಸಾಮಜಸುರಭಂಗ

x x x x

ಗರಳಕ್ಷೇತ್ರನಿವಾಸ ಗೃಹರಾಜಸಂಕಾಶ
ಪರುಷರಾಮಘಖಂಡ ಪಾಹಿ ನಂಜುಂಡಾ ||
ವಚನಾ || ಯಿಂತು ಶ್ರೀ ಮಹಾ ಪಾರ್ವತಿಯಂ ಸ್ತುತಿಸಿ ನಂಜುಗಪುರಿ ಚನ್ನ ಕೇಶವನಂ ಪೊಗಳ್ವಿನದೆಂತೆನೆ. .

x x x x

ವಚನಾ || ಯಿಂತು ತಂಮ ತಾವರಿಯದ ಭ್ರಾಂತರಿಗೇಕೆ ಬ್ರಂಹ್ಮತ್ವದ ಚಿಂತೆ ಮಲ್ಲಿಗೆ ಹೂವಿನ ಮಕರಂದವನು ಮಶಕಿವಿಂಡುಗಳು ಬಲ್ಲವೆ ಬೇರೆ. ಲಿಂಗನ ಚಿತ್ರಪ್ರಭಂದವಂ ಉತ್ತಮರು ಬಲ್ಲರಲ್ಲದೆ ವ್ಯರ್ಥ ಮನುಜರು ಬಲ್ಲರೆ.

ಅಂತ್ಯ : ನರರಿಗಳವಲ್ಲ ನಾಯಕಿ ಕೇಳು ಯಿಾ ಸೊಲ್ಲ
ಸಿರಿವರ್ದನನು ನೋಡಿ ಸಿರವನೊಲದಾಡಿ || ೫ ||
............ನ ರಾಯನು ನಧಿ ತಟಾಕ ಸ್ನಾನಕ್ಕೆ ಬಂದುಯೇನೇನು ವಸ್ತುವುಗಳ

ವಿಷಯ : ಮಕರಂಕಸೇನನ ಕಥೆ.

ವಿಶೇಷ : ಅಸಮಗ್ರಪ್ರತಿ. ೩, ೬, ೧೦, ೧೧, ೨೧, ೨೨, ೨೩, ೨೭, ೩೦, ೩೩, ೩೪, ೪೭, ೫೩ ಈ ಪತ್ರಗಳ ಅಂಚು ಮುರಿದಿದೆ. ೨೮ನೆಯ ಪತ್ರವಿಲ್ಲ. ೪೬ನೆಯ ಪತ್ರವಾದಮೇಲೆ ೪೭ನೆಯ ಪತ್ರಕ್ಕೆ ಮೊದಲು ಕ್ರಮಾಂಕ ತಿಳಿದುಬರದ ಒಂದು ಅಂಚು ಮುರಿದಿರುವ ಪತ್ರವಿದೆ.

1235

ಕೆ. ೨೯೩ **ಮಕ್ಕಳ ಚಿಕಿತ್ಸೆ ಮತ್ತು ಮಂತ್ರೌಷಧ ಸಂಗ್ರಹ** ಗದ್ಯ, ಮಂತ್ರ

೧೦.೨" × ೧.೫" ? ?

೨೧೦ ಪತ್ರ ೫ ಪಂಕ್ತಿ ೩೨ ಅಕ್ಷರ

ಆದಿ : ಮಕ್ಕಳ ಚಿಕಿತ್ಸೆ ಬರೆಯುವುದಕ್ಕೆ ನಿರ್ವಿಘ್ನಮಸ್ತು ॥
... ದಿನ ೪ಕ್ಕೆ ॥ ಬಾಯಲ್ಲಿ ನೊರೆ ಸುತ್ತುವದೂ । ತೇಗುವದೂ । ಬಾಕರಿಸು .... । ಅದಕ್ಕೆ ಆನೆದಂತ ಹಾವಿನಸೆ....ಸುವ ಆಡಿನ ಮೂತ್ರದಿಂ ಅರೆದು.... ಲೇಪಿಸೂದು ॥ ಬೇವಿನ ಸೊಪ್ಪು ಬೆಳ್ಳುಳ್ಳಿ ಹೊಟ್ಟು । ಮಂಡೆ ಕೂದಲೂ । ಯಿವೂ ದೂಪ ।

ಅಂತ್ಯ : ಕಜ್ಜಿಗೆ ಹಸುವಿನ ಗೋಮೂತ್ರವಂನ್ನು ದಿನ ೧ಕ್ಕೆ ವಂದು ಸೊಲಗೆ ಹೊಟ್ಟೆಗೆ ಸೇವನೆಯಂ ಮಾಡೆ ಮೂರು ದಿವ್ಸ ಕಜಿ ತುರಿ ಸಹಾ ಶಮನಾ ॥ ಪತ್ಯಾ ಮಜ್ಜಿಗೆ ಅಂನ್ನಾ ॥

ವಿಷಯ : ರೋಗಗಳಿಗೆ ಔಷಧ ಮತ್ತು ಮಂತ್ರ ಪ್ರಯೋಗ.

ವಿಶೇಷ : ಅತ್ಯಂತ ಶಿಥಿಲ ಪ್ರತಿ. ಅಸಮಗ್ರ. ಅನೇಕ ಗರಿಗಳು ಮುರಿದುಹೋಗಿವೆ. ಕೆಲವು ರೋಗಗಳಿಗೆ ಸುಲಭವಾದ ಔಷಧಿಗಳನ್ನು ಸಂಗ್ರಹಿಸಿ ಬರೆದಿರುವಂತೆ ತಿಳಿದುಬರುತ್ತದೆ. ೨ ಮತ್ತು ೫೫ನೆಯ ಗರಿಗಳಿಲ್ಲ. ೧ರಿಂದ ೧೬೮ರವರೆಗೆ ಕ್ರಮಾಂಕವಿದೆ. ಮುಂದಿನ ೪೨ ಗರಿಗಳಿಗೆ ಕ್ರಮಾಂಕವಿಲ್ಲ. ಕೊನೆಯಲ್ಲಿರುವ ೮ ಗರಿಗಳಲ್ಲಿ ಒಂದೇ ಕಡೆ ಬರವಣಿಗೆ ಇದೆ.

1236

ಕೆ. ೨೧೬/೧ **ಮಗ್ಗೀ ಕೋಷ್ಟಕ ಇತ್ಯಾದಿ** ಗದ್ಯ

೧೪.೫" × ೧.೪" ? ?

೧–೨೩ ಪತ್ರ ೬ ಪಂಕ್ತಿ ೪೦ ಅಕ್ಷರ

ಆದಿ : . . ಸ್ತೂ ॥ ಆಯುರಾರೋಗ್ಯ ಐಶ್ವರ್ಯಮಸ್ತೂ ॥
....
೧ . ೫ . ೫
೧ . ೬ . ೬
೧ . ೭ . ೭
೧ . ೮ . ೮
೧ . . . ೯
೧ . ೧೦ . ೧೦

ಅಂತ್ಯ : ....ದು ಕೆಡಿಸಿದಿರೊಂದಂ ॥ ನಡು ನೀಳವಾಗಿ ಬೆಂನಂ । ಕಡು ಜಿಟ್ಟೆತ್ತಾಗಿ ಜಘನಂ ಹೊಕ್ಕುಳುಮು । ನಡು....ಗಿಯೆ । ಕೊಡುಉದು ತಲೆ ಕೊಟ್ಟನರ್ದ್ಧಚ ....ಯೊಳ್ ॥ ಶ್ರೀಮಂಗಳ ಶುಭ ಮಂಗಳ....

ವಿಷಯ : ಗಣಿತಶಾಸ್ತ್ರ.

ವಿಶೇಷ : ಬಹು ತ್ರುಟಿತ ಪ್ರತಿ. ಇದರೊಡನೆ ಸಭಾಪರ್ವದ ಭಾಗ ಮತ್ತು ಹರಿಭಕ್ತಿ ಸಾರವೆಂಬ ಎರಡು ಗ್ರಂಥಗಳಿವೆ. ೨೨, ೩೩ನೆಯ ಪತ್ರಗಳು ಮುರಿದಿವೆ.

1237

ಕೆ.ಎ. ೧೮ **ಮಂಗರಾಜ ನಿಘಂಟು** ವಾರ್ಧಕಷಟ್ಪದಿ

೧೩.೧″ × ೮.೪″ ಅಭಿನವ ಮಂಗರಾಜ ೧೩೯೮

೧–೧೦೮ ಪುಟ ೨೫ ಪಂಕ್ತಿ ೨೫ ಅಕ್ಷರ

ಆದಿ : ಶ್ರೀಗುರುಭ್ಯೋನಮಃ ॥ ವಾರ್ಧಿಕ ಷಟ್ಪದಿ ॥ ಪಲ್ಲವ ॥ ಸ್ವರ್ಗವರ್ಗ ॥
ಭಾಗುರಿ ಹಲಾಯುಧಂ ಸುರ ಹರಿಧನಂಜಯಂ
ನಾಗವರ್ಮಂ ವೈಜಯಂತಿ ವರ ರುಚಿಯಾದಿ
ಯಾಗಿಯಭಿನವ ಮಂಗರಾಜನುಸುರಿದನವನಿಗಭಿದಾನಮಂ ಪೊಸತೆನೆ ॥೧॥
ಪದ ॥ ಶ್ರೀಮದನುಪಮ ನಿತ್ಯನಾನಂದ ಕೃತ್ಯನು
ದ್ದಾಮ ಸಂಸ್ತುತ್ಯನುದ್ಧತ ಶುದ್ಧ ಸತ್ಯನಭಿ
ರಾಮರಾಮಾತ್ಯ ನತ್ಯಪುನಿಶಾದಿತ್ಯನ ವಿರಳ ಭಕ್ತ ಸಾಹಿತ್ಯನು
ಕಾಮಕಾಲಾಪೂತ್ಯನತುಳಗುಣ ಭೃತ್ಯಮುರು
ಭೀಮಾಂಧ ದೈತ್ಯತನು ತಟಘಟಿತನೃತ್ಯನಾ
ಸೋಮೇಶನಮಲ ವರದಿಂದೀಗೆಮಂಗಂಗಭಂಗ ಮಂಗಳ ಮತಿಯನು ॥೧॥

ಅಂತ್ಯ : ಕಮ್ಮೆ ಕುಲದಲ್ಲಿ ವಿಶ್ವಾಮಿತ್ರ ಗೋತ್ರದಲಿ
ರೆಮ್ಮಾರ್ಯರಾಮರಸರುದರದಲಿ ಶುದ್ಧಲ್ಲ
ಧರ್ಮ ಚಾರಿತ್ರದಲಿ ಶಶಿಪುರಾಧೀಶ ಸೋಮೇಶನ ವರ ಪ್ರಭೆಯಲಿ
ಪೆರ್ಮೆಯಿಂ ಸಭೆ ಮೆಚ್ಚುವಂತೆ ನಾನಾ ಶಬ್ದ
ಸಾಮ್ಯದಿಂದಭಿನವನಿಘಂಟನಭಿನವಮಂಗ
ನಿರ್ಮಿಸಿದನಂಬರಾಂಬಕ ವಹ್ನಿಯೇಕಶಬ್ದದಲಿ ಬಹುಧಾನ್ಯಮಿಹುದೂ ॥೭೬॥
ಇತಿ ನಾನಾರ್ಥ ಕಾಂಡ॥ ಅಂತು ಕಾಂಡ ೫ಕ್ಕಂ ಪದನು ೫೨೨ಕ್ಕಂ ಮಂಗರಾಜ
ನಿಘಂಟು ಪರಿಸಮಾಪ್ತಮಾದುದು ॥ ಮಂಗಳ ಮಹಾಶ್ರೀ ॥
ಶಾಲಿವಾಹನ ಶಕ ೧೩೨೦ನೆಯ ಬಹುಧಾನ್ಯ ಸಂವತ್ಸರದಲ್ಲಿ ಹುಟ್ಟಿದ್ದು. ಇತಿ
ಶಶಿಪುರಾಧಿನಾಥ x x x ಬಾಲಸರಸ್ವತಿ ಮಂಗರಾಜ ವಿರಚಿತಮಪ್ಪ
ಅಭಿನವಾಭಿದಾನದೊಳ್ ನಾನಾರ್ಥಕಾಂಡಂ ಪಂಚಮಸ್ಸಮಾಪ್ತಃ ॥

ವಿಷಯ : ಸಂಸ್ಕೃತ ಪದಗಳಿಗೆ ಕನ್ನಡ ಅರ್ಥ.

ವಿಶೇಷ : ಕ್ರಮಾಂಕ ೨೬ಕ್ಕೆ ಪ್ರತಿಯಾಗಿ ೩೬ ಎಂದಿದ್ದು ತಪ್ಪು ಕ್ರಮಾಂಕವೇ ಮುಂದುವರಿದಿದೆ. ಆದಿಯ ಒಂದು ಪ್ರತ್ಯೇಕ ಪತ್ರದಲ್ಲಿ 'ಚೆನ್ನಮಲ್ಲಿಕಾರ್ಜುನ ಮಾಸ್ತರವರ ಪುಸ್ತಕದೊಡನೆ ಮಂಗಿರಾಜ ನಿಘಂಟುವನ್ನು ತಾಳೆ ನೋಡ ಲಾಯ್ತು' ಎಂದಿರುವುದಲ್ಲದೆ ಈ ಪ್ರತಿಯಲ್ಲಿ ಉಪಯೋಗಿಸಿರುವ ಕೆಲವು ಚಿಹ್ನೆಗಳ ವಿವರ ಮತ್ತು ಕವಿಕಾವ್ಯ ವಿಚಾರ ಸಂಗ್ರಹವಿದೆ. ಹೋಲಿಕೆಯ ಪಾಠಾಂತರಗಳನ್ನು ಕೆಂಪುಮಸಿಯಿಂದ ಗುರುತಿಸಿದೆ.

1238

ಕೆ.ಎ. ೨೭೦ **ಮಡಿವಾಳಯ್ಯನ ಸಾಂಗತ್ಯ** ಸಾಂಗತ್ಯ

೧೨.೮" × ೮.೨" ? ?

೧–೧೧ ಪುಟ ೨೪ ಪಂಕ್ತಿ ೨೪ ಅಕ್ಷರ

ಆದಿ : ಶ್ರೀಗಣಾಧಿಪತಯೇನಮಃ ॥ ಮಡಿವಳಯ್ಯನ ಸಾಂಗತ್ಯ ॥
ಶಿವ ಎನ್ನಿ ಶಿವ ಎನ್ನಿ ಶಿವಶರಣೆನ್ನಿ
ಭವಸಾಗರವ ದಾಂಟುವರೆ
ಶಿವನರಿಯದ ಮನವ ನರಗುರಿಗಳು
ಭವ ಹರಿವುದು ಕೇಳಿ ಜನರು ॥ ೧ ॥

x x x x

ಭವಿಯು ಬಿಜ್ಜಳನ ಕಪ್ಪಡವ ತೊಳೆಯಲೊಲ್ಲದೆ
ಅವಗಡದಾನೆಯ ಮುರಿದು
ಭುವನದೊಳಗೆ ಮಡಿವಾಳನ ಪ್ರತಾಪವ
ಶಿವಶರಣರು ಚಿತ್ತೈಸಿ ॥ ೩ ॥

ಅಂತ್ಯ : ಮಲಿತದೂಷಕರ ಮುರಿದು ಮಡಿವಾಳಯ್ಯ
ಬಲುಹುಳ್ಳರಾಯ ಬಿಜ್ಜಳನ
ನೆಲೆಗಾಣಿಸಿ ಪಟ್ಟವಗಟ್ಟಿಸಿದ ಕಥೆಯಿದು
ಚೆಲುವನ ಚರಿತೆ ಸಂಪೂರ್ಣ ॥

x x x x

ಬರದೋದಿದವರಿಗೆ ಪರಮ ಪದವನೀವ
ಹರುಷದಿಂದಲಿ ಕೇಳ್ವರಿಗೆ
ದುರಿತ ವಿನಾಶವ ನೆರೆ ಕರ್ಮ ಹರಿದವು
ಶರಣನ ಕೃತಿಯ ಕೇಳ್ವರಿಗೆ ॥

ಅತು ಸಂಧಿ ೨ಕಂ ಪದನು ನೂರಇಪ್ಪತ್ತಮೂರು ॥ ೧೨೩ ॥ಮಂಗಳಮಹಾ ಶ್ರೀ.

ವಿಷಯ : ಶಿವಭಕ್ತ ಮಡಿವಾಳ ಮಾಚಯ್ಯನ ಕಥೆ.

ವಿಶೇಷ : ಮಧ್ಯದಲ್ಲಿ ಪದಗಳು ಲುಪ್ತವಾಗಿವೆ.

1239

ಕೆ. ೧೬೯/೧೩ **ಮಣ್ಣೇಶ್ವರನ ಕಾವ್ಯದ ನಾಂದ್ಯ** (ಸಟೀಕು) ವಚನ, ಟೀಕು

೯.೬" × ೨" ? ?

೫೭–೬೦ ಪತ್ರ ೧೦ ಪಂಕ್ತಿ ೫೦ ಅಕ್ಷರ

ಆದಿ : ಮಣ್ಣೇಶ್ವರನ ಕಾವ್ಯದ ನಾಂದ್ಯ

ತರುವುರದನತಜಿತನುಜೆಯ ಮನೆ ಸಖ:
ತರುಣ ನಮ್ಮನವರನಣುಗಾನರಸಿಯಾತ್ಮಜನಮವನ
ಮಗನುರುಪಿದ ಗುರುವೆ ಮಣ್ಣೇಶ ಮಾಂ ತ್ರಾಹೀ ॥
ಟೀ ॥ ತರುವುರದನ । ಚಂದ್ರನ ತಂದೆ । ಸಮುದ್ರಧ । ತನುಜೆಯ। ಲಕ್ಷ್ಮಿಯ। ಮನೆಯ ॥ ತಾವರೆಯ । ಸಖ । ಸೂರ್‍ಯ್ಯನ । ತರುಣ । ಕರ್ನನ । ಅಮ್ಮನ। ಕೊಂತಿಯ । ವರನ । ಪಾಂಡವನ । ಅಣುಗನ । ಅರ್ಜುನನ । ಅರಸಿಯ । ಸುಭದ್ರೆಯ । ಆತ್ಮಜನ । ಅಭಿಮನ್ಯುವಿನ । ಮಾವನ । ವಿಷ್ಣುವಿನ । ಮಗನ। ಮನ್ಮಥನ । ವುರುಪಿದ । ದಹಿಸಿದಂಥ । ಮಣ್ಣೇಶ । ಚಿತ್ಪೃಥ್ವಿಗೆ ಕರ್‍ತೃ ವಾದಂಥ । ಗುರುವೆ ಯೆಲೆ ಆಚಾರ್‍ಯ್ಯನೆ । ಮಾಂ । ಯಂನನು । ತ್ರಾಹಿ । ರಕ್ಷಿಸು ॥ ೧ ॥

ಅಂತ್ಯ : ಟೀ ॥ ಸರಸಿ । ಕೊಳನ । ಪೊಕ್ಕನ । ಕೌರವನ। ತಾಯ। ಗಾಂಧಾರಿಯ । ವರನ । ಮೃತರಾಷ್ಟ್ರನ । ಅಣುಗನ । ದುಸ್ವಾಸನ ರಕ್ತ ಸುರಿದನ । ಭೀಮನ। ಅಯ್ಯನ । ವಾಯವ್ಯನ । ವಾಜಿಯ । ಯರಳೆಯ । ವುರಸಿಗೆ । ಯದೆಯಲ್ಲಿ ಧರಿಸಿರ್‍ದ್ದ ಚಂದ್ರನ । ಅರಿ । ಸರ್ಪನಸುತೆ । ನಾಗಕರ್ನಿಕೆಯ । ಅರಸನ । ಅರ್ಜುನನ । ವರ । ಶ್ರೇಷ್ಟನಾದ । ಭೋವನ ಕೃಷ್ಣನ । ಸೊಸೆಯ । ಶಾರಥಿಯ ಮೂಗರಿದನ। ವೀರೇಶ್ವರನ। ಅಯ್ಯನ। ತಂದೆಯಾದ ಶಿವಸ್ವರೂಪನಾದ ಮಂಣ್ಣೇಶನೆ ನಮಸ್ಕಾರವೂ ॥ ೧೩ ॥
ಮಂಣ್ಣೇಶ್ವರನಾಂದ್ಯ ಸಂಪೂರ್‍ನ್ನಂ ಮಂಗಳಮಹಾ ಶ್ರೀ.

ವಿಷಯ : ನಾಂದೀ ಪದ್ಯಗಳು ಮತ್ತು ಅವುಗಳ ಟೀಕು.

ವಿಶೇಷ : ದೇವೀ ಸ್ತುತಿ, ವೃಷಭೇಂದ್ರ ಪುರಾಣದ ಸ್ತೋತ್ರನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳು ಇದೇ ಕಟ್ಟಿನಲ್ಲಿವೆ.

1240

ಕೆ.ಬಿ. ೪೮೨ **ಮದಕರಿನಾಯಕನ ಚರಿತ್ರೆ** **ಗದ್ಯ**

೯.೬"×೭.೩" **?** **೧೮ನೆಯ ಶತಕ**

೧–೮೭ ಪತ್ರ **೧೮ ಪಂಕ್ತಿ** **೧೮ ಅಕ್ಷರ**

ಆದಿ : ಶ್ರೀಮಂತ ಮಾಹಾರಾಜಿ ಶ್ರೀ ಮಾಧವರಾವಪಂತ್ತ ಪ್ರಧಾನ ಸ್ವಾಮಿಯವರ ಚರಣಾರವಿಂದಾಪ್ರತ್ತಿಗೆ |
ಆಗ್ಯಾಧಾರಕಾ ಭೀಮಾಜಪಂತ ಕ್ರುತ್ತಾನೇಕ ಸಾಷ್ಟಾಂಗ ನಮಸ್ಕಾರಾ ವಿಗ್ನಾಪನೆ | ಅದಾಗೀ ಶ್ರೀಮಂತ ಸ್ವಾಮಿ ವಿಳಂಬಿ ಸಂವತ್ಸರ ಫಾಲ್ಗುಣ ಶುಧಾ ೧ ವರಿಗೆ ಶ್ರೀಮಂತ ಚರಿಣಿ ತಪ್ಪರಾಗಿ ಸರಕಾರದ ನವಕರಿ ಮೇಲೆ ಹಾಜರು ಯಿಥೇನೆ. ಶ್ರೀಮಂತ ಮಹಾರಾಜ ದಕ್ಷಣ ದೇಶದಲ್ಲಿ ಚೆನ್ಮ್ರಲಾದ್ರಿಯಂತ್ತಾ ವಂದು ಪರ್ವತ ಸ್ರೆಷ್ಠಕೆ ಕಾಮಗೆರೆ ವೃಂಶೆಸ್ತಾ ರಾಜಾ ಮೆದಕೇರಿ ನಾಯ್ಕ ಯಂಬುವನು ಮಾಹಾ ಪ್ರತ್ತಾಪಶಾಲಿ ಧರ್ಮಪುಣ್ಯಾ ಯಶೋಮೂರ್ತ್ರಿ ಆವತ್ತಾರನಾಗೀ ಕಲಿಯುಗಕ್ಕೆ ಧರ್ಮರಾಯಾ ಪ್ರಾಯ ಸಂಪತ್ಸಮ್ರುದ್ಧಿಯಿಂದಾ ಪುತ್ರ ಮಿತ್ರ ಬಂಧುಜನಾ ಸಹಿತ್ತಾ ಸಿಹ್ಮರೊಢರಾಗಿ ಸಕಲ ಧರ್ಮಶಾಸ್ತ್ರಾದಿಂದ್ದಾ ರಾಜ್ಯಾಭಾರಾ ಮಾಡುತ್ತಾ ಯಿರುವಲ್ಲಿ ಯಿಾ ದೇಶದಲ್ಲಿ ಘಡ್ರುತ್ತು ವಂದೆ ಪ್ರಕಾರಾ ನಡಿಯುತ್ತಾ ಯಿದ್ದರು.

ಅಂತ್ಯ : ಭೂಮಿಯೆಲ್ಲಿ ಜಿನಾರಾಜಿ ಸಾಹೇಬರ ಬಂಧು ಜಿನಾಪರಶುರಾಮಹನಾಯ್ಕ ಸಾಹೆಬಜ್ಯಾದೆ ಭರಮಂಣನಾಯ್ಕ ಚುಲ್ತಾ ಭಾವುದೊಡೆರಿ ಮೆದಕರಿನಾಯ್ಕ ವಗ್ಯೆರಿರಿಗೆ ಭಾರಿ ಜಖಿಮಿಯಾಗಿ ಕಿಲ್ಲೆಕಬಂದ್ದು ತಂಮ್ಮಾ ಪುತ್ರರು ಮಿತ್ರರು ಸಾಹ ಸುಖದಿಂದ್ದಾ ಯಿದ್ದರು. ಯಿಾ ಬಖ್ಯೆರು ಸಮಾಪ್ತಾ ||

x x x x

೧೬೦೦೦ ಪ್ಯಾದೆ ಕಾಮಾಟಿ ವಗ್ಯೆರೆ ೭೦೦ ಸರಗುವ

೨೯೫೦೦

೫೫೦೦ ಚಾರ್‍ರು
೫೦೦೦ ಖ್ಯಾ ಸವಾರಿಹ ಮರಾಹಾ ಮಾತಬರ ಜಿನಾ
ಕರ್ನಾಟಕಕ್ಕೆ ದರೆ ವಗ್ಯೆರೆ

೫೦೦೦೦

ವಿಷಯ : ಚಿತ್ರದುರ್ಗದ ಪಾಳೇಗಾರ ಮದಕರಿನಾಯಕನ ಚರಿತ್ರೆ.

ವಿಶೇಷ : ಕೈಯಿಂದ ತಯಾರಿಸಿದ ಕಾಗದ. ಹಳೆಯ ಅಕ್ಷರ. ಕೆಲವು ಪತ್ರಗಳು ಶಿಥಿಲ. ೮೫ನೆಯ ಪತ್ರದಲ್ಲಿ ಮದಕರಿನಾಯಕನು ಕುದುರೆಯ ಮೇಲೆ ಕುಳಿತುಕೊಂಡಿರುವ ಚಿತ್ರವಿದೆ. ಈ ಪುಸ್ತಕದ ಕೊನೆಯಲ್ಲಿ ಗಣೇಶನ ಸ್ತುತಿಯನ್ನು ಆರು ಪತ್ರಗಳಲ್ಲಿ ಬರೆದಿದೆ.

1241

ಕೆ. ಬಿ. ೨೧೯	**ಮದನತಿಲಕ**	ಚಂಪು
೮″ × ೬.೪″	ಚಂದ್ರನಾಥ	೧೦೭೯
೧–೨೨ ಪತ್ರ	೨೦ ಪಂಕ್ತಿ	೨೮ ಅಕ್ಷರ

ಆದಿ : ಮದನತಿಲಕ ಚಂದ್ರರಾಜ ವಿರಚಿತ । ಶ್ರೀ ಸಿದ್ಧಿರಸ್ತು।

ಶ್ರೀವಧುವಿಂಗಗಜೆಗೆ ವಾಕ್
ಶ್ರೀವಧುಲಿಂಗಜನನ ಜನಂ ಕುಸುಮಾ
ಸ್ತ್ರಾವಳಿಯಿಂದೋಲೈಸಿದ
ಲಿಂಗೋದ್ಭವನೀಗೆಮಗೆ ಸುಖಸಂಪದಮಂ ॥

ಅಂತ್ಯ : ಪದನರಿಡಿಂಬುಗೆಯ್ದು ಮಗಳ್ದುಂ ರತಿಯಂ ಪಡದು ದಳದುಳಿಕೆಯಿಂದ ಮಾಕೈತವೆಯಿಂತವದಿಂಗಿತಮುಂ ಸಮಂತು ಕೂರ್ತೊಡಂ ಕೂರ್ಮೆಯಿಂ ಸತಿಯೊಳ್ ಬೆರತು ಯಿಷ್ಟದಂತೆ ಮಾಡಿ ಕೂಡಿ ಗೆಲ್ಲುವ ಚದುರಂ ಅಂಬುಜ ದಳಾಕ್ಷಿ ॥

ಗದ್ಯ॥ಯಿದು ನಿಖಿಳ ಬುಧಜನವಿನತಾ ಕಾವ್ಯಲಂಕಾರನೀತಿಬಂಧನ ಚಂದ್ರರಾಜ ವಿರಚಿತಮಪ್ಪ ಮದನತಿಲಕದಲ್ಲಿ ರತಿಭಾವಲಕ್ಷಣಮಂ ಪೇಳ್ದ ಸೌಮಾಧಿಕಾರ ಸಂಪೂರ್ನ ಮಂಗಳ ಮಹಾಶ್ರೀ.

ವಿಷಯ : ಕಾಮಶಾಸ್ತ್ರ.

ವಿಶೇಷ : ಮೋಡಿ ಅಕ್ಷರ.

1242

ಕೆ. ೩೯೧/೧	**ಮದನ ವಿಜಯ**	ವಿವಿಧಷಟ್ಪದಿ
೮″×೧.೪″	ಮಲ್ಲಿಕಾರ್ಜುನನೃಪಾಲ	?
೧–೭೭ ಪತ್ರ	೭ ಪಂಕ್ತಿ	೩೫ ಅಕ್ಷರ

ಆದಿ : (ಕ್ರಮಾಂಕವಿಲ್ಲದ ಗ್ರಂಥಾರಂಭಕ್ಕೆ ಮೊದಲ ಪತ್ರದಿಂದ)

ಶ್ರೀಗಣಾಧಿಪತಯೇ ನಮಃ । ಗದ್ಯ ॥ ಇದು ಪರಮೇಶ್ವರಾಂಘ್ರಿಸರಸೀರುಹ ಷಟ್ಪದಶಾತ್ರವಗರ್ವ್ವ ಪರ್ವ್ವತಶತಹ್ರದ ಕಾಮಿನೀಜನ ಲಸತ್ಕುಸುಮಾಸ್ತ್ರ ಸತ್ಕ್ರಪಾಕಾರಬುಧಕಲ್ಪಮಹೀರುಹ ಸದ್ಗುರುಲಿಂಗಜಂಗಮ ಸೇವಾಧುರಂಧರ ವೀರಶೈವ ನಿಷ್ಟಾ ಸಮವರ್ತಿ ತೋಟಭೂಪಾಲಗರ್ಭಾಬ್ಧಿ ಪೂರ್ನ ಹಿಮಕರ ಸಂಗಮಾಂಬಾ ತನೂಜ ಪ್ರಭುಕುಲಲಲಾಮ ಯಿಂಮಡಿ ತೋಟಭೂಪಾಲಕಂ ಬರಯಿಸಿದ ಮದನತಿಲಕದ ಪುಸ್ತುಕಕ್ಕೆ ಮಂಗಳ ಮಹಾ ಶ್ರೀ. (೧ನೆಯ ಪತ್ರ) ಶ್ರೀಗಣಾಧಿಪತಯೇ ನಮಃ । ನಿರ್ವಿಘ್ನಮಸ್ತು । ಮದನತಿಲಕ ಪುಸ್ತುಕಕ್ಕೆ ಮಂಗಳ ಮಹಾಶ್ರೀ—ಧಲಿಂಗಾಯನಮಃ । ಭೋಗಷಟ್ಪದಿ ॥

ಶ್ರೀಮದಮರವರ ಕಿಱೀಟ
ಭೂಮನೋಹ.....ಘ್ರಿಯುಗಳ ಶೋಣ
ತಾಮರಸನುದಾರವರ ತರಂಗಿಣೀಧರಂ
ಸಾಮಗಾನಲೋಲನೆಮಗು
ಮಾಮಹೇಶನಿಂದು ಭೂಷ
ಹೇಮಕೂಟ ಗಿರಿನಿವಾಸನೀಗೆ ಸಲುಖ್ಯಮಂ ॥ ೧ ॥

x x x x

ಯದುಕುಲಲಲಾಮ ಗುಣ
ಸದನ ಶುಭವದನ ಕೋ
ವಿದರರಸ ಮಲ್ಲಿಕಾರ್ಜುನನ್ರುಪಾಲಾ
ಮದನಾಗಮಾಭಿಗ್ನ
ಪದೆದೆನಗೆ ಕಾಮಶಾ
ಸ್ತ್ರದ ನೆಲೆಯನರುಪಿ ಸಂತಸಮನೆಸಗಾ ॥ ೧೧ ॥

ಅಂತ್ಯ : ತಾರಾಚಳವೆ ಗ್ರುಹಂ
ಗೌರಿಯೆ ಕಲತ್ರ ಕು
ಮಾರನೆ ಕುಮಾರಂ ಉ್ರಷನೆ ವಾಹನಂ
ಶ್ರೀರಮಣನೇ ಮಿತ್ರ
ನೋರಂತೆ ತನಗೆಂಬು
ದಾರ ತ್ರಿಯಂಬಕ ಜಯಜಯಾ ॥ ೮೨ ॥

ಇತಿ ಜನವಸ್ಯದೊಳು ದೂತಿಕಾನಟಣೆ ಯೆಂತ್ರ ಮಂತ್ರ ತಂತ್ರವರ್ನನಂ ॥ ಅಂತ್ತು ಸಂಧಿ ೧೩ಕ್ಕೆ ಪದ ೭೦೧ಕಂ ಯಿಾ—ಸಂಧಿ ೯ಕ್ಕಂ ಪದ ೫೫೧ಕಂ ಯಿಂನು ವಿಚಾರಿಸಿ ಬರವ ಸಂಧಿ ೪ಕ್ಕಂ ಪದ ೧೫೦ಕ್ಕಂ ಮಂಗಳಮಹಾ ಶ್ರೀ x x ಸಿಧಾರ್ತ್ರಿ ಸಂವತ್ಸರದ ಕಾರ್ತ್ರಿ ಶು ೫ ಬುಧವಾರದಲೂ ತ್ರೋಟಧೈಯ್ಯ

ನಾಯಕರವರಿಗೆ ಚಿಟ್ಟನಹಳಿಯ ಸೇನಭಾಗ ಲಿಂಗಪ್ಪನು ಬರದುಕೊಟ್ಟ ಮದನತಿಲಕದ ಪುಸ್ತುಕಕ್ಕೆ ಮಂಗಳಮಹಾ ಶ್ರೀ.

ವಿಷಯ : ಕಾಮಶಾಸ್ತ್ರ.

ವಿಶೇಷ : "ಅಸಮಗ್ರ. ಪತ್ರಸಂಖ್ಯಾಕ್ರಮಮಾತ್ರ ಸರಿಯಾಗಿದೆ. ಪ್ರತಿ ಮಾಡಿರುವುದೇ ಇಷ್ಟು. ಒಂದನೆಯ ಸಂಧಿ ಅಸಮಗ್ರ. ಆರನೆಯ ಸಂಧಿ ಮುಕ್ತಾಯದನಂತರ ಯಿೂ ಪ್ರಸ್ತಾಪದಲ್ಲಿ ಯಿಂನ್ನು ಯರಡು ಮೂರು ಸಂಧಿಯಿಲ್ಲ. ಅವನ್ನು ವಿಚಾರಿಸಿ ಬರೆಯಬೇಕೂ" ಎಂದು ಟಿಪ್ಪಣಿ ಮತ್ತು ಒಂದು ಕಂದ ಪದ್ಯವಿದ್ದು ಪತ್ರ ಖಾಲಿಯಿದೆ. ಮುಂದೆ ೬೨ನೆಯ ಪದ್ಯದಿಂದ ೬೭ರವರೆಗೆ ಮುಂದುವರಿದು "ಅಂತ್ತೂ ಸಂಧಿ ೧೦ಕ್ಕಂ ಪದನು ೪೪೪" ಎಂದಿಷ್ಟುಮಾತ್ರ ಬರೆದಿದೆ. ಮುಂದೆ ಕನ್ಯಾಪುರುಷಪತಿವ್ರತಾವರ್ಣನಾ ಭಾಗವಿದ್ದು ಅಂತ್ಯದಲ್ಲಿ "ಅಂತು ಸಂಧಿ ೧೦ಕ್ಕಂ ಪದನು ೫೩೩ಕ್ಕಂ ನಿಲಕಡೆ ಸಂಧಿ ೯ಕ್ಕಂ ಪದ ೫೫೧ಕ್ಕಂ ಯಿಂನ ವಿಚಾರಿಸಿ ಬರವ ಸಂಧಿ ೪ಕ್ಕಂ ಪದ ೧೫೦ಕ್ಕಂ ಮಂಗಳ ಮಹಾ ಶ್ರೀ|| ಎಂದಿದೆ. ಸಂಖ್ಯೆಯಿಲ್ಲದ ಪತ್ರ ಮೊದಲಲ್ಲಿ ಒಂದು, ಬಳಿಕ ೧ರಿಂದ ೭೭ ಕ್ರಮವಾಗಿವೆ. ಶಕಟರೇಫವಿದೆ. ಇದರೊಂದಿಗೆ ಪಿಂಡೋತ್ಪತ್ಯ ಗ್ರಂಥವೂ ಇರುತ್ತದೆ. ಶಿಥಿಲಪ್ರತಿ.

1243

ಕೆ.ಬಿ. ೧೫೦	**ಮದನ ವಿಜಯ**	ವಿವಿಧ ಷಟ್ಪದಿ
೭.೬" × ೬"	ಮಲ್ಲಿಕಾರ್ಜುನ ನೃಪಾಲ	?
೧–೫೪ ಪತ್ರ	೧೭ ಪಂಕ್ತಿ	೨೨ ಅಕ್ಷರ

ಆದಿ : ಮದನವಿಜಯ

ಮಲ್ಲಿಕಾರ್ಜುನನ ವಿಜಯ ಕಾಮಶಾಸ್ತ್ರ.
ಶ್ರೀಮದಮರವರ ಕಿರೀಟ
ಭಾಮನೋಹರಾಂಘ್ರಿ ಶೋಣ
ತಾಮರಸನುದಾರ ಸುರತರಂಗಿಣೀಧರಂ
ಸಾಮಗಾನಲೋಲನೆಮಗು
ಮಾ ಮಹೇಶನಿಂದು ಜೂಟ
ಹೇಮಕೂಟಗಿರಿನಿವಾಸನೀಗೆ ಸೌಖ್ಯಮಂ || ೧ ||
ಮನದೊಳರಿದು ನೆನೆವರೊಡಲೆ
ಮನೆಯೆನುತ್ತೆ ಮೆಚ್ಚಿ ನಿಂದು
ಬಿನದಿಂದವರ್ಗೆ ಬಯಸಿದನುವನೊದವಿಸಿ

ಘೇನಕೆ ಘೇನವೆನಿಸುವ ಕರುಣಿ
ಯನಘನೆಮಗೆ ಕುಡುಗೆ ವರವ
ನನುಪಮು ತ್ರಿಯಂಬಕಂ ಜಗತ್ಕುಟುಂಬಕಂ ॥ ೨ ॥

ಅಂತ್ಯ : ಮಲ್ಲಿಕಾರ್ಜುನ ಧರಾ
ವಲ್ಲಭನೊಸೆದು ತನ್ನ
ನಲ್ಲಳರಿವಂತೊರೆದ ಜನವಶ್ಯಮುಂ
ಸಲ್ಲಲಿತ ವಾಣಿ ಕವಿ
ಕಲ್ಲರಸನರಿವವರ
ಮೆಲ್ಲೆದೆಯನಿಂಬುಗೊಳುವಂತೆ ಬರೆದಂ ॥ ೮೩ ॥
ಜನವಶ್ಯದೊಳ್ ದೂತಿ ಮಂತ್ರ ತಂತ್ರ ವರ್ಣನಂ ದ್ವಾದಶಸ್ಸಂಧಿ ಸಮಾಪ್ತಿ ॥
ಜನವಶ್ಯ ಮದನತಿಲಕಂ ಸಂಪೂರ್ಣಂ ॥ ಶ್ರೀ ॥

ವಿಷಯ : ಕಾಮಶಾಸ್ತ್ರ.

ವಿಶೇಷ : ೮ನೆಯ ಸಂಧಿಯಲ್ಲಿ ೫೨ನೆಯ ಪದ್ಯಾನಂತರ ಖಾಲಿ ಪತ್ರವಿದ್ದು ಮುಂದೆ ೬೦ನೆಯ ಪದ್ಯದಿಂದ ೮೬ನೆಯ ಪದ್ಯ ಪೂರ್ತಿಯಾಗಿ ದಶಮಸ್ಸಂಧಿ ಸಮಾಪ್ತವೆಂದಿದೆ. ಈ ಮಧ್ಯೆ ೯ನೆಯ ಸಂಧಿ ಲುಪ್ತವಾದಂತಿದೆ. ೯ನೆಯ ಸಂಧಿಯ ಸಮಾಪ್ತಿ ಭಾಗ ಸಿಕ್ಕುವುದಿಲ್ಲ. ಆದುದರಿಂದ ಅಸಮಗ್ರವೆನ್ನಬಹುದು. ಒಟ್ಟು ಗ್ರಂಥದಲ್ಲಿ ಅಲ್ಲಲ್ಲಿ ಕೆಲ ಪದ್ಯಭಾಗಗಳು ಲುಪ್ತವಾಗಿವೆ. ಒಟ್ಟು ೧೨ ಸಂಧಿಗಳು. ಶರ, ಕುಸುಮ, ಭೋಗೇತ್ಯಾದಿ ವಿವಿಧ ಷಟ್ಪದಿಗಳಲ್ಲಿ ವರ್ಣಿತವಾಗಿದೆ. ಈ ಗ್ರಂಥಕ್ಕೆ ಮದನವಿಜಯ, ಕಾಮಶಾಸ್ತ್ರ, ಮಲ್ಲಿಕಾರ್ಜುನ ವಿಜಯ, ಜನವಶ್ಯ, ಮದನ ತಿಲಕ—ಇಷ್ಟು ಹೆಸರುಗಳೂ ದೊರೆಯುತ್ತವೆ. ರಕ್ಷಾಕವಚ ಸುಭದ್ರವಿದ್ದರೂ ಪತ್ರಗಳು ಬುಡದಲ್ಲಿ ಮುರಿದು, ಬಿಡಿ ಪತ್ರಗಳಾಗಿ ರಕ್ಷಾಕವಚದೊಳಗಿರುತ್ತವೆ. ಸ್ಫುಟಾಕ್ಷರ. ೭ನೆಯ ಪತ್ರದ ಒಂದುಕಡೆ ಮತ್ತು ೮, ೯, ೧೦ನೆಯ ಪತ್ರಗಳು ಖಾಲಿ ಇವೆಯಾದರೂ ಗ್ರಂಥಲೋಪವಿಲ್ಲ. ೩೮ನೆಯ ಪತ್ರದಲ್ಲಿ ಗ್ರಂಥಲೋಪವಿದೆ.

1244

ಕೆ. ೪೬೩	**ಮದನಾರಿ ವೈದ್ಯನಿಘಂಟು**	ಗದ್ಯ
೨೩.೫″ × ೧.೩″	?	?
೧–೭೦ ಪತ್ರ	೭ ಪಂಕ್ತಿ	೮೬ ಅಕ್ಷರ

ಆದಿ : ಅಬಲಾ । ನಾಳಲು । ನುಲಿಗಿನ ಕಾಯಿ । ಸ್ತ್ರೀಯಿ । ಅಬ್ದಿ । ಕೊಡನಾಜಿ

ಮೇಘ | ಮಳೆ | ಅಬ್ದಿಜಾ | ಕಡಲ ನಾಲಗೆ | ಅಬ್ದಿಕಾ | ಅಕ್ಕಿಯ ಅಂಬಲಿ| ಅಂಕೋಟ | ಅಂಕೋಲೆ | ಅಂಬರೀಷಂ| ಅಡಪು | ಹುರಿಹುಂಟು |

ಅಂತ್ಯ : ತ್ರಯತ್ರಿಂಶತಿಪ್ರೋಕ್ತರ್ | ವಾಗಾಸ್ತೇಮುತ್ಪಲ ಭೀತಃ | ಯುಂಜ್ಯಾತ ದ್ವಿದೀಮಸ್ತ್ರ್ಯಷ್ಟ| ದೌವ್ಯಂಜ ಹ್ಯಾದಯೋಗಿಕಂ || ತ್ರಯತ್ರಿಂಶದತಿಪ್ರೋಕ್ತ| ಇತಿ ಸಂಖ್ಯಾಸ್ನಾನ ಮೊದಲಾದದಕ್ಕೆ ಗ್ರಹಣಂ |
ಬಾಹಟೋಕ್ತಗಣ ಸಮಾಪ್ತಃ || x x x x
ಇತಿ ಮದನಾದಿಗಣಃ ಸಂಪೂರ್ಣ್ಣಃ ||

ವಿಷಯ : ವೈದ್ಯಶಾಸ್ತ್ರ ಪದಗಳ ನಿಘಂಟು.

ವಿಶೇಷ : ತ್ರುಟಿತ. ಶಕಟರೇಫವಿದೆ. ೬—೧೦ ಮತ್ತು ೬೦ನೆಯ ಗರಿಗಳು ತುಂಡಾಗಿವೆ. ೧೦, ೩೫, ೪೪, ೫೨ನೆಯ ಗರಿಗಳಿಲ್ಲ. ೩೮ನೆಯ ಕ್ರಮಾಂಕದ ಎರಡು ಗರಿಗಳಿವೆ.

1245

ಕೆ.ಬಿ. ೨೦೬	**ಮದಾಲಸ ಪರಿಣಯ**	ಯಕ್ಷಗಾನ
೭.೫″ × ೫.೯″	ಲಿಂಗರಾಜ	೧೮೫೦
೧–೩೬ ಪತ್ರ	೧೭ ಪಂಕ್ತಿ	೧೮ ಅಕ್ಷರ

ಆದಿ : ಮದಾಲಸಿ ಪರಿಣಯ ಬರಿಯುವದಕ್ಕೆ ಶುಭ || ಶ್ರೀರಸ್ತು ||
ಕಂದ ||| ಶ್ರೀತುಹಿನಗಿರಿ ಕುಮಾರಿ
ಜಾತದಯ ಸಾರನಿಭೃತ ಹೃದಯತಟಾಕಂ
ಶೀತಾಂಶುಕಲಿತಜೂಟಂ
ಪ್ರೀತಿಯೊಳೆಂಮಂನು ಸಲಹಲೀ ವೀರೇಶಂ ||| ೧ ||
x x x x
ಕಂದ || ವರಭಾಗವತದೆ ಮೆರೆಯುವ
ನೆರೆ ಗಂಧರ್ವಾತ್ಮಜಾತೆಯ ಮದಾಲಸೆಯ
ಪರಿಣಯಮಂ ವಿರಚಿಸುವೆನು
ಧರೆಯೊಳಗರಿ ಯಕ್ಷಗಾನದೋಳ್ನುಡಿಯಿಂದಂ || ೮ ||

ಅಂತ್ಯ : ವಾರ್ಧಖ ||
ಹರಸುತಾನಂದದಿಂ ಕುವರಿಯಿಂದೊಡವೆರದು
ಸಿರಿಯೂಂತು ಪುತ್ರರಂ ಪಡದು ಬಾಳೆನುತುರಗ
ವರನು ಕಳುಹಿಸೆ ಪುರಕೆ ನಮಿಸಿ ಮಿತ್ರರ ವೆರದು ತಿರುಗಿದಂ ತಂನ ಪುರಕೆ

ತೆರಳಿ ಪುರಮಂ ಪೊಕ್ಕು ಸತಿಯಿಂದ ಕೂಡಿ ನಾ
ಲ್ವರ ಪಡೆದು ಮಕ್ಕಳಂ ಸುಖದಿಂದ ರಾಜ್ಯವಂ
ಪೊರೆಯುತಿಹನೆಂನುತಂ ದೊರೆ ಪರೀಕ್ಷಿತಗೆ ಶುಕಯೋಗಿ ಕರುಣದಿ ಪೇಳ್ದನು
|| ೩೫೬ ||

x x x x

ಕಂದಪದ್ಯ || ಶಾಲಿವಾಹನ ಶಕಾಬ್ದಂ
ಫಾಲಾಕ್ಷ ಮುಖಾಶ್ವ ಶೈಲ ಶಶಿಮಿತಮಾಗಲ್
ಶ್ರೀಲಿಂಗರಾಜನುಸುರ್ದಂ
ಲೀಲೆಯೊಳೀ ವರ ಮದಾಲಸ ಪರಿಣಯವಂ || ೩೬೨ || ಶ್ರೀ

ವಿಷಯ : ಭಾಗವತದಲ್ಲಿ ಬರುವ ಗಂಧರ್ವ ಸ್ತ್ರೀ ಮದಾಲಸೆಯ ಕಥೆ.

ವಿಶೇಷ : ಸುಂದರ ಬರಹ. ಅಲ್ಲಲ್ಲಿ ಪತ್ರಗಳನ್ನು ಹುಳು ಕೊರೆದಿದೆ. ತೆಳುವು ಕಾಗದ.

1246

ಕೆ.ಬಿ. ೪೯೬ **ಮದಾಲಸ ಪರಿಣಯ** ಯಕ್ಷಗಾನ

೮"X೬.೩" ಲಿಂಗರಾಜ ೧೮೫೦

೧-೪೨ ಪತ್ರ ೧೫ ಪಂಕ್ತಿ ೧೮ ಅಕ್ಷರ

ಆದಿ : ಶ್ರೀ ವೀರೇಶ ಪ್ರಸಿದ್ಧಾ| ಮದಾಲಸ ಪರಿಣಯ ಬರಿಯುವದಕ್ಕೆ ಶುಭಮಸ್ತು||
ಕಂದಾ || ಶ್ರೀತುಹಿನಗಿರಿ ಕುಮಾರೀ
ಜಾತದಯಾ ಸಾರನಿಭೃತ ಹೃದಯ ತಟಾಕಂ
ಸೀತಾಂಶುಕಲಿತಜೂಟಂ
ಪ್ರೀತಿಯೊಳೆಂಮುಂನು ಸಲಹಲೀ ವೀರೇಶಂ || ೧ ||
ರಾ | ನಾಟಿ | ಝಂಪೆ |

x x x x

ಕಂದಾ || ವರ ಭಾಗವತದೆ ಮೆರೆಯುವ
ನೆರೆ ಗಂಧರ್ವಾತ್ಮಜಾತೆಯ ಮದಾಲಸೆಯ
ಪರಿಣಯವಂ ವಿರಚಿಸುವೆನು
ಧರೆಯೊಳಗಂ ಯಕ್ಷಗಾನದೋಳ್ನುಡಿಯಿಂದಂ || ೮ ||

ಅಂತ್ಯ : ಗಂಗಾತುಂಗತರಂಗ ಸಂಗತವೌಳಿ
ಪುಂಗವಪತ್ರ ಕುರಂಗಶಿಶು
ಸಂಗತ ಕರಕಂಜ ಲಿಂಗರಾಜಾಂಚಿತ
ಭೃಂಗೀಪಾಲನ ಶೀಲ ಸಂಗೀತಲೋಲ || ೩೬೧ ||

ಕಂದಾ || ಶಾಲೀವಾಹ ಶಕಾಬ್ಧಂ
ಫಾಲಾಕ್ಷ ಮುಖಾಶ್ವ ಶೈಲ ಶಶಿ ಮಿತಮಾಗಲ್
ಶ್ರೀಲಿಂಗರಾಜನುಸುರ್ದಂ
ಲೀಲೆಯೊಳೀ ವರ ಮದಾಲಸಾ ಪರಿಣಯವಂ || ೩೬೨ || ಶ್ರೀ.

ವಿಷಯ : ಭಾಗವತದಲ್ಲಿ ಬರುವ ಗಂಧರ್ವಸ್ತ್ರೀ ಮದಾಲಸೆಯ ಕಥೆ.

ವಿಶೇಷ : ಅಕ್ಷರ ಸ್ಫುಟವಾಗಿವೆ.

1247

ಕೆ. ४೨೧/೧ **ಮಧುರ ಮಂದಾರ** (ಗುರುಭಕ್ತಚಾರಿತ್ರ) ಕುಸುಮಷಟ್ಪದಿ

೧೬" × ೧.४" ವಿರುಪೇಂದ್ರ ?

೧–४೬ ಪತ್ರ ೭ ಪಂಕ್ತಿ ४೦ ಅಕ್ಷರ

ಆದಿ: ಶ್ರೀ........ಪಗಾಧರ ಮಲ್ಲಿಕಾರ್ಜುನ ಜಯಾ || ೧ ||
ಕಲ್ಯಾಣರೂಪಕೈ
ವಲ್ಯದಾತಾರ ಸೌ
ಶೀಲ್ಯ ಮುನಿಜನವಂದ್ಯ ಬರ್ಹಿಗಾಮೀ
ಬಾಲ್ಯಾನುಕೂಲಗಣ
ಲೌಲ್ಯ ಜನಯಂತ್ರ ಕೌ
ಶಲ್ಯ ವಿಭು ಮಲ್ಲಿಕಾರ್ಜುನ ಜಯಜಯಾ || ೨ ||
ಆವನ ಸುಧರ್ಮ ಲೋ
ಕಾವಳಿಗಳಾಯುಷ್ಯ
ಭಾವಶಂಖೆಗಳಾದುದಾವಾತನಾ
ಸೇವಾಂಗುಲೀಯಕಂ
ತೀವಿದ ಜಗಂಬೊತ್ತು
ದಾ ವಿಭುವಿನಡಿದಾವರೆಗೆ ನಮಿಸುವೆಂ || ೩ ||
x x x x
ವಸುಧೆಯೊಳ್ಗುರುಚರಣ
ಕುಸುಮಷಟ್ಪದನೆನಿಸಿ
ಜಸವಡೆದ ಗುರುಭಕ್ತಚಾರಿತ್ರವಾ
ಕುಸುಮಷಟ್ಪದಿಯಿಂದ
ರಸಭಾವ ಚಿತ್ರಂಗ
ಳೊಸರ್ವಂತೆ ಪೇಳ್ವೆ ಸಂತಸದಿಂದಲಿ || ೨೩ ||
x x x x

ಶ್ರೀಕಂಠವಂಶಾಬ್ಧಿ
ರಾಕೇಂದು ಚಿಕ್ಕವಿರುಪ
ಭೂಕಾಂತನಾತ್ಮಭವ ಕಾಮನೃಪನಾ
ಆ ಕುಮಾರಂ ಸದ್ವಿ
ವೇಕಿ ವಿರುಪೇಂದ್ರನುಸು
ರ್ದೀ ಕಾವ್ಯ ಸೆರೆವಿಡಿಯದಾರ ಮನವಾ || ೨೬ ||
ಕೃತಿಯನುಸುರ್ದವನ
ಧಿಕ ಚದುರ ವಿರುಪೇಂದ್ರ
ನೀ ಕೃತಿವೆಸರು ಮಧುರಮಂದಾರವೆಸವಾ
ಕ್ರುತಿಗಧಿಕ ಗುರುಭಕ್ತ
ನತಿಶಯಾರ್ಥದಿ ಜಗಂ
ನುತಮೆನಲ್ಕೀ ಕಾವ್ಯ ಮೆರೆದಿರ್ಪುದೂ || ೩೧ ||

ಅಂತ್ಯ : ಗುರುಭಕ್ತ ಚಾರಿತ್ರ
ಪರಮ ಸುರಹಸ್ಯಮಂ........
....
ವಿರುಪೇಂದ್ರ ನೆರೆಯ ಶಂ
ಕರಶಾಂತಮಲ್ಲೇಶ
ನಿರಧೀಗೆ ಕಾಮಿತಫಲಪ್ರತತಿಯಾ || ೬೭ ||
ಉತ್ರಾ || ವಿಾಜಿಶಕಾಖ್ಯಹಾಯನ ಸಹಸ್ರದ ಮೇಣ ಸಂಖೆಯಪ್ಪ ನಾ
ನೂರರುವತ್ತಮೂರನೆಯ ಸಪ್ಲವ ವತ್ಸರದಿಷ...................
.................................ದಶಮೀ ದಿನದೊಳ್ವಿರುಪೇಂದ್ರನಿಂದೆಕಾ
ಲೂರಿ ಧರಿತ್ರಿಯೊಳ್ನೆಗಳ್ದುದೀ ಕೃತಿಯಾ ರವಿಚಂದ್ರತಾರಕಂ ||
ಅಂತು ಸಂಧಿ ೧೫ಕ್ಕಂ ಪದನೂ ೭೭೫ಕ್ಕಂ ಮಂಗಳ ಮಹಾಶ್ರೀ.

ವಿಷಯ : ಗುರುಭಕ್ತನ ಚರಿತ್ರೆ.

ವಿಶೇಷ : ಆದಿಯಿಂದ ೧೮ ಪತ್ರಗಳಿಗೆ ಮಾತ್ರ ಸಂಖ್ಯೆ ಹಾಕಿದೆ. ಪ್ರತಿ ಶಿಥಿಲ. ಶಕಟರೇಫದ ಪ್ರಯೋಗವಿದೆ. ಅಂಚುಗಳು ತ್ರುಟಿತವಾಗಿ ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಮುರಿದಿವೆ. ಕೊನೆಯ ಪತ್ರ ಎರಡು ಕಡೆಯಲ್ಲೂ ಮುರಿದಿದೆ. ಸಂಧಿ ೧-೧೫. ಅಕ್ಷರಗಳು ಸ್ಫುಟ. ಇದರೊಂದಿಗೆ ಹರಿಶ್ಚಂದ್ರರಾಯನ ಸಾಂಗತ್ಯ, ಬಸವ ಚಾರಿತ್ರ ಗ್ರಂಥಗಳೂ ಇವೆ.

1248

ಕೆ. ೬೩೯/೨ **ಮಧುರ ಮಂದಾರ** (ಗುರುಭಕ್ತ ಚಾರಿತ್ರ) ಕುಸುಮಷಟ್ಪದಿ

೮.೫" × ೧.೯" ವಿರುಪೇಂದ್ರ ?

೧–೩೪ ಪತ್ರ ೧೩ ಪಂಕ್ತಿ ೫೦ ಅಕ್ಷರ

ಆದಿ : ಶ್ರೀಗುರು ಬಸಲಿಂಗಾಯ ನಮಃ ॥ ಶಾರದಾಂಬಾಯ ನಮಃ ಮಂನ್ಮಥ ನಾಮ ಸಂವತ್ಸರದ ಭಾದ್ರಪದ ಶು ೭ ಶುಕ್ರವಾರ ಪರಮೇಶ್ವರನ ದುರ್ಗದ ಮಠದ ಬಾಲವಡೇರ ಗುರಪದೇವರ ಮಗನ ಮಗನ ಮಗನ ಮಗ ಬಸವ ಲಿಂಗಪನು ಬರದ ಮಧುರಮಂದಾರ ಪುಸ್ತಕ ಬರವುದಕ್ಕೆ ಶುಭಮಸ್ತು ಶೋಭನಮಸ್ತು ಆಯುರಾರೋಗ್ಯ ಐಶ್ವರ್ಯಮಸ್ತು॥ ಸದಾ ಕುಸುಮ ಷಟ್ಪದಿ॥

ಶ್ರೀಪತಿ ಪಿತಾಮಹಾರ್ಘ ಶ
ಚೀಪತಿ ನಮಿತ ಪದ ವಿ
ರೂಪಾಕ್ಷನೀಗೆಮಗೆ ಸದ್ವಿಲಕ್ಷಾ
ಗೋಪಶಿಧ್ವಜ ಕ್ರುಪಾ
ಕೂಪಾರ ಶಂಕರ ಸು
ರಾಪಗಾಧರ ಮಲ್ಲಿಕಾರ್ಜುನ ಜಯಾ ॥ ೧ ॥
ಕಲ್ಯಾಣರೂಪ ಕೈ
ವಲ್ಯದಾತಾರ ಸೌ
ಸೀಲ್ಯ ಮುನಿಜನವಂದ್ಯ ಬರ್ಹಿಗಾಮೀ
ಬಾಲ್ಯಾನುಕೂಲ ಗಣ
ತುಲ್ಯ ಜನಯಂತೃ ಶೌ
ಶೀಲ್ಯ ವಿಭು ಮಲ್ಲಿಕಾರ್ಜುನ ಜಯ ಜಯಾ ॥ ೨ ॥
ಆವನ ಸುಧರ್ಮ ಲೋ
ಕಾವಳಿಗಳಾಯುಷ್ಯ
ಭಾವಶಂಖೆಗಳಾದುದಾವಾತನಾ
ಸೇವಾಂಗುಲೀಯಕಂ
ತೀವಿದ ಜಗಂಭೊಂತ್ತು
ದಾ ವಿಭುವಿನಡಿದಾವರಿಗೆ ನಮಿಸುವೇ ॥ ೩ ॥

ಅಂತ್ಯ : ಮುಳಿಯುಲಗಜಾತೆ ಸಂ
ಚಲಿಪ ಜಾಂಹ್ನವಿಯ ಬಗೆ
ತಿಳಿದು ಮೇಗೆರಗದೇ ಕಾಲ್ವಿಡಿದು ತಿಳುಪೀ
ಬಳಿಕ ಬಾಂಬೊಳೆಯರ್ದೆಯ
ಕಳವಳಮ ಕಳಲ್ಚಿದ
ಗ್ಗಳ ಶಾಂತ ಮಲ್ಲಿಕಾರ್ಜುನ ಜಯ ಜಯಾ ॥ ೬೬ ॥

ಗುರುಭಕ್ತ ಚಾರಿತ್ರ
ಪರಮ ಸುರಹಸ್ಯಮಂ
ಬರದೋದಿ ಕೇಳಿ ಲಾಲಿಸಿದವರ್ಗೆ
ವಿರುಪೇಂದ್ರ ನೆರೆಯ ಶಂ
ಕರ ಶಾಂತಮಲ್ಲೇಶ
ನಿರದೀಗೆ ಕಾಮಿತಫಲ ಪ್ರತತಿಯಾ || ೬೭ ||

ಅಂತು ಸಂಧಿ ೧೫ಕ್ಕಂ ಪದನು ೭೭೫ಕಂ ಮಂಗಳ ಮಹಾಶ್ರಿಯಂ ಜಯನೂ || ಶಾಲಿವಾಹನ ಶಕ ವರುಷಂಗಳು ೧೭೮೮ ನೆಯ ಮಂನ್ಮಥ ನಾಮ ಸಂ ಆಶ್ವೀಜ ಶು ೬ ಯಲು ಮಧುರ ಮಂದಾರ ಪುಸ್ತಕ ಸಂಪೂರ್ನ ಮಂಗಳ ಮಹಾಶ್ರೀ.

ವಿಷಯ : ಗುರುಭಕ್ತನ ಚರಿತ್ರೆ.

ವಿಶೇಷ : ೨೮ನೆಯ ಕ್ರಮಸಂಖ್ಯೆಯ ಎರಡು ಪತ್ರಗಳಿವೆ. ೨೦ನೆಯ ಸಂಖ್ಯೆಯ ಒಂದು ಪತ್ರ ಲೋಪವಾಗಿರುವುದರಿಂದ ೯ನೆಯ ಸಂಧಿಯ ೧೯ನೆಯ ಪದ್ಯದಿಂದ ೧೦ನೆಯ ಸಂಧಿಯ ೫ನೆಯ ಪದ್ಯ ಪೂರ್ತಿ ಲುಪ್ತವಾಗಿರುತ್ತದಾಗಿ ಅಸಮಗ್ರ. ಗ್ರಂಥಾಂತ್ಯದ ಪತ್ರದ ಪಕ್ಕದಲ್ಲಿ ಲೆಕ್ಕದ ಮನೆಗಳ ಚಿತ್ರಗಳಿವೆ. ಪ್ರಥಮ ಸಂಧಿಯ ೨೫, ೨೬ ಮತ್ತು ೩೧ನೆಯ ಪದ್ಯಗಳಿಂದ ಕೃತಿಗೆ ಎರಡು ಹೆಸರುಗಳಿರುವುದೂ ಮತ್ತು ಕವಿವಿಚಾರವೂ ಸುವ್ಯಕ್ತವಾಗುತ್ತವೆ. ಸಣ್ಣಕ್ಷರ, ಅಸ್ಪುಸ್ಫುಟವಲ್ಲ. ಇದರೊಂದಿಗೆ ಭಕ್ತಾಧಿಕ್ಯ, ಕಲ್ಯಾಲಾವೃತ್ತ ಮೊದಲಾದ ಇತರ ನಾಲ್ಕು ಗ್ರಂಥಗಳಿವೆ.

1249

ಕೆ. ೩೭೬/೩	**ಮಧುರೆ ಮನನ**	ಗದ್ಯ
೮.೩" × ೧.೮"	?	?
೧–೧೩೦ ಪತ್ರ	೮ ಪಂಕ್ತಿ	೪೨ ಅಕ್ಷರ

ಆದಿ : ಯದಜ್ಞಾನಪ್ರಭಾವೇನ ದೃಶ್ಯತೇ ಸಕಲಂ ಜಗತ್ ।
ಯತ್ ಜ್ಞಾತ್ವಾ ಶ್ರೇಯ ಆಪ್ನೋತಿ ತಸ್ಮೈ ಜ್ಞಾನಾತ್ಮನೇ ನಮಃ ॥
ಯಾವ ಅಜ್ಞಾನದಿಂದ ಸಮಸ್ತ ಪ್ರಾಣಿಗಳೂ ಜನ್ಮಮರಣ ದುಃಖ ಪರಂಪರೆಯನು ಹೊಂದುತ್ತಿದ್ದಾರೋ ಆ ಅಜ್ಞಾನ ಸ್ವರೂಪವ ನಿರೂಪಿಸುತ್ತಾಯಿಧೇವೆ । ಆ ಅಜ್ಞಾನವೇನು ಯಂದರೆ ತನ್ನ ತಾನು ಅರಿಯದೆ ಯಿಹುದೆ ಅಜ್ಞಾನಲೂ ॥

ಅಂತ್ಯ : ದೇಶದಲ್ಲಿ ನೆಚ್ಚಿದ್ದ ದೇಹೇಂದ್ರಿಯಾದ....ನಿಶ್ಚಿತವು ಅಸತ್ಯವೆಂದು ನಿವೃತ್ತಿ ಮಾಡಿ ಶ್ರುತಿ ಸ್ಮೃತಿ ಪುರಾಣ ಗುರುಗಳುಪದೇಶದಿಂದಾ ಅನುಭವಸಿದ್ಧವಾಗಿ ಸತ್ತು ಚಿತ್ತು ಆನಂದವಾಗಿಯಿರುವ ಆತ್ಮನೇ ನಾನು ಯಂದು ಸಿದ್ಧವಾಗಿ ತಿಳಿದು

ಅನುಸಂಧಾನ ಮಾಡುವವನೇ ಮುಕ್ತನೂ ಸಿದ್ಧನೂ। ಭರ್ಜುಪ್ರಕರಣಸಮಾಪ್ತಃ
ತತ್ಸಬ್ರಹ್ಮಾರ್ಪಣಮಸ್ತು । ಜಯ ಮಂಗಳ ಮಹಾಶ್ರೀ ॥
ರುದಿರೋದ್ಗಾರಿನಾಮ ಸಂವತ್ಸರದ ಪುಷ್ಯ ಶು ೮ಲ್ಲೂ ಭಉಮವಾರದಲ್ಲಿ
ಅಹೋಬಲಭಟ್ಟರ ಮಗ ನಾರಸೀದೇವರು ಬರೆದ ಮಧುರೆ ಮನನದ ಪುಸ್ತಕ ॥
ಯಿಾ ಪ್ರಕರಣಗಳೂ ಪೂರ್ತಿ ॥

ವಿಷಯ : ವೇದಾಂತ.

ವಿಶೇಷ : ಇದರೊಂದಿಗೆ ಕನ್ನಡ ಗೀತಾ ಟೀಕು, ನರಸಿಂಹಸಹಸ್ರನಾಮಾವಳಿ ಎಂಬ ಗ್ರಂಥಗಳೂ ಇವೆ. ೨ನೆಯ ಗರಿ ಮುರಿದಿದೆ. ೧೧೨ರಿಂದ ೧೯೯ರ ವರೆಗೆ ೧೨೯, ೧೩೦ ಈ ಪತ್ರಗಳ ಅಂಚು ಮುರಿದಿದೆ.

1250

ಕೆ.ಬಿ. ೯೩	**ಮನುಚರಿತ್ರೆ**	ಯಕ್ಷಗಾನ
೮" × ೬.೨"	ಚಂದ್ರಶೇಖರಶಾಸ್ತ್ರಿ	ಸು. ೧೮೫೦
೧–೪೩ ಪತ್ರ	೧೯ ಪಂಕ್ತಿ	೧೬ ಅಕ್ಷರ

ಆದಿ : ಸೂತ್ರಧಾರಂ ॥ ಪ್ರವೇಶಿಸಿ ॥ ಮಂಗಳ ॥ ವೃತ್ತಂ ॥
ಶ್ರೀಮಾನ್ಯಾಗ್ರಣಿಕೃಷ್ಣಭೂಪತನಯಂ ಕರ್ಣಾಟಸಿಂಹಾಸನೋ
ದ್ಧಾಮಸ್ಥಾನದಿ ರಾಜ್ಯವಾಳುತ ಜನಕ್ಷೇಮಂಗಳಂ ಮಾಡುವೀ
ಶ್ರೀಮಚ್ಚಾಮ ಮಹೀಮಹೇಂದ್ರನಿಗೆ ಪೂರ್ಣಾಯುಷ್ಯಮನ್ನೀಯುತಾ
ಚಾಮುಂಡೇಶ್ವರಿ ಮಾಳ್ಕೆ ಶತೃ ಜಯ ಪುತ್ರಾರೋಗ್ಯ ಭಾಗ್ಯಂಗಳಂ ॥
x x x x x x
ಸೂತ್ರ ॥ ಎಲೆ ನಟಿ ಅತಿ ಮನೋಹರವಾದ ಮನುಚರಿತ್ರೆಯೆಂಬ ನಾಟಕ ವನ್ನಾಡುವಂತೆ ಸಭಿಕರು ಅಪ್ಪಣೆಕೊಡಿಸಿರುವರು. ಆದ್ದರಿಂದ ನಾಟಕಾರಂಭದಲ್ಲಿ ಗಾನವನ್ನು ಮಾಡು.

ಅಂತ್ಯ : ಸೂತ್ರಧಾರಂ (ಭರತವಾಕ್ಯ)
ಕಂ ॥ ವಿಭವದಿ ಗೋ ಬ್ರಾಹ್ಮಣರಿಗೆ
ಶುಭಮಂ ರಾಜರಿಗೆ ಶತೃಜಯಮಂ ನೆರೆದೀ
ಸಭಿಕರ್ಗೆ ಹರ್ಷಮಂ ಚಾಮ
ಪ್ರಭುವಿಗೆ ಪೂರ್ಣಾಯುಮಂ ಗಿರೀಂದ್ರಜೆ.ಕುಡುಗೇ ॥
ಶ್ರೀ ರಾಗ ॥ ಶ್ರೀ ಲಲಿತಾಂಬಕೆ । ಶ್ರೀ ತತ್ರಿಯಂಬಕೆ ॥ ಪ ॥
x x x x x x
ಧೀರ ಮಹೀಶೂರಪಾಲ । ವೀರ ಕುಲದೇವತೆ ।
ಶ್ರೀರಾಜರಾಜೇಶ್ವರಿ । ಸರೋಜಮುಖಿ । ಕರೋಜ್ವಲಿತ ।
ಶರಾತ್ತಮಸು । ವರಾಭಯದೆ ॥ ೨ ॥ ಸಂಪೂರ್ಣಂ ॥

ವಿಷಯ : ಮನುವಿನ ಚರಿತ್ರೆ.

ವಿಶೇಷ : ಸುಂದರಾಕ್ಷರ. ೩೧ ಮತ್ತು ೩೩ನೆಯ ಪತ್ರಗಳಲ್ಲಿ ಸ್ವಲ್ಪ ಭಾಗ ಗ್ರಂಥ ವಿಲ್ಲ.

1251

ಕೆ. ೨೪೩/೪ **ಮನೆಕಟ್ಟುವ ಲಕ್ಷಣ** (ಸಟೀಕು) ಶ್ಲೋಕ, ಟೀಕು

೧೫" × ೧.೫" ? ?

೧೭–೨೦ ಪತ್ರ ೭ ಪಂಕ್ತಿ ೭೦ ಅಕ್ಷರ

ಆದಿ : ಯಿಂನು ಮನೆಯ ಕಟುವ ಲಕ್ಷಣ,
ಮನೆಯ ತಾವ ನೋಡುವದಕ್ಕೆ ಶ್ಲೋಕಾ ॥
ಮುಖೆ ಬಂದಿ ಚತ್ವಾರಿ ಗರ್ಭೇ ಚತ್ವಾರಿಸಂಪದಾ ।
ಕಂಠೇ ತ್ರಿಣೀ ಗುದೇ ತ್ರೀಣಿ ರವಿಯಾಡೌಸ್ತ್ರಾಪನ.......॥

x x x x x x

ಟೀಕು॥ ಸೂರ್ಯ್ಯನಿಥ ನಕ್ಷತ್ರದಿಂದಾ ನಿತ್ಯನಕ್ಷತ್ರ ಯೆಣಿಸೀ ಮುಖಕೆ ವಂದು ಪೂರ್ವಕೆ ನಾಲ್ಕು ದಕ್ಷಣಕೆ ನಾಲ್ಕು ಪಶ್ಚಿಮಕೆ ನಾಲ್ಕು ಉತ್ತರಕೆ ನಾಲ್ಕು ಗರ್ಭಕೆ ನಾಲ್ಕು ಕೊರಳಿಗೆ ಮೂರೂ ತಿಕಗಕೆ ಮೂರೂ ಯಿಾ ತೆರದಿಂದಾ ಯಿಪ್ಪತೇಳು ನಕ್ಷತ್ರವಂನ್ನು ಯಿಡಬೇಕೂ ।

ಅಂತ್ಯ : ಟೀಕೂ ॥ ಯಿಪ್ಪಪ್ರಕಾರ ಮನೆ ಕಟ್ಟಿಸಿದಮೇಲೆ ಮನೆಯ ಯಜಮಾನನೂ ಶುಕ್ಲವಸ್ತ್ರವನುಟ್ಟು x x x x ಕರ್ಕಾಟ್ಟಿಕ ದನುಸ್ಯಗೆ ವೈರಾ ॥ ಸಿಂಹ್ವ ಮಿತುನಕೆ ವೈರಾ । ಕನ್ಯಾಕುಂಬಕೆ ವೈರಾ । ಶ್ರೀ ಶ್ರೀ ॥

ವಿಷಯ : ಮನೆಕಟ್ಟುವ ಕ್ರಮ.

ವಿಶೇಷ : ಇದೇ ಕಟ್ಟಿನಲ್ಲಿ ನೀತಿಸಂಗ್ರಹ, ಜಲಶಿಲ್ಪಿ, ನಕ್ಷತ್ರಚೂಡಾಮಣಿ, ನರ ಪಿಂಗಲಿ, ರಾಮಧ್ಯಾನಗಳೆಂಬ ಇತರ ಕೃತಿಗಳಿವೆ.

1252

ಕೆ. ೩೬೯/೪ **ಮನೋವಿಕಾರನಿರಸನ ರಗಳೆ** ರಗಳೆ

೮" × ೧.೮" ? ಸು. ೧೬೦೦

೧೧-೧೭ಪತ್ರ ೯ ಪಂಕ್ತಿ ೪೧ ಅಕ್ಷರ

ಆದಿ : ... .ಮನಂತ ನಿಪ್ಪ ಕಪಿಚೇಷ್ಟಿಯೊಳಿರ್ದಪುದಲ್ಲದೊಂಮೆಯುಂ
ಮುಟ್ಟೆ ಮಹಿಶನಿಂದುನೊಲಿದ ಚರ್ಚಿಸಲೋ....ಕೆಟ್ಟೆ ಕೆಟ್ಟೆನಾಂ

ಬಟ್ಟೆಯ ಕಾಣದೆ ಬಾಯ ಬಿಡುತ್ತೈದೆನೆ ಚಿತ್ತವಿಕಾರದೇಳ್ಗೆಯಂ
ಮೆಟ್ಟೆ............ನಿಜಾಂಘ್ರಿಯ ತೋರಿಸ ತಂದೆ ಶಂಕರಾ || ೧ ||
ರಗಳೆ || ಶ್ರೀ ದಿವಿಜರಾಜಪೂಜಿತ ಜಿತ ಮನೋನಾಥ
ಮೂದೇವ ಮುಖವನಜ ಭಾನು ಶಂಕರಲಿಂಗಾ ||

ಅಂತ್ಯ : ಶರಣು ಶಂಕರಲಿಂಗಾ ಕರುಣಿ ಶಂಕರಲಿಂಗಾ
ಶುರಣು ಶರಣಾರ್ತ್ಥಿ ನಿಂಮಡಿಗೆ ಶಂಕರಲಿಂಗಾ ||
ಕಂದ || ಜನನಕಾಲದೊಳು ವಂದಿಸಿ
ಘನ ಯವ್ವನದಲ್ಲಿ ನಿಮಗೆ ವಂದಿಸಿ ನಾಂ ಮು
ಪ್ಪಿನಲಿ ವಂದಿಸಿದೆ ನೀನದ
ಮನಸಿನಲಿ ತಾರದಿರು ತಂದೆ ಶಂಕರಲಿಂಗಾ ||
ಮನೋವಿಕಾರನಿರಸನ ರಗಳೆ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಮನದ ವಿಕಾರಗಳಿಂದ ಮುಕ್ತಿಯನ್ನು ಪಡೆಯುವಿಕೆ.

ವಿಶೇಷ : ಗ್ರಂಥವು ಶಿಥಿಲವಾಗಿದೆ. ಗರಿಯ ಅಂಚುಗಳು ಹರಿದಿವೆ. ಈ ಕಟ್ಟಿನಲ್ಲಿ ಗುರು, ಷಡಕ್ಷರಿ, ಬಸವ, ಭಕ್ತಿಬಿನ್ನಹ ರಗಳೆಗಳೂ; ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ; ಶಂಕರದೇವ, ಮಂತ್ರಮಹತ್ವ, ಮರುಳದೇವ, ಪ್ರಭುಲಿಂಗ ಕಂದಗಳೂ; ಅಕ್ಷರಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ; ಶತಕತ್ರಯವೂ ಮತ್ತು ಮಲ್ಹಣ ಸ್ತೋತ್ರಗಳೂ ಇವೆ.

1253

ಕೆ. ೪೬೮/೧೪ **ಮನೋವಿಕಾರನಿರಸನ ರಗಳೆ** ರಗಳೆ

೧೫.೩″ × ೧″ ? ?

೫೪–೬೮ ಪತ್ರ ೪ ಪಂಕ್ತಿ ೪೯ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಏಂ ನಮಃ || ಮನೋವಿಕಾರನಿರಸನ ರಗಳೆ ||
ಕಂದ || ದಿಟ್ಟಮನಂ ಕನಿಷ್ಟ ಕಪಿಚೇಷ್ಟೆಯೊಳಿರ್ದ್ದಪುದಲ್ಲಾದೊಂಮ್ಮೆಯುಂ
ಮುಟ್ಟೆ ಮಹೇಶ ನಿಂಮ್ಮನೊಲ್ಲದರ್ಚ್ಚಿಸಲೊಲ್ಲದು ಕೆಟ್ಟೆ ಕೆಟ್ಟೆ ನಾಂ
ಬಟ್ಟೆಯ ಕಾಣದೆ ಬಾಯ ಬಿಡುತ್ತೈಥೆನೆ ಚಿತ್ತವಿಕಾರದೇಳ್ಗೆಯಂ
ಮೆಟ್ಟೆ ಕೆಳಕ್ಕೆ ಜಾರಿಸಿ ನಿಂಮ್ಮಯ ನಿಜಾಂಗ್ರಿಯಾ ತೋರಿಸೊ ತಂದೆ ಶಂಖರಾ||
ರಗಳೆ || ಶ್ರೀ ಧಿವಿಜರಾಜಪೂಜಿತ ಜಿತಮನೋನಾಥ
ಮೂದೇವ ಮುಖವನಜಲಾವನು ಶಂಖರಲಿಂಗಾ || ೧ ||

ಆಧಿ ತಾಂಡವಮೂರ್ತಿ ಥಶ ಧಿಶಮಯ ಕೀರ್ತಿ
ವೇದತತ್ವಾ ಶರಣನುಸುರುವೆನು ಶಂಖರಲಿಂಗಾ ॥ ೨ ॥

ಅಂಧಕಾಸುರವಿಜೆಯ ರಜತಗಿರಿನಿವಸ
ಬಾಂದುರಾರಕ ಸಮುದ್ದರಣ ಶಂಖರಲಿಂಗಾ ॥ ೩ ॥

x x x x

ಅಂತ್ಯ : ಕರುಣಿ ಶಂಖರಲಿಂಗ ಶರಣು ಶಂಖರಲಿಂಗಾ ॥ ೧೩೦ ॥
ಶರಣು ಶರಣಾರ್ತ್ರಿ ಶರಣಾರ್ತ್ರಿ ಶಂಖರಲಿಂಗಾ ॥ ೧೩೧ ॥
ಕಂದ ॥ ಜನನಕಾಲದೊಳು ವಂಧಿಸಿ
ಘೆನಯವ್ವನದಲ್ಲಿ ವಂಧಿಸಿಂ ಮುಪ್ಪಿನಲಿ
ನಾ ನಿಮಗೆ ವಂಧಿಸಿ ನೀನಥ
ಮನಸಿಗೆ ತಾರದಿರಾ ತಂದೆ ಶಂಖರಾ ॥ ೧೩೨ ॥

ಮನೋವಿಕಾರನಿರಸನ ರಗಳೆ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಮನಸ್ಸಿನ ವಿಕಾರಗಳಿಂದ ಮುಕ್ತನಾಗುವುದು.

ವಿಶೇಷ: ಶಂಕರಲಿಂಗಾಂಕಿತ. ಕರ್ತೃವಿನ ಹೆಸರಾಗಲಿ ಕಾಲಾದಿಗಳಾಗಳಲೀ ಹಸ್ತಪ್ರತಿಯಲ್ಲಿ ನಮೂದಾಗಿಲ್ಲ. ಸಮಗ್ರವಾಗಿದೆ. ಈ ಕಟ್ಟಿನಲ್ಲಿ ಷಟ್ಸ್ಥಲತಿಲಕ, ಪ್ರಸ್ತಾವದ ಷಟ್ಪದಗಳು, ಹಾಡುಗಳು ಮೊದಲಾದ ಗ್ರಂಥಗಳಿವೆ. ಕೊನೆಯ ೨ ಪತ್ರಗಳಲ್ಲಿ 'ಶಿವಪೂಜಾ ವಿಧಾನವು' ಅಪೂರ್ಣವಾಗಿದೆ. ಅನಂತರ ಮೂರು ಪತ್ರಗಳಲ್ಲಿ ಗುರುಜ್ಞಾನ, ತೋಂಟದ ಸಿದ್ಧಲಿಂಗನ ಸ್ತುತಿರೂಪವಾದ ಹಾಡುಗಳೂ ಇವೆ.

1254

ಕೆ. ೩೬/೭	**ಮನೋವಿಜಯ ಕಾವ್ಯ**	ಕುಸುಮಷಟ್ಪದಿ
೧೪.೭"×೨.೩"	ಗುರುಬಸವೇಶ	ಸು. ೧೪೩೦
೬೨-೭೩ ಪತ್ರ	೧೨ ಪಂಕ್ತಿ	೮೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಮನೋವಿಜಯಕಾವ್ಯ ॥ ರಾಗ ತೆಲುಗ ಕಾಂಬೋದಿ ಕುಸುಮಷಟ್ಪದ ॥
ವಸುದು ಕರುಣಾಬ್ಧಿ ಗುರು
ಬಸವೇಶ ಮುದದೆ ಬೋ
ಧಿಸಿದ ಸುವಿವೇಕಗೆ ಮನೋವಿಜಯಮಂ ॥
ಪದನೂ ॥ ಶ್ರೀಮದಮಲಾತ್ಮಾಭಿ

ರಾಮನಾನಂದಾಬ್ಧಿ
ಸೋಮ ಸದಮಲ ಭಾವಭರಿತನೆಂನಾ
ಸ್ವಾಮಿ ಸದ್ಭಕ್ತ ಸು
ಪ್ರೇಮಿ ರಕ್ಷಿಸು ಮುದದೊ
ಳೆ ಮಹಾಭದ್ರ ಗುರುಬಸವಲಿಂಗಾ ॥ ೧ ॥

ಅಂತ್ಯ : ಕುಸುಮ ಷಟ್ಪದಿ ಪದ ॥
ಪ್ರಸರ ಮುಂನೂರು ಮೇ
ಲೆಸೆವವಯ್ವತ್ತಯ್ದನಥ್ಯಾ....
....ಸೆಗೊರೆದೆ ಭದ್ರ ಗುರು
ಬಸವನಾಜ್ಞೆಯೊಳೆ ಭಾ
ವಿಸಲಹುದು ಚಂದ್ರಾರ್ಕ್ಕರುಳ್ಳಂನೆಗಂ ॥ ೨೯ ॥

ಗದ್ಯ ॥ ಶ್ರೀಮತ್ಪರಮ ಪರಮಾನಂದ ನಿತ್ಯ ನಿರ್ಮಲ ನಿರಘ ನಿರ್ಗುಣ ನಿರಾವರಣ ಸಕಲ ಜಗದ್ಭರಿತ ಭಕ್ತ ಜನಮನೋ....ವ ಯೋಗಿ ಜನಸೇವಿತ ಚರಣಾರವಿಂದ ಷಟ್ಸ್ಥಲಜ್ಞಾನ ಪ್ರಭಾಪುಂಜ ರಂಜಿತಾಂತರಂಗ ವೀರಶೈವ ಮತಸ್ಥಾಪನಾಚಾರ್ಯನಪ್ಪ ಶ್ರೀಮದ್ಗುರು ಬಸವೇಶ್ವರಂ ಸಕಲ ಭಕ್ತಜನ ಹಿತಾರ್ಥಮಾಗಿ ಸುಜ್ಞಾನಿಗಳಿಗಾನಂದಮಪ್ಪ .... ಶಿವಯೋಗೀಶ್ವರರಜಃದಾಚರಿಸಲೆಂದು ವೇದಾಗಮೋಪನಿಷತ್ಸಂಮತಿಯಿಂ ನಿರೂಪಿಸಿದ ಮನೋವಿಜಯವೆಂಬ ಪ್ರಕರಣಂ ॥ ಪರಿಸಮಾಪ್ತಂ ॥ ಇತಿ ಪರಿಪೂರ್ಣ ನಿರೂಪಣಂ ಸಮಾಪ್ತಂ ॥ ಅಂತು ಪ್ರಕರಣ ೨೭ ಕ್ಕಂ ಅಂತು ಸಪ್ತಕಾವ್ಯಕ್ಕಂ ಪದನು ೧೨೪೩ ಕ್ಕಂ ಮಂಗಳಮಸ್ತು ॥ ಸಕಲ ವೀರಮಹೇಶ್ವರರ ಶ್ರೀಪಾದದ ಕೃಪೆಯಿಂದೆ ಸಮಾಪ್ತಂ ಆಯಿತ್ತು ॥ ಶ್ರೀ ಶ್ರೀ ಶ್ರೀ ॥

ವಿಷಯ : ವೀರಶೈವ ವೇದಾಂತ.

ವಿಶೇಷ : ಸಮಗ್ರ. ಇದರೊಂದಿಗೆ ಶಿವಯೋಗಾಂಗ ಭೂಷಣ, ಸದ್ಗುರು ರಹಸ್ಯ ವೊದಲಾದ ಇತರ ೬ ಗ್ರಂಥಗಳಿವೆ. ಈ ಗ್ರಂಥಕಾರನಿಗೆ ಸಪ್ತಕಾವ್ಯದ ಗುರುಬಸವೇಶನೆಂದು ಸುಪ್ರಸಿದ್ಧವಾದ ಅನ್ವರ್ಥನಾಮವು ಪ್ರಚಾರದಲ್ಲಿ ಬಂದಿರುತ್ತದೆ. ಗಡುಸಾದ ವೇದಾಂತವನ್ನು ಸರಳ ರೀತಿಯಲ್ಲಿ ಷಟ್ಪದ ಪ್ರಭೇದಗಳಲ್ಲಿ ನಿರೂಪಿಸಿರುವುದು ಈ ಗ್ರಂಥಗಳ ವೈಶಿಷ್ಟ್ಯವಾಗಿದೆ. ಶಿವಾದ್ವೈತ ಸಿದ್ಧಾಂತವನ್ನರಿಯಲು ಈ ಗ್ರಂಥಗಳು ತುಂಬಾ ಉಪಯುಕ್ತವೆನಿಸಿವೆ. ಶಕಟರೇಫ ಪ್ರಯೋಗವಿದೆ. ಅಲ್ಲದೆ ಕಟ್ಟಿನ ಆದಿ-ಅಂತ್ಯಭಾಗದ ಎರಡು ಪತ್ರಗಳಲ್ಲೂ ಚಿತ್ರಗಳು ಬರೆಯಲ್ಪಟ್ಟಿವೆ. ಈ ಚಿತ್ರಗಳಲ್ಲಿ ತೋಂಟದ ಸಿದ್ಧನ ಚಿತ್ರವಿದೆ.

1255

ಕೆ. ೧೭೫/೪ **ಮನೋವಿಜಯ ಕಾವ್ಯ** ಕುಸುಮಷಟ್ಪದಿ

೧೦.೫" × ೨.೪" ಗುರುಬಸವೇಶ ಸು. ೧೪೩೦

೧–೨೧ ಪತ್ರ ೧೧ ಪಂಕ್ತಿ ೪೩ ಅಕ್ಷರ

ಆದಿ : ಗುರುಬಸವೇಶ್ವರ ದೇವರು ನಿರೂಪಿಸಿದ ಮನೋವಿಜಯ ॥ ಕುಸುಮ ಷಟ್ಪದಿ ॥ ಪಲ್ಲವ ॥

ವೊಸೆದು ಕರುಣಾಬ್ದಿ ಗುರು
ಬಸವೇಶ ಮುದದಿ ಬೋ
ಧಿಸಿದ ಸುವಿವೇಕಗೆ ಮನೋವಿಜಯಮಂ ॥

ಪದ ॥ ಶ್ರೀಮುದಮುಲಾತ್ಮಾಭಿ
ರಾಮುನಾನಂದಾಬ್ದಿ
ಸೋಮುಸದಮುಲಭಾವ ಭರ್‍ರಿತನೆಂನ್ನಾ
ಸ್ವಾಮಿ ಸದ್ಭಕ್ತ ಸು
ಪ್ರೇಮಿ ರಕ್ಷಿಸು ಮುದದೋ
ಳೀ ಮಹಾಭದ್ರ ಗುರುಬಸವಲಿಂಗಾ ॥ ೧ ॥

ಅಂತ್ಯ : ಕುಸುಮಷಟ್ಪದಿ ಪದ ॥
ಪ್ರಸರ ಮುನ್ನೂರರ್‍ರಿಂ
ದೆಸವವೈವತ್ತೈದನಧ್ಯಾತ್ಮದಾ
ದೆಸೆಗೊರ್‍ರಿವೆ ಭದ್ರಗುರು
ಬಸವನಾಗ್ನೆಯೊಳೆ ಭಾ
ವಿಸಲಹುದು ಚಂದ್ರಾರ್ಕ್ಕತಾರಾಂಬರಂ ॥
ಇತಿ ಪೂರ್‍ನ್ನರೂಪಾನುಭಾವನ್ನಾಮ ನವಮೋಪದೇಶಕ್ಕಂ ಪದನು ೩೫೫ಕ್ಕಂ ಮನೋವಿಜಯ ಸಂಪೂರ್‍ನ್ನ ಮಂಗಳಮಹಾಶ್ರೀ ಶ್ರೀ ರುದಿರೋದ್ಗಾರ್‍ರಿ ಸಂವತ್ಸರದ ಚೈತ್ರ ಶುದ್ಧ ೫ರಲ್ಲೂ ವಡೇರಪಾಳ್ಯದ ಸಿದ್ದನಂಜೈಯನವರ ಕುಮಾರ ಸಿವಲಿಂಗೈಯ್ಯ ನಿಜಗುಣ ಸ್ವಾಮಿಯವರ ಪಾದಕ್ಕೆ ತಂನ್ನ ಹಸ್ತಾಕ್ಷರದಲ್ಲಿ ಮೂಲ ಪ್ರತಿಯಿದ್ದ ಮೇರ್‍ರೆಗೆ ಬರದು ವಪ್ಪಿಸ್ತ ಷಟ್ಕಾವ್ಯದಲ್ಲಿ ಅಂತ್ಯಕಾವ್ಯ ಮನೋವಿಜಯದಿ ಸಂಪೂರ್‍ನ್ನಂ ಮಂಗಳಮಹಾ ಶ್ರೀ.

ವಿಷಯ : ವೀರಶೈವ ವೇದಾಂತ.

ವಿಶೇಷ : ಗ್ರಂಥ ಸುಸ್ಥಿತಿ. ಇದರೊಂದಿಗೆ ಜಯಸ್ತೋತ್ರ (ಬಿರುದಾವಳಿ ವಿವರ),

ಅನುಭವ ಸೂತ್ರ, ವಿಶೇಷಾರ್ಥ ಪ್ರಕಾಶಿಕಾ, ಪರಮ ರಹಸ್ಯ ಪರಮಾರ್ಥ ಗೀತೆ, ಶಿವಪೂಜಾ ವಿಧಾನ, ಮೂರೇಳು ದೀಕ್ಷಾ ಪ್ರಶಸ್ತಿ, ಈ ಗ್ರಂಥಗಳೂ, ರಸಸಿಂಧೂರ ಕ್ರಮವೂ ಇವೆ.

1256

ಕೆ.ಬಿ. ೪೭೩ **ಮನೋವಿಜಯ ಟೀಕು** ಹಾಡು, ಟೀಕು

೮.೧″ × ೬.೬″ ತೋಂಟದ ಸಿದ್ಧಲಿಂಗದೇಶಿಕ ಸು. ೧೫೬೦

೧-೯೯ ಪತ್ರ ೧೮ ಪಂಕ್ತಿ ೧೮ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಮನೋವಿಜಯ ವ್ಯಾಖ್ಯಾನ ಲಿಖ್ಯತೇ ॥ ನಿರ್ವಿಘ್ನಮಸ್ತು ॥

ಶ್ರೀ ವರದಕರ ಮಾಹೇಶ್ವರ
ಪಾವನಕರ ಚಿತ್ಸ್ವರೂಪಂ ಸನ್ನುತ ಸಂ
ಜೀವದಯಾಮೃತಸಿಂಧು ನಿ
ರಾವರಣನೆ ಸಲಹು ಗುರು ನಿರಂಜನಲಿಂಗಂ ॥ ೧ ॥

x x x x

೩ ॥ ಗದ್ಯ ॥ ಶ್ರೀಮತ್ಪರಮಾನಂದ ನಿತ್ಯನಿರ್ಮಲ x x x x ನಿರೂಪಿಸಿದ ಮನೋವಿಜಯ ಪ್ರಕರಣಮಂ x x x x ಬಿಜ್ಜಳಪುರವರಾಧಿಪ ತೋಂಟದ ಸಿದ್ಧಲಿಂಗ ಭೂಪಾಲಕನಿಂ ಪರಿಪೂಜಿತನಾದ ನಂದಿಯಪುರದ ಸಿಂಹಾಸನಾಧೀಶ್ವರ ಪರ್ವತೇಶ್ವರ ಕರಕಮಲ ಸಂಭೂತ ನಿರಂಜನಲಿಂಗ ಪದಧ್ಯಾನಾಸಕ್ತ ಚಿತ್ತನಾದ ತೋಂಟದ ಸಿದ್ಧಲಿಂಗದೇವನೆ ನಾಂ ಸರ್ವರ್ಗರಿಯಬಪ್ಪಂತೆ ವ್ಯಾಖ್ಯಾನಮಂ ಮಾಡಿದಪೆಂ.

ಅಂತ್ಯ : ಶ್ರೀಮದ್ಬಿಜ್ಜಳವರ ಪುರಾಧಿಪ ತೋಂಟದ ಸಿದ್ಧಲಿಂಗ ಭೂಪಾಲಕನಿಂಪರಿ ಪೂಜಿತನಾದ ತೋಂಟದ ಸಿದ್ಧಲಿಂಗದೇಶಿಕನಿಂ ವಿರಚಿತಮಪ್ಪ ಮನೋವಿಜಯ ತಾತ್ಪರ್ಯಚಂದ್ರಿಕೆಯೆಂಬ ವ್ಯಾಖ್ಯಾನದೊಳ್ ಪರಿಪೂರ್ಣ ನಿರೂಪಣನಾಮ ನವಮ ಪ್ರಕರಣಕ್ಕಂ ಪದನು ೩೫೫ಕ್ಕಂ ಮಂಗಳಂ ॥ ಶ್ರೀ.

ವಿಷಯ : ವೀರಶೈವ ವೇದಾಂತ.

ವಿಶೇಷ: ಕಾಗದ ಬಹಳ ಹಳೆಯದಾಗಿ ಮಡಿಸಿದರೆ ಹರಿಯುತ್ತದೆ. ೪೭, ೮೦ನೆಯ ಪತ್ರಗಳಲ್ಲಿ ಬರವಣಿಗೆ ಇಲ್ಲ.

1257

ಕೆ. ಬಿ. ೩೨೪ **ಮನೋವಿಜಯ ಟೀಕು** ಹಾಡು, ಟೀಕು

೭.೭" × ೫.೯" ತೋಂಟದ ಸಿದ್ಧಲಿಂಗದೇಶಿಕ ಸು. ೧೫೬೦

೮೫ ಪತ್ರ ೧೫ ಪಂಕ್ತಿ ೧೭ ಅಕ್ಷರ

ಆದಿ : ಶ್ರೀ ಗಣೇಶಶಾರದಾಗುರುಭ್ಯೋ ನಮಃ ॥ ಶುಭಮ ॥ ಮನೋವಿಜಯ ಬರೆಯುವದಕ್ಕೆ ಶುಭಮಸ್ತು

ಶ್ರೀವರದಕರ ಮಹೇಶ್ವರ
ಪಾವನಕರ ಚಿತ್ಸ್ವರೂಪ ಸಂನ್ನುತ ಜನಸಂ
ಜೀವ ದಯಾಂಮೃತ ಸಿಂಧು
ಸಲಹು ಗುರು ನಿವಾರಣನೆ ನಿರಂಜನಲಿಂಗಾ ॥ ೧ ॥

ಟೀ ॥ ಪರಮಮಂಗಳ ಸ್ವರೂಪನಾದ ಶ್ರೀಗುರುಬಸವೇಶ್ವರನ ನಿರೂಪದತ್ತಣಿಂ ಮನೋವಿಜಯವೆಂಬ ಪ್ರಕರಣದಲ್ಲಿ ಕುಸುಮಷಟ್ಪದಿಯಾದ ಮುಂನ್ನೂರೈವತ್ತು ಗಣನೆಯನುಳ್ಳ ಪದಗಳಂ ತತ್ವಜ್ಞಾನಾರ್ಥವಾಗಿ ಪೇಳ್ವಂ ಯಿಾ ಪ್ರಕರಣಂ ಆಚಂದ್ರಾರ್ಕವಾಗಿ ಸುಜ್ಞಾನಿಗಳಂ ಬಗೆಯಲ್ತಕ್ಕದ್ದು ॥ ೨೯ ॥

x x x x

ಅಂತ್ಯ : ಶ್ರೀಮದ್ದ್ವಿಜ್ಞಾವರ ಪುರಾಧಿಪ ತೋಂಟದ ಸಿದ್ಧಲಿಂಗ ಭೂಪಾಲಕನಿಂ ಪರಿಪೂಜಿತನಾದ ತೋಂಟದ ಸಿದ್ಧಲಿಂಗದೇಶಿಕನಿಂ ವಿರಚಿತಮಪ್ಪ ಮನೋವಿಜಯ ತಾತ್ಪರ್ಯಚಂದ್ರಿಕೆಯಂಬ ವ್ಯಾಖ್ಯಾನದಲ್ಲಿ ನವಮ ಪ್ರಕರಣಕ್ಕಂ ಪದನೂ ೩೫೫ಕ್ಕಂ ಮಂಗಳಮಹಾ ಶ್ರೀ ಮನೋವಿಜಯ ಟೀಕು ಸಂಪೂರ್ಣಂ.

ವಿಷಯ : ವೀರಶೈವ ವೇದಾತ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಮಧ್ಯದಲ್ಲಿ ಕೆಲವು ಪದ್ಯಗಳಿವೆ.

1258

ಕೆ. ೨೫೮ **ಮಂತ್ರಗಳು** ಮಂತ್ರ

೧೩.೧" × ೧.೫" ? ?

೬೦ ಪತ್ರ ೫ ಪಂಕ್ತಿ ೫೨ ಅಕ್ಷರ

ಆದಿ : ಶ್ರೀ ಗುರು ರೇವಣಾಸಿದ್ಧೇಶ್ವರನ ಕರುಣ ಕಟಾಕ್ಷ ಸಿದ್ಧಿರಸ್ತು ॥ ಶ್ರೀ ಗುರು ಕದಲಿ ರಂಗಸ್ವಾಮಿ ಕರುಣ ಕಟಾಕ್ಷಸಿದ್ಧಿರಸ್ತು ॥

ಶ್ರೀ ಶಾರದಾಂಬಾಯಂ ನಮಃ ॥ ಓಂ ಶ್ರೀ ವೀರಭದ್ರಾಯ ॥ ಪರಮಂತ್ರವಿನಾಶಾಯ ॥ ಪರವಿದ್ಯಾಛ್ಛೆದನಾಯ । ಪರದೈವ ವುಚಾಟನಾಯ ॥ ಪರಭೂ....ತ ಪ್ರೇತ ಪಿಶಾಚಾ ಶಿರಶ್ಛೇದನಾಯ । ಆತ್ಮಾಯಾಂತ್ರ ಮಂತ್ರಂ ತಂತ್ರಂ ಪೂಜಿತಾಯ

ಭದ್ರಕಾಳಿ ಮನೋಹರಾಯ ಭಾಷೇಷು ಪ್ರತಿಪಾಲಕಾಂ....ವೀರವಿಕ್ರಮಾಧಿ ರಾತನು ತನುವುಳ್ಳ ಧೀರ ಧೀರಶ್ರೀ ವೀರಭದ್ರ ನಮೋ ನಮಃ॥
ಶ್ರೀ ಓಂ ನಮೋ ಭಗವತೆ ಜ್ವಲ ಭೂದೇವತೇ ಸಿದ್ಧಿರಸ್ತು। ಐಶ್ವರ್‍ಯಮಸ್ತು॥

ಅಂತ್ಯ : ಯಿಾಮಂತ್ರಂಬ ಲಕ್ಷ ಗುರುವಾಗು ಪರಿಯಂತರಕ್ಕು ಜಪಿಸೂದೂ। ಕಾಯ ಶುದ್ಧಿಯಿಂದಂ ಪೂಜೆ ಹಣ್ಣು ಕಾಯಿ ದೂಪ ಧೀಪ ಸಹ ಪೂಜೆ ಮಾಡಿ ಯಿಾ ಮಂತ್ರಲಕ್ಷ ಗುರು ಜಪಿಸ್ತರೆ ಆ ದೇವತೆ ಬರೂದು। ಧೈರ್‍ಯವಾಗಿ ಮಾತನಾಡಿ ಬರವಶವಂ ತೆಗೆದುಕೊಳ್ಳುವದೂ। ತಾನು ಶಾಸ್ತ್ರ ಮುಂತಾದ್ದು ಹೇಳುವಾಗ ಕಿವಿಯಲ್ಲಿ ಹನುಬವ ಮಾಡೂಧು॥ ಶ್ರೀ
ಜೀವದ ಕಾಗೆಯನ್ನು ಯಿಡಿದುಕೊಂಡು ಮೂಗ, ಕೈಯಲ್ಲಿ ಉಪ್ಪ ತೆಗೆದು ಕೊಂಡು ಕಾಗೆ ಬಾಯಿಗೆ

ವಿಷಯ : ಯಂತ್ರ ಮತ್ತು ಮಂತ್ರ ವಿಚಾರ.

ವಿಶೇಷ : ಅತ್ಯಂತ ಶಿಥಿಲ ಪ್ರತಿ. ಹುಳು ತಿಂದು ಗರಿಗಳಲ್ಲಿ ರಂಧ್ರ ಬಿದ್ದಿದೆ. ಕೆಲವು ಗರಿಗಳು ಮುರಿದು ಹೋಗಿವೆ. ಇದರಿಂದ ಅನೇಕ ಕಡೆಗಳಲ್ಲಿ ಗ್ರಂಥಪಾತ ವಾಗಿದೆ. ಕೆಲವು ಗರಿಗಳಲ್ಲಿ ಯಂತ್ರಗಳ ಚಿತ್ರಗಳೂ ಇವೆ. ೧ರಿಂದ ೪೫ರ ವರೆಗೆ ಪತ್ರಗಳಿಗೆ ಕ್ರಮಾಂಕವಿದೆ. ಮುಂದಿನ ೧೫ ಪತ್ರಗಳಿಗೆ ಕ್ರಮಾಂಕವಿಲ್ಲ.

1259

ಕೆ. ೩೧೫/೨	**ಮಂತ್ರಗಳು**	ಮಂತ್ರ
೬.೧″ × ೨.೧″	?	?
೧೨೧–೧೩೬ ಪತ್ರ	೧೪ ಪಂಕ್ತಿ	೩೦ ಅಕ್ಷರ

ಆದಿ : ಓಂ ಹ್ರೀಂ ಕ್ಷಾಂ ನಮೋ ಭಗವತೇ ಭಸ್ಮಾಂಗರಾಗಾಯ ಉಗ್ರಸ್ಯ ಹನ ಹನದ ಹದ ಹದ ರಸರ ಮದ ಮದ ಪಚ ಪಚ ವಿಧ್ವಂಸಯ ಹಳ ಹಳ ಚಂಜಲ ವಿದ್ವಳಾ x x x x x ಓಂ ಕಂಚಿ ಕಾಮಾಕ್ಷಿದೇವಿ ಓಂಕಾರ ಹರಃ ಕೊಲ್ಲಾಪುರದ ಮಹಾಲಕ್ಷ್ಮಿಮಹಂ ಮಾಯೆ ಮಹಂಕಾಳಿ ಹನು ಮಂತ ಭೈರವ ಭೇತಾಳ ಭೈರವ ಶಾಕಿನಿ ಡಾಕಿನಿಯರು, ಮುಂತಾಗಿ ನಾನು ಬಯಸಿದ ಬಯಕೆಯಂನ್ನು ಸರ್ವಕಾರ್‍ಯ್ಯ ಸಿದ್ಧಿಯಾಗಲ್ಕೆ ಕೃಪೆಯಾಗ ಬೇಕು.

ಅಂತ್ಯ : ಸರ್ವ ಸಂವತ್ಸರಂ ಶ್ರೇಷ್ಟಂ ಸರ್ವಪಾಪ ನಿವಾರಣಂ।
ತಸ್ಮೈ ಶ್ರೀಶಸ್ಯಮುವ್ಯಸ್ಯ ಮಹಾತ್ಮ್ಯಂ ಪಠತೆದುನಾ ॥ ೧ ॥
x x x x ಅನುಷ್ಟುಪ್ಛಂಧಯಿತ್ಯುಕ್ತಾ ಉಗ್ರಕೃತ್ಯಾ ಚ ದೇವತಾ।
ಪೂರ್ವಂ ತು ಕಾಯಶುದ್ಧಿಂ ಚ ಪೂಜಯೇತ್ಸ ಸಮಾಹಿತಃ॥

ವಿಷಯ : ಕಾರ್ಯಸಿದ್ಧಿ ಮೊದಲಾದ ಫಲದಾಯಕಗಳಾದ ಮಂತ್ರಗಳು.

ವಿಶೇಷ : ೧೨೧ನೆಯ ಪತ್ರ ಒಂದು ಭಾಗದಿಂದ ಪ್ರಾರಂಭವಾಗಿದೆ. ೧೨೭, ೧೨೮ನೆಯ ಪತ್ರಗಳಲ್ಲಿ ಬಸವಣ್ಣನ ಸ್ತುತಿ ಇದೆ. ೧೪೯,೧೩೦ ಈ ಎರಡು ಪತ್ರಗಳು ಮುರಿದಿವೆ. ಇದೇ ಕಟ್ಟಿನಲ್ಲಿ ನಿಷ್ಕಲಲಿಂಗ ಚಿದಾನಂದಲೀಲೆ ಎಂಬ ಗ್ರಂಥವಿದೆ.

1260

ಕೆ. ೭೫/೪	**ಮಂತ್ರಗೋಪ್ಯ** (ಸಟೀಕು)	ಪದ, ಟೀಕು
೧೦.೭" × ೨.೨"	ಪ್ರಭುದೇವರು	೧೧೬೦
೯೬–೧೦೩ ಪತ್ರ	೨೦ ಪಂಕ್ತಿ	೮೫ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ ॥ ಪ್ರಭುದೇವರು ನಿರೂಪಿಸಿದ ಮಂತ್ರಗೋಪ್ಯ ॥ ಪ್ರಥಮದಲ್ಲಿ ಪೀಠಿಕಾ ಸೂತ್ರ ॥ ಶ್ರೀಮತ್ಪರಮ ಪರಮಾನಂದ × × × × × ಮಂತ್ರಗೋಪ್ಯದಿಪ್ಪತ್ತೇಳು ವಚನಂಗಳಿಗೆ ಅರ್ತ್ಥವಂ ತಾನೆ ಆರ್ತ್ಥೈಸಿದರು ಯಲ್ಲಾ ಶಿವಗಣಂಗಳಜೀವಂತೆ । ಶಿವಗ್ನಾನದರ್ಪ್ಪಣವಾಗಿದ್ದುದು । ಯೀ ವಚನಾರ್ತ್ಥ । ಯೀ ಮಂತ್ರಗೋಪ್ಯದ ಟೀಕಿನಲ್ಲಿ ತಪ್ಪೊಳ್ಳಿತ್ತನರಸುವರಿಗೆ ಷಟ್ಸ್ಥಲಗ್ನಾನಿಗಳಿಗೆ ಯೀ ವಚನಾರ್ತ್ಥದ ಟೀಕೆಲ್ಲ ವೊಳಿತ್ತು । ಯಿತರಮಾರ್ಗ್ಗಿಗಳಿಗೆ ತಪ್ಪುಗು । ಯೀ ವಚನಾರ್ತ್ಥ ಯೀ ಮಂತ್ರಗೋಪ್ಯಾರ್ತ್ಥವ । ಶಿವಗ್ನಾನಿಗಳು ಲಾಲಿಸೂದು । ಪಾಲಿಸೂದು । ಅಜೀದಾನಂದಿಸೂದು । ಶಿವಗ್ನಾನಸಾಧನ ಸಾಸನವಿದು । ಶಿವಗಣಂಗಳಿಗೆ ಶರಣಾರ್ತ್ಥಿ ॥ ಪ್ರಥಮದಲ್ಲಿ ಪಲ್ಲವ ॥ ರಾಮು ಕೇಳಧ್ಯಾನ ಸೋಮು ಕೇಳನುಭಾವ ಸಿದ್ಧರಾಮು ಕೇಳಾನಂದ ನಿಂದ ನಿಜವಾ ॥ ಟೀ ॥ ಪ್ರಭುದೇವರು ಯೆಲೆ ಸಿದ್ಧರಾಮೇಶ್ವರಾ ನೀನು ದೇಹಕರಣಯಿಂದ್ರಯ ವಿಷಯಂಗಳಿಲ್ಲದೆ ವೊಪ್ಪುತ್ತಿಹ ಆತ್ಮರಾಮು ನೀನೆಂದು । ಆತ್ಮಾನಾತ್ಮ ವಿವೇಕವನೆಚ್ಚರಿಸಿ । ದ್ಯಾತೃನಾಮದಿಂದ ಕರೆದರೆಂಬುದೀಗ ರಾಮಾಯೆಂಬ ಶಬ್ದಕ್ಕರ್ತ್ಥ ।

ಅಂತ್ಯ : ಯೀ ವಚನಾರ್ತ್ಥವನಜೀದಾನಂದಿಸುವ ಶಿವಗಣಂಗಳಿಗೆ । ಷಟ್ಸ್ಥಲಗ್ನಾನ ಪ್ರಕಾಶಮಂ ಕೊಟ್ಟು ಮಹಾ ಘನಲಿಂಗದ । ನಿಜಾನಂದ ಸುಖಪದದಲ್ಲಿ ನಿಶ್ಚಲಾನಂದದಿ ಯಿರಿಸೂದೀ ಮಹಾ ಸದ್ಗುರುಬೋಧೆ । ಚಿತ್ಪ್ರಭು ಗುರುವಲ್ಲವಾ ಪ್ರಭುವೇ ನಮಃ ॥ ಯಿಂತೀ ಮಂತ್ರಗೋಪ್ಯಾರ್ತ್ಥದ ತಾತ್ಪರ್ಯ ತತ್ವ ಶಿವಗಣಾರ್ಪ್ಪಿತ। ಪ್ರಭುದೇವರ ಮಂತ್ರಗೋಪ್ಯದ ಟೀಕು ಸಂಪೂರ್ನ್ನ ಮಂಗಳ ಮಹಾ ಶ್ರೀ.

ವಿಷಯ : ಶಿವಯೋಗ ರಹಸ್ಯ.

ವಿಶೇಷ : ಸಮಗ್ರ. ೯೭ನೆಯ ಪತ್ರ ಸ್ವಲ್ಪ ತ್ರುಟಿತ. ಶಕಟರೇಫವಿದೆ. ಇದರೊಂದಿಗೆ ಆಚರಣೆಯ ವಚನಗಳು, ಸಂಬಂಧದ ವಚನಗಳು ಮೊದಲಾದ ಇತರ ೧೨ ಗ್ರಂಥಗಳಿವೆ. ೧೦೪ನೆಯ ಪತ್ರದಿಂದ ೧೧೨ ಪತ್ರಗಳು ಲುಪ್ತ. ಈ ಪತ್ರಗಳಲ್ಲಿದ್ದ ಗ್ರಂಥವಾವುದೋ ತಿಳಿಯದು.

1261

ಕೆ. ೩೨೭/೨ **ಮಂತ್ರಗೋಪ್ಯ** (ಸಟೀಕು) ಪದ, ಟೀಕು

೯.೭" × ೨" ಪ್ರಭುದೇವರು ೧೧೬೦

೨–೧೪ ಪತ್ರ ೧೧ ಪಂಕ್ತಿ ೪೫ ಅಕ್ಷರ

ಆದಿ : ಯೀ ಐದು ಕರ್ಮ್ಮಯೋಗಗಗಳು । ಧ್ಯಾನ ಧಾರಣ ಸಮಾಧಿ ಯೀ ಮೂರು ಯೋಗಿಗಳು ತಂಮ ಲಕ್ಷದಲ್ಲಿ ಕೂಡುವ ಯೋಗ । ಅಂತು ಐದು ಪೂರ್ವಕರ್ಮ ಯೋಗ । ಯಿವ ಬಿಟ್ಟು ಉತ್ತರವಾದ ಮುಂತ್ರಾರು ಧ್ಯಾನ। ಧಾರಣ ಸಮಾಧಿ ಯೋಗಂಗಳು । ಷಟ್ಸ್ಥಲಲಿಂಗಾಂಗಯೋಗಿಗಳಿಗೆಯು ಉಂಟ್ಟು । ಅದೆಂತೆಂದೊಡೆ। ಅಷ್ಟಾಂಗಯೋಗಗಳ ಲಕ್ಷಾನುಸಂದಾನದ ಧ್ಯಾನ ಧಾರಣ ಸಮಾದಿಯ ಪರಿಯಲ್ಲ । ಷಟ್ಸ್ಥಲಜ್ಞಾನಿಗಳ ಧ್ಯಾನ ಧಾರಣ ಸಮಾಧಿಯ ಪರಿ ಬೇರೆನಲು ಅದೆಂತೆಂದು ಸಿದ್ಧರಾಮ್ಮೈಯದೇವರು ಕರುಣಿಸಬೇಕು ಗುರುವೆ ಯೆನಲು । ಪ್ರಭುದೇವರು ಸಿದ್ಧರಾಮ್ಮೈಯ ದೇವರ ಮೇಲಣ ಅತಿ ಕೃಪೆಯಿಂದ ನಿರೂಪಿಸುತ್ತಿರ್ದ್ದರದೆಂತೆಂದೊಡೆ । x x x x

ಆ ಪ್ರಭುದೇವರು ಕರುಣಿಸಿ ಯೆತ್ತಿಕೊಂಡು ಆ ಷಟ್ಸ್ಥಲ ಬ್ರಮ್ಹೋಪದೇಶಮಂ ಅತಿ ರಹಸ್ಯ ಅತಿ ಗೋಪ್ಯವಾಗಿ । ಯಿಪ್ಪತ್ತೇಳು ಪದಂಗಳಿಂದ ಮುಂತ್ರೋಪದೇಶವಮಾಗಿ ಷಟ್ಸ್ಥಲ ಬ್ರಮ್ಹೋಪದೇಶಮಂ ವುಪದೇಶಿಸಿದರಂದು ಪ್ರಭುದೇವರು ಸಿದ್ದರಾಮಯ್ಯದೇವರಿಗೆ । ಅಂದಿನ ಷಟ್ಸ್ಥಲ ಮುಂತ್ರಗೋಪ್ಯ, ಯಿಂದು ಪರಿಯಂತರ ಗೋಪ್ಯಮಾಗಿರ್ದ ಮುಂತ್ರ ಗೋಪ್ಯಾರ್ತ್ಥಮಂ ಶಿವಶರಣರೆಲ್ಲರಿಗೆ ಗೋಪ್ಯಮಾಗಿಡಬಾರದೆಂದು । ಅಂದಿನ ಚಿತ್ಪ್ರಭು ಗುರು ತಾನೆ ಇಂದಿನ ಕಲ್ಲಮಠದ ಪ್ರಭುವಿನಂಗದಲ್ಲಿ ಮೊಡೆದುಮೂಡಿ ಥಳಥಳಿಸಿ । ಚಿತ್ಪ್ರಭಾಕಳೆಯಂ ಬೆಳಗುತ್ತಿರ್ದು ತಂನಂದಿನ ಮುಂತ್ರಗೋಪ್ಯದಿಪ್ಪತ್ತೇಳು ವಚನಂಗಳಿಗೆ ಅರ್ಥಮುಂ ತಾನೆ ಅರ್ತ್ಥೈಸಿದ ಯಲ್ಲಾ ಶಿವಗಣಂಗಳರಿವರಿವಂತೆ । ಯಿದು ಶಿವಜ್ಞಾನ ದರ್ಪ್ಪಣವಮಾಗಿರ್ದುದು ಯೀ ವಚನಾರ್ತ್ಥ। ಯೀ ಮುಂತ್ರಗೋಪ್ಯದ ಟೀಕಿನಲ್ಲಿ ತಪ್ಪಾಳಿತ್ತನರಸುವರಿಗೆ । ಷಟ್ಸ್ಥಲ ಜ್ಞಾನಿಗಳಿಗೆ ಯೀ ವಚನಾರ್ತ್ಥದ ಟೀಕೆಲ್ಲದೊಳಿತ್ತು । ಯಿತರ ಮಾರ್ಗಿಗಳಿಗೆ ತಪ್ಪುಗು ಯೀ

ವಚನಾರ್ಥ | ಯೀ ಮಂತ್ರಗೋಪ್ಯಾರ್ಥವ ಶಿವಜ್ಞಾನಿಗಳು ಲಾಲಿಸೂದು ಪಾಲಿಸೂದು | ಅರಿದಾನಂದಿಸೂದು | ಶಿವಜ್ಞಾನಸಾಧನ ಶಾಸನವಿದು | ಶಿವ ಗಣಂಗಳಿಗೆ ಶರಣಾರ್ತಿ || ಪ್ರಥಮದಲ್ಲಿ ||

ಪಲ್ಲವ || ರಾಮು ಕೇಳ ಧ್ಯಾನ ಸೋಮು ಕೇಳಸುಭಾವ ಸಿದ್ಧರಾಮು ಕೇಳಾನಂದ ನಿಂದ ನಿಜವಾ || ಟೀಕು || ಪ್ರಭುದೇವರು ಯೆಲೆ ಸಿದ್ಧರಾಮೇಶ್ವರಾ ನೀನು ದೇಹ ಕರಣ ಯಿಂದ್ರಿಯ ವಿಷಯಂಗಳಿಲ್ಲದೆ | ವೊಪ್ಪುತಿಹ ಆತ್ಮರಾಮು ನೀನೆಂದು | ಆತ್ಮಾನಾತ್ಮ ವಿವೇಕವನೆಚ್ಚರಿಸಿ ದ್ಯಾತೃನಾಮದಿಂದ ಕರದರೆಂಬು ದೀಗ | ರಾಮೂ ಯೆಂಬ ಶಬ್ದಕ್ಕರ್ತ್ಥ |

ಅಂತ್ಯ : || ೨೪ || ಖೇಚರತ್ವದ ನಿಲವ ಭೂಚರ್‍ರರು ಬಲ್ಲರೆ ವಾಚಾಳಕರ ಮಾತಿಗಿದು ಸಲ್ಲದು | ಆಚಾರ............ಸೊದಾಹಾಪರಮಪದವೂ ||

ಟೀಕೂ || ಚಿದಾಕಾಶಮಯವಾಗಿ ಚಿತ್ತು ಮುಖದಲ್ಲಿ ಗಮಿಸಿ ಗೋಚರಿಸು ತ್ತಿಪ್ಪುದು.............ನಿಲವೆಂಬ ಶಬ್ಧಕ್ಕರ್ಥ ಥೇಹವೆಂಬುದೀಗ ಭೂಮಿಯೆಂಬ ಶಬ್ದಕ್ಕರ್ತ್ಥ | x x x x x x ಮಿಕ್ಕಿನ ಯೋಗಮಾರ್ಗರ್ಸಿಗಳಿಗಳಿಗೆ ವಾಗಾ ದ್ವೈತಿಗಳಿಗೆ ಶಿವತತ್ವ ತಾನೆ ತಂನ ನಿಜವನರ್‍ರುಹಿ ಸಾಧ್ಯವಲ್ಲವೆಂಬುದು ಪ್ರಭುದೇವರು ಸಿದ್ಧರಾಮಯ್ಯದೇವರಿಗುಪದೇಶಿಸಿದರೆಂಬುದೀಗ | ವಚನಾರ್ತ್ಥ || ೨೫ || ಬ್ರಮ್ಹರಂದ್ರದ ಕೊನೆಯ ವರ್ಮಾದಿವರ್ಮವನು ನಿರ್ಮಳಾಗಿರ್ದೇ ಹಿಕಂಗಲ್ಲದೆ | ವರ್ಮವರಿದಾ ನಿರ್ಮಳನಿತ್ಯಂಗಲ್ಲದೆ |

ವಿಷಯ : ಶಿವಯೋಗ ರಹಸ್ಯ.

ವಿಶೇಷ : ಒಟ್ಟು ೨೭ ಪದಗಳಿರಬೇಕಾದ ಈ ಮಂತ್ರಗೋಪ್ಯವು ಇಲ್ಲಿ ಕೇವಲ ೨೫ ಮಾತ್ರ ಟೀಕಿನೊಂದಿಗೆ ಇದ್ದು ಆದಿಯ ಒಂದು ಪತ್ರ ಲೋಪವಾಗಿಯೂ, ಅಂತ್ಯದಲ್ಲಿ ಬರವಣಿಗೆ ಮುಗಿಯದೆ ಪತ್ರ ಖಾಲಿಯಿದ್ದು ಅಸಮಗ್ರವಾಗಿಯೂ ಇರುತ್ತದೆ. ಓಲೆ ಸಾಧಾರಣ ಸ್ಥಿತಿಯಲ್ಲಿದೆ. ಇದರೊಂದಿಗೆ ಕೆ. ೩೭೧/೧ ಪರಮ ರಹಸ್ಯವೂ ಇರುತ್ತದೆ. ಕೊನೆಯಲ್ಲಿ ೨ ಪತ್ರವಿದ್ದು ೧ರಲ್ಲಿ 'ಚೂರ್ನಿಕೆ'ಯೂ, ೨ನೆಯ ಪತ್ರದಲ್ಲಿ ಸಿದ್ಧಲಿಂಗಾಂಕಿತ ಒಂದು ಪದ್ಯವೂ ಇದೆ.

1262

ಕೆ. ೩೨೩/೬	**ಮಂತ್ರಮಹತ್ವದ ಕಂದ**	ಕಂದ
೫.೪" × ೨"	ಕೊಂಡಗೂಳಿ ಕೇಶಿರಾಜ	ಸು. ೧೧೬೦
೬೩–೭೩ ಪತ್ರ	೧೧ ಪಂಕ್ತಿ	೨೪ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ । ಷಟ್ಸ್ಥಲ ಚಕ್ರವರ್ತಿಯಳಮಲೆಯ
ಗುರು ಶಾಂತದೇವರು ಸೇರಿಸಿದ ಮಂತ್ರಮಹತ್ವದ ಕಂದ ॥
ಶ್ರೀಯಂ ಪಡವಡೆ ಶಾಸ್ವತ
ವಾಯುಸ್ಯದಪೇಕ್ಷೆ ತನಗೆ ಕೈಗೂಡುವಡೀ
ಮಾಯಕ್ಕೊಳಗಾಗದಿರ್ಪ್ಪಡೆ
ಜೀಯ್ಯನ ಜಪ ಓಂ ನಮಃಶಿವಾಯಂಬ ಪದಂ ॥ ೧ ॥

ಅಂತ್ಯ : ಅಷ್ಟೋತರ ಸತಕ್ರುತುಗಳಂ
ಅಷ್ಟೋತ್ತರ ಜಲ್ಮದಲ್ಲಿ ಮಾಡಿದ ಫಲದಿಂ
ದಷ್ಟೋತ್ತರ ಜಪ ಮಿಗಿಲೆನ
ಲಿಷ್ಟಾರ್ತ್ಥವಿದೋಂ ನಮಃ ಶಿವಾಯಂಬ ಪದ ॥ ೧೦೯ ॥
ಆಱಕ್ಕರದಿಂ ಮಂತ್ರಂ
ಮೂಱುಕಂಣಭವನಿಂದ ವೆಗ್ಗಳದೈವಂ
ಬೇಱಿಲ್ಲವೆಂದು ಧರಿತ್ರಿಗೆ
ಸಾಱಿದನಾಂ ಕೇಶಿರಾಜ ದಂಡಾದೀಶಂ ॥ ೧೦೦ ॥
ಮಂತ್ರಮಹತ್ವದ ಕಂದಂ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : " ಓಂ ನಮಃಶಿವಾಯ " ಎಂಬ ಮಂತ್ರದ ಮಹಿಮೆ.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮರುಳದೇವರ ಕಂದ, ಅಕ್ಷರಮಾಲಿಕಾ ಗದ್ಯ ಮುಂತಾದ ಇನ್ನೂ ಇತರ ೧೬ ಗ್ರಂಥಗಳಿವೆ. ಇವುಗಳಲ್ಲಿ ಕೆಲವು ಸಂಸ್ಕೃತ ಕೃತಿಗಳಾಗಿವೆ.

1263

ಕೆ. ೩೬೯/೧೧	**ಮಂತ್ರಮಹತ್ವದ ಕಂದ**	ಕಂದ
೮" × ೧.೮"	ಕೊಂಡಗೂಳಿ ಕೇಶಿರಾಜ	ಸು. ೧೧೬೦
೭೬–೮೩ ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ಶ್ರೀಯಂ ಪಡವಡೆ ಶಾಶ್ವತ
ದಾ .. ಪ್ಯದಪೇಕ್ಷೆ ತನಗೆ ಕೈಗೂಡುವಡೆ
ಮಾಯಕ್ಕೊಳಗಾಗದಿರ್ಪ್ಪಡೆ
ಜೀಯ್ಯನ ಜಪ ಓಂ ನಮಃಶಿವಾಯಂಬ ಪದಂ ॥ ೧ ॥

ಅಂತ್ಯ : ಅಷ್ಟೋತ್ತರ ಶತಕ ಕ್ರತುಗಳ
ಲಷ್ಟೋತ್ತರ ಜನ್ಮದಲ್ಲೆಡೆ ಪದಫಲದಿಂ

ದಷ್ಟೋತ್ತರ ಜಪಮಿಗೆಲೆನ
ಗಿಷ್ಟಾರ್ತ್ಥವಿದೋಂ ನಮಃ ಶಿವಾಯಂಬ ಪದಂ || ೧೦೯ ||
ಆರಕ್ಕದಿಂ ಮಂತ್ರ
ಮೂರುಂಕಂಣಭವನಿಂದೆಯುಗ್ಗಳ ದೈವಂ
ಬೇರಿಲ್ಲವೆಂದು ದರಿತ್ರಿಗೆ
ಸಾರಿದನಾಂ ಕೇಶಿರಾಜ ದಂಡಾಧೀಶಂ || ೧೧೦ ||
ಮಂತ್ರಮಹಾತ್ಮದ ಕಂದ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : 'ಓಂ ನಮಃ ಶಿವಾಯ' ಎಂಬ ಮಂತ್ರದ ಮಹಿಮೆ.

ವಿಶೇಷ : ಗ್ರಂಥವು ದುಃಸ್ಥಿತಿಯಲ್ಲಿದೆ. ಗರಿಗಳು ಹರಿದಿವೆ. ಸಮಗ್ರವಾಗಿದೆ. ಅಶುದ್ಧ. ಇದೇ ಕಟ್ಟಿನಲ್ಲಿ ಗುರು, ಷಡಕ್ಷರಿ, ಬಸವ, ಮನೋವಿಕಾರನಿರಸನ, ಭಕ್ತಿ ಬಿನ್ನಹರಗಳೆಗಳೂ; ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ; ಶಂಕರದೇವ, ಮರುಳದೇವ, ಪ್ರಭುಲಿಂಗ ಕಂದಗಳೂ; ಅಕ್ಷರ ಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ; ಶತಕತ್ರಯವೂ; ಮಲ್ಹಣ ಸ್ತೋತ್ರವೆಂಬ ಗ್ರಂಥಗಳಿವೆ.

1264

ಕೆ.ಬಿ. ೮೨	**ಮಂದಾರವಲ್ಲೀ ಪರಿಣಯ**	**ನಾಟಕ**
೭.೭" × ೬.೩"	ಚಂದ್ರಶೇಖರಶಾಸ್ತ್ರಿ	?
೬೨ ಪತ್ರ	೧೯ ಪಂಕ್ತಿ	೧೬ ಅಕ್ಷರ

ಆದಿ : (ಅಂಥತೆಯನ್ನಭಿನಯಿಸುತ್ತ ಪುಣ್ಯಗರ್ಭರಾಜನ ಪ್ರವೇಶ) ರಾಗ || ಭೈರವ| ರೂಪಕ ||
ರಾಜ :—ಬಾಲವನ್ನು ನೋಡಿ ನಾಂ ಪಾಪಿಯಾದೆನೆ || ಪ ||
ಬಾಳುವುದಿನ್ನೇಕೆ ಬರಿದೆ ಹಾ ಸೈಸಲಾರೆನು || ಅ ||
ಭೋಗ ಭಾಗ್ಯಾದಿಯಿಂದ ಭೂಮಿಯೊಳಗೆ
ಭೋಗಪಟ್ಟರೇನು ಫಲ ನೇತ್ರಹೀನನಾಗಿ || ೧ ||

ಅಂತ್ಯ : ರಾಜ—ಎಲೆ ಪತ್ನಿ ನಿನ್ನ ದೃಢವು ಅತ್ಯಾಶ್ಚರ್ಯಕರವಾದದ್ದು. ನಮಗೆ ಬಂದಿದ್ದು ಅಪಾಯವೆಲ್ಲಾ ನಿನ್ನಿಂದ ಪರಿಹಾರವಾಯಿತು.—ಮಂತ್ರಿಯೆ ಇನ್ನೂ ಸಾವಕಾಶವೇತಕ್ಕೆ ಇವರ ವಿವಾಹವನ್ನು ಗಾಂಧರ್ವವಿಧಿಯಿಂದ ಇಲ್ಲಿಯೇ ಮಾಡೋಣ

(ಸತಿಪತಿಗಳನ್ನು ಪರಸ್ಪರ ಕೈ ಹಿಡಿಸಿ)

x x x x

ಸಪ್ತಮಾಂಕಂ ಸಂಪೂರ್ಣಂ ||

x x x x

ಕಾಮಿತ ಫಲದಂ | ಕೋಮಲ ಸುಪದಂ | ಸೋಮವಂಶವಾರ್ಧಿಚಂದ್ರ| ಚಾಮ
ಭೂಪಾಲಕಂಗೆ || ೧ ||

ವಿಷಯ : ರಾಜಕಿರೀಟಿಯು ತನ್ನ ಅಂಧಪಿತನಿಗಾಗಿ ಮಂದಾರವಲ್ಲಿಯೆಂಬ ಕನ್ಯೆಯಿಂದ ಒಂದು ಪುಷ್ಪವನ್ನು ತಂದುದಲ್ಲದೆ, ಅವಳನ್ನು ವಿವಾಹವಾದ ಕಥೆ.

ವಿಶೇಷ : ಸುಂದರಾಕ್ಷರ. ಪತ್ರಗಳಿಗೆ ಕ್ರಮಾಂಕವಿಲ್ಲ.

1265

ಕೆ. ೫೦೪ **ಮನ್ಮಥಮಣಿದರ್ಪಣ** ಭಾಮಿನೀಷಟ್ಪದಿ

೯.೯" × ೨" ಅಭಿನವ ಮಂಗರಸ ?

೧–೨೯೫ ಪತ್ರ ೧೦ ಪಂಕ್ತಿ ೪೩ ಅಕ್ಷರ

ಆದಿ : ಶ್ರೀ || ಮನ್ಮಥಮಣಿದರ್ಪ್ಪಣ ಷಟ್ಪದೀ ಬರಲುದಕ್ಕೆ ಶುಭಮಸ್ತು || ಶೋಭನಮಸ್ತು || ಪೀಟಿಕಾ ವರ್ನ್ನನೆ
ಪಲ್ಲವೀ || ಕೇಳು ಸಮವಸ್ರುತಿ ಶ್ರೀ ಜಿನ
ರೋಲಗದಿ ಗಣಾಧರರು ಲಕ್ಷ್ಮಿ್ರೀ
ಲೋಲಸುತ ಪ್ರದ್ಯುಂಮ್ನ ಮಣಿದರ್ಪ್ಪಣವನುಸು ....ನೂ ||
ಶ್ರೀ ಸಮವಸ್ರುತಿ ಕರ್ತ್ತೃ ಶಶಿರವಿ
ಭಾಸುರೋಜ್ವಲ ಮೂರ್ತ್ತಿ ಕರುಣ ವಿ
ಲಾಸವಾಸವ ಮಕುಟ ತಾಟಿತ ಪಾದ ಪದ್ಮ........
....ಯಿಾಶ ವೇಣು ಪು
ರೀಶ ಕವಿ ಜನಘೋಷ ಭವ ಭವ
ನಾಶ ಪಾರೀಶ್ವೇಶ ಸುಮತಿಯ ಕೊಟ್ಟು ರಕ್ಷಿಪುದೂ || ೧ ||

x x x x

....ಣ ಕವಿಯ ಕುಮಾರ ರಾಯಂಣ ಅಭಿನವ ಮಂಗರಸ ವಿರಚಿತಮಪ್ಪ ಹರಿವಂಶಕಥಾ ಪುರಾಣದೊಳು ಮಂನ್ಮ........ ರ್ಪ್ಪಣನುಸುರಿದ ಪೀಠಿಕಾ ಪ್ರಸಂಗ ಪ್ರಥಮಶ್ವಾಸಂ || ೧ || ಶ್ರೀ ಪ್ರಥಮ ಸಂಧಿ ೧ಕೆ ಪದ

ಅಂತ್ಯ: ಸಾರಧರ್ಮದಿ ಪರಿಗ್ರಹದ ವ್ಯಾ
ಪಾರದುರ್ಮನ ದುಶ್ಚರಿತಗಳೆ
ದಾ ರತ್ನತ್ರಯ ಧರಿಸಿ... ....ವಿಹಾರಿಸುತಲಾಗಾ

ಸಾರಗಂಧ ಸುಪುಷ್ಪ ವೀಳ್ಯದ
ಸಾರ ಸ್ತ್ರೀಯರ ಗೋಷ್ಠಿ ತೊರೆದಾ
ಧೀರ ನಿರ್ಜ್ಜಂತ್ತುಕದ ಠಾಣವ ಸೇರಿ ಮುದವೇರೀ ॥ ೩೩ ॥

ವಿಷಯ : ಹರಿವಂಶದ ಕಥೆ.

ವಿಶೇಷ : ಆರಂಭದಿಂದ ೬೧ನೆಯ ಸಂಧಿ ೩೩ನೆಯ ಪದ್ಯದವರೆಗೆ ಗ್ರಂಥವಿದೆ. ಕವಿಯ ಹೆಸರು ಪ್ರಥಮಾಶ್ವಾಸದ ಕೊನೆಯಲ್ಲಿದೆ. ೧೪, ೪೦–೪೨, ೫೬–೭೬ನೆಯ ಕ್ರಮಾಂಕದ ಪತ್ರಗಳು ಲುಪ್ತ. ೨೮೦ರ ಕ್ರಮಾಂಕ ಬಿಟ್ಟುಹೋಗಿದೆ. ಆದರೆ ವಿಷಯ ಮುಂದುವರಿದಿದೆ. ಆದಿ, ಅಂತ್ಯದಲ್ಲಿ ಬಹು ಪಾಲು ಪತ್ರಗಳು ತ್ರುಟಿತ.

1266

ಕೆ. ಎ. ೩೨೩	**ಮನ್ಮಥಮಣಿದರ್ಪಣ**	ಭಾಮಿನೀಷಟ್ಪದಿ
೧೩.೨" × ೮.೩"	ಅಭಿನವ ಮಂಗರಸ	?
೧–೮೮೨ ಪುಟ	೨೧ ಪಂಕ್ತಿ	೧೮ ಅಕ್ಷರ

ಆದಿ : ಅಭಿನವ ಮಂಗರಸ ವಿರಚಿತಂ ಮನ್ಮಥಮಣಿದರ್ಪಣ ಪೀಠಿಕಾ ವರ್ಣನೆ.
ಪಲ್ಲವಿ ॥ ಕೇಳು ಸಮವಶೃತಿ ಶ್ರೀಜಿನ
ರೋಲಗದಿ ಗಣಧರರು ಲಕ್ಷ್ಮೀ
ಲೋಲಸುತ ಪ್ರದ್ಯುಮ್ನ ಮಣಿದರ್ಪಣವನುಸುರುವೆನು
ಶ್ರೀಸಮವಶೃತಿ ಕರ್ತೃ ಶಶಿರವಿ
ಭಾಸುರೋಜ್ವಲಮೂರ್ತಿ ಕರುಣ ವಿ
ಲಾಸ ವಾಸವ ಮಕುಟತಾಟಿತ ಪಾದ ಪದ್ಮಯುಗ.... ॥
....ಯಿಾಶ ಜಿನೇಶ ವೇಣು ಪು
ರೀಶ ಕವಿಜನಪೋಷ ಭವ ಭವ (ಯ)
ನಾಶ ಪಾರಿಶ್ವೇಶ ಸುಮತಿಯ ಕೊಟ್ಟು ರಕ್ಷಿಪುದು ॥ ೧ ॥

ಬೊಮ್ಮಣ್ಣ ಕವಿಯ ಕುಮಾರ ರಾಯಣ್ಣ ಅಭಿನವ ಮಂಗರಸ ವಿರಚಿತಮಪ್ಪ ಹರಿವಂಶಕಥಾ ಪುರಾಣದೊಳು ಮನ್ಮಥಮಣಿದರ್ಪಣವನುಸುರಿದ ಪೀಠಿಕಾ ಪ್ರಸಂಗ ಪ್ರಥಮಾಶ್ವಾಸಂ ॥ ೧ ॥

ಅಂತ್ಯ : ಸಾರಧರ್ಮದಿ ಪರಿಗ್ರಹದ ವ್ಯಾ
ಪಾರ ದುರ್ಮನ ದುಶ್ಚರಿತಗಳಿ
ದಾ ರತ್ನತ್ರಯ ಧರಿಸಿ........ವಿಹಾರಿಸುತಲಾಗ

ಪಾರಗಂಧ ಸುಪುಷ್ಪ ವೀಳ್ಯದ
ಸಾರ ಸ್ತ್ರೀಯರ ಗೋಷ್ಠಿ ತೊರೆದಾ
ಧೀರ ನಿರ್ಜ್ಝಂತುಕದ ಠಾಣವ ಸೇರಿ ಮುದವೇರಿ || ೩೪ ||

ಆಗಮವ ಕೇಳುತ್ತ

ವಿಷಯ : ಹರಿವಂಶದ ಕಥೆ.

ವಿಶೇಷ : ಆರಂಭದಲ್ಲಿ ಪ್ರಥಮಾಶ್ವಾಸದ ಅಂತ್ಯವನ್ನು ಕವಿಯ ಹೆಸರಿಗೋಸ್ಕರ ಕೊಟ್ಟಿದೆ.ಆರಂಭದಿಂದ ೬ನೆಯ ಸಂಧಿಯಲ್ಲಿ ೩೪ ಪದ್ಯಗಳ ವರೆಗಿನ ಗ್ರಂಥವಿದೆ. ಅಸಮಗ್ರ ಪ್ರತಿ. ಮಧ್ಯದಲ್ಲೂ ಗ್ರಂಥ ಲುಪ್ತವಾಗಿದೆ. ೭೫೪-೭೫೫ರ ವರೆಗಿನ ಪತ್ರಗಳ ಕ್ರಮ ಸರಿಯಾಗಿಲ್ಲ.

1267

ಕೆ. ೩೨೩/೭ **ಮುರುಳದೇವರ ಕಂದ** **ಕಂದ**

೫.೪" × ೨" ಮುರುಳದೇವ **ಸು. ೧೧೬೦**

೭೩–೮೫ ಪತ್ರ ೧೦ ಪಂಕ್ತಿ **೨೮ ಅಕ್ಷರ**

ಆದಿ : ಶ್ರೀಗುರುಬಸವಲಿಂಗಾಯ ನಮಃ || ಮುರುದೇವರ ಕಂದ ||
ಶ್ರೀಮತ್ಸಾಂಭವ ಭಕ್ತಿ
ಪ್ರೇಮಾನಂದಾಬ್ಧಿ ಸೋಮ ನತಜನಭಯ ವಿ
ಶ್ರಾಮನರಿ ಭೀಮನಗಜಾ
ವಾಮಾಂಗೋದ್ಧಾಮನೇಮ ಪರಮಪ್ರಭುವೇ || ೧ ||

ಅಂತ್ಯ : ವರಬಸವ ಚೆಂನಬಸವೇ
ಶ್ವರಪ್ರಭು ಮಹದೇವಿ ಸಿದ್ಧರಾಮೇಶ್ವರ ಮು
ಖ್ಯರ ಪ್ರಮಥರಡಿಗಳನು ಹೃ
ತ್ಸರಸಿಜದೊಳು ತಾಳ್ದು ಬಾಳ್ದೆ ಪರಮಪ್ರಭುವೇ || ೧೩೪ ||
ಮುರುಳದೇವರು ನಿರೂಪಿಸಿದ ಕಂದ ಸಮಾಪ್ತ ಮಂಗಲಮಹಾ ಶ್ರೀ ||

ವಿಷಯ : ವೀರಶೈವ ಸಿದ್ಧಾಂತ ಪ್ರತಿಪಾದನೆ.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಅಕ್ಷರಮಾಲಿಕಾ ಗದ್ಯ (ಸಂ), ಪಂಚ ಪ್ರಕಾರದ ಗದ್ಯಗಳು ಎಂಬ ಇತರ ೧೬ ಗ್ರಂಥಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳಾಗಿವೆ.

1268

ಕೆ. ೩೬೯/೧೨ **ಮರುಳದೇವರ ಕಂದ** ಕಂದ

೮" × ೧.೮" ಮರುಳದೇವ ಸು. ೧೧೬೦

೮೪–೯೪ ಪತ್ರ ೯ ಪಂಕ್ತಿ ೪೧ ಅಕ್ಷರ

ಆದಿ : ಜಿಗುನಿ ಮರುಳುದೇವರು ನಿರೂಪಿಸಿದ ಕಂದ ||

ಶ್ರೀಮಶ್ಯಾಂಭವ ಭಕ್ತಿ
ಪ್ರೇಮಾ....ಂದಾಬ್ಧಿಸೋಮ ನತಜನಚಯ ವಿ
ಶ್ರಾಮನರಿ ಭೀಮನಗಜಾ
ವಾಮಾಗೋದ್ದಾಮನೇಮ ಪರಮಪ್ರಭುವೇ || ೧ ||

ಅಂತ್ಯ : ಯಿದು ಶಿವಪೂಜಕರೊಲವಿಂ
ದುದೆಯಸ್ತಂಗತದೊಳೋದೆ ಭವಮರಣಂಗ
...............ತ್ಸಾಂಗನಾಲಿಂಗಂ....
ಗದ ಸಮರಸಸುದೊಳಿಹರು ಯಿದು ಸಿದ್ಧಾಂತಂ ||
ವರಸವ ಚೆಂನಬಸವೇಶ....
ಶ್ವರ ಪ್ರಭು ಮಹದೇವಿ ಸಿದ್ಧರಾಮೇಶ್ವರ ಮು
ಖ್ಯರ ಪ್ರಮಥರಡಿಗಳನು ಹೃ
ತರಸಿಸಿಜದೊಳು....ಬ....ಪರಮಪ್ರಭುವೇ || ೧೩೪ ||

ಜಿಗುನಿ ಮರುಳದೇವರು ನಿರೂಪಿಸಿದ ಕಂದ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ವೀರಶೈವ ಸಿದ್ಧಾಂತ ಪ್ರತಿಪಾದನೆ.

ವಿಶೇಷ : ಈ ಗ್ರಂಥದ ಸ್ಥಿತಿಯು ಸುಮಾರಾಗಿದೆ. ಅಲ್ಲಲ್ಲಿ ಲುಪ್ತ. ಗರಿಯ ಅಂಚುಗಳು ಮುರಿದಿವೆ. ಇದೇ ಕಟ್ಟಿನಲ್ಲಿ ಗುರು, ಷಡಕ್ಷರಿ, ಬಸವ, ಮನೋವಿಕಾರ ನಿರಸನ, ಭಕ್ತಿಬಿನ್ನಹ ರಗಳೆಗಳೂ; ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ, ಶಂಕರದೇವ, ಮಂತ್ರ ಮಹತ್ವ, ಪ್ರಭುಲಿಂಗ ಕಂದಗಳೂ; ಅಕ್ಷರಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ ; ಶತಕತ್ರಯ, ಮಲ್ಹಣಸ್ತೋತ್ರ ಎಂಬ ಗ್ರಂಥಗಳೂ ಇವೆ.

1269

ಕೆ.ಬಿ. ೮೭/೧ **ಮರುಳದೇವರ ಕಂದ** ಕಂದ

೭.೯"×೬.೪" ಮರುಳದೇವ ಸು. ೧೧೬೦

೧–೧೨ ಪತ್ರ ೧೨ ಪಂಕ್ತಿ ೨೫ ಅಕ್ಷರ

ಆದಿ : ಶ್ರೀರಸ್ತು || ಮರಳುದೇವರ ಕಂದ ಬರೆಯುವುದಕ್ಕೆ ಶುಭಮಸ್ತು ||

ಶ್ರೀಮತ್ಸಾಂಭವ ಭಕ್ತಿ
ಪ್ರೇಮಾನಂದಾಬ್ಧಿ ಸೋಮ ನತಜನ ದಯ ವಿ
ಶ್ರಾಮನರಿವಿಮನಗಜಾ
ವಾಮಾಂಗೋದ್ದಾಮ ನೇಮ ಪರಮಪ್ರಭುವೇ || ೧ ||

ಅಂತ್ಯ : ಕಂದ || ವರ ಬಸವ ಚನ್ನಬಸವೇ
ಶ್ವರ ಪ್ರಭು ಮಹಾದೇವಿ ಸಿದ್ಧರಾಮೇಶ್ವರ ಮು
ಖ್ಯರ ಪ್ರಮಥರಡಿಗಳನು ಹೃ
ತ್ಸರಸಿಜದೊಳು ತಾಳ್ದು ಬಾಳ್ದೆ ಪರಮಪ್ರಭುವೇ || ೧೩೪ ||
ಮರುಳುದೇವರ ಕಂದ ಸಂಪೂರ್ಣಂ.

ವಿಷಯ : ವೀರಶೈವ ಸಿದ್ಧಾಂತ ಪ್ರತಿಪಾದನೆ.

ವಿಶೇಷ : ಬರಹವು ಸುಂದರವಾಗಿದೆ. ಇದೇ ಪುಸ್ತಕದಲ್ಲಿ ಲಿಂಗಸ್ತೋತ್ರದ ಷಟ್ಪದಿ, ಷಡಕ್ಷರಿಯ ಕಂದ, ಮಿಶ್ರಸ್ತೋತ್ರ, ಶಂಕರದೇವರ ಕಂದ, ಬಸವ ಸ್ತೋತ್ರದ ಗದ್ಯ ಇತ್ಯಾದಿ ಗ್ರಂಥಗಳಿವೆ.

1270

ಕೆ. ೧೮೮/೫ **ಮರುಳದೇವರ ಕಂದಸಾರ (ಸಟೀಕು)** ಕಂದ, ಗದ್ಯ

೧೭.೬" × ೨" ? ?

೧೩–೧೮ ಪತ್ರ ೧೧ ಪಂಕ್ತಿ ೯೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ | ಶ್ರೀಕಾರದಭಿಪ್ರಾಯವೆಂತೆಂದೊಡೆ ಆಧಾರಚಕ್ರದ ಬಸವೇಶ್ವರಸ್ವಾಮಿಗಳ ಹಾಂಗೆ ಭಕ್ತಿಸ್ಥಲವುಳ್ಳವರ x x x ಲಯಗಮನಂಗಳಿಗೆ ಕಾರಣವಾದ ವಸ್ತುವಿಂಗೋಸ್ಕರ ನಮಃಸ್ಕಾರ ವೆಂಬುದರ್ಥ.

ಶ್ರೀ || ಮರುಳದೇವರ ಕಂದಸಾರ | ಮರುಳನೆನಲು ಯೇನೆನೆ | ಭಕ್ತಿ ಜ್ಞಾನ ವೈರಾಗ್ಯಾವೇಶವುಳ್ಳಾತನೆಂಬುದರ್ಥ || ಬಾರೆಂನ | ಯೆಂನ ಹಸ್ತಕ್ಕೆ ಗುರುಭಕ್ತಿಯನು ಕೈಕೊಂಬುದಕ್ಕೆ ಬಿಜಯಗೆಯ್ಯಾ | ಬಾರೆಂನಯ | ಲಿಂಗ ಭಕ್ತಿಯನು ಕೈಕೊಂಬುದಕ್ಕೆ ಬಾಜೆಂನಯ ನಲವೆ | ಜಂಗಮಭಕ್ತಿಯನ್ನು ಕೈಕೊಂಬುದಕ್ಕೆ | ಹಾಗೆ ಪ್ರಾಸಾದ ಭಕ್ತಿ || ೧ || ಬಾರೆಂನ ಕಾಂತ ಶಾಂತ | ಅಂಗಾಪ್ತ ಸ್ಥಾನ ಸದ್ಭಾವವೆಂಬ ಚತುರ್ವಿಧ ಭಕ್ತಿಯನು || ೨ || ಬಾರೆಂನ ಕಣ್ಣಾ ಪುಣ್ಯವೆಯೆಂಬ ಪದ್ಯದಲ್ಲಿ ಪ್ರೇಕ್ಷಣ ಸ್ಮರಣಯೀಳನಯ ಜನವೆಂಬೀ ನಾಲ್ಕು ಭಕ್ತಿಯನ್ನು || ೩ ||

ಅಂತ್ಯ : ಯಿದು ಸಕಲ ಸಕಲ ನಿಃಕಲ
ವಿದು ನಿಃಕಲ ತತ್ವತೂಯ್ಯವ ಭಾವತ್ರೆಯವಿಂ
ತಿದು ತತ್ವಮಸಿಪದವಿಂ
ತಿದು ಸಚ್ಚಿದ್ರೂಪ ದೀಪ ಪರಮುಪ್ರಭುವೇ॥

ಟೀಕೆ॥ ಯಿದು ಸಕಲ। ಸಾಕಾರ ಸ್ವರೂಪವಾದಿಷ್ಟಲಿಂ................ ನಿಃಕಲವು। ಸಾಕಾರ ನಿರಾಕಾರ ಸ್ವರೂಪವಾದ ಪ್ರಾಣಲಿಂಗವು। ಯಿದು ನಿಃಕಲ। ನಿಃಕಲತತ್ವಸ್ವರೂಪವಾದ ಭಾವಲಿಂಗವು। ತತ್ವತೂರ್ಯ ಭಾವ ತ್ರಯವು॥ ತತ್ವ। ಸಾಕಾರವಸ್ತುವಾ....ತೂರ್ಯ! ಅವಸ್ತಾತ್ರಯವನು ಮೀರಿದಂಥ ಪ್ರಾಣಲಿಂಗವು। ಭಾವ। ಭಾವಲಿಂಗವು। ತ್ರಯವು। ಯೀ ಮೂರು ವೊಂದಾದಿಷ್ಟಲಿಂಗವು। ಯಿಂತಿದು। ಹೀಗಾದಂಥ ಯಿಷ್ಟ ಪ್ರಾಣ ಭಾವಲಿಂಗಂಗಳು। ತತ್ವಮಸಿಪದವು। ತತ್। ಆ ಪ್ರಾಣಸ್ವರೂಪು। ತ್ವಂ। ತ್ವಂಪದಸ್ವರು....ನು। ಅಸಿ ಪದವು। ಆಗುತ್ತಿರ್ದ್ದಪೆಯು ಮತ್ತಂ। ತತ್। ಆ ವಸ್ತುಸ್ವರೂಪು। ತ್ವಂ। ಯಿಷ್ಟಲಿಂಗವು। ಅಸಿ। ಆಗುತ್ತಿರ್ದಪೆಯು। ಯಿಂತಿದು। ಹೀಗಾದಂಥ। ಸತ್। ಸದ್ರೋಪವಾದಿಷ್ಟಲಿಂಗವು। ಚಿದ್ರೂಪ। ಚಿದ್ರೂಪವಾದ। ಪ್ರಾಲಿಂಗವು। ದೀಪ। ಪ್ರಕಾಶಸ್ವರೂಪವಾದ ಭಾವಲಿಂಗವು। ಪರಮುಪ್ರಭುವೆ। ಯೆಲೆ ಪರಮ ಶಿವಲಿಂಗವೆ ॥೩೪॥

ವಿಷಯ : ವೀರಶೈವ ಸಿದ್ಧಾಂತ ಪ್ರತಿಪಾದನೆ.

ವಿಶೇಷ : ಅಸಮಗ್ರ. ೧೮ನೆಯ ಪತ್ರ ಸ್ವಲ್ಪ ಮುರಿದುಹೋಗಿದೆ. ಇದರೊಂದಿಗೆ ಪ್ರಭುಲಿಂಗ ಕಂದ, ಶೀಲವಂತಯ್ಯನ ತ್ರಿವಿಧಿ ವೊದಲಾದ ಇತರ ೧೫ ಗ್ರಂಥಗಳಿವೆ. ಶಕಟರೇಫ ಪ್ರಯೋಗವಿದೆ.

1271

ಕೆ. ೪೬೮ ೧	**ಮರುಳದೇವರ ಹಾಡುಗಳು**	ಹಾಡು
೧೩.೮″ × ೧.೮″	ಮರುಳದೇವ	ಸು. ೧೧೬೦
೧೩೫–೧೯೯ ಪತ್ರ	೧೧ ಪಂಕ್ತಿ	೬೦ ಅಕ್ಷರ

ಆದಿ : ಮರುಳುದೇವರು ನಿರೂಪಿಸಿದ ವಚನ।
ರಾಗ ಮುಖಾರಿ॥ ಸುರಚಿರ ಚಿದಂಬರೋದರನೋದಾಯತ
ವಜೀರು ಧರಿಸೂದು ಮಸ್ತಕದಿ ಶಿವಶರಣರು
॥ ಪದ॥ ಪರಮು ಭಕ್ತನ ಹೃದಯ ಚರ ಮುಕುಟ ಶೂನ್ಯದಿಂದುರಚಿದಂಬರವದ ಅ ತೆರನನಜೀದೂ ಬರವುದು ತರದಿಂದೆ ದಕ್ಷಿಣಕ್ಕಾಗಿ ಹಂನೆರಡು ರೇಖೆಯ ಪೂರ್ವ ಪಶ್ಚಿಮುಕ್ಕೆ ಬರೆ ಬಾರಹವ ತುದಿಗಳೊಳು ತ್ರಿಶೂಲ ಗೆಯಿದವ

ರೊಳೇರಿಸು ಶ್ರೀ ಕಾವಳಿಯ ನಾಲ್ವತ್ತೆಂಟವರ ಚೌಕ್ಯ ಮಧ್ಯದೊಳು ಬರೆ
ವೃತ್ತವೆರಡನುದ್ಧರಿಸು ರಸಪಂಚವರ್ನದನಾದಐಖೊಳು ॥ ೧ ॥

ಅಂತ್ಯ : ಲಕ್ಷಿಪುದು ತ್ವಕ್ಕಿನೊಳು ಶಾಲ್ಮಲಿ ಮೇದಸ್ಸಿನೊಳು ಪಕ್ಷರೋಮದಿ ಪುಷ್ಕರಂ ಮೂತ್ರ ಲವಣಂಬ್ಧಿಯಿಾಕ್ಷಿಸಲ್ ಕ್ಷೀರ ಕ್ಷೀರಾಬ್ಧಿ ದಧಿ ಸರಧಿ ಸೇಷ್ಮಂ ಮಜೆ ಘ್ರುತಸಾಗರಂ । ಯಿಕ್ಷುಸಾಗರ ರಸಂ ಶ್ರೋಣಿತ ಸುರಾಬಿ ಪ್ರತ್ಯಕ್ಷ ಸ್ವಾದೋದರ್ನವಂ ಲಂಬಿಕಾಸ್ಥಾನ ಸಾಕ್ಷಾತ ಗರ್ಭೋದ ಸರದಿ ಶುಕ್ಲಂ ನಾದ ಚಕ್ರದೊಳಗಾಡಿತ್ಯನು ಯಿರೇ ಶರಣ ॥ ೩ ॥....
....ಂತಿಲ್ಲದನುಪಮಾನಂದ ನಿಜಗುರು ಸಿದ್ಧಶಾಂತ ಪರಕೆ....ರಣಾ ॥ ೫ ॥
ಅಂತು ಸ್ವರ ೧೫೬ಕ್ಕಂ ಪದ ೫೦೨ಕ್ಕಂ ॥ ಮುರುಳುದೇವರು ನಿರೂಪಿಸಿದ ವಚನ ಸಮಾಪ್ತಣಂ ಮಂಗಳಮಹಾ ಶ್ರೀ.

ವಿಷಯ : ಷಟ್‌ಸ್ಥಲ ವೇದಾಂತ.

ವಿಶೇಷ : ಪ್ರಕೃತ ಗ್ರಂಥವು ೩೪ ಪತ್ರಗಳನ್ನೊಳಗೊಂಡಿದೆ. ೧೬ಲನೆಯ ಪತ್ರವಿಲ್ಲ. ಆದುದರಿಂದ ಅಂತ್ಯದಲ್ಲಿ ೧೬೭ನೆಯ ಮತ್ತು ೧೯೯ನೆಯ ಪತ್ರಗಳಲ್ಲಿರುವ ವಾಕ್ಯಗಳನ್ನು ಬರೆದಿದೆ. ೧೯೯ನೆಯ ಪತ್ರವೊಂದು ಮಾತ್ರ ತ್ರುಟಿತ. ಶಕಟರೇಫ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಗುಮ್ಮಳಾಪುರದ ಸಿದ್ಧಲಿಂಗ ದೇವರು ನಿರೂಪಿಸಿದ ವಚನಗಳೂ ಇವೆ.

1272

ಕೆ.ಬಿ. ೪೬೩	**ಮುರುಳಸಿದ್ಧ ಸಾಂಗತ್ಯ**	ಸಾಂಗತ್ಯ
೭.೬"×೬"	?	?
೧–೭೫ ಪತ್ರ	೧೪ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ ಗುರು ಮುರಿಗ್ಯಾಸ್ವಾಮಿಗಳ ಪಾದಕ್ಕೆ ನಮಸ್ಕಾರಮಾಡಿ ಮುಂದೆ ಶಿಧ್ಧರಾಮೇಶ್ವರ ದೇವರಿಗೆ ನಮಸ್ಕಾರಮಂ ಮಾಡಿ ॥ ಮುರುಳು ಶಿಧ್ಧೇಶ್ವರನ ಸಂಗತ್ಯ ಪ್ರಾರಂಭ ಮಾಡುತ್ತೇನೆ. ಸಾಗಿಸಿಕೊಡುವಂತೆ ಮಾಡ್ಸಿಬೇಕ್ರ ಸ್ವಾಮಿಗಳೆ ನಿಂಮ್ಮ ಶಿಶುವಿನ ಶಿಶುವೆಂದು ಬೇಡಿಕೊಳ್ಳುತ್ತೇನೆ ಸಾಗಿಸಿಕೊಡ ಬೇಕು ॥
ಕಂದತ್ರಯಾ ॥
ಸದ್ಗುರು ನಿತ್ಯಾನಂದಂ
ಭಜಕರ ಭವದೂರನಾಶನ ದುರಿತವಿನಾಶನಂ
ಗಜಗಮನೆಯ ಮುರಿದೋಡಿಸಿ
ಅಜಹರ ಸುರರೊಡೆಯ ಸಲಹು ಮುರುಳುಶಿದ್ದೇಶಾ ॥

x x x x

ರಾಗ ಸಂಗತ್ಯ ಪದನೂ ||
ಶ್ರೀಗುರವೆ ಗತಿಯೆಂದು ಶ್ರೀಚರಣಕ್ಕೆ
ಶಿರವಾಗೀ ವಂದೀಶಿ ಮುಂದೀ ಕೃತಿಯಾ
ಗಿರಿಜೆಯ ವಲ್ಲಭನೆ ಸಿದ್ಧಲಿಂಗಾನೆ
ರಾಗದಿಂದಲಿ ಬಾಲಗೊಂಬೆ || ೧ ||

ಅಂತ್ಯ : ಮೇಧಿನಿಯೊಳು ಶಿದ್ಧೇಶಾನ ಕಾವ್ಯವಾ
ಆದರದಿಂದ ಕೇಳ್ವವರು
ಸಾದಿಸುವರು ಕೈಲಾಸಾದ ಪದವನೆನೆ
ಯ್ಯೆದಾನೆ ಸಂಧಿ ಸಂಪೂ || ೨೦೪ ||

ವಿಷಯ : ಮರುಳಸಿದ್ಧೇಶ್ವರನ ಚರಿತ್ರೆ.

ವಿಶೇಷ : ೭೪, ೭೫ನೆಯ ಪತ್ರಗಳಲ್ಲಿ ಮಂಗಳಾರತಿ ಪದ್ಯಗಳಿವೆ. ೭೩ನೆಯ ಪತ್ರದಲ್ಲಿ ಕಾವ್ಯ ಮುಕ್ತಾಯವಾಗಿದೆ. ಪತ್ರಗಳು ಬಹು ತೆಳುವಾಗಿವೆ. ಅಂತ್ಯದಲ್ಲಿ ಕೆಲವು ಶುದ್ಧ ಪತ್ರಗಳಿವೆ.

1273

ಕೆ.ಎ. ३೧೮ **ಮರುಳಸಿದ್ಧೇಶ್ವರ ಚಾರಿತ್ರ** ಕಂದ, ವಾರ್ಧಕಷಟ್ಪದಿ

೧३.२" × ೮.३" ದೇಪ ೧೫೮೭

೧–೧೮೦ ಪುಟ ೨೧ ಪಂಕ್ತಿ ೧೫ ಅಕ್ಷರ

ಆದಿ : ಮರುಳುಸಿದ್ಧೇಶ್ವರ ಚಾರಿತ್ರ ಶ್ರೀ ಉಜ್ಜನಿ ಮರುಳಸಿದ್ಧೇಶ್ವರ ದೇವಯ್ಯನವರ ಶ್ರೀ ಪಾದಪದ್ಮಂಗಳೆ ಗತಿ | ಶಾಲಿವಾಹನಶಕ ವರ್ಷಂಗಳು ೧೭३೭ನೆ ಯುವನಾಮ ಸಂವತ್ಸರದ ಮಾರ್ಗಶಿರ ಬ ೧೨ ಬುಧವಾರ ಪ್ರಥಮಾರಂಭವಂ ಮಾಡಿ ಉಜ್ಜನಿ ಮರುಳ ಸಿದ್ಧೇಶ್ವರನ ಚಾರಿತ್ರವ ಬರೆಯುವುದಕ್ಕೆ ಶುಭಮಸ್ತು

ಕಂದಾ || ಶ್ರೀ ಗುರು ಘನಗುರು ಮದ್ಗುರು
ಶ್ರೀಗಿರಿಜಾಧೀಶ ಉಜ್ಜನಿಯ ಪುರವಾಸಾ
ಶ್ರೀಗುರುವರನಣುಗ ಮದಾಪಹ
ಶ್ರೀಗುರು ಮಲ್ಲೇಶನೀವುದೆನಗತಿಮುದಮಂ || ೧ ||
ಶಿಲೆಯೊಳಗಗ್ನಿಯು ಶಬ್ದದೊ
ಳುಲುಹಿನ ನಿಃಶಬ್ದ ಕಳೆಯು ತೋರ್ಪಂತೆಯುತಾ

ಜಲದೊಳು ಪ್ರತಿಬಿಂಬವು ಬೀ
ಜದೊಳೊಲವಿಂ ತೋರ್ಪ್ಪ ತೆರದಿ ತೋರುವುದೀ ಕೃತಿ || ೨ ||

x x x x

ಪಶುಪತಿ ಸ್ವಯಂಭು ಬಾಳ್ಗುಳಿಯ ಕಲಿದೇವನಿಂ
ತುಸುರಿದೊಲು ದೇಪ ಪೇಳ್ದಂ ಹರನ ಕೃತಿ
ರಸವನೊಸೆದು ಲಾಲಿಸಿ ತಿದ್ದಿ ಕೇಳುವರ ಪದಧೂಳಿ
ಪಸರಿಸುವುದೆನ್ನ ತನುವಾ || ೧೬ ||

ಅಂತ್ಯ : ಈ ಕೃತಿಯು ಮರುಳಸಿದ್ಧೇಶ ಚರಿತಂ ಇದನ
ವ್ಯಾಕುಲದಿ ಕೇಳ್ದ ಶಿವಭಕ್ತ ಜನಕಂ ಅಭವ
ತಾ ಕೊಡುವ ಚತುರ್ಪದವ ವಿಾರಿದೈಶ್ವರ್ಯವನು ಈ ಕಲಿಯುಗದೊಳವರಿಗೆ
ನಾಲ್ಕುಯುಗಕಂ ಯಿದೆಯಾದಿ ಚಾರ್ವಾಕರಿದ
ನೂತನೆನ್ನಲು ನಾಯಕಂ ನರಕ ತಪ್ಪದೀ
ನೀತಿಶಾಸ್ತ್ರಕ್ಕಾರು ಪೀಠಿಕೆ ಸಮಸ್ತಪದ
ನಾನುರೆಂಭತ್ತುನಾಲ್ಕು || ೮೩ ||

ಅಂತು ಸಂಧಿ ೬ಕ್ಕಂ ಪದನು ೪೮೪ಕ್ಕಂ ಮಂಗಳಮಹಾ ಶ್ರೀ
ಶಾಲಿವಾಹನಶಕ ವರ್ಷಂಗಳು ೧೭೩೭ನೇ ಯುವನಾಮ ಸಂವತ್ಸರದ ಮಾಘ
ಶು ೧ಕ್ಕೆಂ ಮುಗಿಯಿತು || ಶ್ರೀ ಶ್ರೀ

x x x x

ವೋಬುಳಾಪುರದ ತೆಲುಗ ಬಾಳ ಮರಿಸಿದ್ದಪ್ಪನವರಿಗೆ ಮಹಾಗುರುಪುತ್ರನಾದ
ಮಾಯಿಕೊಂಡದ ವೊಂದಿ ಸೊಲಿಂಗನು ಪುತ್ರ ಪೌತ್ರ ಸಕಲ ಸಾಮ್ರಾಜ್ಯಾಭಿ
ವೃದ್ಧಿಯಾಗಲೆಂದು ಶ್ರೀಗುರು ಸಿದ್ಧಲಿಂಗನ ಕೃಪಾಕಟಾಕ್ಷದಿಂ ಹರಸಿ ಬರೆದು
ಕೊಟ್ಟ ಮರುಳುಚಾರಿತ್ರಕ್ಕೆ ಶುಭಮಸ್ತು || ಶ್ರೀ

ವಿಷಯ : ಮರುಳಸಿದ್ಧೇಶ್ವರನ ಚರಿತ್ರೆ.

ವಿಶೇಷ : ಪದ್ಯಗಳ ಪಾದಗಳನ್ನು ವಿಂಗಡಿಸಿ ಬರೆದಿದೆ. ಆದರೆ ಅದು ಸರಿಯಾಗಿಲ್ಲ.

1274

ಕೆ. ೧೭೬/೨ **ಮಲಯರಾಜ ಸ್ತೋತ್ರದ ಟೀಕು** ಶ್ಲೋಕ, ಟೀಕು

೧೦.೧" × ೨" ? ?

೨೫–೪೨ ಪತ್ರ ೧೧ ಪಂಕ್ತಿ ೪೫ ಅಕ್ಷರ

ಆದಿ : ಮಲಯರಾಜಸ್ತೋತ್ರದ ಟೀಕಿನ ಗ್ರಂಥಾ.

ಕಂಠೇಕಾಂ ಕಾಲಕಾಲಂ ಕಾಲಾತೀತಂ ವಿಭುಂ ಹರಂ |
ಶುದ್ಧಸ್ಫಟಿಕಸಂಕಾಶಂ ವಂದೇ ಶಶಧರಂ ಧರಂ ||
ಯಿಾ ಸ್ತೋತ್ರಾರಂಭವನು ಮಾಡುತ್ತಿರ್ದ್ದಪಂ.
ವೃ|| ಯೋ ನಧಿಯಾಮಧಿಗಮ್ಯಸ್ತಸ್ಯ ಕುಸಂಭವೋ ಗಿರಾಂ ವೃತ್ತೇಃ |
ಸ್ವಾಮಿಸ್ತಥಾಸಿ ಭವಂತಂ ಮನೋರಥೋ ಯಾತ್ಯಭೂಮಿಮಪಿ ||
ಟೀಕು || ಯಃ | ಆವನಾನೊಬ್ಬ ಪರಮೇಶ್ವರನೂ | ಧೀಯಾಂ | ಮನೋ ಬುದ್ಧಿಗಳಿಂದೆ | ಅಧಿಗಮ್ಯಃ | ಅರಿಯಲು ಯೋಗ್ಯವಾಗಿದ್ದಾತನು |

ಅಂತ್ಯ : ಮಲಯನರಪತಿಃ | ಮಲಯರಾಜದೇವನು | ನವಾಂಕೈರ್ಲ್ಲಕ್ಷೈಃ ರಾಜ್ಯೈಃ ಸಹ | ವಂಭತ್ತುಲಕ್ಷ ದೇಶಂಗಳೊಡನೆ ಕೂಡಿದಾತನಾಗುತಲೂ | ಭಕ್ತ್ಯಾ | ಶಿವಭಕ್ತಿಯಿಂದ | ಶಿವಪುರಂ | ಕೈಲಾಸವನು | ಅಯಾತ್ | ಯಯ್ದಿದನೂ | ಹಿ | ಪ್ರಸಿದ್ಧವು || ೭೬ ||
ಮಲಯರಾಜಸ್ತೋತ್ರದ ಟೀಕು ಪರಿಸಮಾಪ್ತಂ.

ವಿಷಯ : ಮಲಯರಾಜನ ಸ್ತುತಿ.

ವಿಶೇಷ : ಈ ಕಟ್ಟಿನಲ್ಲಿ ಅನಾಮಯ ಸ್ತೋತ್ರ, ಹಲಾಯುಧ ಸ್ತೋತ್ರ ಮೊದಲಾದ ಇತರ ಗ್ರಂಥಗಳಿವೆ.

1275

ಕೆ. ೧೫/೧	**ಮಲ್ಲಿನಾಥಪುರಾಣ**	ಚಂಪು
೧೦.೯" × ೧.೮"	ನಾಗಚಂದ್ರ	ಸು. ೧೧೦೦
೧–೧೮೪ ಪತ್ರ	೯ ಪಂಕ್ತಿ	೪೫ ಅಕ್ಷರ

ಆದಿ : ಶ್ರೀಮಲ್ಲಿನಾಥಾಯ ನಮಃ ||
ಶ್ರೀಪಾದಂ ಬಾಲಚಂದ್ರೋಜ್ವಲತರ ಸುಮನೋವರ್ಷದಿಂ ಪಾದಪೀಠಂ
ಭೂಪಾಲೋತ್ತಂಸ ತಾರಾತರಳಮಣಿಗಳಿಂದುತ್ತಮಾಂಗಂ ಶರಜ್ಯೋ
ತ್ಸ್ನಾಪಾಂಡುಚ್ಛತ್ರರತ್ನಂಗಳಿನಱಪೆ ನಿಜೈಶ್ವರ್ಯ್ಯಮಂ ದಿವ್ಯಭಾಷಾ
ವ್ಯಾಪಾರೋದಾರನಾದಂ ಕುಡುಗೆಮಗೆ ಸುಖಾವಾಪ್ತಿಯಂ ಮಲ್ಲಿನಾಥಂ ||

x x x x

(ಪತ್ರ ೫–ಪಂಕ್ತಿ ೯)
ಭರತಮಹೀಶ್ವರಂಗೆ ಮಗಧೇಶ್ವರಮಂಡಲಿಕಂಗೆ ತಾರಭೂ
ಧರ ವಿಪುಲಾದ್ರಿಯೊಳ್ ವೃಷಭಸೇನ ಗುಣಾಗ್ರಣಿ ಗೌತಮೋತ್ತಮಂ
ಪುರುಜಿನ ವರ್ದ್ಧಮಾನಗುರು ಸಂನಿಧಿಯೊಳ್ತಿಳಿವಂತು ಪೇಳ್ದುದಂ
ವಿರಚಿಸುವೆಂ ಮನಂ ಬಯಸೆ ಮಲ್ಲಿಜಿನೇಂದ್ರ ಮಹಾಪ್ರಬಂಧಮಂ ||

ಅಂತ್ಯ : ಸುಕೃತಿಪ್ರೀತಿಲತಾಸಮುತ್ಕಳಿಕೆ ವಿದ್ವಂನ್ಮಂಡಳಿ ರತ್ನಕಂ
ಠಿಕೆ ಧರ್ಮ್ಮಾಮೃತ ಮೇಘಮಾಳಿಕೆ ವಚಶ್ರೀ ನರ್ತ್ತಕಿ ನೃತ್ಯವೇ
ದಿಕೆ ಸಾಹಿತ್ಯಸರೋಜಕರ್ಣ್ಣಿಕೆ ಯಶಃಶ್ರೀ ಕೇಕರಾಣಕ ಚಂ
ದ್ರಿಕೆ ನಿಲ್ಕೆಕೃತಿ ಕಲ್ಪಕೋಟಿವರೆಗಂ ಭದ್ರಂ ಶುಭಂ ಮಂಗಳಂ ||
ಗದ್ಯ || ಇದು ಪರಮ ಜಿನಸಮಯ ಕುಮುದಿನೀಶರಚ್ಚಂದ್ರ ಬಾಳಚಂದ್ರ ಮುನೀಂದ್ರ ಚರಣನಖಕಿರಣಚಂದ್ರಿಕಾಚಕೋರ ಭಾರತೀಕರ್ನ್ನಪೂರ ಶ್ರೀಮದಭಿನವಪಂಪ ವಿರಚಿತಮಪ್ಪ ಮಲ್ಲಿನಾಥಚರಿತ ಪುರಾಣದೊಳ್ ಪರಿನಿರ್ವಾಣಕಲ್ಯಾಣವರ್ನ್ನನಂ ಚತುರ್ದ್ದಶಾಶ್ವಾಸಂ ||
೧೪ || ಶ್ರೀ ಉದ್ಯೋಗಪುರದ ಚಂದ್ರನಾಥಯೇ ನಮಃ|| ಸ್ವಸ್ತಿ ಶ್ರೀ ವಿಜೆಯಾಭ್ಯುದಯ ಶಾಲಿವಾಹನ ಶಕಾಬ್ದ ೧೬೩೯ ಸಂದಾ । ವರ್ತ್ತಮಾನ ವಿಳಂಬಿ ಸಂವತ್ಸರೇ ಉತ್ತರಾಯಣೇ ವಸಂತರುತೌ ಮಧುಮಾಸಪ್ರಯುಕ್ತೆ ಬಲಕ್ಷಪಕ್ಷೆ ಸಂತಾನಸಪ್ತಮಿಾ ಸತ್ತಿಥೌ ವಾಚಸ್ಪತಿ ವಾಸರಸ್ಯ ದಿನಮಣಿದುದಯೆದೂರ್ಧ್ವಮೇಕವಿಂಶತಿ ಘಟಿಕಾನಂತರೆ ಪಂಚಾಸ್ಯ ಲಗ್ನದಲ್ಲಿ ಮತ್ತಿತ್ತಾಲೂನಂಗಲೆಯ ಕೃತ್ರಿಮ ಚೈತ್ಯಾಲಯದೊಳುಪ್ಪುತಿರ್ಪ್ಪ || x x x x ಕಾಶ್ಯಪ್ರಪರ । ವೃತ್ತಾನುಯೋಗ ಶಾಖೋದಯನಾದ ದೇವರಸೈಯ್ಯನ ಸೇವ್ಯಶೃಂಗಾರ x x x ಸ್ವಧರ್ಮಕಾವ್ಯಾನುಸೇವ್ಯನಾದ ಬೊಂಮರಸೈಯ್ಯನಿಗೆ ತದ್ಗೋತ್ರಜ ತದ್ವಿರುದಾವಂ ವಿರಾಜಮಾನನಾದ ಪಡಣದಣದ ಪುರಿವಾಸ ಅಮರಚಂದ್ರನ ಗರ್ಭ್ಭಜನಪ್ಪ ಸ್ನೇಹಗುಣಪ್ರಶಸ್ತನಾದ ವಿಜೈಯ್ಯನೂ ಮಲ್ಲಿನಾಥಪುರಾಣಮ ಮನವೊಲ್ದು ಲಿಖಿಸಿದೆಂ.

ವಿಷಯ : ಜಿನತೀರ್ಥಂಕರ ಮಲ್ಲಿನಾಥನ ಚರಿತ್ರೆ.

ವಿಶೇಷ : ಸುಂದರ ಬರಹ. ಶಕಟರೇಫವಿದೆ. ೩೮, ಮತ್ತು ೬೪ನೆಯ ಪತ್ರಗಳಿಲ್ಲ. ೧೫೬ನೆಯ ಪತ್ರ ಮುರಿದಿದೆ. ಇದೇ ಕಟ್ಟಿನಲ್ಲಿ ಸ್ತೋತ್ರಗಳ ಸಂಗ್ರಹವೆಂಬ ಮತ್ತೊಂದು ಕೃತಿಯಿದೆ.

1276

ಕೆ.ಎ. ೩೯	**ಮಲ್ಲಿನಾಥಪುರಾಣ**	ಚಂಪು
೧೨.೯" × ೭.೯"	ನಾಗಚಂದ್ರ	ಸು. ೧೧೦೦
೧–೧೦೩ ಪತ್ರ	೨೮ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ಪಂಚಗುರುಭ್ಯೋ ನಮಃ || ಶುಭಮಸ್ತು ||
ಶ್ರೀಪಾದಂ ಬಾಲಚಂದ್ರೋಜ್ವಲತರ ಸುಮನೋವರ್ಷದಿಂ ಪಾದಪೀಠಂ
ಭೂಪಾಲೋತ್ತಂಸ ತಾರಾತರಳಮಣಿಗಳಿಂದುತ್ತಮಾಂಗಂ ಶರಜ್ಯೋ

ತ್ಸ್ನ್ಕ ಪಾಂಡುಚ್ಛತ್ರರತ್ನಂಗಳಿನಟಿಪ ನಿಜೈಶ್ವರ್ಯ್ಯಮಂ ದಿವ್ಯಭಾಷಾ
ವ್ಯಾಪಾರೋದಾರನಾದಂ ಕುಡುಗೆಮಗೆ ಸುಖಾವಾಪ್ತಿಯಂ ಮಲ್ಲಿನಾಥಂ॥ ೧ ॥

x x x x

ಭರತಮಹೀಶ್ವರಂಗೆ ಮಗದೇಶ್ವರಮಂಡಳಿಕಂಗೆ ತಾರ ಭೂ
ಧರ ವಿಪುಳಾದ್ರಿಯೊಳು ವೃಷಭಸೇನಗಣಪ್ರಭು ಗೌತಮೋತ್ತಮಂ
ಪುರುಜಿನವರ್ದ್ಧಮಾನಗುರು ಸಂನಿದಿಯೊಳು ತಿಳಿದಂತು ಪೇಳ್ದುದಂ
ವಿರಚಿಸುವೆಂ ಮನಂ ಬಯಸೆ ಮಲ್ಲಿಜಿನೇಂದ್ರಮಹಾಪ್ರಬಂದವಂ ॥ ೫೨ ॥

ಅಂತ್ಯ : ಸತತಂ ಪರಿಭಾವಿಸೆಮಳ
ಚತುರ್ದ್ದಶಂಗಳನದಿಪ್ಪುರ್ವ್ವದುಂ ಚಿತ್ರಚಮ
ತ್ಕೃತಿ ಮಲ್ಲಿನಾಥಪುರಾಣಂ
ಚತುರ್ದಶಾಶ್ವಾಸಮುಚಿತಪದವಿನ್ಯಾಸಂ

x x x x

ಗದ್ಯ ॥ ಇದು ಪರಮ ಜಿನಸಮಯ ಕುಮುದಿನೀಶರಚ್ಚಂದ್ರ ಬಾಳಚಂದ್ರ ಮುನೀಂದ್ರ ಚರಣ ನಖಕಿರಣ ಚಂದ್ರಿಕಾಚಕೋರಂ ಭಾರತ ಕರ್ನ್ನಪೂರ ಶ್ರೀಮದಭಿನವಪಂಪ ವಿರಚಿತಮಪ್ಪ ಮಲ್ಲಿನಾಥಪುರಾಣದೊಳು ಪರಿ ನಿರ್ವ್ವಾಣ ಕಲ್ಯಾಣ ವರ್ಣ್ನನಂ ಚತುರ್ದ್ದಶಾಶ್ವಾಸಂ ಶ್ರೀ.

ವಿಷಯ : ಜಿನತೀರ್ಥಂಕರ ಮಲ್ಲಿನಾಥನ ಚರಿತ್ರೆ.

ವಿಶೇಷ : ಅಲ್ಲಲ್ಲಿ ಗ್ರಂಥಲೋಪವಿದೆ. ಮೋಡಿ ಬರಹ. ಶಕಟರೇಫವಿದೆ. ಆದಿಯ ಪ್ರತ್ಯೇಕ ಎರಡು ಪತ್ರಗಳಲ್ಲಿ ವಿಷಯಸೂಚಿ ಇದೆ.

1277

ಕೆ. ೫೦೯	**ಮಲ್ಲೇಶ್ವರ ಚರಿತ್ರೆ**	ಯಕ್ಷಗಾನ
೧೬.೬"×೧.೫"	ಕಾಶಿರಾಜ	?
೧–೫೨ ಪತ್ರ	೫ ಪಂಕ್ತಿ	೭೦ ಅಕ್ಷರ

ಆದಿ : ಶ್ರೀಗಣಾಧಿಪತಯ ನಮಃ ॥ ಮಲ್ಲೇಶ್ವರನ ಚೆರಿತ್ರೆ ಬರವುದಕ್ಕೆ ಆಯುರಾರೋಗ್ಯ ಐಶ್ವರ್ಯ ಶುಭ ॥
ದ್ವಿಪದೆ ॥ ಶ್ರೀ ಗಿರಿಜಾಧೀಶ ಶ್ರೀಗಿರಿವಾಸಾ
ನಾಗಚರ್ಮಾಂಬರನೆ ನಮಿತ ಭೂತೇಶಾ
ಯೋಗೀಶ ಹೃತ್ಪದ್ಮನಿಲಯ ಪ್ರಕಾಶಾ ॥
ಕರಿ ಚರ್ಮಧಾರ ಶಿವ ಕರುಣವಿಸ್ತಾರ

ಅಂತ್ಯ : ಲಕ್ಷಣಯುತ ನಂದರಾಮನ ಪೌತ್ರಾ
ಲಲಿತ ಲಕ್ಷದಾ ಸುಪುತ್ರಾ ||
ಕಮಲಾಂಬ್ಬ ಗರ್ಭಾಬ್ದಿ ಶಿಂದು ಚೆಂದ್ರಮನೂ
ವಿಮಲಾತ್ಮ ಕೃಷ್ಣಾರ್ಯ ಪ್ರಿಯಶಿಷ್ಯನಾದಾ ||
ಕಾಶಿರಾಮು ಕವಿಬ್ಬೃಂದ ಶೇವಕನೂ
ಕಾಶಿ ವಿಶ್ವೇಶ್ವರನ ಕರುಣದಿಂದಾ ||
ಲೇಸಾದ ಶ್ರೀ ಗಿರೀಶ್ವರನ ಚರಿತ್ರೆ
ಯಕ್ಷಗಾನವಂ ಪೇಳ್ದಿಯಲ್ಲ ಜವರಿಗೆ
ಸಾಕ್ಷಾತು ಪರಬ್ರಂಹ್ಮ ಮೂರ್ತಿ ಮಹಿಮೆಯನೂ ||

x x x x

ಧರೆಯೊಳಗೆ ಯಿಾ ಕೃತಿ ದೈವರೂಪವಾಗಿ
ಸರಸರೇಣುಕವುರಿ ಶಿವನು ಕೃಪೆಯಾಗಿ
ಸ್ಥಿರವಾಗಿ ನಟಿಸುವದು ಶ್ರೀಕರವಾಗೀ ||
ಮಲ್ಲಿಕಾರ್ಜುನ ಚರಿತ್ರೆ ಸಂಪೂರ್ನಂ ಮಂಗಳಮಹಾ ಶ್ರೀ.
ಶ್ರೀಮುಖನಾಮ ಸಂವತ್ಸರದ ಆಷಾಢ ಬ ೧೦ ಗುರುವಾರದವರಿವಿಗೆ ಮಲ್ಲೇಶ್ವರನ ಚರಿತ್ರೆ ಮುದಂಣನವರ ಕೊಮಾರ ರುದ್ರನಿಗೆ ವಡಿಗೇನಹಳ್ಳಿ ಸ್ತಳದ ಪುರೋಹಿತನಾದ ಸೇಷಭಟ್ಟರ ಮಂಮ್ಮಗನಾದ ಪುಟ್ಟಪ್ಪನು ಹರಶಿ ಬರಕೊಟ್ಟ ಮಲ್ಲೇಶ್ವರನ ಚರಿತ್ರೆ ಯಕ್ಷಗಾನಕೆ ಆಯುರಾರೋಗ್ಯಮಸ್ತು ||

ವಿಷಯ : ಮುಕ್ತಿಸಾಧಕನಾದ ಮಲ್ಲಿಕಾರ್ಜುನನ ಕಥೆ.

ವಿಶೇಷ : ಕೆಲವು ಗರಿಗಳ ಅಂಚುಗಳು ಮುರಿದಿವೆ. ೧೦–೨೪ರ ವರೆಗಿನ ಗರಿಗಳಿಲ್ಲ.

1278

ಕೆ. ೩೨೫/೭೫ **ಮಲ್ಲೇಶ್ವರ ಪುರಾಣದ ನಾಂದ್ಯ** ವಾರ್ಧಕಷಟ್ಪದಿ

೯.೫" × ೨" ? ?

೩೬–೪೨ ಪತ್ರ ೧೧ ಪಂಕ್ತಿ ೫೩ ಅಕ್ಷರ

ಆದಿ : ಮಲ್ಲೇಶ್ವರನ ಪುರಾಣದ ನಾಂದ್ಯವ ಬರವುದಕ್ಕೆ ಶುಭಮಸ್ತು ||
ಗುರುವೆ ಪರಿಪೂರ್ನ್ನ ಪರಮಾತ್ಮ ಪರಮಾನಂದ
ದಿರವೆ ನಂಬಿದರಾತ್ಮದೊಳಗೆಸವ ಸತ್ಯಸಾ
ಗರವೆ ಸಚರಾಚರವ ನೆನಹು ಮಾತ್ರದಿ ಪಾವನವ ಮಾಳ್ಪ ಕಲ್ಪತರುವೇ

ಇರವೆ ಸದ್ಭಕ್ತಜನಾರಾ ಮನದ ಕೊನೆಯಲ್ಲಿ
ಮೊರೆವರೋಂಕಾರನಾದಕ್ಕೆ ಪರವಶಗೊಂಡು
ಶಿರವ ತೂಗಾಡುತಿಹ ಗುರುಮೂರ್ತಿ ಸಲಹೆಂನ ಮಲ್ಲೇಶ ಪಾರ್ವತೀಶಾ॥ ೧ ॥

ಅಂತ್ಯ : ಗುರು ಚೆಂನಮಲ್ಲೇಶ ಪಾರ್ವತೀಶ್ವರ ಶುಭ
ಕರಚರಿತೆ ನಾಧ್ಯಗಳ ಬರದೋದಿ ಕೇಳಿದವರ್ಗ್ಗೆ
ದೊರಕುವದಭೀಷ್ಟಾರ್ಥಸಿದ್ಧಿ ಸಿದ್ಧಿಸುಗು ಭವದುರಿತ ಕಂಠಕವಳಿವುದು
ಪರಮ ಪಂಚಾಕ್ಷರಿಯ ಸ್ಮರಿಸುತ್ತಲಾವಾಗ
ಗುರುಲಿಂಗ ಜಂಗಮದ ಪಾದತೀರ್ತ್ಥವಮ್ರುತವ
ನೆಂದು ರಕ್ಷಿಸುವ ಮಮಕತ್ರ್ಥ ಮದ್ಗುರು ಚೆಂನಮಲ್ಲೇಶ ಪಾರ್ವ್ವತೀಶಾ॥೭೧॥
ಮಲ್ಲೇಶ್ವರ ನಾಧ್ಯಪದ ಸಮಾಪ್ತ ಮಂಗಳಮಹಾ ಶ್ರೀ

ವಿಷಯ : ನಾಂದೀ ಪದ್ಯಗಳು.

ವಿಶೇಷ : ಶಕಟರೇಫವಿದೆ. ಎಲ್ಲ ಪದ್ಯಗಳೂ ಮಲ್ಲೇಶ ಪಾರ್ವತೀಶ ಎಂದು ಮುಗಿಯುತ್ತವೆ. ಇದೇ ಕಟ್ಟಿನಲ್ಲಿ ಚೆನ್ನಬಸವೇಶ್ವರ ಪುರಾಣದ ನಾಂಧ್ಯ, ಬಸವೇಶ್ವರಪುರಾಣದ ನಾಂಧ್ಯ ಮೊದಲಾದ ಇತರ ೨೪ ಗ್ರಂಥಗಳಿವೆ.

1279

ಕೆ. ೩೫/೧	**ಮಲ್ಲೇಶ್ವರ ಶತಕ**	ವೃತ್ತ
೧೨" × ೧.೩"	ಸಿರಿನಾಮಧೇಯ	ಸು. ೧೫೫೦
೧–೧೫ ಪತ್ರ	೬ ಪಂಕ್ತಿ	೪೮ ಅಕ್ಷರ

ಆದಿ : ವೃತ್ತ ॥ ಶ್ರೀಗೌರೀ ನಖಕಾಂತಿನೇಕವಿಲಸತ್ಪ್ರೋದ್ಭೂತಶುಭ್ರಾಶುಉಂ
ಭೋಗೀಶಾವಲಯತ್ಪದಂಗಕಿರಣಂ ವಿಶ್ವಾಂಡಮಂ ವ್ಯಾಪಿಸಲ್
ವಾಗೀಶಾಂಡಮನಂತಕೋಟ ಶರಧಿಸ್ಫೋಟಂಬೊಲಿಂಬಾಗೆ ತೋ
ರ್ಪ್ಪೀ ಗೌರೀ ಶಿವಮೂರ್ತಿಯುಂ ಸ್ತುತಿಪೆನಾಂ ಶ್ರೀಶೈಲ ಮಲ್ಲೇಶ್ವರಾ ॥ ೧ ॥

ಅಂತ್ಯ : ಶರಣೆಂಬೆಂ ಬಸವೇಶ್ವರಂಗೆ ವಿಪುಳಶ್ರೀ ಮಾಚಿದೇವಂಗೆ ಸಾ
ದರಮಾ ಚೆಂನವೃಷಾಧಿಪಂಗೆ ಜಸವೆತ್ತಾ ಸಿದ್ಧರಾಮಂಗೆ ವಿ....
........ನಂದ ಗುಹೇಶ್ವರಪ್ರಭು ಲಿಂಗಾಂಗೈಕ್ಯಸೌಖ್ಯಾಬ್ಧಿ ಭಾ
ಸುರ ರೂಪಂಗಜಗಂಣಯೋಗಿಗನಿಶಂ ಶ್ರೀಶೈಲ ಮಲ್ಲೇಶ್ವರಾ ॥ ೧೧೧ ॥
ಇತಿ ಶ್ರೀಮತ್ಪರಮ ಶಿವಶರಣಚರಣ ಚಾಮಿಾಕರಾರವಿಂದ ನಿಷ್ಯಂದ ಮಾನ
ಮಕರಂದರಸಲಲಾಮಲಲಾಟತಟವಿರಾಜಿತ ಶ್ರೀಮತ್ಸಿರಿನಾಮಧೇಯ ವೀರ

ಮಾಹೇಶ್ವರ ವಿರಚಿತಮಪ್ಪ ಶ್ರೀಶೈಲ ಮಲ್ಲೇಶ್ವರಾಂಕಿತ ವಿಲಸದಷ್ಟಾವರಣ ಸ್ತೋತ್ರ ಶತಕಂ ಸಮಾಪ್ತಂ ಮಂಗಳಂ ಶ್ರೀ.

ವಿಷಯ : ವೀರಶೈವ ತತ್ತ್ವದ ವಿವರಣೆ.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಪಾರ್ವತೀವಲ್ಲಭಶತಕ, ಉಮಾಮಹೇಶ್ವರಶತಕ, ಪ್ರಾಣನಾಥಶತಕ, ಶ್ರೀಕಂಠಸೋಮೇಶ್ವರಶತಕ, ಕಂದಶತಕ, ಪ್ರಭುದೇವರ ಪುರಾಣದ ನಾಂದ್ಯಗಳು, ಮಹಿಮ್ನಸ್ತೋತ್ರ, ಶಿವಪೂಜಾವಿಧಾನ, ಚೇರಮಕಾವ್ಯ ಎಂಬ ಗಂಥಗಳಿವೆ.

1280

ಕೆ. ೧೭೬/೨ **ಮಲ್ಹಣ ಸ್ತೋತ್ರದ ಟೀಕು** ಶ್ಲೋಕ, ಟೀಕು

೧೦.೧″ × ೨″ ? ?

೧೪–೨೫ ಪತ್ರ ೧೩ ಪಂಕ್ತಿ ೫೫ ಅಕ್ಷರ

ಆದಿ : ಮಲ್ಹಣ ಸ್ತೋತ್ರದ ಟೀಕು

ಚಂದ್ರಾರ್ದ್ಧಮೌಲಿಂ ಕಾವುರಿಂ ,ಭುಜಗಾವಲಿಭೂಷಿತಂ ।
ಕಂಠೇ ಕಾಲಂ ಮಹಾದೇವಂ ನಮಾಮಿ ಗಿರಿಜಾಪತಿಂ ॥
ವೃ ॥ ಕಾಂತಾಕಚಪ್ರಚಯ ಪುಷ್ಪಸುಗಂಧಿಗಂಧ ।
ಲುಬ್ಧ ಭ್ರಮದ್ಭ್ರಮರ ಕರ್ಬ್ಬುರ ಕಂಧರಾಯ ॥
ಕಾಂತಾ । ಸ್ತ್ರೀಯರುಗಳ । ಕಚ । ಕೇಶಂಗಳ । ಪ್ರಚಯ । ಮುಡಿಗಟ್ಟಿನಲ್ಲಿಯ । ಪುಷ್ಪ । ಪುಷ್ಪಂಗಳ । ಸುಗಂಧಿ । ಸೊಗಸುವ ಗಂಧವನುಳ್ಳಂಥಾ । ಗಂಧ । ವಾಸನೆಯಲ್ಲಿ । ಲುಬ್ಧ । ಲೋಲುಪ್ತವಾದ ಕಾರಣವಾಗಿ । ಭ್ರಮತ್ । ಭ್ರಮಿಸುತ್ತಿರ್ದ್ದ । ಭ್ರಮರ । ತುಂಬಿಗಳೋಪಾದಿಯ ।

ಅಂತ್ಯ : ಯಿದಂ ಸ್ತೋತ್ರಂ । ಯೀ ಗುಣಾಭಿಧಾನವಾದ ಸ್ತೋತ್ರವು । ಕೃತಂ । ಮಾಡಲುಪಟ್ಟಿತ್ತು । ಹೇ ಭಗವನ್ । ಯಲೆ ಷಡ್ಗುಣೈಶ್ವರ್ಯಸಂಪನ್ನನಹಂಥಾ ಶಿವನೆ । ಅತ್ರ । ಯೀ ಸ್ತೋತ್ರದಲ್ಲಿ । ಗದಿತಂತಿ । ಭಕ್ತಿಕಾರಣವೆಂದೀ ಪ್ರಕಾರದಲ್ಲಿ । ಕ್ಷಮಸ್ವ । ಸೈರಿಸು ॥ ೪೦ ॥
ಮಲ್ಹಣ ಸ್ತೋತ್ರದ ಟೀಕು ಸಮಾಪ್ತ.

ವಿಷಯ : ಮಲ್ಹಣನ ಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಮಹಿಮ್ನ ಸ್ತೋತ್ರದ ಟೀಕು, ಮಲಯರಾಜಸ್ತೋತ್ರದ ಟೀಕು ಮೊದಲಾದ ಗ್ರಂಥಗಳಿವೆ.

1281

ಕೆ. ೩೨೨/೮ **ಮಹತ್ವರತ್ನಮಾಲೆ ಮತ್ತು ಅಷ್ಟಾವಧಾನದ ಪದ** ಹಾಡು

೧೩" × ೨" ಶಾಂತವೀರದೇವ ? ?

೨೨–೨೮ ಪತ್ರ ೧೨ ಪಂಕ್ತಿ ೪೨ ಅಕ್ಷರ

ಆದಿ : ಶ್ರೀಗುರುವೆ ಗತಿ ॥ ಈಶನಧಿಕವೆಂದರಿಯಾದೆ ದೂಷಣೆಗೈದಾಚರಿಪ ದ್ವೇಸಿ ನಿನಗುತ್ತರವೆ ಕೇಳೆಲೆ ವಾದಿ ॥ ಪ ॥
ಭೃಗಿಮುನಿಯ ಶಾಪದಿಂದ ಮತ್ಸ್ಯಾದಿ ದಶಾವತಾರ । ವಡೆದು ವಿಷ್ಣುಲಿಂಗವರ್ಚ್ಚಿಸಿ ಅಘವ ಕಳೆದನೆಂದಾದಿತ್ಯ ಕೂರ್ಮ್ಮ ಪೌರಾಣಾವು ಸಾರೆ ವಿಗಡನೀನು ನಾಚಲಿಲ್ಲವೆ ಕೇಳೆಲೊ ವಾದಿ ॥ ೧ ॥

x x x x

ಶಾಂತವೀರದೇವ ಸರ್ವದೇವಾಧ್ಯಕ್ಷನೆಂದುಂತ್ಯಂತ ಶಾಸ್ತ್ರಸಾಕ್ಷಿಗಳಿಂದ ।
ಸಂತತೀಶ್ವರ ಮಹತ್ವರತ್ನಮಾಲೆಯಿದನು ಮತಿವಂತ ವಿ....ಪೇಳಿದಾ ॥ ೨೭ ॥
ಮಹತ್ವರತ್ನಮಾಲೆ ಸಂಪೂರ್ಣಂ ಶ್ರೀ ಶ್ರೀ ಶ್ರೀ.

x x x x

ಶ್ರೀಗುರುವೆ ಗತಿ ॥ ಅಷ್ಟಾವದಾನದ ಪದ ॥ ಅಷ್ಟಾವದಾನಿ ತಾನೆಂತೆನಲು ಪೇಳ್ವೆ ನಾನಿಷ್ಟ..........ನಹಂಗನಳಿದುಳಿದು ವೊಳಹೊರಗೆ । ಅಷ್ಟಾವದಾನದ ಭಕ್ತಿ ಪೂರ್ನವಾಗ್ಯಳವಡ........ಷ್ಟಾವದಾನಿ ಶರಣಾ ॥ ಪಲ್ಲ ॥

ಅಂತ್ಯ : ಕುಂಜರೆನಲಾಗೂಘಜಕನ ಗಮನ । ಮರಕಟನನೇಣ್ಕೆ । ಮೈಯುರನ ನಿದ್ರೆ । ಭಕನ ದ್ಯಾನ । ದೌಷ್ಪನ ಅನುಮಾನ । ಸರ್ಪ್ಪನ ಕೂಟ । ಅರಸಿನ ಅವದಾನ ।

ವಿಷಯ : ಮೊದಲ ಹಾಡಿನಲ್ಲಿ ಶಿವಮಹತ್ತ್ವವೂ ಎರಡನೆಯದರಲ್ಲಿ ಶಿವೋಪಾಸನಾ ರೀತಿಯೂ ವರ್ಣಿಸಲ್ಪಟ್ಟಿದೆ.

ವಿಶೇಷ : ಇವುಗಳೊಂದಿಗೆ ಅಷ್ಟಮಹಸಿದ್ಧಿ, ವಾರ್ಧಕ ಅಷ್ಟಕಗಳು ಇತ್ಯಾದಿ, ಲಿಂಗ ಲೀಲಾವಿಲಾಸ ಗ್ರಂಥದ ವ್ಯಾಖ್ಯಾನ ಮೊದಲಾದ ಗ್ರಂಥಗಳಿವೆ.

1282

ಕೆ. ೩೨೩/೧೭ **ಮಹದ್ವೈಪುರೀಶ್ವರ ಶತಕ** ವೃತ್ತ

೫.೪" × ೨" ಮೊಗ್ಗೆಯ ಮಾಯಿದೇವ ಸು. ೧೪೩೦

೧೩೮–೧೫೨ ಪತ್ರ ೧೨ ಪಂಕ್ತಿ ೨೮ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಮಹಾದ್ವೈಪುರೀಶ್ವರಶತಕ ಪ್ರಥಮದಲ್ಲಿ ವುತ್ಪಲಮಾಲಾ ವೃತ್ತ ॥

ಶ್ರೀಮದಪಾರಸಾರ ಕರುಣಾಮ್ರುತ ಸಾಗರಭಕ್ತ ಲೋಕಚಿಂ
ತಾಮಳ ನೂತ್ನರತ್ನ ದಿವಿಜೇಂದ್ರ ಮುನೇಂದ್ರ ಗಣೇಂದ್ರ ದಿವ್ಯ ತೇ
ಜೋಮಯ ಮೌಳಿ ಮಂಡಿತ ಪದಾಂಬುಜ ಸರ್ವ್ವಗುಣಾಭಿರಾಮ ನಿ
ಸ್ಸೀಮದ್ರುತೇಂದುಗೆಮ ಪರಮಪ್ರಭುವೆ ಮಹಾದೈಪುರೀಶ್ವರಾ ॥ ೧ ॥

ಅಂತ್ಯ : ಅಪ್ರತಿಮಪ್ರತಿಷ್ಟ ಪರಿಪೂರ್ನ್ನ ಪರಾನುಭವಪ್ರಭಾವ ಭ
ವ್ಯಪ್ರಥಿತಾರ್ತನಾದ ಪದಬಂಧ ಪದೋತ್ತರ ಭಕ್ತಿಯೋಗ ಸೌ
ಖ್ಯಪ್ರದ ಸದ್ದುಗರೂಕ್ತಿಮತ ಸಿದ್ಧಿಮಿ........................ಯಿದೇ
ವ ಪ್ರಭುವೀಗ ಕರ್ತ್ರು ಪರಮಪ್ರಭುವೇ ಮಹದೈಪುರೀಶ್ವರಾ ॥ ೧೧೩ ॥
ಮಹಾಪುರೀಶ್ವರ ಶತಕ ಸಂಪೂರ್ನ್ನ ಮಂಗಲಮಹಾ ಶ್ರೀ.

ವಿಷಯ : ಭಕ್ತಿ ಜ್ಞಾನ ವೈರಾಗ್ಯಗಳ ನಿರೂಪಣೆ.

ವಿಶೇಷ : ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ಬಸವಸ್ತೋತ್ರದ ತ್ರಿವಿಧಿ, ಅಷ್ಟಾವರಣ ತ್ರಿವಿಧಿಗಳೆಂಬ ಇನ್ನೂ ಇತರ ೧೬ ಗ್ರಂಥಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳಾಗಿವೆ.

1283

ಕೆ. ೩೬೯ ೧೭	ಮಹದೈಪುರೀಶ್ವರ ಶತಕ	ವೃತ್ತ
೮″ × ೧.೮″	ಮೊಗ್ಗೆಯ ಮಾಯಿದೇವ	ಸು. ೧೪೩೦
೧೫೪–೧೭೦ ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ತ್ರುತೀಯದಲ್ಲಿ ಮಹದೈಪುರೀಶ್ವರಶತಕ
ವೃತ್ತ॥ ಶ್ರೀಮದಪಾರಸಾರ ಕರುಣಾಮೃತಸಾಗರ ಭಕ್ತಲೋಕ ಚಿಂ
ತಾಮಳ ನೂಂತ್ನರತ್ನ ದಿವಿಜೇಂದ್ರಮುನೀಂದ್ರ ಗುಣೇಂದ್ರ ದಿವ್ಯ ತೇ
ಜೋಮಯ ಮೌಳಿಮಂಡಿತ ಪದಾಂಬುಜ ಸರ್ವ್ವಗುಣಾಭಿರಾಮ ನಿ
ಸ್ಸೀಮ ಧೃತೇಂದು ನೇಮ ಪರಮಪ್ರಭುವೇ ಮಾದೈಪುರೀಶ್ವರ ॥ ೧ ॥

ಅಂತ್ಯ : ಅಪ್ರತಿಮ ಪ್ರತಿಷ್ಠ ಪರಿಪೂರ್ನ್ನ ಪರಾನುಭವ ಪ್ರಭಾವ ಭ
ವ್ಯ ಪ್ರಥಿತಾರ್ತ್ಥನಾದ ಪನಬಂಧ ಪದೋತ್ತರ ಭಕ್ತಿಯೋಗ ಸೌ
ಖ್ಯಪ್ರದ ಸದ್ಗುರೂಕ್ತಿ ಮತಸಿದ್ಧಮಿದೀ ಶತಕಕ್ಕೆ ಮಾಯಿದೇ
ವ ಪ್ರಭುವೀಗ ಕರ್ತ್ರ ಪರಮಪ್ರಭುವೆ ಮಹಾದೈಪುರೀಶ್ವರಾ ॥ ೧೧೩ ॥
ಮಗ್ಗೆಮಾಯಿದೇವ ಪ್ರಭುವಾಚಾರ್ಯ್ಯರು ನಿರೂಪಿಸಿದ ಭಕ್ತಿ ಜ್ಞಾನ ವೈರಾಗ್ಯ
ಪ್ರಸಾದ ಶತಕತ್ರಯ ಸಮಂತ ಮಂಗಳಮಹಾ ಶ್ರೀ.

ವಿಷಯ : ಭಕ್ತಿ ಜ್ಞಾನ ವೈರಾಗ್ಯಗಳ ನಿರೂಪಣೆ.

ವಿಶೇಷ : ಈ ಗ್ರಂಥವು ಶಿಥಿಲವಾಗಿದ್ದು ಗರಿಗಳ ಅಂಚುಗಳು ಮುರಿದಿವೆ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಗುರು, ಷಡಕ್ಷರಿ, ಬಸವ, ಮನೋವಿಕಾರ ನಿರಸನ, ಭಕ್ತಿಬಿನ್ನಹ ರಗಳೆಗಳೂ; ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ ; ಶಂಕರದೇವ, ಮಂತ್ರಮಹತ್ವ, ಮರುಳದೇವ, ಪ್ರಭುಲಿಂಗ ಕಂದಗಳೂ, ಅಕ್ಷರಮಾಲಿಕ ಇತ್ಯಾದಿ ಗದ್ಯಗಳೂ ; ಶಿವಾಥವ, ಶಿವಾವಲ್ಲಭ ಶತಕಗಳೂ ಮಲ್ಹಣ ಸ್ತೋತ್ರವೂ ಇವೆ.

1284

ಕೆ. ೧೬೯ ೪	**ಮಹಂತಯ್ಯನವರ ನಾಂದ್ಯ**	ಭಾಮಿನೀಷಟ್ಪದಿ
೯.೬″ × ೨″	ಮಹಂತಸ್ವಾಮಿ	?
೨೬–೩೦ ಪತ್ರ	೧೦ ಪಂಕ್ತಿ	೫೫ ಅಕ್ಷರ

ಆದಿ : ಮಹಂತಸ್ವಾಮಿಗಳು ನಿರೂಪಿಸಿದ ನಾದ್ಯ
ಭಾವಿನಿಪದ ||
ಶ್ರೀ ಮದನುಪಮಸತ್ಸ ನಿರ್ಮಳ
ಸೋಮಶೇಖರ ಕಾಮ ಸಂಹರ
ಸ್ವಾಮಿ ಶಾಸ್ವತ ಶರಣಜನ ಸತ್ಪ್ರೇಮ ಗುಣಧಾಮಾ
ಹೇಮಗಿರಿ ನಿಜವಾಸ ಶಂಕರ
ನಾಮಕರುಣಾಸಾರಕೋವಿದ
ರಾಮನೀಯ್ಯಕ ಶಾಂತವೀರ ಚಿದಂಗ ಪಾಲಿಪುದು || ೧ ||

ಅಂತ್ಯ : ಯಿಂತು ನಿಂಮಯ ಮಹಿಮೆ ನುತಿಯನು
ಸಂತತಂ ಬರದೋದಿದವರು
ಚಿಂತೆಯಳಿದುಂನತದ ಮುಕ್ತಿಯನ್ನೈಯಿದಿ ನಿಜವಹರುಂ
ಅಂತುಮಲ್ಲದೆ ಸಕಲ ಸಿದ್ಧಿಯಂ
ಸಂತಸದೊಳೈಯಿ್ದ ತಂದು ಪಡವರುಂ
ಶಾಂತ ಮುರಿಗೆಯ ಶಾಂತವೀರ ನಿಜೇಶ ರಕ್ಷಿಪುದೂ || ೨೫ ||
ಮಹಂತಯ್ಯನವರು ನಿರೂಪಿಸಿದ ನಾದ್ಯ ಸಂಪೂರ್ಸ ಮಂಗಳ ಮಹಾಶ್ರೀ.

ವಿಷಯ : ಸ್ತುತಿ (ನಾಂದ್ಯದ ಪದ್ಯಗಳು).

ವಿಶೇಷ : ಈ ಕೃತಿಯಲ್ಲಿ ಶಾಂತಿವೀರೇಶ ಎನ್ನುವ ಅಂಕಿತವಿದೆ. ಇದೇ ಕಟ್ಟಿನಲ್ಲಿ ಮುರಿಗಾಸ್ವಾಮಿಗಳು ನಿರೂಪಿಸಿದ ನಾಂದ್ಯ, ಗುರುಸ್ತೋತ್ರದ ನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳಿವೆ.

1285

ಕೆ.ಎ. ೨೩೧ **ಮಹಾಕೂಟ ಮಹತ್ವ** ಭಾಮಿನೀಷಟ್ಪದಿ

೧೩.೧" × ೮" ಸದಾಶಿವ ಕವಿ ?

೧-೯೫ ಪತ್ರ ೨೮ ಪಂಕ್ತಿ ೧೩ ಅಕ್ಷರ

ಆದಿ : ಶ್ರೀ ಗುರುಭ್ಯೋನಮಃ ||
ಸೂಚನೆ || ಒಂದು ದಿನದಲಿ ಮುನಿಗಳೈತಂ
ದಿಂದುಚೂಡಕ್ಷೇತ್ರಮಹಿಮೆಯ
ನಂದು ಕೇಳಲ್ ಸೂತನೊರೆದಂ ತಾಪಸೋತ್ಕರಕೆ ||
ಶ್ರೀಮದಖಿಲ ನಿಲಿಂಪನಾಥ
ಸ್ತೊಮಮುಕುಟತಟಘಟಿತಮಣಿ
ಧಾಮತರಣಿರುಚಿಪ್ರಭಾಸಿತಪಾದಪಂಕೇಜಾ
ಕಾಮಿತಾರ್ಥ ಸುರಾವನೀರುಹ
ಸಾಮಗಾನ ಪ್ರೀತ ಶಾಶ್ವತ
ಧಾಮ ಶಂಕರ ಪಾಲಿಸೆನ್ನನುದಾರ ಕರುಣದೊಳೂ || ೧ ||

ಶ್ರೀಕರಮಹಾಕೂಟವೆಂದೀ
ಲೋಕದೊಳು ವಿಖ್ಯಾತವೊದ
ಸ್ತೋಕ ಮಹಿಮೆಯನಾಳ್ದ ಸುಕ್ಷೇತ್ರದ ಮಹತ್ವವನೂ
ಕಾಕುಮತಿಯಿಂದುಸುರ್ದಪೆಂ ಸು
ಶ್ಲೋಕಭರಿತರು ಭಕ್ತರಾಲಿಪು
ದೀ ಕಥಾಕಥನಪ್ರಸಂಗಂ ತಾನದಂತೆನಲೂ || ೨ ||

ಅಂತ್ಯ : ಈ ಮಹಾಕೂಟದ ಮಹತ್ವವ
ನಾ ಮಹಾತ್ಮರು ಪೇಳಿದಂತು
ದ್ದಾಮಮಾದಾ ಸ್ಕಂದಪೌರಾಣೋಕ್ತಿಯಿರ್ದಂತೇ
ತಾಮಸಪ್ರಜ್ಞೆಯೊಳು ಪೇಳ್ದೆಂ
ಭೂಮಹಿತ ಶಿವಶಾಸ್ತ್ರ ಸದ್ಗುಣ
ಧಾಮರನಿಪುತ್ರಮ ಕವಿಗಳಾಲಿಪುದು ಪದುಳದೊಳೂ || ೮೫ ||

ರಸವಸುರಗೆಂದುವಿನಗಣನೆಯೊ
ಳೆಸೆವ ಶಾಲೀವಾಹ ಶಕದೊಳು
ಪಸರಿಸಿದ ರಕ್ತಾಕ್ಷಿ ಹಾಯನ ಮಾಘ ಮಾಸದೊಳು

ವಿಶದ ಪಕ್ಷದ್ವಾದಶೀ ಧರ
ಣಿಸುತ ವಾರದೊಳಾಯ್ತು ಪೂರ್ಣಂ
ಬಸವಕೃಪೆಯಿಂ ವರಮಹಾಕೂಟದ ಚರಿತ್ರವಿದೂ || ೮೬ ||
ಅಂತೂ ಸಂಧೀ ೭ಕ್ಕ ಪದ ೪೨೮ಕ್ಕಂ ಮಂಗಲಮಸ್ತು ಶ್ರೀ ಶ್ರೀ ಶ್ರೀ ಜಯತು

ವಿಷಯ : ಮಹಾಕೂಟ ಕ್ಷೇತ್ರದ ವಿಷಯ.

ವಿಶೇಷ : ಸ್ಕಾಂದಿ ಪುರಾಣೋಕ್ತ ಮಹಾಕೂಟ ಕ್ಷೇತ್ರ ವಿಷಯವು ಕನ್ನಡದಲ್ಲಿ ಭಾಮಿದೀಷಟ್ಪನಿಯಲ್ಲಿ ಇಲ್ಲಿ ಅನುವಾದಿತವಾಗಿದೆ. ಕೊನೆಯದಾಗಿ ೭ನೆಯ ಸಂಧಿಯ ೬೭ನೆಯ ಪದ್ಯದಿಂದ ಈ ಗ್ರಂಥಕರ್ತನು ತನ್ನ ಪ್ರಶಸ್ತಿಯನ್ನು ಹೇಳಿಕೊಂಡಿರುವನು. ಅಕ್ಷರಗಳು ಸ್ಫುಟವಾಗಿವೆ.

1286

ಕೆ. ೨೭೧/೪	**ಮಹಾದೇವ ರಗಳೆ**	ರಗಳೆ
೮.೭" × ೧.೪"	?	?
೩ ಪತ್ರ	೭ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ ಸಮಸ್ತಲೋಕ ಜೀವ ಭಾವಭರಿತ ಮಹಾದೇವ || ೧ ||
ಈಶಾ ನೀನೆ ಭಕ್ತಿರಸ್ತು ಬೆಳಸಿ ಬೆಳದೆ ಮಹಾದೇವ || ೨ ||

ಅಂತ್ಯ : ರೂಡಿಗೀಶಾ ನಾಶಮಶ ನೋಡಬೇಡ ಮಹಾದೇವ || ೮೦ ||
ಬೇರೆ ಬೇರೆ ಕಾರುಣದೊಳಗೆ ಪರಿಯ ನೋಡು ಮಹಾದೇವ || ೮೧ ||
ಆರೆನಾರೆ ನೊಂದ್ದೆನಯ್ಯ ಮೊರೆಯ ಕೇಳು ಮಹಾದೇವ || ೮೨ ||
ಶ್ವನಬಾವ ಯಂನ ಗುಣವತಿ ನೋಡಬೇಡ ಮಹಾದೇವ || ೮೩ ||
ನೀವು ನಿಂಮ್ಮ ಅರ್ಮುತದ್ಯೆವ ಮಡುಬೇಕು ಮಹದೇವಾ || ೮೪ ||
ಮಹಾದೇವಾ ರಾಗಳೆ ಸಂಪ್ಪೂರ್ನ ಮಂಗಳಮಹ ಶ್ರೀ ||

ವಿಷಯ : ಮಹಾದೇವನ ಸ್ತುತಿ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಪ್ರತಿ ಪಾದವು ಮಹಾದೇವ ಎಂದು ಮುಗಿಯುತ್ತದೆ. ಇದೇ ಕಟ್ಟನಲ್ಲಿ ಪಂಚಕಲಶ ದೀಕ್ಷಾವಿಧಿ, ಬಸವಚರಿತ್ರೆ ಎಂಬ ಕೃತಿಗಳಿವೆ. ಕಟ್ಟಿನ ಅಂತ್ಯಭಾಗದ ೪೪ ಪತ್ರಗಳಲ್ಲಿ ಗಣಾಷ್ಟಕ ಮತ್ತು ಹಾಡುಗಳು ಸಂಕಲಿತವಾಗಿವೆ.

1287

ಕೆ. ೧೮೮/೧೫	**ಮಹಾದೇವಿಯಕ್ಕಗಳ ಸೃಷ್ಟಿಯ ವಚನ** (ಸಟೀಕು)	ಗದ್ಯ
೧೭.೬" × ೨"	ಮಹಾದೇವಿಯಕ್ಕ	೧೨ನೆಯ ಶತಕ
೨೪೭–೨೫೧ ಪತ್ರ	೧೨ ಪಂಕ್ತಿ	೯೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ x x x ಅಕ್ಕಗಳ್ ॥
ಭಾವಿನಿ ॥ ಇಳೆಯೊಳುಡುತಡಿಯೆಂಬ ಪಟ್ಟಣ
ದೊಳಗೆ ವೀರಶಿವಾಗಮಿಕ ನಿ
ರ್ಮಳನ ವಲ್ಲಭೆಯೆನಿಪ ಸುಮತಿಯ ಗರ್ಭಶುಕ್ತಿಯಲಿ
ಚಲುವನಾದ ಕುಮಾರಿಯೆಂಬ
ಗ್ಗಳದ ಮುತ್ತುಡಿಸಿತ್ತು ಧರಣೀ
ತಳದೊಳಗೆ ಪಾರ್ವತಿಯ ಸಾತ್ವಿಕಗುಣವೆ ರೂಪಾಗಿ ॥
ಮತ್ತಂ ಶಾಂಭವಲೋಕದಲ್ಲಿದ್ದರ್ಂಥ ಮುಕ್ತಾಯಿಗಳು ತಾವೇ ಮರ್ತ್ಯ ಲೋಕದ ವುಡುತಡಿಯಂಬ ಶಿವಪುರದಲ್ಲಿದ್ದ ಮಹಾದೇವಿಯಕ್ಕಗಳೆ ಕವುಸಿಕರಾಯನನುಲ್ಲಂಘಿಸಿ ಕೇಶಾವರಣವ ಮಾಡಿಕೊಂಡು ಭಕ್ತಿಜ್ಞಾನ ವೈರಾಗ್ಯವಿಡಿದಾಚರಿಸುವಂಥಾ ಮಹಾದೇವಿಯಕ್ಕಳ ಸೃಷ್ಟಿಯ ವಚನ। ಷೋಡಶಸ್ಥಲಪರಿಪ್ರಮಾಣವಾಗಿ ಸೃಜಿಸಿ ಹೇಳುವಂಥಾ ಸೃಷ್ಟಿಯ ವಾಕ್ಯಾ ವೃತವು । ಅದಲ್ಲದೆ ಜಗತ್ಸೃಷ್ಟಿನಿಮಿತ್ಯಾರ್ತ್ಥವಾಗಿ ಹಾಡಿದಂಥಾ ವಾಕ್ಯ ಮಾಲೆಯುಯೆಂಬುದೀಗ ಸೃಷ್ಟಿಯ ವಚನವೆಂಬುದರ್ಥ ॥ ಆದಿ। ಆದಿ ಯೆಂದೊಡೆ ದೇಹ।

ಅಂತ್ಯ : ಯಿಂಥಾ ಅಷ್ಟವಿಧ ಸಕೀಲ ಸಂಬಂಧವನು। ಚಂನಮಲ್ಲಿಕಾರ್ಜುನಯ್ಯಾ। ಚಂನ। ಕಾಯಕಾಂತಿಲಾವಣ್ಯವನುಳ್ಳಂಥ। ಮಲ್ಲಿಕಾ। ವಿಚಿಕಿಲದ ಹಾಂಗೆ ಅರ್ಜುನ ಧವಲಾಂಗವನುಳ್ಳಂಥ ಯೆಲೆ ಪರಶಿವಲಿಂಗವೆ। ನಿಂಮ ಶರಣರೆ ಬಲ್ಲರು। ಜಾತಿವರ್ನಾಶ್ರಮ। ಕುಲಗೋತ್ರ ನಾಮ ಬಂದ ಬಟ್ಟೆಕರಣನಳಿದ ಶಿವಯೋಗೀಶ್ವರರೆ ತಿಳಿದಿಪ್ಪರೆಂಬುದರ್ತ್ಥ ॥ ಮತ್ತಂ ಅಷ್ಟವಿಧ ಸಕೀಲಂಗಳು। ಸತ್ತು ಚಿತ್ತಾನಂದದಲ್ಲಿ ಅಡಗಿದ ಭೇದವನು ಶಿವನ ಚಿದಂಗ ಸ್ವರೂಪರಾದ ಶಿವಶರಣರೇ ಬಲ್ಲರಲ್ಲದೆ ಮಿಕ್ಕಿನ ದ್ವೈತಾದ್ವೈತಿಗಳು ಅಱಿಯ ರೆಂಬುದರ್ತ್ಥ ॥ ಮಹಾದೇವಿಯಕ್ಕಗಳು ಬೋಧಿಸಿದ ಜಗತ್ಸೃಷ್ಟಿ ನಿಮಿತ್ಯರ್ತ್ಥ ವಾಗಿ ಹಾಡಿದ ವಚನ। ಪ್ರಬಂಧಂಗಳು ಯಿಲ್ಲಿಗೆ ಮುಕ್ತವಾಯಿತ್ತು ॥ ಶ್ರೀ

ವಿಷಯ : ಜಗತ್ಸೃಷ್ಟಿಯ ವಿವರಣೆ

ವಿಶೇಷ : ಶಕಟರೇಫದ ಬಳಕೆಯಿದೆ. ಇದರೊಂದಿಗೆ ಪ್ರಭುದೇವರ ಸೃಷ್ಟಿಯ ವಚನ ಟೀಕು, ಬಸವೇಶ್ವರವಚನ ಸಾರಾರ್ಥ (ಸಟೀಕು) ಮೊದಲಾದ ಇತರ ೧೫ ಗ್ರಂಥಗಳಿವೆ.

1288

ಕೆ. ೪೪೮	**ಮಹಾದೇವಿಯಕ್ಕನ ಪುರಾಣ**	ವಿವಿಧ ಷಟ್ಪದಿ
೧೪.೫″ × ೨.೧″	ಚನ್ನಬಸವಾಂಕ	೧೫೫೦
೧-೧೨೬ ಪತ್ರ	೬ ಪಂಕ್ತಿ	೭೦ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯ ನಮಃ | ಚೆಂನಬಸವೇಶ್ವರಾಯ ನಮಃ ||
ಮಹಾದೇವಿಯಕ್ಕನ ಪುರಾಣವ ಬರವುದಕ್ಕೆ ಶುಭಮಸ್ತು ||
ಅಂಬಿಕೆಯ ಪತಿಯ ಬೆಸನಿಂ ಗುಪ್ತ ಗಣನಾಥ
ನಂಬಿಕಾಸ್ಥಾನಕ್ಕೈದಲ್ಕರಿದು ಚಿತ್ಕಲೆಯ
ನಂಬಿಕೆ ಕಳುಪಿದಳ್ವೈರಾಗ್ಯಲತೆಯ ಕುಡಿವಿಡಿಸಲೆಂದು ||
ಪದ || ಶ್ರೀಗುರುವೆ ನಿಖಿಳ ನಿಗಮಾಗಮಸ್ತುತ್ಯ ಭವ
ಸಾಗರೋತ್ತರಣ ಸಂಚತತ ಚಿದಾಭರಣ ಸಿತ
ಭೋಗೀಂದ್ರ ಕಟಕ ನಿರುಪಮ ಶುದ್ಧ ಸ್ಫಟಿಕ ಸಂಕಾಶ ಕೀನಾಶನಾಶಾ
ಯೋಗಿಚಯ ಹೃನ್ನಿಲಯ ಮದನ ಮದವಿಲಯಮದ
ನಾಗದಾನವ ಸೀಕ್ಷ ನಮಿತ ಜನಪಕ್ಷಯಮ
ನೀಗೆ ಮಹದೇವಿಯಕ್ಕನ ಕೃತಿಯನೊರೆವಮಲಮತಿಯ ಚಿದ್ಯುತಿಯ
ದ್ಯುತಿಯಾ || ೧ ||

x x x x

ಪರಮ ಪಾವನ ಮಹಾದೇವಿಯಕ್ಕನ ಚಾರು
ಚರಿತೆಯಂ ಪೇಳ್ದ ಹಂಪೆಯ ಹರೀಶ್ವರನಿನಿದು
ಗರೆವ ರಘಟಾ ಪ್ರಬಂಧದೊಳು ತತ್ಕಾವ್ಯಮನಾರಡಿಗಳಿಂದಖಿಲರೂ
ಅರಿದೆನಪ್ಪೇಳೆಂದು ಪೇಳಿಸಿದ ತರುಣಹಿಮ
ಕಿರುಣಧರನಪರಾವತಾರ ವೇಘ್ರಾಜಿನಾಂ
ಬರದ ಮದ್ಗುರು ಬಸವರಾಜನಾನತ ಕಲ್ಪಭೂಜ ಭವನಳಿನ ರಾಜಾ || ೧೯ ||
ಕೃತಿಯ ನಾಮಂ ಮಹಾದೇವಿಯ ಪುರಾಣಮೀ
ಕೃತಿಗರಸಿಯಾ ಮಹಾದೇವಿಯಕ್ಕಂ ವಿನುತ
ಕೃತಿಗೆ ತೆತ್ತಿಗರಿಳೆಯ ಸದ್ಭಕ್ತ ಮಾಹೇಶ್ವರರ್ಪೇಳ್ದ ಕವಿ ಕಪರ್ದಿ
ಪ್ರತಿಮ ವೇಘ್ರಾಜಿನಾಂಬರದ ಕಂಥೆಯ ಚಿದಾನಂದ
ಯತಿಪ ಶ್ರೀಗುರು ಬಸವರಾಜನಮಳಿನ ಹಸ್ತ
ಶತದಳೋದ್ಭವ ಚೆಂನಬಸವಾಂಕ ಪಾವನ ಕಳಂಕ ಶಿವಶರಣ ಲೆಂಕಾ || ೨೦ ||

ಅಂತ್ಯ: ಶಿವನನಲ್ಲದನಜಸ್ರಂ ಪೆರತನರಿಯದಾ
ಶಿವಧರ್ಮ ನಿರುತ ಬಸವಾಂಕ ಗಂಗಾಂಬೆಯರ
ಪ್ರವಿಮಳಾತ್ಮಾಬ್ಜಸಂಭವ ರುದ್ರ ಕವಿನಾಗಭೂಷಣಾಚಾರ್ಯರಾತ್ಮಾ
ಶಿವಜಾತಜಾತ ಶಿವಕವಿ ಚೆಂನಬಸವಾಂಕ
ನವಿರಳಾನಂದ ಸದ್ಭಕ್ತಿಯಿಂ ಪೇಳ್ದಮೀ
ಶಿವಕಲ್ಪನ ಸಮೆನಿಪ್ಪ ಕಲ್ಪಾಂಘ್ರಿಪಂ ಪರ್ವಿ ಪಲ್ಲವಿಸುತಿಕ್ಕಿಳೆಯೊಳೂ
|| ೪೨ ||

ಅಂತುಸ್ಥಲ ೩೩ಕ್ಕೆ ಪದ ೧೫೮೮ಕ್ಕೆ ಸಂದಿ ಸಂಪೂರ್ನವಾಯ್ತು॥ ಶ್ರೀ

x x x x

ನೃಪ ಶಾಲಿವಾಹನಶಖ ವರುಷ ೧೭೬೯ಸೇ ವರ್ತಮಾನಕ್ಕೆ ಸಲುವ ಪಯಂಗಳ
ನಾಮ ಸಂವತ್ಸರವ ಫಾಲ್ಗುಣ ಶುದ್ಧ ತ್ರಯೋದಶಿ ಸೌಮ್ಯವಾಸರ ೨೫ ಗಳಿಗ್ಗೆ
ಮಘಾ ನಕ್ಷತ್ರದಲ್ಲು ಅಕ್ಕನಾಗಂಮನ ಪೌರಾಣವು ಸಂಪೂರ್ಣಮಾಯ್ತು॥ ಶ್ರೀ

ವಿಷಯ : ಶಿವಶರಣೆ ಅಕ್ಕಮಹಾದೇವಿಯ ಚರಿತ್ರೆ.

ವಿಶೇಷ : ೧ರಿಂದ ೪೨ರವರೆಗೆ ಕ್ರಮಸಂಖ್ಯೆಯಿದ್ದು ಮುಂದೆ ಬರೆದಿಲ್ಲ. ವಿಷಯ ದೃಷ್ಟಿಯಿಂದ ಪತ್ರಗಳು ಸರಿಯಾಗಿ ಜೋಡಣೆಯಾಗಿವೆ. ಶಕಟರೇಫವು ಅಲ್ಲಲ್ಲಿ ಪ್ರಯೋಗವಾಗಿದೆ.

1289

ಕೆ.ಎ. ೧೭೯	**ಮಹಾದೇವಿಯಕ್ಕನ ಪುರಾಣ**	ವಿವಿಧಷಟ್ಪದಿ
೧೨.೪" × ೭.೭"	ಚನ್ನಬಸವಾಂಕ	೧೫೫೦
೧–೨೬೧ ಪತ್ರ	೨೦ ಪಂಕ್ತಿ	೧೩ ಅಕ್ಷರ

ಆದಿ : ಮಹಾದೇವಿ ಅಕ್ಕನ ಪುರಾಣ ॥ ವಾರ್ಧಕಷಟ್ಪದಿ ॥
ಸೂಚನೆ ॥ ಅಂಬಿಕೆಯ ಪತಿಯು ಬೆಸನಿಂ ಗುಪ್ತಗಣನಾಥ
ನಂಬಿಕಾಸ್ಥಾನಕ್ಕೈದಲ್ಕರಿದು ಚಿತ್ಕಲಿಯ
ನಂಬಿಕೆ ಕಳುಪಿದಳ್ವೈರಾಗ್ಯಲೀಲೆಯ ಕೂಡಿ ವಿಧಿಸಲೆಂದೂ ॥
ಪದ ॥ ಶ್ರೀಗುರುವೆ ನಿಖಿಳ ನಿಗಮಾಗಮಸ್ತುತ್ಯ ಭವ
ಸಾಗರೋತ್ತರಣ ಸಂಚಿತ ಚಿದಾಭರಣ ಸಿತ
ಭೋಗೀಂದ್ರಕಟಕ ನಿರುಪಮಶುದ್ಧ ಸ್ಫಟಿಕ ಸಂಕಾಶ ಕೀನಾಶನಾಶಾ
ಯೋಗಿಜಯಹೃನ್ನಿಲಯ ಮದನ ಮದ ನಿಲಯಮದು
ನಾಗ ದಾನವ ಶಿಕ್ಷನಮಿತ ಜನಪಕ್ಷ ಯಮ
ನೀಗೆ ಮಹಾದೇವಿಯಕ್ಕನ ಕೃತಿಯನೊರೆವಮಲಮತಿಯ ಚಿದ್ದ್ಯುತಿಯ ಧೃತಿಯಾ ॥ ೧ ॥

x x x x

ಕೃತಿಯ ನಾಮಂ ಮಹಾದೇವಿಯ ಪುರಾಣಮಾ
ಕೃತಿಗರಸಿಯಾ ಮಹಾದೇವಿಯಕ್ಕಂ ವಿನುತ.
ಕೃತಿಗೆ ತೆತ್ತಿಗರಿಳೆಯ ಸದ್ಭಕ್ತ ಮಾಹೇಶ್ವರರ್ ಪೇಳ್ದ ಕವಿ ಕಪರ್ದೀ
ಪ್ರತಿಮ ವ್ಯಾಘ್ರಾಜಿನಾಂಬರದ ಕಂಥೆಯ ಚಿದಾನಂದ
ಯತಿಪ ಶ್ರೀಗುರು ಬಸವರಾಜನಮಳಿನ ಹಸ್ತ
ಶತದೊಳುದ್ಭವ ಚನ್ನಬಸವಾಂಕ ಪಾವನಕಳಂಕ ಶಿವಶರಣ ಲೆಂಕಾ ॥ ೨೦ ॥

ಅಂತ್ಯ : ಶಿವನನಲ್ಲದನಜಸ್ರಂ ಪೆರತನರಿಯದಾ
ಶಿವಧರ್ಮ ನಿರುತ ಬಸವಾಂಕ ನಾಗಾಂಬೆಯರ
ಪ್ರಮಿಮಳಾತ್ಮಾಬ್ಜಸಂಭವ ರುದ್ರಕವಿ ನಾಗಭೂಷಣಾಚಾರ್ಯರಾತ್ಮಾ
ಜೀವಜಾತ ಜಾತ ಶಿವಕವಿ ಚೆನ್ನಬಸವಾಂಕ
ನವಿರಳಾನಂದ ಸದ್ಭಕ್ತಿಯಂ ಪೇಳ್ದವಿಾ
ಶಿವಕಲ್ಪನಮೆನಿಪ್ಪ ಕಲ್ಪಾಂಘ್ರಿಪಂ ಪರ್ವಿ ಪಲ್ಲವಿಸುತಿರ್ಕಿಳೆಯೊಳೂ ॥ ೪೨ ॥
ಅಂತು ಸ್ಥಲ ೩೩ಕ್ಕಂ ಪದ ೧೬೦೪ಕ್ಕಂ ಮಂಗಳಂ ಶ್ರೀ.
ಮಹಾದೇವಿ ಅಕ್ಕನ ಪುರಾಣಂ ಸಮಾಪ್ತಂ ॥

ವಿಷಯ : ಶಿವಶರಣೆ ಅಕ್ಕಮಹಾದೇವಿಯ ಚರಿತ್ರೆ.

ವಿಶೇಷ : ಪದ್ಯಗಳ ಪಾದವಿಭಾಗವನ್ನು ಸ್ಪಷ್ಟವಾಗಿ ಬರೆದಿದೆ. ಪ್ರತಿಯ ಸ್ಥಿತಿ ಚೆನ್ನಾಗಿದೆ.

1290

ಕೆ. ಬಿ. ೪೪೩	**ಮಹಾದೇವಿಯಕ್ಕನ ಪುರಾಣ**	ವಿವಿಧಷಟ್ಪದಿ
೮.೩" × ೬.೬"	ಚನ್ನಬಸವಾಂಕ	೧೫೫೦
೧-೧೧೯ ಪತ್ರ	೧೬ ಪಂಕ್ತಿ	೩೭ ಅಕ್ಷರ

ಆದಿ : ಮಹಾದೇವಿಯಕ್ಕನ ಪುರಾಣವ ಬರೆಯುವದಕ್ಕೆ ಶುಭಮಸ್ತು ॥
ವಾರ್ಧಿಕ ಷಟ್ಪದಿ ॥ ಸೂಚನೆ ॥ ಪಲ್ಲವ ॥
ಅಂಬಿಕಾವರನ ಬೆಸನಿಂ ಗುಪ್ತಗಣನಾಥ
ನಂಬಿಕಾ ಸ್ಥಾನಕ್ಕೆದಲ್ಕರಿದು ಚಿತ್ಕಲೆಯ
ನಂಬಿಕೆ ಧರಾತಳಕೆ ಕಳುಪಿದಳ್ವೈರಾಗ್ಯಲತೆಯ ಕುಡಿವಿಡಿಸಲೆಂದೂ ॥
ಪದನೂ ॥ ಶ್ರೀ ಗುರುವೆ ನಿಖಿಲ ನಿಗಮಾಗಮಸ್ತುತ್ಯ ಭವ
ಸಾಗರೋತ್ತರಣ ಸಂತತ ಚಿದಾಭರಣ ಸಿತ
ಭೋಗೇಂದ್ರ ಕಟಕ ನಿರುಪಮ ಶುದ್ಧ ಸ್ಫಟಿಕ ಸಂಕಾಶ ಕೀನಾಶ ನಾಶಾ
ಯೋಗಿಜಯ ಹೃನ್ನಿಲಯ ಮದನ ಮದವಿಲಯ ಮದ
ನಾಗ ದಾನವ ಶಿಕ್ಷ ನಮಿತ ಜನಪಕ್ಷ ಯಮ
ಗೀಗೆ ಮಹಾದೇವಿಯಕ್ಕನ ಕೃತಿಯನೊರೆವಮಲಮತಿಯ ಚಿದ್ಯುತಿಯ
ಧೃತಿಯಾ ॥ ೧ ॥

ಅಂತ್ಯ : ಗುರು ಲಿಂಗ ಜಂಗಮಾತ್ಮಕ ನಿರಾಭಾರಿ ಭಾ
ಸುರ ವೀರಶೈವ ಚಿಂತಾರತ್ನಮೆಂದೆನಿಸಿ
ಮೆರೆವ ಸುಪುರಾಣಗಳೊಳಧಿಕಮೆನಿಮಕ್ಕಮಹಾದೇವಿಯ ಪುರಾಣವಿದನೂ

ಪರಮ ಸದ್ಭಕ್ತಿಯಿಂ ಬರದೋದಿ ಪೇಳ್ವ ಕೇ
ಳ್ವರಖಿಲ ಮನೋಭೀಷ್ಟಸಿದ್ಧಿಯಂ ಪಡೆದಿಹ
ಪರುಷ ಸೋಂಕಿದ ಲೋಹಮೆಂತಂತೆ ವರಶಿವ ಸಾಯುಜ್ಯಮಂ ಪಡೆವರೂ
|| ೪೧ ||

ಅಂತು ಸಂಧಿ ೩೩ಕ್ಕಂ ಪದನೂ ೧೫೮೩ಕ್ಕಂ ಮಂಗಳಮಹಾ ಶ್ರೀ ಅಕ್ಕ ಮಹಾದೇವಿ ಪುರಾಣ ಸಮಾಪ್ತಂ ಮಂಗಳಮಸ್ತು ಶಾಲಿವಾಹನ ಶಕೆ ೧೮೩೨ನೆಯ ಸಾಧಾರಣಸಂವತ್ಸರ ಭಾದ್ರಪದ ಬಹುಳ ೯ ಪೂರ್ಣ ಪಂಚಗ್ರಹಾ.

ವಿಷಯ : ಶಿವಶರಣೆ ಅಕ್ಕಮಹಾದೇವಿಯ ಚರಿತ್ರೆ.

ವಿಶೇಷ : ಒಂದೊಂದು ಪತ್ರವೂ ಬಿಡಿಬಿಡಿಯಾಗಿದೆ.

1291

ಕೆ. ೨೦೭/೧ **ಮಹಾನವಮಿಯ ಪದಗಳು** ಚೌಪದ, ಹಾಡು

೬.೭" × ೧" ? ?

೧–೧೬ ಪತ್ರ ೫ ಪಂಕ್ತಿ ೩೪ ಅಕ್ಷರ

ಆದಿ : ಗಜಮುಖನೆ ತ್ರಿಜಗವಂದಿತ ಭಾನುತೇಜಾ
ಅಜ ಸುರಾರ್ಚಿತ ಸಲಹೋ ನಿರ್ವಿಘ್ನರಾಜ || ಪಲ್ಲ ||
ಹರಿವಿರಂಚಾರಿಗು ಪೂರ್ವಕಾಲದಲೀ
ವರ ಬದ್ರಪದ ಶುಕ್ಲ ಚೌತಿ ಮೊದಲಿನಲೀ
ಕರಿಮುಖದ ಗಣಪತಿಯ್ಯ ಪೂಜೆ ಮಾಡುತಲೀ
ವರದ ಗಣಪತಿ ನಮಿಗೆ ಮತಿಯ ಕೊಡುತಿರಲೀ || ೧ ||

ಅಂತ್ಯ : ಅಂಬುಜಾಸನ ಪಡದೆ ವರಮಾಯ್ಯು ನಿಮಿಗೆ
ಶೆಂಬು ಮಾರ್ಕಂಡಾಯು ದೀರ್ಗಾಯು ನಿಮಿಗೆ
ಯಂಬದಾಸೀರ್ವಾದ ನಿಂಮ್ಮ ಸಂತತಿಗೆ
ಹೊಂಬಂಣದುಡುಗ್ಗೆರೆಯ ಕೊಡಿ ಬ್ಯಾಗ ನಮಿಗೆ || ೯ ||

ವಿಷಯ : ಬಾಲಕರು ಹರಸುವ ಪದಗಳು.

ವಿಶೇಷ : "ಮಾನೌಮಿ ಪದಗಳು" ಎಂದು ಕರೆದಿರುವ ಈ ಶೀರ್ಷಿಕೆಯಲ್ಲಿ ಗಣಪತಿ, ವಾಗ್ದೇವಿ, ಗಂಗೆ, ಚುಂಚನಕಟ್ಟೆ ಶ್ರೀರಾಮ, ಈಶ್ವರ, ಆಂಜನೇಯ, ಬಸವಣ್ಣ, ವೀರಭದ್ರ, ಚಂದ್ರ, ಶೆಟ್ಟಿ, ಪತಿವ್ರತೆ, ಚೌಪಟಮಲ್ಲ, ಬಾಲರ ಹರಕೆ ಎಂಬ ಪದಗಳಿವೆ. ಈ ಕಟ್ಟಿನಲ್ಲಿ ಹಾಡುಗಳು, ರಾತ್ರಿನಲ್ಲನ ಪದಗಳು, ವೀರಸಂಗನ ಚೌಪದ ಮೊದಲಾದ ಇತರ ೮ ಗ್ರಂಥಗಳಿವೆ.

1292

ಕೆ. ೩೦೦/೨ **ಮಹಾನವಮಿಯ ಪದಗಳು** ಚೌಪದ, ಹಾಡು
೧೨" × ೧.೨" ? ?
೨೯–೮೬ ಪತ್ರ ೪ ಪಂಕ್ತಿ ೪೦ ಅಕ್ಷರ

ಆದಿ : ಮಹನೊರ್ೕಮಿ ಪದ ಬರೆಯುವುದಕ್ಕೆ ನಿರ್ವಿಗ್ನಮಸ್ತೂ ‖ ಶ್ರೀ ‖
ಗಜಮುಖನೆ ತ್ರಿಜಗವಂದಿತ್ತಾ ಬಾನು ತೇಜ
ಆಜಗಣ | ಶುರರಾರ್ಚಿತ್ತಾ ಶ್ಯಾರಣು | ಶ್ರೀ ವಿಗ್ನರಾಜ |
ಬಾದ್ರಾಪತ್ತಾ ಶುಕ್ಲಪಕ್ಷಥ | ಚೊ....ರಲು |
ಭದ್ರಾಶಿಂಹ್ಮಸನವನಲಕರಿಸುತಿರಲು |
x x x ತಂಡ ತಂಡದಿ ಸುರಿದು ಬೇಡುವೆನು ಮತಿಯ |
ಮಂಡಲದಿ ವಾಸವಾಗಿ ಯಿರುವ ಶ್ರೀ ಗಣಪತಿಯ ‖ ೧ ‖

ಅಂತ್ಯ : ಫಲುಮರ್ರು | ಮೀಕಿಲ್ಲಿ | ಸಲಲ್ಲಿಕ ಮಾಧಿ ತೋಡಾ | ಪಲ್ಲುಕು | ಪಂಲುಕು ಕೊಥೇರೂ ‖ ಉಲ್ಲಾಕ್ಕ.. ‖ ೧ ‖ ಮೊಂಲ್ಲಾ ವ್ಯೈಯಿಾನರುಚಿ ಗರುಡಾಧ್ರಿದ್ರುವಾ | ವುತ್ಸರಸಿಜಥಳನೇತ್ರೆ | ಪಾರಮ ಪಾನ ವೀಣಾಪಣೀ ಬಂಭರಾ ವೇಣೀ ‖ ೩ ‖

ವಿಷಯ : ಬಾಲಕರು ಹರಸುವ ಪದಗಳು.

ವಿಶೇಷ : ಸರಸ್ವತಿ, ಗಂಗಾದೇವಿ, ಮಕ್ಕಳು, ಶಿವಪೂಜೆ, ಹರಕೆಪದ ಇತ್ಯಾದಿ ಪದಗಳಿವೆ. ೪೬–೪೭ ಗರಿಗಳ ಮಧ್ಯೆ ೮ ಪತ್ರಗಳಲ್ಲಿ ಪುರಂದರದಾಸರ ಕೀರ್ತನೆ, ಕೋಲು ಪದವಿದೆ. ೮೫, ೮೬ನೆಯ ಪತ್ರಗಳಲ್ಲಿ ನಕ್ಷತ್ರ ಫಲ ಇದೆ. ಪತ್ರಗಳನ್ನು ಹುಳುಗಳು ಅಲ್ಲಲ್ಲಿ ತಿಂದಿವೆ.

1293

ಕೆ. ಎ. ೨೮೬/೪ **ಮಹಾನವಮಿ ಪದಗಳು** ಚೌಪದ, ಹಾಡು
೧೨.೬" × ೮" ? ?
೧–೯ ಪತ್ರ ೧೭ ಪಂಕ್ತಿ ೨೨ ಅಕ್ಷರ

ಆದಿ : ಮಹಾನವಮಿ ಪದಗಳು :
ಕಮಲನಾಭನೆ ಕರುಣಸಿಂಧುವೆ
ಕಮಲಲೋಚನ ಕೃಷ್ಣನೆ
ಕಮಲ ವದನೆಯ ಕಾಯ್ದ ದೇವನೆ
ಕಮಲ ಮುಖಿಯರ ಪ್ರಿಯನೆ ೧

ಅಂತ್ಯ : ವೈಯ್ಯಲ್ಲ ತುರಿಯಾಗಿ ಕೈಯ್ಯಲ್ಲಿ ಯಿದ್ದಿಹಳು
ವೈಯ್ಯವೈಯ್ಯನೆ ಬಂದು ವುಯ್ಯಲಾಡುವಳು
ಕೈಲಾಸನು ಕೊಟ್ಟು ಕೊಳೆ ತಾ
ರುತಿಹಳು ಯಿದು ಹೇಳಬಲ್ಲ ಜಾಣರಿಗರಿದಿಲ್ಲಾ || ೮ ||

ವಿಷಯ : ಬಾಲಕರು ಹರಸುವ ಪದಗಳು.

ವಿಶೇಷ : ಈ ಪುಸ್ತಕದಲ್ಲಿ ಪಾರ್ವತೀ ಸ್ತೋತ್ರ, ವೀರಸಂಗೈಯ್ಯನ ಚೌಪದ, ಇಂದ್ರಕೀಲ ಚೌಪದ, ಮಹರ್ನವಮಿ ಪದ್ಯಗಳೆಂಬ ಗ್ರಂಥಗಳಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

1294

ಕೆ. ಎ. ೨೮೬/೫	**ಮಹಾನವಮಿ ಪದಗಳು**	ಚೌಪದ ಹಾಡು
೧೨·೬″ × ೮″	?	?
೧-೧೩ ಪತ್ರ	೨೦ ಪಂಕ್ತಿ	೨೫ ಅಕ್ಷರ

ಆದಿ : ವಿಘ್ನಧ್ವಾಂತ ನಿವಾರಣೈಕ ತರಣಿರ್ವಿಘ್ನಾಟವೀ ಹವ್ಯವಾಟ್ |
ವಿಘ್ನವ್ಯಾಳ ಕುಲೋಪ ಮತ್ತಗರುಡೋ ವಿಘ್ನಾಬ್ಧಿ ಕುಂಭೋದ್ಭವಃ ||
ವಿಘ್ನಾಘೌಘ ಘನ ಪ್ರಚಂಡ ಪವನೋ ವಿಘ್ನೇಶ್ವರಃ ಪಾತು ಮಾಂ ||
ಸಂಗ್ರಾಮಧನಂಜಯ | ಸಾಹಸ ವಿರ್ಕಮಾರ್ಕ |
ಹರಿ ಕಟಕ ಸಮರ ಭೇರುಂಡಾ | ವೈಯಾಳಿ ಕೋಲಾಹಲಾ |

ಅಂತ್ಯ : ಸ್ವಾತಿಯುದಕದಿ ಮುತ್ತು ಹುಟ್ಟುವಂದದಲಿ
ಮಾತೆ ಗೌರಮ್ಮನಾ ಗರ್ಭಾಬ್ಧಿಯಲ್ಲಿ
ನೂತನದವರ ಚೆಂದ್ರನುದಿಸಿದಂದದಲೀ
ಚೌತಿ ನಾಯಕಿಯು ಗೌರಮ್ಮನುದರದಲೀ || ೫ ||

ವಿಷಯ : ಬಾಲಕರು ಹರಸುವ ಪದಗಳು.

ವಿಶೇಷ : ಇದೇ ಪುಸ್ತಕದಲ್ಲಿ ಪಾರ್ವತೀ ಸ್ತೋತ್ರ, ವೀರಸಂಗಯ್ಯನ ಚೌಪದ, ಇಂದ್ರಕೀಲ ಚೌಪದ, ಮಹಾನವಮಿ ಪದಗಳೆಂಬ ಗ್ರಂಥಗಳಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

1295

ಕೆ.ಬಿ. ೩೫೬/೨	**ಮಹಾನವಮಿ ಪದಗಳು**	ಚೌಪದ, ಹಾಡು
೮″ × ೬.೨″	?	
೮ ಪತ್ರ	೧೯ ಪಂಕ್ತಿ	೩೦ ಅಕ್ಷರ

ಆದಿ : ಮಹಾನೌ೯ಮಿಪದಾ ಬರೆಯುವದಕ್ಕೆ ಶುಭಮಸ್ತು
ಶ್ರೀಮದಗಜಾ ವರದನಾಂತ ಮಲ್ಲೇಶಾ
ಶ್ರೀಮಹಂ ಮೇರುಗಿರಿ ಮಂದೀರ ನೆಲೆವಾಸ
ಶ್ರೀಮಹಾ ಭಾಪು ಶಾಂತಮಲ್ಲೇಶಾ
ನೀ ಮುಂನ್ನ ವರವ ಕೊಡು ಜೋತಿಪ್ರಕಾಶಾ ॥ ೧ ॥

ಅಂತ್ಯ : ಪರಶಿವನ್ನು ಪಾರ್ವತ್ತಿಯು ಮೆಚ್ಚಿ ಪುತ್ರನ ಕರಸಿ
ಕರಿಮುನ ಗೌರಿ ಕೈಗಿತ್ತು ಗಂಗೆಕರಕೊಪ್ಪಿಸಿದ ಶರವನಿತ್ತು
ಗುರು ರೇವಣಾಧ್ಯರೊಲಿದು ನೂರೊಂದನಿಗೂ
ಹರ ಮೆಚ್ಚಿ ಇಷ್ಟಾರ್ತ್ಥವನೀವಾ
ತೀರಿತೇ ಕಲಹವೆಮಗೆ ॥ ೨೧ ॥

ವಿಷಯ : ಬಾಲಕರು ಹರಸುವ ಪದಗಳು.

ವಿಶೇಷ: ಗ್ರಂಥದ ಸ್ಥಿತಿ ಉತ್ತಮ. ಇದರ ಜೊತೆಯಲ್ಲಿ ಗಿರಿಜೆ ಗಂಗೆ ಸಂವಾದ ಎಂಬ ಮತ್ತೊಂದು ಗ್ರಂಥವಿದೆ.

1296

ಕೆ.ಬಿ. ೧೦೪ **ಮಹಾಲಿಂಗೇಂದ್ರವಿಜಯಪುರಾಣ,** ಭಾಗ ೧ ವಾರ್ಧಕಷಟ್ಪದಿ

೭.೬" × ೬.೨" ಮಹಾದೇವ ೧೮೭೦

೧–೨೭೬ ಪತ್ರ ೧೨ ಪಂಕ್ತಿ ೧೬ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ । ನಿರ್ವಿಘ್ನಮಸ್ತು ॥ ಮಹಾಲಿಂಗೇಂದ್ರ ವಿಜಯಪುರಾಣಂ ॥
ಶ್ರೀರಸ್ತು ॥ ವಾರ್ಧಿಕ ॥ ಸೂಚನೆ ॥
ಶ್ರೀಕಲಿತಗಿರೀಶರೂಪಂ ಕರುಣದಿಂದೆ ಭೂ
ಲೋಕಕವತರಿಸುತ ಮಹಾಲಿಂಗನಾಮದಿಂ
ನಾಕವಾಸಿಗಳು ಕೊಂಡಾಡುತಿರೆ ಭಜಕರಂ ಪೋಷಿಸುತ ವೊಪ್ಪುತಿಹನೂ ॥

x x x x

ವರಬಸವ ಚನ್ನಬಸವೇಶ್ವರ ಪ್ರಭುದೇವ
ಗುರುಸಿದ್ಧರಾಮ ತೋಂಟದ ಸಿದ್ಧಲಿಂಗೇಶ್ವ
ರರ ಮಹಾಚಾರಿತ್ರಮಂ ಕಾವ್ಯರೂಪದಿಂ ಪೂರ್ವಕವಿಗಳ್ಮುದದೊಳೂ
ಸರಸ ವಾಕ್ಚಾತುರ್ಯದಿಂ ನುತಿಸಿ ಧೀಮತಾಂ
ವರರಾದವರಂತೆವೊಲ್ಮಹಾಲಿಂಗೇಶ
ಗುರು ಜಗದ್ಗುರುವಂ ನುತಿಸಿ ಧಂನ್ಯನಾದಪೆಂ ಮಾನ್ಯನಾದಪೆನಿಳೆಯೊಳು॥೨೫॥

x x x x

ವಿಶ್ವವಿಷ್ವಪವಲ್ಲಭ ಶ್ರೀಮದಲ್ಲಮನ
ಶಶ್ವದನ್ವಯ ಸಿಂಧು ಪೂರ್ಣಚಂದ್ರಮನ ಸ
ಪ್ರಾಶ್ವ ಸಂಕಾಶ ಚಿನ್ಮೂಲಗಿರಿವಾಸನ ಧರಾಧೀಶ ಸಂಪೂಜ್ಯನಾ
ಸುಸ್ವರ್ಣಮಣಿ ಭೂಷಣ ಸ್ಪರ್ಶನಾದಿ ವರ
ಹೃಷ್ವೀಕೃತಾಮರ ಧರೀಜ ಧೇನುಪ್ರಚಯ
ನಸ್ವ ಪೂಜಿತ ಮಹಾಲಿಂಗೇಂದ್ರರಾಜನ ಪದಾಬ್ಜಂಗಳಂ ವಂದಿಪಂ ॥ ೨೭ ॥

x x x x

ಕೃತಿಯ ನಾಮಂ ಮಹಾಲಿಂಗೇಂದ್ರವಿುದ
ಕತಿಪತಿಯು ಶ್ರೀಮಹಾಲಿಂಗೇಂದ್ರನೀಕೃತಿಯ
ನತಿಯ ಪಾಲಿಪರ ಭವಭಕ್ತರಿದನ ಪೇಳಿದನಾರೆನಲ್ಕಸಿಪುರೀ
ಪತಿಯಪ್ಪ ಶಿವಲಿಂಗದೇಶಿಕೋತ್ತಮ ಲಬ್ಧ
ಮತಿ ಮಹಾ ದೇವಾಂಕಮಿದರೊಳಂ ಮಿಕಲಮಿರೆ
ಶಿತಿಕಂಠ ಕವಿಗಳುಂ ತಿರ್ದುವುದು ನಿಮ್ಮ ಪ್ರೀತಿಯ ಪುತ್ರನೆಂದು ಮುದದಿಂ ॥ ೪೧ ॥

ಅಂತ್ಯ : ಇನಿತು ಪೆಂಪಂದಳೆದು ಸಕಲೋರ್ವಿಯಲ್ಲಿ ಸ
ದ್ವಿನುತನೆನಿಸುತ್ತೆ ಮಾಹೇಶ್ವರಬೃಂದದೊಳ್
ಘನಜಗದ್ಗುರು ನಾಮ ಮಿರುಗುತ್ತಿರಲ್ನಿರಕ್ಷರ ಬೋಳಬಸವೇಶ್ವರಂ
ವಿನಯಯುತ ಸಪ್ತಶತಚರಮೂರ್ತಿಗಳ್ಗೆ ಬಳಿ
ಕನುವಿನಿಂ ತ್ರಿಸಹಸ್ರವರವಿರಕ್ತರಿಗೆ ತಾಂ
ಮನವೊಲ್ದು ಶಾಸ್ತ್ರಾದಿ ಬೋಧೆಯಿಂ ......

ವಿಷಯ : ಚಿತ್ರದುರ್ಗದ ಮಹಲಿಂಗೇಂದ್ರಸ್ವಾಮಿಗಳ ಪುರಾಣ.

ವಿಶೇಷ : ಇದರ ೨ನೆಯ ಭಾಗ ಕೆ.ಬಿ. ೧೪೭ರಲ್ಲಿದೆ. ಅಕ್ಷರ ಸ್ಫುಟವಾಗಿವೆ. ೧ನೆಯ ಪತ್ರದಲ್ಲಿ ಮೂರು ಸಂಸ್ಕೃತ ಶ್ಲೋಕಗಳಿವೆ.

1297

ಕೆ.ಬಿ. ೧೪೭ **ಮಹಾಲಿಂಗೇಂದ್ರವಿಜಯ ಪುರಾಣ,** ಭಾಗ ೨ ವಾರ್ಧಕಷಟ್ಪದಿ

೭.೪″ × ೬.೨″ ಮಹಾದೇವ ೧೮೭೦

೨೭೭–೫೫೨ ಪತ್ರ ೧೨ ಪಂಕ್ತಿ ೧೬ ಅಕ್ಷರ

ಆದಿ : ಗುರುವಾಗಿ ಮೆರೆದನಾನಂದ ಭರಿತಂ ॥ ೧೦ ॥
ಬಳಿಕವಾಗುರು ಸಕಲ ದೇಶವಮಂ ಸಂಚರಿಸು
ತಿಳೆಯಲ್ಲಿ ಜೈನ ಚಾರ್ವಾಕ ಬೌದ್ಧ ಕ್ಷಪಣ
ಮಿಲಿತ ವೈಷ್ಣವ ಮಾಧ್ವಮುಖನೀಚಮತಗಳಂ ಗೆಲ್ದು ಶಾಸ್ತ್ರೋಕ್ತಿಯಿಂದಂ

ಸುಲಭವಾಗಿರಲವರ್ಗೆ ಲಿಂಗಮಂ ಧರಿಸುತ್ತ
ಮಲಸದೊಲ್ವೀರವರಶೈವಮತಹಿತ ಶಾಸ್ತ್ರಾ
ಗಳನರುಹಿ ಶೈವಸಂಪನ್ನರ ನೆಗಳಿದಂ ಬಹುಳ ಜನರಂ ಧರೆಯೊಳೂ ॥ ೧೧ ॥

ಅಂತ್ಯ : ಇದು ನಿಖಿಲ ಸದ್ಭಕ್ತಪಾದಪಂಕಜರೇಣು
ವಿದಿತಭಸಿತ ತ್ರಿಪುಂಡ್ರಾಂಕಿತಾಳಿಕಮಹ
ತ್ಪದ ಮಹಾಸಿಪುರೀಶ ಶಿವಲಿಂಗ ದೇಶಿಕೋತ್ತಮ ದಯಾಸಾಗರಕಣಾ
ಭ್ಯುದಿತಮತಿ ಸತ್ಕೃತಿ ಮಹಾದೇವ ಸುಪ್ರಣೀ
ತ್ರದ ಮಹಾಲಿಂಗೇಂದ್ರ ವಿಜಯಮಿಂತಿದರೊಳುಂ
ಪದನೊಂದನೋದಿದರಿಗಿಷ್ಟಾರ್ಥ ಸಿದ್ಧಿಗಳು ಸಿದ್ಧಿಪವು ತತ್ಕರುಣದಿಂ ॥ ೩೬ ॥
ಶಾಲಿವಾಹನ ಶಕವರುಷಂಗಳು ೧೭೪೪ನೆಯ ಪ್ರವರ್ತಮಾನಕ್ಕೆ ಸಲ್ಲುವ ಶ್ರೀಮುಖನಾಮಸಂವತ್ಸರದ ಭಾದ್ರಪದಮಾಸೇ ಕೃಷ್ಣಪಕ್ಷತಿಥೌ ೧೨ ಗುರುವಾರೆ ತಾಸು ೧೨ಕ್ಕೆ ಮುಗಿದುದು. ಈ ಮಹಾಲಿಂಗಸ್ವಾಮಿ ಪುರಾಣ ಮಹಾಸಂಸ್ಥಾನ ಚಿತ್ರಕಲ್ಲುದುರ್ಗದ ಶೂನ್ಯಸಿಹ್ಮಾಸನ ಮಠದ್ದು ॥ ಈ ಪುರಾಣ ತ್ರಿಂಶತ್ಪ್ರಕರಣಂ॥ ಅಂತು ಸಂಧಿ ೩೨ಕ್ಕಂ ಪದಗಣಗಳು ೨೦೬೪ಕ್ಕಂ ಪರಿಸಮಾಪ್ತಂ ಮಂಗಲಮಸ್ತು ಸಂಪೂರ್ಣವಾದುದು ಶ್ರೀರಸ್ತು.

ವಿಷಯ : ಚಿತ್ರದುರ್ಗದ ಮಹಲಿಂಗೇಂದ್ರ ಸ್ವಾಮಿಗಳ ಪುರಾಣ.

ವಿಶೇಷ : ಇದರ ಮೊದಲ ಭಾಗ ಕೆ.ಬಿ. ೧೦೪ನೆಯ ಪುಸ್ತಕವಲ್ಲಿದೆ.

1298

ಕೆ. ಬಿ. ೩೮೧/೨	**ಮಹಾವಾಕ್ಯ ಪ್ರಕರಣ**	ಶ್ಲೋಕ, ಟೀಕು
೮.೫" × ೬.೬"	?	?
೮–೧೪ ಪತ್ರ	೨೦ ಪಂಕ್ತಿ	೨೫ ಅಕ್ಷರ

ಆದಿ : ಮಹಾವಾಕ್ಯ ಪ್ರಕರಣ ಬರೆಯುವದಕ್ಕೆ ನಿರ್ವಿಘ್ನಮಸ್ತು
ಅವ್ಯಪ್ರಸಾದದ ಹಮೇವ ತತ್ವಂ ಭ್ರಕ್ಷೊವಿಜಾನಾತ್ತೆ ನಿರಸ್ತಮೋಹಃ ।
ತಿಮೇವ ನಿತ್ಯಂ ಪ್ರದೂಮಾತ್ಮ ರೂಪಂ ಶ್ರೀವಾಸುದೇವಂಸಿರಸಾನಮಸ್ತೆ॥ ೧ ॥
ಲೋಕದಲ್ಲಿನಬ್ಬಾನೊಬ್ಬಾ ಪುರುಷನ್ನು ಅಧಿಕಾರಿಯಾಗಿ ಅನೇಕ ಜಲ್ಮದಲ್ಲಿ ಯೀಶ್ವರಾರ್ಪಿತವಾಗಿಮಾಡಿದ ನಿತ್ಯನೈಮಿತ್ಯ ಕರ್ಮದಿಂದಲು ಸಗುಣೋ ಪಾಸ್ತಿಯುಂ ಶುದ್ಧಅಂತಃಕರಣನಾಗಿ ಮನುಷ್ಯಲೋಕ ಮೊದಲುಕೊಂಡು ಬ್ರಂಹಾಲೋಕ ಪರಿಯಂತರವು ಸಕಲವು ಕರ್ಮನಿರ್ಮಿತವಾದಾ

ಅಂತ್ಯ : ಆ ಸಹಜಾನಂದ ಗುರುಗಳಿಗೆ ಸಾಷ್ಟಾಂಗ ದಂಡಪ್ರಣಮಾಮಂ ಮಾಡಿ ವಿಗ್ನ್ಯಾಪನೆಯನ್ನು ಮಾಡಿಕೊಂಡನು । ಯೆಲೈ ಸ್ವಾಮಿನ್ ನಾನು ಕೃತಾರ್ಥ ನಾದೆನು. ನನ್ನ ಅಗ್ನಾನ ತಮೋಹಾನಿಯಾಯಿತು. ನಾನು ಕೃತಾರ್ಥ ನಾದೆನು ಯೆಂದು ಭಿನ್ನಹಂ ಮಾಡಿದಂತಾವನಾದೆನೂ ॥
ಶ್ಲೋಕಾ ॥ ಯತ್ಕೃಪಾಲೇಶತಃ ಪ್ರಾಪ್ತಂ ಮಾಯಾ ಬ್ರಹ್ಮಾ ಮುದೀರಿತಂ ।
ತಂ ವಂದೇ ವಾಸುದೇವೇಂದ್ರಾ ದೇಶಿಕೇಂದ್ರಪುಪಾಸ್ಮಹೆ ॥

ವಿಷಯ : ವೇದಾಂತ.

ವಿಶೇಷ : ಇದರೊಂದಿಗೆ ಸಾಂಖ್ಯಸೂತ್ರ ತಾತ್ಪರ್ಯ (ತೆಲುಗು) ಮತ್ತು ನಿಜಗುಣರ ವಚನಗಳಿವೆ.

1299

ಕೆ, ೩೩/೮	**ಮಹಿಮ್ನಸ್ತೋತ್ರದ ಟೀಕು**	ಶ್ಲೋಕ, ಟೀಕು
೧೩"×೧.೪"	ಗುರುದೇವ	ಸು. ೧೩೫೦
೫೯–೭೯ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಮಹಿಮ್ನಸ್ತೋತ್ರದ ಟೀಕು ॥ ಗುರಂ ಶ್ರೀ ವೇಣುಕಾಚಾರ್ಯ್ಯಂ ನತ್ವಾ ತನ್ನಾಮಕೋಸ್ಯಹಂ ಟೀಕಾಂ ಮಹಿಮ್ನಸ್ತೋತ್ರಸ್ಯ ಕುರ್ವೇ ಮಹಿಮ ದೀಪಿಕಾಂ ॥

ಮಹಿಮ್ನಃ ಪಾರಂತೇ ಪರಮ ವಿದ್ಯುಷೋಯದ್ಯ ಸದೃಶೀ ।
ಸ್ತುತಿ ಬ್ರಹ್ಮಾದಿ ನಾಮ ಪಿತದವ ಸಂನ್ನಾಸ್ತಯಿಗಿರಃ ॥
ಅಥಾವಾಚ್ಯಃ ಸರ್ವ್ವಃ ಸ್ವಮತಿ ಪರಿಣಾಮಾವಧಿಗೃಣನ್ ।
ಮಮಾಪ್ಯೇಷ ಸ್ತೋತ್ರೇ ಹರ ನಿರಪವಾದಃ ಪರಿಕರಃ ॥
ಟ್ಕೇ॥ ಹೇ ಹರಭಕ್ತರ ಭವರೋಗ ಸಂಹಾರನಾದ ಯೆಲೆ ಪರಮೇಶ್ವರನೇ। ತೇ। ನಿಂನ ।

ಅಂತ್ಯ : ಮಹಿಶಾಂನ್ನಾ ಪರೋದೇವೋ ಮಹಿಮ್ನೋ ನಾಪರಸ್ತವಃ ।
ಅಘೋರಾನ್ನಾ ಪರೋ ಮಂತ್ರೋ ನಾಸ್ತಿತತ್ವಂ ಗುರೋಃಪರಂ ॥
ಟೀಕ್ಕೂ ॥ ಮಹೇಶಾತ್ । ಪರಮೇಶ್ವರನ ದೆಸೆಇಂದೆ । ಅಪರೋ ದೇವಂ । ಅಧಿಕವಾಗಿ ಮತ್ತೊರ್ವ್ವ ದೇವನು ।

x x x x

ಇತೀ ಶ್ರೀಮದ್ವೇದ ವೇದ ಶಿರಃ ಶಿವಾಗಮಪುಣ್ಯ ಪುರಾಣ ಪ್ರಭೃತಿ ಪ್ರಭೂತ ಪ್ರದಿತ ಪ್ರಮಥ ಸಂಗೀತ ಗೀತ ವಿದ್ಯಾ ನವದ್ಯ ಶ್ರೀವೀರಶೈವ ಷಟ್ಸ್ಥಲ ಶಿವಯೋಗ ಶಿವಾದ್ವೈತ ಸತ್ಪದ ಪ್ರತಿಷ್ಠಾಪನಾಚಾರ್ಯ್ಯವರ್ಯ್ಯ

ಶ್ರೀ ಶೋಸಲ ವೀರಣಾರಾಧ್ಯ ದೇವ ಶಿವಯೋಗಿ ಸಾರ್ವಭೌಮ ತನೂಭವ ಶ್ರೀ ರೇವಣಾಸಿದ್ಧೇಶದೇಶಿಕಮಂಜರಾತ್ಮಜ ಶ್ರೀ ರೇವಣಾರಾಧ್ಯದೇವನಾಮಾಚಾರ್ಯವರ್ಯ್ಯ ವಿರಚಿತಾ ಮಹಿಮ್ನಾ ಪ್ರಪದೀಪಿಕಾಖ್ಯ ಮಹಿಮ್ನ ಸ್ತೋತ್ರಸ್ಯ ಟೀಕಾ ಪರಿಸಮಾಪ್ತಾ ॥ ಶ್ರೀ ॥

ವಿಷಯ : ಸ್ತೋತ್ರ, ಶಿವಮಹಿಮೆ.

ವಿಶೇಷ : ಶಕಟರೇಫವಿದೆ. ೭೦ನೆಯ ಪತ್ರದ ಅಂಚು ಮುರಿದುಹೋಗಿದೆ. ಮಲ್ಲೇಶ್ವರ ಶತಕ, ಪಾರ್ವತೀವಲ್ಲಭ ಶತಕ, ಉಮಾಮಹೇಶ್ವರ ಶತಕ, ಪ್ರಾಣನಾಥ ಶತಕ, ಶ್ರೀಕಂಠಸೋಮೇಶ್ವರ ಶತಕ, ಕಂದ ಶತಕ, ಪ್ರಭುದೇವರ ಪುರಾಣದ ನಾಂದ್ಯಗಳು, ಶಿವಪೂಜಾವಿಧಾನ, ಚೇರಮಕಾವ್ಯ ಎಂಬ ಗ್ರಂಥಗಳೂ ಈ ಕಟ್ಟಿನಲ್ಲಿವೆ.

1300

ಕೆ. ೧೭೬/೧ **ಮಹಿಮ್ನ ಸ್ತೋತ್ರದ ಟೀಕು** ಶ್ಲೋಕ, ಟೀಕು

೧೦.೧" × ೨" ? ?

೧–೧೪ ಪತ್ರ ೧೨ ಪಂಕ್ತಿ ೪೫ ಅಕ್ಷರ

ಆದಿ : ಮಹಿಮ್ನ ಸ್ತೋತ್ರದ ಟೀಕು

ದೇವಾದಿ ದೇವಂ ದೇವೇಶಂ ಭಕ್ತಾನಾಂ ಭೋಗಮೋಕ್ಷದಂ।
ತತ್ವಾತೀತಂ ತತ್ವಸಂಸ್ಥಂ ನಮಾಮಿ ಶುಭದಂ ಶಿವಂ ॥

ಶ್ರೀಮದುಮಾಕಾಂತನನು ಸ್ತೋತ್ರವ ಮಾಡಲು ಪ್ರಾರಂಭಿಸುತ್ತಿದ್ದಂಥಾ ಸ್ತೋತ್ರ ಕರ್ತುವು ಆ ಪರಮೇಶ್ವರನ ಮಹತ್ವದ ಪಾರತ್ವದಿಂದೆ ಸ್ತುತಿ ಪ್ರವೃತ್ತಿಯ ಸಂಭವವೆಂದಾಕ್ಷೇಪಿಸಿ ಸ್ತೋತ್ರವನು ಮಾಡುತ್ತಿರ್ದಪಂ.
ವೃತ್ತಾ ॥ ಮಹಿಮ್ನ ॥ ಪಾರಂತೆ ಪರಮವಿದುಷೊ ಯದ್ಯಸದೃಶಿ।

ಅಂತ್ಯ : ದೀಕ್ಷಾದಾನ ತಪಸ್ತೀರ್ತ್ಥ ಹೋಮ ಯಗ್ನಾದಿತಾ ಕ್ರಿಯಾಃ। ದೀಕ್ಷಾ। ದೀಕ್ಷೆಯ। ದಾನ। ದಾನಂಗಳು। ತಪಃ। ತಪಸ್ಸುಗಳು। ತೀರ್ತ್ಥ। ತೀರ್ಥಂಗಳು। ಹೋಮ। ಹೋಮಂಗಳು ಯಗ್ನಾದಿತಾ ಕ್ರಿಯಾಃ। ಯಜ್ಞ ಮೊದಲಾಗಿದ್ದಂಥಾ ಕ್ರಿಯೆಗಳು। ಮಹಿಮ್ನಸ್ತವ ಪಾಠಸ್ಯ। ಮಹಿಮ್ನ ಸ್ತೋತ್ರ ಪಾಠಕನ। ಷೋಡಶೀತಲಾಂ। ಹದಿನಾರು ಭಾಗೆಯೊಳಗಣ ಒಂದು ಭಾಗೆಯನೆಯ್ದಲು। ನಾರ್ಹಂತಿ। ಸಮರ್ತ್ಥವಾಗುತ್ತಿರವೂ ॥ ೩೮ ॥

ಇತಿ ಮಹಿಮ್ನಸ್ತೋತ್ರದ ಟೀಕೂ ಸಮಾಪ್ತ.

ವಿಷಯ : ಸ್ತೋತ್ರ.

ವಿಶೇಷ : ಈ ಕಟ್ಟಿನಲ್ಲಿ ಮಲ್ಹಣ ಸ್ತೋತ್ರ, ಮಲಯರಾಜ ಸ್ತೋತ್ರ ಮೊದಲಾದ ಇತರ ಗ್ರಂಥಗಳಿವೆ.

1301

ಕೆ. ೫೩೪ ಮಳೆಯರಾಜಚರಿತ್ರೆ ವಾರ್ಧಕ ಷಟ್ಪದಿ

೧೫.೪"×೨.೭" ಸೆಜ್ಜೆಯ ಸಿದ್ದಲಿಂಗಾರ್ಯ ಸು. ೧೬೬೫

೧—೧೪೬ ಪತ್ರ ೮ ಪಂಕ್ತಿ ೮೦ ಅಕ್ಷರ

ಆದಿ : ಶ್ರೀಗಣಾಧಿಪತಯೆ ನಮಃ ||

ಮಳೆಯ ರಾಜಯ್ಯನವರು ಕಾವ್ಯ ಕವಿಕರ್ನ ಭೂಷಣ ಬರುವದಕ್ಕೆ ಶುಭಮಸ್ತು
ಶ್ರೀರಮಣ ಕನಕಾಬ್ಜ ಪುತ್ರ ಸುರಪತಿನುತ ಕು
ಬೇರ ಸೇವಿತ ಹೇಮರೇತ ಕಾಂಚನ ನಗಾ
ಗಾರಸತ್ಕವಿ ಜನಾನಂದ್ದ ನಂದನ ಚೈತ್ರ ಹೇರಂಬಪಿತ ಶಂಕರಾ
ಕಾರುಂಣ್ಯರೂಪ ಕಾತ್ಯಾಯನೀ ಮಾನಸಾಂ
ಭೋರುಹಾ ದಿನೇಶ ಸುರಮುನಿಗಣದ್ಯಾನಕಾ
ಪಾಗ ರಾಜಿತ ರಾಜಹಂಸ ಚಿನ್ಮಯ ಸುಖಾಕಾರ ಜಯಭೋಗಲಿಂಗಾ || ೧ ||

x x x x

ಶಿಶು ಶುಕಂಗಳ ಮುದ್ದುನುಡಿ ವೀಣೆಯಂಚರಂ
ಪೊಸ ಜವ್ವನೆಯ ತಕ್ಕೆ ತಂಗಾಳಿ ನೆಳಲಿಕ್ಕೆ
ಮಿಸುನಿವೆರಸುಗ್ಗಿಯ ಬನಂ ತುಂಬಿ ಪರಿವ ಪೊಳೆ ಪೆಸರ್ವಡದ ದಿವ್ಯಾಂನ್ನವೂ
ರಸವೊಸರ್ವಾವಂಣ್ಣು ಪರಿಮಳಿಪ ಪನ್ನೀರ್ಸು
ಕುಸುಮ ಕಸ್ತೂರಿಕಾ ಚಂದನದ ವಾಸನಂ
ರಸಿಕ ರಾಜೇಂದ್ರಸಜ್ಜೈಯಸಿದ್ಧಲಿಂಗಾರ್ಯನುಸುರ್ದಕಾವ್ಯಾನುರಸವೂ || ೨೬ ||

ಅಂತ್ಯ : ಪೂರಿತಪರಾಗದಿಂ ಪುಂಡರೀಕಂಗಳಿಂ
ರಾರಾಜಿಸುತ್ತಿರ್ಪ ರಕ್ತೋರದಿಂ ಸರಸದಿಂ
ರಸೆಯಲ್ಲಿ ಪರವಿದ ಪರಾಗದಿಂ ರಾಗದಿಂ ಪೊಸಬನಂ ರಂಜಿಸಿದುದೂ
ದೇವೇಂದ್ರನಂತ್ತೆ ವಲ್ಮೀಕಮೆನೆ ಪುಂನ್ನಾಗ
ಸೇವಿತಂ ದಿವಿಯಂತ್ತೆ ಸಜ್ಜಾನಿಯಂತೆ ಸುಮ
ನೋವಿಲಾಸಂ ವದನದಂತ್ತೆ ಮುಖಮೆನೆ ಸದ್ವಿಜಾವಳಿವಿರಾಜಮಾನಂ|| ೨೩ ||
ಅಂತ್ತು ಸಂಧಿ ೯ಕಾಂ ಪದನು ೧೧೦ಕ್ಕಾಂ ಮಂಗಳಮಹಾ ಶ್ರೀ ಮಳೆಯ ರಾಜೈಯ್ಯನವರ ಕಾವ್ಯ ಕವಿಕರ್ನಭೂಷಣ ಸಂಧಿ ೩೪ಕ್ಕೆ ಸಂಪೂರ್ನ ಮಂಗಳಮಹಾ ಶ್ರೀ

ವಿಷಯ : ಮಳೆಯರಾಜನ ಕಥೆ.

ವಿಶೇಷ : ಅಂತ್ಯದ:ಕೆಲವು ಗರಿಗಳು ಅಂಚುಗಳಲ್ಲಿ ಶಿಥಿಲ. ಕೆಲವು ಗರಿಗಳನ್ನು ಹುಳು ತಿಂದು ಮಧ್ಯೆ ಮಧ್ಯೆ ರಂಧ್ರಗಳು ಬಿದ್ದಿವೆ.

1302

ಕೆ. ಬಿ. ೪೩೪ **ಮಾಚಿದೇವ ಮನೋವಿಲಾಸ** ವೃತ್ತ, ಶ್ಲೋಕ, ಟೀಕು

೧೨.೫" × ೪.೩" ಬಸವಲಿಂಗಯೋಗಿ ಸು. ೧೫೦೦

೧–೧೯೮ ಪತ್ರ ೧೧ ಪಂಕ್ತಿ ೪೪ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯ ನಮಃ ॥ ಮಾಚಿದೇವ ಮನೋವಿಲಾಸ ಪ್ರಾರಂಭ ಕರಿಷ್ಯೇ ॥ ಶ್ರೀರಸ್ತು ॥
ವೃತ್ತ ॥ ಜಯತಿ ಬಸವರಾಜತ್ಸಾಸ್ಥ್ಯ ನೈರ್ಮಲ್ಯ ಪೂಜಃ ।
ಪ್ರಥಮಗಣ ಸಮಾಜಃ ಪ್ರೋಲ್ಲಸದ್ಭಕ್ತಿನೈಜಃ ॥
ಪ್ರಹೃತವಿನಮದರ್ತಿಸ್ಸಾಯದಾವ್ನಾಯ ಪೂರ್ತಿ ।
ಸ್ಥಿರದಿಗಮಿತ ಕೀರ್ತಿ ಶ್ರೀ ವೃಷಾಧೀಶಮೂರ್ತಿಃ ॥
ಟೀ ॥ ತ್ಸಾಸ್ಥ್ಯ ನೈರ್ಮಲ್ಯ ಪೂಜಃ । ತ್ಸಾಸ್ಥ್ಯ ನೈರ್ಮಲ್ಯಃ । ಬಾಹ್ಯಾಭ್ಯಾಂತರ ಸಂಬಂಧವಾದ । ಪೂಜಾ । ಶಿವಪೂಜೆಮುಳ್ಳಾತನಾದ । ಪ್ರಥಮಗಣ । ವೀರತವೀರಭದ್ರಾದಿ ಪ್ರಥಮಗಣಂಗಳ । ಸಮಾಜಃ । ಸಮುಹವನುಳ್ಳಾತನಾದ । x x x ಬಸವರಾಜಃ । ಬಸವೇಶ್ವರನು । ಜಯತಿ । ಸರ್ವೋದತ್ಕಷ್ಟನಾಗಲಿ॥

ಅಂತ್ಯ : ಕಲ್ಯಾಣಮೇವ ಕುರ್ವೀತ ಶಿವಭಕ್ತಾಂಶ್ಚ ತರ್ಪಯೇತ್ ।
ಪ್ರತ್ಯಬ್ದಂತಮನುದ್ದಿಶ್ಯ ಶಿವ ಭಕ್ತಾಂಶ್ಚ ಭೋಜಯೇತ್ ॥
ಭಕ್ತೇ ಭೋತ್ತ ಮನಂ ಯದತ್ರಮೇವ ಶಿವಾಯ ವೈ ॥
ಇತಿ ಶ್ರೀ ವೇದ ವೇದಾಂತ ಶಿವಾಗಮಸ್ಮೃತ ಪುರಾಣೇತಿಹಾಸ ಸಾರಭೂತ ವೀರಶೈವಾಚಾರ ಸಾರೋದ್ಧಾರೇ ಶ್ರೀಮದಾನಂದ ಬಸವಲಿಂಗ ಶಿವಯೋಗಿ ವಿರಚಿತ ಶಿವಾಧಿಕ್ಯ ಕಥನೇ ಮಾಚಿದೇವ ಮನೋವಿಲಾಸೆ ಅಂತೇಷ್ಟಿ ಕ್ರಮಶ್ಚತುತ್ರಿಂಶತ್ಪ್ರಕರಣಂ ಸಮಾಪ್ತಿ ಮಗಮತ್ ॥ ಶ್ರೀ ॥

ವಿಷಯ : ವೀರಶೈವ ಆಚಾರದ ವಿವರಣೆ.

ವಿಶೇಷ: ಇದರಲ್ಲಿ ಒಟ್ಟು ೩೪ ಪ್ರಕರಣಗಳಿವೆ. ಅಕ್ಷರಗಳನ್ನು ಬಿಡಿಸಿ ಬರೆದಿದೆ. ಮೊದಲ ಎರಡು ಮತ್ತು ಕಡೆಯ ಒಂದು ಪತ್ರಗಳಲ್ಲಿ ಚಿತ್ರಗಳಿವೆ. ಪತ್ರಗಳನ್ನು ಸೇರಿಸಿ ಹೊಲಿಯದೆ ಬಿಡಿ ಬಿಡಿಯಾಗಿವೆ.

1303

ಕೆ. ಎ. ೨೩೫/೧ **ಮಾಣಿಕ್ಯಸ್ವಾಮಿ ಚರಿತ್ರೆ** ಭಾಮಿನೀಷಟ್ಪದಿ

೧೩" × ೮" ನಾಗವ ಸು. ೧೭೦೦

೧–೧೨೯ ಪತ್ರ ೧೨ ಪಂಕ್ತಿ ೧೮ ಅಕ್ಷರ

ಆದಿ : ಮಾಣಿಕಸ್ವಾಮಿಯ ಚರಿತೆಯ ಬರೆಯುವದಕ್ಕೆ ನಿರ್ವಿಘ್ನಮಸ್ತು ||
ಭಾಮಿನಿ ಷಟ್ಪದವು || ಶ್ರೀ ಮೋಕ್ಷಪದವಿನೀಊದಾರನು
ಸಾಮಜಾರಿಯ ಪೀಠದಿಂದ ಮೇ
ಲಾಮರಸ ಷಡುದಳದಿ ಚತುರಂಗುಲವ ಬಿಟ್ಟಪರ್ವಾ
ಪ್ರೇಮದಿಂ ತ್ರಿವರ್ನಮಾಗಿಯೆ
ಶ್ರೀಮುಖದಿ ಸಾರದೆರೆಯನುದಯಿಪ
ಕಾಮದರ್ಪಪಿದೂರ ಮಾಣಿಕ ಜಿನನೆ ರಕ್ಷಿಪುದು || ೧ ||

ಅಂತ್ಯ : ಧರೆಯೊಳತಿಶಯ ಕೋಟಿಲಾಭಾ
ನ್ವಯದ ಸ್ಥಿರಗುಣಿ ಸೊಡ್ಡೆ ಸೆಟ್ಟಿಯು
ವರವಧು ಚೌಡಾಂಬಿಕಾನಂದನನು ನಾಗವನೂ
ಪರಮ ಶ್ರೀಮಾಣಿಕ ಜಿನೇಶನ
ಚರಿತೆಯನು ಕಂನಡದಿ ಸ್ತುತಿಯಿಸಿ
ಯಿರತ್ರಯದ ಸುಖ ಪರತ್ರಯದ ಗತಿಗಳನು ಜೋಡಿಸಿದಾ || ೯೮ ||
ಇತಿ ಶ್ರೀ ಮಾಣಿಕಸ್ವಾಮಿ ಚರಿತ್ರೆ ಸಮಾಪ್ತ || ಶ್ರೀ ||

ವಿಷಯ: ಶಂಕರಗಂಡನೆಂಬ ಮಹಾರಾಜನು ಕೊಲ್ಲಿಪಾಕ್ಷ ಪಟ್ಟಣದಲ್ಲಿ ಒಂದು ದೇವ ಸ್ಥಾನವನ್ನು ಕಟ್ಟಿಸಿ ಮಾಣಿಕ ಜಿನಬಿಂಬವನ್ನು ಪ್ರತಿಷ್ಠಿಸಿದ ಕಥೆ.

ವಿಶೇಷ: ಶಿಥಿಲಪ್ರತಿ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಇದೇ ಪುಸ್ತಕದಲ್ಲಿ ಜ್ಞಾನಭಾಸ್ಕರಚರಿತ್ರೆ ಹಾಗೂ ವಜ್ರಕುಮಾರ ಚರಿತ್ರೆಗಳಿವೆ. ಆದಿಯಲ್ಲಿರುವ ಮೂರು ಪ್ರತ್ಯೇಕ ಪತ್ರಗಳಲ್ಲಿ ಪ್ರಕೃತಗ್ರಂಥದ ವಿಷಯಸೂಚಿಯಿದೆ.

1304

ಕೆ. ಬಿ. ೩೭೪	**ಮಾದೇಶ್ವರನ ಸಾಂಗತ್ಯ**	ಸಾಂಗತ್ಯ
೭.೯" × ೬.೧"	ಗುರುಸಿದ್ದಪ್ಪ	ಸು. ೧೭೫೦
೧–೩೩ ಪತ್ರ	೧೭ ಪಂಕ್ತಿ	೧೮ ಅಕ್ಷರ

ಆದಿ : ಶ್ರೀಗಣಾಧೀಶ ಶಾರದಾ ಗುರುಭ್ಯೋನಮಃ ||
ಶ್ರೀ ಮಾದೇಶ್ವರಸ್ವಾಮಿಯವರ ಸಾಂಗತ್ಯ ಚಾರಿತ್ರ ಬರೆಯುವವಕ್ಕೆ ಶುಭ ಮಸ್ತು ||
ಶ್ರೀಗುರುಸಿದ್ಧಲಿಂಗೇಶ ಮಹೇಶನೆ
ಸಾಗರಶಯನ ನಮಿತನೆ
ಯೋಗೀಶ್ವರ ಜನಪಾಲಕ ಶರಣೈಯ್ಯ
ಬೇಗ ಕೊಡೆನಗೆ ಮತಿಯನು || ೧ ||

ಮಂದಾರ ಗಿರಿಯ ನಿವಾಸ ಮಾದೇಶ್ವರ
ಬಂದೆನ್ನ ಹೃದೆಯದಿ ನೆಲಸಿ
ಚಂದದಿ ನೊದಲೀ ಕೃತಿಯನು ಪೇಳೆನುತಲಿ
ಇಂದುಧರನು ಕೊಟ್ಟ ವರವ ॥ ೨ ॥

x x x x

ಸತ್ಯಮಂಗಲದ ಭೂಪತಿಯ ಸಿಂಹಾಸನ
ಗುತ್ತಾಲತ್ತೂರ ವೊತ್ತಿನಲಿ
ಮತ್ತೆ ಯೆಶೆವ ಮಿಣ್ಣದ ಗುರುಶಿದ್ಧನು
ವಿಸ್ತರಿಸಿದನು ಯಿಾಕೃತಿಯಾ ॥ ೨೪ ॥

ಅಂತ್ಯ : ಈ ಶಿವಸಾಂಗತ್ಯ ಕೇಳಿದವರಿಗೆ ಭವ
ನಾಶವಹುದು ನಿಮುಷದಲಿ
ಈಶನು ಕೈಲಾಸ ಪದವಿಯನೀವ ವಿ
ಲಾಸದ ಸಂಧಿ ಪೂರಾಯಾ ॥ ೧೧೯ ॥

ಅಂತು ಸಂಧಿ ೩ಕ್ಕಂ ಪದನು ೩೬೩ಕ್ಕಂ ಮಂಗಳಮಹಾ ಶ್ರೀ. ಕ್ರೋಧಿನಾಮ ಸಂವತ್ಸರದ ಮಾಘ ಶುದ್ಧ ೫ ಗುರುವಾರ ನಂಜನ್‌ಗೂಡು ತಾಲ್ಲುಕು ಕೆಳಲೇ ಕಸಬಾದಲ್ಲಿರುವರ ಕೋಡು ಸಿದ್ಧಪ್ಪನು ಶ್ರೀಮಾದೇಶ್ವರಸ್ವಾಮಿಯವರ ಸಾಂಗತ್ಯ ಬರೆದು ಸಮಾಪ್ತಮಾದುದು.

ವಿಷಯ : ಮಾದೇಶ್ವರದೇವರ ಮಹಿಮೆ.

ವಿಶೇಷ : ಬರಹ ಸುಂದರ. ಗ್ರಂಥಾರಂಭದ ಪ್ರತ್ಯೇಕ ಪತ್ರದಲ್ಲಿ "ಮಿಂಣದ ಗುರು ಶಿದ್ಧಪ್ಪನೆಂಬ ಕವಿಇಂದ ವಿರಚಿತವಾದ ಶ್ರೀ ಮಾದೇಶ್ವರಸ್ವಾಮಿಯವರ ಚಾರಿತ್ರವೆಂಬ ಸಾಂಗತ್ಯವೂ....(ನಂರ್ಜಗೂಡು ತಾಲ್ಲುಕು ಕಳಲೇ ಕಸಬಾದಲ್ಲಿರುವ ವರಕೋಡು ಪ್ರೈವೇಟ್ ಸ್ಕೂಲ್ಮಾಸ್ಟರ್ ಸಿದ್ಧಪ್ಪನು ಕ್ರೋಧಿ ನಾಮ ಸಂವತ್ಸರದ ಪುಷ್ಯ ಬಹುಳ ೧೩ ಯಲ್ಲು ಬರೆಯುವದಕ್ಕೆ ಪ್ರಥಮ ಪ್ರಾರಂಭಃ....)" ಎಂದಿದೆ. ಎರಡನೆಯ ಸಂಧಿಯಲ್ಲಿ ೮೫-೮೮ ಪೂರ್ತಿ ಪದ್ಯಗಳಿಲ್ಲ. ಮೂರನೆಯ ಸಂಧಿಯಲ್ಲಿ ೨೦ನೆಯ ಪದ್ಯದಿಂದ ೨೩ನೆಯ ಪದ್ಯದ ವರೆಗೆ ಲುಪ್ತ.

1305

ಕೆ.ಎ. ೨೩೬/೧	**ಮಾಧವಾಲಂಕಾರ**	ಕಂದ, ವೃತ್ತ
೧೩"×೭.೯"	ಮಾಧವ	೧೫೦೦
೧-೯, ೨೬-೩೨ ಪತ್ರ	೩೨ ಪಂಕ್ತಿ	೨೪ ಅಕ್ಷರ

ಆದಿ : 52 ಮಾಧವಾಲಂಕಾರ ಪ್ರಥಮಾಶ್ವಾಸ

ಕಂ || ಶ್ರೀಮದ್ಗೌರೀಯವ್ವನ
ತಾಮರಸ ದಿನೇಶನಿಂದು ಭೂಷಣನಮರ
ಸ್ತೋಮಾರ್ಚಿತ ಪದಕಮಳಂ
ಪ್ರೇಮದಿ ನಮಗೀಗೆ ಬಹು ಕಳಾಕುಶಲತೆಯಂ || ೧ ||

ಅಂತ್ಯ : ಈ ತೆರದಿಂ ಶಬ್ದಾರ್ಥಾಳಂಕರಣಂಗಳ ಚಿತ್ರಮಾರ್ಗ
ಸುಕರಮಹೋ ದುಷ್ಕರತತಿಯಂ ಗುಣದೋಷವನು
ರು ಕಾವ್ಯಕ್ಕಿರದು ಕಿಱಿದಱಿಂದಾನುಸುರ್ದೆಂ ||
ಮಾಧವಾಲಂಕಾರ ದೋಷಪ್ರಕರಣಂ ||

ವಿಷಯ : ಅಲಂಕಾರಶಾಸ್ತ್ರ.

ವಿಶೇಷ : ಶಕಟರೇಫವನ್ನು ಕೆಲವೆಡೆ ಮಾತ್ರ ಬಳಸಿದೆ. ಅಸಮಗ್ರ. ಪತ್ರಗಳ ಒಂದು ಕಡೆಯಲ್ಲಿ ಮಾತ್ರ ಬರೆದಿದೆ. ಇದರೊಂದಿಗೆ ಶಾರದಾವಿಲಾಸ ಮತ್ತು ಕವಿಜಿಹ್ವಾಬಂಧನ ಎಂಬ ಗ್ರಂಥಗಳೂ ಇವೆ.

1306

ಕೆ. ಬಿ. ೪೮.	**ಮಾಧವಾಲಂಕಾರ**	ಕಂದ, ವೃತ್ತ
೭.೯" × ೬.೪"	ಮಾಧವ	೧೫೦೦
೧–೫೨ ಪತ್ರ	೨೦ ಪಂಕ್ತಿ	೧೬ ಅಕ್ಷರ

ಆದಿ : ಮಾಧವಾಲಂಕಾರಂ ||

ಕಂ || ಶ್ರೀಮದ್ಗೌರೀ ಯೌವನ
ತಾಮರಸ ದಿನೇಶನಿಂದು ಭೂಷಣನಮರ
ಸ್ತೋಮಾರ್ಚಿತ ಪದಕಮಲಂ
ಪ್ರೇಮದಿನೆಮಗೀಗೆ ಬಹು ಕಲಾಕುಶಲತೆಯಂ || ೧ ||

x x x x

ವೃತ್ತಂ || ಅಂತು ನೆಗಳ್ದಲಂಕೃತಿಗಳೋಳ್ಕುಶಲತ್ವಮನಾಂತು ಕೀರ್ತಿಸ
ಲ್ಕಾಂತೆಗೆ ದಂಡ್ಯಳಂಕರಣಮುಪ್ಪದಳಂಕೃತಿಯೆಂದದಂ ಕರಂ
ಸಂತತಮೊಲ್ದು ಕನ್ನಡದೊಳಂ ನೆರೆ ಕೇಳ್ದಪೆನೆಂದು ಮಾಧವಂ
ಸಂತಸದಿಂದೆ ಪೇಳಲನುಗೈದನಿದಂ ಸುಕವೀಂದ್ರವಲ್ಲಭಂ || ೧೫ ||

ಅಂತ್ಯ : ಪದಬಂಧಂ ರೀತಿ ಭಾವಂ ರಸವತುಳನಯಾರೇಖಚಲ್ಪಾಗೆ ವಾಕ್ಯಂ
ಪದಮುತ್ಯುತ್ಸಾಹಮಂ ಪುಟ್ಟಿಸೆ ಬುಧತತಿಯೋಳ್ಕೀರ್ತಿಕಾಂತಾವಿಳಾಸಾ
ಸ್ಪದಮೆಂಬಂ ತೋರ್ಪಮಂ ಮುಂದಿದೆ ಕವಿಕುಲತಿಲಕಂ ಶಾರದಾಕರ್ಣಪೂರಂ
ಮುದದಿಂದಂ ಪೇಳ್ದಳಂಕಾರಮುದೆಸೆಗೆ ಜಗಚ್ಚಕ್ರಮುಳ್ಳನ್ನಮೆಂದುಂ || ೧೨೧ ||

ಇದು ನಮದಮರಕಲ್ಪಕುಜ ಸಮುದಯ ಮಕುಟ ಕೋಟಿ ಘಟಿತನವಾರುಣ ಮಣಿಕಿರಣ ಕಿಸಲಯೋಪಮಿತ ವಿಮುಲನಖಕಾಂತ ಕುಸುಮರಂಜಿತ ಶ್ರೀ ಯದುಗಿರಿಸದನ ನಾರಾಯಣ ಚರಣಕಮಲಭ್ರಮರಾಯಮಾಣ ಸುಕವಿ ಮಾಧವ ಪ್ರಣೀತಾಲಂಕಾರದೊಳ್ ತೃತೀಯ ಪರಿಚ್ಛೇದಂ ಸಮಾಪ್ತಂ ||

ವಿಷಯ : ಅಲಂಕಾರಶಾಸ್ತ್ರ.

ವಿಶೇಷ : ಪದ್ಯಗಳಿಗೆ ಪಾದವಿಂಗಡಣೆ ಇದೆ. ಮಧ್ಯದಲ್ಲಿ ಅಕ್ಷರಗಳು ಲುಪ್ತವಾಗಿವೆ.

1307

ಕೆ.ಬಿ. ೧೯೬	**ಮಾನಿಷಪಂಚಕ**	ಶ್ಲೋಕ, ಟೀಕು
೭.೭" × ೬.೩"	?	?
೮ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ಮಾನಿಷಪಂಚಕ || ಶ್ರೀಗಣಾಧಿಪತಯೇ ನಮಃ ||
ಶ್ರೀ ಭಗವಂತನಾಗಿರುವಂಥಾ | ಸ್ವಾಮಿಯಿಂದಲು | ಶಂಕರಾಚಾರ್‍ಯರವರಿಂದಲೂ | ಮಾಡಲ್ಪಟ್ಟಂಥಾ ಮಾನಿಶಪಂಚಕದ ಅರ್ಥ ಅವಿತ್ವಂನರಿಗೆ | ತಿಳಿಯುವದಕ್ಕೋಸ್ಕರ | ಕಥಾಸಂದರ್ಭ ಪೂರ್ವಕವಾಗಿ ಪೇಳುತ್ತಿದ್ದೇವೆ || ಅದೆಂತೆಂದರೆ ||

ಅಂತ್ಯ : ಟೀಕು|| ಯೀ ಪ್ರಕಾರದಲ್ಲಿ ಸ್ತೋತ್ರವಂ ಮಾಡಿ ಅಂತರ್ದಾನವಂ ಹೊಂದಿದನು | ತದನಂತರದಲ್ಲಿ ಆಚಾರ್‍ಯರು ಶಿಷ್ಯರೊಡನೆ ಸಹಾ ಕಾಶಿಕ್ಷೇತ್ರವಂ ಕುರಿತು ತೆರಳಿಹೋದರು ಯಿಂತೀ ಮಾನಿಷಪಂಚಕದರ್ಥವ ಕೂಲಂಕೃತವಾಗಿ ವಿಚಾರಿಸಿ ಆವ ಪುರುಷನು ಅನುಭವಕ್ಕೆ ತಂದುಕೊಂಬನೋ ಅವನು ಮುಕ್ತನೆಂದು ಶಾಸ್ತ್ರಶಿದ್ಧಾಂತವೂ | ಯಿದಂ ಮಾನಿಷಾಪಂಚಕಂ ಸಮಾಪ್ತ ಮಂಗಳ ಮಹಾ ಶ್ರೀ ||

ವಿಷಯ : ಕಾಶೀಕ್ಷೇತ್ರವನ್ನು ಕುರಿತು ಹೋಗುವಾಗ ಈಶ್ವರನು ಚಂಡಾಲ ರೂಪಿನಿಂದ ಶಂಕರಾಚಾರ್ಯರ ಜ್ಞಾನವನ್ನು ಒರೆಹಚ್ಚಿ ನೋಡಿದ ಪ್ರಸಂಗ.

ವಿಶೇಷ : ಸ್ಫುಟಾಕ್ಷರ.

1308

ಕೆ.ಬಿ. ೪೬೫/೨	**ಮಾರೀಮುಖನ ಕಾಳಗ**	ಯಕ್ಷಗಾನ
೮.೨" × ೬.೫"	?	?
೧೮ ಪತ್ರ	೧೮ ಪಂಕ್ತಿ	೨೪ ಅಕ್ಷರ

ಆದಿ : ರಾಮಾಯಣದೊಳಗಣ ಮಾರಿಮುಖನ ಕಳಗ ಬರಿಯುದಕೆ ಶುಬಾಮಸ್ತು ||
ಕಂದಪದ್ಯ || ಶ್ರೀ ಲಕ್ಷಿಮಿ ವಿಲಾಸಂ ಸುಲಲಿತ ಬಾಸಂ
ಸುರೇಂದ್ರಾವಂದಿತ್ತಪೋಶಂ
ಬಾಲರ್ಕಮಿಕಂ ಭಾಸಂ ಗಜಪುರಧೀಶಂ
ಶ್ರೀ ಹರಿನರಸಿಂಹ್ಮ ರಕ್ಷಿಪುದೆಮಗಂ ||
ರಾಗಾ || ನಾಟಿ | ಝಂಪೆ |
ಶ್ರೀ ಗವುರೀವರಪುತ್ರಾ | ಸುಜನಜನನುತ್ತಿಪಾತ್ರಾ
ನಾಗಶಯನನ ಮಿತ್ರಾ | ಅಮರೇಂದ್ರ ಸೋತ್ರಾ ಜಯತು ಜಯತ್ತು ||

ಅಂತ್ಯ : ವಾರ್ಧಿಖ್ಯ || ತರಳಲವ ಕೇಳ್ದಲೈ ಮಾರೀಮುಖಾಕ್ಯರಂ ಸಂ
ಹರಿಶಿ ರಾಘವಂ ಕಪಿಬಟ್ಟರ ಸಂತ್ಯೈಶಿ
ಯಿರುತೀರ್ದನಂದೂ ವಿಶ್ವಕರ್ಮನು ನೀರ್ಮಿಶಿದ ಸದನವನು ಹೋಗಲೂ
ಕುಶನೆ ಕೇಳಿದರಿದುರುಳರಂ ಸಂಹರಿಶಿ
ಯಿರುತಿರ್ದರೈ ನಿಂಮವರು ಕಪಿಕಟ್ಟಕಮುದ್ಯಾ
ದೊಳೆಂನನಾ ಕ್ರಿಷ್ಣನಾನ ಕಟ್ಯಾಕ್ಷದಿಂದಾ

x x x x

ಬಹುದ್ಯಕಾಲನಿಗೆ ಶ್ರೀರಾಮನಿಗೆ ಮಂಗಳಂ ಜಯ ಮಂಗಳಂ || ಶ್ರೀ ||
ಅಂತು ಸಂಧಿ ೧ದಕ್ಕಂ ಪದಾ ೪೭೮ಕ್ಕಂ ಮಂಗಳಮಹಾ ಶ್ರೀ ||
ಯಿಾ ಪ್ರಸಂಗ ಬರದಾತ ಕುಂದ್ದೂರಾ ನಂದ್ಯಪ್ಪಶೆಟ್ಟಿ ಬರಹದ ಮಾರೀ ಮುಖನ ಕಾಳಗಾ || ವಿಜೆಯ ಸಂ|ದ ಬಹುಳ ೫ಲು ಬರದ್ದೂ ಸೌಮ್ಯಿವಾರ ದಿವ್ಸ ತಾಸು ೧೦ ಹತಕ್ಕೆ ಬರದು ಮುಗ್ಸಿದ್ದು ||

ವಿಷಯ : ರಾಮನು ಯುದ್ಧದಲ್ಲಿ ಮಾರಿಮುಖನನ್ನು ಕೊಂದ ಕಥೆ.

ವಿಶೇಷ : ಅಕ್ಷರಗಳು ಗುಂಡಾಗಿವೆ. ಇದೇ ಪುಸ್ತಕದಲ್ಲಿ ಇಂದ್ರಕೀಲಕವೆಂಬ ಯಕ್ಷಗಾನ ಪ್ರಸಂಗ ಇದೆ. ಮಧ್ಯೆ ಮತ್ತು ಕೊನೆಯಲ್ಲಿ ಮನೆಗೆ ಸಂಬಂಧಿಸಿದ ಕೆಲವು ಲೆಕ್ಕಗಳಿವೆ.

1309

ಕೆ.ಬಿ. ೪೦೩/೫	**ಮಾರ್ಕಂಡೇಯಚರಿತ್ರೆ**	ಯಕ್ಷಗಾನ
೮.೩"×೬.೪"	ರುದ್ರ	೧೮೭೭
೧–೨೫ ಪತ್ರ	೨೩ ಪಂಕ್ತಿ	೨೨ ಅಕ್ಷರ

ಆದಿ : ಮಾರ್ಕಂಡೇಯಚರಿತ್ರೆ | ಯಕ್ಷಗಾನ | ಉತ್ಪಲಮಾಲಾವೃತ್ತ |

ಶ್ರೀ ನಗರಾಜ ಚಾಲಪನ ಚಂದ್ರ ಚಕೋರ ಫಣೀಂದ್ರಹಾರ ಸ
ನ್ಮಾನಿ ಮನೋಬ್ಜ ಭಾಸ್ಕರ ಹಿಮಾಂಶು ಕಳಾಧರ ಮಾರ ಜೈತ್ರ ಸು
ಜ್ಞಾನವಿಹಾರ ಧೀರನುತ ಗೌರಕಳೇಬರ ನೀಲಕಂಧರಾ
ಮಾನಿತ ಕೂರ್ಮಪಟ್ಟಣ ನಿವಾಸನೆ ರಕ್ಷಿಪುದೆನ್ನ ಸಂತತಂ ॥ ೧ ॥

x x x x

ಕಂದ ॥ ವರಮಾರ್ಕಂಡೇಯಮುನೀ
ಶ್ವರನ ಸುಚಾರಿತ್ರೆಯನ್ನು ಸಂಭ್ರಮ ಮನದೊಳ್
ವಿರಚಿಪೆ ಶ್ರೀ ಕೂರ್ಮಪುರೀ
ಶ್ವರನಂಕಿತದಿಂದಲೀಗ ಸದ್ಭಕ್ತಿಯೊಳೂ ॥ ೨ ॥

ಅಂತ್ಯ : ರಾಗ–ಮಧು ಮಾಧವಿ–ದ್ವಿಪದೆ ।
ಶ್ರೀ ರಾಜಿಸುವ ಬಾಲಚಂದ್ರಶೇಖರನ
ಕಾರುಣ್ಯದಿಂದ ಮಾರ್ಕಂಡೇಯಮೌನಿ
ಚಂಚಲವಿಲ್ಲದೆ ಸಾರ್ವಕಾಲದಲಿ
ಪಂಚಾಕ್ಷರೀಮಂತ್ರ ಪಠಣೆಯಿಂದಿರ್ದ
ನೆಂದಾಗ ಸೂತಮೌನೀಂದ್ರನು ಶೌನಕಾದಿಗಳಿಗೆ ಪೇಳೆ ಕಡುಮುದ
ದಿಂದ ಯಿರುತಿರಲ್ ಋಷಿಗಣರಿಂಪುಸೊಂಪಿನಲಿ
ಸರಸ ಶಾಲಿವಾಹನಶಕ ವರುಷಗಳು
ಶರ ನಿಧಿ ಋಷಿ ಚಂದ್ರ ಸಂಖ್ಯೆಯೊಳ್ಕರೆವ
ವರ ಪರೀಧಾವಿ ೧೭೯೫ಸಂವತ್ಸರ ಮಾಘ ಬಹುಳ ಸಪ್ತಮಿ ಸೌಮ್ಯವಾರದವರಿಗೆ
ಧರೆನಿಡುಮಾಮಿಡಿ ಧಾಮರಾಗಿರ್ಪ
ಕರಿಬಸವಸ್ವಾಮಿಗಳ ಶಿಷ್ಯನಾದ
ವರಪಂಡಿತಾರಾಧ್ಯ ವಂಶಾಬ್ಧಿ ಸೋಮ
ಸುರುಚಿರ ಸುಜ್ಞಾನ ಶೋಭಿತನಾದ
ಅನುಪಮ ಪುಷ್ಪದೈಯ್ಯಾರ್ಯ ನಂದನನು
ಘನಶೀಲರಾಜಾಂಬಗರ್ಭ ಸಂಭವನು
ಕರಮರ್ಥಿಯಿಾ ರುದ್ರಕವಿ ಭಕ್ತಿಯಿಂದ
ಸರಸ ಮಾರ್ಕಂಡೇಯ ಚಾರಿತ್ರೆಯನ್ನು
ವಿರಚಿಸಿದನು ಧಾತ್ರಿ ವಿಖ್ಯಾತಮಾಗಿ
ಕೇಶವನುತ ಜ್ಞಾನಕೋಶ ದಿನೇಶಪ್ರ
ಕಾಶ ಶ್ರೀ ಕೂರ್ಮ ಪುರೀಶ ಸೋಮೇಶ ॥ ಮಂಗಳಂ ॥ ಮಂಗಳಂ ॥ ೩ ॥
ಮಾರ್ಕಂಡೇಯಚರಿತ್ರೆ ಸಂಪೂರ್ಣವಾಯಿತು ॥

ವಿಷಯ : ಮಾರ್ಕಂಡೇಯನ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ಪುತ್ರಕಾಮೇಷ್ಟಿ, ದೂರ್ವಾಸಭೋಜನ, ಕನಕಾಂಗೀ ಕಲ್ಯಾಣ, ಅಂಬರೀಷ ಚರಿತ್ರೆ ಎಂಬ ನಾಲ್ಕು ಕೃತಿಗಳಿವೆ.

1310

ಕೆ.ಬಿ. ೪೨೦/೨ **ಮಾರ್ಕಂಡೇಯ ಚರಿತ್ರೆ** ಯಕ್ಷಗಾನ
೭.೮" × ೫.೮" ರುದ್ರ ೧೮೭೭
೧೧೩–೧೫೩ ಪತ್ರ ೧೭ ಪಂಕ್ತಿ ೧೫ ಅಕ್ಷರ

ಆದಿ : ದುಂದುಬಿ ಸಂ| ಶ್ರಾವಣ ಶ ೧೩ಲ್ಲು ಮಾರ್ಕಾಂಡೈಯ್ಯನ ಚೆರಿತ್ರೆ ;ಬರಿಯುವ ದಕ್ಕೆ ಶುಭಮಸ್ತು
ರಾಗ|| ವೃತ್ತಾ|| ಶ್ರೀರಗನಾಥಮಿತ್ರಮುಖಚೆಂದ್ರ ಚಕೊರ್ರ ಫಣೀಂದ್ರಹಾರಾಸ
ನಾನಿಮನೊಜ್ಞ ಬಾಸ್ಕರಯಿಮಾಂಶು ಕಳಾಧರ ಮಾರಚ್ಯೆಯಿತ್ರ ಸು
ಗ್ನಾನ ವಿಹಾರ್ರಾ ಧೀರನುತಗೌರಮವಿಗ್ರಹ ನೀಲಕಂಧರ
ಮಾನಿತ ಕೂರ್ಮಪಯಣ ನಿವ್ಯಾನೆರೆ ರಕ್ಷಿಸು ಯಂನ್ನಸಂತತಂ||
ವಾರಣ ವಕ್ತ್ರದೇವಾ ಮುನಿವಂದಿತನಾದ ಗಣಾಧಿನಾಥನಂ
ಚಾರುಸುಭಕ್ತಿಯಿಂ ಭಜಿಶಿ ಶಾರದೆ ಸದ್ಗುರ್ರುವಾದ ಪದ್ಮಗಳ್
ಭೋರಾನೆ ನವ್ಯಪುಷ್ಪಾದ್ಯ ಪೂಜಿಶಿ ಸತ್ಕವಿಗಳ್ಗೆ ವಂದಿಶಿ
ಧಾರುಣಿ ಸ್ಪೇತಕೂರ್ಮಪುರಿಧಾಮಾನುಪ್ರಸ್ತುರಿಗ್ಯೆದು ಚಿತ್ತದೊಳ್ ||

ಅಂತ್ಯ : ಸರಸ ಶಾಲಿವಾಹನಶಖ ವರುಷಂಗಳು ಶರ ನಿಧಿ ರುಷಿ ಚೆಂದ್ರ ಶಂಕೆಯೊಳ್ ಮೆರೆವ ವರ ಪರಿಧಾವಿ ಸಂವತ್ಸರದ ಮಾಗ ಬಹುಳ ೭ ಸೋಮವಾರದವರಿಗೆ ಧರನಿಡುಮಾಮುಡಿ ಧಾಮರಾಗಿರ್ಪ ಕರಿಬ್ಬವಸ್ವಾಮಿಗಳ ಘನ ಶಿಷ್ಯನಾದ ವರಪಂಡಿತಾರಾಧ್ಯ ವಂಶಾಬ್ಧಿಸೋಮ ಸುರಚಿರ ಸುಜ್ಞಾನ ಶೋಭಿತನಾದ ಅನುಪಮ ಪುಷ್ಪಸೈಯ್ಯಾದ್ಯನಂದನನೂ ಘನಶೀಲ ರಾಜಾಂಶಗರ್ವಸಂಭವನೂ ಕರಮರ್ತಿಯಿಂ ರುದ್ರಕವಿ ಭಕ್ತಿಯಿಂದ ಸರಸ ಮಾರ್ಕಂಡೇಯಚರಿತ್ರೆಯಂನು ವಿರಚಿಸಿದನು ದಾತೃ ವಿಖ್ಯಾತವಾಗಿ ಭರದಿಂದಲ್ಲಿದ್ದನು. ಸದ್ಭಕ್ತಿಯಿಂದ್ಯಾರು ಕೇಳಿ ಪೇಳಿದವರ್ಗೆ ಕ್ಷಿಥಿರಥನಾದ ಪಾಲಾಕ್ಷ ಕೊಡುವನು ಪರಮಸವುಖ್ಯವನು ಜಲದಿ ನಕ್ಷತ್ರ ಪುಷ್ಕರಮಹಾಮೇರ್ರು ಸುಲಲಿತ ವರಚೆಂದ್ರ ಸೂರ್ಯರುಳ್ಳನಕಾ ಭೂಚೆಕ್ರದಲಿ ಯಿಾ ಪುಂಣ್ಯಚೆರಿತ್ರೆ ಆಚೆಂದ್ರತಾರಾರ್ಕವಾಗಿ ವಪ್ಪಿಹುದು.

ವಿಷಯ : ಮಾರ್ಕಂಡೇಯನ ಚರಿತ್ರೆ.

ವಿಶೇಷ : ಈ ಗ್ರಂಥದ ಕೊನೆಯಲ್ಲಿ ಒಂದು ಮಂಗಳಾರತಿಯಿದೆ. ಈ ಗ್ರಂಥದೊಂದಿಗೆ ಶಿವನಾಟಕ, ರಾಮರಾವಣ ಯುದ್ಧ, ತತ್ತ್ವಪದಗಳು ಇವೆ.

1311

ಕೆ.ಬಿ. ೪೨೧ **ಮಾರ್ಕಂಡೇಯ ಚರಿತ್ರೆಯ ಭಾಗ** ಭಾಮಿನೀಷಟ್ಪದಿ
೭.೮" × ೬.೩" ಬೇಟೆರಾಯ ಸು. ೧೭೫೦
೧–೧೪ ಪತ್ರ ೨೦ ಪಂಕ್ತಿ ೨೬ ಅಕ್ಷರ

ಆದಿ : ಶ್ರೀ ಮಾರ್ಕಾಂಡೇಯ ಚರಿತ್ರೆ ||
ಕೇಳಿರೈ ಮುನಿಗಳಿರ ಮುನಿಸುತ
ಕೇಳಿದನು ತಂದೆಯನು ಮಾಯಾ
ಜಾಲದಿಂ ಹೊಳೆದಳಿವ ಕಾಲತ್ರಯದ ಲಕ್ಷಣವಾ
ಪೇಳಬೇಕೆಂದೆನುತ ಕೇಳುವ
ಬಾಲನನು ಮುದ್ದಿಸುತ ಪೇಳಿದ
ಸ್ಥೂಲ ಸೂಕ್ಷ್ಮಗಳೆನಿಸಿ ರಂಜಿಸುತಿರ್ದ ಕಾರಣದಾ || ೧ ||
ದೇಹ ತಾ ಮೂರೆನಿಸಿ ಮಾಯಾ
ಸಾಹಸದ ನಾಟಕವು ತೋರ್ಪುದ
ನೂಹಿಸಲ್ಕೀ ಸ್ಥೂಲದೇಹವು ದಹಿಸಪಡುತಿಹುದು
ದೇಹವೆರಡು ಜೀರ್ಣವಾ ನಿ
ರ್ದೇಹವೆನಿಪನು ಸುಪ್ತಿಯೊಳಗವ
ಗಾಹನವು ತಿಳಿಯಲು ಮುಮುಕ್ಷುವಿನಲ್ಲಿ ತಾನಿಲ್ಲಾ || ೨ ||

ಅಂತ್ಯ : ಆವನಿದ ನೋಡುವನು ಕೇಳುವ
ನಾವನೀ ಚರಿತೆಯನು ಲಿಖಿಸುವ
ನಾವನವನಿಗೆ ಸಕಲ ಮನಸಾಭೀಷ್ಟ ಸಿದ್ಧಿಪುದು
ಭಾವಿಸುವರಳವಡದ ಸಂಪದ
ತೀವಿ ಬರುತಿಹುದಮಿತ ಸಿದ್ಧಿಯ
ನೀವ ತುರುಗೆರೆ ವರಪುರಾಧಿಪನು ಮನನಿಸಲೂ || ೪೧ ||
ಅಂತೂ ಅಧ್ಯಾಯ ೭೧ಕ್ಕಂ ಪದನೂ ೩೯೨೮ಕ್ಕಂ ಜಯ ಮಂಗಳಮಹಾ ಶ್ರೀ||
ಶ್ರೀ ಹರಿಹರೇಶ್ವರ ಸ್ವಾಮಿಯವರ ಚರಣಾರವಿಂದವೆ ಗತಿ ||
ಸೂಚನೆ || ಪಾಲಿಸೆಂನ ಹರಿಹರೇಶ್ವರಾ
ಹರಿಯೆ ಶುಭಕರಹರನೆ ಕೃಪಾಕರ
ಪಾಲಿಸೆನ್ನಂ ಹರಿಹರೇಶ್ವರಾ ||—||

ವಿಷಯ : ಮಾರ್ಕಂಡೇಯಪುರಾಣದಲ್ಲಿರುವ ವೇದಾಂತ ವಿಚಾರ ಸಂಗ್ರಹ.

ವಿಶೇಷ : ಸುಂದರಾಕ್ಷರ. ಅಸಮಗ್ರಪ್ರತಿ. ೪೮ರಿಂದ ೫೨ನೆಯ ಅಧ್ಯಾಯ ಪೂರ್ತಿ ಮತ್ತು ೭೧ನೆಯ ಅಧ್ಯಾಯ ಮಾತ್ರ ಇವೆ.

1312

ಕೆ. ೬೫/೨	**ಮಾರ್ಕಂಡೇಯ ಜ್ಯೋತಿಷ**	ಭಾಮಿನೀಷಟ್ಪದಿ
೨೦" × ೨.೨"	ಬೇಟೆರಾಯ	ಸು. ೧೭೫೦
೧–೨೭ ಪತ್ರ	೧೧ ಪಂಕ್ತಿ	೯೮ ಅಕ್ಷರ

ಆದಿ : ಜ್ಯೋತಿಷ ಜಾತಕ ಭಾವಾ - ಶ್ರೀ ಗಣಾಧಿಪತಯೇ ನಮಃ ॥
ಸಕಲಜಾತಕ ನಿರ್ಣಯವನತಿ
ಯುಕುತಿಯಿಂದರುಹಿದನು ಸುತನಿಗೆ
ಸುಖತರವು ತಿಳಿದವನಿಗಾಯುರ್ಯೋಗಯೋಗಗಳಾ ॥
ಪದನೂ ॥ ವಂದುಳಿಯದೆಲ್ಲವನು ಪೇಳುವ
ದೆಂದು ನಮಿಸುತ ಕೇಳಿದನು ಮುನಿ
ವೃಂದ ಕರಿದೆನಿಪಮಳ ಜಾತಕಯೋಗ ನಿರ್ಣಯವಾ
ಕಂದ ತಿಳಿ ನೀ ಜನನಕಾಲವ
ನಂದದಿಂ ಗ್ರಹಬಲವ ಶುಭವನು
ಹೊಂದಿ ರಾಜಪರಮಲಕೇಂದ್ರ ತ್ರಿಕೋಣದಲ್ಲಿರುವಾ ॥ ೧ ॥

ಅಂತ್ಯ : ॥ ೩೦ ॥ ವಾಹನಾಧಿಪ ಸಹಿತ ರಾಜಿಸೆ
ವಾಹನತ್ರಯವಧಿಕ ಸಂಪದ
ವೂಹಿಸಲು ದಾಯೆಶ ಶುಭದೊಳಗಿರಲು ಪೂರ್ವಫಲಾ
ರಾಹು ಶನಿ ಮಾಂದಿಗಳು ಪಾಪ ಸ
ಮೂಹ ರಿಪು ರಂದ್ರಾರಿ ನೀಚ
ವ್ಯೂಹ.......................... ॥ ೩೧ ॥

ವಿಷಯ : ಜಾತಕಫಲ ವಿವರ.

ವಿಶೇಷ : ಅಸಮಗ್ರ ಪ್ರತಿ. ಗ್ರಂಥದ ಕೊನೆಯಲ್ಲಿ ಬೇರೆ ೩ ಪತ್ರಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಕಥೆಯಿದೆ. ಇದೇ ಕಟ್ಟಿನಲ್ಲಿ ಚಾಮರಾಜೋಕ್ತಿ ವಿಲಾಸವೆಂಬ ಮತ್ತೊಂದು ಗ್ರಂಥವಿದೆ.

1313

ಕೆ.ಬಿ. ೪೯	**ಮಾರ್ಕಂಡೇಯ ಜ್ಯೋತಿಷ**	ಭಾಮಿನೀಷಟ್ಪದಿ
೭.೭″ × ೬.೨″	ಬೇಟೆರಾಯ	ಸು. ೧೭೫೦
೧–೧೮೦ ಪತ್ರ	೧೧ ಪಂಕ್ತಿ	೨೫ ಅಕ್ಷರ

ಆದಿ : ಮೃಕಂಡುಮುನಿ ಮಾರ್ಕಂಡೇಯನಿಗೆ ನಿರೂಪಿಸಿದ ಜ್ಯೋತಿಷವಂನ್ನು ಬರೆಯುವದಕ್ಕೆ ಶುಭಮಸ್ತು. ಪೀಠಿಕೆ ಅಧ್ಯಾಯ ಪ್ರಾರಂಭ :–
ಶ್ರೀ ಜಲಜಭವನುತನೆ ಶಾಶ್ವತ
ರಾಜಶೇಖರಪುತ್ರ ವರ ಸುರ
ರಾಜ ಮಕುಟ ಮಣಿಪ್ರಭಾ ನೀರಾಜಿತಾಂಘ್ರಿಯುಗಾ

ರಾಜ ರಾಜಾದ್ಯಖಿಳ ಭಕ್ತರ
ಪೂಜೆಯನು ಕೈಗೊಂಡು ವಿಘ್ನ
ವ್ಯಾಜವನು ಸಂಹರಿಪ ವಿಘ್ನೇಶ್ವರನೆ ಕೊಡು ಮತಿಯಾ || ೧ ||

x x x x

ಘನತರದ ತುರುಗೆರೆಯ ಸ್ಥಾವರ
ದನುಪಮನು ವರ ದಾಸದೇವನ
ತನಯ ಬೇಟೆಯ ರಚಿಸಿದನೀ ಮಹಾಕೃತಿಯಾ
ಮನವಲಿದು ಬಲ್ಲವರು ಮನನಿಸು
ತನುವಿನಿಂದಲಿ ತಪ್ಪ ತಿದ್ದುವ
ದನುಪಮದ ಗುಣಯುತರು ತಿಳಿದವನಲ್ಲಾ ನಾನೆಂದಾ || ೧೧ ||

ಅಂತ್ಯ : ತಂದೆಯಾಡಿದ ಮಾತ ಕೇಳುತ
ವಂದಿಸುತ ಪಿತನಡಿಗೆ ಸಂತತ
ವಂದಿಸುವೆ ಕಾಲತ್ರಯವು ವಿಪ್ರೋತ್ತಮರ ಪದಕೇ
ಮಂದಿರದಿ ದಿನಗಳಲಿ ಸಜ್ಜನ
ವೃಂದದಲಿ ತುರುಗೆರೆಯ ಪುರದರ
ವಿಂದನಾಭನೆನುತ್ತ ಭೂಸುರವೃಂದಕಭಿನಮಿಸೇ || ೪೭ ||
ಅಂತು ಸಂಧಿ ೨೬ಕ್ಕಾಂ ಪದನೂ ೧೦೮೧ಕ್ಕಾಂ ಜಯ ಮಂಗಳಮಹಾ ಶ್ರೀ.

x x x x

ಮೃಕಂಡುಮುನಿ ಮಾರ್ಕಂಡೇಯನಿಗೆ ಅನುಗ್ರಹಮಾಡಿ ಪೇಳಿದ ಜ್ಯೋತಿ ಶ್ಯಾಸ್ತ್ರವು ಸಂಪೂರ್ಣಾ.

ವಿಷಯ : ಜಾತಕಫಲ ವಿವರ.

ವಿಶೇಷ : ಸುಂದರಾಕ್ಷರ. ಒಂದೆರಡು ಪತ್ರಗಳು ಹರಿದಿವೆ.

1314

ಕೆ. ೪೬ **ಮಾರ್ಕಂಡೇಯಪುರಾಣಾರ್ಥತಾತ್ಪರ್ಯದೀಪಿಕೆ** ಗದ್ಯ

ಲ.೩"×೧.೬" ಕಳಲೆ ನಂಜರಾಜ ೧೭೪೦

೩–೨೩೬ ಪತ್ರ ೫ ಪಂಕ್ತಿ ೩೫ ಅಕ್ಷರ

ಆದಿ : ಸೂರ್ಯನು ಯಮನ ವಾಕ್ಯವಂ ಕೇಳಿ ಛಾಯಾ ಸಂಜ್ಞಾದೇವಿಯು........ ಕವನೆಲ್ಲ ಹೆರ್ಶಿಸು ಸಂಜ್ಞಾದೇವಿವುದೊ ಅಲ್ಲವೊ ವಿಶದವಾಗಿ ಹೇಳೆನ ಛಾ.... ರ್ಯನೆ ನಾನು ವಿಶ್ವಕರ್ಮನ ಮಗಳಾದ ಸಂಜ್ಞಾದೇವಿಯು ತನ್ನ ಮಕ್ಕಳು ಯಿವರ....ಲೂ ಸೂರ್ಯನು ಮತ್ತೂ ವಿವರಿಶಿ ಕೇಳಿದಾಗ್ಯೂ ಮರ್ಮವನ್ನೂ ಹೇಳದಿರಲೂ

ಅಂತ್ಯ : (೨೨೪ನೆಯ ಪತ್ರ)ವಾನಪ್ರಸ್ಥಾಶ್ರಮದಲ್ಲಿ,ತಪಸ್ವಿಯಾಗಿರಲೂ ದಾಕ್ಷಣಾತ್ಯನಾಗಿ ದುಷ್ಟನಾಗಿರುವ ಪುಷ್ಯಂತನು ಯಿಾ ಸಮಾಚಾರವಂ ಕೇಳಿ ಆ ವನಕ್ಕೆ ಕಾವನನಾಗಿ ಕೈಶಾಂನನಾಗಿರುವ ನರಿಷ್ಯಂತನಂ ನೋಡಿ x x x .... x x x ಬಿರುದಾಂಕಿತ ಶ್ರೀ ಮಹೀಶುರ ಭೂಪಾಲಕ ಸೇನಾಧಿಪ ದೊಡ್ಡರಾಜ ಪವುತ್ರ ವೀರರಾಜತನೂಜ ದಳವಾಯಿ ದೇವರಾಜಾನುಜ ಕಳುಲೆ ನಂಜರಾಜ ವಿರಚಿತವಾದ ನಂಜರಾಜ ವಾಣೀವಿಲಾಸವೆಂಬ ಮಾರ್ಕಂಡೇಯಪುರಾಣಾರ್ಥ ತಾತ್ಪರ್ಯದೀಪಿಕೆ ಮಂಗಳಮಹಾ ಶ್ರೀ.

ವಿಷಯ : ಮಾರ್ಕಂಡೇಯ ಪುರಾಣದ ಕಥೆ.

ವಿಶೇಷ : ಶಿಥಿಲಪ್ರತಿ. ಮೋಡಿ ಅಕ್ಷರ. ತಪ್ಪು ಅಧಿಕ. ಕೆಲವು ಗರಿಗಳ ಅಂಚು ಮುರಿದಿರುವುದರಿಂದ ಅಕ್ಷರಲೋಪಗಳಿವೆ. ೧, ೨, ೧೨೩ ಈ ಮೂರು ಗರಿಗಳಿಲ್ಲ. ೪, ೫, ೬೫ನೆಯ ಗರಿಗಳು ಅರ್ಧಭಾಗ ಮಾತ್ರ ಇವೆ.

1315

ಕೆ.ಬಿ. ೫೦	**ಮಾರ್ಕಂಡೇಯ ರಾಮಾಯಣ**	ವಾರ್ಧಕಷಟ್ಪದಿ
೭.೭″ × ೬.೨″	ತಿಮ್ಮರಸ	ಸು. ೧೬೫೦
೧–೩೧೭ ಪತ್ರ	೧೧ ಪಂಕ್ತಿ	೨೮ ಅಕ್ಷರ

ಆದಿ : ಮಾರ್ಕಂಡೇಯ ರಾಮಾಯಣ ಬರೆಯುುವದಕ್ಕೆ ಶುಭಮಸ್ತು ||
ವಾರ್ಧಿಕ ಷಟ್ಪದಿ || ವರ ಕಿರೀಟದ ಮಣಿಗಳಿಂದ ಶೃಂಗಾರ ಚಾ
ಮರ ಕರ್ನತಾಳಂಗಳಿಂದೆ ಹಾಸ್ಯಂ ವೀರ
ಪರಶು ಪಾಶಂಗಳಿಂ................ಸ್ತಲ ಸಿಂದೂರದಿಂದಾ
ಪಿರಿದು ರೌದ್ರಂ ಕರುಣ ದಾನದಿಂದಂ ಶಾಂತಿ
ಕರ ಶೀಕರಥಿ ಪೊಡೆಯ ಪಾಲಿನಿಂ ಭಯ ಭೀಭ
ತ್ಸಿರೆ ಭಿಂನದಂತದಿದೆನೆಲುವ ರಸಭರಿತಗಣ....ಮತಿಯಾ || ೧ ||

x x x x

ವಿದ್ವಜ್ಜನಾನಂದಚಂದ್ರಂ ಮಹೀಸುರ ಭ
ರದ್ವಾಜಗೋತ್ರಮಾಶ್ವಲಾಯನಂ ರೃಗ್ವೇದಿ
ಸದ್ವಂಶರಂ ಕನ್ನಡಿಗ ಪಾಲ್ಕುರಿಕೆಯ ಕರಣಿಕ ಬುಳ್ಳುರಪಾತ್ಮಜಂ
ಅದ್ವಿತೀಯಂ ಸುಕವಿ ತಿಂಮರಸ ಪೇಳ್ದಂ ರ
ಘುದ್ವಹನ ಚಾರಿತ್ರಮಂ ಭಕ್ತಿಯಿಂದೆ ಶ್ರೀ
ಮದ್ವಾಸುದೇವ ಯದುಗಿರಿಯ ನರಸಿಂಹನ ಪದದ್ವಯಂಗಳ ಕರುಣದಿ || ೧೮ ||

ಅಂತ್ಯ : ಪೂರವಿಪ ಕಹಳಾರವದಿಕ್ಕರಿದನಿಂದ್ರವೃಂ
ದಾರ ಕರ್ಪ್ಪೂರೆದುದಾಗಸದಿ ವಾನರಸೈನ್ಯ
ವಾರಾಸಿ ಘೂರ್ಮಿಸುತ್ತಿದ್ದುರ್ದರ್ಕಜ ಮುಖ್ಯರಂ ಬೀಡಿಕೆಗೆ ನೇಮಿಸಿ
ವೀರ ಲಕ್ಷ್ಮಣವೆರಸಿ ಭವನವಮಂ ಪೊಕ್ಕಂ ಖ
ರಾರಿ ಯೆದುಗಿರಿಯ ರಾಯನಂ ಸೂರಿಯಃ
ತೀರು ಪಡುಗಡಲ ತಡಿಯಂ ಸಾರಿದುದು ತವಮಂ ಸಾರಿತ್ತಿಳಾಕಳವನೂ ॥ ೬೦ ॥
ಅಂತು ಸಂಧಿ ೩ಕ್ಕಾಂ ಪದನೂ ೧೨೪ಕ್ಕಾಂ ಮಂಗಳಮಹಾ ಶ್ರೀ ॥ ಅಂತೂ
ಸಂಧಿ ೨೮ಕ್ಕಂ ಪದನೂ ೧೩೮೮ಕ್ಕಂ ಮಂಗಳಮಹಾ ಶ್ರೀ ॥ ಶ್ರೀ ಕೃಷ್ಣಾ
ರ್ಪಣವಸ್ತು ॥

ವಿಷಯ : ಕಿಷ್ಕಿಂಧಾಕಾಂಡದಿಂದ ಯುದ್ಧಕಾಂಡ ಪೂರ್ತಿ ರಾಮಾಯಣದ ಕಥೆ.

ವಿಶೇಷ : ಅಕ್ಷರಗಳು ಸುಂದರವಾಗಿವೆ. ಮಧ್ಯೆ ಕೆಲವೆಡೆಗಳಲ್ಲಿ ಗ್ರಂಥಪಾತವಿದೆ. ಇದನ್ನು ಓಲೆ ಪ್ರತಿಯಿಂದ ಪ್ರತಿ ಮಾಡಿರುತ್ತಾರೆ. ಗ್ರಂಥವನ್ನು ಬರೆಯುವಾಗ ಕೆಟ್ಟುಹೋದ ಪತ್ರಗಳನ್ನು ಕೊನೆಯಲ್ಲಿ ಅದೇ ಕಟ್ಟಿನಲ್ಲಿ ಸೇರಿಸಿದ್ದಾರೆ. ಆ ಓಲೆಗಳಲ್ಲಿರುವುದನ್ನೂ ಪ್ರತಿಕಾರರು ೩೧೭ನೆಯ ಪತ್ರದಿಂದ ೩೩೭ನೆಯ ಪತ್ರದ ವರೆಗೆ ಬರೆದಿರುತ್ತಾರೆ. ಪುನರುಕ್ತಿ ಮತ್ತು ಗ್ರಂಥದ ಕ್ರಮುಗಳಿಂದ ಈ ಅಂಶ ಸ್ಪಷ್ಟವಾಗುತ್ತದೆ.

1316

ಕೆ. ೪೬೧/೨	**ಮಾರ್ಜಾಲ ಮೂಷಿಕನ ಕಥೆ**	ಯಕ್ಷಗಾನ
೮.೬" × ೨.೧"	?	?
೯–೧೫ ಪತ್ರ	೧೧ ಪಂಕ್ತಿ	೩೫ ಅಕ್ಷರ

ಆದಿ : ಶ್ರೀ....ಮಾರ್ಜಾಲ ಮುಸಿಕನ ಕತೆಯಂ ಬರೆಯುವದು.
ವೃತ್ತ ಕಂದ ॥ ಕರಿವಕ್ತ್ರಂ ಹರಪುತ್ರಂ
ಸ್ಮರನಕ್ತ್ರಂ ವಾಸವಾದಿ ವಿಬುದಸ್ತೋತ್ರಂ
ಸ್ತಿರತೋಶಂ ಉರಗಭೂಶಂ
ಕರುಣಿಪುದೆಮಗೆ ಸುಮತಿಯನು ವಿಘ್ನೇಶಂ ॥ ೧ ॥
ರಾಗ॥ ಜಯ ಮಹಾ ಕುಂಜರಾನನಾ
ಭರತಜನಪ್ರಿಯ ಮಹಾವಿಘ್ನಭಂಜನಾ
ನಿಯಮಿತಾರ್ಜಿತಾದಿ ಪಾದೋಭಯದತಮುಕಾದಿತ್ಯನಾದಾ ಜಯಮಹಾ॥ ೧ ॥

ಅಂತ್ಯ : ಭಾಮ್ನಿ || ಯೆನುತ ಪೇಳ್ದುದಂ ಕೇಳಿ ಮೂಶಿಕ
ಗನಶರದ ಬಿಲವಂನ್ನು ಪೋಗಲಾ
ಮನದಿ ಹರುಷಿಸೆ ಮಾರ್ಜಾಲನುತವವತಿಗೈದಿದನೂ
ಯೆನುವಕತನ ಜಿಂಹ್ವೆಯಿಂದಲಿ
ದನುಜಹರನುಗುಳಿಸಿದ ತೆರದಲಿ
ಜನರಿಗರಿವಂದದಲಿ ಪೇಳ್ದನು ಯಕ್ಷಗಾನದಲೀ || ೧ ||
ಅಂತ್ರು ಸಂಧಿ ೧ಕಂ ಮುಂಗಲಮಹಾ ಶ್ರೀ. ವಿರೋಧಿಕೃತು ಸಂವತ್ಸರದ ಪಾಲ್ಗುಣ ಶು ೧೫ಲು ಬರದು ಸಂಪೂರ್ನವಾಯಿತ್ತು ಕನಡಾಜಿಲ್ಲಾ ಉಡುಪಿ ತಾಲ್ಲೋಕು ಮುದಾರಗ್ರಾಮದ ಮಾರ್ತಾಂಡೈಯನ ಪೌತ್ರ ಅಂಣಪ್ಪಯ್ಯನ ಪುತ್ರ ದೇವಪ್ಪೈಯ್ಯ ||

ವಿಷಯ : ಮಾರ್ಜಾಲ ಮೂಷಿಕನ ಕತೆ.

ವಿಶೇಷ : ಈ ಕಟ್ಟಿನಲ್ಲಿ ಧೂಮ್ರಪತ್ರಪ್ರಸಂಗವೂ ಇದೆ. ಕೊನೆಯ ಪತ್ರದಲ್ಲಿ ಒಂದು ದೇವರನಾಮವಿದೆ.

1317

ಕೆ. ಎ. ೩೩೪/೩	**ಮಿತ್ರವಿಂದಾ ಗೋವಿಂದ**	ನಾಟಕ
೧೩"×೭.೮"	ಸಿಂಗರಾರ್ಯ	ಸು. ೧೬೮೦
೧–೧೩೮ ಪತ್ರ	೧೮ ಪಂಕ್ತಿ	೧೬ ಅಕ್ಷರ

ಆದಿ : ಮಿತ್ರವಿಂದಾ ಗೋವಿಂದ ನಾಟಕಂ.
ವೃತ್ತಂ || ಶ್ರೀಯಾ ಪಾಲ್ಗಡಲಿಂದಮೆನ್ನೆರ್ದೆಗೆ ಬಂದಿಂತೊಲ್ದೆಯಿಂದಿರ್ಪಳಿಂ
ನೀಯಂಘ್ರಿದ್ವಯ ಸೇವೆಯೊಳ್ನೆಲೆಸಿದೀ ಭೂದೇವಿಯಂ ನಾಡೆ ಕೇ
ಳ್ಳಿಯ್ಯಲ್ಹಾರದೆನುತ್ತಮೆತ್ತಿ ಪಿರಿದುಂ ಸೌಕರ್ಯದಿಂದಂಕಮಂ
ರೈಯ್ಯಂ ಕ್ಕೆಮಿಗೆ ಸಾರ್ಚಿ ಸಂತನಿಸಿದಾ ಗೋವಿಂದನಂ ವಂದಿಪೆಂ || ೧ ||
ಇಂತು ನಾಂದಿಗೈದು–ಸೂತ್ರಧಾರಂ ಸೇರೆಯೊಳ್ಪೂರೈಸಿದ ಕುಸುಮಂಗಳಂ ರಂಗದೊಳ್ಚಲ್ಲಿ ಸಭೆಗೆ ವಂದಿಸಿ ತೆರೆಯಂ ನೋಡಿ
ಸೂತ್ರಧಾರಂ|| ಯಲೆ ಆರ್ಯ್ಯೆ ಯಿತ್ತ ಬಾರಾ–ಎಂಬುದೂ ನಟಿ ಸಾರ್ತ್ತಂದು||
ನಟಿ || ಅಯ್ಯಾ–ಇದೆ ಬಂದೆಂ ಆವ ಕಜ್ಜಮಿಾಗಳುಜ್ಜುಗಿಪಂ ||

X X X X

ವೃತ್ತಂ|| ಶ್ರೀ ಮತ್ಸ್ವಾಮ್ಯ ನೃಸಿಂಹಸೂರಿತನಯಂ ಶ್ರೀ ತಿರ್ಮಲಾಯಾರ್ನುಜಂ
ಶ್ರೀಮತ್ಕೌಶಿಕ ಸಿಂಗರಾರ್ಯನುಸಿರ್ದಂ ತಾನೆಂಮೊಳಿರ್ಪೊಲ್ಮೆಯಿಂ
ಈಮಾಚಾರ್ಯ್ಯನ ಕಬ್ಬಮೈಸೆ ಮಧುಪಂ ಸೂಸುತ್ತೆಮಾಮೋದದಿಂ
ದಾ ಮಂದಾರದ ಪೊಂದೊಡಂಭೆಯೆನಿಕುಂ ಸೋಂಪಿಂ ಸುದೃಕ್ಕರ್ನದೊಳ್ ||

ಅಂತ್ಯ : ವೃತ್ತಂ ॥ ಮಳೆಗರೆದುರ್ವಿಯಂ ಸುರಪನುರ್ವ್ವರೆಯಂ ನಿಸ್ತುಗೇಳ್ಗೆವೆತ್ತಪೇ
ರ್ವೆಳಸುಗಳಿಂದೆ ಭೂಸುರರ ಜಂನದ ಸಂದಣಿಯಿದೆ ಸಂತಸಂ
ಬಳಗೆ ಸುರರ್ಗೆ ಸಜ್ಜನರ ಸಂಗಡಮಂ ಸೊಗಮಿಕ್ಕೆ ದುರ್ಜನ
ರ್ಕ್ಕಳ ಹಿಸುಣೆಲ್ಲಮಂ ತವುಗೆ ಧರ್ಮದಿ ನಾಳ್ಗೆ ನೃಪರ್ಧರಿತ್ರಿಯಂ ॥
ಎಂದೆಲ್ಲರುಂ ತೆರಳ್ದರ್ ॥ ನಾಲ್ಕನೆಯಂಕಂ ಸಮಾಪ್ತಂ ॥ ಶ್ರೀ

ವಿಷಯ : ಮಿತ್ರವಿಂದಾದೇವಿಯು ವಾಸುದೇವನನ್ನು ವರಿಸಿದ ಕಥೆ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಪ್ರತಿಯ ಕಾಲ ಕ್ರಿ. ಶ. ೧೯೦೮. ಪ್ರತಿಕಾರರು ಬಿ. ರಾಮಸ್ವಾಮಿ ಶಾಸ್ತ್ರಿಗಳು. ಗ್ರಂಥಾರಂಭಕ್ಕೆ ಮೊದಲು ಒಂದು ಪತ್ರದಲ್ಲಿ ಪ್ರತಿಕಾರರು ಕೃತಿಯ ವಿಷಯ ಸೂಚಿಯನ್ನು ಬರೆದಿರುತ್ತಾರೆ. ಇದೇ ಪುಸ್ತಕದಲ್ಲಿ ಕಬ್ಬಿಗರ ಕಾವ. ಪಂಪ ಕಂತಿಯರ ಸಮಸ್ಯೆಗಳು ಎಂಬ ಇತರ ಕೃತಿಗಳಿವೆ.

1318

ಕೆ.ಬಿ. ೯೦/೨	**ಮಿಶ್ರಷಟ್ಪದಿ ಸ್ತೋತ್ರ**	ಷಟ್ಪದಿ, ವೃತ್ತ
೭.೮″ × ೬″	ಸಂಪಾದನೆಯ ಸಿದ್ಧವೀರಣ್ಣದೇವರು	?
೧–೪೮ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ಸಂಪಾದನೆಯ ಸಿದ್ಧವೀರಣ್ಣದೇವರು ಸೇರಿಸಿದ ಮಿಶ್ರ ॥ ಷಟ್ಪದಿಸ್ತೋತ್ರವು ॥
ಭಾಮಿನಿ ॥ ಬಸವರಾಜನು ಭಕ್ತಿಯಿಂದಲಿ
ಬೆಸಸಿದೊಡೆ ಯಪ್ಪಣ್ಣನತಿಭರ
ವಸದಲೆಯ್ದಂದಲ್ಲಮಾ ಪ್ರಭು ಸಿದ್ಧರಾಮರಿಗೆ
ಒಸೆದು ಮಿಗೆ ಶರಣಾರ್ಥಿಯೆನುತಲಿ
ಸಸಿನೆ ಸಮ್ಮುಖದಲ್ಲಿ ಕರಯುಗ
ಬಿಸರುಹಂಗಳ ಮುಗಿದು ಬಿನ್ನಹ ಮಾಡಲನುಗೆಯ್ದಾ ॥ ೧ ॥

ಅಂತ್ಯ : ಪಿರಿದು ಮಿಶ್ರಸ್ತೋತ್ರವಂ ಪಠಿಸೆ ದುಷ್ಕರ್ಮ
ವಿರದಳಿಗುಮಾವಗಂ ದುಸ್ವಪ್ನ ದುಶ್ಯಕುನ
ಪರಮದುರ್ಗ್ರಹ ದೋಷ ಪಾವಕಾಹಿಜ್ವರಂಗಳ ಭೀತಿಸಂದೋಹವು
ಮರಳಿ ವೃಶ್ಚಿಕ ಚೋರರಪಮೃತ್ಯುವಿನ ಬಾಧೆ
ಯಿರದಳಿಗುಮರಿಪವನ ಭೂತಪವಿ ದಾರಿದ್ರ್ಯ
ನರಪರಿಂದೊಗೆದ ಭಯವಿತತಿಗಳು ನಿಮಿಷಾರ್ಧದೊಳು ಕೆಟ್ಟುಪೋಕುಮನಿಶಂ ॥ ೧೧೧ ॥
ಚಂಪಕಮಾಲಾವೃತ್ತ ॥ ಪ್ರಭು ಬಸವೇಶ ಚೆನ್ನಬಸವಣ್ಣನು ಕಿನ್ನರಮಾಚಿ ತಂದೆಯಾ
ಸುಭಗನು ಸತ್ಯೆ ನಿಂಬಿ ಮಹದೇವಿಯನಾಗಲೆ ನೀಲನೇತ್ರೆಮ

ದ್ವಿಭು ಶಿವಸಿದ್ಧರಾಮುನಜಗಣ್ಣ ಶಿವಾತ್ಮಕ ಘಟ್ಟಿವಾಳ ಮು
ಖ್ಯಭವಗಣಂಗಳೆನ್ನ ಹೃದಯಾಂಬುಜ ಮಧ್ಯದೊಳಿರ್ಕೆ ಸಂತತಂ ॥ ೧೧೨ ॥
ಮಿಶ್ರಷಟ್ಪದಿಸ್ತೋತ್ರಂ ಸಂಪೂರ್ಣಂ ॥

ವಿಷಯ : ಶಿವಶರಣ-ಶರಣೆಯರ ಸ್ತುತಿ.

ವಿಶೇಷ : ಇದನ್ನು ಸಂಗ್ರಹಿಸಿ ಸೇರಿಸಿದವರು ಸಂಪಾದನೆಯ ಸಿದ್ಧವೀರಣ್ಣದೇವರು. ಶಕಟರೇಫದ ಬಳಕೆಯಿದೆ. ಇದರೊಂದಿಗೆ ಮಿಶ್ರಸ್ತೋತ್ರ, ಬಸವಸ್ತೋತ್ರ ಷಟ್ಪದಿ ಎಂಬ ಕೃತಿಗಳೂ ಇವೆ.

1319

ಕೆ.ಬಿ. ೮೭/೪	**ಮಿಶ್ರಸ್ತೋತ್ರ**	ವಚನ
೭.೯" × ೬.೪"	?	?
೧-೨೨ ಪತ್ರ	೧೨ ಪಂಕ್ತಿ	೨೪ ಅಕ್ಷರ

ಆದಿ : ಶ್ರೀ॥ ಮಿಶ್ರಸ್ತೋತ್ರ ಬರಿಯುವದಕ್ಕೆ ಪ್ರಾರಂಭ.
ಶರಣು ಶರಣಾರ್ತಿಯೆಂಂನ ಬಿಂನಪವನವಧರಿಸಯ್ಯಾ ಬಸವಂಣನೆ ಗುರು ರೂಪಾಗಿ ಮರ್ತ್ಯಕ್ಕೆ ಬಂದನು ಚಂನಬಸವಣ್ಣನೆ ಲಿಂಗರೂಪಾಗಿ ಮರ್ತ್ಯಕ್ಕೆ ಬಂದನು ಪ್ರಭುವೆ ನೀವು ಜಂಗಮ ರೂಪಾಗಿ ಮರ್ತ್ಯಕ್ಕೆ ಬಂದಿರಿ ಭಕ್ತಿಯ ಬೆಳಗಿಂಗೆ ಬಸವಂಣ ಕಾರಣಿಕನಾದ ಅರುವಿನ ಬೆಳವಿಂಗೆ ಚಂನಬಸವಂಣ ಕಾರಣಿಕನಾದ ಈ ಇಬ್ಬರನೊಳಕೊಂಬ ಮಹಾಘನಕ್ಕೆ ನೀವು ಕಾರಣಿಕರಾದಿರಿ. ಇಂತಿ ಗುರುಲಿಂಗ ಜಂಗಮವೊಂದಲ್ಲದೆ ಭಿಂನವುಂಟೆ ಬಸವಂಣ ಚಂನಬಸವಂಣನ ಬಿಂನಪವ ಮಿಾರದೆ ಬಿಜಯಂಗೆಯ್ಯುದಯ್ಯ ಕಲಿದೇವರ ದೇವಾ ॥ ೧ ॥

ಅಂತ್ಯ : ಎರಡನರಿವಲ್ಲಿ ಭಂಡಾರಿ ಬಸವಂಣ ಮೂರನರಿವಲ್ಲಿ ಚೆಂನಬಸವಂಣ, ವೊಂದನರಿವಲ್ಲಿ ಪ್ರಭುದೇವರು ಇಂತಿವುಭಯ ಗುಣಂಗಳ ಮರದಲ್ಲಿ ನಿಜಗುಣ ನಿಜಸಂಗ ಇಂತೀ ಬಂಧಮೋಕ್ಷ ಕರ್ಮ್ಮಂಗಳು ವೊಂದೂ ಯಿಲ್ಲದ ಮತ್ತೆ ಬಾಗಿಲಿಗೆ ತಡಹಿಲ್ಲ ಯೆಂನ ಮಣಿಹ ಕೆಟ್ಟಿತ್ತು ಕೂಡಲಸಂಗಮದೇವರಲ್ಲಿ ಬಸವಂಣನೆನಗಾ ಮಣಿಹ ಬೇಡಾಯೆಂದ ಕಾರಣ ॥ ೯೯ ॥

ವಿಷಯ : ಶಿವಶರಣ-ಶರಣೆಯರ ಸ್ತುತಿ.

ವಿಶೇಷ : ವಿವಿಧ ವಚನಕಾರರ ೯೯ ವಚನಗಳಿವೆ. ಬರಹ ಸುಂದರ. ಇದೇ ಪುಸ್ತಕದಲ್ಲಿ ಮರಳದೇವರ ಕಂದ, ಲಿಂಗಸ್ತೋತ್ರ ಷಟ್ಪದಿ, ಷಡಕ್ಷರಿಯ ಕಂದ, ಶಂಕರದೇವರ ಕಂದ, ಬಸವಸ್ತೋತ್ರದ ಗದ್ಯ-ಇತ್ಯಾದಿ ಗ್ರಂಥಗಳಿವೆ.

1320

ಕೆ.ಬಿ. ೯೦/೧ ಮಿಶ್ರಸ್ತೋತ್ರ ಕುಸುಮಷಟ್ಪದಿ

೭.೮" × ೬" ? ?

೧–೨೮ ಪತ್ರ ೧೨ ಪಂಕ್ತಿ ೧೮ ಅಕ್ಷರ

ಆದಿ : ಶ್ರೀ ಗುರುನಿರಂಜನ ಬಸವಲಿಂಗಾಯ ನಮಃ || ಕುಸುಮಷಟ್ಪದಿ ||
ಮಿಶ್ರಸ್ತೋತ್ರಂ || ನಂದಿಕೇಶ್ವರ ಭೃಂಗಿ
ಸ್ಕಂದಮುಖ್ಯಸುರಾಳಿ
ಬಂದೆನ್ನ ಹೃತ್ಕಮಲದೊಳಗೆ
ನಿಂದು ನಿಮ್ಮಯ ಭೃತ್ಯ
ನೆಂದೀ ಕೃತಿಯೊಳು ತ
ಪ್ಪೊಂದಿಲ್ಲವೆನೆ ನಡೆಯಿಸುವುದು || ೧ ||
ಬಸವನಲ್ಲಮು ಚೆನ್ನ
ಬಸವ ಮುಖ್ಯರು ನಿಮ್ಮೊ
ಳೊಸೆದೊಂದಿ ಬೆರಸಿದಂದಿಂದಾ
ವಸುಧಾತಳದೊಳು ಭಾ
ವಿಸೆ ವೀರಶೈವದಾ
ಹೆಸರಿಲ್ಲವೆನಲು ನಸುನಗುತ || ೨ ||
ಸಿರಿವಂತನೀ ರಾಜ್ಯ
ದರಸಾಗು ಚೋಳ ಭೂ
ವರ ಚಮೂಪತಿಯಾಗು ನಿಮ್ಮ
ಭರಭಾರಗಳ ಹೊತ್ತು
ಚರನಾಗಿ ಸೇವೆಗೈ
ದಿರುತಿರ್ಪೆನೆಂದೀಶ ನುಡಿಯೆ || ೩ ||

ಅಂತ್ಯ : ಹರುಷದಿಂದವೆ ನೋಡಿ
ಬರೆದೋದಿದೊಡೆ ವಿ
ಸ್ತರಿಸಿ ಪೇಳ್ದೊಡೆ ಪಠಿಯಿಸಿದೊಡೆ
ಗುರು ಸೋಮನಾಥನ
ಕರುಣ ಸಂಭವಿಪುದು
ಧರೆಯೊಳಿಂತಿದು ಸಿದ್ಧವೆಂದು || ೧೧೦ ||
ಕುಸುಮಷಟ್ಪದಿ ಮಿಶ್ರಸ್ತೋತ್ರಂ ಸಂಪೂರ್ಣಂ ||

ವಿಷಯ : ಶಿವಶರಣ–ಶರಣೆಯರ ಸ್ತುತಿ.

ವಿಶೇಷ : ಶಕಟರೇಫದ ಬಳಕೆಯಿದೆ. ಇದರೊಂದಿಗೆ ಮಿಶ್ರಷಟ್ಪದಿಸ್ತೋತ್ರ ಮತ್ತು ಬಸವಸ್ತೋತ್ರದ ಷಟ್ಪದಿಯೆಂಬ ಗ್ರಂಥಗಳೂ ಇವೆ.

1321

ಕೆ. ೩೨೩/೩ **ಮಿಶ್ರಸ್ತೋತ್ರದ ತ್ರಿವಿಧಿ** ತ್ರಿವಿಧಿ

೫.೪" × ೨" ಸಿದ್ಧರಾಮು ಸು. ೧೧೬೦

೩೨–೪೪ ಪತ್ರ ೧೧ ಪಂಕ್ತಿ ೨೮ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಮಿಶ್ರಸ್ತೋತ್ರದ ತ್ರಿವಿದಿ ॥
ಶರಣು ಸತ್ಪದ ಬಸವ ಶರಣು ನಿಜಗುರುಬಸವ
ಶರಣು ಬಸವಜ್ಞಾನ ಶರಣ ಬಸವಾ
ಶರಣು ನಿರ್ಮ್ಮಲ ನಿಜಗುರುಲಿಂಗ ಬಸವೇಶ
ಶರಣೆಂಬೆ ನಿಂಮಡಿಗೆ ಯೋಗಿನಾಥಾ ॥ ೧ ॥

ಅಂತ್ಯ : ಬಸವ ಮಡಿವಳ ಚೆಂನಬಸವ ಪ್ರಭು ಮುಖ್ಯವಾ
ದಸಮು ಶಿವಗಣ ಮಿಶ್ರಸ್ತೋತ್ರದಾ
ಯೆಸವ ತ್ರಿವಿಧಿಯ ಮನವೊಸದೋದಿ ಕೇಳಿದಡೆ
ಶಶಿಧರನೊಳಗ್ಯೆಕ್ಯ ದಿಠ ಯೋಗಿನಾಥಾ ॥ ೧೦೯ ॥
ಮಿಶ್ರಸ್ತೋತ್ರದ ತ್ರಿವಿದಿ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಶಿವಗಣಸ್ತುತಿ.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಶೀಲವಂತಯ್ಯನ ತ್ರಿವಿಧಿ, ಶಂಕರ ದೇವರ ಕಂದಗಳೆಂಬ ಇತರ ೧೬ ಗ್ರಂಥಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳಾಗಿವೆ.

1322

ಕೆ. ೩೬೯/೭ **ಮಿಶ್ರಸ್ತೋತ್ರದ ತ್ರಿವಿಧಿ** ತ್ರಿವಿಧಿ

೮" × ೧.೮" ಸಿದ್ಧರಾಮು ಸು. ೧೧೬೦

೩೭–೪೬ ಪತ್ರ ೯ ಪಂಕ್ತಿ ೪೧ ಅಕ್ಷರ

ಆದಿ : ಶರಣು ಸತ್ಪಥ ಬಸವ ಶರಣು ನಿಜಗುರು ಬಸವ
ಶರಣು ಬಸವಜ್ಞಾನ ಶರಣು ಬಸವ
ಶರಣು ನಿರ್ಮಲ ನಿಜಗುರುಲಿಂಗ ಬಸವೇಶ
ಶರಣೆಂಬೆ ನಿಂಮಡಿಗೆ ಯೋಗಿನಾಥ ॥ ೧ ॥

ಅಂತ್ಯ : ಜಯತು ಸಂಸನ ಬಸವ ಜಯತಾದಿಮಯ್ಯಾನೆ
ಜಯ ಮರುಳು ಶಂಕರ ಸತ್ಯಂಣನೆ
ಜಯ ಮುದ್ದಸಂಗಯ್ಯ ಜಯತು ಅಜಗಂಣನೆಂದು
ಸ್ವಯ ಪರವಳಿದಿರ್ದ್ದೆನು ಗುರುವೆ ಯೋಗಿನಾಥ ॥ ೧೦೮ ॥
ಬಸವ ಮಡಿವಳ ಚೆಂಬಸ ಪ್ರಭು ಮುಖ್ಯವಾದ ಸಮ
ಶಿವದ ಗಣ ಮಿಶ್ರಸ್ತೋತ್ರದ
ಯಸವ ತ್ರಿವಿಧಿಯ ಮಾನ ವಸದೋದಿ ಕೇಳಿದೊಡೆ
ಶಶಿರದನೊಳಗೈಕ್ಯ ದಿಠ ಯೋಗಿನಾಥ ॥ ೧೦೯ ॥
ಮಿಸ್ರಸ್ತೋತ್ರದ ತ್ರಿವಿಧಿ ಸಂಪೂರ್ನ ಮಂಗಳಮಹಾ ಶ್ರೀ.

ವಿಷಯ : ಶರಣರ ಸ್ತುತಿ.

ವಿಶೇಷ : ಗ್ರಂಥವು ಶಿಥಿಲವಾಗಿದೆ. ಗರಿಗಳ ಅಂಚು ಮುರಿದಿವೆ. ಶಕಟರೇಫದ ಬಳಕೆಯಿದೆ. ಈ ಗ್ರಂಥದೊಂದಿಗೆ ಗುರು, ಷಡಕ್ಷರಿ, ಬಸವ, ಮನೋವಿಕಾರನಿರಸನ, ಭಕ್ತಿಬಿನ್ನಹ ರಗಳೆಗಳೂ ; ಬಸವಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ; ಶಂಕರದೇವ, ಮಂತ್ರಮಹತ್ವ, ಮರುಳದೇವ, ಪ್ರಭುಲಿಂಗನ ಕಂದಗಳೂ ; ಅಕ್ಷರಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ ; ಶತಕತ್ರಯವೂ, ಮಲ್ಹಣ ಸ್ತೋತ್ರವೂ ಇವೆ.

1323

ಕೆ. ೭೫/೮	**ಮಿಶ್ರಸ್ತೋತ್ರದ ವಚನಗಳು**	ವಚನ
೧೦.೭″ × ೨.೨″	?	?
೧೩೨–೧೩೮ ಪತ್ರ	೧೮ ಪಂಕ್ತಿ	೭೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ॥ ಮಿಶ್ರಸ್ತೋತ್ರದ ವಚನಂಗಳು ॥ ಶರಣು ಶರಣಾರ್ತ್ತಿ ಯೆಂಂನ ಬಿಂನಪವನವದರಿಸಯ್ಯಾ । ಬಸವಂಣನೆ ಗುರುರೂಪಾಗಿ ಮರ್ತ್ಯಕ್ಕೆ ಬಂದನು । ಚೆಂನಬಸವಂಣನೆ ಲಿಂಗರೂಪಾಗಿ ಮರ್ತ್ಯಕ್ಕೆಬಂದನು । ಪ್ರಭುವೆ ನೀವು ಜಂಗಮರೂಪಾಗಿ ಮರ್ತ್ಯಕ್ಕೆ ಬಂದಿರಿ । ಭಕ್ತಿಬೆಳಗಿಂಗೆ ಬಸವಂಣ ಕಾರಣಿಕನಾದ॥ ಅಱಿವಿನ ಬೆಳವಿಂಗೆ ಚಂನನ ಬಸವಂಣ ಕಾರಣಿಕನಾದ। ಯೀ ಇಬ್ಬರನೊಳಕೊಂಬ ಮಹಾಘನಕ್ಕೆ ಪ್ರಭುವೆ ನೀವು ಕಾರಣಿಕರಾದಿರಿ । ಯಿಂತೀ ಗುರು ಲಿಂಗ ಜಂಗಮವೊಂದಲ್ಲದೆ ಭಿಂನವುಂಟೆ। ಬಸವಂಣ ಚೆಂನ ಬಸವಂಣನ ಭಿಂನಪವ ಮೀಱದೆ ಬಿಜಯಂಗೆಯ್ವುದಯ್ಯ ಪ್ರಭುವೆ ಕಲಿದೇವರ ದೇವಾ ॥ ೧ ॥

ಅಂತ್ಯ : ಕಾಮು ಹೊದ್ದಲಂಮದು ಬಲ್ಲಾಳನ ಸೆನೆದರೆ। ಕ್ರೋದ ಹೊದ್ದಲಂಮದು ಪುರಾತರ ಸೆನೆದರೆ। ಯಿಾವಾವವೂ ಹೊದ್ದಲಂಮವು ಶಂಭು ಸೋಮನಾಥ ಲಿಂಗಾ ಶರಣೆಂಬವಂಗೆ ॥ ೧೦೮ ॥
ಮಿಶ್ರಸ್ತ್ರೋತ್ರದ ವಚನಂಗಳು ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ ॥

ವಿಷಯ : ವಿವಿಧ ವಚನಕಾರರು ಮಾಡಿರುವ ಸರ್ವಶರಣರ ಸ್ತುತಿ.

ವಿಶೇಷ : ಒಟ್ಟು ೧೦೮ ವಚನಗಳಿವೆ. ಶಕಟರೇಫದ ಬಳಕೆಯಿದೆ. ಇದರೊಂದಿಗೆ ಏಕೋತ್ತರ ಶತಸ್ಥಲ ಮೊದಲಾದ ಇತರ ೧೨ ಗ್ರಂಥಗಳಿವೆ. ಈ ಕಟ್ಟಿನಲ್ಲಿ ೧೩೯ರಿಂದ ೧೬೬ರವರೆಗೆ ಪತ್ರಗಳು ಲುಪ್ತವಾಗಿವೆ.

1324

ಕೆ. ೧೮೮/೧೩	**ಮಿಶ್ರಾರ್ಪಣ (ಸಟೀಕು)**	ಗದ್ಯ
೧೭.೬" × ೨"	ಚನ್ನಬಸವೇಶ್ವರ	ಸು. ೧೧೬೦
೨೧೧–೨೪೩ ಪತ್ರ	೧೨ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥
ಗ್ರಂಥ ॥ ಅವಾಚ್ಯಾತ್ಮ ಸ್ವರೂಪಾಯ ಶಿವಭಾವ ಪ್ರದಾಯಿನೇ।
ನಮಃ ಸದ್ಗುರುನಾಥಾಯ ಷಟ್ಸ್ಥಲ ಬ್ರಹ್ಮಮೂರ್ತಯೇ ॥
ಯೆಂದು। ಶ್ರೀ। ಷಡ್ಗುಣ್ಯೈಶ್ವರ್ಯ ಸಂಪತ್ಕರವನುಳ್ಳ। ಗುರು। ಮುಕ್ತಿ ಮೌಲ್ಯ ಪ್ರದಾಯಕನಾದ। ಬಸವ। ನಾದಬಿಂದು ಕಳಾಸ್ವರೂಪನಾದ। ಲಿಂಗ। ಲಯಗಮನಂಗಳಿಗೆ ಕಾರಣವಾದ ವಸ್ತುವಿಂಗೋಸ್ಕರ ನಮಃ। ನಮಸ್ಕಾರವು॥ ಚೆಂನಬಸವೇಶ್ವರದೇವರು ನಿರೂಪಿಸಿದ ಮಿಶ್ರಾರ್ಪ್ಪಣ। ಚೆಂನ। ಚಿದಾನಂದ ಸ್ವರೂಪನಾದಂಥಾ। ಬಸವ। ಗುರು ಲಿಂಗ ಜಂಗಮ ಸ್ವರೂಪನಾದಂಥಾ। ಈಶ್ವರ। ಪರಮ ವೀರಶೈವ ಷಟ್ಸ್ಥಲಜ್ಞಾನ ಚಕ್ರವರ್ತಿಗಳಾದ। ದೇವರು। ದಿವ್ಯಕಾಂತಿಸ್ವರೂಪವಾದ ವಸ್ತುವು। ನಿರೂಪಿಸಿದ। ಸ್ವಾಂಶೀಭೂತರಾದ........ಸಿ ಮುಕ್ತಿಯ ಪಡೆವುದಕ್ಕೆ ಸಾಧನವಾಗಿ। ಸ್ವಾತ್ಮಜ್ಞಾನಾನುಭಾವದಿಂದೆ ಬೋಧಿಸಿದಂಥ ॥ ಮತ್ತಂ ॥ ಅನ್ಯೋಪದೇಶವಾಗಿ ವುಪದೇಶಿಸಿದ। ಮಿಶ್ರಾರ್ಪ್ಪಣ। ಮಿಶ್ರವೆಂದೊಡೆ। ಪದಾರ್ತ್ಥ। ಅರ್ಪ್ಪಣವೆಂದೊಡೆ ಲಿಂಗಾರ್ಪ್ಪಣ। ಅದೆಂತೆಂದೊಡೆ ಹಿಂದೆ ನಿರೂಪಿಸಿದ ಕರಣಹಸಿಗೆ ....ದೊಳಗುಳ್ಳ ಸಕಲ ತತ್ವಂಗಳು। ಯಲ್ಲಾ ದೇಹಿಗಳಲ್ಲಿಯೂ ಸಮಾನವಾಗಿ ಪೂರ್ವ್ವವಾಸನೆಯೊಡನೆ ಕೂಡಿ ವರ್ತ್ತಿಸುಗುಂ। ಇಂನು ಲಿಂಗಾಂಗ ಸಂಬಂಧವನ್ನುಳ್ಳ ಷಟ್ಸ್ಥಲಜ್ಞಾನಿಗಳಾದ ಶರಣಜನಂಗಳಲ್ಲಿ। ಆ ಕರಣಂಗಳಿಲ್ಲವು ನಿವೃತ್ತಿರೂಪಾಗಿ। ಮಂತ್ರತತ್ವ ಸ್ವರೂಪವನೆಯ್ದಿ........ರ್ಪ್ಪಣಕ್ಕೆ ಯೋಗ್ಯಮಾಗಿರ್ಕ್ಕುಂ। ಆ ಮಂತ್ರತತ್ವ ಸ್ವರೂಪವಾದ ಪದಾರ್ತ್ಥಂಗಳನೆ।

ಕಾಯಾರ್ಪ್ಪಣ ಕರಣಾರ್ಪ್ಪಣ ಭಾವಾರ್ಪ್ಪಣ ಪರಿಪೂರ್ನಾರ್ಪ್ಪಣವೆಂದು ಲಿಂಗಂಗಳಿಗರ್ಪಿಸಿಕೊಳ್ಳುತ್ತಿರ್ದ್ದ ಕಾರಣಂ ಮಿಶ್ರಾರ್ಪ್ಪಣವೆಂಬುದಕ್ಕೆ ನಿರ್ವಾಚ್ಯಂ। ಗ್ರಂಥ ॥ ಶಿವೋಸ್ತಿ ಸಚ್ಚಿದಾನಂದಂ ಪರಿಪೂರ್ನಂ ನಿರಂಜನಂ ।
ಅಕಾರಣಮಕಾರ್ಯಂ ಚ ಮನೋ ವಾಚಾರಗೋಚರಂ ॥ ೧ ॥
ಏಕಮೇವ ಪರಂಬ್ರಹ್ಮ ಸಚ್ಚಿದಾನಂದ ಲಕ್ಷಣಂ ।
ಶಿವತತ್ವಂ ಶಿವಾಚಾರ್ಯ್ಯಾಃ ಸ್ಥಲಮಿತ್ಯಾಹುರಾದರಾತ್ ॥ ೨ ॥
ಸರ್ವೇಷಾಂ ಸ್ಥಾನಭೂತತ್ವಾ ಲ್ಲಯಭೂತತ್ವತಸ್ತಥಾ ।
ತತ್ವಾನಾಂ ಮಹಾದಾಂ........ಸ್ಥಲಮಿತ್ಯ ಭಿಧೀಯತೇ ॥ ೩ ॥
ಟೀಕೆ॥ ಸತ್ತು॥ ಯಲ್ಲಾಗಳೊ ಉಂಟಾಗಿರ್ದ್ದಂಥ

ಅಂತ್ಯ : ಯೀ ಪ್ರಕಾರದಿಂದ ಷಡ್ವಿಧಲಿಂಗಂಗಳಿಗೆ ಗಣಿಸಿಕೊಂಬುದು । ಆಚಾರ ಲಿಂಗವೊಂದೇ ಮಿಶ್ರಿಸಿ ೯೦೬ ಆಱಾಯಿತ್ತು ಅದರೊಳಗಾಱ ಬಿಟ್ಟರೆ ೯೦ ಆಯಿತ್ತು । ಯೀ ಪ್ರಕಾರದಿಂದೆ । ಷಡ್ವಿಧಲಿಂಗಂಗಳನೂ ಮಿಶ್ರಿಸಿಕೊಂಬುದು। ಯಿಷ್ಟಲಿಂಗದೊಡಗೂಡಿದ ಷಡ್ವಿಧ ಕಾಯಾರ್ಪ್ಪಣ ಪ್ರಾಣಲಿಂಗದೊಡಗೂಡಿದ ಛತ್ತೀಶ ಕರಣಾರ್ಪಣ। ೪೦೨ । ಭಾವಲಿಂಗದೊಡಗೂಡಿದ ೨೦೦೧೬ ತೆಱದ ಬಾವಾರ್ಪ್ಪಣ। ಅಂತು ಸಹ ೧೪೦೦೨೦ ಆಯಿತ್ತು ॥ ಚೆಂನ । ಕಾಯ ಕಾಂತಿ ಲಾವಣ್ಯವನುಳ್ಳಂಥ ಬಸವ । ತ್ರೈಲಿಂಗ ಸ್ವರೂಪವಾದಂಥ ಈಶ್ವರ ಪರಮ ವೀರಶೈವ ಷಟ್ಸ್ಥಲ ಜ್ಞಾನಚಕ್ರವರ್ತ್ತಿಗಳಾದ । ದೇವರು ದಿವ್ಯಕಾಂತಿ ಸ್ವರೂಪವನುಳ್ಳಂಥ । ವಸ್ತುವು । ನಿರೂಪಿಸಿದ । ಸ್ವಾಂಶೀಭೂತರಾದ ಮರ್ತ್ಯಲೋಕದ ಮಹಾಗಣಂಗಳು ಬರೆದೋದಿ ಹಾಡಿ ಕೇಳಿ ಅಱಿದು ಆನಂದಿಸಿ ನಿತ್ಯ ಶಿವಸುಖಿಗಳಾಗಲಿಯೆಂದು ಸ್ವಾತ್ಮಜ್ಞಾನಾನುಭಾವದಿಂದೆ ಅನ್ಯೋಪದೇಶವಾಗಿ ವುಪದೇಶಿಸಿದ ಮಿಶ್ರಾರ್ಪ್ಪಣ ॥ ಮಿಶ್ರವೆಂದೊಡೆ ಪದಾರ್ತ್ಥ । ಅರ್ಪ್ಪಣವೆಂದೊಡೆ ಲಿಂಗಾರ್ಪ್ಪಣವು । ಇಲ್ಲಿಗೆ ಸಂಪೂರ್ಣಂ ॥ ಶ್ರೀ ವೀರ ಮಾಹೇಶ್ವರಾಧ್ವ..........ತ ವಿದ್ಯಾ ಪ್ರಮೋದಿತ ಶ್ರೀ ಬಾಲೇಂದುಪುರ ಹರೀಶ್ವರ ಪರ್ವತಶಿವಯೋಗೀಶ್ವರೇಣ ಸಂಗ್ರಹಾರ್ತ್ಥ ತತ್ವವಿಭಾಗ ಮಿಶ್ರಾರ್ಪಣ ಲೇಖನಂ ಕೃತ್ವಾ ಸಮಾಪ್ತಮಸ್ತು ॥

ವಿಷಯ : ವೀರಶೈವ ಷಟ್ಸ್ಥಲಸಿದ್ಧಾಂತ.

ವಿಶೇಷ : ಇದರ ಟೀಕಾಕಾರ ಪರ್ವತ ಶಿವಯೋಗೀಶ್ವರ. ಶಕಟರೇಫದ ಬಳಕೆಯಿದೆ. ಇದರೊಂದಿಗೆ ಪಂಚೀಕರಣ, ಮಹಾದೇವಿಯಕ್ಕಗಳ ಸೃಷ್ಟಿಯ ವಚನ ಮೊದಲಾದ ಇತರ ೧೫ ಗ್ರಂಥಗಳಿವೆ.

1325

ಕೆ. ३೨೨/೪	**ಮಿಶ್ರಾರ್ಪಣಪದ** (ಸಟೀಕು)	ವಾರ್ಧಕಷಟ್ಪದಿ
೧३″ × ೨″	?	?
३೧–३೪ ಪತ್ರ	೧೨ ಪಂಕ್ತಿ	೪೨ ಅಕ್ಷರ

ಆದಿ : ಶ್ರೀ ಶಿವಾಯನಮಃ ॥ ಮಿಶ್ರಾರ್ಪ್ಪಣ ಪದಕ್ಕೆ ಶುಭಮಸ್ತು ॥
ತನ್ನ ನಿಜವನು ತಿಳಿದು ಷಟ್ಥಲಬ್ರಹ್ಮದೊಳು
ನನ್ನಿಇಂದೇಕತ್ವವೆಇದಿ ಪರತರ ಸುಪ್ರ
ಸಂನ ಜೀವನ್ಮುಕ್ತನಾಗಿ ಸಂಚರಿಸುವ ಕ್ರಮವದೆಂತೆನೆ ಪೇಳ್ವೆನೂ ॥
ಟೀ॥ ತನ್ನ ನಿಜವನು=ತನ್ನ ಸ್ವರೂಪವನು ತಿಳಿದು=ಗುರುಮುಖದಿಂದೆ ಅರಿದು ಷಟ್ಥಲ=ಭಕ್ತಿ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಅಯಿಕ್ಯರೆಂಬ ಷಡ್ವಿಧಸ್ಥಲಂಗಳನುಳ್ಳಂಥ ಬ್ರಹ್ಮದೊಳು ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವೆಂಬ ಷಡ್ವಿಧ ಬ್ರಹ್ಮಸ್ವರೂಪವಾದಂಥ ಲಿಂಗದಲ್ಲಿ ನಂನಿಯಿಂದೆ=ನಿಶ್ಚಯದಿಂದೆ ಯೇಕತ್ವವ=ಸಾಮರಸ್ಯವನು ಯ್ಯೆದಿ=ಪಡೆದು ಪರತರ=ಅತಿಶಯದಿಂದೆ ಅಧಿಕವಾದಂಥ ಆತನಾಗಿ ಸುಪ್ರಸಂನ=ಸು=ಮಿಗಿಲಾದ ಪ್ರಸಂನ=ಸಚ್ಛಂದವಾದಂಥಾತನಾಗಿ ಜೀವನ್ಮುಕ್ತನಾಗಿ=ಬಾಳುತ್ತಿರ್ದ್ದ ಬಂದರಹಿತವಾದಾತನಾಗಿ ಸಂಚರಿಸುವಕ್ರವದು = ಆಚರಿಸುವ ಪರಿವಿಡಿಯದು ಯೆಂತೆ=ಹ್ಯೆಂಗೆಯೆಂದು ಶಿಷ್ಯ ಪ್ರಸ್ನೆಯಂ ಮಾಡುತ್ತಿರಲಾಗಿ ಶ್ರೀಗುರು ಪೇಳುತ್ತಿರ್ದ್ದಪನು ಯಿದು ಶರಣಸನ್ಯಾಪದೇಶಾರ್ಥವಾಗಿ ನಿರೂಪಿಸುತ್ತಿರ್ದ್ಧಪನೂ ॥

ಅಂತ್ಯ : ತರದಿಂದ ಷೋಡಶೋತ್ತರಯುಗಶತಾರ್ಪಣದ
ಪರಿಯ ಪರಿವಿಡಿಯಿಂದೆ ಕಂಡನುಭವಿಸುತೆ ಸುಚಿ
ತ್ಸರಧಿ ಮೇಲ್ವ್ವರಿಯಲುದು ಶಾಂತಿಚಂದ್ರಮನುಧಿಸೆ ಪರಮಶಿವಲಿಂಗೇಶನಾ
ವರಪಕ್ಷನಿಧಿ ಸಿಂದುಬಾಣದ್ವಿಕಾಸ್ಯ ವಿ
ಸ್ಪುರದಂಗಯುತ ಚತುರ್ನಿದಿರವಿನವ್ರೋಜ್ವಲಿತ
ಸರಳ ಲಿಂಗಾಂಗಿತಸ್ಥಳ ಕುಳಗಳಾನ್ಯೆದೆ ಭಾವಿಪುದು ಷಟ್ಸ್ಥಲದೊಳು
ಟೀಕು ॥ ತರದಿಂದ=ಪರಿವಿಡಿಯಿಂದ ಷೋಡಶ=ಹದಿನಾರು ವುತ್ತರ=ವುಪರಿಯಲ್ಲಿವುಳ್ಳಂಥ ಯುಗಶತ=ಯಿಂನೂರ ಹದಿನಾರು ತೆರದ ಅರ್ಪ್ಪಣದ=ಅರ್ಪ್ಪಿತದ ಪರಿಚಯ=ಪ್ರಕಾರವನು ಪರಿವಿಡಿಯಿಂದೆ ಕ್ರಮದಿಂದೆ ಕಂಡು=ನೋಡಿ ಅನುಭವಿಸುತೆ=ಸ್ವೀಕರಿಸುತೆ ವುರು=ವಿಶಾಲವಾದಂಥ ಸ್ಯೆರಣೆಯೆಂಬ ಸೋಮನು ವುದಯವಾಗುತ್ತಿರಲಾಗಿ ಚಿತ್ಸರಧಿ=ಜ್ಞಾನಸಮುದ್ರವು ಮೇರೆವಪ್ಪುತ್ತಿರಲಾಗಿ ಪಕ್ಷ=ಭಕ್ತನ ೧೬ ಸ್ಥಲವು ನಿಧಿ=ಮಾಹೇಶ್ವರನ ೯ ಸ್ಥಲವು ಸಿಂಧು=ಪ್ರಸಾದಿಯ ೭ ಸ್ಥಲವು ಬಾಣ=ಪ್ರಾಣಲಿಂಗಿಯ ಐದಸ್ಥಲವು ದ್ವಿ=ಯರಡಾದಂಥ ಕ=ಬ್ರಹ್ಮನ ಆಸ್ಯ=ಮುಖದ ಹಾಂಗೆ ಶರಣನ ನಾಲ್ಕುಸ್ಥಲವು ಐಕ್ಯನ=ನಾಲ್ಕುಸ್ಥಲವು ವಿಸ್ಪುರತ್=ಮಿರುಗುತ್ತಿರ್ದ ಅಂಗ=ಅಂಗಸ್ಥಲ ನಾಲ್ವತ್ತನಾಲ್ಕರೊಡನೆ ಯುತ=ಕೂಡಲ್ಪಟ್ಟಂಥ ಚತುರ್ನಿಧಿ=ಆಚಾರಲಿಂಗಸ್ಥಲ ೯ ಗುರುಲಿಂಗಸ್ಥಲ ೯ಶಿವಲಿಂಗಸ್ಥಲ ಒಂಭತ್ತು ಜಂಗಮಲಿಂಗಸ್ಥಲ ೯ ರವಿಪ್ರಸಾದಲಿಂಗಸ್ಥಲ

೧೨ ನವಮಹಾಲಿಂಗಸ್ಥಲ ವೊಂಭತ್ತು ವುಜ್ವಲಿತ=ಮಿಗೆ ಬೆಳಗುತ್ತಿರ್ದಂಥ ಸರಳ=ರುಜುವಾದಂಥ ಲಿಂಗಗಳೊಡನೆ ಅನ್ವಿತ=ಕೂಡಲ್ಪಟ್ಟಂಥ ಅಂಗಸ್ಥಲ= ನಾಲ್ವತ್ತು ಲಿಂಗಸ್ಥಲ ಐವತ್ತು ಯೇಳರ ಸಂವೋಹವನು ನೆಯ್ದೆ=ಯ್ಯಿಯ್ದಿ ಶಿವಲಿಂಗೇಶನ=ಶಿವಲಿಂಗೇಶ್ವರನ ಷಟ್ಸ್ಥಲದೊಳು=ಆರುಸ್ಥಲದಲ್ಲಿ ಭಾವಿಪುದು=ಧ್ಯಾನಿಸುವದು. ಮಿಶ್ರಾರ್ಪಣ ಮಂಗಳಮಹಾ.

ವಿಷಯ : ವೀರಶೈವ ಷಟ್ಸ್ಥಲಸಿದ್ಧಾಂತ.

ವಿಶೇಷ : ಇದರೊಂದಿಗೆ ಜಪಲಕ್ಷಣ, ವಜ್ರಸೂಚ್ಯಾದ್ಯುಪನಿಷದಃ (ಸಂ)—ಮೊದಲಾದ ಗ್ರಂಥಗಳಿವೆ. ಕೊನೆಯಲ್ಲಿ ಒಂದು ಹಾಡು ಇದೆ.

1326

ಕೆ.ಎ. ೮೫/೧ ಮುಕುಂದಮಾಲಾ ತಾತ್ಪರ್ಯ ಶ್ಲೋಕ, ತಾತ್ಪರ್ಯ, ಭಾಮಿನೀಷಟ್ಪದಿ

೧೨.೮" × ೮.೧" ಶ್ರೀನಿವಾಸದಾಸ ಆಧುನಿಕ

೧–೨೨ ಪತ್ರ ೨೨ ಪಂಕ್ತಿ ೨೩ ಅಕ್ಷರ

ಆದಿ : ಶ್ಲೋಕಂ ॥ ಘುಷ್ಯತೇ ಯಸ್ಯ ನಗರೇ ರಂಗಯಾತ್ರಾ ದಿನೇ ದಿನೇ ।
ತಮಹಂ ಶಿರಸಾ ವಂದೇ ರಾಜಾನಂ ಕುಲಶೇಖರಂ ॥ ೧ ॥
ತಾತ್ಪರ್ಯಂ ॥ ಯಾರ ಪಟ್ಟಣದಲ್ಲಿ ಪ್ರತಿದಿವಸದಲ್ಲಿಯು ಶ್ರೀರಂಗಯಾತ್ರೆ ಮಾಡಬೇಕೆಂಬ ಘೋಷವಾಗುತಲಿಧೆಯೊ ಆ ರಾಜನಾದ ಕುಲಶೇಖರನನ್ನು ತಲೆವಾಗಿ ವಂದಿಸುವೆನು ॥ ೧ ॥
ಭಾಮಿನೀಷಟ್ಪದೀ ವೃತ್ತ॥ ದಿನದಿನದೊಳಾವವನ ಪೊಳಲೊಳು
ಘನನಿನಾದವನೊತ್ತಿ ತುಳಿವವೊ
ಲನುಪಮ ಶ್ರೀರಂಗಯಾತ್ರಾವಾರ್ತೆ ಮೊಳಗುವುದಾ
ಜನಪ ಜಲನಿಧಿ ಶರ್ವರೀಪ್ರಿಯ
ನೆನಿಪ ಕುಲಶೇಖರನ ಪದಯುಗ
ವನಜಕಾನಭಿನಮಿಪೆನಾದರದಿಂದ ತಲೆವಾಗಿ ॥ ೧ ॥
ರಾಗ–ಪಂತುವರಾಳಿ ॥ ರೂಪಕತಾಳ ॥
ನರಪಾಗ್ರಣಿ ಕುಲಶೇಖರ–ಚರಣಾಬ್ಜಕೆ ಮಣಿವೇಂ ॥ ಪ ॥
ಹರಿಪದ ಪಾಥೋಜಸಾರ–ವರಮಧುಕರ–ನೆರೆಹಿತಕರ–ಧರೆಗುರುತರ
ಧುರ ಜಯಕರ ॥ ಅನು ॥
ದಿನದಿನದೊಳು ನಿಜನಗರದಿ । ಘನ ನಿನದಕೆ ಮಿಗಿಲದೆನಿಸಿ
ವಿನುತ ಶ್ರೀರಂಗಯಾತ್ರೆಯನು ವಾರವಂಜನ ಜಾಲದಿಂ ಕೊನೆಗಾಣದೆ
ಮಿನುಗುತ್ತಿಹ ॥ ೧ ॥

ಅಂತ್ಯ : ಮಾಧವ ಮಧುನಿಧನ-ಮಹೀಧರ
ಭೇದಿತ ಕಂಸಬಕಾಜಗರ-ಗೋಪೀಜಾಲಾ
ರಾಧಿತೋತ್ತುಂಗ ಪಾದಾರವಿಂದ
ಮೋದಿತ ಗೋಪಾಲಕನಿಕರ
ವಿಧುಸಮವದನ-ಸದಮಲ ಸುಗುಣಾ
ಯಾದವಾಬ್ಧಿಚಂದ್ರ ಭವತು ನಿತ್ಯಮಂಗಳಂ ॥ ೩ ॥
ಮುಕುಂದಮಾಲಾ ಸ್ತೋತ್ರಂ ಸಂಪೂರ್ಣಂ ॥

ವಿಷಯ : ಹರಿಭಕ್ತಿ.

ವಿಶೇಷ : ಶಿಥಿಲ ಪ್ರತಿ. ಇದೇ ಪುಸ್ತಕದಲ್ಲಿ ಪ್ರಾಬೋಧಕೀಸೂಕ್ತಿಮಾಲೆ ಮತ್ತು ತಿರುಪ್ಪಾವೈ ಎಂಬ ಕೃತಿಗಳಿವೆ. ಗ್ರಂಥಾರಂಭದಲ್ಲಿ ಅವತಾರಿಕೆ ಇದೆ.

1327

ಕೆ.ಎ. ೩೨೮	**ಮುಕುಂದಾನಂದಂ**	ನಾಟಕ
೧೩.೧" × ೮.೫"	ವೆಂಕಟರಾಯ ಕವಿ	ಆಧುನಿಕ
೧-೪೩ ಪತ್ರ	೩೩ ಪಂಕ್ತಿ	೧೯ ಅಕ್ಷರ

ಆದಿ : ಶ್ರೀ ವೆಂಕಟರಾಯ ಕವಿಕೃತಂ ಮುಕುಂದಾನಂದಂ (ಭಾಣಂ)
ಕಂ ॥ ಶ್ರೀಕಾಂತಂ ಸಕಲ ಕಲಾ
ಕೂಪಾರಂ ಲೋಕಪೂರ್ಣನಪಗತಮೋಹಂ
ಮೋಹನನನುಪಮ ಮಹಿಮಾ
ಗಾರಂ ಶೃಂಗಾರದೇವನೋವುಗೆ ಕೃಷ್ಣಂ ॥ ೧ ॥
ಸೂತ್ರಧಾರಂ ॥ (ಪ್ರವೇಶಿಸಿ, ಸವಿನಯಾಂಜಲಿಪುಟಂ)
ವೃ ॥ ಕಂಠಾಲಿಂಗನಮಂಗಳಂಗಳನುರೋಜಾ ಭೋಗಭೋಗಂಗಳಂ
ಶ್ರೋಣೀಸಂಗಮ ಸೌಭಗಂಗಳನಳುಂಬಂ ಭೋಗಿಸುತ್ತಿರ್ಪುವೀ
ಚೇಲಂಗಳ್ ಪ್ರಿಯೆಯರ್ಕಳಾ ಫಡ! ಎನುತ್ತ ಕಾಂತಿಯಿಂ ಗೋಪಿಕಾ
ವಾಸವ್ರಾತಮನೀಳ್ದ ಕೃಷ್ಣನೊಲವಿಂ ಕಾಪಾಡುಗೆಮ್ಮಂ ಕರಂ ॥ ೨ ॥

ಅಂತ್ಯ : ಕಂ ॥ ಧರೆಯೊಳ್ ವರ್ಷಿಕೆಜಲದಂ
ಸಮನಿಕೆ ಸಜ್ಜನರ್ಗೆ ಸಕಲ ಸೌಭಾಗ್ಯಂಗಳ್
ಸುಕವಿಗಳಿರ್ಕೆಮ ಸೊಗದಿಂ
ಖಳರುಪಸರ್ಗಂಗಳಳಿಗೆ ಬಳೆಗೆ ಶುಭಂಗಳ್ ॥ ೨೮೪ ॥

(ಎಂದೆಲ್ಲರುಂ ಪೋಪರ್)

(ಇಂತು ಮುಕುಂದಾನಂದಂ ಭಾಣಂ)

(ಕವಿವಾಕ್ಯಂ)

ಕಂ ॥ ಇದು ಕೃತಿಭಾಣಂ ರಸಿಕ
ಪ್ರಕರಪ್ರಾಣಂ ಮನೋಜರಾಜ್ಯತ್ರಾಣಂ
ಕಮಲಾಕಮನಂ ಕೃತಿಪತಿ
ಕೃತಿಯಿದನೋದುವರ್ಗೆ ಕುಡುಗೆ ಹಿತಮಂ ಶ್ರುತಮಂ ॥ ೨೬೫ ॥

x x x x

ಕಂ ॥ ವಿಬುಧಂ ಭಾರದ್ವಾಜ
ಪ್ರಬುದ್ಧಗೋತ್ರಂ ಹನೂಮದಾತ್ಮಜನೊವಜಂ
ಘನ ಶಾತ್ತಾದ ಶ್ರೀವೈ
ಷ್ಣವಕುಲಜಂ ವೇಂಕಟಾಚಾರ್ಯನಿದನಿಂತೊರೆದಂ ॥ ೨೬೭ ॥

(ಇಂತು ವೇಂಕಟರಾಯ ಕವಿಕೃತಂ ಮುಕುಂದಾನಂದಂ ಭಾಣಂ ಸಂಪೂರ್ಣಂ)

ಶ್ರೀ ಕೃಷ್ಣಾರ್ಪಣಮಸ್ತು.

ವಿಷಯ : ಶ್ರೀಕೃಷ್ಣನ ಲೀಲಾವಿನೋದ ಪ್ರಸಂಗ.

ವಿಶೇಷ : ದಪ್ಪಕ್ಷರ. ಆದಿಯ ಪ್ರತ್ಯೇಕ ಪತ್ರಗಳಲ್ಲಿ ಪಾತ್ರಪರಿಚಯ ಮತ್ತು ವಿಜ್ಞಾಪನೆಗಳಿವೆ. ಈ ಪ್ರತಿಯು ಕವಿಯ ಬರವಣಿಗೆಯಲ್ಲಿದೆ.

1328

ಕೆ. ೩೧೮/೨ **ಮುಕ್ತಾಂಗನಾ ಕಂಠಮಾಲೆ** ವಚನ, ಟೀಕು

೧೨.೪" × ೨.೨ ಸ್ವತಂತ್ರ ಸಿದ್ಧಲಿಂಗೇಶ್ವರ ಸು. ೧೬೮೦

೩೧–೪೩ ಪತ್ರ ೧೩ ಪಂಕ್ತಿ ೫೫ ಅಕ್ಷರ

ಆದಿ : ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿಯವರು ನಿರೂಪಿಸಿದ ಮುಂಕ್ತಾಂಗನ ಕಂಠಮಾಲೆಯೆಂಬ ವಚನವ ಬರೆಯುದಕ್ಕೆ ಶುಭಮಸ್ತು॥ ಶೋಭನಮಸ್ತು॥ ನಿರ್ವಿಘ್ನಮಸ್ತು ॥ ಸ್ವತಂತ್ರ ಸಿದ್ಧಲಿಂಗೇಶ್ವರಾಯ ನಮಃ॥ ಕ್ಷಮೆ ದಮೆ ಶಾಂತಿ ದಾಂತಿ ಶ್ರದ್ಧೆ ಸಮಾಧಿಯೆಂಬಾರು ಗುಣಂಗಳನುಳ್ಳಂಥಾ । ಗುರು । ಗೂಡ ಗ್ನಾನ ಗಂಭೀರವಾದಂಥಾ । ಸ್ವತಂತ್ರ ಪರತಂತ್ರವಿಲ್ಲದೆ ಯಿರ್ದಂಥಾ । ಲಿಂಗೇಶ್ವರಾಯ । ಜಗತ್ರಿನ ಶೃಷ್ಟಿ ಸ್ಥಿತಿ ಲಯ ಗಮನಂಗಳಿಗೆ ಕಾರಣ ವಾದ । ಮಹಾಲಿಂಗದೇವಂಗೋಸ್ಕರ । ನಮಃ । ನಮಸ್ಕಾರಲು ಯೆಂದ್ದು ಆಶೀರ್ವಾದವೆಂದ್ದು x x x x ಯೆಂಬುದೀಗ ಶ್ರೀಗುರು ಸ್ವತಂತ್ರ ಸಿದ್ಧಲಿಂಗೇಶ್ವರಾಯ ನಮಃ ಯೆಂಬುದರ್ತ್ಥ ॥

ಅಂತ್ಯ : ಅಕಾರೋ ಲಿಂಗಮೇವೋಕ್ತಂ ನಕಾರೋ ಜೀವರುಚ್ಯತೇ ।
ಭಾವಸಂಯೋಗಯೇವೋಕ್ತಂ ಅನುಭಾವಂ ನಿಗದ್ಯತೇ ॥
ಯೆಂದುದಾಗಿ । ಯಿಾ ಗ್ರಂಥಾರ್ತವನೆ ಮುಂದೆ ಪೇಳುತಿದ್ದಾನು । ವಚನಾ । ಅನುಭಾವವ ನುಡಿವ ಅಂಣಗಳಿರ । ಅನುಭಾವವೆತ್ತ ನೀವೆತ್ತ ಹೋಗಿರಂಣಾ। ಅನುಭಾವವೆಂಬುದು ಆತ್ಮವಿದ್ಯೆ । ಅನುಭಾವವೆಂಬುದು ತಾನಿದಿರೆಂಬುದ ತೋರದ್ದು। ಅನುಭಾವವೆಂಬುದು। ನಿಜ ನಿವಾಸದಲ್ಲಿರಿಸೂದೂ। ಯಿಂತಪ್ಪದನು ಭಾವದ ಅನುವನರಿಯದೆ । ಶಾಸ್ತ್ರಜಾಲದ ಪಸರವಸಿಕ್ಕಿ । ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಂಣಗಳಿರಾ । ನೀವೆತ್ತ ನಿಜಗುರು ಸ್ವತಂತ್ರ ಸಿದ್ಧ ಲಿಂಗೇಶ್ವರನ ಅನುಭಾವವೆತ್ತ ಹೋಗಿರಂಣಾ ॥ಟ್ಕೀ॥ ವಿವೇಕದಿಂದ ಪರಬ್ರಂಹ್ಮದ ಮಾತ ನುಡಿವವರಿಗೆ । x x x x ನೀವೆತ್ತ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಅನುಭಾವವೆತ್ತ ಹೋಗಿರಂಣಾ ಯೆಂಬು ದತ್ಥಾರ್ ॥ ೨೧ ॥ ಯಿಂತು ಸ್ವತಂತ್ರ ಸಿದ್ಧಲಿಂಗೇಶ್ವರನ ವಚನ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಬರಹ ಸುಂದರವಾಗಿದೆ. ಇದೇ ಕಟ್ಟನಲ್ಲಿ ಆತ್ಮಲಿಂಗ ಪ್ರಣವ ಸಂಯೋಗ ಸ್ಥಲದ ತ್ರಿವಿಧಿ ಎಂಬ ಮತ್ತೊಂದು ಗ್ರಂಥವಿದೆ.

1329

ಕೆ.ಬಿ. ೨೨೧	**ಮುಕ್ತಾಂಗನಾ ಕಂಠಮಾಲೆ**	ವಚನ, ಟೀಕು
೭.೭″ × ೬.೨″	ಸ್ವತಂತ್ರ ಸಿದ್ಧಲಿಂಗೇಶ್ವರ	ಸು. ೧೪೪೦
೧–೩೧ ಪತ್ರ	೧೧ ಪಂಕ್ತಿ	೨೪ ಅಕ್ಷರ

ಆದಿ : ಶ್ರೀ ಮುಕ್ತಾಂಗನ ಕಂಠಮಾಲೆ ॥ ಶುಭಮಸ್ತು ಸ್ವತಂತ್ರ ಶಿದ್ಧಲಿಂಗೇಶ್ವರರು ನಿರೂಪಿಸಿದ ಯಿಾ ಮುಕ್ತಾಂಗನೆ ಕಂಠಮಾಲೆಯಂಬ ವಚನಂಗಳಿಗೆ ವ್ಯಾಖ್ಯಾನ ಸಹಿತವಾಗಿ ಸೇರ್ಪಡಿಯಾದ ಮಹಾವಾಖ್ಯಸಂಗ್ರಹವಿದು ॥
ಸ್ತೋತ್ರವಚನ ॥ ಶ್ರೀಗುರು ಸ್ವತಂತ್ರ ಸಿದ್ಧಲಿಂಗೇಶಾಯ ನಮಃ ॥
ಟೀಕು ॥ ಕ್ಷಮೆ ದಮೆ ಶಾಂತಿ ದಾಂತಿ ಶ್ರದ್ಧೆ ಸಮಾಧಿಯಂಬುದು ಗುಣಂಗಳ ನುಳ್ಳಂಥಾ ಗುರು ಗೂಢಜ್ಞಾನ ಗಂಭೀರನಾದಂಥಾ x x x ಎಂಬುದೀಗ ಶ್ರೀ ಗುರು ಸ್ವಾತಂತ್ರ ಸಿದ್ಧಲಿಂಗೇಶ್ವರಯ ನಮಃ ಯಂಬ ಶಬ್ದಕ್ಕರ್ಥಂ ॥

ಅಂತ್ಯ : ಹೃತಹೋದರೆಂಬುದೀಗ ಯಿಂತಪ್ಪನು ಭಾವದನುವನರಿಯದೆ ಶಾಸ್ತ್ರಜ್ಞದ ಶಾಸ್ತ್ರವ್ಯವಹಾರವ ಮಾಡುವ ಅಂಣಗಳಿರ ನೀವೆತ್ತ ಸ್ವತಂತ್ರ ಸಿದ್ಧಲಿಂಗೇಶ್ವರನ ಅನುಭಾವವೆತ್ತ ಹೋಗಿರಂಣ ಯಂಬುದರ್ಥಾ ॥ ೨೧ ॥

ಯಿಂತೀ ಸ್ವತಂತ್ರ ಶಿದ್ಧಲಿಂಗೇಶ್ವರದೇವರು ನಿರೂಪಿಸಿದ ಮುಕ್ತಾಂಗನಾ
ಕಂಠಾಮಾಲೆ ಯೆಂಬ ವಚನಾರ್ಥ ಶಾಸ್ತ್ರ ಸಂಪೂರ್ಣ ಮಂಗಳಮಹಾ ಶ್ರೀ. .
ಶ್ಲೋಕ ॥ ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನಶಲಾಖಯ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರುವೇ ನಮಃ ॥

ವಿಷಯ : ವೀರಶೈವಸಿದ್ಧಾಂತ.

ವಿಶೇಷ : ಮೋಡಿ ಬರಹ.

1330

ಕೆ.ಬಿ. ೪೧೨	**ಮುಗ್ಧಕಥನಂ**	ಚಂಪು
೭.೮" × ೫.೯"	ಷಡಕ್ಷರದೇವ	೧೬೫೫
೧-೧೯ ಪತ್ರ	೨೦ ಪಂಕ್ತಿ	೧೮ ಅಕ್ಷರ

ಆದಿ : ಮುಗ್ಧಕಥನಂ ಆಸ್ವಾಸ
ಕಂದ ॥ ಶ್ರೀ ಗೌರೀಪ್ರೇಮಸುಧಾ
ಸಾಗರ ಪೂರ್ಣೇಂದು ಸಸ್ಮಿತಾಮಳವದನಾ
ಭೋಗಂ ಭೋಗೀಶ್ವರಧರ
ನಾಗಮನುತನೀಗೆ ಸೌಖ್ಯಮಂ ಶಿವಲಿಂಗಂ ॥ ೧ ॥
ಕಂದ ॥ ಗುಣನಿಧಿ ಬಸವಂ ವಿಟಚರ
ಗಣಮಂ ಗಣಿಕಾಲಯಕ್ಕೆ ಕಳುಪುವ ಪದದೊಳ್
ಪ್ರಣುತ ಮಹಿಮಾಕರಂ ಚಿ
ನ್ಮಣಿ ಮುಕುರಂ ಬಂದನೋರ್ವನಚಳ ಶಿವೈಕ್ಯಂ ॥ ೨ ॥

ಅಂತ್ಯ : ಲಲಿತಪದವೃತ್ತ ॥ ಸ್ವಚ್ಛಮತಿ ಮಜ್ಜನ x x x ಜಿತ ಹೃಚ್ಛಯ
ವೃಷೇಂದ್ರ ॥ ೧೩೩ ॥ ಗದ್ಯ ॥ ಇದವಿನಮದಖಿಳ ಸುರಾಸುರೇಂದ್ರ
ಮಕುಟತಟ x x x x ಶ್ರೀ ಷಡಕ್ಷರಿದೇವ ಭಕ್ತಿವಿರಚಿತ ಶ್ರೀ ಮದ್ವೃಷ
ಭೇಂದ್ರವಿಜಯ ಮಹಾಪುರಾಣದೊಳ್ ಮುಗ್ಧಸಂಗಾರ್ಯ ರುದ್ರ ಪಶುಪತಿ
ತಿರುನೀಲನಕ್ಕ ಸುಶೀಲಾ ಕನ್ಯಕಾ ಮಹಾದೇವಿ ಕಥಾವರ್ಣನಂ ನವಮಾಶ್ವಾಸಂ
ಪರಿಸಮಾಪ್ತಂ ನವಮಾಶ್ವಾಸಂ ಸಂಪೂರ್ಣಂ ॥ ಶ್ರೀ.
ದಶಮಾಶ್ವಾಸಂ ದೀಪದ ಕಲಿಯಾರಾದಿ ಕಥನಂ ॥
ಕಂದ ॥ ಶ್ರೀ ಮೇನಕಾತ್ಮಜಾನಯ
ನಾಮಳ ರುಚಿಧವಳಿತೇಭ ಚರ್ಮಾಂಬರನು
ದ್ದಾಮ ಗುಣಧಾಮನಮರ ಲ
ಲಾಮಂ ಪೊರೆಗೆಮ್ಮನಾವಗಂ ಶಿವಲಿಂಗಂ ॥ ೧ ॥ ವಚನ ॥

ವಿಷಯ : ಮುಗ್ಧ ಸಂಗಾರ್ಯನ ಕಥೆ.

ವಿಶೇಷ : ವೃಷಭೇಂದ್ರವಿಜಯದಲ್ಲಿ ಬಂದಿರುವ ಅನೇಕ ಶಿವಶರಣರ ಕಥೆಗಳಲ್ಲಿ ಪ್ರಕೃತಕಥೆಯೂ ಒಂದಾಗಿದೆ. ತರುವಾಯ ಹತ್ತನೆಯ ಆಶ್ವಾಸದಲ್ಲಿ ಬಂದಿರುವ ದೀಪದ ಕಲಿಯಾರ ಕಥೆಗೆ ಸಂಬಂಧಿಸಿದ ಒಂದು ಪದ್ಯ ಮಾತ್ರ ಇಲ್ಲಿ ಉಕ್ತವಾಗಿದೆ. ತೆಳುಕಾಗದ, ಸ್ಫುಟಾಕ್ಷರ.

1331

ಕೆ.ಎ. ೧೯೫/೨	**ಮುಡಿಗೆಯೆಷ್ಟಕ**	ವೃತ್ತ
೧೨.೯" × ೭.೮"	ಹರಿಹರ	೧೧೯೫
೩೧೫–೩೧೬ ಪತ್ರ	೨೮ ಪಂಕ್ತಿ	೨೨ ಅಕ್ಷರ

ಆದಿ : ಹರೀಶ್ವರಯ್ಯನವರು ನಿರೂಪಿಸಿದ ಅಷ್ಟದಿಗ್ಗಜಾ
ವೃತ್ತ ॥ ಕುಕ್ಷಿಯೊಳಿಟ್ಟ ಭಕ್ತಕುಲಮಂ ಪರಿರಕ್ಷಿಪ ದೇವದೇವನ
ಬ್ಜಾಕ್ಷ ವಿರಿಂಚಿಗಳ್ ತುದಿಮೊದಲ್ಪರೆಗಾಣದ ದೇವದೇವನಾ
ವಕ್ಷದೊಳಾಲ್ದು ಬೊಬ್ಬಿಱಿಪ ದೇವ ಕರೋಟಿಯದೇವನೀ ವಿರೂ
ಪಾಕ್ಷನೆ ದೇವನೆಂದು ಮುಡಿಗಿಕ್ಕಿದೆನಿಕ್ಕಿದೆನಾವನೆತ್ತುವಂ ॥ ೧ ॥

ಅಂತ್ಯ : ಸಿಕ್ಷಿಪ ಸರ್ವದೇವ ಕುಲಮಂ ಪರಿಪಾಲಿಪ ವಿಶ್ವವೆಲ್ಲವಂ
ಭಕ್ಷಿಪ ಮತ್ತೆ ಪುಟ್ಟಿಪ ಮಹಾಲಯದೊಳ್ ಗಣನಾಥಯೂಥಮಂ
ಕುಕ್ಷಿಯೊಳಿಟ್ಟು ರಕ್ಷಿಪ ರಾಜಶಿಖಾಮಣಿಯೋರ್ವನೆ ವಿರೂ
ಪಾಕ್ಷನೆ ದೇವನೆಂದು ಮುಡಿಗಿಕ್ಕಿದೆನಿಕ್ಕಿದೆನಾವನೆತ್ತುವಂ ॥ ೮ ॥

ವಿಷಯ : ಶಿವಾಧಿಕ್ಯ ಸ್ಥಿರೀಕರಣ.

ವಿಶೇಷ : ಶಕಟರೇಫದ ಪ್ರಯೋಗವಿದೆ. ಇದೇ ಪುಸ್ತಕದಲ್ಲಿ ರಾಘವಾಂಕ ಕಾವ್ಯವೆಂಬ ಮತ್ತೊಂದು ಗ್ರಂಥವಿದೆ.

1332

ಕೆ.ಬಿ. ೩೨೬	**ಮುತ್ತಿನಕಂತೆಯ ವಚನ**	ಭಾಮಿನೀಷಟ್ಪದಿ
೮.೧" × ೬.೬"	?	?
೧೭ ಪತ್ರ	೧೨ ಪಂಕ್ತಿ	೧೪ ಅಕ್ಷರ

ಆದಿ : ಸ್ರ್ ೧೮೮೭ನೇ ಯ್ಸಿವಿ ಮಾರ್ಚಿ ತ್ತಾ ೧೩ರಲ್ಲು ಮುತ್ತಿನ ಕಂತ್ತೆ ವಚನ
ಬರಿಯುವದಕ್ಕೆ ಶುಭಮಸ್ತು ॥
ಶ್ರೀಗಿರೀಶ್ವರ ಭ್ರಮರವಲ್ಲಭ
ಶ್ರೀಗಿರೀಶ್ವರ ಶರಣುಸೇವಕ
ನಾಗಿ ಯಂನೊಳು ಪರಮು ಸುಕಸಂಪೂರ್ನ ಚಿತ್ರದಲೀ

ಯೋಗವೆಂಟನು ಸಾಧಿಸುವ ಶಿವ
ಯೋಗಿಗಳನರ್ಚಿಸುವೆ ಲಿಂಗದ
ಆಗಮವು ಬೇಕೆಂದು ಮುತ್ತಿನಕಂತ್ತೆ ಸದ್ಗುರುವೆ ॥ ೧ ॥

ಅಂತ್ಯ : ಶಾರದೆ ಹರಿ ಅಜ ಮುನೀಂದ್ರರು
ಸೂರ್ಯಚಂದ್ರರು ಬಂದು ನಿಂದರು
ಯಾರು ತನಗಿದಿರಿಲ್ಲಾ ಕುಟಿಲದ ಯಜ್ಞಕರ್ತದಲೀ
ಮೀರಿ ಚರಿಸುವ ಧಕ್ಷ ಸಮಸ್ತಕ
ದಾರಿ ಕಡ್ಗವ ಧರಿಸಿ ವೈದನು
ವೀರಭದ್ರೇಶ್ವರನು ಮುತ್ತಿ ॥ ೭೬ ॥

ವಿಷಯ : ಲಿಂಗಸ್ತುತಿ.

ವಿಶೇಷ : ಒಟ್ಟು ೭೬ ಪದ್ಯಗಳಿವೆ. ಪತ್ರಗಳಿಗೆ ಕ್ರಮಾಂಕವಿಲ್ಲ. ಪದ್ಯಗಳ ಅಂತ್ಯದಲ್ಲಿ "ಮುತ್ತಿನ ಕಂತ್ತೆ ಸದ್ಗುರುವೆ" ಎಂದು ಮುಗಿಯುತ್ತದೆ. ಈ ಗ್ರಂಥವಾದ ಮೇಲೆ ಮೂರು ಪುಟಗಳಲ್ಲಿ ಪಂಚಾಕ್ಷರ ಮಹಾ ಮಂತ್ರದ ವಿಚಾರವಿದೆ.

1333

ಕೆ. ೧೩೨/೨	**ಮುತ್ತಿನಚಿಪ್ಪಿನ ಸೂತ್ರ**	ಸೂತ್ರ, ಗದ್ಯ
೧೧.೫" × ೧.೧"	ರಾಜಾದಿತ್ಯ	ಸು. ೧೧೨೦
೧–೧೧ ಪತ್ರ	೫ ಪಂಕ್ತಿ	೪೪ ಅಕ್ಷರ

ಆದಿ : ಶ್ರೀ ಗಣಾಧಿ .. ಮುಃ॥ ನಿರ್ವಿಘ್ನ.... ....ತ್ತಿನ ಚಿಪಿನ ಸೂತ್ರಕ್ಕೆ ಶುಭಮಸ್ತು॥
....
ಯಿಡೆ ಕಣ ಜೆನ....ಹತ್ತುವರೆ ಪಣತೂಕಂ
ಯೆಡೆವಿಡದೆ ಲೇಖ ಸಂಖೆಯ
ಕಡೆ ಗುಣಿಸದೆ ತಿಳಿಯ ಪೇಳು ಭಾಸ್ಕರ ಮತದಿಂ ॥ ೧ ॥

ಅಂತ್ಯ : ಅಂಕ್ಕಿತಮಾಗಿ ತೋರ್ಪೆರಡು ರಾಸಿಯ ವರ್ನಮುದಯಿದೆ ಬೆರವಂ ಬೋಂಕನೆ ಹ್ರಸವರ್ನದೊಳು ತಾಂ ಕಳದಲ್ಲಿಯೆ ಬೆಸ್ತವ ಮಾಡಿ ಮತ್ತಂತೆಯು ವರ್ನತೂಕ್ಕದೊಳಯಿ ಪೆಚ್ಚಿಸಿದ ವರ್ನದ ತೂಕಂ। ಗೂಡಿಸಿಶ....ಯಿಂದ ಭಾಗಿಸುಗೆ।

ವಿಷಯ : ಮುತ್ತಿನ ಚಿಪ್ಪಿನ ಗಣಿತ.

ವಿಶೇಷ : ಬಹಳ ಶಿಥಿಲ. ಅಸಮಗ್ರ. ಇದೇ ಕಟ್ಟಿನಲ್ಲಿ ಬಣ್ಣಾಂತರದ ಸೂತ್ರವೆಂಬ ಮತ್ತೊಂದು ಗ್ರಂಥವಿದೆ.

1334

ಕೆ. ೭೯	**ಮುದ್ರಾಮಂಜೂಷ**	ಗದ್ಯ
೨೦.೭" × ೨.೨"	ಕೆಂಪುನಾರಾಯಣ	೧೮೨೩
೧–೨೦೯ ಪತ್ರ	೮ ಪಂಕ್ತಿ	೯೫ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ॥ ಲೋಕದಲ್ಲಿ ಸಕಲ ಶ್ರೇಯಸ್ಸಂನಪೇಕ್ಷಿಸುತ್ತಿರುವ ಭೂಪತಿಗಳಿಂದ ಪ್ರಜ್ಞಾಶಾಲಿಗಳಾದ ಮಂತ್ರಿಗಳಿಂದಲು ಅವಶ್ಯವಾಗಿ ವಿಚಾರಿಸಿ ತಿಳಿದು ಆಚರಿಸುವದಕ್ಕೆ ಯೋಗ್ಯವಾದ ಸಾಮಾದಿ ಚತುರೋಪಾಯದಿ ಯುಕ್ತನಾಗಿ ಕಾಮಂದಕಾದಿ ಮುನಿಗಳಿಂ ಪ್ರಣೀತವಾದ ದಂಡನೀತಿಶಾಸ್ತ್ರ ಪ್ರಯೋಗದಲ್ಲಿ ಪ್ರವೀಣನಾದ ಚಾಣಿಕ್ಯನೆಂಬ ವಿಪ್ರವರ್ಯ್ಯನು ತನಿಗೆ ಅಪಮಾನವಂ ಮಾಡಿದ ನವನಂದರಂನ್ನು ಚದ್ಮನೆಯಿಂದ ನಿಗ್ರಹಿಸಿ ಚಂದ್ರಗುಪ್ತನಿಗೆ ಆ ನಂದರಾಜ್ಯಾಧಿಪತ್ಯವಂನ್ನುಂಟುಮಾಡಿದನೆಂದು ಸಂಕ್ಷೇಪವಾಗಿ ಪುರಾಣದಲ್ಲಿ ಹೇಳಿದ ಕಥೆಯಂನ್ನು । ಯಿಾಗ ಮುದ್ರಾಮಂಜೂಷವೆಂಬ ಗ್ರಂಥದಿಂದಾ ಆನುಪೂರ್ವಕವಾಗಿ ಸುಲಭದಿಂ ಕಾವ್ಯಸರಣಿಯುಕ್ತವಾದ ಕಂನ್ನಡ ಭಾಷಾರೂಪದಿಂ ವಿವರಿಸಿ ಹೇಳುತ್ತಲಿಧ್ಧೇನೆ ॥ ಅದೆಂತೆಂದರೆ ಶ್ರೀಮತ್ಕೈಲಾಸವಾಸಿಯಾಗಿ

ಅಂತ್ಯ : ಐಯಾ ವಿಷ್ಣುಶರ್ಮ್ಮರಾದ ಬ್ರಾಹ್ಮಣೋತ್ತಮರಲ್ಲಿ ರುಷಿಶ್ರೇಷ್ಠರೆ । ಚಂಡಾಲಪರಿವಾರದಿಂದಾ । ದೂಷಿತನಾದ ನನಿಗೆ। ನೀಉ । ಮಹಾನುಭಾವರು ನಮಸ್ಕರಿಸಬಹುದೇ ಯನಲೂ । ಐಯಾ ಅಮಾತ್ಯರೆ । ಯಿಂನು ನೀಉ ನಂಮವರಾದ ಬಳಿಕಾ । ನಿಂಮ ಸಂಗಡ ಮರೆ

ವಿಷಯ : ನವನಂದರನ್ನು ಸಂಹರಿಸಿ ಚಂದ್ರಗುಪ್ತನಿಗೆ ಪಟ್ಟಕಟ್ಟಿದ ಚಾಣಕ್ಯನ ಸಾಹಸದ ಕಥೆ.

ವಿಶೇಷ : ಗ್ರಂಥಾಂತ್ಯದಲ್ಲಿ ಕೆಲವು ಪತ್ರಗಳು ಲುಪ್ತವಾಗಿವೆ. ಬರಹ ಸುಂದರ. ೧೯೯ನೆಯ ಪತ್ರದವರೆಗೆ ಕ್ರಮಾಂಕವಿದೆ. ಮುಂದಿನ ಹತ್ತು ಪತ್ರಗಳಿಗೆ ಕ್ರಮಾಂಕವಿಲ್ಲ. ೧೯೮ನೆಯ ಪತ್ರದ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆ ಇದೆ.

1335

ಕೆ. ಎ. ೧೯೮/೧	**ಮುನಿವಂಶಾಭ್ಯುದಯ**	ಸಾಂಗತ್ಯ
೧೨.೮" × ೮"	ಚಿದಾನಂದ	೧೬೮೦
೧–೬೩ ಪತ್ರ	೩೦ ಪಂಕ್ತಿ	೧೮ ಅಕ್ಷರ

ಆದಿ : ಮುನಿವಂಶಾಭ್ಯುದಯ x x x

ಶ್ರೀ ಮುನಿವಂದ್ಯ ದಿವ್ಯಧ್ವನಿಗಧಿಪ ಮ
ಹಾ ಮಹಿಮಾಕರ ನಿರಘಾ
ಪ್ರೇಮದೊಳೆನ್ನಂತರಂಗದೊಳಿರು ಮಹಾ
ಸ್ವಾಮಿ ಪರಂಜ್ಯೋತಿರೂಪಾ ॥ ೧ ॥
ಅಬಲೆಯರ ಬಲೆಗೆ ಶಿಕ್ಕದೆ ಸುಖಸಾರದ
ಸೊಬಗಿನ ನೆಲೆವನೆಯೆನಿಪ
ಸುಬಲನೆ ದೇವರಾಯನಿಗೆ ಸಾಮ್ರಾಜ್ಯದ
ಸೊಬಗುಗಾಣಿಸಿ ಪಾಲಿಸಭವಾ ॥ ೨ ॥
ಜಲಧಿ ಮೇರೆಯ ಭೂಮಂಡಲವನು ತಂತ್ರ
ಬಲದೊಳಾಕ್ರಮಿಸಿ ನಿನ್ನಂತೆ
ಛಲದಂಕನೆನಿಸಿ ಮೆರೆವ ನೃಪನಾರು ಸ
ತ್ಕಲಿ ಚಿಕ್ಕದೇವ ನೃಪಾಲಾ ॥ ೩ ॥

x x x x

ಪರಮ ಜಿನೇಂದ್ರ ಪದಾಂಬುಜ ಮಧುಕರ
ವರಚಿದಾನಂದ ವಿರಚಿತ
ಸುರುಚಿರ ಮುನಿವಂಶಾಭ್ಯುದಯದೊಳಿಂತು
ಕರಮೆಸೆದುದು ಸಂಧಿಯೊಂದೂ ॥ ೧೬೨ ॥

ಅಂತ್ಯ : ಭಟ್ಟಾಕಳಂಕ ಯೋಗೀಂದ್ರನಾರ್ಹತಗ್ರ್ಗೆ ಪ್ರ
ಕೃಷ್ಟ ದೇವತೆಯೆಂದೆನಿಪ
ಶಿಷ್ಟಾನ್ರ ಕೂಷ್ಮಾಂಡಿ ಯಕ್ಷಿದೇವಿಯನು
ತ್ಕೃಷ್ಟ ವಿಧಿಯೊಳು ಸಾಧಿಸಿದಾ ॥ ೧೧೯ ॥

x x x x

ರಾಜಾಧಿರಾಜ ರಾಜ್ಯಂಗನಾರಮಣ ಸ
ದ್ರಾಜಮಂದಾರನೆನಿಪ
ರಾಜೇಂದ್ರನೊಳು ನವಮುನಿರತ್ನಗಳ ಪೇಳಿ
ಮೋಜೆ.................................... ॥ ೧೨೨ ॥

ವಿಷಯ : ೧ನೆಯ ಸಂಧಿಯಲ್ಲಿ ಚಿಕ್ಕದೇವರಾಜನನ್ನು ಸಂಬೋಧಿಸಿ ಹೇಳಿರುವ ರಾಜನೀತಿ, ೨ನೆಯ ಸಂಧಿಯಲ್ಲಿ ಮೈಸೂರು ದೇಶದ ದೊರೆಗಳಾದ ಬೆಟ್ಟದ ಚಾಮರಾಜನಿಂದ ಚಿಕ್ಕದೇವರಾಜನ ಕಾಲದವರೆಗೆ ಇದ್ದ ರಾಜರ ವಂಶಾವಳಿ ಮತ್ತು ಆ ರಾಜರಿಗೂ ಆ ಕಾಲದಲ್ಲಿ ಬೆಳುಗೊಳದಲ್ಲಿದ್ದ ಜೈನಮುನಿಗಳಿಗೂ ಇದ್ದ ಸ್ನೇಹವಿಚಾರ, ೩ನೆಯ ಸಂಧಿಯಲ್ಲಿ ತೀರ್ಥಂಕರರ ಮಹಿಮೆ, ೪ನೆಯ ಸಂಧಿಯಲ್ಲಿ

ಅರ್ಹದ್ಬಲ್ಯಾಚಾರ್ಯರು ಬೆಳುಗೊಳದ ಗೊಮ್ಮಟೇಶ್ವರ ಮಹಿಮೆಯನ್ನು ಹೇಳಿ ಅರಸರಿಗೆ ದೀಕ್ಷೆಕೊಟ್ಟ ವಿಚಾರ, ೫ನೆಯ ಸಂಧಿಯಲ್ಲಿ ಪದ್ಮನಂದಿ ಮತ್ತು ವೀರ ನಂದಿಗಳ ಮಹಿಮೆ–ಇವೆ.

ವಿಶೇಷ : ಗ್ರಂಥ ಅಸಮಗ್ರ. ಪತ್ರದ ಒಂದು ಕಡೆ ಮಾತ್ರ ಬರವಣಿಗೆ ಇದೆ. ೫ನೆಯ ಸಂಧಿಯಲ್ಲಿ ೧೨೨ ಪದ್ಯಗಳು ಪೂರ್ತಿ ಇವೆ. ಶಕಟರೇಫದ ಬಳಕೆಯಿದೆ. ಗ್ರಂಥ ದಾದಿಯ ಬೇರೆ ೮ ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ. ಇದೇ ಪುಸ್ತಕ ದಲ್ಲಿ ಚಿಕ್ಕ ಶ್ರಾವಕಾಚಾರ, ಶ್ರಾವಕಾಚಾರ, ಜ್ಞಾನಸಾರ–ಎಂಬ ಕೃತಿಗಳಿವೆ

1336

ಕೆ. ೧೬೯/೫	**ಮುರಿಗೆ ಸ್ವಾಮಿಗಳ ನಾಂದ್ಯ**	ವಿವಿಧ ಷಟ್ಪದಿ
೯.೬″ × ೨″	?	?
೩೦–೩೩ ಪತ್ರ	೯ ಪಂಕ್ತಿ	೫೦ ಅಕ್ಷರ

ಆದಿ : ಮುರಿಗೆಯು ಸ್ವಾಮಿಗಳು ನಿರುಪಿಸಿದ ನಾದ್ಯ.
ಶ್ರೀಮದಭ್ರಾಳಕಂ ಭ್ರಾಜಿತಾಭ್ರರಸಭ್ರ
ದ್ಧಾಮನಿಧಿದವಳರೂಗ್ದೂಮ ಕೇತ್ವಕ್ಷ ಸ
ದ್ಧೋಮಹೃದ್ಧೀಮಭಿತ್ಕಾಮಜಿದ್ದೇಮಾದ್ರಿಧರ್ಮ್ಮಕೃತ್ಕರ್ಮ್ಮಭೇದಿ
ಭ್ರಾಮಕೋದ್ದತ ಪಂಚಮೇಡಾಭ್ರದೈತ್ಯದಿ
ಭೂಮಿಭಾರಕಬಲಾ ಖರ್ವ್ವಗರ್ವ್ವಪಹ
ಸ್ವಾಮಿ ಶಾಶ್ವತ ಮಹಪ್ರಿಮಿ ಪಾಲಯ ಸದಾ ಶ್ರೀಶಾಂತವೀರೇಶ್ವರಾ ॥ ೧ ॥

ಅಂತ್ಯ : ಅಂಗಲಿಂಗಾನನ ಕರಂಗಳ
ಸಂಗಶಕ್ತಿಸುಭಕ್ತಿಮನುಗಳ
ಮಂಗಳಾರ್ಪಿತ ತತ್ಪ್ರಸಾದಂಗಳನು ನೆಱೆಯಱಿದಾ
ಲಿಂಗಸಂಗಾನಂದಸುಖಿಗಳ
ತುಂಗ ಮಾನಸ ರಂಗಮಂಟಪ
ರಂಗಿಗಿತತುಳ ವಿಜಯರಾಮಾಂಗುಭೀ ಗುಣದಾಮಾ ॥ ೨೮ ॥
ಮುರಿಗಸ್ವಾಮಿಗಳು ನಿರುಪಿಸಿದ ನಾದ್ಯ ಸಂಪೂರ್ನಂ ಮಂಗಳಮಹಾ ಶ್ರೀ.

ವಿಷಯ : ಸ್ತುತಿ (ನಾಂದೀ ಪದ್ಯಗಳು).

ವಿಶೇಷ : ಶಕಟರೇಫದ ಬಳಕೆಯಿದೆ. ಇದೇ ಕಟ್ಟಿನಲ್ಲಿ ಗುರುಸ್ತೋತ್ರದ ನಾಂದ್ಯ, ಸಿದ್ಧೇಶ್ವರನ ವಾರ್ಧಿಕಗಳೆಂಬ ಇನ್ನೂ ೨೩ ಗ್ರಂಥಗಳಿವೆ.

1337

ಕೆ. ೧೬೯/೧೦ **ಮುರಿಗೆ ಸ್ವಾಮಿಗಳ ನಾಂದ್ಯ** ವಿವಿಧ ಷಟ್ಪದಿ

೯.೬" × ೨" ಕಂಪಿ ನಂಜಯ್ಯ ಸು. ೧೫೬೦

೪೭–೫೦ ಪತ್ರ ೧೦ ಪಂಕ್ತಿ ೪೬ ಅಕ್ಷರ

ಆದಿ : ಕಂಪಿ ನಂಜೆಯ್ಯನವರು ನಿರೂಪಿಸಿದ ನಾಂದ್ಯಾ ॥ ವಾರ್ಧಿಕ ॥
ಶ್ರೀಮದಮರೇಂದ್ರ ವೈಕುಂಠ ವಿಧಿಕ್ಷೇಮ ಹಿಮ
ಭೂಮಿ ಭೃದ್ವರತನುಜೆಯದ್ಧಾಂಗ ಯಮಿಜನ
ಪ್ರೇಮ ಧೂಮಧ್ವಜ ಹಿಮಾಂಶು ದಿನಕರ ವಿಲೋಚನ ಸಾಂದ್ರ ಮಹಿಮ ಸುಗುಣ
ಸ್ತೋಮ ಪೂರ್ವ್ವಮರ ಶಿರೋಮಾಲೆದಳೆದಪರ
ಕಾಮಾಂಗದಹನ ಭಸಿತವಿಲೇಪಕಯಮ
ಸ್ವಾಮಿ ರಕ್ಷಿಸು ಮಹೇಕ್ಷ್ವಗ ಶಾಂತವಿರೇಶ ನರಗಿಷ್ಟದಾತ ಮುದದಿಂ ॥ ೧ ॥

ಅಂತ್ಯ : ವರಹರ ಸ್ತುತಿಗಳನಿದಂ ಮಿಗೆ
ಬರೆದು ನಿಚ್ಚಂ ಪಠಿಸಿ ದುಗ್ಗ್ರಣ
ದುರಿತ ಸಂಕುಳ ಮರ್ದನಭಯ ಕರವರದಕರನೂ
ಚಿರತರಾಯು ಶ್ರೀಯುಮಂ ಸ
ದ್ಗುರು ಚಿರಾಮಳಲಿಂಗ ಭಕ್ತಿಯ
ನಿರದೆ ಕರುಣಿಸಿ ಸಲಹುವಂ ಶ್ರೀ ಶಾಂತವೀರೇಶಂ ॥ ೨೫ ॥
ಮುರಿಗೆಯ ಶ್ವಮಿಗಳ ಸ್ತೋತ್ರದ ನಾಂದ್ಯ ಸಂಪೂರ್ನ್ನಂ ಮಂಗಳಮಹಾ ಶ್ರೀ.

ವಿಷಯ : ಸ್ತುತಿ (ನಾಂದೀ ಪದ್ಯಗಳು)

ವಿಶೇಷ : ಶಕಟರೇಫದ ಬಳಕೆಯಿದೆ. ಇದೇ ಕಟ್ಟಿನಲ್ಲಿ ಚೇರಮನ ಕಾವ್ಯದ ನಾಂದ್ಯ, ಆದಯ್ಯನ ನಾಂದ್ಯಗಳೆಂಬ ಇನ್ನೂ ೨ ಗ್ರಂಥಗಳಿವೆ.

1338

ಕೆ. ೩೨೫/೧೨ **ಮುರಿಗೆ ಸ್ವಾಮಿಗಳ ನಾಂದ್ಯ** ವಿವಿಧ ಷಟ್ಪದಿ

೯.೫" × ೨" ಕಂಪಿ ನಂಜಯ್ಯ ಸು. ೧೫೬೦

೩೦–೩೨ ಪತ್ರ ೧೨ ಪಂಕ್ತಿ ೫೬ ಅಕ್ಷರ

ಆದಿ : ಕಂಪ್ಪಿಸಂಜೇದೇವರು ಮಾಡಿದ ಸ್ವಾಮಿಗಳ ನಾದ್ಯ–ವಾರ್ಧಿಕ ||

ಶ್ರೀಮದಮರೇಂದ್ರ ವೈಕುಂಠ ವಿದಿಕ್ಷೇಮ ಮಹಿಮ
ಭೂಮಿಭೃದ್ವರ ತನುಜೆಯದ್ಧಾರ್ಂಗ ಯಮಿಜನ
ಪ್ರೇಮ ದೂಮದ್ವಜ ಹಿಮಾಂಶು ದಿನಕರ ವಿಲೋಚ ಸಾಂದ್ರ ಮಹಿಮ
ಸುಗುಣಾ
ಸ್ತೋಮ ಪೂರ್ವ್ವಮರ ಶಿರೋಮಾಲೆದಳೆದಳೆದಪರ
ಕಾಮಾಂಗದ ಘನ ಭಸಿತವಿಲೇಪ ಕಾಯ ಮ
ತ್ಸ್ವಾಮಿ ರಕ್ಷಿಸು ಮಹೋಕ್ಷಗ ಶಾಂತವೀರೇಶ ನರಗಿಷ್ಟದಾತ ಮುದದಿಂ|| ೧ ||

ಅಂತ್ಯ : ವರಹರ ಸ್ತುತಿಗಳನಿದಂ ಮಿಗೆ

ಬರೆದು ನಿಚ್ಚಂ ಪಠಿಸಿ ದುಗ್ಗ್ರಣ
ದುರಿತ ಸಂಕುಳ ಮರ್ದ್ದನ ಭಯಾಕರವರದ ಕರನೂ
ಚಿರತರಾಯು ಶ್ರೀಯುಮಂ ಸ
ದ್ಗುರು ಚರಾಮಳಲಿಂಗ ಭಕ್ತಿಯು
ನಿರದೆ ಕರುಣಿಸಿ ಸಲಹುವಂ ಶ್ರೀ ಶಾಂತವೀರೇಶಾ || ೨೫ ||
ಮುರಿಗೆ ಸ್ವಾಮಿಗಳ ಸ್ತೋತ್ರದ ನಾದ್ಯ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಸ್ತುತಿ (ನಾಂದೀ ಪದ್ಯಗಳು).

ವಿಶೇಷ : ವಾರ್ಧಕ, ಭಾಮಿನೀ, ಪರಿವರ್ಧಿನೀ ಷಟ್ಪದಿಗಳಲ್ಲಿ ರಚಿತವಾಗಿವೆ. ಇದೇ ಕಟ್ಟಿನಲ್ಲಿ ಸಿದ್ಧೇಶ್ವರ ಪುರಾಣದ ನಾಂದ್ಯ, ಸೋಮನಾಥ ಪುರಾಣದ ನಾಂದ್ಯಗಳೆಂಬ ಇನ್ನೂ ಇತರ ಗ್ರಂಥಗಳಿವೆ.

1339

ಕೆ. ೩೨೫/೩	**ಮುರಿಗೆಸ್ವಾಮಿಗಳ ನಾಂದ್ಯ**	ವಿವಿಧ ಷಟ್ಪದಿ
೯.೫" × ೨"	?	?
೫–೭	೧೧ ಪಂಕ್ತಿ	೫೬ ಅಕ್ಷರ

ಆದಿ : ಮುರಿಗೆಸ್ವಾಮಿಗಳು ನಿರೂಪಿಸಿದ ನಾದ್ಯ—

ವಾರ್ಧಿಕ || ಶ್ರೀಮದಭ್ರಾಳಕ ಭ್ರಾಜಿತಾ ಭ್ರಸರಭೃ
ದ್ಧಾಮನಿಧಿಧವಳರುಗ್ಧೂಮ ಕೇತ್ವಕ್ಷ ಸ
ದ್ಧೋಮ ಹೃದ್ಧೀಮಭಿತ್ಕಾಮಜಿದ್ಧೇಮಾದ್ರಿಧರ್ಮಕೃತ್ಕರ್ಮಬೇಧಿ
ಭ್ರಾಮಕೋದ್ಧತ ಪಂಚಮೇಡ್ರಾಭೃದ್ದೈತ್ಯಾದಿ
ಭೂಮಿ ಭಾರಕಬಾಲಾ ಖರ್ವ್ವಗರ್ವ್ವಪಹ
ಸ್ವಾಮಿ ಶಾಶ್ವತಮಹತ್ಪ್ರೇಮಿ ಪಾಲಯ ಸದಾ ಶ್ರೀಶಾಂತವೀರೇಶ್ವರಾ || ೧ ||

ಅಂತ್ಯ : ಅಂಗಲಿಂಗಾನನ ಕರಂಗಳು
ಸಂಗ ಶಕ್ತಿ ಸುಭಕ್ತಿ ಮನುಗಳ
ಮಂಗಲಾರ್ಪಿತ ತತ್ಪ್ರಸಾದಂಗಳನು ನೆಱೆಯುಣ್ದಾ
ಲಿಂಗಸಂಗಾನಂದ ಸುಖಿಗಳ
ತುಂಗಮಾನಸ ರಂಗಮಂಟಪ
ರಂಗಿತಾತುಳ ವಿಜಯರಾಮಾಂಗಾಭಿಗುಣಧಾಮಾ || ೨೪ ||
ಅಯ್ಯನವರ ನಾದ್ಯ ಶ್ರೀ.

ವಿಷಯ : ಸ್ತುತಿ (ನಾಂದೀ ಪದ್ಯಗಳು).

ವಿಶೇಷ: ೨೪ ಪದ್ಯಗಳು ಮಾತ್ರ ಇವೆ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಸಿದ್ಧೇಶ್ವರನ ಭಾಮಿನಿಪುರಾಣ ನಾಂದ್ಯ, ಸೌಂದರ ಪುರಾಣದ ನಾಂದ್ಯಗಳೇ ಮೊದಲಾದ ೨೪ ಗ್ರಂಥಗಳಿವೆ.

1340

ಕೆ.ಎ. ೨೩೮	**ಮುಲ್ಲಾ ಶಾಸ್ತ್ರ**	**ಭಾಮಿನೀಷಟ್ಪದಿ**
೧೨.೯" × ೭.೮"	ಚಂದ್ರಸಾಗರವರ್ಣಿ	ಸು. ೧೮೧೦
೧–೧೩೦ ಪತ್ರ	೨೦ ಪಂಕ್ತಿ	೧೪ ಅಕ್ಷರ

ಆದಿ : ಮುಲ್ಲಾ ಶಾಸ್ತ್ರವು.
ಶ್ರೀಲಲಿತಲಾವಣ್ಯವಧು ನಯ
ನಾಳಿ ಪಂಕಜಪಾದ ತ್ರೈಜಗ
ಪಾಲ ಪರಮಜ್ಞಾನ ಕೋಣೆಯೊಳನುವಿನೋಪಮದಿ
ಕಾಲಮೂರರೊಳೆಲ್ಲ ವಿಷಯದ
ಜಾಲವನು ತಿಳಿದರುಹನಚ್ಯುತ
ಪಾಲಿಸನುದಿನ ಚಂದ್ರನಾಥನೆ ಚಿನ್ಮಯಾತ್ಮಕನೇ || ೧ ||

x x x x

ಆದಿಕರ್ತುಗಳಾದರೆಲ್ಲರ
ನಾದಿಯಲಿ ನಿರ್ವಿಘ್ನಕಾದರ
ರಾದ ಕಾರಣದಿಂದಲೆಲ್ಲರ ಭಜಿಸಿ ಭಕ್ತಿಯಲಿ
ಮೋದದಿಂ ಶ್ರೀ ಚಂದ್ರಸಾಗರ
ರಾದರದಿ ಪೇಳಿದರು ಧರೆಗೆ ವಿ
ನೋದ ತೋವಿನಕೆರೆಯ ಬಸದಿಯೊಳಿದನುಮೋದದಲಿ || ೧೧ ||

ಅಂತ್ಯ : ಸನ್ಮತಿಯ ಕಾಲದೊಳು ಗಣಧರ
ರನ್ನು ಮಾಡದ ಕಾರಣದಿ ಕುಪಿ
ತೋನ್ನತದಿ ಮಾಡಿದನು ಮುಲ್ಲಾಶಾಸ್ತ್ರವೆಂದೆಂಬ
ದನ್ನು ಪಾರಿಶ್ವಾಖ್ಯ ಮುನಿಪನ
ದಿನ್ನು ಕಥೆಯು ಚಂದ್ರಸಾಗರ
ವರ್ಣಿ ವಿರಚನೆ ಮಾಡಿದನು ಅರುಹಾಗೆಲ್ಲರಿಗೆ || ೭೫ ||
ಅಂತು ಆಶ್ವಾಸಂಗಳೆಂಟಕ್ಕಂ ಪದ್ಯಂಗಳ್ ನಾನೂರಕ್ಕಂ ಮಂಗಳಂ. ತೋವಿನ ಕೆರೆ ಚಂದ್ರಸಾಗರವರ್ಣಿ ವಿರಚಿತವಾದ ಮುಲ್ಲಾಶಾಸ್ತ್ರಂ ಸಂಪೂರ್ಣಂ ಮಂಗಳಂ ||

ವಿಷಯ : ಇಂದ್ರನು ಗೌತಮನೆಂಬ ಬ್ರಾಹ್ಮಣನಿಗೆ ಗಣಧರ ಪದವಿಯನ್ನು ಕೊಡಲು ಪಾರ್ಶ್ವಭಟ್ಟಾರಕನು ಕೋಪಗೊಂಡು ಮುಲ್ಲಾಶಾಸ್ತ್ರವನ್ನು ಪ್ರಚಾರಮಾಡಿದ ಕಥೆ.

ವಿಶೇಷ : ಮೋಡಿ ಬರಹ. ಪತ್ರದ ಒಂದುಕಡೆ ಮಾತ್ರ ಬರೆದಿದೆ. ಗ್ರಂಥದ ಆದಿಯ ಮೂರು ಪ್ರತ್ಯೇಕ ಪತ್ರಗಳಲ್ಲಿ ಕವಿಯ ವಿಚಾರ ಮತ್ತು ವಿಷಯಸೂಚಿ ಇದೆ.

1341

ಕೆ. ೩೬೨/೨	**ಮೂತ್ರರೋಗದ ಔಷಧಿ, ಇತ್ಯಾದಿ**	ಗದ್ಯ
೧೬″ × ೧.೪″	?	?
೨ ಪತ್ರ	೭ ಪಂಕ್ತಿ	៦೫ ಅಕ್ಷರ

ಆದಿ : ಆರೋಗ್ಯವಸ್ತು| ವಸ್ತಿಯಾಮಯಾಂತ ಗೃತ| ಗುಳ್ಳ| ನೆಲಗುಳ್ಳ| ವಂದೆಲ ಹೊಂನ್ನೆ| ಮೂರೆಲೆ ಹೊಂನ್ನೆ| ಮಾಗಳಿ| ನೆಲಮಾಗಳಿ x x x ಮೂತ್ರ ಕೃಚ್ಛ| ಪ್ರಮೇಹ| ಕಲ್ಲುಕಟ್ಟು ವಸ್ತಿಗತವಾದ ಸಕಲ ರೋಗ ವುರಿತ ಸಕಲ ಪ್ರಮೇಹ ಗುಲ್ಮ ಅಗ್ನಿಮಂದ ಗ್ರಹಣಿ ಕ್ಷಯ ಯೆದೆನೋವು ಪಾರ್ಶ್ವ ಶೂಲೆ ಯಿಷ್ಟಂನ್ನು ಪರಿಹರಿಸುದು

ಅಂತ್ಯ : ಚಿಕಿತ್ಸಾಮ್ರುತದಲ್ಲಿ| ಚಿಲ್ಲದ ಬೀಜ| ಆದಿತ್ಯಭಕ್ತ| ಆಷಾಡಿ ನೆಗ್ಗಿಲಬೇರು| ಯಿವರ ಕಷಾಯದಲ್ಲಿ ಸ್ವಲ್ಪ ಯಿಂಗ ಬೆರಸಿ ಕೊಡಿಸಲು| ವಾತದಿಂದ ವುಂಟಾದ ಸಕಲ ಮೂತ್ರಕೃಚ್ಛ ಕಲ್ಲುಕಟ್ಟು ಯಿಷ್ಟು ಪರಿಹರಾ ||

ವಿಷಯ : ವೈದ್ಯ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಈ ಕಟ್ಟಿನಲ್ಲಿ ಪಂಚಬ್ರಹ್ಮೋದಯ ಭಾಷ್ಯವೆಂಬ ಗ್ರಂಥವಿದೆ.

1342

ಕೆ. ೧೭೭/೨ **ಮೂರೇಳುದೀಕ್ಷೆಪದ ವಚನಗಳು, ಇತ್ಯಾದಿ** ಹಾಡು, ವಚನ, ಶ್ಲೋಕ
೧೨.೯"X೨.೧" ? ?
೧೨೬–೧೪೩ ಪತ್ರ ೧೪ ಪಂಕ್ತಿ ೬೦ ಅಕ್ಷರ

ಆದಿ : (೧) ಮೂರೇಳು ದೀಕ್ಷೆ ಪದ

ಷಟ್ಸ್ಥಲ ॥ ಪದ ॥ ವರ ಸದಾಚಾರಕಂ ತಪ್ಪಿದಡೆ ಆಗ್ನೆಗಳು ಹರನಿಂದ ಬಪ್ಪವೆಸಲದುವೆ ಯಾಗ್ನಾದೀಕ್ಷೆಯುರು ಪುರಾತನರ ಸಮಯಾಚಾರಕಂ ಸದ್ಭ ಶಂಗೆಯ್ವುದುಪವಾದೀಕ್ಷೆಯೂ|ಪರಮ ಸ್ವಸ್ತಿರಮಂಡಲದ ಮೇಲೆ ಸುತನ ಕು| ಳ್ಳಿರಿಸಿ ಮಂತ್ರನ್ಯಾಸಮಂ ಮಾಡಿ ಮಾಂಸತನು | ಚಿರಮಂತ್ರಪಿಂಡಮಂ ಮಾಳ್ಪದೇ ಸ್ವಸ್ತಿಕಾರೋಹಣವೆನಿಪ್ಪ ದೀಕ್ಷೆ ॥ ೧ ॥

x x x x

ಕಂ ॥ ಯಿಂತ ಮೂವೇಳದೀಕ್ಷೆಯ
ಸಂತಸದಿಂ ಕೊಟ್ಟು ರಕ್ಷಿಸುವ ಗುರುವಿನೊಳಂ
ನಿಂತು ದೀಕ್ಷೆಗಳ ಪಡೆಯ
ಲ್ಕಂತದು ಸಾಪ್ಪಲ್ಯಮಂತುಮಲ್ಲದೆ ಕೇಳೂ ॥

x x x x

ಶ್ರೀಗುರುವೆ ಗತಿ ॥ ವಚನ ॥ ಉರವೇ ಕುರುಕ್ಷೇತ್ರ | ಶಿರವೇ ಶ್ರೀಪರ್ವತ ಲಲಾಟವೇ ಕೇತಾರ | ಭ್ರೂನಾಶಿಕದ ನಡುವೆ ವಾರಣಾಸಿ ನೋಡಾ | ಹೃದಯವೇ ಪ್ರಯಾಗ | ಸರ್ವಾಂಗವೇ ಸರ್ವತೀರ್ಥಂಗಳಾಗಿ ಮಹಾಲಿಂಗ ಕಲ್ಲೇಶ್ವರನ ಶರಣರ ಸುಳುಹು ಜಗತ್ಪಾವನಾ ॥ ೧ ॥

x x x x

ವುರಿಯ ಮಡುವಿನಲ್ಲಿ ವೊಂದು ಜಲಜಕುಸುಮ ಹುಟ್ಟೆ | ಹರಿಸುರ ಬ್ರಹ್ಮಾದಿಗಳಿಗೆ ವಸವಲ್ಲ ನೋಡಾ | ಆ ಕುಸುಮದ ಯಸಳಿನ ಕೂಠಸ್ಥಾನದಲ್ಲಿ ಕಪ್ಪು | ನಡುಮಧ್ಯದಲ್ಲಿ ತವು | ತುದಿಯಲ್ಲಿ ಕಾಂತವರ್ನದ ಛಾಯ | ಕೂಡಿ ಅಳವುತ್ತಿಹುದು | ಆ ಹೂವ ವಣಗದಂತೆ ಜೆರಲಿ ಕಿತ್ತು ಸದಾಶಿವಮೂರ್ತ್ತಿ ಲಿಂಗದ ಪಾದವಲ್ಲಿರಿಸಲಾಗಿ ಪಥಕ್ಕೆ ಹೊರಗೆಂದು ಮಕುಟದಮೇಲೆ ಯಿರಲಾಗಿ ಯಿದನಾರು ಬಲ್ಲರೊ ಛೋದ್ಯವಾ ॥ ೭೨ ॥ ಶ್ರೀ ॥

x x x x

(ಮುಂದಿನ ಸಂಸ್ಕೃತಗ್ರಂಥ)

ಶ್ರೀ॥ ಗ್ರಂಥ ॥ ಅಷ್ಟಾವರಣಸಂಯುಕ್ತಾ ವೀರಮಾಹೇಶ್ವರಾ ನರಾಃ |
ಮಮ ರೂಪಂ ಧರಾದೇವಿ ವಿಚರಂತಿ ಧರಾತಲೇ ॥
ಟ್ಕೂ ॥ ಸತ್ತುಚಿತ್ತಾನಂದ ನಿತ್ಯಪರಿಪೂರ್ಣಭೂತಿ ಮಣಿಮಂತ್ರ ಯೀಯೆಂಟು ಹುಟ್ಟದುದು ಹೇಗೆನಲ ವಂದು ದ್ರುಷ್ಟ | ಚೂರ್ಣ್ಣದ ಗೆಣಸನು

ಅಂತ್ಯ : ಏಕ ಏವ ರುದ್ರೋ ನ ದ್ವಿತೀಯಾಯತಸ್ತೇ ಶಿವ ಏಕೋ ಧ್ಯೇಯಃ। ಶಿವಂ ಕರಃ ಸರ್ವ್ವಮನ್ಯತ್ಪರಿತ್ಯಜೇತ್।ಎಂಬ ಅಥರ್ವ್ವಶಿಖಾತ್ಥ್ರಮಂ ದ್ರುಡೀಕರಿಸಿ। ಸಮಸ್ತ ವಿಷ್ಣುಬ್ರಹ್ಮಾದಿ ದೇವತೆಗಳಂ ಶ್ರುತಿದ್ರುಷ್ಟ ಅನುಮಾನಂಗಳಿಂ ದೈವವಲ್ಲೆಂಬುದಂ ಸ್ವಾತ್ಮಾನುಭಾವದಿಂ ತಿಳಿದು ನಿಜಮೋಕ್ಷಮಂ ಪಡೆವುದೆಂಬುದೀ ಸೂತ್ರದ ಬಹುಶಬ್ದನಿರ್ವ್ವಚನಾರ್ತ್ಥ ॥ ಶ್ರೀ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಪತ್ರ ೧೨೮-೧೩೫ವರೆಗೆ ೭೨ ವಿವಿಧಾಂಕಿತಗಳಾದ ಶರಣರ ವಚನಗಳಿದ್ದು ಸಿದ್ಧಾಂತವಿಷಯಕಾಚಾರಗಳನ್ನೂ ಬೋಧಿಸುತ್ತವೆ. ಪತ್ರ ೧೩೫-೧೪೩ ಪೂರ್ತಿ ವೀರಶೈವಕ್ಕೆ ಪ್ರಮಾಣಭೂತಗಳಾದ ವೇದಾಗಮ ಹಾಗೂ ವಚನಗಳ ಆಧಾರವನ್ನು ಸಟೀಕಿನೊಂದಿಗೆ ಸಂಗ್ರಹಿಸಿರುತ್ತದೆ. ಇದರೊಂದಿಗೆ ಗಣಭಾಷ್ಯ ರತ್ನಮಾಲೆ, ಷಡುಸ್ಥಲ ತಾಮುಸಗುಣದ ಅನುಭಾವದ ವಚನಗಳು ಇವೆ.

1343

ಕೆ. ೧೭೫/೮	**ಮೂರೇಳು ದೀಕ್ಷೆ ಪ್ರಶಸ್ತಿ**	ವಾರ್ಧಕಷಟ್ಪದಿ
೧೦.೫″ × ೨.೪″	?	?
೧-೨ ಪತ್ರ	೧೨ ಪಂಕ್ತಿ	೪೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಮೂರೇಳ ದೀಕ್ಷೆ ಪ್ರಸಷ್ಥಿ ॥ ವಾರ್ಧಿಕ ಷಟ್ಪದಿ ॥

ಗುರು ಶಾಂತಮೂರ್ತಿ ಮೂರೇಳು ದೀಕ್ಷೆಯನಿತ್ತ
ತೆರನ ಪೇಳ್ದಪೆನೆಂನ ಮತಿ ಗೋಚರಿಸಿದೊಲು
ಶರಣ ಸಂತತಿಗಳಿದ ಲಾಲ್ಶಿಪುದು ಪಾಲ್ಶಿಪುದು ನಲವಿಂದಲವ ಧರಿಪುದೂ॥ಪಲ್ಲ॥
ಮಲತ್ರಯುವ ಕಳದಂನ್ಯದೈವಸ್ತಾವರರೇಕೆ
ಯುಳಿದು ಭವಿಸಂಗ ವುಪವಾಸಲ್ಪ ಕ್ರಿಯೆಗಳಂ
ಕಳದು ದಶದ್ರೋಹಾದಿಗಳ ಪಲಾಯನವೆನಿಸಿ ಮಧವೆಸನವಗ್ಗಾದಿಯಾ
ಹಳಿದುಡಂ ಬಕವಳಿದು ತರ್ಕ್ಕಕರ್ಕ್ಕಸೆ ಪಂಕ
ದೊಳೆದು ಕಾರುಣ್ಯದಿಂ ಸದ್ಭಕ್ತಿ ಕ್ಷಮೆ ಶಾಂತಿ
ಗಳ ಹೃದೆಯನೈಷ್ಟೆಯುವ ಸ್ಥಿರಗೊಳಿಸಲದು ತಾನೆ ತಿಳಿಯಲಾಗ್ನಾ ದೀಕ್ಷೆಯೂ ॥ ೧ ॥

ಅಂತ್ಯ : ಪರಮ ಸತ್ಕ್ರಿಯೆ ಗ್ನಾನ ನಿಜವೆಂದು ನಿಶ್ಚೈಸಿ
ಗುರುಕ್ರುಪೆಯ ಪಡದವರ ಲಿಂಗ ಕರದೊಳಗಿರಲು
ನಿರುತ ಸಂಪದಮೆನಿತು ತೀರ್ತ್ಥಪ್ರಸಾದ....ರ ಕಲದು ಸನ್ಮುಕ್ತಿಯೂ

ಶರಣಾಳಿಗಳ ಹಾಡಿ ಪ್ರಮಥಾಳಿಗಳ ಕೂಡಿ
ಮೆರೆವ ಭಕ್ತಿಯ ಗ್ರುಹವೆ ಕೈಲಾಸ ದಿಟವೆನಿಸಿ
ಯಿರೆ..........ಣಿಕನಲ್ಲಮಂಗೇಕವಿಂಶತಿ ದೀಕ್ಷೆಯೂ || ೨೧ ||
ಯಿಂತ್ರೀ ಮೂರೇಳು ದೀಕ್ಷೆ ಪದ ಸಮಾಪ್ತ ಶ್ರೀ.

ವಿಷಯ : ಮಲತ್ರಯನಿವಾರಕವಾದ ದೀಕ್ಷೆಯು ತ್ರಿವಿಧವೆನಿಸಿ ಮತ್ತೆ ಇಪ್ಪತ್ತೊಂದಾದ ಬಗೆ.

ವಿಶೇಷ : ಆದಿಯಲ್ಲಿ ಗುರುಶಾಂತಮೂರ್ತಿಯ ಅಂಕಿತವಿದೆ. ಮತ್ತೇನೂ ತಿಳಿಯದು. ೨ನೆಯ ಪತ್ರದ ಒಂದು ಕೊನೆ ಮುರಿದು ಲುಪ್ತವಾಗಿದೆ. ಇದರೊಂದಿಗೆ— ಜಯಸ್ತೋತ್ರ (ಬಿರುದಾವಳಿ ವಿವರ), ಅನುಭವಸೂತ್ರ, ವಿಶೇಷಾರ್ಥ ಪ್ರಕಾಶಿಕಾ, ಪರಮರಹಸ್ಯ, ಪರಮಾರ್ಥಗೀತೆ, ಮನೋವಿಜಯ, ರಸ ಸಿಂಧೂರ ಕ್ರಮ ಈ ಗ್ರಂಥಗಳೂ ಇವೆ. ಕೊನೆಯಲ್ಲಿ ಶಿವಪೂಜಾ ವಿಧಾನ (ವೇದೋಕ್ತ ಪ್ರಕಾಶದ) ಒಂದು ಪತ್ರವಿದೆ.

1344

ಕೆ.ಬಿ. ೧೯೧	**ಮೂಲಕರಾಮಾಯಣ**	ಭಾಮಿನೀಷಟ್ಪದಿ
೭.೫" × ೬.೩"	?	?
೧–೭೭ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಗಣಾಧಿಪತಯೆ ನಮಃ|| ಮೂಲಕ ರಾಮಾಯಣ ಬರಿವರೆ ಶುಭಮಸ್ತು||
ಸೂಚನೆ|| ಮೂಲಕಾಸುರ ಬಂದು ಲಂಕೆಯ
ಮೇಲೆ ಮುತ್ತಿಗೆಇಕ್ಕಿ ಘೋಳಾ
ಘೋಳಿಯಲಿ ಹ್ಯೊದಾಡಿ ಮುರಿದೋಡಿದ ವಿಭೀಷಣನೂ ||
ಪದನು|| ರಾವಣಗೆ ಪುಟ್ಟಿಹನು ಯಂಬರು
ದೇವದಲ್ಲಣನಿಂದಕೀಯನು
ಭಾವಿಸಲು ಮೂಲದಲಿ ಹುಟ್ಟಿದಾತನ ಕಥೆಯ ಪೇಳೆನಗೇ
ನೀವರಿಯದುದ ಕಾಣೆನೆಂದೆನೆ
ಭೂವರನೇ ಕೇಳೆನುತ ನುಡಿದನು
ಬಾವಿಸಲು ಮುನಿನಿಕರ ವುಗ್ರಶ್ರವನುನೊಲವಿನಲೀ || ೧ ||

ಅಂತ್ಯ : ಲಂಕೆಗಭಯವನಿತ್ತು ತಪದಲಿ
ಶಂಕರನ ಮೆಚ್ಚಿಸಿಯಘವುಗದ
ಶಂಕೆಯನು ಪರಿಹರಿಸಿ ಪುರಕೈತಂದು ಧಾರುಣಿಯಾ

ಬಿಂಕವಡಿಸಿದನೆಂಬ ಗಾಥೆಯು
ಅಂಕವಡಿದ್ಯೆದೆಂಟು ಮೂರನೆ
ಶಂಕರನು ಪಲವೀವನನುದಿನ ಕೇಳ್ವ ಜನಗಳಿಗೆ ॥ ೪೪ ॥
ಅಂತು ಸಂಧಿ ೬ಕಾಂ ಪದನು ಮಂಗಳಮಹಾ ಶ್ರೀ.
ಮೂಲಕ ರಾಮಾಯಣ ಸಂಪೂರ್ಣ ॥

ವಿಷಯ : ವಿಭೀಷಣ, ಭರತ, ಶತ್ರುಘ್ನ, ರಾಮ, ಲಕ್ಷ್ಮಣರನ್ನು ಯುದ್ಧದಲ್ಲಿ ಸೋಲಿಸಿದ ಮೂಲಕಾಸುರನು ಕಡೆಗೆ ಕುಶನಿಂದ ಹತನಾದ ಕಥೆ.

ವಿಶೇಷ : ವಿರಳಾಕ್ಷರ.

1345

ಕೆ. ೨೪೪/೧	**ಮೂಲಬಲರಾಮಾಯಣ**	ಭಾಮಿನೀಷಟ್ಪದಿ
೧೬.೯" × ೧.೫"	ಹರಿದಾಸ	ಸು. ೧೭೫೦
೧–೧೦೬ ಪತ್ರ	೬ ಪಂಕ್ತಿ	೫೭ ಅಕ್ಷರ

ಆದಿ : ಶುಭಮಸ್ತು ॥ ಮೂಲಬಲರಾಮಾಯಣ ॥
ಶ್ರೀರಮಣೀವಲ್ಲಭನೆ ಜಿತವಂ
ದಾರ ತರುವೇ ಬಕತಜನರಿಗೆ
ಕೋರಿದಿಷ್ಟವನೀವೆ ವಿಪ್ರಪ್ರಿಯನೆ ಧಾರ್ಮ್ಮಿಕನೇ
ಆರರಿವನ್ಯೆ ನಿಂನ ಗುಣಗಣ
ಪಾರ ಮಹಿಮೆಯ ದೇವ ರಘುಕುಲ
ಸಾರ್ವಭೌಮನೆ ರಕ್ಷಿಸ್ಯೆ ತ್ರ್ಯೆಜಗವ ಕರುಣದಲಿ ॥ ೧ ॥

ಅಂತ್ಯ : ಮಧ್ವಮುನಿ ಹೃತ್ಸರಸಿರುಹ ಹೃ
ನ್ಮಧ್ಯಸಾಗರ ವಾಸವಾಗಿಯ
ಭದ್ರಮೂರುತಿ ರಾಮಚಂದ್ರನ ಪುಂಣ್ಯಚರಿತ ಸುಧೇ
ಹೊದ್ದಿಶಿದಳಾ ವಾಣಿ ಯನಗೊಲಿ
ದಿದ್ದಪರಿಯಿಂ ರಚಿಶಿ ಕಂನ್ನಡ
ಪದ್ಯಪ್ರಾಸದಲೊರದೆ ತಪ್ಪಿರೆ ತಿದ್ದಿ ಬಲ್ಲವರೂ ॥ ೪೩ ॥
ಅಂತು ಸಂಧಿ ೧೩ಕ್ಕಂ ಪದನೂ ೭೨೬ಕ್ಕಂ ಮ್ಮಂಗಳಮಹಾ ಶ್ರೀ.

ವಿಷಯ : ರಾವಣ ಕುಂಭಕರ್ಣರ ಮೂಲಬಲವನ್ನು ಶ್ರೀರಾಮನು ಸಂಹರಿಸಿದ ಕಥೆ.

ವಿಶೇಷ : ಗರಿಗಳು ಮುರಿದು ಚೂರುಗಳಾಗಿವೆ. ಅತ್ಯಂತ ಶಿಥಿಲ ಪ್ರತಿ. ಕೊನೆಯ ಗರಿಗಳು ಮಾತ್ರ ಉತ್ತಮವಾಗಿವೆ. ಇದೇ ಕಟ್ಟಿನಲ್ಲಿ ಸಂಕ್ಷೇಪ ಭಾಗವತವೆಂಬ ಇನ್ನೊಂದು ಗ್ರಂಥವಿದೆ.

1346

ಕೆ.ಬಿ. ೨೨೯ **ಮೃಚ್ಛಕಟಿಕ** ನಾಟಕ

೭.೭" × ೬.೩" ? ?

೧-೧೦೭ ಪತ್ರ ೧೬ ಪಂಕ್ತಿ ೨೦ ಅಕ್ಷರ

ಆದಿ : ಶ್ರೀರಾಮ ನಿರ್ವಿಘ್ನಮಸ್ತು॥
ಸೂತ್ರಧಾರಂ (ಪ್ರವೇಶಿಸಿ) ॥ ಕಂದಪದ್ಯ ॥
ಅಪ್ಪಿದ ಗೌರಿಯ ಭುಜಲತೆ
ಯೊಪ್ಪುತೆ ಮೆರೆಯುವದೊ ಮಿಂಚಿನಂತೆಲ್ಲಿ ಸದಾ
ತಪ್ಪದೆ ಶಿತಿಕಂಧರನಾ
ಕಪ್ಪುಗೊರಲ್ ಸಲಹಲೀಗ ನಮ್ಮನು ದಯದಿಂ॥

x x x x

ಅಯ್ಯಾ ಸಭಾಸದರೆ ಶೂದ್ರಕ ಮಹಾಕವಿಯಿಂದ ವಿರಚಿತವಾದ ಮೃಚ್ಛಕಟಿಕ ವೆಂಬ ನಾಟಕವನ್ನು ಕರ್ಣಾಟಕದ ಭಾಷೆಯಿಂದ ಅಭಿನೈಸಬೇಕೆಂದು ನಮಗೆ ಬಹಳ ಕುತೂಹಲವಿರುವುದು.

ಅಂತ್ಯ : ಚಾರುದತ್ತ–ಈ ಲೋಕದಲ್ಲಿ ನನಗೆ ಬಂದಿದ್ದ ಅಪವಾದವು ಪರಿಹರ ವಾಯಿತು. ಶರಣಾಗತನಾದ ಶತ್ರುವನ್ನು ಬದುಕಿಸಿದ್ದಾಯಿತು.

x x x x

ಕಮಲಾಕ್ಷರವೋಲ್ ಹಿಮವತ್ತನಂ ಜೇನವೋಲ್
ಸುಮನೋಜ್ಞ ಶಶೀಂದ್ರರವೋಲ್ ಶೋಭಿಸುತ್ತಂ ॥ ೩ ॥

ದಶಮಾಂಕಂ ಸಂಪೂರ್ಣಂ.

ವಿಷಯ : ಚಾರುದತ್ತ–ವಸಂತಸೇನೆಯರ ಕಥೆ.

ವಿಶೇಷ : ಎರಡು ವಿಧದ ಮಸಿಯ ಬರವಣಿಗೆ ಇದೆ. ಕೆಲವು ಪತ್ರಗಳ ಅಂಚನ್ನು ಹುಳು ಹೊಡೆದು ರಂಧ್ರಬಿದ್ದಿದೆ.

1347

ಕೆ.ಬಿ. ೩೦೧ **ಮೈರಾವಣ ಚರಿತ್ರೆ** ಭಾಮಿನೀಷಟ್ಪದಿ

೭.೬" × ೬.೩" ನರಹರಿ ಸು. ೧೫೮೦

೧–೭೬ ಪತ್ರ ೧೨ ಪಂಕ್ತಿ ೧೪ ಅಕ್ಷರ

ಆದಿ : ಮೈರಾವಣನ ಚರಿತ್ರೆ ಪ್ರಾರಂಭವು ||
ಕನ್ನಡ ಪದ್ಯಕಾವ್ಯ
ಸೂಚನೆ || ಶ್ರೀಮದನುಪಮಚರಿತ ಪುಣ್ಯ
ಸ್ತೋಮನಗಣಿತ ಮಹಿಮ ಭಕ್ತ
ಪ್ರೇಮ ಕರುಣಾಸಿಂಧು ಮಂಗಳನಾಮ ನಿಸ್ಸೀಮ
ಕಾಮಪಿತ ಕಮಲಾಕ್ಷ ಸಾಸಿರ
ನಾಮ ಸುಲಲಿತ ನೀಲಮೇಘ
ಶ್ಯಾಮ ರಕ್ಷಿಸು ಜಗವ ಸುಮನೋದ್ದಾಮ ಶ್ರೀರಾಮ || ೧ ||

x x x x

ಧರೆಯೊಳಗೆ ಶ್ರೀರಾಮಾಯಣದ
ವರಕಥೆಯನೊಲವಿನಿಂದಲಿ
ದುರಿತನಾಶನವೆಂದೊರದನಾ ವಾಲ್ಮೀಕಿ ಮುನಿರಾಯ
ವರಮುನಿಯ ಕರುಣದಿಂದಲಿ
ವಿರಚಿಶಿದ ಬುಧವಂಶಜನು
ನರಹರಿಯ ನಾಮಕನಿಳೆಯೊಳೀ ಮೈರಾವಣನ ಕಾಳಗವ || ೭ ||

ಅಂತ್ಯ : ಈ ಕಥೆಯ ಭಕ್ತಿಯಲಿ ಸಂಪ್ರೀತಿಪೂ
ರ್ವಕದಿಂದೋದಿದರೆ ಕೇಳ್ದರೆ ಪಾ
ತಕವ ಕೆಡೆತುಳಿದವರ ಸತ್ಕೃಪೆಯಿಂದ ರಕ್ಷಿಸುತಾ
ನೇಕಧರ್ಮಜ್ಞಾನ ನೀತಿಮುಖ
ವಿಖ್ಯಾತನೆನಿಸಿ ಯಿಹಪರದಿ
ಸಾಕುವನು ದಯದಿಂದ ತೊರವೆಯ ರಾಯ ರಘುನಾಥ || ೧೨೦ ||
ಮೈರಾವಣ ಚರಿತ್ರೆಯೊಳ್ ಅಂತು ಸಂಧಿ ೪ಕ್ಕಂ ಪದನು ೩೦೪ಕ್ಕಂ ಮಂಗಳ
ಮಹಾ || ಸಂಪೂರ್ಣವು ||

ವಿಷಯ : ಹನುಮಂತನು ಮೈರಾವಣನೊಡನೆ ಯುದ್ಧಮಾಡಿ ಆತನನ್ನು ಕೊಂದು ಪಾತಾಳದಿಂದ ರಾಮಲಕ್ಷ್ಮಣರನ್ನು ಭೂಲೋಕಕ್ಕೆ ಕರೆತಂದ ಕಥೆ.

ವಿಶೇಷ : ಸ್ಫುಟಾಕ್ಷರ. ಪದ್ಯಗಳ ಸಾಲನ್ನು ಬಿಡಿಸಿ ಬರೆದಿದೆ.

1348

ಕೆ.ಬಿ. ೩೫೩ **ಮೈರಾವಣ ಚರಿತ್ರೆ** ಯಕ್ಷಗಾನ

೮" × ೬.೫" ಲಿಂಗರಾಜ ೧೮೫೦

೧–೫೫ ಪತ್ರ ೧೩ ಪಂಕ್ತಿ ೧೩ ಅಕ್ಷರ

ಆದಿ : ರಾಮಾಣದೊಳಗಣ ಮೈರಾವಣನ ಕಥೆ ಬರೆಯುವದಕ್ಕೆ ಶುಭಮಸ್ತು ಶ್ರೀರಸ್ತು ॥ ಶಾರ್ದೂಲವಿಕ್ರೀಡಿತಾ ವೃತ್ತಾ ॥
ಶ್ರೀಮತ್ತಾಮರಸೋತ್ಪಲಶ್ವಸನ ವೈತ್ರೀಪಾತ್ರ ನೇತ್ರತ್ರಯಂ
ಭೀಮಭ್ರೂಕುಟಿ ಭಂಗಲೇಶ ಭಟಕಲ್ಪಾನನಕಾಲಯಂ
ವಾಮಾಂಕಾಸ್ಥಿತ ಶೈಲರಾಜತನಯ ಸಲ್ಲಾಪಲೋಲಾಶಯಂ
ಪ್ರೇಮಂಬೆತ್ತೆಮಗೀಗೆ ಭದ್ರತತಿಯಂ ಶ್ರೀ ಭದ್ರಕಾಳೀಪ್ರಿಯಂ ॥
x x x ಕಂದಾ ॥ ವರವಾಲ್ಮೀಕಿ ತಪೋಧನ
ವಿರಚಿತ ರಾಮಾಯಣಾಬ್ಧಿ ಮಥನೋದ್ಗತಬಂ
ದುರ ರಾಮಕಥಾಮೃತವ
ನೊರವೆನು ವಿಭುದರ್ಗೆ ಯಕ್ಷಗಾನದೊಳಲೆಯಂ ॥ ೧ ॥

ಅಂತ್ಯ : ಪುಂಗವತುರಂಗನಿಗೆ ಗಂಗಾಜನಿಗೇ
ಲಿಂಗರಾಜ ಸೇವ್ಯನಿಗೆ ತುಂಗಮಹಲಿಂಗನಿಗೆ ॥ ೩೯೧ ॥

ಸಂನ್ ೧೮೪೦ನೆ ಯಿಸವಿ ಪಿಪ್ಪರವರೀ ತಾರೀಖು ೧೬ರಲ್ಯು ವೋದೋವಾದನು ಬರದು ವಪ್ಪಿಸಿದ ರಾಮಾಯಣದೊಳಗೆ ಮೈರಾವಣ ಕಾಳಗ ಸಂಪೂರ್ಣಕಾಂ ಮಂಗಳಮಹಾ ಶ್ರೀಶ್ರೀ.

ವಿಷಯ: ಹನುಮಂತನು ಮೈರಾವಣನೊಡನೆ ಯುದ್ಧಮಾಡಿ ಆತನನ್ನು ಕೊಂದು ಪಾತಾಳದಿಂದ ರಾಮಲಕ್ಷ್ಮಣರನ್ನು ಭೂಲೋಕಕ್ಕೆ ಕರೆತಂದ ಕಥೆ.

ವಿಶೇಷ : ೫೫ ಪತ್ರಗಳಾದಮೇಲೆ ಕೆಲವು ಶುದ್ಧಪತ್ರಗಳಿವೆ. ಸುಂದರಾಕ್ಷರ. ಪತ್ರಗಳಿಗೆ ಕ್ರಮಾಂಕವಿಲ್ಲ.

1349

ಕೆ.ಎ. ೨೭೩	**ಮೈಸೂರು ದೊರೆಗಳ ಪೂರ್ವವಂಶಾಭ್ಯುದಯ**	ಗದ್ಯ
೧೨.೯" × ೮.೧"	?	?
೧–೩೫ ಪುಟ	೨೪ ಪಂಕ್ತಿ	೨೬ ಅಕ್ಷರ

ಆದಿ : ಶ್ರೀಮನ್ಮಹಾಲಕ್ಷ್ಮೀಕಟಾಕ್ಷೇಣ ಸ್ಥಾನವಾದ ಶ್ರೀರಂಗಪಟ್ಟಣದ ವಿಸ್ತಾರ ವಂನ್ನು ವಿವರಿಶಿ ಬರದ/ಯಿಾ ಸ್ಥಳದ ಶಾನುಭಾಗರು/ತ್ರಿಂಮಪ್ಪಯನವರ ಪುತ್ರ

ರಾದ ನಂಜಪ್ಪಯನವರು ಯಿಾವರ ಪುತ್ರರಾದ ಯಾಲಾಜ್ಜೈಯನವರು ಯಿವರ ಕೊಮಾರರಾದ ವೆಂಕಟೇಶ್ವಯನವರು। ಯಿವರ ಪುತ್ರ ವೆಂಕಟರಮಣ್ಣೈಯನು। ಪ್ರಾಕು ಪೂರ್ವದಲ್ಲಿ ಸಂಚಿತವಾದ ಮೈವಿಸುರ ದೊರೆಗಳ ಪಾರಂಪರೆಯನು ವಿವರಿಶಿ ಬರೆವ ಪೂರ್ವದ ಲೇಖನದ ವಿವರಾ ॥ ಶ್ರೀ ॥ ಯಿಾ ಭೂಲೋಕಕ್ಕೆ ಆಧಾರವಾಗಿರುವಂಥಾ ಸುವರ್ಣಮುಯುವಾದ ಮಹಂಮೇರುಯಂಬ ಪರ್ವತ್ತಉ ರಮಣೀಯದಿಂದ ಮನೋಹರವಾಗಿರುವದು । ಯಿಾ ಪರ್ವತ ಹದಿನಾರು ಸಾವಿರ ಯೋಜನದುದ್ದ ಭೂಮಿಗೆನೆಟು । ಯಂಭತ್ತುನಾಲ್ಕು ಸಾವಿರ ಯೋಜನದುದ್ದ ಮೇಲಕ್ಕೆವಿಯಿಾ ಯಿರುವದು॥

ಅಂತ್ಯ : ಶ್ರೀರಂಗಪಟ್ಟಣದಲ್ಲಿ ಸಕಲಜನರು ಸಂತೋಷಯುಕ್ತರಾಗಿ । ಯಾವ ಕಾಲದಲ್ಲಿಯು ಅರಸಗಳ್ಗೆ । ಸಾರಿಸಾಟೆಯಿಲ್ಲವೆನಿಶಿ ಸುಖದಲ್ಲಿ ಬ್ರಂಹ್ಮಪಟ ದೋಪಾದಿಯಲ್ಲಿ ಸಕಲವಾ । ದ ದೇವಬ್ರಾಂಹ್ಮಣರು ಮಾಡುವಂತ್ತ। ಅಮೋಘ ಆಶೀರ್ವಾದಾ ॥

ವ್ಯಯ ಸಂವತ್ಸರದ ಚಯಿತ್ರ ಬ ೧ಲ್ಲು ಯಿಮ್ಮಡಿ ಕೃಷ್ಣರಾಜ ವಡೆರೈಯ್ಯನವರು ಸ್ವರ್ಗಸ್ತರಾದಲ್ಲು ಸರ್ವಜಿರ್ತ್ತು ಸಂ । ಚಯಿತ್ರ ಬ ೩ಲ್ಲು ಯಿಮ್ಮಡಿ ಕ್ರುಷ್ಣರಾಜ ವಡೆರೈಯನವರ ಕೊಮಾರರು । ನಂಜರಾಜ ವಡೆರೈಯನವರಿಗೆ ಪಟಾ ।ಯಿವರ ಕಿರೀ ಮಗ । ಚಾಮರಾಜ ವಡೆರೈಯನವರಿಗೆ । ನಂದನ ಸಂ । ಯಿ ಪಟಾ — — ಹೇವಳಂಬೀ ಸಂವತ್ಸರ । ಯಿಾ ದೊಡ ನವಾಬರು । ಚಾಮರಾಜ ವಡೆರೈಯನವರಿಗೆ । ಪಟಾ । ಯಿವರಿಗೆ ಕುಟಂಬಾ ಬಾಳೆಅರಶಿನವರ ಕೊಮಾರರು । ನಂಜರಾಜೈಯ । ಅರಶಿನವರ ಕೊಮಾರರ್ತ್ರಿಯರು ಯಿಾಬರು । —ಯಿಾಚಿಗೆ ಶಿಧಾರ್ತ್ರಿ ಸಂ । ಜೇಷ್ಟ ಬ ೧೩ ಭಾನುವಾರ । ಹಳೆ ಮವಿಸುರುಲ್ಲಿ । ಯಿಂಗರೆಜು ಫರಂಗಿ । ಜಿರ್ನಲ್ಲು ಅರಸು । ಪಟ್ಟಾಕಟ್ಟಿದರು। ಚಾಮರಾಜವಡೆರೈಯನವರ ಕೊಮಾರರು । ಶ್ರೀ ಕೃಷ್ಣರಾಜ ವಡೆರೈಯನವರರ್ಗೆ ಪಟಾ ಕಟಿದರು । ಶ್ರೀ.

ವಿಷಯ : ಮೈಸೂರು ದೊರೆಗಳ ಪೂರ್ವವಂಶದ ವಿಚಾರ.

ವಿಶೇಷ : ಗ್ರಂಥಾಂತ್ಯದಲ್ಲಿ ಚಾಮರಾಜವಡೆಯರು ಮೊದಲಾದ ರಾಜರು ಪಟ್ಟಾಧಿಕಾರ ಸ್ವೀಕರಿಸಿದ ಕಾಲವನ್ನು ಸೂಚಿಸಿದೆ. ಮೋಡಿ ಅಕ್ಷರ.

1350

ಕೆ. ೬೨ **ಮೈಸೂರು ದೊರೆಗಳ ವಂಶಾವಳಿ** ಗದ್ಯ

೧೫"×೧.೪" ? ?

೧-೪೫ ಪತ್ರ ೪ ಪಂಕ್ತಿ ೫೦ ಅಕ್ಷರ

ಆದಿ : ....ರು ಧೊರೆಗಳ ವಂಶಾವಳಿ ಬರಯುವದಕ್ಕೆ ನಿರ್ವಿಘ್ನಮಸ್ತು ॥
ಅರಮನೆ ರಾಯಸ್ತ ಕಾಳೈಯನ ಮಗ ರಾಮಯ........ಸ್ತುಕ। ವಿರಾಟ ಪುರುಷನಿಂದ ಸಕಲ ಜಗತ್ಸೃಷ್ಟಿ। ಅನಂತರ। ಕಾರಣ ರೂಪಾದಂತ್ಥ। ಬ್ರಹ್ಮ ವಿಷ್ಣು ಮಹೆ.... ಬ್ರಂಹ್ಮನಿಂದ್ದಾ ರಜೋಗಣದಿಂದ್ದಾ। ಜಗತ್ತು ಉಂಟಾಯಿತು ವಿಷ್ಣು ಸತ್ವಗುಣದಿಂದ್ದಾ ಪಾಲನೆ। ರದ್ರನ ತಮೋಗುಣ ದಿಂದ್ದಾ ಸಂಹಾ.... ಮತ್ತೊಂದ್ದು ಸೃಷ್ಟಿಯಲ್ಲಿ ವಸುದೇವನ ಪ್ರಾರ್ಥ ನೆಯಿಂದ್ದಾ ಮಹಾವಿಷ್ಣು ಕೃಷ್ಣರೂಪಿನಿಂದ ಜನಿಶಿ

ಅಂತ್ಯ : ಬಲಸಹಿತಾ ಬಂದು ಸಂನಾಹವಂನು ಮಾಡಿಕೊಟ್ಟು ಕಳುಹಿಸ್ತಲ್ಲಿ ಬಲ ಸಹಿತಾ ಬಂದು। ಪಿರ್‍ರಿಪಟಣರಂದು ಹರ್‍ರಿದಾರ್‍ರಿತಂ........ಗೆಯಲ್ಲಿ ಯಿಧಾನೆ ಯೆಂಬ ಸುಧಿಯಂನು ಕೇಳಿ ಸಮಸ್ತಾ ಬಲಸಹಾ ಪಾಲೂರಿಗೆ ಹೋದಲ್ಲಿ। ಯಿೂ ಸುಧಿಯಂನು ನಂಜುಂಡ ಅರಸು ಕೇಳಿ ರಾತ್ರೆಯಿನಾ...............

ವಿಷಯ : ಮೈಸೂರು ದೊರೆಗಳ ವಂಶಾವಳಿ.

ವಿಶೇಷ : ಈ ಪ್ರತಿಯಲ್ಲಿ ಹುಳು ತಿನ್ನದೆಯಿರುವ ಪತ್ರಗಳೇ ಇಲ್ಲ. ತುಂಬ ಶಿಥಿಲ ವಾಗಿದೆ. ಮಧ್ಯೆ ಮಧ್ಯೆ ತ್ರುಟಿತ. ೨೬ನೆಯ ಪತ್ರ ಮಧ್ಯಕ್ಕೆ ಮುರಿದಿದೆ. ಅಸಮಗ್ರ ಪ್ರತಿ.

1351

ಕೆ.ಎ. ೩೩೪ **ಮೈಸೂರು ದೊರೆಗಳ ವಂಶಾವಳಿ** ಗದ್ಯ

೩೫.೫"×೨೩.೯" ? ?

೧ ಪತ್ರ ೯೫ ಪಂಕ್ತಿ ೪೫ ಅಕ್ಷರ

ಆದಿ : ಮೈಸೂರು ಸಂಸ್ಥಾನದ ದೊರೆಗಳವರ ವಂಶಾವಳಿ........ಸ್ತು॥
ಯಿವರ ಪತ್ನಿರುಗಳು ಪುತ್ರರು ಮುಂತಾದ ವಿವರ ಸಹಾ ॥

ಶ್ರೀ ನಂ.	ದೊರೆಗಳವರ ಹೆಸರುಗಳು	ಪತ್ನೀರುಗಳು		ಪುತ್ರರುಗಳು	
		ಬ್ರಾಹ್ಮೀ ಪತ್ನೀರುಗಳು	ಗಾಂಧರ್ವ ಪತ್ನೀರುಗಳು	ಬ್ರಾಹ್ಮೀ ಪುತ್ರರು ಗಳು	ಗಾಂಧರ್ವ ಪುತ್ರರು ಗಳು
ಆದಿ:– ೧	ಆದಿಯದುರಾಯರು	೧	೨	೧	೦
ಅಂತ್ಯ:– ೨೩	ನಂಜರಾಜಾಭಿದ ಮುಂಮುಡಿ ಕೃಷ್ಣರಾಜವಡಯುರವರ ಸ್ವೀಕೃತಪುತ್ರರಾದ ಚಾಮ ರಾಜೇಂದ್ರ ವಡಯುರವರೂ. ಬೆಟ್ಟದ ಕೋಟೆ.	೧	೦	ಪುತ್ರರು ೩ ಪುತ್ರೀರು ೩	

ಜನನ ಕಾಲಲಿ ಪಟ್ಟಾಭಿಷೇಕಾಲ ಸ್ವರ್ಗಸ್ಥರಾದ ಕಾಲ

ಶಾಲಿವಾಹನ ಶಕ	ಯಿಂಗ್ರೀಜಿ ಸ೯	ಶಾಲಿವಾಹನ ಶಕ	ಯಿಂಗ್ರೀಜಿ ಸ೯	ಶಾಲಿವಾಹನ ಶಕ	ಯಿಂಗ್ರೀಜಿ ಸ೯
ಆದಿ:- ೧೨೯೩ನೇ ಸಾಧಾರಣಸಂವತ್ಸರದ ಮಾಘ ಶುದ್ಧ ೩	೧೩೭೧	೧೩೨೨ ನೆ ಪ್ರಮಾಧಿ ಸಂವತ್ಸರದ ವೈಶಾಖಶುದ್ಧ ೫	೧೩೯೯	೧೩೪೬ ನೆ ಶೋಭಕೃತು ಸಂವತ್ಸರದ ಶ್ರಾವಣ ಶುದ್ಧ ೧೦	೧೪೨೩
ಅಂತ್ಯ:- ೧೭೮೫ ನೆ ದುಂದುಭಿ ಸಂವತ್ಸರದ ಪಾಲ್ಗುಣ ಶುದ್ಧ ೫	೧೮೬೩	೧೭೯೧ ನೆ ವಿಭವ ಸಂವತ್ಸರದ ಆಶ್ವೀಜ ಶುದ ೭	೧೮೬೮	೧೮೧೭ ಜಯ ಸಂವತ್ಸರದ ಪುಷ್ಯ ಶುದ್ಧ ೧	೧೮೯೪

ಆಳಿಕೆ ವರ್ಷ	ದಳವಾಯಿ	ಸರ್ವಾದಿಕಾರ	ಉತ್ತರಕ್ರಿಯ ಮಾಡಿದ್ದು
ಆದಿ:– ೨೪	೦	೦	ದಾ. .ಲೆ ಯಿಲ್ಲ
ಅಂತ್ಯ:–		೧. ಸರ್ವಾಧಿಕಾರರಂಗ ಚಾರ್ಯರು ೧. ಸರ್ವಾಧಿಕಾರ ಶೇಷಾದ್ರಯರ್ ಯವರೂ....	ಪುತ್ರರ....ದಿಂ ಮಿಲ್ಟೇರೀ ಬಕ್ಷೀಸ. . ಬಸಪ್ಪಾಜೀಯವರು ವುತ್ತರ ಕ್ರಿಯೆ ಮಾಡಿಧಾರೆ—

ವಿಷಯ : ಮೈಸೂರು ಸಂಸ್ಥಾನದ ದೊರೆಗಳ ವಂಶಾವಳಿ.

ವಿಶೇಷ : ಬರಹ ಸುಂದರ, ಆದರೆ ಅಲ್ಲಲ್ಲಿ ಅಕ್ಷರವು ಸ್ಪಷ್ಟವಾಗಿ ಕಾಣಿಸುವುದಿಲ್ಲ.

1352

ಕೆ.ಬಿ. ೩೩೬ **ಮೈಸೂರು ದೊರೆಗಳ ವಂಶಾವಳಿ** ಗದ್ಯ

೭.೬" × ೬.೩" ? ?

೧–೪೨ ಪತ್ರ ೧೨ ಪಂಕ್ತಿ ೧೬ ಅಕ್ಷರ

ಆದಿ : ಮೈಸೂರು ಧೊರೆಗಳ ವಂಶಾವಳೀ ಬರೆಯುವದಕ್ಕೆ ನಿರ್ವಿಘ್ನೆಮಸ್ತು । ಅರಮನೆಯ ರಾಯಸ ಕಾಳೈಯ್ಯನ ಮಗ ರಾಮಯ್ಯನ ಪುಸ್ತಕ । ವಿರಾಟ್ ಪುರುಷನಿಂದ ಸಕಲ ಜಗತ್ಸೃಷ್ಟಿ । ಅನಂತರ ಕಾರಣ ರೂಪಾದಂಥಾ ಬ್ರಹ್ಮಾ ವಿಷ್ಣು ಮಹೇಶ್ವರ । ಬ್ರಹ್ಮನಿಂದ ರಜೋಗುಣದಿಂದ ಜಗತ್ತು ಉಂಟಾಯಿತು । ವಿಷ್ಣುವಿನ ಸತ್ವಗುಣದಿಂದ ಪಾಲನೆ । ರುದ್ರನ ತಮೋಗುಣದಿಂದ ಸಹ್ಮಾರ । ಮತ್ತೊಂದು ಸೃಷ್ಟಿಯಲ್ಲಿ ವಸುದೇವನ ಪ್ರಾರ್ಥನೆಯಿಂದ ಮಹಾವಿಷ್ಣುವು ಕೃಷ್ಣರೂಪಿನಿಂದ ಜನಿಸಿ ಮನುಷ್ಯದೇಹವಂ ಸ್ವೀಕರಿಶಿ ಜರಾಸಂಧ ದಂತವಕ್ತ್ರ ಶಿಶುಪಾಲ ಮುಂತಾದವರ ಸಹ್ಮಾರಮಾಡಿ ಬ್ರಾಹ್ಮಣ ಶಾಪದಿಂದ ತಮ್ಮ ವಂಶವನ್ನು ಸದವಳಿದು........ಅತ್ರಿ, ಅವನ ನೇತ್ರದಿಂದ ಚಂದ್ರನುದ್ಭವಿಸಿದಂ । ಆ ಚಂದ್ರನಿಂ ಬುಧನಾದಂ । ಆ ಬುಧನಿಂ ಪುರೂರವ ಪುಟ್ಟಿದಂ ।

ಅಂತ್ಯ : ಬಲಸಹಿತಾ ಬಂದು ಸನ್ನಾಹವನ್ನು ಮಾಡಿ ಕಳುಹಿಸಿದಲ್ಲಿ ಬಲಸಹಿತಾ ಬಂದು । ಪಿರಿಪಟ್ಟಣವಂದು ಹರಿದಾರಿತಂ....ಯಲ್ಲಿ ಯಿಧಾನೆ ಯಂಬ ಸುದ್ಧಿಯನ್ನು ಕೇಳಿ ಸಮಸ್ತ ಬಲಸಹಾ ಪಾಲೂರಿಗೆ ಹೋದಲ್ಲಿ । ಈ ಸುದ್ದಿಯನ್ನು ನಂಜುಂಡ ಅರಸು ಕೇಳಿ ರಾತ್ರೆಯನ್ನ...........

ವಿಷಯ : ಮೈಸೂರು ದೊರೆಗಳ ವಂಶಾವಳಿ.

ವಿಶೇಷ : ಮಧ್ಯೆ ಮಧ್ಯೆ ಗ್ರಂಥಪಾತವಿದೆ. ಹೊಲಿಗೆ ಬಿಚ್ಚಿದೆ. ೧೧ನೆಯ ಪತ್ರ ಹರಿದಿದೆ. ಗ್ರಂಥ ಅಸಮಗ್ರ.

1353

ಕೆ.ಬಿ. ೪೪೯ **ಮೋಕ್ಷಚಿಂತಾರತ್ನ** ಭಾಮಿನೀಷಟ್ಪದಿ

೮.೩"×೬.೬" ಮಡಿವಳ ದೇಶಿಕೇಂದ್ರ ?

೧–೯೧ ಪತ್ರ ೨೧ ಪಂಕ್ತಿ ೧೫ ಅಕ್ಷರ

ಆದಿ : ಶ್ರೀ ಶುಭಮಸ್ತು ॥ ಶ್ರೀ ಮಡಿವಾಳ ಪ್ರಭುವೆ ನಮಃ ॥
ಮೋಕ್ಷಚಿನ್ತಾರತ್ನ ಕಾವ್ಯಪ್ರಾರಂಭಃ ಶ್ರೀ ॥

ಭಾಮಿನೀಷಟ್ಪದಿ–ಪಲ್ಲ ॥ ಶ್ರೀಗುರುದ್ವಯ ಪಾದಪದ್ಮದಿ
ಯೋಗ ಬ್ರುಂಗ ಸುಪುತ್ರರಘೆವಂ
ನೀಗಿ ಭವಸಾಗರವ ನಿಜಪದಯ್ಯೆದು ಸುಖಿಸುವರು ॥
ಪದ ॥ ಶ್ರೀ ಷಟಸ್ಥಾಬ್ರಹ್ಮ ಮಡಿವಳ
ದೇಶಿಕೋತ್ತುಮ ಯಿಾಶಣಾತ್ರಯ
ನಾಶಮಾಡಿದ ಯೋಗಿ ಹೃನ್ಮಂದಿರ ಸುಚಿತ್ಸುಖವಾ
ಸೂಸಗುಡದಭ್ಯಾಸದಲಿ ಮತಿ
ಮಾಸದವಿರಳಳನಿರದುದರಿಂ
ಯಿಾಶ ಭೂಸುರ ಜ್ಞಾನದಭಿಲಾಸಗಲದಲೆ ವಿರಿಸು ॥ ೧ ॥

ಅಂತ್ಯ : ಶ್ರೀ ಗುರುವರೇಣ್ಯ ಮಡಿವಳದೇಶಿ
ಕೇಂದ್ರ ಭೋಗಿ ಭೂಷಣರಾಗ ವಿರಹಿತ
ಯೋಗಿ ಹೃತ್ಸರೋಜವಾಸ ಮೋಕ್ಷಚಿಂತಾ
ರತ್ನ ಕಾವ್ಯಮಂ ಬಿತ್ತರಿ ವರವ ಮತಿಯಿ
ತ್ತು ಕೌಮುದಿಗೆ ಮೋಹಿಸುವ ಚಕೋರಾ
ತ್ಮ ಜ್ಞಾನಿಗಳಿಗೀತ ವಪ್ಪಂದದಿಂ ಸಲಹುಗೆಂ ॥
ಪದ ೫೭೬ಕ್ಕಂ ಸಂಧಿ ೯ಕ್ಕಂ ಮಂಗಳಮಹಾ ಶ್ರೀ.

ವಿಷಯ : ಮೋಕ್ಷ ವಿಚಾರ.

ವಿಶೇಷ: ಸುಂದರಾಕ್ಷರ. ೭೧ನೆಯ ಪತ್ರದಿಂದ ಮುಂದಕ್ಕೆ ಬೇರೆ ವಿಧವಾದ ಬರವಣಿಗೆ ಇದೆ.

1354

ಕೆ. ೩೬೭	ಮೋಕ್ಷದರ್ಶನ ಸಂಗ್ರಹ	ವಚನ
೮.೪"×೧.೮"	?	?
೧–೧೧೮ ಪತ್ರ	೭ ಪಂಕ್ತಿ	೩೬ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಯನ್ನಮಃ ॥ ನಿರ್ವಿಗ್ನಮಸ್ತು । ಸುಭಮಸ್ತು ॥ ಮೋಖ್ಷದರುಶನ ಸಂಗ್ರಹ ॥ ಸ್ವಸ್ತಿ ಸಮಸ್ತ ಭುವನ ಪರಾಪರ ನಿಷ್ಕಲ ನಿರಂಜನ ಪರಂಜ್ಯೋತಿರಾಕಾರಂ ರಾಮೇಶ್ವರಂ । ಸ್ವಾನುಭವ ಗುರುರೂಪ ದಿಂದೆನ್ನ ಮನ್ಸ್ನೋಮದ್ಯದೊಳ್ಳಿಂದು ಪ್ರೇರಿಸಲಾಸ್ವಾನುಭುತಿಯಿಂ x x x x ಹಿಂಗೆ ಬರೆಯುಲ್ಪಟ್ಟ ಮೋರ್ಕ್ಷದರ್ಶನ ಮಹಾ ಸಂಗ್ರಹದೊಳ್ಳೇಕಾದಶ ನಿರೂಪ ಣಂಗಳಿಂ ಪ್ರತಿಪಾದಿಸುವ ಅರ್ತಂಗಳ ವುದ್ದೇಶ ಕ್ರಮವೆಂತೆಂದೊಡೆ

ಅಂತ್ಯ : ಅಜಂಗೆ ದ್ವಿಜನೆ ಗುರು ದ್ವಿಜಂಗೆ ಹರಿಯೆ ಗುರುವು| ಹರಿ ಹರಿಣಾವತಾರದಲ್ಲಿ ಯೆರಳೆಯ ತಿಂಬುದದಾವಾಚಾರ | ಹರಿಮತ್ಸ್ಯವತಾರ | ಹರಿ ವರಾಹವತಾರಾದಲ್ಲಿ | ದಲ್ಲಿ | ಮೀನ ತಿಂಬುದದಾವಾಚಾರ | ಹರಿ ಕುರ್ಮ್ಮಾವತಾರದಲ್ಲಿ | ಆಮೆಯ ತಿಂಬುದದಾವಾಚಾರ|ಹರಿ ವರಹವತಾರದಲ್ಲಿ | ಹಂದಿಯ ತಿಂಬುದಾದಾಚಾರ | ಯಿಂತಿ ಹೊಂನಗೋವ ಕೊಂದು ತಿಂಬ ಕುಂನಿಗಳ ಮುಖವ ತೋಱದಿರಿ ವುರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ॥ ೫ ॥ ಶ್ರೀಗುರು.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಅಸಮಗ್ರ. ಶಕಟರೇಫವಿದೆ. ೨೪ನೆಯ ಪತ್ರ ಮುರಿದಿದೆ. ೧೦೪ರಿಂದ ಮುಂದಿನ ಪತ್ರಗಳಿಗೆ ಕ್ರಮಾಂಕವಿಲ್ಲ.

1355

ಕೆ.ಎ. ೩	**ಮೋಡೀನಾಟಕ**	ಯಕ್ಷಗಾನ
೧೩.೨"×೪.೩"	ಲಿಂಗರಾಜ	೧೮೫೦
೧–೨೧ ಪುಟ	೨೫ ಪಂಕ್ತಿ	೨೬ ಅಕ್ಷರ

ಆದಿ : ಶ್ರೀ ಶುಭಮಸ್ತು ॥ ಮೋಡಿನಾಟಕವು ॥
ನಾಂದಿ ॥ ಶಾರ್ದೂಲವಿಕ್ರೀಡಿತ ॥
ಶ್ರೀ ಕಾಳೀಹಸಿತದ್ಯುತಿ ದ್ವಿಗುಣಿತಂ ಪುಷ್ಪಾಂಜಲಿಕ್ಷೇಪನಾ
ಲೋಕೋತ್ಸಾಹಕರಂ ಕರಾಭಿನಯಮಂ ನಂದೀಶ ಹಸ್ತಾಹತಾ
ಸ್ತೋೕಕ ಶ್ರೀಮುರಜಸ್ವನಂ ಮೆರೆಯೆ ಸಂಧ್ಯಾ ತಾಂಡವಂಬೆತ್ತ ಸು
ಶ್ಲೋೕಕಂ ಮಾಳ್ಕೆಮಗೀಪ್ಸಿತಾರ್ಥತತಿಯಂ ಶ್ರೀ ಭದ್ರಕಾಳೀಪ್ರಿಯಂ ॥ ೧ ॥
ಕವಿಪ್ರಶಂಸಾ ॥ ಕಂದಾ ॥ ನುತ ಭರತಶಾಸ್ತ್ರ ವಿಜ್ಞನ
ತತಿ ಮುದವಾಂತ ಮನು ಸಾಹತೀ ಸಂಗೀತ
ಸುತ ವಿದ್ಯಾವಿಟಲಿಂಗ
ಕ್ಷಿತಿಪತಿ ಲಾಲಿಪುದು ನಮ್ಮ ಬಿನ್ನಪವೆನುತಂ ॥

ಅಂತ್ಯ : ಕಂದ ಪದ್ಯ ॥
ಮಣಿಗುಹ ಮುಖರಂಧ್ರಾಂಬುಧಿ
ಗುಣಿತಾಬ್ದಂ ಕಳಿಯೆ ಕಲಿಯೊಳುಸುರ್ದಂ ರಸಿಕಾ
ಗ್ರಣಿಗಳ್ ಮಝು ಭಾಪೆಂದೆನ
ಲಣಿಯರದಿಂ ಮೋಡಿನಾಟಕವ ಲಿಂಗನೃಪಂ ॥ ೩ ॥

x x x x

ಸಾಮಿಪಾದಮು ನಮ್ಮಿನವಾರಿಕೀ
ಕಾಮಿತಾರ್ಥಮು ಪುತ್ರಸಂತಾನ ಮುಲಿಚ್ಚು
ಶ್ರೀ ಮನೋಹರ ಕೃಷ್ಣಾ ದೇವುಡುಕು
ಮಂಗಳಂ ಗೋಪಾಲುಡುಕು ಜಯ ಮಂಗಳಂ || ೩ ||
ನಿತ್ಯೋತ್ಸವೋ ಭವತು ತೇ....ಹೃದಯಸ್ಥೋ ಭಗವಾರ್
ಮಂಗಳಾಯತನೋ ಹರಿಃ || ಶ್ರೀ
ಮೋಡಿ ನಾಟಕವು ಸಂಪೂರ್ನವು.

ವಿಷಯ : ಮನ್ಮಥನ ಮೋಡಿಯ ಕಥೆ.

ವಿಶೇಷ : ಬರಹ ಮೋಡಿ. ೨೨ ರಿಂದ ಮುಂದಿನ ಮೂರು ಪುಟಗಳಲ್ಲಿ ಕಥಾ ಸಂಗ್ರಹ ಮತ್ತು ಶ್ರೀಕೃಷ್ಣ ಚರಿತ್ರೆಯ ಕಥಾಸ್ವಾರಸ್ಯವೂ ಇವೆ.

1356

ಕೆ.ಬಿ. ೩೮೬	**ಮೋಡೀನಾಟಕ**	ಯಕ್ಷಗಾನ
೭.೬" × ೫.೯"	ಲಿಂಗರಾಜ	೧೮೫೦
೪–೪೩ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ವೀರೇಶಪ್ರಸಿದ್ಧ || ಮೋಡಿನಾಟಕ || ನಾಂದೀ || ಶಾರ್ದೂಲವಿಕ್ರೀಡಿತ ವೃತ್ತಾ ||
ಶ್ರೀಕಾಳೀಹಸಿತದ್ಯುತಿ ದ್ವಿಗುಣಿತಂ ಪುಷ್ಪಾಂಜಲಿಕ್ಷೇಪಮಾ
ಲೋಕೋತ್ಸಾಹಕರಂ ಕರಾಭಿನಯಮಾ ನಂದೀಶ ಹಸ್ತಾಹತಾ
ಸ್ತ್ರೋಕ ಶ್ರೀಮುರಜಸ್ವನಂ ಮೆರೆಯೆ ಸಂಧ್ಯಾತಾಂಡವಂಬೆತ್ತ ಸು
ಶ್ಲೋಕಂ ಮಾಳ್ಕೆಮದೀಪ್ಸಿತಾರ್ಥತತಿಯಂ ಶ್ರೀ ಭದ್ರಕಾಳೀಪ್ರಿಯಂ || ೧ ||
ಚಂಪಕಮಾಲಾ||ಆದರಿಸುದಾರ ಭಾರತಪಯೋಧಿಯ ಸೀಕರದಂತೆ ದೇಸಿಯೊಂ
ದಿದ ಪೊಸಮೋಡಿಯಂಗಮುಕಮಾಗಿಯೆ ಪೇಳ್ವುದು ಗೀತಸಾಹಿತೀ
ಸುದತಿಯರಾಳನಪ್ಪ ದರಿಗೆಂದೆರೆಯಲ್ರುಚಿಪೇಂ ಸುರಾಂಗನಾ
ಮುದಕರ ಮೋಡಿನಾಟಕಮ ಬಲ್ಲರುಫೇಯನಲೀ ಪ್ರಬಂಧಮಂ || ೧೫ ||

ಅಂತ್ಯ : (ಪತ್ರ ೩೩) ಕಂದ || ಮಣಿಗುಹಮುಖರಂದ್ರಾಬುಧಿ
ಗುಣಿತಾಬ್ದಂ ಕಳಿಯೆ ಕಲಿಯೊಳುಸುರ್ದಂ ರಸಿಕಾ
ಗ್ರಣಿಗಳ್ ಮುಝು ಭಾಪೆಂದೆನ
ಲಣಿಯುರದಿಂ ಮೋಡಿನಾಟಕವಂ ಲಿಂಗನೃಪಂ || ೧೩೧ ||
ಪ್ಲವಸಂವತ್ಸರದ ಜೇಷ್ಟ ಬ ೩ ಬುಧವಾರ ಸರ್ ೧೯೦೧ನೆ ಜುರ್ ತಾರೀಕು ೫ಲ್ಲು
ಮೋಡಿನಾಟಕ ಸಂಪೂರ್ಣ ಮಂಗಳಮಹಾ ಶ್ರೀ

X X X X

ಸಕಲಸಾಂಮ್ರಾಜ್ಯಲಕ್ಷ್ಮೀನಿವಾಸ| ಬಾರ್ೖೆಯ ಯಿರುವಂತಾ ಸ್ಥಳನಾಮಾಂಕಿತ ಭಳಿರೇ ರಾಕ್ಷಸ ಕುಲೋದ್ಧಾರಕಾ | ಭಕಾರಭೀತಿ ಬಡಿಸುತ್ತಲಿರುವಂತಾ ಸ್ಥಳ ನಾಮಾಂಕಿತ ||

ವಿಷಯ : ಮನ್ಮಥನ ಮೋಡಿಯ ಕಥೆ.

ವಿಶೇಷ : ೩೩ನೆಯ ಪತ್ರದಲ್ಲಿ ನಾಟಕ ಮುಗಿದಿದೆ. ಅಲ್ಲಿಂದ ಮುಂದೆ ೪೩ನೆಯ ಪತ್ರದವರೆಗೆ ಸಭಾವಂದನೆಯೆಂಬ ಭಾಗವಿದೆ. ಅದರ ಅಂತ್ಯವನ್ನು ಮೇಲೆ ಕೊಟ್ಟಿದೆ. ಬರಹ ಸುಂದರವಾಗಿದೆ. ಆದಿಯ ಮೂರು ಪತ್ರಗಳಲ್ಲಿ ಕೆಲವು ಹಾಡುಗಳಿದ್ದು ಅವನ್ನು ಮಸಿಯಿಂದ ಹೊಡೆದಿದೆ. ೪೩ ಮತ್ತು ೪೪ ಪದ್ಯಗಳಲ್ಲಿ ಜೋಗುಳದ ಪದವಿದೆ. ತೆಳುವು ಕಾಗದ. ಎರಡು ವಿಧವಾದ ಲಿಪಿಯಿರುವುದಲ್ಲದೆ ಮಸಿಯೂ ಬೇರೆ ಬೇರೆಯಾಗಿದೆ.

1357

ಕೆ. ೧೩	**ಮೋಹನತರಂಗಿಣಿ**	ಸಾಂಗತ್ಯ
೯.೯"×೧.೮"	ಕನಕದಾಸ	ಸು. ೧೫೫೦
೧–೧೭೫ ಪತ್ರ	೯ ಪಂಕ್ತಿ	೫೦ ಅಕ್ಷರ

ಆದಿ : ಶ್ರೀರಾಮಚಂದ್ರಾಯ ನಮಃ | ಕೃಷ್ಣಚರಿತ್ರೆ ಬರಉದಕ್ಕೆ ನಿರ್ವಿಘ್ನಮಸ್ತು || ಶುಭಮಸ್ತು || ಪೀಠಿಕೆ ||

ಶ್ರೀಮದ್ಗುರುರಾಯ ದುರಿತವಿಜೆಯ ದುಃ
ಷ್ಕಾಮಪಚ್ಛೇದಹಲ್ಲಾಹಾ
ತಾಮಸಗುಣನಾಶ್ಯ ಸಾತ್ವಿಕೋಲ್ಲಾಸ ಶ್ರೀ
ರಾಮಾನುಜ ಮುನಿ ಶರಣಾ || ೧ ||

ಅಂತ್ಯ : ಯೋಗಿ ಹೃತ್ಕಮಲಾಸನದೈತ್ಯ ಕಾಮಾರಿ
ರಾಗಿಪ ಭೋಗ ದೇವೇಂದ್ರಾ
ಕಾಗಿನೆಲೆಯ ರಂಗ ನರಸಿಂಹ ಕೇಶವ
ಸಾಗಿಸು ಜನ ಮನೋರಥವಾ || ೭೬ ||
ವರ ಮೋಹನ ತರಂಗಿಣಿಯೆಂಬ ಕಾವ್ಯವ
ಬರದೋದಿ ಕೇಳಿದ ಜನರಾ
ತರಣಿ ಚಂದ್ರಮರುಳ್ಳನಕ ಸತ್ಕ ್ರಪೆಯಿತ್ತು
ಹೊರವ ಲಕ್ಷ್ಮಿಯ ಕಾಂತ ಬಿಡದೇ || ೭೭ ||

ಅಂತು ಸಂಧಿ ೪೨ಕ್ಕಂ ಪದನೂ ೨೮೨೩ಕ್ಕಂ ಮಂಗಳಮಹಾ ಶ್ರೀ|| ವಿಸ್ವಾವಸು ಸಂವತ್ಸರದ ಕಾರ್ತೀಕ ಶುದ್ಧ ೫ ಯು ಸೋಮವಾರದಲ್ಲಿ ಗುರೂರು

ತಿಬ್ಬೈಯ್ಯನವರಿಗೆ ಕೃಷ್ಣಚರಿತ್ರೆ ಪುಸ್ತಕ ಬರದು. ಸಂಪೂರ್ನ ಮಂಗಳಮಹಾ ಶ್ರೀ.

ವಿಷಯ : ಶ್ರೀ ಕೃಷ್ಣಚರಿತ್ರೆ.

ವಿಶೇಷ : ಸುಂದರ ಬರಹ. ಈ ಗ್ರಂಥಕ್ಕೆ ಶ್ರೀ ಕೃಷ್ಣಚರಿತ್ರೆ ಎಂಬ ಹೆಸರೂ ಇದೆ. ೧೩೨ನೆಯ ಪತ್ರ ಅರ್ಧಮಾತ್ರ ಇದೆ. ೧, ೨, ೩೫, ೫೦, ೬೬, ೧೩೪ ಈ ಕ್ರಮಾಂಕದ ಎರಡೆರಡು ಪತ್ರಗಳಿವೆ. ೫೨ನೆಯ ಕ್ರಮಾಂಕದ ಎರಡು ಪತ್ರಗಳಿದ್ದು ಒಂದೊಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆಯಿದೆ.

1358

ಕೆ. ೯೪	**ಮೋಹನತರಂಗಿಣಿ**	ಸಾಂಗತ್ಯ
೧೪.೫" × ೧.೬"	ಕನಕದಾಸ	ಸು. ೧೫೫೦
೧–೧೬೭ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಮತೇ ರಾಮಾನುಜಾಯ ನಮಃ ॥ ಕೃಷ್ಣಚರಿತ್ರೆ ಬರೆಯುದಕೆ ನಿರ್ವಿಘ್ನ ಮಸ್ತು ॥

ಶ್ರೀಮದ್ಗುರುರಾಯ ದುರಿತಜೆಯ ದುಃ
ಖ............ .. ಹಲಾದಾ
ತಾಮಸಗುಣ ನಾಸಸಾತ್ವಿಕುಲಾಸ ಶ್ರೀ
ರಾಮಾನುಜ ಮುನಿಶರಣೂ ॥ ೧ ॥

ಅಂತ್ಯ : ಯೋಗಿ ಹೃತ್ಕಮಲಾಸನ ದೈತ್ಯಕಾರಿ
ರಾಗಿಪ ಭೋಗ ದೇವೇಂದ್ರಾ
ಕಾಗಿನಿಲೆಯ ವರ ಸಿಂಹಪ್ವಾದಿ ಕೇಶವ
ನಾಗಿ ಸುಜನ ಮನೋರಥವಾ ॥ ೭೬॥

x x x x

ವರ ಮೋಹನತರಂಗಿಣಿಯೆಂಬ ಕಾವ್ಯವ
ಬರೆದೋದಿ ಕೇಳಿದ ಜನರಾ
ತರಣಿಚಂದ್ರಮರುಳ್ಳನಕ ಸತ್ಸ್ನುಪೆಯಿತ್ತು
ಪೊರೆವ ಲಕ್ಷ್ಮಿಯಕಾಂತ್ತ ಬಿಡದೇ ॥ ೭೮ ॥

ಆಂತ್ತ್ಯ ಸಂಧಿ ೪೨ಕ್ಕಂ ಪದನೂ ೨೭ಗ೩ಕ್ಕಂ ಜಯ ಮಂಗಳ ಮಹಾಶ್ರೀ. ಶ್ರೀಕೃಷ್ಣಚರಿತ್ರೆ ಸಮಾಪ್ತಾ ॥

ವಿಷಯ : ಶ್ರೀಕೃಷ್ಣ ಚರಿತ್ರೆ.

ವಿಶೇಷ : ಶಿಥಿಲಪ್ರತಿ, ಈ ಗ್ರಂಥಕ್ಕೆ 'ಶ್ರೀಕೃಷ್ಣಚರಿತ್ರೆ' ಎಂಬ ಹೆಸರೂ ಇದೆ. ಹುಳು ಹೊಡೆದು ಪತ್ರಗಳಲ್ಲಿ ರಂಧ್ರಗಳು ಬಿದ್ದಿವೆ. ೩೮, ೫೯ನೆಯಪತ್ರಗಳು ಮುರಿದಿವೆ.

೩೯, ೧೪೫ನೆಯ ಕ್ರಮಾಂಕದ ಎರಡೆರಡು ಪತ್ರಗಳಿವೆ. ಅಂತ್ಯದಲ್ಲಿ ೨೨, ೫೭, ೧೦೮ನೆಯ ಕ್ರಮಾಂಕದ ಎರಡು ಪ್ರತ್ಯೇಕ ಪತ್ರಗಳಿವೆ.

1359

ಕೆ. ೯೫ **ಮೋಹನತರಂಗಿಣಿ** ಸಾಂಗತ್ಯ

೧೯.೮" × ೨.೨" ಕನಕದಾಸ ಸು. ೧೫೫೦

೧–೫೦ ಪತ್ರ ೧೩ ಪಂಕ್ತಿ ೧೦೪ ಅಕ್ಷರ

ಆದಿ : ಶುಭಮಸ್ತು ॥ ಶ್ರೀ ಕೃಷ್ಣಚರಿತ್ರೆ........

ಶ್ರೀ ಗಿರಿಜೇಶ್ವರನಾತ್ಮಾಭಿರಾಮಾ ಸ
ದ್ವಾಗೀಶ ಪಿತ ಪರಂಧಾಮಾ
ಕಾಗಿನೆಲೆಯ ರಂಗ ಸುರಸಾರ್ವಭೌಮ ಸೂ
ತ್ಯಾಗಿ ಪಾಲಿಸು ಪೂರ್ನಭಾವಮಾ ॥ ೧ ॥
ಶ್ರೀಮದ್ಗುರುರಾಯ ದುರಿತವಿಜೇಯ ದು
ಷ್ಕ್ರಾಮ ವಿಭೇದಹಲ್ಲಾದ
ತಾಮುಸಗುಣನಾತನಾತ್ಮಿಕೋಲ್ಲಾಸ ಶ್ರೀ
ರಾಮಾನುಜ ಮೂನಿ ಶರಣೂ ॥ ೨ ॥

ಅಂತ್ಯ : ನೀಲಾಂಬರಕಂತು ಮೊದಲಾದ ಯಾದವ

ಜಾಲ ನಿರ್ಜರರು ಸಂದಣಿಸಿ
ಕೋಲಾಹಲದೊಳು ವಾಧ್ಯಗಳ್ಪೊಗಳವು
ಮೂಲೋಕ ಕಿವಿ ಸದ್ದುಗೆಡಲೂ ॥ ೧೯ ॥

ವಿಷಯ : ಶ್ರೀಕೃಷ್ಣ ಚರಿತ್ರೆ.

ವಿಶೇಷ : ೩೨ನೆಯ ಸಂಧಿಯಲ್ಲಿ ೧೯ನೆಯ ಪದ್ಯದವರೆಗೆ ಮಾತ್ರ ಗ್ರಂಥವಿದೆ. ೪ ಮತ್ತು ೨೪ನೆಯ ಗರಿಗಳು ಮುರಿದಿವೆ. ಈ ಗ್ರಂಥಕ್ಕೆ ಶ್ರೀ ಕೃಷ್ಣಚರಿತ್ರೆ ಯೆಂಬ ಮತ್ತೊಂದು ಹೆಸರೂ ಇದೆ. ಗರಿಗಳ ಅಂಚು ಮುರಿದಿದೆ. ೨೬ನೆಯ ಕ್ರಮಾಂಕದ ಎರಡು ಗರಿಗಳಿವೆ.

1360

ಕೆ. ೧೮೧/೨ **ಮೋಹನತರಂಗಿಣಿ** ಸಾಂಗತ್ಯ

೧೩.೮" × ೧.೮" ಕನಕದಾಸ ಸು. ೧೫೫೦

೫೨–೧೫೨ ಪತ್ರ ೯ ಪಂಕ್ತಿ ೭೨ ಅಕ್ಷರ

ಆದಿ : ಪರಮ ಭಾಗವತರಾದ ಕನಕದಾಸರಿಂದ ನಿರ್ಮಿತವಾದ ಶ್ರೀಕೃಷ್ಣ ಚರಿತೆ ಪುಸ್ತಕಕ್ಕೆ ಮಂಗಳಮಹಾ ಶ್ರೀ-ರವುದ್ರಿನಾಮ ಸಂವತ್ಸರದ ಶ್ರಾವಣ ಶುಧ ೧೦ಯು ಗುರುವಾರ ಶುಭದಿನ ಶುಭನಕ್ಷತ್ರ ಶುಭಯೋಗ ಶುಭಕರಣದಲ್ಲಿ ಗಣಾಧ್ಯಕ್ಷರಾದ ಶ್ರೀ ನಿರ್ವಿಘ್ನದಾಯಕರಾದ ಕೃಪಾಕ್ಷದಿಂದ ಈ ಕೃತಿ ಬರೆಯುವದಕ್ಕೆ ಪ್ರಾರಂಭ—

ಶ್ರೀಮದ್ಗುರುರಾಯ ದುರಿತವಿಜಯ ದು
ಷ್ಕಾಮ ವಿಛ್ಛೇದಹಲ್ಲಾದಾ
ತಾಮಸಗುಣನಾಶ ಸಾತ್ವಿಕೋಲ್ಲಾಸ ಶ್ರೀ
ರಾಮಾನುಜ ಮುನಿಶರಣೂ ॥ ೧ ॥
ಅರ್ಕ್ಕಗೋಳಾಟವೆ ತಮ ಗರುಡನೆ ಕೂಡೆ
ಕರ್ಕ್ಕಾಟಕ ಮೇಳವಹುದೇ
ತರ್ಕ್ಕಾಕೆ ರಾಮಾನುಜರೊಳು ವಾದಿ ಸಂ
ಪರ್ಕ್ಕ ನಿಲ್ಲದೆ ನಿಲ್ಲಲರಿದೂ ॥ ೨ ॥

ಅಂತ್ಯ : ಯೋಗಿಹೃತ್ಕಮಲಾಸನ ದೈತ್ಯ ಕಾಮಾರಿ
ರಾಗಿಪ ಭೋಗದೇವೇಂದ್ರಾ
ಕಾಗಿನೆಲೆಯ ನರಸಿಂಹ್ಯಾದಿಕೇಶವ
ನಾಗಿ ಸುಜನಮನೋರಥವಾ ॥ ೭೭ ॥
ವರ ಮೋಹನತರಂಗಿಣಿಯೆಂಬ ಕಾವ್ಯವ
ಬರದೋದಿ ಕೇಳಿದ ಜನರಾ
ತರಣಿ ಚಂದ್ರಮರುಳ್ಳನಕ ಸತ್ಯಪೆಯಿತ್ತೂ
ಪೊರೆವ ಲಕ್ಷ್ಮಿಪ್ರಿಯ ಕಾಂತ ಬಿಡದೆ ॥ ೭೮ ॥
ಅಂತ್ತು ಅಧ್ಯಾಯ ೪೨ಕ್ಕಾಂ ಪದನು ೨೭೨೨ಕ್ಕಂ ಜಯಮಂಗಳ ಮಹಾ ಶ್ರೀ॥

ವಿಷಯ : ಶ್ರೀ ಶ್ರೀಕೃಷ್ಣನ ಚರಿತ್ರೆ.

ವಿಶೇಷ : ೭೫ನೆಯ ಪತ್ರ ಮುರಿದುಹೋಗಿದೆ. ಇದರೊಂದಿಗೆ ಭಗವದ್ಗೀತೆ ಕನ್ನಡ ಪದ್ಯಗ್ರಂಥವೂ ಇದೆ.

1361

ಕೆ. ೨೪೮	**ಮೋಹನತರಂಗಿಣಿ**	ಸಾಂಗತ್ಯ
೧೦.೩" × ೧.೫"	ಕನಕದಾಸ	ಸು. ೧೫೫೦
೩–೧೪೭ ಪತ್ರ	೮ ಪಂಕ್ತಿ	೬೫ ಅಕ್ಷರ

ಆದಿ : ನಾಡೊಳಗುಳ್ಳ ಜಾಣರು ಜಾಣೆಯರೊಡ
ನಾಡುವ ಸವಿಮಾತುಗಳಾ
ಪಾ . . ಗಬ್ಬಿನಿ ಪರುಠವಿಸಿದ ಬಗೆಯ ನೀ
ನೋಡು ಮಾನಿನಿ ಮುಂನಾದೆ ಮುಂದೆ || ೩೬ ||

ಅಂತ್ಯ : ಪಸುಗರ್ೂಳು ಪರಿವಾಣಂಗಳ ತುಂಬಿ ರಂ
ಜಿಸುವ ರತ್ನಾರತಿ ನಿಚೆಯಾ
ದ ಸಿರಿ ಪಟ್ಟ್ಯಾವಳಿ ಚಿತ್ರವಸ್ತ್ರವ ನಿವಾ
ಳಿಸಿದರಚ್ಚುತನಂಗ್ರಿಯು.... || ೨೭ ||
ಪುಡಿಗರ್ಪೂರ ಕಸ್ತುರಿ ಕುಂಕುಮದೂಳಿ
ಪಿಡಿಮುತ್ತು ಮಾಣಿಕ್ಯ ಸಹಿತಾ
ಹಿಡಿಹೊಂನ ಸೂರೆಯು ಬಿಟ್ಟುದಂಗಡಿಗಾರ
ರೊಡನೈದಿ ಬರುತ ಉತ್ಸವದಿ || ೨೮ ||

ವಿಷಯ : ಶ್ರೀಕೃಷ್ಣ ಚರಿತ್ರೆ.

ವಿಶೇಷ : ಆದಿ ಅಂತ್ಯದ ಗರಿಗಳು ತ್ರುಟಿತ. ೧, ೨, ೪, ೫, ೨೮, ೪೬ ಮತ್ತು ೮೨ನೆಯ ಗರಿಗಳಿಲ್ಲ. ೫೩, ೫೯, ೬೩, ೧೧೬, ೧೨೧ ಮತ್ತು ೧೨೪ನೆಯ ಗರಿಗಳು ಮುರಿದಿವೆ. ಅಕ್ಷರವು ಸ್ಫುಟವಾಗಿದೆ. ಈ ಗ್ರಂಥಕ್ಕೆ ಶ್ರೀಕೃಷ್ಣಚರಿತ್ರೆ ಎಂಬ ಹೆಸರೂ ಇದೆ.

1362

ಕೆ. ೩೪೨	**ಮೋಹನತರಂಗಿಣಿ**	ಸಾಂಗತ್ಯ
೧೧.೫″ × ೧.೩″	ಕನಕದಾಸ	ಸು. ೧೫೫೦
೧–೨೨೨ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಗಣಾಧಿಪತಯೆ ನಮಃ || ಶ್ರೀ ಕ್ರಿಷ್ಣಸ್ವಾಮಿಯವರ ಚರಣಾರವಿಂದವೆ ಗತಿ || ಕ್ರಿಷ್ಣಚರಿತೆ ಬರೆಯ್ಯುವದಕ್ಕೆ ನಿರ್ವಿಗ್ನಮಸ್ತು ||
ಶ್ರೀಮದ್ಗುರುರಾಯ ದುರಿತವಿಜಯ ದು
ಷ್ಕಾಮ ವಿಛ್ಛೇದಹಲ್ಲಾದಾ
ತಾಮಸಗುಣನಾಸ ಸಾತ್ವಿಕೋಲ್ಲಾಸ ಶ್ರೀ
ರಾಮಾನುಜ ಮುನಿಶರಣೂ || ೧ ||

ಅಂತ್ಯ : ಯೋಗಿ ಹೃತ್ಕಮಲಾಸ ದೈತ್ಯಾ ಕೌಮಾರಿ
ರಾಗಿಪ ಭೋಗದೇವೇಂದ್ರಾ
ಕಾಗಿನೆಲೆಯ ನರಸಿಂಹಪ್ಪಾದಿ ಕೇಶವ
ಸಾಗಿಸು ಜನಮನೋರಥವಾ || ೭೭ ||

ವರ ಮೋಹನತರಂಗಿಣಿಯೆಂಬ ಕಾವ್ಯಾವ
ಬರದೋದಿ ಕೇಳಿದ ಜನರಾ
ತರಣಿ ಚೆಂದ್ರಮುರುಳ್ಳನಕ ಸತ್ಕ್ರುಪೆವೆತ್ತು
ಹೊರವ ಲಕ್ಷ್ಮೀಯ ಕಾಂತ್ತ ಬಿಡದೆ || ೭೮ ||
ಅಂತ್ತೂ ಸಂಧಿ ೪೨ಕಾಂ ಪದನೂ ಪದನೂ ೨೭೯ಕಂ ಪದನೂ || ಮಂಗಳ ಮಹಾ ಶ್ರೀ
....ಯಾದಿ ಕೇಶವ ಸ್ವಾಮಿಯವರ ದಿವ್ಯ ಶ್ರೀಪಾದಪಂಕೇರುಹ ಭ್ರುಂಗ ಕನಕದಾಸೋತ್ತಮ ವಿರಚಿತಮಪ್ಪ ಕ್ರುಷ್ಣಚೆರಿತೆಯೋಳ್ ವರಮೋಹನ ತರಂಗಿಣಿಯೆಂಬ...........ನ ತರಂಗಿಣಿಯೆಂಬ ಕಾವ್ಯಉ|| ಪೂರ್‍ತ್ರಿಯಾ ದದ್ದು | ಪರಾಭವ ಸಂವತ್ಸರದ ಮಾರ್ಗಶಿರ ಬ ೬ ಚೆಂದ್ರವಾರಕ್ಕೆ ಬರದು ತೀರಿತೂ || ಯಿಾ ಕಾವ್ಯವಂನ್ನು ಬರದು ವೋದಿದಂಥಾ ಪುಂಣ್ಯಾತ್ಮಕರು ತಪ್ಪು ತಾಗು ಬರದಿದ್ದಾಗ್ಯು ಬಲ್ಲಂಥಾ ಹಿರಿಯರು ತಿದ್ದವಿಟ್ಟುಕೊಳ್ಳತಕ್ಕದ್ದೂ ಯಿಾ ದಿವಸವು ಸಂಪಿಗೆ ಸ್ರಷ್ಟಿ ಸುಬ್ರಮಣ್ಯಸ್ವಾಮಿಾ ರಕ್ಷಿಸಲೀ |

ವಿಷಯ : ಶ್ರೀಕೃಷ್ಣ ಚರಿತ್ರೆ.

ವಿಶೇಷ : ಈ ಗ್ರಂಥಕ್ಕೆ 'ಶ್ರೀಕೃಷ್ಣ ಚರಿತ್ರೆ' ಎಂಬ ಹೆಸರೂ ಇದೆ. ಕೆಲವು ಗರಿಗಳ ಅಂಚು ಮುರಿದಿದೆ. ೧೫೦, ೧೬೩, ೧೮೪, ೨೦೫, ೨೦೮ನೆಯ ಗರಿಗಳು ಮುರಿದಿವೆ. ೧೯೪ ಮತ್ತು ೨೦೩ನೆಯ ಗರಿಗಳಿಲ್ಲ. ೪೪, ೧೫೨ನೆಯ ಗರಿಗಳಲ್ಲಿ ಒಂದು ಪಾರ್ಶ್ವದಲ್ಲಿ ಮಾತ್ರ ಬರವಣಿಗೆ ಇದೆ. ೭೬ ಕ್ರಮಾಂಕದ ಎರಡು ಗರಿಗಳಿವೆ. ೧೫೩ನೆಯ ಗರಿಯಲ್ಲಿ ಬರವಣಿಗೆ ಇಲ್ಲ. ಅಂತ್ಯದಲ್ಲಿ ಗ್ರಂಥಕ್ಕೆ ಸಂಬಂಧಿಸದ ಎರಡು ಗರಿಗಳಿವೆ.

1363

ಕೆ.ಎ. ೨೧೪	**ಮೋಹನತರಂಗಿಣಿ**	ಸಾಂಗತ್ಯ
೧೨.೯"×೭.೯"	ಕನಕದಾಸ	ಸು. ೧೫೦
೧–೪೦೨ ಪತ್ರ	೨೦ ಪಂಕ್ತಿ	೧೭ ಅಕ್ಷರ

ಆದಿ : ಶ್ರೀಗಣಾಧಿಪತಯಂ ನಮಃ|| ಶ್ರೀಕೃಷ್ಣಚರಿತ್ರೆ ಬರೆಯುವದಕ್ಕೆ ಶುಭಮಸ್ತು||
ಶ್ರೀಮದ್ಗುರುರಾಯ ದುರಿತವಿಜಯ ದುಃ
ಕಾಮುವಿಛೇದ ಪ್ರಹಲ್ಲಾದಾ
ತಾಮಸಗುಣನಾಶಾ..........ಸಾ ಶ್ರೀ
ರಾಮಾನುಜ ಮುನಿ ಶರಣು || ೧ ||

x x x x

ನಿಂಮಯ ಪಿತ ಕೃಷ್ಣರಾಯನ ಮಹಿಮೆಯ
ಹೊಂಮನರಿದು ಕೀರ್ತ್ತಿಪರೆ
ನಂಮಳವಲ್ಲ ಶಾರದೆಗೂಡಿ ಚಿತುರಾಸ್ಯ
ಬೊಂಮ ಬಾಯಂನ್ಯದೇವನಗೆ ॥ ೧೦ ॥

ಅಂತ್ಯ : ವರಮೋಹನ ತಾರಂಗಿಣಿಯಂಬ ಕಾವ್ಯವ
ಬರದೋದಿ ಕೇಳಿದ ಜನರಾ
ತರಣಿ ಚಂದ್ರಮರುಳ್ಳನಕ ಸತ್ಕ್ರುವೆತ್ತು
ಪೊರೆವ ಲಕ್ಷ್ಮಿಯಕಾಂತ ಬಿಡದೇ ॥ ೭೭ ॥

ಅಂತೂ ಸಂಧಿ ೪೧ಕಾಂ ಪದನು ೨೬೮೬ಕಾಂ ಮಂಗಳಮಹಾ ಶ್ರೀ ಅಕ್ಷಯ ಸಂವತ್ಸರದ ಶ್ರಾವಣ ಬ ೫ಯಲ್ಲು ಯಡತೊರೆ ತಾಲ್ಕು ಪೈಕು ಬೇಡರ ಹಳ್ಳಿಯಲ್ಲಿ ಯಿರುವ ರಾಜಶ್ರೀ ಮುದುಕ ದ್ಯಾವಪ್ಪಾಜಿಯವರ ಕುಮಾರ ಪುಟ್ಟಸ್ವಾಮಿ ಅರಸಿನವರಿಗೆ ಕುಣಿಗಲು ಶೀಮೆಯಿಂದ ಬಂದು ಸದರಿ ಬೇಡರ ಹಳ್ಳಿಯಲ್ಲಿ ಯಿರುವ ಶಂಕರೈಯ್ಯನವರ ಕುಮಾರ ಅಪ್ಪಂಣೈಯ್ಯನು ಬರದು ಕೊಟ್ಟ ಕೃಷ್ಣಚರಿತ್ರೆ ಪಸ್ತುಕಕ್ಕೆ ಜಯ ಮಂಗಳಮಹಾ ಶ್ರೀ.

ವಿಷಯ : ಶ್ರೀಕೃಷ್ಣನ ಕಥೆ.

ವಿಶೇಷ : ಕೆಲವುಕಡೆ ಮಾತ್ರ ಪದಗಳು ಲುಪ್ತ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಈ ಗ್ರಂಥಕ್ಕೆ 'ಶ್ರೀಕೃಷ್ಣ ಚರಿತ್ರೆ' ಎಂಬ ಹೆಸರೂ ಇದೆ. ಆದಿಯ ಎರಡು ಪ್ರತ್ಯೇಕ ಪತ್ರಗಳಲ್ಲಿ ವಿಷಯಸೂಚಿ ಇದೆ.

1364

ಕೆ.ಬಿ. ೧೯	**ಮೋಹನತರಂಗಿಣಿ**	ಸಾಂಗತ್ಯ
೭.೮" × ೬.೩"	ಕನಕದಾಸ	ಸು. ೧೫೫೦
೧–೨೫೫ ಪತ್ರ	೧೫ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ ಸದ್ಗುರುಬಸವಲಿಂಗಾಯ ನಮಃ॥ ಶುಭಮಸ್ತು
ಶ್ರೀಮದ್ಗುರುರಾಯ ದುರ್‍ರಿತವಿಜೆಯ ದು
ಷ್ಕಾಮವಿಚ್ಛೇದಹಲಾದಾ
ತಾಮಸಗುಣನಾಶ ಸಾತ್ವಿಕೋಲ್ಲಾಸ ಶ್ರೀ
ರಾಮಾನುಜ ಮುನಿ ಶರಣೂ ॥ ೧ ॥
ಬಟ್ಟವೆರೆಯ ಬೆಳ್ದಿಂಗಳ ಹೊಂದವರೆ
ವಟ್ಟಲೊಳ್ಸೋದಿಪರುಂಟೇ
ನೆಟ್ಟನೆ ಕನಕದಾಸನ ಕಾವ್ಯದೊಳ್ದೋಷ ತ
ಟ್ಟಿದು ತಪೆಂನಬೇಡಾ ॥ ೨೬ ॥

x x x x ಪೂಶರದಹನ
ಕಾಲೋತ್ಪತ್ಯವರ ಶಂಬರಾಸುರ ವಧೆ ಕಂತ್ತು
ಸುತನಾ ಬಾಸುರಲೀಲೆ ಬಾಣನ ಗೆದ್ದ
ಜಯಲಕ್ಷ್ಮೀಸ ಕೃತಿಯ ವಿಸರಿಪೆ || ೩೪ ||

ಅಂತ್ಯ : ಯೋಗಿಹೃತ್ಕಮಲಾಶನ ದೈತ್ಯ ಕಾಮಾರಿ
ರಾಗಿಪ ಭೋಗ ದೇವೇಂದ್ರಾ
ಕಾಗಿನಿಲಯ ನರಸಿಂಹಪ್ವಾದಿ ಕೇಶವ
ಸಾಗಿಸು ಜನಮನೊಹರವಾ || ೭೭ ||

x x x x

ವರವ ಮೋಹನತರಂಗಿಣಿಯೆಂಬ ಕಾವ್ಯದ
ಬರದೋದಿ ಕೇಳಿದ ಜನರಾ
ತರಣಿ(ಯೆಂಬ) ಚಂದ್ರಮರುಳ್ಳನಕ ಸತ್ಕೃಪೆಯಿತ್ತು
ಹೊರವ ಲಕ್ಷ್ಮಿಯಕಾಂತ್ತ ಬಿಡದೆ || ೭೯ ||
ಅಂತ್ತೂ ಸಂಧಿ ೪೨ಕ್ಕಂ ಪದನೂ ೨೭೩೧ಕ್ಕಂ ಮಂಗಳಮಹಾ ಶ್ರೀ
ಪ್ರಮಾಥಿ ಸಂವತ್ಸರದ ಕಾರ್ತ್ತೀಕ ಶುದ್ಧ ೫ ಭಾನುವಾರದಲ್ಲು ಕನಕದಾಸರು
ಹೇಳಿದ ಕೃಷ್ಣಚರಿತ್ರೆಗೆ ಕಲ್ಯಾಣಮಸ್ತು ಶ್ರೀ.

ವಿಷಯ : ಶ್ರೀಕೃಷ್ಣನ ಕಥೆ.

ವಿಶೇಷ : ಸುಂದರ ಬರಹ. ೭ನೆಯ ಸಂಧಿಯಲ್ಲಿ ೨ನೆಯ ಪದ್ಯದಿಂದ ೨೯ನೆಯ ಪದ್ಯದವರೆಗೆ ಲುಪ್ತ. ಇದೇ ಸಂಧಿಯ ೨ನೆಯ ಪದ್ಯದಲ್ಲಿ ಆರಂಭದಲ್ಲಿ ಮಾತ್ರ ಶಕಟರೇಫವಿದೆ. ಈ ಗ್ರಂಥಕ್ಕೆ ಶ್ರೀಕೃಷ್ಣಚರಿತ್ರೆ ಎಂಬ ಹೆಸರೂ ಇದೆ. ३೧ರ ಒಂದು ಪಾರ್ಶ್ವ, ३೨, ३३ನೆಯ ಪತ್ರಗಳಲ್ಲಿ ಬರವಣಿಗೆಯಿಲ್ಲ.

1365

ಕೆ.ಬಿ. ४೧೯ **ಮೋಹ ವಿವೇಕರ ಕಾಳಗ** ಯಕ್ಷಗಾನ

೮.४" × ೬.೬" ? ?

೫४ ಪತ್ರ ೧೬ ಪಂಕ್ತಿ ೨೦ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ || ಮೋಹ ವಿವೇಕರ ಕಾಳಗ ಬರಿಯುವದಕ್ಕೆ ಶುಭುಮಸ್ತು || ನಾಂದಿಕಂದ ||
ಶ್ರೀಮತ್ಸ್ಯಂಭಾಂತಕಿ ವರ
ಸೋಮಾರ್ಕ ಸಹಸ್ರ್ರಕೋಟಿ ಭಾಷಿತೆ ಕರುಣಾ

ಥಾಮೆಯೆ ಚಾಮುಂಡೇಶ್ವರಿ
ಪ್ರೇಮದೊಳೆಮಗೀವುದಧಿಕ ಸನ್ಮೊಂದಗಳಂ || ೧ ||

x x x x

ಮನಸಿನೊಳುದಿಸಿದ ಮೋಹವಿವೇಕರ
ರಣದಲಿ ಹೊಯ್ದಾಡಿದರೆಂದು
ಯನಗದ ಪೇಳಿದೆ ಸಾಂಗದಿ ವಿವರಿಸು
ಮನವಲಿದಿದ ಕೇಳುವೆನಿಂದು || ೧೫ ||

ಅಂತ್ಯ : ವಾರ್ಧಕ|| ಪುರಮಥನನಿಂತು ತಂನಣುಗ ಷಣ್ಮುಖಗೆ ಸ
ಚ್ಚರಿತವಮಾದಾತ್ಮವಿದ್ಯೆಯ ಕಥೆಯನೊರೆಯೆ ನಿಜಾ
ಕರಕಮಲವಂ ಜೋಡಿಸುತ್ತ ನಲಿದಾಡಿ ಸುಖದಿಂದಿರ್ದನದರಿಂದಲೀ
ಧರೆಯೊಳಾರಾಗಲಿದ ಬರೆದೋದಿ ಕೇಳಿ ಮ
ತ್ತಿರದರ್ಚಿಸುತ್ತಲಿರಲುರು ಮೋಕ್ಷ ಸಂಪದ
ದೊರೆವುದೆಂದಖಿಲ ಜಗಧೀಶನನುಗ್ರಹಿಸಿದಂ ಯಂಬಲ್ಲಿ ಗುರು ಮಂಗಳಂ
|| ೬೩೪ ||

x x x x

ಗಂಗಾ ತುಂಗ ತರಂಗ ವರಾಂಗನೆ
ಭೃಂಗಿ ನರ್ತ್ತನರ್ತಿಲ ಸುರನು ತೆಗೆ
ಪುಂಗವ ತುರಗಗೆ ಭಂಗಿತ ಸ್ಮರನಿಗೆ
ಮಂಗಳಾಂಗ ಶಂಭುಲಿಂಗನಿಗೆ ಮಂಗಳ || ೩ || ಶ್ರೀ ||

ವಿಷಯ : ವೇದಾಂತ, ಮೋಹ ಮತ್ತು ವಿವೇಕರ ಕಾಳಗ.

ವಿಶೇಷ : ಎರಡು ರೀತಿಯ ಬರವಣಿಗೆಗಳಿವೆ. ಮಸಿಯೂ ಎರಡು ಬಗೆಯಾಗಿದೆ. ತೆಳುವು ಕಾಗದ, ಪತ್ರಗಳಿಗೆ ಕ್ರಮಾಂಕವಿಲ್ಲ. ಅಂತ್ಯದಲ್ಲಿ ಕೆಲವು ಶುದ್ಧ ಪತ್ರಗಳಿವೆ.

1366

ಕೆ.ಎ. ೨೨	**ಮೋಹಾನುಭವ ಮುಕುರಂ**	ಕಂದ, ವೃತ್ತ
೧೨.೯″ × ೮″	ಜನ್ನ (?)	ಸು. ೧೪೦೦
೧–೨೧ ಪತ್ರ	೨೨ ಪಂಕ್ತಿ	೨೦ ಅಕ್ಷರ

ಆದಿ : ಶ್ರೀವೀತರಾಗಾಯ ನಮಃ || ಮೋಹಾನುಭವ ಮುಕುರಂ ||
ಶ್ರೀಧರಹಾಸವಮಾ ವದನದೀಧಿತಿಯುಂ ಕರುಣಾವಲೋಕನಂ
ಮೋದಿಸ ಕೋಮಲಾಂಗರುಚಿಯುಂ ಸಲೆ ಮೇಲ್ನಡೆ ಭೂಷ
ಣಾದಿ ನೈನಾದವಮದೆಂತು ಉಜ್ವಲಿಪುದಂತೆನಗುತ್ಕರಣೇಂದ್ರಿಯುಂಗಳಂ
ಸಾಧರದಿಂ ಸಮಂತು ಕೃತಸಾಖ್ಯಮನಯ್ದಿಸು ಹಂಸಗಾಮಿನೀ || ೧೧ ||

ಅಂತ್ಯ : ಕಂದ ॥ ವರ ಜಂನಕವೀಶ್ವರನಿಂ
ಸ್ವರತಂತ್ರಪ್ರಾಡಿಗೊರೆ ಮಿಗಿಲ್ಲಾನೆನೆ ಸಂ
ದುರುತರದನುಭವಮುಕುರಂ
ಸ್ಥಿರಮಿರಿಸುಗೆ ಚಂದ್ರತಾರೆಯುಳ್ಳನ್ನೆವರಂ ॥ ೧೧೪ ॥
ಶ್ರೀಮದ್ವೀರಜಿನಾಯ ನಮಃ ॥

ವಿಷಯ : ಶೃಂಗಾರದ ಅನುಭವ ವಿಚಾರ.

ವಿಶೇಷ : ಒಟ್ಟು ೧೧೪ ಪದ್ಯಗಳಿವೆ. ಇದರಲ್ಲಿ ೭೩ರಿಂದ ೭೬ ಮತ್ತು ೮೦ರಿಂದ ೮೩ ರವರೆಗಿನ ಪದ್ಯಗಳಿಲ್ಲ. ಪ್ರತಿಯು ಸುದೃಢವಾಗಿದೆ. ಬರಹವು ಸ್ಫುಟವಾಗಿದೆ. ಪತ್ರದ ಒಂದೆಡೆ ಮಾತ್ರ ಬರೆದಿದೆ. ಶಕಟರೇಫದ ಬಳಕೆ ಇದೆ.

1367

ಕೆ.ಎ. ೨೧	**ಯಶೋಧರಚರಿತ್ರೆ**	ಚಂಪು
೧೨.೯" × ೭.೯"	ಜನ್ನ	೧೨೦೯
೧–೩೭ ಪತ್ರ	೨೫ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಮತ್ಪಂಚಗುರುಭ್ಯೋ ನಮಃ ॥
ಪುರುದೇವಾದಿಗಳೊಲಿಸಿದ
ಪರಮಶ್ರೀವಧುವನೊಲಿಸಿಯುಂ ಪರವನಿತಾ
ನಿರಪೇಕ್ಷಕನೆನಿಸಿದ ದೇ
ವರದೇವಂ ಕುಡುಗೆ ಸುವ್ರತಂ ಸುವ್ರತಮಂ ॥ ೧ ॥

x x x x

ಕಂನರನಾದರದಿಂ ಕುಡೆ
ಹೊಂನಂ ಮನವೊಸೆದು ತೈಲಪಂ ಕುಡೆ ರಂನಂ
ಮಂನಿಸ ಬಲ್ಲಾಳಂ ಕುಡೆ
ಜಂನಂ ಕವಿಚಕ್ರವರ್ತಿ್ರಪೆಸರಂ ಪಡೆದಂ ॥ ೨೧ ॥

ಅಂತ್ಯ : ವೃ ॥ ಶ್ರೀ ಗಿರಿದುರ್ಗಮಲ್ಲ ನೃಪರಾಜ್ಯದ ವತ್ಸರಮುತ್ತರೋತ್ತರ
ಕ್ಕಾಗಿರೆ ಶುಕ್ಲದಾಶ್ವಯುಜ ಕೃಷ್ಣದ ಪಂಚಮಿ ಪೂರ್ಣ್ಣ ಪುಷ್ಯತಾ
ರಾಗುರುವಾಗೆ ಭೂತಳದೊಳೀ ಕೃತಿವೆತ್ತುದು ಸುಪ್ರತಿಷ್ಠೆಯಂ
ಚಾಗದ ದಾನದಗ್ಗಳಿಕೆಯಂ ಪಡೆದಂ ಕವಿಭಾಳಲೋಚನಂ ॥ ೮೭ ॥
ಗದ್ಯ ॥ ಇದು ಪರಮ ಜಿನಸಮಯ ಕುಮುದಿನಿಶರಶ್ಚಂದ್ರ ಚೈತ್ರ ಚಂದ್ರಮ ಸದಮಳ ರಾಮಚಂದ್ರಮುನೀಂದ್ರ ಪದಭಕ್ತಂ ಜನಕಿ ಮಾಡಿದ ಯಶೋಧರ ಚರಿತೆಯೊಳುದಾರಂ ಚತುರ್ತ್ಥಾವತಾರಂ

ಶ್ರೀಮತ್ಪಂಚಗುರುಭ್ಯೋ ನಮಃ || ಅಂತು ಅವತಾರ ನಾಲ್ಕಕ್ಕಂ ಕಂದ ವೃತ್ತ ಸಹ ಪದ್ಯ ೩೧೧ಕ್ಕಂ ಮಂಗಲಮಹಾ ಶ್ರೀ.

ವಿಷಯ : ಯಶೋಧರ ಮತ್ತು ಅಮೃತಮತಿಯರ ಕಥೆ.

ವಿಶೇಷ : ಸ್ವಲ್ಪ ಶಿಥಿಲ. ಪತ್ರದ ಒಂದೆಡೆ ಮಾತ್ರ ಬರೆದಿದೆ. ಶಕಟರೇಫವಿದೆ. ಗ್ರಂಥದಾದಿಯ ಬೇರೆ ಎರಡು ಪತ್ರಗಳಲ್ಲಿ ವಿಷಯಸೂಚಿಯಿದೆ.

1368

ಕೆ.ಬಿ. ೪೫೫	**ಯಶೋಧರಚರಿತ್ರೆ**	ಭಾಮಿನೀಷಟ್ಪದಿ
೮.೧" × ೬.೬"	ಪದ್ಮನಾಭ	ಸು. ೧೬೦೦
೧–೧೧೪ ಪುಟ	೧೬ ಪಂಕ್ತಿ	೧೪ ಅಕ್ಷರ

ಆದಿ : ಯಶೋಧರ ಚರಿತಮ್

ಶ್ರೀಮದತಿಶಯ ನಿಳಯನ ವಿಲಯ
ರಾಮ ಕೇಶವ ವಿನುತಪದ....
. . . .
. . . . . ರನಿರಘ ನಿತ್ಯ ನಿ
ರಾಮಯ ನಿರಾಭರಣ ಕಮನೀಯ
ಧಾಮ ಜಿನಮುನಿ ಸುಬ್ರತಂ ನಮಗೀಗೆ ಸುಮತಿಯನೂ || ೧ ||

ಅಂತ್ಯ : ಕಥೆಯ ಭಾವಿಸಿ ಕೇಳುವ ಮಹಾ

ಮತಿಗಳಿಗೆ ಯತಿಗಳಿಗೆ ಬುಧಸಂ
ತತಿಗಳಿಗೆ ಪಾಲಿಸುವ ವಸುಧಾಸತಿಯ ಪತಿಗಳಿಗೆ
ಸತತ ಮಙ್ಗಳವೆಂದು ಜಿನಮುನಿ
ಶ್ರುತಕೀರ್ತಿ ತ್ರೈವಿದ್ಯವರ
ಸುತಕವೆ ಪದುಮನಾಭವಿಭು ವಿರಚಿತ ಯಶೋಧರನೂ || ೮೫ ||
ಚಂಡಕರವೆಂತಂತೆ ಹಿಮಕರ
ಮಣ್ಡಲವದೆಂತಂತೆ ದಿಗುವೇ
ದಂಡಕುಲವೆಂತಂತೆ ಮಂದರಶೈಲವೆಂತತೆ
ಚಣ್ಡವಿಕ್ರಮ ಭರತ ವಸುಧಾ
ಮಣ್ಡಳದೊಳನವರತ ಜೈನರು
ಕೊಣ್ಡು ಪಾಲಿಸುತಿರ್ಕೆ ಜೀವದಯಾಷ್ಟಮಿಯ ಕಥೆಯಾ || ೮೬ ||

ಶ್ರೀ ಪಂಚಗುರುಭ್ಯೋ ನಮಃ|| ಯಶೋಧರ ಸಮಾಪ್ತಮ್ ||ಮಙ್ಗಳಮಹಾ.

ವಿಷಯ : ಯಶೋಧರ ಮತ್ತು ಅಮೃತಮತಿಯರ ಕಥೆ.

ವಿಶೇಷ : ಆದಿಯ ಪದ್ಯ ಹಾಗೂ ಇನ್ನು ಕೆಲವು ಪದ್ಯಗಳು ಮಾತ್ರ ಲುಪ್ತ. ತಪ್ಪುಗಳನ್ನು ತಿದ್ದಿ ಬರೆದಿದೆ. ಶಕಟರೇಫವಿದೆ. ಸ್ಫುಟಬರಹ. "ಮೂಡ ಬಿದ್ರೆಯಿಂದ ಬಂದಿದ್ದ ಪ್ರತಿಯ ಮೇಲೆ ಕಾಪಿಯಾಗಿದೆ" ಎಂದು ಮೊದಲ ಪತ್ರದಲ್ಲಿ ಬರೆದಿದೆ.

1369

ಕೆ.ಬಿ. ೪೬೮	**ಯಶೋಧರ ಷಟ್ಪದಿ**	ಭಾಮಿನೀಷಟ್ಪದಿ
೮.೩" × ೬.೫"	ಚಂದ್ರಸಾಗರವರ್ಣಿ	?
೧–೪೪ ಪುಟ	೧೨ ಪಂಕ್ತಿ	೧೪ ಅಕ್ಷ

ಆದಿ : ಶ್ರೀ ಯಶೋಧರ ಷಟ್ಪದಿ (ಚಂದ್ರಸಾಗರವರ್ಣಿವಿರಚಿತಂ)
ಆದಿಯಿಲ್ಲ—
..................................ನಿದ್ರೆಯಿಂದೆ
ದರ್ಾ ನಿನಾದಕೆ ಸೋಲ್ತು ತನ್ನನೆ
ಹೀನೆಯಾತಗೆ ಮಚ್ಚನಿತ್ತಳು ನೋಡಿರಕಟ(ಕ)ಟಾ || ೨೧ ||
ಗುಣದ ಕೇಡನು ಶೀಲದೞುವುನು
ನೆಣಿಸದಾಖಳೆ ಪೊತ್ತುೞೊಳೆ ಸಖಿ
ಗುಣವತಿಗೆ ನಿಜಕಾರ್ಯಮಂ ಪೇೞ್ದಮಲ ಮಣಿಗಣದಿಂ
ಕಣಿಪಿ ಕಳಿಪಿದೊಡವಳು ಗೀತದ
ಕಣಿಯನೀಕ್ಷಿಸಿ ಮರಳಿ ಬಂದೆಲೆ
ಗಣಿಯಿಸಲು ಬೇಡವನ ಚಿಂತೆಯ ಬಿಸುಡು ಕಮಲಮುಖೀ || ೨೨ ||

ಅಂತ್ಯ : ಶ್ರುತಮುನೀಶ್ವರ ವರತನೂಭವ
ಜಿತಮದನ ಶುಭಚಂದ್ರ ಮುನಿಪನ
ಸುತನು ಚಂದಣವರ್ಣ ರಚಿಸಿದ ಕಥೆ ಯಶೋಧರನಾ
ವಿತತಮಾನೀ ಜಗದೊಳೆಸೆಯಲಿ
ಸತತಮಿದನೊಲಿನೋದುವಾಲಿಪ
ನುತಿಪರಿಗೆ ಮುನಿಸುವ್ರತ ನಿಜಸುಖಮನೊಲಿದೀಗೆ || ೧೦೮ ||
ಶ್ರೀಪಂಚಗುರುಭ್ಯೋ ನಮಃ ಮಂಗಳಮಹಾ ಶ್ರೀ.

ವಿಷಯ: ಅಮೃತಮತಿ ಮತ್ತು ಯಶೋಧರರ ಚರಿತ್ರೆ.

ವಿಶೇಷ: ಅಸಮಗ್ರ. ಮೊದಲಲ್ಲಿ ೨೧ ಪದ್ಯಗಳಿಲ್ಲ. ಬರಹ ಸ್ಫುಟವಾಗಿದೆ. ಱ, ೞ ಲಿಪಿಗಳ ಪ್ರಯೋಗವಿದೆ.

1370

ಕೆ. ೪೩೫ **ಯಾಗಚರಿತ್ರೆ** ಯಕ್ಷಗಾನ

೧೨.೫" × ೧" ಹುಚ್ಚ ?

೧೯೨ ಪತ್ರ ೬ ಪಂಕ್ತಿ ೬೨ ಅಕ್ಷರ

ಆದಿ: ಮಂನ್ಮಥನಾಮ ಸಂವತ್ಸರದ ಪುಷ್ಯ ಬ ೨ಲ್ಲೂ ಯಜ್ಞಚೆರಿತ್ರೆಯ ಬರೆ ಉದಕ್ಕೆ ಶು ....॥

ಶ್ರೀರಾಮ ರಾಣೀಶ ಸರ್ವಲೋಕೇಶಾ
ವಾರಿಜಾಸನವೃಂದ ...ಕ್ಕೆ ವಂದ್ಯಾ
ಭೂದೇವರ ತಾಪಗಹರ ಗೋರರೂಪ
ವೇದ ತಸ್ಕರ ಶೀಕ್ಷಾಯಾಗ ಸಂರಕ್ಷಾ
ಗಿರಿಯ ಬೆಂನೊಳಗಾಂತ ಗೀರ್ವಾಣವಿನುತ
ಸುರ.... ತವ ನೆರದ ಸಾಮಜನ . ರುದ ॥

x x x x

(೫ ನೆಯಪತ್ರ) ಸೋಲೂರ ಸ್ತಳದ ಕರಣಿಕ
ಲೋಲನು ಚಿಕ್ಕಂಣನರಸಿ ಚಂನಂಮುನವರ
ಬಾಲಕ ಹುಚ್ಚಗೆ ವರದಲೀ
ಪೇಳಿಸಿದನು ಕೃತಿಯನಿದನು ಗುರುರಂಗೇಶನು
ಧರಯೊಳು ಬಲ್ಲ ಸುಜಾಣಂ
ಕರಮುಗಿದು ಬೇಡ್ವೆ ಪ್ರಾಸು ಯತಿ ಗಣ ನೇಮದೋ
ಳಿರಲಿನಿತು ತಪ್ಪು ನೆಪ್ಪುಗ
ಳ್ಕರುಣದಿ ನೀವು ತಿದ್ದಿ ವೋದಿ ನಮಿಸುವೆ ಮುದದೀ ॥ ೩ ॥
ಮುಂನಿದು ಷಟ್ಪದೀ ಕಾವ್ಯ
ಕಂನಡಿಸುವೆ ಯಕ್ಷಗಾನದಲಿ ಭಾವಜ್ಞರೂ
ಸಂಣವನುಸುರಿದ ಕ್ರುತಿಯಿದ
ನಂನಿಯ ಲಾಲಿಪುದು ಪ್ರಿಯದಿ ನಿರ್ಮಳಚಿತ್ತದಿ

ಅಂತ್ಯ : ಹರಿ ಸರ್ವೋತ್ತಮಘೋರ
ದುರಿತಾಸಂಹಾರ ಕಾಯೊ ಲವಕುಮಾರಾ ಯಂನಾ
..........ಲವಕುಮಾರಾ ॥
ವಚನಾ ॥ ಯಿಂತೂ ಸೀತಾದೇವಿಯು ಕುಮಾರನ ರೂಪು ಗುಣ ಅತಿ.

ವಿಷಯ : ಭಾರತದ ಮತ್ತು ರಾಮಾಯಣದ ಅಶ್ವಮೇಧಯಾಗದ ಕಥೆ.

ವಿಶೇಷ : ಶಿಥಿಲ ಮತ್ತು ಅಸಮಗ್ರಪ್ರತಿ. ೧೫೮ನೆಯ ಪತ್ರದವರೆಗೆ ಭಾರತದ ಕಥೆಯೂ ಅಲ್ಲಿಂದ ಮುಂದೆ ರಾಮಾಯಣದ ಕಥೆಯೂ ಇದೆ. ಕೊನೆಯಲ್ಲಿ ಕೆಲವು ಗರಿಗಳ ಅಂಚು ಮುರಿದಿದೆ. ಮಧ್ಯದಲ್ಲಿ ಕೆಲವು ಗರಿಗಳನ್ನು ಹುಳು ಹೊಡೆದಿದೆ. ಮತ್ತೆ ಕೆಲವು ಮುರಿದಿವೆ.

1371

ಕೆ.೩೯೫	**ಯಾಜ್ಞವಲ್ಕ್ಯಸ್ಮೃತಿ** (ಸಟೀಕು)	ಶ್ಲೋಕ, ಟೀಕು
೧೩.೮″ × ೨″	?	?
೧–೬೧ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಯಾಜ್ಞವಲ್ಕ ಧರ್ಮಶಾಸ್ತ್ರ ವ್ಯವಹಾರಾಧ್ಯಾಯ ಪ್ರಾಕೃತವ್ಯಾಖ್ಯಾನ ಮಾರಂಭಂ.
ಯಸ್ಯೋನ್ಮೇಷನಿಮೇಷಾಭ್ಯಾಂ ಜಗತಾಂ ಪ್ರಭವವ್ಯಯೌ ।
ಸ ಜಯತ್ಯವಿಲಾತಂಕ ನಿರ್ವಾಪಣಕರೋ ಹರಿಃ ॥
ಯೋಗೀಶ್ವರೇಣ ಯತ್ಪ್ರೋಕ್ತಂ ಧರ್ಮ್ಮಶಾಸ್ತ್ರಂ ಮಹಾತ್ಮಾನಾ ।
ತಸ್ಯ ದ್ವಿತೀಯಮಧ್ಯಾಯಂ ವ್ಯಾಕುರ್ವೇ ಭಾಷಯಾ ಸ್ಫುಟಂ ॥
ವ್ಯವಹಾರಾನ್ನೃಪಃ ಪಶ್ಯೇದ್ವಿದ್ವದ್ಭಿರ್ಬ್ರಾಹ್ಮಣೈಃ ಸಹ ।
ಧರ್ಮ್ಮಶಾಸ್ತ್ರಾನುಸಾರೇಣ ಕ್ರೋಧ ಲೋಭವಿವರ್ಜಿತಃ ॥ ೧ ॥
ಟೀಕು ॥ ಪ್ರಜಾಪಾಲನದಲ್ಲಿ ಅಧಿಕೃತನಾದ ಅರಸು ವಿದ್ವಾಂಸರಾದ ಬ್ರಾಹ್ಮಣ ರಿಂದ ಉಳಿದ ಬುದ್ಧಿವಂತರಿಂದಲೂ ಸ್ಮಾರ್ತರಿಂದಲೂ ಸಹಿತವಾಗಿ, ಸಭೆಯಲ್ಲಿ ಕುಳಿತು ಧರ್ಮಶಾಸ್ತ್ರದಲ್ಲಿ ಹೇಳಿದ ಹಾಂಗೆ ತಟಸ್ಥನಾಗಿ ಪ್ರಜೆಗಳ ಸಲಿಕೆ ಗಳಂನು ವಿಚಾರಿಸಬೇಕೆಂದು ಶ್ಲೋಕಾರ್ಥ ॥

ಅಂತ್ಯ : ರಾಜ್ಞಾ ನ್ಯಾಯೇನ ಯೋ ದಂಡೋ ಗೃಹಿತೋ ವರಣಾಯಕಂ ।
ನಿವೇದ್ಯ ದದ್ಯಾದ್ವಿಪ್ರೇಭ್ಯಃ ಸ್ವಯಂ ತ್ರಿಂಶದ್ಗುಣೀಕೃತಂ ॥
ಅರಸು ಆವುದಾನೊಂದು ದ್ರವ್ಯವನೂ ಅನ್ಯಾಯದಿಂದ ದಂಡವಾಗಿಕೊಂಡದು ಆ ದ್ರವ್ಯವನೂ ಮೂವತ್ತು ಮಡಿಸಿ ವರುಣಾಯೇದಂ ನಮೊ ಯಂದು ವರುಣಂಗೆ ಸಮರ್ಪಿಸಿ ಬ್ರಾಹ್ಮಣರಿಗಾಗಿ ಕೊಟ್ಟು ಕಾವುದು. ಇದು ರಾಜಧಂರ್ಮ್ಮ ॥

ಯದ್ಯಾಜ್ಞವಲ್ಕ್ಯಮುನಿನಿರ್ಮಿತ ಧರ್ಮಶಾಸ್ತ್ರ
ತಸ್ಯ ದ್ವಿತೀಯಮಖಿಲಂ ವ್ಯವಹಾರಶಾಸ್ತ್ರಂ
ಅಧ್ಯಾಯಮಲ್ಪಮತಿ ಲೋಕವಿಬೋಧನಾಯ
ಶ್ರೀಮಾನ್ ಮಹೇಂದ್ರಯತಿರಾಟ್ ಪ್ರಕಟೀಚಕಾರ ॥ ಶ್ರೀ ॥
ಯಾಜ್ಯವಲ್ಕ್ಯಧರ್ಮಶಾಸ್ತ್ರ ವ್ಯವಹಾರಾಧ್ಯಾಯ ಪ್ರಾಕೃತವಾಖ್ಯಾನಂ
ಸಮಾಪ್ತಂ.

ವಿಷಯ : ಯಾಜ್ಞವಲ್ಕ್ಯಸ್ಮೃತಿ ವ್ಯವಹಾರಾಧ್ಯಾಯದ ಶ್ಲೋಕಗಳ ಕನ್ನಡಟೀಕು.

ವಿಶೇಷ : ಕೆಲವು ಗರಿಗಳು ಮುರಿದುಹೋಗಿರುವುದರಿಂದ ಗ್ರಂಥ ಲುಪ್ತವಾಗಿದೆ.
ಶಿಥಿಲಪ್ರತಿ, ಸ್ಫುಟಾಕ್ಷರ. ೨೯, ೩೬, ೩೭, ೩೯, ೪೦ ನೆಯ ಪತ್ರಗಳು ಲುಪ್ತ.

1372

ಕೆ.ಎ. ೧೨೪ **ಯಾದವಗಿರಿ ಮಾಹಾತ್ಮ್ಯ** ಸಾಂಗತ್ಯ

೧೩.೨" × ೮.೩ ಲಕ್ಷ್ಮೀಶ ೧೬೭೨

೧–೩೧ ಪತ್ರ ೩೨ ಪಂಕ್ತಿ ೩೫ ಅಕ್ಷರ

ಆದಿ : ಶ್ರೀ x x ಯಾಧವಗಿರಿ ಮಹಾತ್ಮೆ । ಲಕ್ಷಣಾಚಾರ್ಯ ಕವಿ ವಿರಚಿತ ಶ್ರೀ
ಗಣಾಧಿಪತಯೆ ನಮಃ ॥ ಶುಭಮಸ್ತು ॥ ರಾಗ ॥ ಸಾಂಗತ್ಯ
ಶ್ರೀ ಮಹಿಳಾನನ ಸರಸಿಜ ವಿಕಸನ
ಭಾಮಹಿತಾರ್ಕ ಸುಪರ್ವಾ
ಸ್ತೋಮ ಮಕುಟ ಪಾದ ಯಾದವಗಿರಿ
ಧಾಮ ರಕ್ಷಿಪುದೆಂನನೊಲಿದೂ ॥ ೧ ॥

x x x x

ಸರಸ ಸಂಗೀತ ಸಾಹಿತ್ಯಕೋವಿದನ ಪೂ
ಸರ ಸರಿದೊರೆಯನಿಸುವನಾ
ತರುಣಾರ್ಕಸಂನಿಭ ಚಿಕ್ಕದೇವರಾಯನ
ಕರುಣದೊಪ್ಪಂಬಡದುಸುರ್ವೆ

ಅಂತ್ಯ : ಯಿದು ಯದುಗಿರಿ ಪ್ರತಿಪದಪದ್ಮ ಭೃಂಗ
ಚದುರ ಶ್ರೀ ಚಿಕ್ಕದೇವನೃಪನ
ಸದಮಲಾಮಾತ್ಯ ಲಕ್ಷ್ಮೀಶ ಪೇಳಿದ ಕೃತಿ
ಮುದನೀವುದೊಲಿದು ಕೇಳ್ದರಿಗೆ ॥ ೧೫೩ ॥
ಶ್ರೀ॥ ಅಂತು ಸಂದಿ ೧೨ಕ್ಕಾಂ ಪದನು ೧೨೯೯ಕ್ಕಾಂ ಮಂಗಳಮಹಾ ಲಕ್ಷ್ಮಿ
ನರಶಿಂಹ್ಮ ಮಂಗಳಮಹಾ ಶ್ರೀ.

ವಿಷಯ : ಯಾದವಗಿರಿ ಎಂಬ ಹೆಸರಿನ ಮೇಲುಕೋಟೆಯ ಸ್ಥಳ ಮಹಿಮೆ.

ವಿಶೇಷ : ಸಮಗ್ರ, ಚಿಕ್ಕದೇವರಾಜನ ಅಮಾತ್ಯ ಲಕ್ಷ್ಮೀಶನು ಈ ಗ್ರಂಥದ ಕರ್ತೃವೆಂದು ಗ್ರಂಥಾಂತ್ಯದ ಪದ್ಯದಿಂದ ತಿಳಿಯುತ್ತದೆ.

1373

ಕೆ. ೭೪	**ಯಾದವಗಿರಿ ಮಾಹಾತ್ಮ್ಯ**	ಭಾಮಿನೀಷಟ್ಪದಿ
೧೩.೯" × ೧.೪"	ವೆಂಕಟಾಚಾರ್ಯಶಿಷ್ಯ	ಸು. ೧೭೦೦
೭೪ ಪತ್ರ	೬ ಪಂಕ್ತಿ	೬೫ ಅಕ್ಷರ

ಆದಿ : ಶ್ರೀರಮಣ ರಂಗಾಧಿರಾಜಗೆ
ಶೌರಿ ಶಾಶ್ವತ ವೆಂಕಟೇಶಗೆ
ವಾರಣಾಧಿಪ ವರದ ಕಾಂಚೀಶರಿಗೆ ಪೊಡವಂಟ್ಟೊ
ನೀರಜಾಂಬಕ ನಿ ....
....ನ ಧೀನೋದ್ಧರಣ ವರ ಯೆದು
ಧಾರುಣೀಧರ ನಿಲಯ ನಾರಾಯಣಗೆ ವಂದಿಸುವೆ ॥ ೧ ॥

x x x x

ಅಪ್ರತಿಮ ನಾರಾಯಣನು ನೆಲ
ಸಿಪ್ಪ ಯಾದವಗಿರಿ ಮಹತ್ವವ
ನಲ್ಪಮತಿ ಬಿಂನೈಪೆ ವೆಂಕಟಗುರು ಕರುಣವಿಡಿದೂ
ತಪ್ಪು ವಾಗ್ದೋಷ....ಯೆ
ಸತ್ಪುರುಷರಂಗೀಕರಿಸಿ ವರ
ಸರ್ಪಶಯನನ ಪಾದದಲಿ ಅರ್ಪಿಸುವುದೀ ಕೃತಿಯಾ ॥ ೭ ॥

ಅಂತ್ಯ : ನಿನಗೆ ಸಲುವುದು ಭಕ್ತವತ್ಸಲ
ನೆನಿಪ ನಾಮವು ಯೆನುತ ತ್ರಿಜಗದ
ಜನರು ನುತಿಸಲು ನಗುತಲೊಪ್ಪಿದ ನಾರೆಯಣ ನಲಿದೂ
ಮನುಜಪುಂಗವ ವಿಷ್ಣುಚಿತ್ತನ
ಘನಮಹಿಮೆ ಕಥೆಗೇಳೆ ಶ್ರೀಶನು
ಅನವರತ ರಕ್ಷಿಸನು ಯುಂದಲ್ಲಿಗೆ ಸಂಧಿ ಪೂರಾಯಾ ॥ ೮೨ ॥
ಅಂತು ಸಂಧಿ ೧೦ಕ್ಕಂ ಪದನು ೬೦೭ಕ್ಕಂ ಮಂಗಳಂ ಶ್ರೀ॥
ಮೇದಿನಿಯಲತಿ ವಶಿಷ್ಠಪುತ್ರರು
ಗಾಧಿಜನ ಶಾಪದಲಿ ಪರಿಭವ
ವೈದಿ ಯೆದುಗಿರಿ ವಾಸದಿಂ ಪಡೆದರು ಸುಮೋಕ್ಷವನೂ ॥ ಪ ॥

x x x x
ಯೆಮಿಕುಲೋತ್ತಮ ಅಂಬರೀಶನು
ಅಮಿತ ಶರಣಾಗತಿಯ ಮಹತ್ವವ
ಸುಮತಿಯನು ಸಂಧಾನವನು ಅನು....ತಿಹ
ಸಮರಹಿತ ಯೆದುಶಯಿಲ ವಾಸದಿ
ನಿಮಗೆ ಕಾಮಿಸಿದದುಂಟಹುದು ಉ
ತ್ತಮದ ಸ್ಥಲವಿಹುದೆನುತ ಸೋಮಷ ಮುನಿಯವರಿಗೊರೆದಾ || ೧೬ ||

ವಿಷಯ : ಯಾದವಗಿರಿ (ಮೇಲುಕೋಟೆ) ಕ್ಷೇತ್ರದ ಮಾಹಾತ್ಮ್ಯ.

ವಿಶೇಷ : ಶಿಥಿಲ ಮತ್ತು ಅಸಮಗ್ರಪ್ರತಿ. ಪತ್ರಗಳ ಅಂಚು ಮುರಿದಿದೆ. ಕೆಲವು ಪತ್ರಗಳೂ ಮುರಿದಿವೆ. ಕೆಲವು ಪತ್ರಗಳನ್ನು ಹುಳು ಹೊಡೆದಿದೆ.

1374

ಕೆ.ಎ. ೨೬೬	**ಯಾದವಗಿರಿ ಮಾಹಾತ್ಮ್ಯ**	ಭಾಮಿನೀಷಟ್ಪದಿ
೧೩" × ೮"	ವೆಂಕಟಾಚಾರ್ಯಶಿಷ್ಯ	ಸು. ೧೭೦೦
೧–೧೬೫ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಶ್ರೀರಸ್ತು ಯಾದವಗಿರಿ ಮಾಹಾತ್ಮ್ಯಂ ಭಾಮಿನೀಷಟ್ಪದಿ
ಶ್ರೀರಮಣ ರಂಗಾದಿ ರಾಜಗೆ
ಶೌರಿ ಶಾಶ್ವತ ವೆಂಕಟೇಶಗೆ
ವಾರಣಾಧಿಪ ವರದ........ಪೊಡವಂಟೊ
ನೀರಜಾಂಬಕ ನಿರುಪಮ
ಧೀರ ದೀನೋದ್ಧರಣ ವರ ಯದು
ಧಾರುಣೀಧರನಿಲಯ ನಾರಾಯಣಗೆ ವಂದಿಸುವೇ || ೧ ||
ಭಾಗವತ ಪುಂಗವಗೆ ವರ
ಯೋಗಿ ಪಾದಾಂಬುರುಹ ಭೃಂಗಕೆ
ಆಗಮೋತ್ತಮವಾದಿವಾದಿ ಭಯಂಕಾರ್ಯಜಗೆ
ಭೋಗಿಪತಿಶಾಯಿಯ ಗುಣಾಮೃತ
ಸಾಗರದಿ ಮುಳುಗಿಪ್ಪವನಿಗನು
ರಾಗದಿಂದಲಿ ವೆಂಕಟಾರ್ಯನಿಗೆ ಪೊಡವಡೆಲೆ ಮನವೇ || ೧ ||

ಅಂತ್ಯ : ಹರುಷ............ಕಾರಣವು ಯದು
ಗಿರಿನಿಲಯ ನಾರಾಯಣನ ಸಿರಿ
ಚರಣಸೇವೆಯನೀ........ಮಾಡುತಲಿರಲು ಸಿದ್ಧಿಪುದು

ಗರುಡ ವಿಷ್ವಕ್ಸೇನ ಮುಖರಾ
ನಿರವಧಿಕದೈಶ್ವರ್ಯದಿಂದೆವಿಾ
ಪರಮ ಸಾಂಬಸೂರೆಯಲಲ್ಲಿಗೆ ಸಂಧಿ ಪೂರಾಯ || ೩೦ ||
ಅಂತು ಸಂಧಿ ೧೩ಕ್ಕಂ ಪದನು ೬೫೩ಕ್ಕಂ ಮಂಗಳಮಹಾ ಶ್ರೀ.

ವಿಷಯ : ಯಾದವಗಿರಿ (ಮೇಲುಕೋಟೆ) ಕ್ಷೇತ್ರದ ಮಾಹಾತ್ಮ್ಯ.

ವಿಶೇಷ : ಅಕ್ಷರಗಳು ವಿರಳವಾಗಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

1375

ಕೆ. ೪೩೧ **ಯಾದವಗಿರಿ ಮಾಹಾತ್ಮ್ಯ** ಚಂಪು

೧೩.೯" × ೧.೯" ತಿಮ್ಮ ೧೬೭೭

೧–೧೦೩ ಪತ್ರ ೯ ಪಂಕ್ತಿ ೭೮ ಅಕ್ಷರ

ಆದಿ : ಶ್ರೀ ಯಾದವಗಿರಿ ಮಾಹಾತ್ಮ್ಯಂ.
ಶ್ರೀಮಾನಿನ್ಯಾಂನನಾಂಭೋರುಹ ವಿಕಸನ ಬಾಲಾರ್ಕನಿಂದ್ರಾದಿದೇವ
ಸ್ತೋಮೋದ್ಯನ್ಮೌಳಿರತ್ನಾವಳಿ ರುಚಿವಿಲಸತ್ಪಾದಪಾನೀಯ್ಯಜಾತಂ
ಕಾಮಪ್ರೋಲ್ಲಾಸರೂಪಂ ಮುನಿಜನ ಹೃದಯಾಗಾರ ದಿವ್ಯಪ್ರದೀಪಂ
ಪ್ರೇಮಂಜೆತ್ತಿತ್ತು ನಿತ್ಯಂ ಯದುಗಿರಿಪತಿ ಸೌಭಾಗ್ಯಮಂ ಪಾಲಿಸೆಮ್ಮಂ || ೧ ||

x x x x

ಶ್ರೀಮಂತಂ ಕೃಪಪರ್ಯ ಪೂಜಿತಪದಂ ವೇದಾಂತ ತತ್ವಾರ್ಥ ನಿ
ಷ್ಠೀಮಂ ವಿಷ್ಣುಪದಾಬ್ಜ ಭಕ್ತಿನಿರತಂ ಮಾಧುರ್ಯಭಾಷಂ ಬುಧ
ಸ್ತೋಮಾಮರ್ತ್ಯಧರಾರುಹಂ ವಂಕಡಾಂಬೀ ಲಕ್ಷ್ಮಣಾಚಾರ್ಯನು
ಧಾಮಂ ಮೋದಮನಿತ್ತು ಪಾಲಿಸುಗಜಸ್ರಂ ವೈಷ್ಣವಾಗ್ರೇಸರಂ || ೧೭ ||

x x x x

ವೃ || ಕವಿಬೃಂದಾಮರಭೂರುಹಾಶ್ರಿತಮನಂ ಶ್ರೀವೇಣುಗೋಪಾಲಪಾ
ದ ವನೇಜಾತಮರಂದಸಾರರತರಭೃಂಗಂ ಜಾಮದಗ್ನ್ಯಾನ್ವಯೋ
ದ್ಭವನಾನಂದಕ ಚಿಕ್ಕದೇವನೃಪ ಕಾರುಣ್ಯೋಚಿತಂ ಮೋದದಿಂ
ಕವಿತಿಂಮಂ ಯದುಭೂಮಿಭೃನ್ಮಹಿಮೆಯಂ ಪೇಳ್ಗುಂ ಬುಧಾನುಜ್ಞೆಯಿಂ ||೨೧||
ಕಂ || ಕೃತಿನಾಥಂ ಯಾದವಗಿರಿ
ಪತಿಪ್ರೇರಕನೆನಿಸೆ ಚಿಕ್ಕದೇವಾಧಿಪನ
ಪ್ರತಿ ಕಥೆ ಯಾದವಗಿರಿ ರಂ
ಜಿತ ಮಾಹಾತ್ಮ್ಯಮೆನೆ ಕೇಳದಿರ್ಪರುಮೊಳರೇ || ೨೨ ||

ಅಂತ್ಯ : ಘನಮೇನ್ನಿಲ್ಲ್ವದೆ ದೇಹಮೇಂ ಸ್ಥಿರಮೆ ಆಚಂದ್ರಾರ್ಕಮಂ ತೀವಿಸ
ಲ್ವನವದ್ಯಾಧಿಕ ದಿವ್ಯವಸ್ತುವೆನುತಂ ಸತ್ಕೀರ್ತಿ ಬಪ್ಪಂತೆ ಸ
ಜ್ಜನಯೂಥಸ್ತವನೀಯ್ಯಮಾಗೆ ಚಿಕುಪಾಧ್ಯಾಯಾಯಾಖ್ಯ ಮಂತ್ರೀಶನಿಂ
ಘನ ಮಹಾತ್ಮ್ಯೆಯನೊಲ್ದು ಮಾಡಿಸಿದನೆನ್ನಿಂ ಬುದ್ಧಿಮಚ್ಛಾಭ್ರವ್ಯಮಂ ||೯೪||

x x x x

ಜಯಮಂಗಳಮಂಭೋನಿಧಿ
ಶರನರಮಾನಯನ ಕುಮುದವಿಕಸನಚಂದ್ರಾ
ದಯೆಯಿಂ ನಾರಾಯಣ ನಿ
ನ್ನಯೆ ಕೃತಿಗಭಿವರ್ದ್ಧಿಕೊಳ್ಪಿಸಾಚಂದ್ರಾರ್ಕಂ || ೧೯೭ ||

ಗದ್ಯ || ಇದು ವಿನಮದಮರ ವರ ಸರಸಿಜಭವಭವಮುಖ ಸುರಸಮುದಯ ಸುರುಚಿರ ಮಕುಟನಿಕರಖಚಿತ ಮಣಿವಿಚಯರುಚಿಕಲಿತ ಯದುಗಿರಿಸದನ ನಾರಾಯಣ ಮೃದುಪದಲಲಿತ ಜಲರುಹಜನಿತ ಮಕರಂದ ರಸಾಸ್ವಾದನನಿರತ ಮತ್ತಮಧುಕರಾಯಮಾನ ಬಿರುದೆಂತೆಂಬರಗಂಡ ಯದುಕುಲಶರಧಿರಾಕಾ ಸುಧಾಕರನಾದ ಚಿಕದೇವ ಮಹಾರಾಯನ ಕರುಣರಸಾಕಟಾಕ್ಷಾವಲೋಕನ ಮುದಿತ ಚಿಕುಪಾಧ್ಯಾಯಪ್ರೇರಿತ ಕವಿತಿಂಮ ವಿರಚಿತ ಕರ್ನ್ನಾಟಕ ವಚನ ರಚನೆಯ ಯಾದವಗಿರಿ ಮಾಹಾತ್ಮ್ಯೆಯೊಳ್ ಬದರಿಕಾಶ್ರಮಸ್ಥ ಮುನಿಜನ ಸಮಾಗಮನ ಯಾದವಗಿರಿದರ್ಶನ ನಾರಾಯಣಸೇವನ ತನ್ಮಹೋತ್ಸವಾದಿ ವರ್ನ್ನನಂ ಷೋಡಶಾಶ್ವಾಸಂ ಸಂಪೂರ್ಣಂ ||
ಅಂತು ಆಶ್ವಾಸ ೧೬ಕ್ಕಂ ಪದ್ಯ ೧೪೪೮ಕ್ಕಂ ಮಂಗಳಮಹಾ ಶ್ರೀ ||

ವಿಷಯ : ಯಾದವಗಿರಿ ಕ್ಷೇತ್ರದ (ಮೇಲುಕೋಟೆಯ) ಮಾಹಾತ್ಮ್ಯ.

ವಿಶೇಷ : ಅಕ್ಷರಗಳು ಸುಂದರವಾಗಿವೆ. ಕೊನೆಯಲ್ಲಿ ಮೂರು ಓಲೆಗಳ ಅಂಚು ಮುರಿದಿದೆ. ಶಕಟರೇಫದ ಬಳಕೆಯಿದೆ. ಮಧ್ಯೆ ಕೆಲವು ಓಲೆಗಳಲ್ಲಿ ಹುಳು ರಂಧ್ರ ಮಾಡಿವೆ. ಒಂದೆರಡು ಓಲೆಗಳು ಮುರಿದಿವೆ.

1376

ಕೆ. ೪೭೫ **ಯಾದವಗಿರಿ ಮಾಹಾತ್ಮ್ಯ** ಚಂಪು

೧೯.೯" × ೧.೬" ತಿಮ್ಮ ೧೬೭೭

೭೪ ಪತ್ರ ೭ ಪಂಕ್ತಿ ೮೨ ಅಕ್ಷರ

ಆದಿ : ಶ್ರೀ ಯಾದವಗಿರಿ ಮಾಹಾತ್ಮ್ಯೆ ||
ವೃತ್ತಾ|| ಶ್ರೀಮಾನಿನ್ಯಾನನಾಂಭೋರುಹ ವಿಕಸನ ಬಾಲಾರ್ಕ್ಕನಿಂದ್ರಾದಿದೇವ
ಸ್ತೋಮೋದ್ಯನ್ಮೌಳಿ ರತ್ನಾವಳೀರುಚಿ ವಿಲಸತ್ಪಾದ ಪಾನೀಯಜಾತಂ

ಕಾಮಪ್ರೋಲ್ಲಾಸರೂಪಂ ಮುನಿಗಣ ಹೃದಯಾಗಾರ ದಿವ್ಯತ್ಪ್ರದಿಪಂ
ಪ್ರೇಮಂಜೆತ್ತಾವಗಂ ಯಾದವಗಿರಿ ಪತಿಯೈಶ್ವರ್ಯಮಿತ್ತೋವುಗೆಂಮಂ ॥ ೧ ॥
x x x x
ಶ್ರೀಮಂತಂ ನೃಪವರ್ಯ ಪೂಜಿತಪದಂ ವೇದಾಂತ ತತ್ವಾರ್ಥನಿ
ಸೀಮಂ ವಿಷ್ಣುಪದಾಬ್ಜಭಕ್ತಿನಿರತಂ ಮಾಧುರ್ಯಭಾಷಂ ಬುಧ
ಸ್ತೋಮಾಮರ್ತ್ಯ ಧರಾರುಹಂ ವರಕಡಾಂಬೀಲಕ್ಷ್ಮಣಾಚಾರ್ಯನು
ದ್ದಾಮಂ ಸನ್ಮತಿಯಿತ್ತು ಪಾಲಿಸುಗುಜಸ್ರಂ ವೈಷ್ಣವಾಗ್ರೇಸರಂ ॥ ೧೦ ॥
x x x x
ವೃ ॥ ಕವಿಬೃಂದಾಮರ ಭೂರುಹಾಶ್ರಿತಮನಂ ಶ್ರೀವೇಣುಗೋಪಾಲಪಾ
ದ ವನೇಜಾತಮರಂದಸಾರ ರತಭೃಂಗಂ ಜಾಮದಗ್ನ್ಯಾನ್ವಯೋ
ದ್ಭವನಾನಂದದ ಚಿಕ್ಕದೇವನೃಪ ಕಾರುಣ್ಯೋಚಿತಂ ಮೋದದಿಂ
ಕವಿ ತಿಂಮಂ ಯದುಭೂಮಿಭೃನ್ಮಹಿಮೆಯಂ ಪೇಳ್ಗುಂ ಬುಧಾನುಜ್ಞೆಯಿಂ॥೧೪॥
ಕಂ ॥ ಕೃತಿನಾಥಂ ಯಾದವಗಿರಿ
ಪತಿ ಪ್ರೇರಕನೆಣಿಸೆ ಚಿಕ್ಕದೇವೋರ್ವಿಪನ
ಪ್ರತಿ ಕಥೆ ಯಾದವಗಿರಿ ರಂ
ಜಿತ ಮಾಹಾತ್ಮೆಯೆನೆ ಕೇಳದವರಿದನೊಳರೇ ॥ ೧೫ ॥

ಅಂತ್ಯ : ತ್ವರಿತದಿನಾದ್ಯಂ ವಿಷ್ಣುವಿ
ನುರುಧಾಮಮನೆಯ್ದಿ ಶೇಷ ಶೇಷಾಶನ ಮು
ಖ್ಯರೊಡನೊಡವೆಂದು ಹರಿಪದ
ಸರಸಿಜಸೇವಾತಿನಿರತರಾದರ್ಮುದದಿಂ ॥ ೧೧೯ ॥
ಗದ್ಯ ॥ ಇದು ವಿನಮದಮರವರ ಸರಸಿಜಭವ ಭವಮುಖ ಸುರಸಮುದಯ ಸುರುಚಿರ x x x ಯಾದವಗಿರಿ ಮಾಹಾತ್ಮೆಯೊಳ್ ಬದರಿಕಾಶ್ರಮ ಮುನಿಗಳೆಲ್ಲಂ ಯದುಶೈಲಕ್ಕಾಂ ಸಾರ್ದು ಹರಿಯಂ ಸೇವಿಸುತಿರ್ದುದಂ ಪೇಳ್ದ ಕಥಾ ವಿವರ್ಣನಂ ದ್ವಾದಶಾಶ್ವಾಸಂ॥ ಆಶ್ವಾಸಂ ೧೨ಕ್ಕಂ ಪದ್ಯ...ಕ್ಕಂ ಮಂಗಳ ಮಹಾ ಶ್ರೀ ॥ ಯಾದವಗಿರಿ ಮಾಹಾತ್ಮ್ಯಂ ಸಂಪೂರ್ಣಂ.

ವಿಷಯ : ಯಾದವಗಿರಿ ಕ್ಷೇತ್ರದ (ಮೇಲುಕೋಟೆಯ) ಮಾಹಾತ್ಮ್ಯೆ.

ವಿಶೇಷ : ಅಕ್ಷರಗಳು ಸುಂದರವಾಗಿವೆ. ಅಸಮಗ್ರಪ್ರತಿ. ೧೦, ೪೨, ೫೮ನೆಯ ಪತ್ರಗಳು ಮುರಿದಿವೆ. ೩ ಎಂದು ಕ್ರಮಾಂಕವಿರುವ ಎರಡು ಪತ್ರಗಳಿವೆ. ೭೫ನೆಯ ಪತ್ರ ಲುಪ್ತ.

1377

ಕೆ. ೪೭೧/೨	**ಯಾದವಗಿರಿ ಮಾಹಾತ್ಮ್ಯೆ**	ಚಂಪು
೧೮" × ೧.೭"	ತಿಮ್ಮ	೧೬೭೭
೧೪೦–೧೭೯ ಪತ್ರ	೯ ಪಂಕ್ತಿ	೪೩ ಅಕ್ಷರ

ಆದಿ : ....ಲವಿಂ ವಿಸ್ತಾರವಾಗಿ ಪೇಳ್ವಮನಮಾಗಿರ್ಕ್ಕುಂ ರಮಾವಲ್ಲಭಾ ॥ ೭೭ ॥

ಆದಲ್ಲದೆಯುಂ
ಕಂ ॥ ಪರಮಸುಖಂ ಪರಗತಿ ಮ
ದ್ಗುರುತಾತಂ ನೀನೆಯೆಂಬ ಮುನಿಗಳ ನುಡಿಯಂ
ಹರಿ ಕೇಳ್ದು ಪೇಳ್ದನಾ ಮುನಿ
ವರರಂ ಕೂರ್ತ್ತೊಂದು ವಾಕ್ಯಮಂ ನಸುನಗೆಯಿಂ ॥ ೭೮ ॥

ಅಂತ್ಯ : ಆರಯೆ ನಾರಾಯಣನತಿ
ಕಾರುಣ್ಯಂಬಡೆದು ವಿಸ್ತರಿಸಿದೀ ಕೃತಿಗಾ
ಶ್ರೀರಮಣೀ ಸಂಭದ್ರಮ
ನೋರಂತೆಸಗುವಿದರ್ಕ್ಕೆ ನಿಸ್ಸಂದೇಹಂ ॥ ೧೮೮ ॥

x x x x

ಗದ್ಯ ॥ ಯಿದು ವಿನಮದಮರ ವಿರಸ ಸರಸಿಜಭವಮುಖ ಸುರಸಮುದಯ ಸುರಚಿರ ಮುಕುಟನಿಕರ ಖಚಿತಮಣಿನಿಚಯ ರುಚಿಕಲಿತ ಯದುಗಿರಿಸದನ ನಾರಾಯಣ ಮೃದುಪದಲಲಿತ ಜಲರುಹಜನಿತ ಮಕರಂದರಸಾ.............. ... .ಬಿರುದೆಂತೆಂಬರಗಂಡ ಯದುಕುಲ ಶರಧಿ ರಾಕಾಸುಧಾಕರನಾದ ಚಿಕ ದೇವಮಹಾರಾಯನ ಕರುಣಾರಸಾಕಟಾಕ್ಷಾವಲೋಕನ ಮುದಿತ ಚಿಕುಪಾದ್ಯಾಯ ಪ್ರೇರಿತ ಕವಿತಿಂಮ್ಮ ವಿರಚಿತ ಕರ್ನಾಟಕ ವಚನ ರಚನೆಯ ಮಹಾತ್ಮೆಯೊಳ್ಬದರಿಕಾಶಮಸ್ಥ ಮುನಿಜನ ಸಮಾಗಮನ ಯಾದವಗಿರಿ ಯಾದವಗಿರಿ ದರ್ಶನ ನಾರಾಯಣಸೇವನ ತನ್ಮಹೋತ್ಸವಾದಿ ವರ್ನನಂ ಶೋಡಷಾಶ್ವಾಸಂ ಅಂತು ಆಶ್ವಾಸ ೧೬ಕ್ಕಂ ವೃತ್ತ ೮೬ ಕಂದ ೫೫೬ ವಚನ ೬೩ ಅಂತು ೧೪೬೧ಕಂ ಮಂಗಳಮಹಾ ಶ್ರೀ.

ವಿಷಯ : ಮೇಲುಕೋಟೆಯ ಮಹಾತ್ಮ್ಯೆ.

ವಿಶೇಷ : ಅಸಮಗ್ರ. ಆಶ್ವಾಸ ೫, ಪದ್ಯ ೭೮ರಿಂದ ಗ್ರಂಥ ಆರಂಭವಾಗಿದೆ. ಶಕಟರೇಫದ ಬಳಕೆಯಿದೆ. ೧೪೦ನೆಯ ಗರಿಯ ಅಂಚಿನಲ್ಲಿ ಮುರಿದಿವೆ. ಇವೇ ಕಟ್ಟಿನಲ್ಲಿ ದಶಕುಮಾರ ಚರಿತ್ರೆ ಮತ್ತು ಪಶ್ಚಿಮರಂಗಕ್ಷೇತ್ರದ ಮಹಾತ್ಮೆಯೂ ಇವೆ.

1378

ಕೆ.ಬಿ. ೫೫	**ಯಾದವಗಿರಿ ಮಾಹಾತ್ಮ್ಯ**	ಚಂಪು
೭.೩″ × ೬.೧″	ತಿಮ್ಮ	೧೬೭೭
೧–೨೪೧ ಪತ್ರ	೧೧ ಪಂಕ್ತಿ	೨೫ ಅಕ್ಷರ

ಆದಿ : ಯಾದವಗಿರಿ ಮಹಾತ್ಮ್ಯೆ ಬರಿಯುವದಕ್ಕೆ ನಿರ್ವಿಘ್ನಮಸ್ತು ॥

ವೃ ॥ ಶ್ರೀಮಾನಿನ್ಯಾನನಾಂಭೋರುಹ ವಿಕಸನ ಬಾಲಾರ್ಕನಿಂದ್ರಾದಿ ದೇವ
ಸ್ತೋಮಾದ್ಯನ್ಮೌಳಿರತ್ನಾವಳಿ ರುಚಿ ವಿಲಸತ್ಪಾದ ಪಾನೀಯ್ಯಜಾತಂ
ಕಾಮಪ್ರೋಲ್ಲಾಸರೂಪಂ ಮುನಿಜನ ಹೃದಯಾಗಾರದಿವ್ಯಪ್ರದೀಪಂ
ಪ್ರೇಮಂಬೆತ್ತಿತ್ತು ನಿತ್ಯಂ ಯದುಗಿರಿಪತಿ ಸೌಭಾಗ್ಯಮಂ ಪಾಲಿಕೆಂಮಂ ॥ ೧ ॥

ಅಂತ್ಯ : ಆರಯೆ ನಾರಾಯಣನತಿ
ಕಾರುಣ್ಯಂಬಡೆದು ವಿಸ್ತರಿಸಿದೀ ಕೃತಿಗಾ
ಶ್ರೀರಮಣೀಶಂ ಭದ್ರಮ
ನೋರಂತೆಸಗುಗುಮಿದರ್ಕೆ ನಿಸ್ಸಂದೇಹಂ ॥ ೧೯೬ ॥

x x x x

ಶ್ರೀ ಚಿಕ್ಕುಪಾಧ್ಯಾಯ ಪ್ರೇರಿತ ಕವಿತಿಂಮ ವಿರಚಿತ ಕರ್ನಾಟಕ ವಚನ ರಚನೆಯ ಯಾದವಗಿರಿ ಮಹಾತ್ಮ್ಯೆಯೊಳ್ ಬದರಿಕಾಶ್ರಮಸ್ಥ ಮುನಿಜನ ಸಮಾಗಮನ ಯಾದವಗಿರಿದರ್ಶನ ನಾರಾಯಣಸೇವನ ತನ್ಮಹೋತ್ಸವಾದಿ ವರ್ಣನಂ ಷೋಡಶಾಶ್ವಾಸಂ ॥ ಸಮಾಪ್ತಂ ॥
ಅಂತು ಆಶ್ವಾಸಂ ೧೬ಕ್ಕಂ ಪದ್ಯಕ್ಕಂ....ಮಂಗಳಮಹಾ ಶ್ರೀ.

ವಿಷಯ : ಯಾದವಗಿರಿ (ಮೇಲುಕೋಟೆ) ಸ್ಥಳಮಾಹಾತ್ಮ್ಯ.

ವಿಶೇಷ : ಅಕ್ಷರಗಳು ಸುಂದರವಾಗಿವೆ. ಕೆಲವು ತಪ್ಪುಗಳನ್ನು ತಿದ್ದಿದೆ. ಮೊದಲ ಸಂಖ್ಯೆಯ ಪತ್ರದಲ್ಲಿ "Compared on 26-6-01 ನರಹರಿ ಬರಮ ತಿರುನಾರೆಣ್ಯೆಂಗಾರ್ ಎಂದಿದೆ." ೧೧೮ನೆಯ ಪತ್ರದಲ್ಲಿ ಬರವಣಿಗೆಯಿಲ್ಲ.

1379

ಕೆ.ಬಿ. ೪೯೭	**ಯೋಗತಾರಾವಳಿ**	ಗದ್ಯ
೬.೪" × ೩.೯"	?	?
೧-೪೦ ಪತ್ರ	೧೨ ಪಂಕ್ತಿ	೧೧ ಅಕ್ಷರ

ಆದಿ : ಯೋಗತಾರಾವಳೀ ಗ್ರಂಥ ಬರೆಯುವಪಕ್ಕೆ ಶುಭಮಸ್ತು ॥
ಪರಶಿವನಲ್ಲಿ ಶಿವ। ಸಿವನಲ್ಲಿ ಶಕ್ತಿ । ಶಕ್ತಿಯಲ್ಲಿ ನಾದಾ । ನಾದದಿಂದ ಬಿಂಧು । ಬಿಂದುವಿನಿಂದ ಕಳೆ । ಕಳೆಯಿಂದ ಸದಾಶಿವ । ಸದಾಶಿವನಿಂದ ಮಹೇಶ್ವರ । ಮಹೇಶ್ವರನಿಂದ ರುದ್ರ । ರುದ್ರನಿಂದ ವಿಷ್ಣು । ವಿಷ್ಣುವಿನಿಂದ ಬ್ರಂಹ್ಮಾ । ಬ್ರಹ್ಮನಿಂದ । ಆತ್ಮಾ x x x ಯಿತಿಷ್ಟು ಕೂಡಾ ಕೂಡಾ ಕೂಡಿಕೊಂಡು ಯಿರುವದು ಯೀ ಶರೀರ ॥

ಅಂತ್ಯ : ಮನುಷ್ಯನಿಗೆ ಅವಸಾನಕಾಲ ಸಮೀಪವಾದ ಪಕ್ಷದಲ್ಲಿ ಶರೀರದಿಂದ ಜೀವನು ಹೊರಟುಹೋಗುವ ವಿಧವ ವಿವರಿಸುತ್ತಾ ಯಿಧೇನೆ. ಹಂಸರೂಪವಾದ ಬ್ರಂಹ್ಮ ಯಜ್ಞಾದಿ ಮೊದಲಾದ ಸತ್ಕರ್ಮಗಳ ಮಾಡಿ । ಅಪಾರ ಬ್ರಂಹ್ಮಾರ್ಪಣವಂನು ಮಾಡಿದರೆ ಮುಕ್ತನಾಗುವನೂ । ಯಿಂತೀ ಯೋಗತಾರಾವಳಿಗೆ ಜಯ ಮಂಗಳಂ ಶುಭಮಂಗಳಂ ಶ್ರೀಯೋಗತಾರಾವಳಿಗ್ರಂಥ ಸಮಾಪ್ತ ಮಂಗಳಂ ಮಹಾ ಶ್ರೀ.

ವಿಷಯ : ಯೋಗಶಾಸ್ತ್ರ ವಿಚಾರ.

ವಿಶೇಷ : ಮೋಡಿ ಅಕ್ಷರ

1380

ಕೆ. ೩೨೨/೨ **ಯೋಗದ ರಹಸ್ಯವು** ಶ್ಲೋಕ, ಟೀಕು

೧೩.೨" × ೨" ? ?

೨೩ನೆಯ ಪತ್ರ ೧೨ ಪಂಕ್ತಿ ೪೨ ಅಕ್ಷರ

ಆದಿ : ಶ್ರೀಶಿವಾಯನಮಃ ॥ ನೇತ್ರೇ ನಿಮೀಲಿತೇ ನಿತ್ಯಂ ಕಿಂಚಿದುನ್ಮೀಲಿತೇಽಪಿ ವಾ। ಯೋ ಮನಶ್ಚಕ್ಷುಷಾ ಬ್ರಹ್ಮಂ ಪಶ್ಯತೀತಿ ಸಟ್ ಯೋಗಿರಾಟ್ ॥
ಟ್ಕ ॥ ಆವಾತನು ನೇತ್ರೇ ನಿಮೀಲಿತೇ=ಕಂಣು ಮುಚ್ಚಿದರು। ಕಿಂಚಿದುನ್ಮೀಲಿತೇಽಪಿವಾ=ವೊಪ್ಪಚಿ ತೆರದರು ಮನಶ್ಚಕ್ಷುಷಾ=ಮನಸ್ಸೆಂಬ ಲೋಚನದಿಂದ ಬ್ರಹ್ಮ=ಪ್ರಾಣಲಿಂಗವನು ಪಶ್ಯತಿ=ಕಾಣುತ್ತಿದ್ದಾನು ಸಃ=ಆತನು ಯೋಗಿರಾಟ್=ಯೋಗೀಶ್ವರನು ॥ ೧ ॥

ಅಂತ್ಯ : ತಚ್ಛ್ರೀಗಿರೇಃ ಪಶ್ಚಿಮಸುಸ್ಥಲೇಽಸ್ತಿ ನಭಸ್ಥಲೀ ಕಾಪ್ಯಖಿಲೋತ್ತರೈವಾ । ದ್ವ್ಯಷ್ಟಾರಮಂತ್ರಾಬುಜಮಸ್ತಿ ಚಿತ್ರಂ ತತ್ರ ಸ್ಥಿತಸ್ತ್ವಂ ಶಿವಶೂನ್ಯರೂಪಃ ॥ ಶ್ರೀಗಿರಿಪಶ್ಚಿಮಸುಸ್ಥಲೇ=ಆ ಶ್ರೀಗಿರಿಯ ಪಶ್ಚಿಮದಲ್ಲಿ ಕಾಪ್ಯ ಖಿಲೋಕೋತ್ತರೈವ=ವೊಂದಾನೊಂದು ಸರ್ವಕ್ಕೆ ವುತ್ತರವಾದ ನಭಸ್ಥಲೀ=ಪಶ್ಚಿಮ ಚಕ್ರವು ಅಸ್ತಿ=ವುಂಟು ದ್ವ್ಯಷ್ಟಾರಮಂತ್ರಾಂಬುಜಮಸ್ತಿ=ಹದಿನಾರು ದಳದ ಪದ್ಮವುಂಟು ಚಿತ್ರಂ=ಚಿತ್ರವು ತತ್ರ=ಅಲ್ಲಿ ಶಿವ=ಯೆಲೆ ಶಿವನೆ ತ್ವಂ=ನೀನು ಶೂನ್ಯರೂಪಃ=ಶೂನ್ಯರೂಪನಾಗಿ ಸ್ಥಿತಃ=ಇರುತ್ತಿದ್ದೆ. ಭೂಚಕ್ರ ಅಧಿಕಾರಾವಸ್ತೆ। ಬ್ರಹ್ಮಚಕ್ರ ಭೋಗಾವಸ್ಥೆ। ಪಶ್ಚಿಮಚಕ್ರ ಲಯಾವಸ್ಥೆ ।ಅಲ್ಲಿ ಈಶ್ವರನು ಸದಾಶಿವನು ಶಿವನು ಕ್ರಮದಿಂದ ಇಹರು. ಸಮಾಧಿಯೆಂದು ಅಮನಸ್ಕವೆಂದು ವುನ್ಮನಿಯೆಂದು ಮನೋನ್ಮನಿಯೆಂದು ರಾಜಯೋಗವೆಂದರೂ ವೊಂದೇಯೆಂದು ಯೋಗದ ರಹಸ್ಯ ॥ ಶ್ರೀ ॥

ವಿಷಯ : ಪಶ್ಚಿಮ ಚಕ್ರ ಅಥವಾ ಶಿಖಾಚಕ್ರದ ರಹಸ್ಯ.

ವಿಶೇಷ: ಇದರೊಂದಿಗೆ ಏಕೋತ್ತರ ಶತಸ್ಥಲ, ಮಿಶ್ರಾರ್ಪಣದ ಟೀಕು ಮೊದಲಾದ ಗ್ರಂಥಗಳಿವೆ.

1381

ಕೆ.ಬಿ. ೨೯೭	**ಯೋಗಪ್ರಭಾವ ಸೂತ್ರ**	ಶ್ಲೋಕ, ಟೀಕು
೮" × ೬.೫"	ಏಕೋರಾಮ ಶಿವಯೋಗೀಶ್ವರ	?
೧–೭ ಪತ್ರ	೨೭ ಪಂಕ್ತಿ	೨೮ ಅಕ್ಷರ

ಆದಿ: ಶ್ರೀ x x x ಶೃಂಗಾಟಕೇ ಯಸ್ತು ಮನೋ ನಿಯಮ್ಯ ತ್ರಿಕೋಣಗಾಮಿ ಶಶಿ ಭಾಸ್ಕರಾಭ್ಯಾ

ಬಾಹ್ಯಾಂತರಂ ಗೋಪ್ರಣವೈವ ಗೋಜಿಃ ಅಷ್ಟಪದಾನಿ ಹಟರಾಜಯೋಗ
ಚಿತ್ರವಟತರೋರ್ಮೂಲೇ ವೃದ್ಧಾಶಿಷ್ಯಗುರುರ್ಯುದಾ
ಗುರೋಸ್ತು ಮೌನವ್ಯಾಖ್ಯಾನಂ ಶಿಷ್ಯಾಸ್ತು ಭಿಂನಸಂಶಯಾಃ ||

ಭರತಖಂಡದೊಳ್ ಪ್ರಸಿದ್ಧಮಾದ ಮೈಸೂರು ದೇಶಕ್ಕೆ ಸೇರಿದ ಚಿಕ್ಕನಾಯ್ಕನ ಹಳ್ಳಿ ತಾಲ್ಲೋಕು ಕಸಬ ಚಿಕ್ಕನಾಯ್ಕನ ಹಳ್ಳಿಗೆ ಪಶ್ಚಿಮದಿಕ್ಕಿನಲ್ಲಿ ಕೋಶ ದ್ವಯದಲ್ಲಿ ಇರತಕ್ಕ ಸ್ವೇತಗಿರಿಯ ಗುಹೆಯಲ್ಲಿ ಶ್ರೀಮಲ್ಲಿಕಾರ್ಜುನೇಶ್ವರ ಶಿವ ಲಿಂಗವು ಅನಾದಿ ಪ್ರಸಿದ್ಧವಾಗಿ ಯಿಹುದೂ. ಯಿಾ ಪರ್ವತವು ಮಹಾಶಿದ್ದರು ಗಳಿಂದ ನೇಮಿತವಾದದ್ದು ಯಿಾ ಶಿವಲಿಂಗದ ಸಮಿಾಪದ ವಾಮ ದಕ್ಷಿಣ ಪಾರ್ಶ್ವಗಳಲ್ಲಿ ಯಿರುವ ಗುಹೆಗಳೊಳ್ ವಂದರಲ್ಲಿ ವಿಷ್ಣುವು ಮತೊಂದರಲ್ಲಿ ಯಿಂದ್ರನು ಶಿಕರದಲ್ಲಿ ಯಿರುವ ಗುಹೆಯಲ್ಲಿ ಬ್ರಂಹ್ಮನು ಯೋಗಿಗಳಾಗಿ ವಾಸಾ ಮಾಡಿದರೆಂಬ ವಾರ್ಥಾ ಪ್ರಸಿದ್ಧವುಂಟು|ವಿಷ್ಣುಗುಹೆಯಲ್ಲಿ ಶ್ರೀಮನ್ಮಹಾರಾಮ ತಾರಕ ಹಟರಾಜ ರಾಜೇಶ್ವರ ಕುಂಬಕಸಿದ್ದರಾದ ದುಗ್ಬರಾದ ಕಾಲಜಿತರಾದ ಯೇಕೋರಾಮ ಶಿವಯೋಗೀಶ್ವರರು ಲಂಬಕಾಯೋಗವಂ ಪೂರಯಿಸಿದನಂತರ ಆ ಮಹಾ ಸಮಾದಿಕಾಲದಲ್ಲಿ ಶ್ರೀಜಗದೀಶ್ವರಪ್ರಸಾದದಿಂದಾ ಅನಂತಂ ಪ್ರಣಮೆ ದೇವಂ ನಾಗೇಶಂ ಪೀಡಸಿದ್ದಯೇ | ಮಣಿಬ್ರಾಭೀಕ್ಷಣಫಣಾಸಹಸ್ರ ವಿದೃರ ವಿಶ್ವಂಬರಾ ಮಂಡಲಾಯ ಅನಂತರಾಯ ನಾಗರಾಜಾಯ ನಮಃ ಕುಂಡಲಿಯಂಬ ನಾಗರಾಜನ ಅನಂತಾಕಾರವಾಗಿ ಸಮಾಧಿಗೆ ಕುಂತಾ ಗುಹಾ ಶಿಲೆಯ ಮ್ಯಾಲೆ ವಾಲ್ಮೀಕಂ ವುದಯಿಸಿರುವದರ ಬಳಿಯಲ್ಲಿ ಪ್ರಸನ್ನರಾದ ಶ್ರೀ ಗುರುದತ್ತಾತ್ರೆಯರ ಅಪ್ಪಣೆಯ ಪ್ರಕಾರ ಅವರಿಂದ ಶ್ರೀಯೋಗಪ್ರಭಾವ ಸೂತ್ರವು ರಚಿಸಲ್ಪಟ್ಟಿತು. ಗುಣಜ್ಞರಾದ ಸಜ್ಜನರು ಯಿದನ್ನು ನೋಡಿ ಸಂತೋಷಪಡದೆ ಯಿರಲಾರರೆಂದು ನಂಬಲ್ಪಟ್ಟಿದೇ|| ಉಪನಿಷತ್ತು ಸೂತ್ರಗಳು ||

ವಡ್ಯಾಣಪೀಠೇ ನಿರ್ದ್ವಂದ್ವೇ ನಿರಾಲಂಬೇ ನಿರಂಜನೇ ತತಃ |
ಪಂಕಜಮಧ್ಯಸ್ತಂ ಚಂದ್ರಮಂಡಲಮದ್ಯಗಂ ನಾರಾಯಣಮನುಧ್ಯಾಯೇತ್
ಸ್ರವಂತಮಮೃತಾಸದಾ.

x x x x ಕೇವಲ ರಾಜರಾಜೇಶ್ವರ ಕುಂಭಾಪ್ರಭದವವೂ ॥ ಟೀಕು ॥ ಸತ್ಯಸ್ವರೂಪನಾದ ಶ್ರೀಗುರುದತ್ತಾತ್ರೇಯ ಸ್ವಾಮಿಗಳವರು ಅವ್ಯಾಜಕರುಣೆ ಯಿಂದ ಅನುಗ್ರಹಿಸಿದ ಕೇವಲ ಕುಂಭವ ರಾಜರಾಜೇಶ್ವರ ಕುಂಭಕಗಳ ಪ್ರಭಾವವನ್ನು ಬ್ರಹ್ಮವಿದ್ಯಾಕಾಂಕ್ಷಿಗಳ ದಾರ್ಢ್ಯಕೋಸುಗ ಶ್ರೀಸ್ವಾಮಿಗಳವರ ತನುಜ್ಞೆಯಂತೆ ಯಥಾಮತಿ ವಿವರಿಪೆನು॥ ಅದೆಂತೆಂದೊಡೆ ಆಕಾಶತತ್ವದಲ್ಲಿಯೆ ವುಳಿದ ತತ್ವಂಗಳೆಲ್ಲವು ವ್ಯಕ್ತವಾಗಿಹವು.

ಅಂತ್ಯ : ಯಿದುವೆ ಸಗುಣಸಮಾದಿ ಯಿದು ಜನ್ಮಾಂತರದಿಂದಲು ಬಂದ ಯೀ ಜಂನ್ಮ ದಲ್ಲಿಯೂ ಮೇಲಿನ ಮಹಾವಿದ್ಯಾಪ್ರಾರಂಭಕ್ಕೆ ಮಾನಸೋಪಾಸನೆಯು ಆವಶ್ಯಕವಾಗಿ ಯಿರಬೇಕಾದದ್ದು ಪ್ರಾಣವೆಂಬ ಚಂದ್ರನನ್ನು ಕ್ಷೀಣಗತಿ ಹೊಂದಿಸದೆ ಕಾಪಾಡಿಕೊಳ್ಳಲು ಅಪೇಕ್ಷೆಯುಳ್ಳವರಿಗೆ ಯಿದು ಮುಂದೆ ಯಿದರ ಪ್ರಭಾವಚಕ್ರ ವಿಸ್ತರಿಸಲ್‌ಪಡುವದು.

ವಿಷಯ : ಯೋಗವಿಚಾರ.

ವಿಶೇಷ : ನೋಡಿ ಅಕ್ಷರ. ಕೊನೆಯಲ್ಲಿ ಚಿದಂಬರ ಚಕ್ರವಿದೆ. ಅಸಮಗ್ರ ಪ್ರತಿ.

1382

ಕೆ.ಎ. ೪೫/೧ **ಯೋಗರತ್ನಾಕರ** ಕಂದ

೧೨.೯" × ೭.೯" ಶಾಂತರಸ ಸು. ೧೬೦೦

೧–೬೦ ಪತ್ರ ೨೨ ಪಂಕ್ತಿ ೨೩ ಅಕ್ಷರ

ಆದಿ : ಯೋಗರತ್ನಾಕರ ॥ ಶಾನ್ತರಸನೆಂಬ ಜೈನಕವಿ ವಿರತವಾದದ್ದು ॥

ಶ್ರೀಮದಮರೇಂದ್ರವಂದಿತ
ಕಾಮಾಂತಕನಮಳ ಬೋಧನಕ್ಷಯನನಘಂ
ಕಾಮಿತ ಫಲಪ್ರದಾಯಕ
ನೇಮಿಜಿನಂ ಮಾಳ್ಕೆ ನಮಗೆ ಶಾಶ್ವತ ಸುಖಮಂ ॥ ೧ ॥
ಪರಮ ಜಿನೇಂದ್ರರು ಸಿದ್ಧರು
ನಿರುಪಮರಾಚಾರ್ಯರುಪಾಧ್ಯಾಯರುಂ ಸರ್ವಸಾಧುಗಳುಂ
ನಿರವದ್ಯರಿನ್ದ್ರವಂದಿತ
ಪರಮೇಷ್ಠಿಗಳೈವರಿಗತೀಂದ್ರಿಯ ಸುಖಮಂ ॥ ೨ ॥
ಪರಮ ಜಿನೇನ್ದ್ರರ ಮುಖಸರ
ಸಿರುಹದೊಳುದ್ಭವಿಸಿ ಧರೆಗೆ ವಾಗ್ದೇವಿಯೆನಲು
ಕರಮೆಸವುತಿರ್ದ ಶ್ರೀ ವಧು
ವಿರದೀಗೆಮಗಿಷ್ಟಸಿದ್ಧಿಯಂ ಸನ್ಮತಿಯಂ ॥ ೩ ॥

ಆದ್ಯರನೇಕರ್ ಪೇಳ್ದರ
ಭೇದ್ಯಮೆನಿಪ್ಪಾತ್ಮ ತತ್ವಮಂ ಪಲತೆರದಿಂ
ಹೃದ್ಯಮೆನೆ ಪಲರಿಗರಿಯ
ಲ್ಕಾದ್ಯನ್ತಮು ಶೂಂನ್ಯಮೆನಿಪ ತತ್ವದ ತೆರನಂ ॥ ೪ ॥
ಪ್ಠೋಕದೊಳಂ ಗಾಹೆಗಳೊಳ
ನೇಕಂದೂಹೆಗಳು ಸಕ್ಕೈಜಂ ಚೂರ್ಸಿಗಳಿಂ
ಪ್ರಾಕಟಮೆ ಫಲತೆರದಿಂ
ದೇಕತ್ವಮನರಿಯ ಪೇಳ್ವರಾರ್ಯರಿದನೂ ॥ ೫ ॥
ಜಿನಮತಮನಖಿಳಮುನಿ
ಜನವಿನುತಮನಧ್ಯಾತ್ಮಗ್ರನ್ಥಮಂ ಕಂನ್ನಡದಿಂ
ಜನಕೆಲ್ಲರರಿವ ಪೇಳ್ವೇಂ
ಮನಕೀಪ್ಸಿತಮೆನಿಪ ಯೋಗರತ್ನಾಕರಮಂ ॥ ೬ ॥
ತದ್ಭಾಷೆಯಿಂದ ನೋಳ್ಪೊಡ
ಮುದ್ಭವಮೆನಿಸಿದ್ದ ಯೋಗಶಾಸ್ತ್ರಮನಿದನಾಂ
ಸದ್ಭಕ್ತಿಯಿಂವ ರಚಿಸಿದೆ
ತದ್ಭಾವದಿನರಿವ ತೆರನ ಜಿನಮತಮನಿದಂ ॥ ೭ ॥

ಅಂತ್ಯ : ಅಷ್ಟಾಂಗಯೋಗನೆಂಬುದು
ಶಿಷ್ಟಂ ನೆರೆಕಲ್ತು ನೆಗಳ್ವ ಯೋಗಿಗದೆಂತು
ದೃಷ್ಟಾಂತ ಮುಕ್ತಿಯಕ್ಕುಂ
ಶ್ರೇಷ್ಟವೆನಿಪ್ಪೊಂದು ಸುಖಮು ಭೋಗಮುಮಕ್ಕುಂ ॥ ೪೨ ॥
ಇಂತೀ ಯೋಗಾಷ್ಟಾಂಗಮ
ನೆಂತುಂ ನೆರೆಕಲ್ತು ನೆಗಳ್ವ ಯೋಗಿಗಳೆಂತುಂ
ಭ್ರಾಂತುಳಿದು ಮುಕ್ತಿ ಪಡೆವರು
ಶಾಂತರಸಂ ಪೇಳ್ದ ಯೋಗಮೆಂಟನೆಯಂಗಂ ॥ ೪೩ ॥
ಸಂಪೂರ್ಣಂ ॥ ಧ್ಯಾನ ಲಕ್ಷಣ ಪ್ರಾರಂಭಂ ।
ದಶಪ್ರಾಯಗಳಂ ಕಟ್ಟಿ ಯಿಡಾಪಿಂಗಳಿಗಳೆರಡಂ ಬೆರಸಿ 'ಮೂಲಾಧಾರದಿಂದೊ ಡ್ಯಾಣ ಬಂಧವನೆಸಗಿ ಬ್ರಂಹ್ಮರಂಧ್ರಕ್ಕೆ ವಾಯುವನೇರಿಸಿ ನಿಲಿಸಿ x x x ಮತ್ತಂ ಭೇದಭಾವನೆಯಂ ಭಾವಿಸಿ ತನ್ನಾತ್ಮನುಂ ಅಸಿದ್ಧ ಪರಮೇಷ್ಟಿ ಯಂತೆಂದು ಭಾವಿಸುವುದು. ಇಂತಿಲ್ಲಿಗೆ ಯೋಗಲಕ್ಷಣಂ ಸಂಪೂರ್ಣಮಾದುದು.

ವಿಷಯ : ಜೈನಮತ ಪ್ರಕ್ರಿಯೆಯಂತೆ ಯೋಗವಿಚಾರ.

ವಿಶೇಷ : ದೊಡ್ಡ ಅಕ್ಷರ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಇದೇ ಪುಸ್ತಕ ದಲ್ಲಿ ದ್ವಾದಶಾನುಪ್ರೇಕ್ಷೆ ಮತ್ತು ಲೋಕಸ್ವರೂಪ ಎಂಬ ಕೃತಿಗಳಿವೆ.

1383

ಕೆ.ಬಿ. ೩೯/೧ **ಯೋಗರತ್ನಾಕರ** ಕಂದ

೭.೮" × ೬.೧" ಶಾಂತರಸ ಸು. ೧೬೦೦

೧-೬೬ ಪುಟ ೧೮ ಪಂಕ್ತಿ ೨೩ ಅಕ್ಷರ

ಆದಿ : ಶ್ರೀ x x x ಅಷ್ಟಾಂಗವಂನು ಬರೆಯುವದಕೆ ಶುಭಮಸ್ತು ||
ಯೋಗರತ್ನಾಕರಸಿಧಿ ನಿಮಿತ್ಯರ್ಥಂ ಲಿಖ್ಯತೆ ||
ಶ್ರೀಮದಮರೇಂದ್ರವಂದಿತ
ಕಾಮಾಂತಕನಮಳ ಬೋಧನಕ್ಷಯಮನಘಂ
ಕಾಮಿತಫಲಪ್ರದಾಯಕ
ನೇಮಿಜಿನಂ ಮಾಳ್ಕೆ ನಮಗೆ ಶಾಶ್ವತಸುಖಮಂ || ೧ ||
ಪರಮ ಜಿನೇಂದ್ರರು ಸಿದ್ಧರು
ನಿರುಪಮರಾಚಾರ್ಯರುಪಾಧ್ಯಾಯರು ಸರ್ವಸಾಧುಗಳುಂ
ನಿರವದ್ಯರಿಂದ್ರವಂದಿತ
ಪರಮೇಷ್ಠಿಗಳೈವರಿಗತೀಂದ್ರಿಯ ಸುಖಮಂ || ೨ ||

x x x x

ಜಿನಮತಮನಖಿಳ ಮುನಿಜನ
ವಿನುತಮನಧ್ಯಾತ್ಮಗ್ರಂಥಮ ಕನ್ನಡದಿಂ
ಜನಕೆಲ್ಲವರಿಯೆ ಪೇಳ್ದಿಂ
ಮನಕೀಪ್ಸಿತಮೆನಿಪ ಯೋಗರತ್ನಾಕರಮಂ || ೬ ||

ಅಂತ್ಯ : ಅಷ್ಟಾಂಗಯೋಗಮೆಂಬುದ
ಶಿಷ್ಟಂ ನೆರೆಕಲ್ತು ನೆಗಳ್ದ ಯೋಗಿಗದೆಂತುಂ
ದೃಷ್ಟಾಂತ ಮುಕ್ತಿಯಕ್ಕುಂ
ಶ್ರೇಷ್ಠವೆನಿಪೊಂದು ಸುಖಸು ಭಾಗ್ಯಮುಮಕ್ಕುಂ || ೪೨ ||
ಯಿಂತೀ ಯೋಗಾಷ್ಟಾಂಗಮ
ನೆಂತುಂ ನೆರೆಕಲ್ತು ನೆಗಳ್ದ ಯೋಗಳೆಂತ್ತುಂ
ಭ್ರಾಂತುಳಿದು ಮುಕ್ತಿ ಪಡೆವರು
ಶಾಂತರಸಂ ಪೇಳ್ದ ಯೋಗ ಯಂಟನೆಯಂಗಂ || ೪೩ ||
ಅಂತು ಅಷ್ಟಾಂಗಕಂ ಕಂದಪದ್ಯ ೪೯ಕಂ ಮಂಗಳಮಹಾ ಶ್ರೀ.

ವಿಷಯ : ಜೈನಮತ ಪ್ರಕ್ರಿಯೆಯಂತೆ ಯೋಗವಿಚಾರ.

ವಿಶೇಷ : ಈ ಕೃತಿಗೆ ಮೊದಲು ಎರಡು ಪುಟಗಳಲ್ಲಿ ದಶಭಕ್ತಿ ಎಂಬ ಸ್ತೋತ್ರವೂ ಒಂದು ಪುಟದಲ್ಲಿ ವಿಷಯಸೂಚಿಯೂ ಇದೆ. ಈ ಗ್ರಂಥವಾದಮೇಲೆ ೪ ಪುಟ

ಗಳಲ್ಲಿ ಧ್ಯಾನಲಕ್ಷಣವಿದೆ. ಬಳಿಕ ಜೈನಮತಪ್ರಕ್ರಿಯಾನುಸಂಕಲನ ಗ್ರಂಥವಿದೆ. ಮಧ್ಯದಲ್ಲಿ ಕಂತಿ ಪ್ರಸಂಗವಿದೆ. ಕೊನೆಯ ಎರಡು ಪುಟಗಳಲ್ಲಿ ಸೀನು ಮತ್ತು ಸ್ವಪ್ನಫಲವಿದೆ.

1384

ಕೆ. ೨೦/೧ **ಯೋಗಾಮೃತ** ವೃತ್ತ, ಕಂದ

೯.೧″ × ೧.೪″ ? ?

೧೦–೨೧ ಪತ್ರ ೬ ಪಂಕ್ತಿ ೩೮ ಅಕ್ಷರ

ಆದಿ : ವಸುದೇಂದ್ರವ್ರಾತದೇವ ಪ್ರಭುತತಿವಿನುತಂ ನಿತ್ಯಮತ್ಯಂತ ಶಾಂತಂ
ರಸ ಗಂದ ಸ್ಪರ್ಶ ವರ್ನ್ನಂ ಅಘಹರನಭವಂ ವಿಶ್ವತತ್ವಪ್ರಕಾಶಂ
ಸ್ವಸಹಾಯಂ ನಿಃಕಳಂಕಂ ಸುಖದ ಪರಮ ಚಿದ್ರೂಪನಪ್ಪಾತ್ಮನಂ ವಂ
ದಿಸಿ ಭವ್ಯಾನಂದ ಯೋಗಾಮೃತದ ಮಹಿಮೆಯಂ ಭವ್ಯಲೋಕಕ್ಕೆ ಪೇಳ್ವೆಂ ||

ಅಂತ್ಯ : ಪರಿಣಾಮಮೊಂದೆ ದುಃಖದ
ಬರವಿಂಗಂ ಸೌಖ್ಯದೇಳಿಗಂ ಕಾರಣಮಾ
ಪರಿಣಾಮದಿಂದಂ ದುಃಖಂ
ಪರಿಹರಿಸುವ ಸೌಖ್ಯಮಪ್ಪ ಪಾಂಗಿಂ ನೆಗಳಾ || ೧೦೧ ||
ಭವ್ಯಾಳಿಗೆ ಹೀನಂ ಸ್ವ
ದ್ರವ್ಯಾರಾಧನೆಯೆ ಮೋಕ್ಷಮಿದಱಿಂದಕ್ಕು
ನಿವ್ವ್ಯಾರ್ಜಲಯೋಗಿ ಪರ
ದ್ರವ್ಯಾರಾಧನೆ ಶುಭಾಶುಭಂಗಳೆನಿಕ್ಕುಂ || ೧೦೨ ||
ಯೋಗಾಮೃತ ಸಮಾಪ್ತಂ || ಶ್ರೀ ||

ವಿಷಯ : ಜೈನತತ್ವ.

ವಿಶೇಷ : ಶಕಟರೇಫ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಲೋಕಾಕಾರ ಸ್ವರೂಪ, ದೇವರಾಜವಲ್ಲಭಾಷ್ಟಕ ಇತ್ಯಾದಿ, ಅನುಪ್ರೇಕ್ಷೆ, ಶಾಸ್ತ್ರಸಾರ ಸಮುಚ್ಚಯ, ಜಿನೇಶ್ವರಾಷ್ಟಕ ಎಂಬೀ ಗ್ರಂಥಗಳಿವೆ.

1385

ಕೆ.ಬಿ. ೨೫೮/೨ **ರಂಗಧಾಮಪುರುಷವಿರಹ ಸಾಂಗತ್ಯ** ಸಾಂಗತ್ಯ

೮″ × ೬.೬″ ಚಿಕ್ಕುಪಾಧ್ಯಾಯ ೧೬೭೨

೧೧–೧೪ ಪತ್ರ ೨೬ ಪಂಕ್ತಿ ೩೨ ಅಕ್ಷರ

ಆದಿ : ಪುರುಷವಿರಹ ಸಾಂಗತ್ಯ

ಶ್ರೀರಮಣೀಶನ ಸಾಸಿರ ನಾಮದೊಳ್
ಗೌರೀಶನು ಬೋದಿಸಿದ
ಚಾರು ವಿಭವದ ರಾಮನಾಮದ ಮಹಿಮೆಯ
ಶ್ರೀರಂಗನಿಗೆರಗುವೆನು || ೧ ||

ಅಂತ್ಯ : ಮಂಗಳಮಹಿಮನ ಪುರುಷವಿರಹದೊಂದು
ಸಂಗತ್ಯದ ಸಂಗತಿಯೊಳು
ವ್ಯಂಗ್ಯೊಕ್ತಿಯಿಂ ಚಿಕುಪಾದ್ಯಕೃತಮಿದಕ್ಕೆ
ಮಂಗಳ ಶ್ರೀ ಶ್ರೀ ಶ್ರೀ ಶ್ರೀ ||
ಚಿಕ್ಕದೇವರಾಯನೊಲ್ದಯೆ ನಿಮಿತ್ತಕ್ಕಾಗಿ
ಚಿಕುಪಾದ್ಯನೊರೆದ ಸಂಗತ್ಯ
ಪ್ರಕಟದಿಂದಾಚಂದ್ರಾರ್ಕವೆತ್ತಿರುತಿರ್ಕೆ
ಸಕಲರ್ಗೆ ಮಂಗಳ ಶ್ರೀ ಶ್ರೀ || ೧೦೨ ||
ಅಂತು ರಂಗಧಾಮ ಪುರುಷವಿರಹ ಸಾಂಗತ್ಯ ಸಮಾಪ್ತ ಮಂಗಳಮಹಾ ಶ್ರೀ

ವಿಷಯ : ರಂಗನಾಥದೇವರ ವಿರಹವರ್ಣನೆ

ವಿಶೇಷ : ಮೋಡಿ ಬರಹ. ಇದೇ ಪುಸ್ತಕದಲ್ಲಿ ಪಶ್ಚಿಮರಂಗಧಾಮಸಾಂಗತ್ಯವೆಂಬ ಗ್ರಂಥವಿದೆ.

1386

ಕೆ.ಎ. ೨೫೧/೨	**ರಟ್ಟಿನ ಜಾತಕ**	ಕಂದ, ವೃತ್ತ
೧೨.೮" × ೮"	ಗಂಗಾಧರ	ಸು. ೧೬೦೦
೧–೩೦ ಪತ್ರ	೧೭ ಪಂಕ್ತಿ	೧೮ ಅಕ್ಷರ

ಆದಿ : ರಟ್ಟಿನ ಜಾತಕ ||
ಕಂದಂ || ಪುನರುಕ್ತಮಿದಪಶಬ್ದ ಮಿ
ದೆನಲಾಗದು ವೈದ್ಯ ಜೋಯಿಸಂಗಳೊಳೆತ್ತಂ
ಜನಕರಹಿತಮಂ ಪ್ರತಿಬೋ
ಧನೆಯಂ ಕೈಕೊಳ್ಳುವ..ವರಾ ಮುನಿಮುಖ್ಯರ್ || ೧ ||
ಮೃದು ಮಧುರಂ ಗಂಭೀರಂ
ಸದಳಂಕಾರ ಪ್ರಸಂಗದಿಂ ನಿಮಿದರ್ಾತ್ರ್ಥಂ
ಸದಮಳವಿಶಾಕೃತಿಯೆಂದತಿ
ವಿದಗ್ಧ ದೈವಜ್ಞರರಿದು ಪೇರ್ಚಿರೆ ಮನದೊಳ್ || ೨ ||

ಅಂತ್ಯ : ವಿದಿತೋಚ್ಚದೊಳಕ್ಕೆವು
ಕೂಡಿನಿಂದು ಮತ್ತಾಯುಷ್ಯಫಲಮಂ ಮೂ
ವಡಿವಾಳ್ಪದು ಗಂಗಾ
ಧರನ ವಚನೋಕ್ತಿಯಿಂ ದೈವಜ್ಞಾ || ೯೪ ||

x x x x

ಅನಿಮಿಷ ಮಂತ್ರಿಗಾಯುಸುತ ಷಡ್ವ್ಯಯದೊಳ್ (೧೧-೫-೬-೧೨) ಶಶಿಜಂಗೆ ಕರ್ಮ ಷ.
ಡ್ವನನಿಧನಾಯ ಧರ್ಮದೆಡೆಯೊಳ್ (೧೦-೬-೮-೧೧) ಸಸಿಭೃಗುಜಂಗೆ ಷಡ್ವ್ಯತ್ತ (೬-೧೨-೧೧) ಮಾಯದೊಳ್
ದಿನಪತಿ ನಷ್ಟಮಾಯಧನ ಕೇಂದ್ರದೊ (೮-೧೧-೨-೧-೪-೭)
ಳಿಂದುಗೆ ಷಟ್ತ್ರಿಕಾಯದೊಳ್ (೬-೩-೧೧) ಶನಿ ಶುಭದಂ ಫಲಂ ||
ಇತಿ ಜಾತಕಫಲಂ ಸಮಾಪ್ತಂ ||

ವಿಷಯ : ಜ್ಯೋತಿಷಫಲಶಾಸ್ತ್ರ.

ವಿಶೇಷ : ಇದೇ ಪುಸ್ತಕದಲ್ಲಿ ಲೋಕೋಪಕಾರವೆಂಬ ಗ್ರಂಥ ಇದೆ. ಪತ್ರದ ಒಂದು ಕಡೆ ಮಾತ್ರ ಬರವಣಿಗೆಯಿದೆ. ಉಪಲಬ್ಧ ಗ್ರಂಥದಲ್ಲಿ ೧೨೪ ಪದ್ಯಗಳಿವೆ. ಗ್ರಂಥದಲ್ಲೆಲ್ಲೂ ರಟ್ಟನ ಹೆಸರು ಕಂಡುಬರುವುದಿಲ್ಲ. ಮಂಗಳಪದ್ಯವಿಲ್ಲ. ಗ್ರಂಥವೂ ಸಮಗ್ರವಾಗಿರುವಂತೆ ತಿಳಿದು ಬರುವುದಿಲ್ಲ. ಕವಿಗೆ ಉಭಯ ಕವಿರತ್ನ, ಉಭಯಕವಿತಾಭರಣ, ಸತ್ಕವಿತಾಮನೋಹರ ಎಂಬ ಬಿರುದು ಗಳಿದ್ದಂತೆ ತಿಳಿದುಬರುತ್ತದೆ. ತಂದೆಯ ಹೆಸರು ತೊಮ್ಮಣಾರ್ಯ, ಅಣ್ಣ ನರಸಿಂಹ. ಕವಿ ಶ್ರೀವತ್ಸಗೋತ್ರದವನು.

1387

ಕೆ.ಎ. ೪೨	ರಟ್ಟಮತ	ಕಂದ, ರಗಳೆ, ತ್ರಿಪದಿ
೧೩" × ೭.೯"	ರಟ್ಟಕವಿ (ಅರ್ಹದ್ದಾಸ)	ಸು. ೧೩೦೦
೧-೧೪೭ ಪತ್ರ	೨೩ ಪಂಕ್ತಿ	೧೬ ಅಕ್ಷರ

ಆದಿ : ರಟ್ಟಮತ
ಶ್ರೀಯಂ ನಿಜಪಾದದ್ವಯ
ತೋಯದೊಳ್ತಾಳ್ದ ಮೋಕ್ಷಲಕ್ಷ್ಮಿಯಿನೆಸೆದಿ
ರ್ದಾರ್ಯುತ ಕೀರ್ತಿ ಜಿನೇಂದ್ರಂ
ಶ್ರೇಯಾಂಸಂ ನಮಗೆ ಮಾಳ್ಕೆ ಸೌಖ್ಯವಹಮಂ || ೧ ||

x x x x

ಜನಕನುರಾಗದೆ ನೆಗಳ್ದಂ
ಜನನುತಗುಣಿ ವಿತತ ಕೀರ್ತ್ತಿರಮಣೀರಮಣಂ
ಮನಸಿಜಸಂನಿಭನೆನಿಸಿದ
ವಿನಯ ಗುಣೋತ್ತುಂಗನೆಸೆವ ಜಿಟ್ಟವೆಡಂಗಂ || ೨೩ ||
ಗುಣಪಕ್ಷಪಾತಿ ಭೂತುಗ
ನಣುಗಂ ವಿನಯಾಂಬುರಾಶಿ ಸುಕನಿನಿದಾನಂ
ಪ್ರಣತ ಜಿನಭಕ್ತನೊಳು ಪೀನ
ಕೆಣಿ ನಿರ್ಮ್ಮಲಕೀರ್ತಿ ನೇಮಿ ಪುಸಿಧರಶೂಲಂ || ೨೪ ||
ಎಂಬ ಪೆಸರೆಸೆಯೆ ನೆಗಳ್ದ ಭ
ಯಾಂಬುಧಿ ನಿಜಸುತೆಗೆ ಚಂದ್ರಲೇಖೆಗೆ ಮೇಘಾ
ಡಂಬರಮನತಿಶಯೋಕ್ತಿಯಿ
ನಿಂಬಾಗಿರೆ ತಿಳಿಯಪೇಳ್ದಪಂ ಕಂನಡದಿಂ || ೨೫ ||

ಅಂತ್ಯ : ಧಾತುವಿನೊಳಗ್ನಿಗರ್ಭನಿ
ಪಾತ ಮಹಾಜ್ವರ ಭಯಂಗಳ ಬೆಳಸುಂ
ಭೂತಳದೊಳಗರ್ಘವಿಲ್ಲೆಂ
ದೀತೆಱದಿಂ ಪೇಳ್ದಬಲ್ಲನುರ್ವರಿಗೆಲ್ಲಂ || ೮೪೮ ||
ಯಿಾಶ್ವರದೊ............
............ರೆನಿಪರು ಸಮಸ್ತ ಧಾನ್ಯಂ ಬೆಳೆಗುಂ
ದೇಶದೊಳಗರ್ಘಂವಿಲ್ಲಂ
ಲೇಸೆನಿಸಿ ಬೆಳೆ................ || ೮೪೯ ||

ವಿಷಯ : ಸಂವತ್ಸರ ಫಲ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರವಣಿಗೆ ಇದೆ ಶಕಟರೇಫದ ಬಳಕೆ ಇದೆ. ಅಸಮಗ್ರ ಪ್ರತಿ. ಆದಿಯಲ್ಲಿರುವ ಕ್ರಮಾಂಕವಿಲ್ಲದ ಪ್ರತ್ಯೇಕ ನಾಲ್ಕು ಪತ್ರಗಳಲ್ಲಿ ೩೫ನೆಯ ಪದ್ಯದವರೆಗಿನ ವಿಷಯ ಮತ್ತು ರಟ್ಟಕವಿಯ ಕೆಲವು ಅಂಕಿತಗಳ ವಿವರವಿದೆ.

1388

ಕೆ. ೨೦೬ **ರಟ್ಟಶಾಸ್ತ್ರ** ಗದ್ಯ

೫.೮" × ೧.೨" ? ?

೧–೩೬ ಪತ್ರ ೨ ಪಂಕ್ತಿ ೨೫ ಅಕ್ಷರ

ಆದಿ : ಶ್ರೀ x x x ರಟ್ಟಶಾಸ್ತ್ರವ ಬರೆಯುದಕೆ ಶುಭಮಸ್ತು ॥ ಶ್ರೀರಂಗನಾಥ ಸ್ವಾಮಿ ॥

ಪ್ರಭವ ಸಂವತ್ಸರಕ್ಕೆ–ಮಳೆ ಬೆಳೆ ಅಲ್ಪ । ಅವಿಯೋಗದಿಂದ ಕಂಟಕಮುಕ್ಕು । ಕಾರುಮಳೆವುಂಟು । ಹತ್ತಿ ವುಪ್ಪು ಅವುಡಲ ಕೊಂಡು ಯಿರಿಸಿಕೊಂಬುದು । ಅರಸುಗಳಿಗೆ ರಾಜಿಕ । ಯಿದು ವಿಪರೀತಕಾಲವೆನಿಸಿಕೊಂಬುದು । ಮೃಗಜಾತಿ ಗಳಿಗೆ ವಳಿತು । ರತ್ನಸ್ವರೂಪಂಗಳು ಅಧಿಕವಾರುಂಟು । ಆನೆ ಕುದುರೆ । ವಂಟೆ ನಿಂತು ಮಾರಕ್ಕು । ಜಲ್ಲಿ ಪಟ್ಟಪರಿಮಳ ದ್ರವ್ಯ । ನಿಂತು ಮಾರುವವು। ಮೃಗಜಾತಿಗಳಿಗೆ ಬೇಂಟೆಯಿಲ್ಲ। ಅಡಕೆ ಯಲೆ ಮೆಣಸು ಮಧ್ಯಗತಿಯಲ್ಲಿ ಮಾರುವುವು । ಜೀವದನಗಳಿಗೆ ರೋಗಮುಕ್ಕು । ವೆವಹಾರ ಬೇಹಾರಿಗಳಿಗೆ ಅಲ್ಪಲಾಭ ॥ ೧ ॥

ಅಂತ್ಯ : ಕ್ಷಯ ಸಂವತ್ಸರಕ್ಕೆ–ಮುಂಗಾರುಮಳೆ ಮಧ್ಯಮ। ದಾರಣೆ ಬಹಳಕುಂದುಗ ವಕ್ಕು । ಹಿಂಗಾರು ಮಳೆಯಾಗಿ ಕೆರೆಕಟ್ಟೆಗಳು ತುಂಬಿ ದಾನ್ಯಂಗಳು ಬೆಳೆ ಯಕ್ಕು । ದಾರಣೆ ಹೆಚ್ಚುವದು । ಆನೆ ಕುದುರೆ ಜೀವದನ ಕುರಿಗಳಿಗೆ ತ್ರುಣ ಬಾಧೆಯಕ್ಕು । ಚೋರಭಯವಕ್ಕು । ರೋಗವೆಗ್ಗಳವಹುದು । ಅನೇಕನವಾ ದೀತು । ಅಗ್ನಿಭಯಮುಕ್ಕು । ಮುಂನೆಯರಿಗೆ ಚಿಂತೆಯಕ್ಕು ಜವುಳಿ ಬೆಲ್ಲ ಗೋಧಿ ಅಡಕೆ ಯಲೆ ತುಪ್ಪ ಯೆಂಣೆ ಅರಿಸಿನ ಜೀರಿಗೆ ಮಧ್ಯಮಲಾಭವಹುದು। ಚಿಂನ ಬೆಳ್ಳಿಯ್ಯ ಮಾರುವವರಿಗೆ ಕ್ರಯವಕ್ಕು । ಸಕಲ ಬೇಹಾರವ ಮಾಡುವ ಬೇಹಾರಿಗಳಿಗೆ ನಷ್ಟಮುಕ್ಕು ॥ ೬೦ ॥ ರಟ್ಟಶಾಸ್ತ್ರ ಸಂಪೂರ್ನ ಮಂಗಳ ಮಹಾ ಶ್ರೀ ॥

ವಿಷಯ : ಪ್ರಭವ ಮೊದಲಾದ ಅರುವತ್ತು ಸಂವತ್ಸರಗಳ ಫಲ.

ವಿಶೇಷ : ವಿರಳಾಕ್ಷರ. ಕೆಲವು ಓಲೆಗಳಲ್ಲಿ ಹುಳು ಹೊಡೆದು ಮಧ್ಯೆ ರಂಧ್ರ ಬಿದ್ದಿದೆ.

1389

ಕೆ. ೩೬೦/೨ **ರಟ್ಟಶಾಸ್ತ್ರ** ಗದ್ಯ

೧೦″ × ೨.೨″ ? ?

೧–೧೬ ಪತ್ರ ೧೩ ಪಂಕ್ತಿ ೪೦ ಅಕ್ಷರ

ಆದಿ : ಶ್ರೀ....ರಟ್ಟಶಾಸ್ತ್ರ ಬರವುದಕ್ಕೆ ಶುಭಮಸ್ತು....

ಶ್ರೀ॥ ವ್ಯಪಾರ ಹೋಗಲಿಕೆ ಕಲಿಯಲ್ಲಿ ೧೫೪೯ ಶಾಲಿವಾಹನ ಶಕ ವರುಷಂಗಳು ೧೬೦೯ ಕಲಿಯುಗ ಪ್ರಮಾಣ ಯೆಷ್ಟುಯಂದೆ ೪೩೨೫೪೦ ಅರುವತ್ತು ಸಂವತ್ಸರ ವೃದಹಾಣದ ಹೊರಳಿ ತಿರುಗಿದ ಹಾಗೆ ತಿರುಗುವ ವೃವೊಂದೊಂದು ಸಂವತ್ಸರವು ೭೨೦೯ ಭಾರಿ ತಿರುಗಿದರೆ ಕಲಿಯುಗ ಮುಗಿಯಿತು ।

ಅಂತ್ಯ : ದಾನ್ಯರಸವರ್ಗಂಗಳು ಅಲ್ಲಿಗಲ್ಲಿಗೆ ॥ ಸಮವಕ್ಕು ಪಸುಗಳು ಕರೆಗುಂ । ಮನುಸ್ಯರಿಗೆ ರಾಜೀಕವು ಹಿಂದಣ ಫಲವು ವಿಜೆಯಪುರದ ಅರಸಿನ ದಳವಾಯಿ ಕಾನಖಾನರು । ತಂವೊಳುತ್ತಾವು ಕಡಿದಾಡಿ ವಬ್ಬ ಕನವಸಿರವ ಕುಟ್ಟಿಬಂದನು ವಬ್ಬ ಕಾನನು ಅವನ ಬೆನತ್ತಿ ದಂಡೆತ್ತಿ ಬಂದನು ಪಠಾಣ್ಯನೂ । ವುತ್ರದೇಶ ದಿಂದ ಕಡಿದ ಕಾನನೂ ವೋಡಿಬಂದು ಮಾದಲು ಕಾನನ ಮರೆಯಾ

ವಿಷಯ : ಸಂವತ್ಸರ ಫಲ.

ವಿಶೇಷ : ಬರವಣಿಗೆ ನಿಂತಿರುವುದರಿಂದ ಅಸಮಗ್ರವಾಗಿರಬಹುದು. ಈ ಕಟ್ಟಿನಲ್ಲಿ ನಂದಿಮಹಾತ್ಮೆ ಎಂಬ ಕೃತಿಯಿದೆ.

1390

ಕೆ.ಬಿ. ೩೦೦	**ರತಿಕಲ್ಯಾಣ ನಾಟಕ**	ಯಕ್ಷಗಾನ
೭.೮"×೬.೪"	ವೇದಗಿರಿಯಾಚಾರ್ಯ	?
೧-೩೩ ಪತ್ರ	೨೭ ಪಂಕ್ತಿ	೨೮ ಅಕ್ಷರ

ಆದಿ : ರತಿಕಲ್ಯಾಣ ನಾಟಕ ॥ ಶ್ರೀ ಸರ್ವಸಿದ್ಧಿ ಪ್ರದಾಯಕ ವಿನಾಯಕಾಯ ನಮಃ॥
ನಾಂದಿ ಪದ್ಯ ॥ ಶ್ರೀಮತ್ಕೇಶವಮೂರ್ತಿಗೆ
ಶ್ರೀ ಲಕ್ಷ್ಮಿಗೆ ಶಾರದಿಂಗೆ ಶ್ರೀ ಪಾರ್ವತಿಗುಂ
ಶಿರವಂ ಬಾಗಿದೆ ಕವಿಯುಂ ಚಲ್ವಿಕೆ ಶೃಂಗಾರ ಕೃತಿಯು ಶೃತವನು ಮಾಳ್ಪೆ ॥
ರಾಗ ನಾಟಿ ॥ ಭುವನೇಶ್ವರಿ ಭವನಾಶನಿ ಭವ್ಯ ಶ್ರೀರಾಜೇಶ್ವರಿ
ಪಾವನಿ ತ್ರೈಲೋಕ್ಯಾಚರಿ ಪಾರಾವತ ಗಂಭೀರಿ ॥ ೧ ॥

ಅಂತ್ಯ : ಗೋಕುಲದಲ್ಲಿ ಅಷ್ಟಮಹಾಲಕ್ಷ್ಮಿಯರು ಹದಿನಾರುಸಾವಿರ ಗೋಪಿಕ ಶ್ರೀಯರುವನಿಜವ ದೇವಕಿ ಯಶೋದೆ ನಂದಗೆಪ ಬಲರಾಮ ಅಕ್ರೂರಾರಿ ಯಾದವರು ಸಹಿತವಾಗಳುಂ ಪಾಡಿದರದೆಂತೆನೇ ॥ ಮಂಗಳಂ ॥

x x x x

ಶ್ರೀಮತ್ಪುರಾಣ ಗಿರ್ಯಾಚಾರ್ಯ ಸಹೋದರ:ಶ್ರೀಮದ್ವೇದಗಿರ್ಯಾಚಾರ್ಯವಿರಚಿತ ರತಿಕಲ್ಯಾಣನಾಮದೇನೋತ್ಸ ನಾಟಕವು ಸಂಪೂರ್ನ ಮಂಗಳಮಹಾ ಶ್ರೀ
ಶ್ಲೋಕ ॥ ಗ್ರಾವಪ್ರಭೋದ ವಿಬುದಾಗಮ ಶಾಸ್ತ್ರಸಾರಂ ।
ಸಾರಜ್ಞತೋ ಪರಶಿವೋ ಗುರು ವಿಶ್ವಕರ್ಮಾ ॥
ಕಳಾವಿಶಾಲೋ ಕರುಣಾ ಧುರೀಣಃ ।
ಮಂತ್ರಾದಿರೆಜೋ ಮನುವಂಶಸಂಭವಃ ॥
ಶ್ರೀ ವೆಂಕಟಾಚಾರ್ಯಗುರುಪ್ರಶಿದ್ಧೋ ।
ನಿತ್ಯಂ ಕುಮಾರಾಯಶುಭಂ ಕರೋಮಿ ॥
ರತಿಕಲ್ಯಾಣನಾಟಕ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಮನ್ಮಥ ರತಿಯರ ವಿವಾಹ.

ವಿಶೇಷ : ಮೋಡಿ ಅಕ್ಷರ. ಈ ಗ್ರಂಥದ ಮಧ್ಯೆ ಮಧ್ಯೆ ತೆಲುಗು, ಹಿಂದೂಸ್ಥಾನಿ ಹಾಡುಗಳು ಬಂದಿವೆ.

1391

ಕೆ.ಎ. ೬೧೮	**ರತಿರಹಸ್ಯದ ಟೀಕು**	ಶ್ಲೋಕ, ಟೀಕು
೧೨" × ೭.೮"	?	?
೧–೨೯ ಪತ್ರ	೩೪ ಪಂಕ್ತಿ	೩೪ ಅಕ್ಷರ

ಆದಿ : ಶ್ರೀ ರತಿರಹಸ್ಯ ಶ್ಲೋಕ ಪ್ರಾರಂಭಾ ||
ಶ್ಲೋ || ಯೇನಾಕಾರಿ ಪ್ರಸಭವಮುಚಿರಾದರ್ಧನಾರೀಶ್ವರತ್ವಂ
ದಗ್ಧೇನಾಪಿ ತ್ರಿಪುರಜಯಿನೋ ಜ್ಯೋತಿನಾಂ ಚಕ್ಷಿಷೇಣಾ
ಯಿಂದ್ರೋರ್ಮಿತಂ ಸಚಯ್ನಿತಿ ಮುದಾಂದಾವಂಮ ಪ್ರಚಾರೋ ದೇವಃ
ಶ್ರೀವರ್ಮಾ ಭವೋರಗಭುಜಾನ್ ದೈವತಂ ಚಿತ್ತಜನ್ಮಾ || ೧ ||
ಯಿಷ್ಟದೇವತಾಪ್ರಾರ್ಥನಾ

ಅಂತ್ಯ : ಶ್ಲೋ || ಅಂಬಿಕಾಕಂದಮಾಹೃತ್ಯಾಪಿಷ್ಟಾಕ್ಷೀರೇಣಪಾ.... ಯಯೇತ್
ಗತಾರ್ಥವಾನಾಂ ನಾರೀಣಾಂ ಸದ್ಯೋರಕ್ತಂ ಪ್ರವರ್ತತೇ ||
ಟೀ || ಅಂಬಿಕಾಮೂಲವಂ ತಂದರದೂ ಹಾಲಲ್ಲಿ ಕುಡಿಯೆ ಮುಟ್ಟುನಿಂತವರು ಮುಟ್ಟಾಗುವರೂ || ನಾರಂಬೇಳೆ ಬೇರು ಹಾಲಲ್ಲಿ ಅರದು ಹಾಲು ಬೆರಸಿ ಕುಡಿಯಲು ಮುಟ್ಟು ಆಗದೆಯಿದ್ದ ಶ್ರೀ ಮುಟ್ಟಾಗುವಳೂ.
ಯಿತಿ ಸಂಪೂರ್ಣಂ || ಶ್ರೀ ||

ವಿಷಯ : ಕಾಮಶಾಸ್ತ್ರ.

ವಿಶೇಷ : ಮೋಡಿ ಬರಹ. ಶ್ಲೋಕಕ್ಕೆ ಕನ್ನಡದಲ್ಲಿ ಟೀಕು ಇದೆ. ಕಾಗದ ಬಹು ತೆಳವು.

1392

ಕೆ.ಎ. ೨೦೯/೪	**ರತ್ನಕರಂಡಕ**	ಚಂಪು
೧೨.೮" × ೮"	ಆಯುತವರ್ಮ	ಸು. ೧೪೦೦
೬೪–೧೦೮ ಪತ್ರ	೪೦ ಪಂಕ್ತಿ	೨೬ ಅಕ್ಷರ

ಆದಿ : ಕನ್ನಡ ರತ್ನಕರಂಡಕ.

ಶ್ರೀ ವೃಷಭಜಿನೇಂದ್ರಾದಿ ಮ
ಹಾವೀರ ಜಿನಾಂತ್ಯವಾದ ಜಿನಪತಿಗ
ಳ್ಭವ್ಯಾಳಿಗೆ ಚತುರ್ವಿಂಶತಿ
ದೇವರ್ದ್ದಯಗೆಯ್ಗೆ ವಿಮಳರತ್ನತ್ರಯಮಂ ||

ವ || ಅಂತು ಮಂಗಳಾರ್ತ್ಥಮಿಷ್ಟದೇವತಾ ನಮಸ್ಕಾರಂಗೆಯ್ದು ಧರ್ಮ ಧ್ಯಾನಾರ್ತ್ಥಂ ಭವ್ಯ ಪ್ರಾಣಿಗಳ್ಗೆ ಹಿತಮಪ್ಪುದಂ | ಪತಿಮಾಗಮುಮಂ | ರತ್ನಕರಂಡಕಮೆಂಬ ಗ್ರಂಥಮಂ ಸಾಗಾರಾನನದರುಗಳಿಗೆ ಧರ್ಮಸ್ವರೂಪಮಂ ಸಾನರಿವ ತೆರದಿಂ ಕಿರಿದಂ ಪೇಳ್ವೆನದೆಂತೆಂದೊಡೆ

ಅಂತ್ಯ : ಕ || ಅಮರೇಂದ್ರ ನರೇಂ
ದ್ರ ಮುನೀಂದ್ರ ವಿಭೂತಿಗಳುಮನೆಯ್ದಿಪ
ಸಾಮರ್ತ್ಥ್ಯಮನುಳ್ಳೀ ರತ್ನತ್ರ
ಯಮಮೋಘಂ ಶರಣಮಕ್ಕೆ ಭವ್ಯಾವಳಿಗೇ ||

ಗದ್ಯ || ಇದು ಭಗವದರ್ಹತ್ಪರಮೇಶ್ವರ ಪರಮಭಟ್ಟಾರಕ ವೀತರಾಗ ಸರ್ವಜ್ಞ ವದನ ವನಜಸಮುದತ ಸದಸದಾತ್ಮಕ ಪರಮತತ್ವಭಾವನಾಭಾವಿತ ಸ್ವಾಂತ ಶ್ರೀ ವರ್ಧಮಾನಸಿದ್ಧಾಂತ ದೇವಚರಣ ಸರಸೀರುಹಸ್ಮರಣ ಪರೀಕಾಂತಃಕರಣ ಕುಶೇಶಯ ಶ್ರೀಮದಾಯತವರ್ಮ್ಮ ವಿರಚಿತಮಪ್ಪ ರತ್ನಕರಂಡಕದೊಳು ಸಮ್ಯಕ್ಚಾರಿತ್ರ ಸ್ವರೂಪನಿರೂಪಣಂ ತೃತೀಯ್ಯ ಪರಿಚ್ಛೇದಃ ||

ವಿಷಯ : ಜೈನ ಸಿದ್ಧಾಂತದ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ಚಾರಿತ್ರ ಸ್ವರೂಪಗಳ ವಿವರಣೆ.

ವಿಶೇಷ : ಅಲ್ಲಲ್ಲಿ ಗ್ರಂಥಲೋಪ, ಶಿಥಿಲಪ್ರತಿ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಕೊನೆಯಲ್ಲಿ " ಶಾಲೀವಾಹನ ಶಕಾಬ್ದಾಃ ೧೭೯೭ ಯುವ ಸಂವತ್ಸರ ಭಾದ್ರ ಪದ ಕೃಷ್ಣ ದಶಮಿಾ ಭಾರ್ಗವವಾಸರೆ ರತ್ನಕರಂಡಕಮಿದಂ ಗ್ರಂಥಂ ಪರಿ ಸಮಾಪ್ತೋಭೂತ್ " ಎಂದಿದೆ. ಈ ಪುಸ್ತಕದ ಆದಿಯಲ್ಲಿ ಕ್ರಮಾಂಕವಿಲ್ಲದ ಎರಡು ಪತ್ರಗಳಲ್ಲಿ ಇದರಲ್ಲಿರುವ ಗ್ರಂಥಗಳ ಸೂಚಿ ಮತ್ತು ಈ ಪ್ರತಿಯ ಕಾಲವಿದೆ. ಇದೇ ಪುಸ್ತಕದಲ್ಲಿ ಲೋಕಸ್ವರೂಪ, ಕರ್ಮಪ್ರಕೃತಿ ಮತ್ತು ಪರಮಾಗಮಸಾರಗಳೆಂಬ ಇತರ ಗ್ರಂಥಗಳಿವೆ.

1393

ಕೆ.ಬಿ. ೧೪೪	**ರತ್ನಕರಂಡಕದ ಟೀಕೆ**	ಶ್ಲೋಕ, ಟೀಕು
೭.೫" × ೬.೧"	ಕಮಲಪಂಡಿತ	೧೮೮೬
೧–೧೦೮ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಮತ್ಪಂಚಗುರುಭ್ಯೋ ನಮಃ ॥ ರತ್ನಕರಂಡಕ.
ಶ್ರೀಮಂತಂ ವೃಷಭಂ ನೌಮಿ ಪಂಚಕಲ್ಯಾಣನಾಯಕಂ ।
ಭೂರ್ಭುವಸ್ವರಧೀಶಾನಪೂಜಿತಾಂಘ್ರಿಸರೋರುಹಂ ॥
ಶ್ರೀವೀರಜಿನಪನ್ನತ್ವಾನಾಮ್ನಾಹಂ ಬಾಲಬೋಧಿನೀಂ ।
ಕುರ್ವೇ ರತ್ನಕರಂಡಸ್ಯ ವ್ಯಾಖ್ಯಾಂ ಕರ್ಣಾಟಭಾಷಯ ॥
ಶ್ರೀಸಮಂತಭದ್ರಸ್ವಾಮಿಯವರು ಸಮಗ್ದರ್ಶನ ಜ್ಞಾನಚಾರಿತ್ರಗಳೆಂಬ ರತ್ನಗಳಿಗೆ ಸಂರಕ್ಷಣೋಪಾಯಭೂತ ರತ್ನಕರಂಡಕ ನಾಮೋಪಾಸಕಾಚಾರ ಗ್ರಂಥವನ್ನು ನಿರ್ಮಿಸಲೋಸ್ಕರ ಅಭಿಲಾಷೆಉಳ್ಳಂಥಾವರಾಗಿ ನಿರ್ವಿಘ್ನವಾಗಿ ಶಾಸ್ತ್ರಸಮಾಧಿಫಲವನ್ನು ಇಚ್ಛೈಸುವಂಥಾವರಾಗಿ ಇಷ್ಟದೇವತಾ ನಮಸ್ಕ್ರಿಯಾರೂಪ ಮಂಗಳವನ್ನು ಹೇಳುವದಕ್ಕೆ ಬಂದ ಪ್ರಥಮ ಸೂತ್ರಾವತಾರಂ ॥

ಅಂತ್ಯ : ಸಸೂರಿ ಪಂಡಿತೋಚತ್ಕದಾಚಿತ್ಕಮಲಾಹ್ವಯಂ ।
x x x x
ಶಾಲಿವಾಹನ ಸಂಜ್ಞ ಶ್ರೀಶಕರಾಜ ಶರದ್ಗಣೇ ।
ವಸುದಿಗ್ಗಜಶೈಲೇಂದು ಪ್ರಮಿತೇ ಕ್ಷಯವತ್ಸರೇ ।
x x x x
ಇತಿ ಮತ್ವಾ ಸುಧಿಜ್ಞಾನಸಂಪದೇ ಸೂರಿಪಂಡಿತಃ ।
ಅಕಾರಯದಿಮಾಂ ವ್ಯಾಖ್ಯಾಂ ಕ್ರಮಾತ್ಕೇವಲಸಂಪದೇ ॥
ಶ್ರೀವರ್ಧತಾಂ ಜೈನಶಾಸನಂ ॥ ಶ್ರೀ

ವಿಷಯ : ಜೈನ ತತ್ತ್ವ.

ವಿಶೇಷ: ಸಂಸ್ಕೃತ ಶ್ಲೋಕಗಳಿಗೆ ಕನ್ನಡ ಟೀಕು ಇದೆ.

1394

ಕೆ.ಬಿ. ೬೯	**ರತ್ನಶಾಸ್ತ್ರ**	ವಾರ್ಧಕಷಟ್ಪದಿ
೭.೮" × ೬.೨"	ಚೆಲುವ	ಸು. ೧೭೧೫
೧–೨೪ ಪತ್ರ	೧೧ ಪಂಕ್ತಿ	೨೫ ಅಕ್ಷರ

ಆದಿ : ಶುಭಮಸ್ತು॥ ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ॥ ರತ್ನಶಾಸ್ತ್ರ॥ ಕನ್ನಡ ವಾರ್ಧಿಕಷಟ್ಪದಿ ಕಾವ್ಯ ಬರೆಯುವದಕ್ಕೆ ನಿರ್ವಿಘ್ನಮಸ್ತು ॥
ಶ್ರೀರಮಣಿಯನುಪಮ ಸುರತ್ನಹಾರಮನಾಂತು
ವಾರಿರುಹ ಪತ್ರಲೋಚನೆನೆಂಕದೊಳೊಪ್ಪ
ಲಾರಾಜಿಸುವ ರತ್ನಗಳಿಗೆ ನಾಯಕರತುನವೆನಿಪ ಚನ್ನಿಗರಾಯನಾ

ಚಾರುತರ ಚರಣಕಾನತನಾಗಿ ಚಂಡಿಕಾ
ನಾರಿಯರಸನಿಗೆರಗಿ ಶಾರದಾಪತಿಯ ಪದ
ವಾರಿಜಕ್ಕಭಿನಮಿಸಿ ಗಣಪತಿಗೆ ಪೊಡಮಟ್ಟು ಗುರುಕಟಾಕ್ಷದಿ ಪೇಳುವೇಂ॥ ೧ ॥

ಅಂತ್ಯ : ಸೃಷ್ಟಿಯೊಳು ಶ್ರೀರಂಗಪಟ್ಟಣವನಾಳ್ವ ಶ್ರೀ
ಕೃಷ್ಣರಾಜೈಯ್ಯ ವೊಡೆಯರ್ರೈನವರ ಚೊಕ್ಕಸದಲಿಹ
ಪುಟ್ಟ ಕರಣಿಕನು ವೆಂಕಟಪತಿಯು ಪ್ರೇರಿಸಲ್ ಪದ್ಯಷಟ್ಪದಿಭಾವದೀ
ಅಷ್ಟನವತಿಯ ಪದ್ಯದೊಳಗಿದನು ಪುದುಗೊಳಿಸಿ
ದಷ್ಟರತ್ನಂಗಳಿಗೆ ಪೇಳ್ದೆನಾ ಕನ್ನಡದಿ
ಸೃಷ್ಟಿಯೊಳು ಬಾಲವೈದ್ಯದ ಚೆಲುವ ಪೇಳ್ದನಾಚಂದಾರ್ಕಮುಳ್ಳತನಕಾ
॥ ೧೧ ॥

ಯೆಷ್ಟು ಪೇಳುವೆನಿದರ ಫಲವ ಗೋಸಾವಿರವ
ಕೊಟ್ಟು ಫಲಮಕ್ಕು ಭೂದಾನಮಾರಾಮವನು
ನೆಟ್ಟಫಲ ಬಪ್ಪುದಾಚಂದ್ರತಾರಕಮಾಗೀ ಸೃಷ್ಟಿಯೋಳ್ ಸಖವಿಪ್ಪರೂ
ಕಷ್ಟದಾರಿದ್ರಗಳ ಪರಿಹರಿಸಿ ಸೌಖ್ಯದಿಂ
ದಷ್ಟಮಹದೈಶ್ವರ್ಯ ಸಕಲ ಸಂಪತ್ತುಗಳ
ಕೊಟ್ಟಪನು ರತ್ನಗರ್ಭವನು ಚಂನಕೇಶವನು ಯಿಷ್ಟಸಿದ್ಧಿಯ ಮುದದೊಳು
॥ ೧೨ ॥

ಅಂತೂ ರತ್ನಶಾಸ್ತ್ರ ಪದ್ಯ ೧೦೦ಕ್ಕಾಂ ಮಂಗಳಮಹಾ.

ವಿಷಯ : ರತ್ನಗಳ ವಿಚಾರ.

ವಿಶೇಷ : ಅಕ್ಷರವು ಸ್ಫುಟ ಹಾಗೂ ಸುಂದರ. ಅಗಸ್ತ್ಯಮುನಿಯ ಮತಾನುಸಾರವಾಗಿ ಗ್ರಂಥವನ್ನು ಬರೆದಂತೆ ಕವಿ ಹೇಳಿಕೊಂಡಿದ್ದಾನೆ.

1395

ಕೆ. ೧೮೪/೫	**ರತ್ನಾಕರಶತಕ**	ವೃತ್ತ
೧೩.೫″ × ೧.೮″	ರತ್ನಾಕರಸಿದ್ಧ	೧೫೫೭
೧೮೭–೧೯೮ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ರತ್ನಾಕರಶತಕ ಬರೆಯುವದಕ್ಕೆ ಶುಭಮಸ್ತು
ಶ್ರೀರಾಗಂ ಸಿರಿಗಂಪುಮಾಲೆ ಮಣಿಹಾರಂ ವಸ್ತ್ರಮಂಗಕ್ಕಲಂ
ಕಾರಂ ಹೇಯಮಿವಾತ್ಮತತ್ವರುಚಿ ಬೋಧೋಧ್ಯಚರಿತ್ರಂಗಳೀ
ತ್ರೈರತ್ನಂ ಮನಸ್ಸಿಂಗೆ ಸಿಂಗರಮುಪಾಥೇಯಂಗಳಿಂದಿತ್ತೆ ಶ್ರಿಂ
ಗಾರ ಶ್ರೀಕವಿಹಂಸರಾಜನೊಡೆಯಾ ರತ್ನಾಕರಾಧೀಶ್ವರಾ ॥ ೧ ॥

ಅಂತ್ಯ : ತ್ರಾಹಿ ತ್ರೈಭುವನೇಂದ್ರಮಸ್ತಕಮಣಿನ್ನಿರ್ಾರಾಜಿತಾಂಘ್ರಿದ್ವಯಾ
ತ್ರಾಹಿ ಶ್ರೀರಮಣೀಸಟಂ ನಟನರಂಗ ಶ್ರೀಪದಾಬ್ಜೋಭಯಾ
ತ್ರಾಹಿ ತ್ರಾಹಿ ಮಹೇಶ ಮಾಂ ಪುನರಪಿ ತ್ರಾಹೇತು ರತ್ನತ್ರಯೀ
ದೇಹಿ ತ್ವಂ ಮಮ ದೀಯತಾಂ ಜಯಜಯಾ ರತ್ನಾಕರಾಧೀಶ್ವರಾ ॥ ೧೨೭ ॥
ಕಂದಾ ॥ ವೈರಾಗ್ಯನೀತಿಯಾತ್ಮ ವಿ
ಚಾರಂಗಳ್ ಬಗೆದುನೋಡೆ ರಾಜಿಸುಗುಂ ಶೃಂ
ಗಾರಕವಿ ಹಂಸರಾಜಂ
ಪೂರಿಸಿದ ಸಪಾದಶತಕದೊಳ್ ॥
ಶ್ರೀಮದ್ದೇವೇಂದ್ರಕೀರ್ತಿ ಯೋಗೀಶ್ವರ ಪಾದಾಂಭೋಜ ಭೃಂಗಾಯಮಾನ ಶೃಂಗಾರಕವಿ ಹಂಸರಾಜ ವಿರಚಿತಮಪ್ಪ ರತ್ನಾಕರಾಧೀಶ್ವರ ಸಪಾದಶತಕಂ ಸಂಪೂರ್ಣ.

ವಿಷಯ : ನೀತಿ ಮತ್ತು ಜೈನತತ್ತ್ವ.

ವಿಶೇಷ : ಇದರೊಂದಿಗೆ ಕಿರಾತಾರ್ಜುನರ ಕಾಳಗ, ಅಂಗದ ಸಂಧಾನ, ಸುಭಾಷಿತ (ಸಂ), ಸೋಮಾರಾಧ್ಯಶತಕ, ಅರವತ್ತುಮೂವರ ತ್ರಿವಿಧಿ, ಶಿವ ವಿಷ್ಣು ಕೀರ್ತನೆಗಳು, ಮಾನಸಪೂಜೆ (ಸಂ), ಗುರುಶಿಷ್ಯವಾದ, ಸದ್ಗುರುರಹಸ್ಯ, ಐರಾವತ, ಭಾರತದಲ್ಲಿ ರಾಜನೀತಿ, ಕೃಷ್ಣಮಾಚಾರ್ಯರ ಕಾಲಜ್ಞಾನ ಎಂಬ ಗ್ರಂಥಗಳೂ ಇವೆ.

1396

ಕೆ. ೩೦೨	**ರತ್ನಾಕರಶತಕ**	ವೃತ್ತ
೭.೨" × ೧.೯"	ರತ್ನಾಕರಸಿದ್ಧ	೧೫೫೭
೬೭–೮೮ ಪತ್ರ	೧೦ ಪಂಕ್ತಿ	೨೫ ಅಕ್ಷರ

ಆದಿ : ಶ್ರೀರಂಗಂ ಸಿರಿಗಂಪುಮಾ........ವಸ್ತ್ರಮುಂಗಕ್ಕಲಂ
ಕಾರಂ ಹೇಯಮಿವಾತ್ಮ ತತ್ವರುಚಿ ಬೋಧೋದ್ಯಚ್ಚರಿತ್ರಂಗಳಿಂ
ತ್ರೈರತ್ನಂ ಮನಸಿಂಗೆ ಸಿಂಗರಮುಪಾದೇಯಂಗಳಿಂದಿತ್ತೆ ಶೃಂ
ಗಾರ ಶ್ರೀಕವಿ ಹಂಸರಾಜನೊಡೆಯಾ ರತ್ನಾಕರಾಧೀಶ್ವರಾ ॥ ೧ ॥

ಅಂತ್ಯ : ನರರಾತ್ಮಂ ಸ್ಫಟಿಕೋಪಮಂ ಗಡಮದೇನಾಕಾರಮುಂ ಸ್ವಚ್ಛಮಾ
ಗಿರೆದೆಂಬರ್ ಮಿಗೆ ಕೇಳಿಯಾಸ್ಫಟಿಕಮೆಂತಯ್ಯಂಣಮುಂ ಸೋಂಕೆಯಾ
ಪರಿಯೊಳ್ ತೋಱುಗುಮಂತೆ ಮೆಯ್ಯತೊವಲುಂ ಕರ್ಪಾಗೆ ಕಿಂಪಾಗೆ ತಾಂ
ಕರಿಯಂ ಕೆಂಪನೆನಿಪ್ಪನೆಂದರು...॥

ವಿಷಯ : ನೀತಿ ಮತ್ತು ಜೈನತತ್ತ್ವ.
ವಿಶೇಷ : ಈ ಪ್ರತಿಯಲ್ಲಿ ಶಕಟರೇಫ ಉಪಯೋಗಿಸಿದೆ. ೮೭ನೆಯ ಪತ್ರ ಲುಪ್ತ. ಪ್ರತ್ಯೇಕವಾದ ೫ ಪತ್ರಗಳಲ್ಲಿ ಕೆಲವು ಮಂತ್ರಗಳನ್ನು ಬರೆದಿದೆ.

1397

ಕೆ.ಬಿ. ೭೬	**ರತ್ನಾವಳಿ ನಾಟಕ**	ನಾಟಕ
೮″ × ೬.೪″	ಬಸವಪ್ಪಶಾಸ್ತ್ರಿ	೧೯ನೆಯ ಶತಕ
೧–೪೦ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಸೂತ್ರ
ವೃ ॥ ಶ್ರೀ ಕಾಳೀಮುಖ ಪುಂಡರೀಕವಿಹರದ್ಬೃಕ್ಚಂಚರೀಕದ್ವಯಂ
ವೈಕುಂಠಾಬ್ಜಭವೇಂದ್ರ ವಂದ್ಯಪದನಾಳೀಕಂ ಶ್ರಿಶ್ರೀಕರಂ
ಕಾಕಾರಾತಿತನೂಜ ಬಾಣದಕರಂ ಲೋಕೈಕರಕ್ಷಾಕರಂ
ಶ್ರೀಕಂಠಂ ಕರುಣಿಕ್ಕೆ ಚಾಮನೃಪಚಂದ್ರಂಗಾಯುರಾರೋಗ್ಯಮಂ ॥
x x x x
ಕಂ ॥ ಬಸವಪ್ಪಶಾಸ್ತ್ರಿಯಿಂದಂ
ಪೊಸತೆನೆ ಕನ್ನಡದೊಳುಸುರ್ದ ರತ್ನಾವಳಿಯಂ
ರಸಿಕರ್ಕಳೆನಿಸಿದೀ ಸಾ
ಧು ಸಭಾಸದರೊಲ್ದು ಮೆಚ್ಚಲಾನಭಿನಯಿಸೆಂ ॥

ಅಂತ್ಯ : ಯೌಗಂಧ—ನಾನು ಪಟ್ಟ ಶ್ರಮವು ಈಗ ಸಫಲವಾಯಿತು. ಮಹಾರಾಜನೆ ನಿನಗಿನ್ನೇನು ಪ್ರಿಯವಂ ಮಾಡಲಿ ?
ರಾಜ—ಎಲೈ ಯೌಗಂಧರಾಯಣನೆ ಇದಕ್ಕಿಂತಲೂ ಬೇಕಾದದ್ದು ಇನ್ನೇನು ಮಂಗಳಂ ॥ x x x x
ಕಾಮಿತವರದಂ ಕೋಮಲಸುಪದಂ
ಸೋಮವಂಶ ವಾರ್ಧಿಚಂದ್ರ ಚಾಮಭೂಮಿವಲ್ಲಭಂಗೆ ॥ ೧ ॥
ರತ್ನಾವಳೀ ನಾಟಕಾ ಸಮಾಪ್ತಂ.

ವಿಷಯ : ಉದಯನ ಮಹಾರಾಜನಿಗೂ ರತ್ನಾವಳಿಗೂ ನಡೆದ ಪ್ರೇಮಾನುಬಂಧ ಕಲ್ಯಾಣೋತ್ಸವ.

ವಿಶೇಷ : ಅಕ್ಷರವು ಸ್ಫುಟ. ಹರ್ಷರಾಜನ ಸಂಸ್ಕೃತ ರತ್ನಾವಳೀ ಗ್ರಂಥದ ಅನುವಾದ. ಗ್ರಂಥದ ಆದಿಯ ಎರಡು ಪತ್ರಗಳಲ್ಲಿಯೂ, ಗ್ರಂಥದ ಅಂತ್ಯದ ಕೆಲವು ಪತ್ರಗಳಲ್ಲಿಯೂ ಬರವಣಿಗೆಯಿಲ್ಲ. ಪತ್ರಗಳ ಕ್ರಮಸಂಖ್ಯೆ ಸೂಚಿತವಾಗಿಲ್ಲ.

1398

ಕೆ.ಎ. ೨೫೩/೩ ರನ್ನನಿಘಂಟು ಕಂದ

೮" × ೧೨.೯" ? ?

೧–೨ ಪತ್ರ ೧೮ ಪಂಕ್ತಿ ೧೮ ಅಕ್ಷರ

ಆದಿ : ರನ್ನನಿಘಂಟು.

ಕುಳಿರೆನೆ ಶೈತ್ಯಂ ಮಿಳಿರೆ
ಪೊಳೆದುದುಲ್ಲ್ಯೆಂದೆನಲ್ಕೆ ಮಾರ್ಗ್ಗೆಂಬರ್ತ್ಥಂ
ಬಳೆದುದೆನಲ್ಕೆರಗಿದುದುಂ
ಕುಳಿರೆನೆ ಪಾಚಿ ನಿನಾದಮೆಲೆ ಕವಿರತ್ನಾ ॥ ೧ ॥
ಬರೆಯನಲತ್ಯರ್ತ್ಥಂ ಪಂ
ಮರಿಯೆನೆ ಕಾಸಿದ ಮಳಲ್ಕೇಳಂಗೆನೆಗೆಳೆ ಸು
ಮುರಿಪೆನೆ ಮರಳಿದ ಭಾವಂ
ಸಿರಿವಂತಿಕೆಯೆಂದಲ್ಕೆ ಹುರಿಯೋಡಕ್ಕುಂ ॥ ೨ ॥

ಅಂತ್ಯ : ಬಯಂಮನೆ ತಲೆವಾಗಿಲು
ಕಲಗಲಮೆನೆ ಕೂಡೆ ಬೆರಸಿದ್ದಕ್ಕುಂ ನೈಲಂ
ಗಲಮೆನೆ ಜೆಲ್ವಿಕೆ ಸಲೆ ಸೈ
ಗಲಮೆನೆ ತಾಂ ಪುಣ್ಯಶಕ್ತಿಯಲೆ ಕವಿರತ್ನಾ ॥ ೧೧ ॥
ಕೊಪ್ಪೆಣೆ ಕಾಣ್ಕೆ ಮುಸುರ್ಪ್ಪೆನೆ
ಪಾರ್ಪೆನೆ ಕೈ........
ಮುಂದೆ ಗ್ರಂಥವಿಲ್ಲಾ.
೧೧ನೆ ಪಜ್ಜೆವೆಕ್ಕಲ್‌ಪೊಯನಿಲಂ ಮಡಂ ಕಲೆ ಜೋಳಂ ಕೈವಲೆ ಕಣ್ಬಲೆ ಬರಿಸುಳಿ ಕೈವಿಡಿಯೆಂಬುದ.

ವಿಷಯ : ಕನ್ನಡ ನಿಘಂಟು.

ವಿಶೇಷ : ಈ ಕಾವ್ಯದಲ್ಲಿರುವ ಪ್ರತಿಪದ್ಯವೂ 'ಕವಿರತ್ನಾ' ಎನ್ನುವುದರಿಂದ ಮುಗಿಯುತ್ತದೆ. ಅಸಮಗ್ರ ಪ್ರತಿ. ಪತ್ರಗಳ ಒಂದುಕಡೆ ಮಾತ್ರ ಬರೆದಿದೆ. ಇದೇ ಪುಸ್ತಕದಲ್ಲಿ ಶಬ್ದಾಗಮ, ಕರ್ಣಾಟಕ ಶಬ್ದಸಾರ, ಕರ್ಣಾಟಕ ಸಂಜೀವಿನಿ, ಭಾರತ ನಿಘಂಟು, ಕವಿಕಂಠಹಾರ, ನಾನಾರ್ಥರತ್ನಾಕರ ಎಂಬ ಕೃತಿಗಳಿವೆ.

1399

ಕೆ. ೧೨೬ ರಸರತ್ನಾಕರ ಚಂಪು

೧೪.೭" × ೨" ಸಾಳ್ವ ಸು. ೧೫೫೦

೨೧ ಪತ್ರ ೧೦ ಪಂಕ್ತಿ ೭೬ ಅಕ್ಷರ

ಆದಿ : “ ರಸರತ್ನಾಕರಂ” ಶ್ರೀ ಗುರುಭ್ಯೋ ನಮಃ ॥ ಶುಭವಸ್ತು ॥
ಪರಮಾರ್ಹಂತ್ಯ ವಧೂಟಿಗೊಲ್ದು ತನುವಂ ಗೆಲ್ದೈದೆ ಮೂದೇವರೊಂ
ದಿರವಂನಕ್ಕನೃತಾದಿಗಂಜಿ ಕಡುಶೋಕಂಗೊಟ್ಟು ಮೋಹಾಳಿಗು
ದ್ಧರ ದೋಷಾಳಿಗೆ ಪೇಸಿ ಕಾಯ್ದು ಭವಮಂ ಸುಟ್ಟಿರಿ ಲೋಕಾಗ್ರಮಂ
ಸ್ಥಿರನಾಗಿರ್ದ ರಸೈಕನೀಗೆ ಮುದಮಂ ಶ್ರೀಮಜ್ಜಿನಾಧೀಶ್ವರಾಂ ॥
ಕಂ ॥ ಸತತ ಗುಣನಿಲಯೆ ಲೋಕ
ಸ್ತುತೆ ತರುಣ ಮೃಣಾಳದರ್ಣೆ ಸಕಲ ಕಲಾವಿ
ಶ್ರುತ ನಿರುಪಮೆ ಚಿನ್ಮಯೆ ಭಾ
ರತೀ ನಿಲುಸುಂ ನೆಲಸುಗೆಂಮ ಮುಖಸರಸಿಜದೊಳ್ ॥
ರಸರತ್ನಾಕರವಿಾಕೃತಿ
ವೆಸರೆಂದಿಡೆ ಸುಕವಿನಿಕರ ಬುಧಸಮಿತಿಗಳೀ
ಕ್ಷಿಸಿ ಕೈಕೊಂಡೆಸೆವಿದರೊಳ್
ರಸರತ್ನಂಗಳನೆ ಪಡೆಯದಿಕ್ಕುಮೆ ಚದುರರ್ ॥

ಅಂತ್ಯ : ಲಕ್ಷ್ಯಂ ॥ ಯನಗೇಕಾದುದು ಬೆಂದರೂಪೆಸೆವ ರೂಪಿಂಗೆ ಪಾಳಾದಜ
ವ್ವನಮೋ ಜವ್ವನದಲ್ಲಿ ಕೂರದನ ಬೇರಂ ಬೇರದೊಳ್ ಕಾಯ್ದು ಚೈ
ತ್ರದ ಕಾರಂಕಳೆ ಚಂದಮಾವುದೆನೆಗಿಂನೆ ನೊಂದಡಾನೆಂದೆನಂ
ಗನೆ ನೀಂ ಗರ್ವಿಸಿದಪ್ಪಿ ಬಗೆದೋರಂ ನಲ್ಲನೇನೊಲ್ಲನೊ ॥
ಯಿಂತರಿವುದು ॥
ಗದ್ಯ ॥ ಯಿದು ಶತೇಂದ್ರ ಮುನೀಂದ್ರರುದಿತಾರ್ಹತ್ಪರಮೇಶ್ವರ ಪಾದಾರವಿಂದ
ಮುಂದಮಕರಂದಾನಂದಿತ ಭೃಂಗಾಯಮಾನ ಕವಿಸಾಳ್ವವಿರಚಿತಪ ರಸರತ್ನಾ
ಕರದೊಳ್ ನಾಯನಾಯಿಕಾವಿವರನೊಂ ತೃತೀಯ್ಯಾಶ್ವಾಸಂ ॥ ಶ್ರೀ.

ವಿಷಯ : ರಸಪ್ರಕ್ರಿಯೆಯ ವಿಚಾರ.

ವಿಶೇಷ : ಮೂರು ಆಶ್ವಾಸಗಳು ಮಾತ್ರ ಇವೆ. ೫ನೆಯ ಪತ್ರ ಮುರಿದಿದೆ. ಬರಹ ಸ್ಫುಟವಾಗಿದೆ. ಕೆಲವು ಪತ್ರಗಳನ್ನು ಹುಳುಗಳು ಅಲ್ಲಲ್ಲಿ ತಿಂದು ರಂಧ್ರ ಮಾಡಿವೆ.

1400

ಕೆ. ೨೩೧/೨ | **ರಸರತ್ನಾಕರ** | ಪದ್ಯ, ವೃತ್ತಿ
೧೦" × ೧.೪" | ಸಾಳ್ವ | ಸು. ೧೫೫೦
೧೦೧-೧೪೭ ಪತ್ರ | ೯ ಪಂಕ್ತಿ | ೫೦ ಅಕ್ಷರ

ಆದಿ : ರಸರತ್ನಾಕರಂ.

ಕಂ || ಆನಾರ್ಯರಿಂದೆ ತಿಳಿದವ್ಪೈ
ತಾನಂದಿಯ ರುದ್ರಭಟ್ಟನಾ ತೆಱದಿಂ ವಿ
ದ್ಯಾನಾಥ ಹೇಮಚಂದ್ರರ
ಭೂನುತ ಮಾರ್ಗಾದಿಯಂದಮಂ ಪ್ರಕಟಿಸುವೆಂ ||

ವೃ || ಇಂತು ನಾಗವರ್ಮ ಕವಿತಾಮಾದಿಗಳ ಮಾರ್ಗ್ಗಮಂ ರಸಭಾವಾದಿಗಳ ನೆಲ್ಲಾ ವಿದ್ವತ್ಸಭೆಗಮುಭಯಭಾಷೆಗಮಿಷ್ಟಮಪ್ಪಂತು ಕನ್ನಡಿಸಿದೆನದೆಂತೆಂದೊಡೆ.

ಅಂತ್ಯ : ಇನಿಯನ ವಿಯೋಗದಿಂದಾ
ದ ನಿಂನ ಬಡತನಮನಱಿವುದರಿದಾಯ್ತುನಸುಂ
ಘನತರ ಚಂದ್ರಕಳಾ ಬಿಸ
ವನದಂತಿರೆ ಸಿಂನೊಳಾಮುದೀ ವೈವರ್ಣ್ಯಂ || ಇದು ವೈವರ್ಣ್ಯಂ ||

ಇದು ಶತೇಂದ್ರ ಮುನೀಂದ್ರ ವಂದಿತಾರ್ಹತ್ಪರಮೇಶ್ವರ ಪಾದಾರವಿಂದಾಮಂದ ಮಕರಂದಾನಂದಿತ ಭೃಂಗಾಯಮಾನ ಕವಿ ಸಾಳ್ವ ವಿರಚಿತಮಪ್ಪ ರಸರತ್ನಾಕರ ದೊಳ್ ಭಾವೋದಯ ಭಾವಶಾಂತಿ ಭಾವಸಂಧಿ ಭಾವಶಬಲತಾದಿ ನಾನಾವಿಧ ಭಾವವರ್ಣನಂ ಚತುರ್ಥಾಶ್ವಾಸಂ || ರಸರತ್ನಾಕರಂ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ರಸವಿಚಾರ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಶಕಟರೇಫ ಮತ್ತು ಱ ಲಿಪಿಗಳ ಪ್ರಯೋಗ ವಿದೆ. ಇದೇ ಕಟ್ಟಿನಲ್ಲಿ ಶಬ್ದಮಣಿದರ್ಪಣ, ಛಂದೋಂಬುಧಿ, ಉದಯಾದಿತ್ಯಾ ಲಂಕಾರ, ಶೃಂಗಾರ ರತ್ನಾಕರ ಎಂಬ ಕೃತಿಗಳಿವೆ.

1401

ಕೆ. ೪೪೭	**ರಸವಾದ**	ಗದ್ಯ
೫.೫" × ೨"	?	?
೧–೪೫ ಪತ್ರ	೧೦ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಸುವರ್ನ ಭೈರವಾಯೆಂ ನಃ || ಶ್ರೀ ಸಾಂಬಂ ಸದಾಸಿವಾಯೆಂ ನಃ || ರಸವಾದ ಬರವ ಪುಸ್ತಕ್ಕೆ ಶುಭಮಸ್ತು ಆಯುರಾರೋಗ್ಯ ಅಶ್ವಮಸ್ತು || ಸುಥರಸಕ್ರಮು. ನಾಗವಳ್ಳಿದಳರಸಂ | ಕಱುಬೊಂದಪಲ್ಕುರಸಂ | ಸಹದೇವಿ ಆಕುರಸಂ | ನಲ್ಲೇರುರಸ | ಜಿಲ್ಲೆ ಡಾಕುರಸಂ |

ಅಂತ್ಯ : ಹಂಚಿನಲ್ಲು ಬೂಡಿಕಟಿ ಕಟ್ಟಿಯಿಮಾ ಮುದೆಯನಿಟ್ಟು ಹಂಚ ಮುಚ್ಚಿ ಕೆಳಗು ಮೇಲು ಕುರುಳೊಟ್ಟೆ ಪುಟನನಿಕ್ಕಲು ತಾಂಬ್ರಬಾಹದು | ಬಲ್ಲಪರಿ.... ಬದು ||

ವಿಷಯ : ಲೋಹಗಳನ್ನು ಮಾಡುವ ಮತ್ತು ಕರಗಿಸುವ ವಿಧಾನಗಳು.

ವಿಶೇಷ : ಅಸಮಗ್ರ. ೯ರಿಂದ ೨೦, ೨೦ರಿಂದ ೨೮ ಮತ್ತು ೪೧ ನೆಯ ಪತ್ರಗಳಿಲ್ಲ. ೪೦ನೆಯ ಪತ್ರದಲ್ಲಿ ಗ್ರಂಥಲೋಪ, ೪೫ನೆಯ ಪತ್ರದ ನಂತರ ೧೩ ಪತ್ರಗಳಿವೆ. ಆದರೆ ಅವುಗಳಿಗೆ ಸಂಖ್ಯೆಗಳಿಲ್ಲ, ಪತ್ರಗಳ ಅಂಚುಗಳಲ್ಲಿ ತ್ರುಟಿತ.

1402

ಕೆ. ೧೭೫/೬	**ರಸಸಿಂಧೂರ ಮಾಡುವ ಕ್ರಮು**	ಗದ್ಯ
೧೦.೫″ × ೨.೪″	?	?
೧ ಪತ್ರ	೬ ಪಂಕ್ತಿ	೪೬ ಅಕ್ಷರ

ಆದಿ ಅಂತ್ಯ } :ಶ್ರೀಗುರುವೇ ನಮಃ ॥ ರಸಸಿಂಧೂರ ಮಾಡುವ ಕ್ರಮು ॥ ರಸತೂಕ ೫ ಗಂಧಕ ಗ ೫ ತೂಕ। ತಾಳಕ ಗ ೫ ತೂಕ। ಯೆಲ್ಲವಂ ಹೊಂಗರುಗದ ರಸದಲ್ಲಿ ಯೇಳು ದಿನ ಮರ್ದ್ದಿಸಿ। ಕೋವಿಯಲ್ಲಿ ಯಿಕ್ಕಿ। ಸಿರಮುಂಣಗೊಂಡು। ವಾಲುಕಯಂತ್ರದಲ್ಲಿ। ಬೆರಳುದ್ದ ಮರಳ ಹೂಳಿ ತೆಗೆದು ೧೨ ಜಾವ ದೀಪಾಗ್ನಿಯಲ್ಲಿ ಅಡುವುದು। ಸಿಂಧೂರ ಯಿಶ್ವರನ ಪೂಜೆಯಂ ಮಾಡಿ ತೆಗೆವದು ॥ ವಂದು ತೂಕ ಬೇಳಿ ವಂಭತ್ತು ತೂಕ ಹಾಕುವದು। ಬಂಣಂ ೧೦ ತಪ್ಪದು ॥ ಶ್ರೀ ॥ ರಸ ೫ ತೂಕ । ತಾಳಕ ೫ ತೂಕ। ರಸಿಕ ೫ ತೂಕ। ಯಿವೆಲ್ಲವಂನು। ಹೊಂಗರುಗದ ರಸದಲ್ಲಿ। ಯೇಳು ದಿನ ಮರ್ದ್ದಿಸಿ। ಕೋವಿಯಲ್ಲಿಕ್ಕಿ। ಸಿರುಮುಂಣುಗೊಂಡು। ವಾಲುಕಯಂತ್ರದಲ್ಲಿ ಬೆರಳುದ್ದ ಮರಳಿನಲ್ಲಿ ಹೂಳಿ ತೆಗದು। ೧೨ ಜಾವ ದೀಪಾಗ್ನಿಯಲ್ಲಿ ಅಡುವುದು। ಸಿಂಧೂರ ಈಶ್ವರನ ಪೂಜೆಯಂ ಮಾಡಿ ತೆಗವುದು। ಗ ೧ ತೂಕಕ್ಕೆ ಬೆಳ್ಳಿಗೆ ಹಾಗವು। ತೂಕವಂ ಹಾಕಿ ಕರಗಲು ಬಂಣ ೧೦ ॥ ತಾರೆಯಿ ಮಳೆಯ ಪ್ರಯೋಗ ॥ ರಸ ೨ ತಾರೆಯಿ ಮಳೆ ೧ ಬಗಿಯನು॥

ವಿಷಯ : ರಸಸಿಂಧೂರ ಮಾಡುವ ಕ್ರಮು.

ವಿಶೇಷ : ಒಂದು ಪತ್ರದಲ್ಲಿ ಒಂದು ಪಕ್ಕದಲ್ಲಿ ೬ ಸಾಲಿನಷ್ಟು ಮಾತ್ರವೇ ಬರೆದಿರುವುದು. ಈ ಪತ್ರಕ್ಕೆ ಕ್ರಮ ಸಂಖ್ಯೆಯಿಲ್ಲ. ಪರಮಾರ್ತ್ಥಗೀತೆಯನಂತರದ ಪತ್ರವಿದು. ಇದರೊಂದಿಗೆ ಜಯಸ್ತೋತ್ರ, (ಬಿರುದಾವಳಿ ವಿವರ) ಅನುಭವ ಸೂತ್ರ, ವಿಶೇಶಾರ್ಥಪ್ರಕಾಶಿಕಾ, ಪರಮರಹಸ್ಯಂ, ಮನೋವಿಜಯ, ಪರಮಾರ್ಥಗೀತೆ, ಶಿವಪೂಜಾವಿಧಾನ, ಮೂರೇಳು ದೀಕ್ಷಾಪ್ರಶಸ್ತಿಗಳಿವೆ.

1403

ಕೆ.ಎ. ೩೦೧ **ರಸಿಕಮನೋರಂಜನ ವಿಲಾಸ** ಚಂಪು

೧೩.೨" × ೮.೪" ಕುಂಡಲಗಿರಿ ?

೧–೨೦೭ ಪುಟ ೨೫ ಪಂಕ್ತಿ ೨೨ ಅಕ್ಷರ

ಆದಿ : ರಸಿಕ ಮನೋರಂಜನ ವಿಲಾಸ ಕಾವ್ಯಮ್
ಶ್ರೀ ಗೌರೀಭುಜ ವಲ್ಲರೀ ಪರಿವೃತ ಸ್ಕಂಧಂ ಸಮುತ್ಪದ್ಮಜಾ
ತಾಗಾರಾತಿ ಕಿರೀಟ ರತ್ನರುಚಿ ತೋಯಾಕ್ರಾಂತಪಾದಂ ಫಲಾ
ಭೋಗ ಸ್ಪರ್ಶನ ಲೋಲಬಾಹುವರ ಶಾಖಂ ಶ್ರೀವಿರೂಪಾಕ್ಷ ಕ
ಲ್ಪಾಗಂ ಭಕ್ತರಭೀಷ್ಟಮಂ ಕೊಡುತಮಿರ್ಕೆನ್ನಂತರಾರಾಮದೋಳ್ ॥ ೧ ॥

ಅಂತ್ಯ : ವಿಲಸತ್ಸದ್ಗುಣಶಾಲಿ ಕೊಂಡಲಗಿರಿ ಪ್ರಖ್ಯಾತನಾನುಂ ಮಹಾ
ಬಲವದ್ಭೂರಿ ತುರುಷ್ಕ ಕಾನ್ತಸಮರ ಕೃಷ್ಣಾಟ್ಟಶ್ವದಂತಾವಲಾ
ವಲಿಭೂಮಿ ಪ್ರಭುತೀಷ್ಟದಾನ ವಿಧಿ ಭೂಪಾಲೀಕೃತಾರ್ಥವ್ರಜೋ
ಜ್ವಲನಂ (ಹಂ) ಡೇ ಮುಲುಕೇಂದ್ರಮಾನ್ಯ ಸಚಿವಂ ಪಂಪಾಧಿಪಂಗಿಷ್ಟಮ
ಪ್ಪೊಲೆ ಪೇಳ್ದಂ ಕವಿಸೇವ್ಯಂ ಸಕಲವಿದ್ವಚ್ಛ್ರಾವ್ಯಮಂ ಕಾವ್ಯಮಂ ॥೧೫೪॥
ಇದು ನಿಯತ ಸುರಾಸುರ ಪಟಲ ನಿಟಿಲತಟಘಟಿತ ಕಸ್ತೂರಿಕಾಸಾರಪಟ್ಟ
ವಿರಾಜಿತ ಪಂಪಾ ವಿರೂಪಾಕ್ಷ ಶ್ರೀಪಾದಪದ್ಮ ಪರಾಗತಿಲಕ ವಿಭ್ರಾಜಿತ
ಫಾಲ ಫಲಕ ಜಾಯಾಮಾತ್ಯ ಗೌರಂಬಿಕಾಗರ್ಭ ಪಾರಾವಾರ ಸುಧಾರಕ
ಮನ್ತ್ರಿ ಮಾಣಿಕ್ಯ ಮಕುಟಾಲಂಕಾರ ಕೊಂಡಲಗಿರಿ ವಿರಚಿತ ರಸಿಕಮನೋ
ರಂಜನ ಮಹಾಪ್ರಬಂಧದೊಳೇಕಾದಶೋಧ್ಯಾಯಃ ॥ ಸಂಪೂರ್ಣಃ ॥

ವಿಷಯ : ಕಾಶೀದೇಶದ ರತ್ನೇಶ್ವರರ ಕಥೆ.

ವಿಶೇಷ : ಬರಹ ಕೊಂಚ ಮೋಡಿ. ಸುಭದ್ರ ಸ್ಥಿತಿ. ಅಲ್ಲಲ್ಲಿ ಪದಗಳು. ಲುಪ್ತ. ಗ್ರಂಥಾಂತ್ಯದಲ್ಲಿ ಪ್ರತಿ ಮಾಡಿದವನ ವಿಷಯ ಹೀಗೆ ಬರುತ್ತದೆ—" ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕಾಬ್ದಾಃ ಸಾವಿರ ದೇಳ್ನೂರ ಎಪ್ಪತ್ತೆಂಟನೆಯ ನಳನಾಮ ಸಂವತ್ಸರ ಜೇಷ್ಠ ಶುದ್ಧ ತ್ರಯೋಧಶಿ ಇಂದುವಾಸರೇ ಶುಭನಕ್ಷತ್ರೇ ಶುಭಯೋಗೇ ಶುಭಕರಣೇ ಶುಭತಿಥೌ ಶುಭಲಗ್ನದಲ್ಲಿ ಬರೆದಂಥಾವರು ಕ ॥ ಸಿರಿಗೇರಿ ಮಠದ ವೃಷಭೇಂದ್ರಾಖ್ಯ ರವರ ಪತ್ನಾಃ ನೀಲಮ್ಮನವರ ಗರ್ಭಾಬ್ಧಿಚಂದ್ರಮನಾದ ರಾಚಪ್ಪನವರ ಅರ್ಧಾಂಗಿಸಿಯಳಿಂದ ಬಸಮ್ಮನವರ ಒಡಲಾಬ್ಧಿ ಚಂದ್ರೋದಯನಾದ ಬಸಪ್ಪನವರು ಸ್ವಹಸ್ತದಿಂದ ಬರಕೊಂಡ ಪುಸ್ತಕಂ ಸಂಪೂರ್ಣಂ ॥" ಗ್ರಂಥಾಂತ್ಯದ ೧೫೪ನೆಯ ವೃತ್ತಪದ್ಯದಲ್ಲಿ ೫ ಪಾದಗಳಿವೆ.

1404

ಕೆ.೧೫೦	ರಾಘವಾಂಕ ಚರಿತೆ	ವಾರ್ಧಕಷಟ್ಪದಿ
೧೩.೭" × ೧.೮"	ಸಿದ್ಧನಂಜೇಶ	೧೬೫೦
೧–೧೬೪ ಪತ್ರ	೯ ಪಂಕ್ತಿ	೭೫ ಅಕ್ಷರ

ಆದಿ : ರಾಘವಾಂಕೈಯ್ಯನ ಕಾವ್ಯವ ಬರಉದಕ್ಕೆ ಶುಭಮಸ್ತು
ಪಲ್ಲವಾ || ಶ್ರೀ ಪರಮ ಕೈಲಾಸದಿಂ ದಕ್ಷಿಣಾಶೆಯೊಳ
ಗಾ ಪುಂಣ್ಯ ಸುಕ್ಷೇತ್ರ ಪಂಪಾಖ್ಯ ನಗರದೊಳೂ
ಪಾಪನಾಶಂ ಕವೀಶಂ ರಾಘವೇಶಂ ಮೆರದನು ಸಜ್ಜನರು ಮೆಚ್ಚೆ ||
ಪದನೂ || ಶ್ರೀ ಗಿರಿಜೆಯಾಶ್ಯಬ್ಜ ಷಟ್ಚರಣ ಕಾತ್ಯಾಯ
ನೀ ಗುರುಸ್ತನಕುಂಕುಮಾಂಕಿತಾಮಲವಕ್ಷ
ಶ್ರೀ ಗಿರಿಸುತಾ ೦ಪ್ಪನಾಮೃತ ಸರೋಹಂಸನುಮೆಯಾ ಹೃದ್ಪನ
ಚೈಯಿತ್ರನೂ
ಯೋಗಿಜನ ಹೃಜ್ಯೋತಿ ಭಕ್ತವತ್ಸಲನತುಳ
ಭೋಗಿ ಕಂಕಣಭರ್ಗ್ಗ ಭವರೋಗವೈದ್ಯ ಸಲೆ
ಭೋಗಿ ತಳ್ಪಾರ್ಜಿತ ಪದಾಂಭೋಜ ಸ್ತುತಿಸುಹಿತ ಪಾಲಿಸುಗೆ ನಂಜೇಶ್ವರಾ||೧||

x x x x

ಪುರದ ಸಿಂಹಾಸನಾಧಿಪ ಸಿದ್ಧನಂಜೇಶ
ಚರಣ ಶತಪತ್ರ ಮಧುಕರ ಚಿಕ್ಕನಂಜೇಶ
ವಿರಚಿಸಿದ ರಾಘವಾಂಕನ.ಕೃತಿಯ ಶಿವಭಕ್ತತತಿಯ ಘನವಿಮಲಮತಿಯಾ
|| ೨೧ ||

ಅಂತ್ಯ : ಆಚಾರ್ಯ್ಯ ರೇವಣಸಿದ್ಧೇಶ ಮರುಳಸಿ
ದ್ಧಾಚಾರ್ಯ ರಾಮಿದೇವಾಚಾರ್ಯ ಗುರುಪಂಡಿ
ತಾಚಾರ್ಯ್ಯ ಚೌಕಮಧ್ಯದಿ ನಿಂದ ಪಂಚವಂಣಿಗೆ ಸಿದ್ಧನಂಜೇಶ್ವರಾ
ಸ್ವಾಚಾರ್ಯಪದಸರಸಿರುಹ ಮದಪ ಚಿಕ್ಕನಂ
ಜಾಚಾರ್ಯ ರಚಿತವಹ ಹಂಪೆಯ ಹರೀಶ್ವರ ಶಿ
ವಾಚಾರ್ಯ್ಯಸುತ ರಾಘವನ ಕೃತಿಗೆ ನವದಶಕಸಂಧಿ ಸುವಚೋನುಬಂಧಿ
|| ೧೧೧ ||

ಅಂತ್ತು ಸಂಧಿ ೧೯ಕ್ಕಂ ಪದನೂ ೧೭೮೫ಕ್ಕಂ ಮಂಗಳಮಹಾ ಶ್ರೀ.
ಶಾಲಿವಾಹನ ಶಕವರುಷ ೧೬೮೧ನೇ ಪ್ರಮಾತ್ತಿ ಸಂವತ್ಸರದ ಮಾರ್ಗಿಶಿರ ಶು
೧೨ ಶನಿವಾರದ ತಾಸು ೭ಕ್ಕೆ ರಾಘವಾಂಕಯ್ಯಗಳ ಕಾವ್ಯ ಸಂಪೂರ್ನವಾಗಿ

ಮುಗಿಧಿತು ಯಿದ ಬರದವರು ಯಾರುಯೆಂದರೆ ಸುಲ್ತಾನಪುರ ಮಟದ ಪಟ್ಟದ ಚಿಕ್ಕವೀರಶ್ವಾಮಿಯವರ ಶಿಷ್ಯರಾದ ಹಂಜಿಗೆ ಬೊಂನಲಿಂಗದೇವರು ಪೌತ್ರ ರಾನಾದ ಕುಂಬೂಸೆ ಪ್ಯಾಟ್ಟಿಯೆಲ್ಲು ಯಿಾಹಾ ಹಂಜಿಗೆ ರುದ್ರಮುನಿದೇವರೂ ಚಿಂನರಾಯಪಟ್ಟಣದ ಹೊಂನಬಂಡಿ ಜಕ್ಕಪ್ಪನವರ ಪುತ್ರನಾದಾ ತಿಪ್ಪಂಣಗೆ ಧನಕನಕವಸ್ತುವಾಹನಪುತ್ರರು ಸಮ್ರುದಿಯಾಗಿ ಸುಕದಲ್ಲಿ ಬಾಳಲೆಂದು ಹರಸಿ ಬರಕೊಟ್ಟ ರಾಘವಾಂಕಯ್ಯಗಳ ಕಾವ್ಯಕೆ ಮಂಗಳಮಹಾಶ್ರೀ.

ವಿಷಯ : ರಾಘವಾಂಕ ಮಹಾಕವಿಯ ಚರಿತ್ರೆ, ಅಷ್ಟಾವರಣಗಳ ಮಹಿಮೆ, ಕೆಲವರು ಶಿವಶರಣರ ಚರಿತ್ರೆ.

ವಿಶೇಷ : ಗ್ರಂಥದ ಅಂತ್ಯದಲ್ಲಿ ಕವಿ ಬರೆದ ಕಾಲ ಮತ್ತು ಪ್ರತಿ ಮಾಡಿದವರ ಹೆಸರು ದೊರೆಯುತ್ತವೆ. ಕೆಲಕೆಲವು ಪತ್ರಗಳಲ್ಲಿ ನಾನಾ ವಿಧವಾದ ಚಿತ್ರಗಳಿವೆ. ಓಲೆಯ ಸ್ಥಿತಿ ಚೆನ್ನಾಗಿದೆ.

1405

ಕೆ. ೬೦೧	**ರಾಘವಾಂಕ ಚರಿತೆ**	ವಾರ್ಧಕಷಟ್ಪದಿ
೧೪" × ೧.೯"	ಸಿದ್ಧನಂಜೇಶ	೧೬೫೦
೧–೧೪೪ ಪತ್ರ	೧೦ ಪಂಕ್ತಿ	೬೬ ಅಕ್ಷರ

ಆದಿ : ರಾಘವಾಂಕಯ್ಯನವರ ಕಾವ್ಯ ಬರೆಉದಕ್ಕೆ ಶುಭಮಸ್ತು

ಪಲ್ಲ ॥ ಶ್ರೀಪರಮ ಕೈಲಾಸದಿಂ 'ದಕ್ಷಿಣಾಸೆಯೊಳ
ಗಾ ಪುಂಣ್ಯ ಸುಕ್ಷೇತ್ರ ಪಂಚಾಖ್ಯ ನಗರದೊಳು
ಪಾಪನಾಶಂ ಕವೀಶಂ ರಾಘವೇಶ್ವರಂ ಮೆರವನು ಸಜ್ಜನರು ಮೆಚ್ಚಿ ॥
ಪದನೂ ॥ ಶ್ರೀ ಗಿರಿಜೆಯಾಸ್ಯಾಬ್ಜ ಷಟ್ಚರಣ ಕಾತ್ಯಾಯ
ನೀ ಗುರುಸ್ತನ ಕುಂಕುಮಾಂಕಿತಾನುಲವಕ್ಷ
ಶ್ರೀ ಗಿರಿಸುತಾ ಯೌವನಾಮೃತ ಸರೋಹಂಸನುಮೆಯ ಹೃದ್ವನಚೈತ್ರನು
ಯೋಗಿಜನ ಹೃಜ್ಯೋತಿ ಭಕ್ತವತ್ಸಲನತುಳ
ಭೋಗಿ ಕಂಕಣ ಭರ್ಗ ಭವರೋಗ ವೈದ್ಯ ಸಲೆ
ಭೋಗಿ ತಳ್ಪಾರ್ಚಿತ ಪದಾಂಭೋಜ ಸ್ತುತಿಸುಹಿತ ಪಾಲಿಸುಗೆ ನಂಜೇಶ್ವರ॥ ೧ ॥

x x x x

ಪುರದ ಸಿಂಹಾಸನಾಧಿಪ ಸಿದ್ಧನಂಜೇಶ
ಚರಣ ಶತಪತ್ರ ಮಧುಕರ ಚಿಕ್ಕನಂಜೇಶ
ವಿರಚಿಸಿದ ರಾಘವಾಂಕನ ಕೃತಿಯು ಶಿವಭಕ್ತತತಿಯ ಘನವಿಮಲಮತಿಯಾ॥೨೧॥

ಅಂತ್ಯ : ಆಚಾರ್ಯ್ರ್ಯ ರೇವಣಾಸಿದ್ಧೇಶ ಮರುಳು ಸಿ
ದ್ಧಾಚಾರ್ಯ್ರ ರಾಮಿದೇವಾಚಾರ್ಯ್ರ ಗುರು ಪಂಡಿ
ತಾಚಾರ್ಯ್ರ ಚವುಕ ಮಧ್ಯದಿ ನಿಂದ ಪಂಚವಂಣಿಗೆ ಸಿದ್ಧನಂಜೇಶ್ವರಾ
ಆಚಾರ್ಯ್ರ ಪದಪದ್ಮ ಮಧುಕರಂ ಚಿಕ್ಕನಂ
ಚಾಚಾರ್ಯ್ರ ರಚಿತವಹ ಹಂಪೆಯ ಹರೀಶ್ವರ ಶಿ
ವಾಚಾರ್ಯ್ರಸುತ ರಾಘವನ ಕೃತಿಗೆ ನವದಶಕ ಸಂಧಿ ಸುವಚೋನುಬಂಧಿ
|| ೧೧೦ ||

ಅಂತು ಸಂಧಿ ೧೯ಕ್ಕಂ ಪದನು ೧೪೫೫ಕ್ಕಂ ಮಂಗಳಮಹಾಶ್ರೀ ||

ವಿಷಯ : ರಾಘವಾಂಕನ ಚರಿತ್ರೆ, ಅಷ್ಟಾವರಣಗಳ ಮಹಿಮೆ, ಕೆಲವರು
ಶಿವಶಿರಣರ ಚರಿತ್ರೆ.

ವಿಶೇಷ : ೪೫ ಮತ್ತು ಕೊನೆಯ ಎರಡು ಪತ್ರಗಳು ಅಲ್ಲಲ್ಲಿ ಒಡೆದಿವೆ.

1406

ಕೆ.ಎ. ೧೮೫ **ರಾಘವಾಂಕ ಚರಿತೆ** ವಾರ್ಧಕಷಟ್ಪದಿ

೧೨.೨" × ೭.೬" ಸಿದ್ಧನಂಜೇಶ ೧೬೫೦

೧–೧೬೦ ಪತ್ರ ೨೦ ಪಂಕ್ತಿ ೨೩ ಅಕ್ಷರ

ಆದಿ : ರಾಘವಾಙ್ಕ ಚರಿತ್ರೆ (ಪ್ರಾರಂಭದಲ್ಲಿ ಇಪ್ಪತ್ತೈದು ಓಲೆಗಳು ಇಲ್ಲ)
...............ಡಲಂ ಉಡುಕುವಾಲುಜ ಚೆಂಗು
ದಶವಪನಪಪ್ತಕಿಂನರಿಯ್ಯುಪಾಂಗಂ ತಿತ್ತಿಮದ್ದಳೆಯು ಮೊದಲಾದುವು
ಎಸೆವ ಶ್ರುತಿ ತಾಳ ಲಯವಾನಂದದಿಂದೆ ಬಾ
ರಿಸುವ ನಲಿದೋದುವ ವಿಳಾಸಿನೀ ಜನದಿನ
ರಸದುದಯಮಂ ತಳೆದು ಸೂಳೆಯಗೇರಿಯ ಕೇರಿಕೇರಿಗಳು ಕಂಗೆಸೆದವು ||೨೩||

ಅಂತ್ಯ : ಆಚಾರ್ಯ್ರ ರೇವಣಾಸಿದ್ಧೇಶ ಮರುಳು ಸಿ
ದ್ಧಾಚಾರ್ಯ್ರ ರಾಮಿದೇವಾಚಾರ್ಯ್ರ ಗುರುಪಂಡಿ
ತಾಚಾರ್ಯ್ರ ಚೌಕಮಧ್ಯದಿ ನಿಂದ ಪಂಚುವಣ್ಣಿಗೆ ಸಿದ್ಧನಂಜೇಶ್ವರಾ
ಆಚಾರ್ಯ್ರಪದಪದ್ಮ ಮಧುಕರ ಚಿಕ್ಕನಂ
ಜಾಚಾರ್ಯ್ರ ರಚಿಕವಹ ಹಂಪೆಯ ಹರೀಶ್ವರ ಶಿ
ವಾಚಾರ್ಯ್ರಸುತ ರಾಘವನ ಕೃತಿಗೆ ನವದಶಕ ಸಂಧಿ ಸುವಚೋನುಬಂಧಿ
|| ೧೧೦ ||

ಅಂತು ಸಂಧಿ ೧೯ಕ್ಕಂ ಪದ ೧೫೦೧ ಗ್ರಂಥ ೧೭೮ ಉಭಯಂ ೧೬೭೯ಕ್ಕಂ
ಮಂಗಳಮಹಾ ಶ್ರೀ|| ಸಂಪೂರ್ಣಂ ||

ವಿಷಯ : ರಾಘವಾಂಕ ಮಹಾಕವಿಯ ಚರಿತ್ರೆ, ಕೆಲವು ಶಿವಶರಣರ ಚರಿತ್ರೆ, ಅಷ್ಟಾವರಣಗಳ ಮಹಿಮೆ.

ವಿಶೇಷ : ಗ್ರಂಥದ ಮೊದಲಿನ ೬ ಪತ್ರಗಳನ್ನೂ ಕೊನೆಯ ೬ ಪತ್ರಗಳನ್ನೂ ಹುಳು ಅಲ್ಲಲ್ಲಿ ತಿಂದಿರುವುದರಿಂದ ಮಧ್ಯೆ ರಂಧ್ರಗಳಾಗಿವೆ. ಗ್ರಂಥ ಅಸಮಗ್ರ.

1407

ಕೆ.ಎ. ೧೯೫/೧	**ರಾಘವಾಂಕ ಚರಿತೆ**	ವಾರ್ಧಕಷಟ್ಪದಿ
೧೨.೯"×೭.೮"	ಸಿದ್ದನಂಜೇಶ	೧೬೫೦
೧—೩೧೮ ಪತ್ರ	೨೬ ಪಂಕ್ತಿ	೨೫ ಅಕ್ಷರ

ಆದಿ : ರಾಘವಾಂಕರ ಕಾವ್ಯ ॥

ಪಲ್ಲ ॥ ಶ್ರೀ ಪರಮ ಕೈಲಾಸದಿಂ ದಕ್ಷಿಣಾಸೆಯೊಳ
ಗಾ ಪುಣ್ಯಕ್ಷೇತ್ರ ಪಂಪಾಖ್ಯ ನಗರದೊಳು
ಪಾಪವಿನಾಶ ಶಿವ ಕವೀಶಂ ರಾಘವೇಶ ಮೆರದನು ಸಜ್ಜನರು ಮೆಚ್ಚಲೂ ॥
ಶ್ರೀ ಗಿರಿಜೆಯಾಸ್ಯಾಬ್ಜ ಷಟ್ಚರಣಕಾಪ್ಯಾಯ
ನೀ ಗುರುಸ್ತನ ಕಂಕುಮಾಂಕಿತಾಮಲ ಪಕ್ಷ
ಶ್ರೀ ಗಿರಿಸುತಾ ಯವ್ವನಾಮೃತ ಸರೋಹಂಸನುಮೆಯ ಹೃದ್ವನಚೈತ್ರನೂ
ಯೋಗಿಜನ ಹೃಜ್ಯೋತಿಭಕ್ತ ವತ್ಸಲನತುಳ
ಭೋಗಿ ಕಂಕಣನಮಳ ಭರ್ಗಾಭವ ರೋಗ ವೈದ್ಯ ಸಲೆ
ಭೋಗಿ ತಲ್ಪಾರ್ಚಿತ ಪದಾಂಭೋಜಸ್ತುತಿ ವಿತತಿ ಪಾಲಿಸುಗೆ ನಂಜೇಶ್ವರಾ ॥ ೧ ॥

x x x x

ಪರಮ ಶಂಕರನ ಚಿತ್ಕಲೆ ತಾನೆ ಮರ್ತ್ಯದಲಿ
ಗುರು ರೂಪದಳೆದಂನದಾನೇಶ್ವರನ ಕರ
ಸ್ಫುರಿತ ಕುರುವತ್ತಿ ನಂಜೇಶ್ವರನ ಕರಕಮಲಸಂಭವಂ ಪೂವಲ್ಲಿಯಾ
ಪುರದ ಸಿಂಹಾಸನಾಧಿಪ ಸಿದ್ಧನಂಜೇಶ
ಚರಣ ಶತಪತ್ರ ಮಧುಕರ ಚಿಕ್ಕನಂಜೇಶ
ವಿರಚಿಸಿದ ರಾಘವಾಂಕನ ಕೃತಿಯ ಶಿವಭಕ್ತತತಿಯ ಘನ ವಿಮಲಮತಿಯಾ ॥ ೨೧ ॥

ಅಂತ್ಯ : ಆಚಾರ್ಯರ ರೇವಣಾಸಿದ್ಧೇಶ ಮರುಳುಸಿ
ದ್ಧಾಚಾರ್ಯ್ಯರ ರಾಮಿದೇವಾಚಾರ್ಯ್ಯರ ಗುರು ಪಂಡಿ
ತಾಚಾರ್ಯ್ಯರ ಚೌಕಮಧ್ಯದಿ ನಿಂದ ಪಂಚವಣಿಗೆ ಸಿದ್ಧನಂಜೇಶ್ವರಾ
ಸ್ವಾಚಾರ್ಯ್ಯರ ಪದಸರಿಸೀರುಹ ಮಧುಪ ಚಿಕ್ಕನಂ
ಜಾಚಾರ್ಯ್ಯರ ರಚಿತವಹ ಹಂಪೆಯ ಹರೀಶ್ವರ ಶಿ
ವಾಚಾರ್ಯ್ಯರಸುತ ರಾಘವನ ಕೃತಿಗೆ ನವದಶಕ ಸಂಧಿ ಸುವಚೋನುಬಂಧಿ
॥ ೧೧೦ ॥

ಅಂತು ಸಂಧಿ ೧೯ಕ್ಕಂ ಪದನು ೧೪೭೭ಕ್ಕಂ ಮಂಗಳಮಸ್ತು ॥

ವಿಷಯ : ಕವಿ ರಾಘವಾಂಕನ ಚರಿತ್ರೆ.

ವಿಶೇಷ : ಗ್ರಂಥದ ಆದಿಯ ಮೂರು ಪ್ರತ್ಯೇಕ ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ. ಪತ್ರದ ಒಂದು ಕಡೆ ಮಾತ್ರ ಬರವಣಿಗೆಯಿದೆ. ಇದೇ ಪುಸ್ತಕದಲ್ಲಿ ಮುಡಿಗೆಯ ಅಷ್ಟಕವೆಂಬ ಇನ್ನೊಂದು ಗ್ರಂಥವಿದೆ.

1408

ಕೆ.ಬಿ. ೧೪೦	**ರಾಘವಾಂಕ ಚರಿತೆ**	ವಾರ್ಧಕಷಟ್ಪದಿ
೭.೮″ × ೫.೯″	ಸಿದ್ಧನಂಜೇಶ	ಸು. ೧೭೦೦
೧–೨೧೧ ಪತ್ರ	೧೬ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ ಗುರು ಪಂಪಾವಿರೂಪಾಕ್ಷಲಿಂಗಾಯ ನಮಃ । ಗುರು ಪ್ರಭು ಸಿದ್ಧರಾಮಾಯ ನಮಃ । ನಂದನನಾಮ ಸಂವತ್ಸರದ ಶ್ರಾವಣ ಶುದ್ಧ ೧೩ ಗುರುವಾರದಲ್ಲು ಹೊಸ ಬಸವೈಯ್ಯನ ಬುಕ್ಕಿಗೆ ರಾಘವಾಂಕೈಯನವರ ಕಾವ್ಯವ ಬರೆವುದಕ್ಕೆ ಶುಭಮಸ್ತು ॥

ಪಲ್ಲವಿ ॥ ಶ್ರೀ ಪರಮ ಕೈಲಾಸದಿಂ ದಕ್ಷಿಣಾಸೆಯೊಳ
ಗಾ ಪುಣ್ಯ ಸುಕ್ಷೇತ್ರ ಪಂಪಾಖ್ಯನಗರದೊಳು
ಪಾಪನಾಶಂ ಕವೀಶಂ ರಾಘವೇಶಂ ಮೆರೆದನು ಸಜ್ಜನರು ಮೆಚ್ಚೆ ॥
ವಾರ್ಧಕಪದ ॥ ಶ್ರೀ ಗಿರಿಜೆಯಾಸ್ಯಾಬ್ಜ ಷಟ್ಚರಣಕಾವ್ಯಾಯ
ನೀ ಗುರುಸ್ತನ ಕುಂಕುಮಾಂಕಿತಾಮಲವಕ್ಷ
ಶ್ರೀ ಗಿರಿಸುತಾ ಯವ್ವನಾಮೃತ ಸರೋಹಂಸನುಮೆಯ ಹೃದ್ವನಚೈತ್ರನು
ಯೋಗಿಜನ ಹೃಜ್ಜ್ಯೋತಿ ಭಕ್ತವತ್ಸಲನತುಳ
ಭೋಗಿ ಕಂಕಣನಮಳಭರ್ಗ್ಗ ಭವರೋಗವೈದ್ಯ ಸಲೆ
ಭೋಗಿ ತಳ್ಪಾರ್ಚ್ಚಿತ ಪದಾಂಭೋಜ ಸ್ತುತಿವಿತತಿಯಂ ಪಾಲಿಸುಗೆ ನಂಜೇಶ್ವರಂ
॥ ೧ ॥

ಅಂತ್ಯ : ಧಾರುಣಿಯೊಳಿದು ಶುಭೋದಯವೋದುವರ್ಗೆ ಸಂ
ಪೂರಿತಾನಂದ ಶರನಿಧಿಯು ಮಾರಾರಾತಿ.
ಕಾರುಣ್ಯಕಾಸ್ಪದಮಿದಗಣಿತದ ಮಹಿಮೆಗಾಗರಮಾದ ಸತ್ಕಾವ್ಯವು
ಚಾರುತರ ಭಕ್ತಿಯಿಂ ಬರದೋದೆ ಕೇಳೆ ಪರಿ
ಹಾರಕಂ ಭವಭವಾರ್ಚಿತ ದುರಿತವೆಂದು ಕವಿ
ವಾರಿರುಹ ಮಧುಕರಂ ರಾಘವಾಂಕನ ಕೃತಿಗೆ ಪದಿನೆಂಟು ಸಂಧಿಯಕ್ಕುಂ
|| ೪೫ ||

ಶ್ರೀ ಶುಭಮಸ್ತು ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಕವಿ ರಾಘವಾಂಕ ಪಂಡಿತನ ಚರಿತ್ರೆ.

ವಿಶೇಷ : ಸ್ಫುಟಾಕ್ಷರ. ೧೦೮–೧೧೭ರವರೆಗೆ ಪತ್ರಸಂಖ್ಯೆ ಪುನರುಕ್ತಿಯಾಗಿವೆ. ೧೪೧ನೆಯ ಪತ್ರಗಳು ಎರಡಿವೆ. ೧೯೮ ಮತ್ತು ೨೦೪ನೆಯ ಕ್ರಮಸಂಖ್ಯೆಗಳು ಬಿಟ್ಟುಹೋಗಿವೆ. ತೆಳುವಾದ ಕಾಗದ.

1409

ಕೆ. ೬೭/೧	**ರಾಜಶೇಖರವಿಳಾಸ**	ಚಂಪು
೧೩.೩" × ೧.೭"	ಷಡಕ್ಷರದೇವ	೧೬೫೫
೧–೧೧೩ ಪತ್ರ	೧೧ ಪಂಕ್ತಿ	೭೬ ಅಕ್ಷರ

ಆದಿ : ರಾಜಶೇಖರವಿಳಾಸಂ||
ವೃ || ಶ್ರೀ ಶೈಲಾದಿಪ್ರಸಿದ್ಧಂ ಸುರಚಿರ ವಿಜಯಸ್ತುತ್ಯನುದ್ರಿಕ್ತ ಸತ್ವಾ
ವೇಶಂ ಕಲ್ಯಾಣ ಭೂಭೃ..
........ಚಂದ್ರೋಪಲಸಿತ ಭಸಿತಾನಂತ ಕಾಂತೋತ್ತಮಾಂಗಂ
ಶ್ರೀ ಶೈವಶ್ರೀಯುಮಂ ಮಾಳ್ಕೆಮಗನವರತಂ ನಂದಿಕೇಶಂ ಮಹೇಶಂ || ೧ ||

ಅಂತ್ಯ : ಸುರಚಿರ ಶಾಲಿವಾಹನಶಕಾನ್ವಿತ ರತ್ನಸಮುದ್ರ ಬಾಣಭೂ
ಪರಿಗಣನಾಂಕ ಬಂಧುರ ಜಯಾಬ್ದದ ಮಾಘದ ಶುದ್ಧಪಕ್ಷವಿ
ಸ್ಫುರಿತ ತೃತೀಯ್ಯೆಯೆಲ್ಲಿ ಬುಧವಾರದೊಳೀಕೃತಿ ಪೂರ್ಣಮಾಯ್ತು ಶಂ
ಕರ ಶಿವಲಿಂಗದಂಘ್ರಿ ಕೃಪೆಯಿಂದೆ ಷಡಕ್ಷರಿದೇವ ನಿರ್ಮ್ರಿತಂ || ೧೮೪ ||
ಗದ್ಯ || ಯಿದು ವಿನಮದಮರ ವರ ಮಕುಟತಟಘಟಿತ ಮಣಿಗಣಮಹಾ
ಪ್ರಭಾಪಟಲ ಪರಿವೃತ ಪರಶಿವ x x x x ಶ್ರೀ ಷಡಕ್ಷರಿದೇವ ವಿರ
ಚಿತಮಪ್ಪ ರಾಜಶೇಖರ ವಿಳಾಸ ವಿಪುಳಪ್ರಬಂಧದೊಳ್ ಪರಮೇಶ್ವರ ಪ್ರಸಂ
ನ್ನತಾ ತದಾಸ್ಥಾನ ವರ್ಣನಂ ಚತುರ್ದ್ದಶಾಶ್ವಾಸಂ ಸಂಪೂರ್ಣಂ ಮಂಗಳ
ಮಹಾ ಶ್ರೀ ಶ್ರೀ. ಅಂತು ಆಶ್ವಾಸ ೧೪ಕ್ಕಂ ಪದ್ಯ ೧೮೭೦ಕ್ಕಂ ಮಂಗಳಮಹಾ

ಶ್ರೀ. ರಾಜಶೇಖರವಿಳಾಸ ವಿಪುಳಪ್ರಬಂಧಂ ಶಾಲಿವಾಹನ ಸಖಾಬ್ದಯ
ಸಲುವ ಪ್ರಮಾಧಿತು ಸಂವತ್ಸರದ ಶ್ರಾವಣ ಶುದ್ಧ ೬ ಗುರುವಾರದಲ್ಲು
ಸಂಪೂರ್ಣ್ಣಂ ಮಂಗಳೋಸ್ತು॥
ಕಂ॥ ವಿಲಸತ್ಕೃತಿಯಂ ಲಿಖಿಪಾ
ಗಲಸಿಕೆಯಿಂದುದಿತವಾದ ದೋಷಮನೀಗ
ಳ್ಸಲೆ ಸತ್ಪ್ರಾಥರು ತಿದ್ದಿಯೆ
ನಲವಿಂ ಬುಧಕರ್ಣ್ಣಕತುಳ ಕೌತುಕವಾಳ್ಪುದು॥ ಶ್ರೀ.

ವಿಷಯ: ರಾಜಶೇಖರನ ಚರಿತ್ರೆಯ ಮೂಲಕ ತಿಳಿದುಬರುವ ಪಂಚಾಕ್ಷರೀಮಹಿಮೆ.

ವಿಶೇಷ: ಈ ಕಟ್ಟಿನಲ್ಲಿ ಶಬರಶಂಕರವಿಲಾಸವೆಂಬ ಮತ್ತೊಂದು ಗ್ರಂಥವಿದೆ. ೧, ೩೦, ೩೧, ೩೨, ೩೩, ೩೪ನೆಯ ಪತ್ರಗಳ ಅಂಚು ಮುರಿದಿದೆ. ೪೯, ೫೦, ೫೧ನೆಯ ಪತ್ರಗಳಲ್ಲಿ ಹುಳು ಹೊಡೆದು ರಂಧ್ರ ಬಿದ್ದಿದೆ. ೫೨-೭೨ ಪೂರ್ತ ಪತ್ರಗಳಿಲ್ಲ. ೭೬ನೆಯ ಪತ್ರದ ಒಂದು ಭಾಗ ಮುರಿದು ಗ್ರಂಥ ಲೋಪವಾಗಿದೆ.

1410

ಕೆ. ೩೧೪/೩	**ರಾಜಶೇಖರವಿಳಾಸ**	ಚಂಪು
೧೩" × ೨.೧"	ಷಡಕ್ಷರದೇವ	೧೬೫೫
೨೧ ಪತ್ರ	೧೨ ಪಂಕ್ತಿ	೬೩ ಅಕ್ಷರ

ಆದಿ: ಶ್ರೀ ಗುರು ಸದಾಶಿವ ಸಂಗಮೇಶಾಯ ನಮಃ ॥ x x x x
ರಾಜಶೇಖರವಿಲಾಸವ ಬರವುದಕ್ಕೆ ಶುಭಮಸ್ತು ॥
ವೃತ್ತ ॥ ಶ್ರೀ ಶೈಲಾದಿಪ್ರಸಿದ್ಧಂ ಸುರಚಿರವಿಜಯಸ್ತುತ್ಯನುದ್ರಿಕ್ತ ಸತ್ವಾ
ವೇಶಂ ಕಲ್ಯಾಣ ಭೂಭ್ರುತ್ಸದನದ ಸಮಿತ್ರಂದರಾದಾರದರ್ಮ್ಮಂ
ವೈಶದ್ಯದ್ಯೋತಿ ಚಂದ್ರೋಫಲಸಿ ಭಸಿತಾನಂತಕಾಂತೋತ್ತ್ರವಾಂಗಂ
ಶ್ರೀ ಶೈವಶ್ರ್ಯೇಯಮಂ ಮಾಳ್ಕೆಮಗೆಸವರತಂ ನಂದಿಕೇಶಂ ಮಹೇಶಂ ॥ ೧ ॥
x x x x
ತಂಬೆಲರಂತೆ ತುಂಬುವ ಪೆರೆಯಿಂ ಪೊಜಪೊಣ್ಮುವ ಜೊಂನದಂತೆ ಪೆ
ಣ್ದುಂಬಿಯ ಗಾನದಂತೆ ಪೊಸಸುಗ್ಗಿಯ ನಂದನದಂತೆ ನಲ್ಮೆಯಿಂ
ದಂ ಬಿಗಿದಟ್ಟಿದಂಗನೆಯ ಪೆರ್ಮೊಲೆಯ ಸೋಂಕನ ಸೌಖ್ಯದಂತೆ ಚಿ
ತ್ತಂಬಿಡಿದಪ್ಪುವೀಕೃತಿ ಷಡಕ್ಷರಿದೇವಕೃತಂ ರಸಜ್ಞರಾ ॥ ೮೪ ॥

ಅಂತ್ಯ: ಕಂ ॥ ನುಡಿದನೆಲೆ ಜೀಯ್ಯ ನಿಂಮೊ
ಳ್ಮೃಡನೆಂದುಂ ನೆಲಸಿ ನಿಂದನದಱಿಂ ನೀಮಿ
ರ್ದೆಡಕಾಶಿಯಲ್ತೆ ಬೇಱಿಂ
ನೆಡೆಯಾಡಲದೇಕೆ ತಂಪಿನಾ ನದಿಯುದಮಂ ॥ ೩೦ ॥
ವೃತ್ತ ॥ ಜವದಿಂದೆಲ್ಲಿಗೆನುತ್ತೆ........

ವಿಷಯ : ಸತ್ಯೇಂದ್ರಚೋಳರಾಜನ ಕಥೆ.

ವಿಶೇಷ : ತೃತೀಯಾಶ್ವಾಸದ ೩೦ನೆಯ ಪದ್ಯದವರೆಗೆ ಮಾತ್ರ ಇದೆ. ಅಸಮಗ್ರ. ಶಕಟರೇಫದ ಪ್ರಯೋಗವಿದೆ. ಇಲ್ಲಿಂದ ಮುಂದಕ್ಕಿರುವ ಎರಡು ಪತ್ರಗಳು ಈ ಗ್ರಂಥಕ್ಕೆ ಸಂಬಂಧಿಸಿದ್ದರೂ, ಪ್ರಕೃತ ಸಂದರ್ಭಕ್ಕೆ ಹೊಂದುವುದಿಲ್ಲ. ಪತ್ರಗಳ ಕ್ರಮಸಂಖ್ಯೆಯಿಲ್ಲ, ಎಣಿಕೆಮಾಡಿ ಹಾಕಲಾಗಿದೆ. ಇದೇ ಕಟ್ಟಿನಲ್ಲಿ ರಾಜೇಂದ್ರ ವಿಜಯ ಮತ್ತು ಗಿರಿಜಾಕಲ್ಯಾಣವೆಂಬ ಇತರ ಎರಡು ಕೃತಿಗಳಿವೆ.

1411

ಕೆ. ೩೫೦	**ರಾಜಶೇಖರವಿಳಾಸದ ವ್ಯಾಖ್ಯಾನ**	ಟೀಕು
೯.೪" × ೨.೨"	ಷಡಕ್ಷರದೇವ	೧೬೫೫
೧–೫೨ ಪತ್ರ	೧೨ ಪಂಕ್ತಿ	೫೦ ಅಕ್ಷರ

ಆದಿ : ರಾಜಶೇಖರದ ನುಡಿ। ಪ್ರಥಮ ವೃತ್ತ॥

ಶ್ರೀ ಶೈಲಾದಿ। ಶ್ರೀಶೈಲ ಮೊದಲಾದ ಪರ್ವ್ವತಗಳಲ್ಲಿ। ಪ್ರಸಿದ್ಧಂ। ಪ್ರಖ್ಯಾತನಾದಂಥ। ವಿಜಯ। ಅರ್ಜುನನಿಂದೆ। ಸ್ತುತ್ಯಂ। ನುತಿಸಲ್ಯೋಗನಾದಂಥ। ವುದ್ರಿಕ್ತ। ವುತ್ಕರ್ಷವಾದ। ಸತ್ವ। ಪ್ರಾಣಿಗಳ। ಆವೇಶಂ। ಪ್ರವೇಶವನುಳ್ಳಂಥ। ಕಲ್ಯಾಣ ಭೂಭ್ರುತ್। ಕನಕಾಚಲದಲ್ಲಿ। ಸದನ। ಮಂದಿರವನುಳ್ಳಂಥ। ಧನದ। ಕುಬೇರನಿಗೆ। ಮಿತ್ರಂ। ಆಪ್ತನಾದಂಥಾ। ಧರಾಧಾರ। ಕನಕಾದ್ರಿಯು। ಧರ್ಮಂ। ಬಿಲ್ಲಾಗುಳ್ಳಂಥ x x x x ನಂದಿಕೇಶಂ। ನಂದಿಕೇಶ್ವರನು। ಶ್ರೀ। ಶೋಭಾಂ ಸಮೇತವಾದ। ಶೈವ। ಶಿವಸಂಬಂಧವಾದಂಥ। ಶ್ರೀಯಮಂ। ಮೋಕ್ಷವನು। ಮಾಳ್ಕೆ। ಮಾಡಲಿ ॥೧॥

ಅಂತ್ಯ : ಸದಾಲೋಕಹಿತ। ಕರಸ್ಫುರಿತ। ಪುಷ್ಕರವಿಬುಧ ಚಕ್ರಸಮಾಹಿತ। ದಯ। ರುಚಿರ। ಶಿತಭಾನು ರಂಜಿತ ಮಹೋತ್ಪಲಮಿತ್ರ ವಿಳಸಿತ ಮತ್ತುವಲ್ಲದೆ। ಸದಾ। ಯಾವಾಗಲೂ। ಲೋಕಹಿತಕರ। ಜಗತ್ರೈರಕನಾಗಿರುವಂಥ। ಪುಷ್ಕರ। ಕಮಲವುಳ್ಳಂಥ। ವಿಬುಧ। ಪಕ್ಷಿಶ್ರೇಷ್ಠವಾದಂಥ। ಚಕ್ರ। ಚಕ್ರವಾಕಕ್ಕೆ। ಸಮಿಹಿತ। ಹಿತಕರವಾದುಥ। ವುದಯ। ಅಭ್ಯುದಯವುಳ್ಳಂಥ। ರುಚಿ। ಕಾಂತಿಯಿಂದ। ಲಸಿತ। ವೊಪ್ಪುತ್ತಿರುವಂಥ। ಭಾನು। ಕಿರಣಗಳಿಂದ। ರಂಜಿತ। ಪ್ರಕಾಶಿಸುವಂಥ। ಮಹಾತ್ಸಮಿತ್ರ। ಸೂರ್ಯ್ಯನಿಂದ। ವಿಳಸಿತ। ವೊಪ್ಪುವಂಥಾದು। ಅಂತುಮಲ್ಲದೆ। ಹಾಂಗುವಲ್ಲದೆ। ಸತ್। ನಕ್ಷತ್ರಗಳ। ಆಲೋಕ। ನೋಟಕ್ಕೆ। ಹಿತಕರ। ಪ್ರೀತಿಕರವಾದಂಥ। ಸ್ಫುರಿತ। ಪ್ರಕಾಶಿಸುವಂಥ। ಪುಷ್ಕರ। ಕಿರಣಗಳಿಂದ। ವಿಬುಧಚಕ್ರ। ದೇವತಾಸಮೂಹಕ್ಕೆ। ಸಮಾಹಿತ। ಪ್ರೀತಿಕರವಾದಂಥ। ವುದಯ। ಅಭ್ಯುದಯದಿಂದ। ರುಚಿರ।

ಮನೋಹರವಾದಂಥ । ಸಿತಭಾನು । ಚಂದ್ರನಿಂದ । ರಂಜಿತ । ಪ್ರಕಾಶಿಸುವಂಥಾದು । ಚಂದ್ರಂ ॥

ವಿಷಯ : ರಾಜಶೇಖರವಿಳಾಸದ ಕ್ಲಿಷ್ಟ ಪದಗಳ ಅರ್ಥ.

ವಿಶೇಷ : ೧ ಮತ್ತು ೧೪ನೆಯ ಪತ್ರಗಳು ಅಂಚಿನಲ್ಲಿ ಸ್ವಲ್ಪ ಮುರಿದಿವೆ.

1412

ಕೆ.ಬಿ ೩೧೬	**ರಾಜಶೇಖರವಿಳಾಸ ಷದ್ಯದ್ವಯವ್ಯಾಖ್ಯಾ**	ಪದ್ಯ, ವ್ಯಾಖ್ಯಾನ
೮" × ೬.೫"	ನಂಜುಂಡ	?
೧–೧೨ ಪತ್ರ	೧೨ ಪಂಕ್ತಿ	೨೨ ಅಕ್ಷರ

ಆದಿ : ಶ್ರೀರಸ್ತು॥ ರಾಜಶೇಖರಸ್ಥಿತ ಸಭಾವರ್ಣನ ಪದ್ಯಯೋರ್ದ್ವಯೋರರ್ಥವರ್ಣನ ಪತ್ರಮಿದಂ॥

ರಾಜಶೇಖರ ಕಾವ್ಯೆ ರಾಜಸಭಾವರ್ಣನಸ್ಯ ಪದ್ಯಸ್ಯ ಯಥಾಮತಿ ವ್ಯಾಖ್ಯಾ ಕ್ರಿಯತೆ ನಂಜುಂಡಕವಿನಾ॥

ಮೂ ॥ ವಿತತ ಸದಾನ ವಾರಿವಿಭವಂ ಪ್ರಮದಾಳಿ ಮನೋಜ್ಞವರ್ಣ ಸಂ
ಗತ ಹರಿಧಾಮಮುಜ್ವಲ ಕರಾಂಚಿತ ಪುಷ್ಕರಕಾಂತ ಮುದ್ರ ಸಾ
ಶ್ರಿತ ಘನವಿಗ್ರಹಾಂಚಿತಮುದಾತ್ತ ಬಲಸ್ಥಿತ ಪ್ರೋಲ್ಲುದಿಂದಿರಾ
ಪತಿಪುರಮುಂ ಮಹೇಂದ್ರಪುರಮುಂ ಗಜಮುಂ ಸಭೆ ತನ್ಮಹೀಶನಾ ॥ ೧ ॥

ಅಸ್ಯಾರ್ಥಃ । ವೈಕುಂಠಪಕ್ಷೆ ॥

ವ್ಯಾ ॥ ವಿತತಸದಾನವಾರಿವಿಭವಂ । ವಿನಾ । ಗರುಡೇನ । ತತಂ ವ್ಯಾಪ್ತಂ । ನಿ ॥ ವಿಃ ಪಕ್ಷಿ ಪರಮಾತ್ಮನೋರಿತಿ ನಾನಾರ್ಥರತ್ನಮಾಲಾ । ದಾನವಾರಿಃ । ವಿಷ್ಣುಃ । ನಿ ॥ ದೈತ್ಯಾರಿಃ ಪುಂಡರೀಕಾಕ್ಷ ಇತ್ಯಮರಃ । ತಸ್ಯ ವಿಭವಃ । ಐಶ್ವರ್ಯಂ। ನಿ ॥ವಿಭವೋ ರೈವೋಕ್ಷೈಶ್ವರ್ಯ ಇತಿ ಮೇದಿನೀ॥ ತೇನ ಸಹ ವರ್ತತ ಇತಿ ಸದಾನವಾರಿವಿಭವಂ । ವಿತತಂಚ ತತ್ । ಸದಾನವಾರಿ ವಿಭಂಚೆತಿ ಕರ್ಮಧಾರಯಸಮಾಸಃ । ಗರುಡೇನ ವಿಷ್ಣುಮಹದೈಶ್ವರ್ಯೇಣ ಯುಕ್ತಮಿತ್ಯರ್ಥಃ ।

ಅಂತ್ಯ : ಆತ್ತ ಕಮಲೇತಿ ॥ ಆತ್ತಾಃ ಪಾಪ್ತ್ರಾಃ । ಕಮಲಾಯಾಃ । ಲಕ್ಷ್ಮ್ಯಾಃ । ಅಪಾಂಗಯೋಃ । ನೇತ್ರಾಂತಯೋಃ । ಪ್ರಭಾಃ । ಕಾಂತಯಃ । ವೀಕ್ಷಣಾನೀತಿ ಯಾವತ್ । ಯೈಸ್ತೈ । ಆತ್ತಕಮಲಾಪಾಂಗಪ್ರಭಾಃ । ಲಕ್ಷ್ಮೀಕಟಾಕ್ಷವೀಕ್ಷಣ ಕಲಿತಾ ಇತ್ಯರ್ಥಃ। ತೈಃ। ಭಾಸುರಾ। ಪ್ರಕಾಶಮಾನಾ । ಸರ್ವಸಂಪತ್ಸಮೃದ್ಧ ಜನಸುಂದರಾ ಸಭೇತಿ ಸರ್ವಂ ಸಮಂಜಸಂ ॥ ಶ್ರೀ ॥ ನಂಜುಂಡಪಂಡಿತೇನ ರಾಜಶೇಖರಸ್ಥಿತ ವೃತ್ತದ್ವಯಸ್ಯ ವ್ಯಾಖ್ಯಾ ಲಿಖಿತಂ ॥ ಸಂಪೂರ್ಣಂ ॥

ವಿಷಯ : ರಾಜಶೇಖರವಿಲಾಸದಲ್ಲಿರುವ ಸಭಾವರ್ಣನೆಯ ಎರಡು ಪದ್ಯಗಳಿಗೆ ಸಂಸ್ಕೃತದಲ್ಲಿ ಶ್ಲೇಷಾರ್ಥವಿವರಣ.

ವಿಶೇಷ : ಅಕ್ಷರಗಳು ಸುಂದರವಾಗಿಯೂ ವಿರಳವಾಗಿಯೂ ಇವೆ. ಕೊನೆಯ ಕೆಲವು ಪತ್ರಗಳಿಗೆ ಹುಳು ಹೊಡೆದು ಅಂಚಿನಲ್ಲಿ ರಂಧ್ರಗಳಾಗಿವೆ.

1413

ಕೆ.ಎ. ೬೫	ರಾಜಾವಳೀ ಕಥೆ	ಪದ್ಯ, ಶ್ಲೋಕ, ಗದ್ಯ
೧೨.೩" × ೬.೬"	ದೇವಚಂದ್ರ	೧೮೪೧
೧–೫೩೩ ಪತ್ರ	೨೪ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ ರಾಜಾವಲಿ ಕಥಾ ॥
ಕಂ ॥ ಶ್ರೀಮತ್ಸಮಸ್ತ ಭುವನ ಶಿ
ರೋಮಣಿ ಸದ್ವಿನಯ ವಿನಮಿತಾಖಿಲಜನ ಚಿಂ
ತಾಮಣಿಯೆನಿಪ್ಪ ಪರಮ
ಸ್ವಾಮಿಯನಭಿನುತಿಸಿ ಪಡೆವೆ ಶಾಶ್ವತಸುಖಮಂ ॥
ವ ॥ ಇಂತು ಇಷ್ಟದೇವತಾ ನಮಸ್ಕಾರಮಂ ಮಾಡಿ ಭಗವದರ್ಹತ್ಸರ್ವಜ್ಞ ಶಾಸನಸಮುದಿತ ಪ್ರಥಮಾನುಯೋಗ ಕಥಾಸಾರಾಮೃತ ಪಾರಾವಾರದ ಕಥಾವತಾರದೊಳೊಂದು ಬಿಂದುವಂ ತೋರುವಂತೆ ಸ್ವಲ್ಪವಾಗಿ ಗುರುತುಮಾತ್ರಮಂ ತೋರುವೆನಿದಂ ಮಕರಂದಗಂಧಮಂ ಮಾರುತಂ ಪ್ರಸರಿಪಂತೆ ಸತ್ಪುರುಷರೀ ಕಥೆಯಂ ಶಬ್ದದೋಷಮಂ ತಿದ್ದಿ ಬುಧರ್ಗ್ಗರಿವಂತು ಪೇಳ್ವುದೆಂದವರಂ ನುತಿಸಿ ಹೊಸಕನ್ನಡ ವಾಕ್ಯಂಗಳಿಂ ವಿರಚಿಸುವೆನು.
ಕಂ॥ ಶ್ರೀಸುಜನಸ್ತುತರಖಿಳ ಕ
ಳಾಸದನರ್ಮೋಹತಿಮಿರಮಂ ಕಳೆದು ಕರಂ
ಭಾಸುರ ವಿಚಾರದಕ್ಷರು
ವೈಶಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ ॥
ವ ॥ ಆಕೃತಿಯಂ ವಿದ್ಯಾವಿಶಾರದರ್ವಿಚಾರದಕ್ಷರು ವಿಜ್ಞಾನ ಸಂಪನ್ನರುಮಿಾ ಭರತದಾರ್ಯಾಖಂಡದ ಪ್ರಪಂಚಮುಮನಾದಿಯಿಂ ಪೇಳ್ವುದೆನೆ ರಾಜಾವಲಿ ಕಥಾವತಾರಮೆಂಬಭಿಧಾನಮನಿಟ್ಟು ಪೇಳ್ವೆನೆಂತೆಂದೊಡೆ—

ಅಂತ್ಯ : ಶ್ರೀಮದ್ರಾಜಾಧಿರಾಜಾಖಿಲ ಸುಗುಣಾಗಣಾಲಂಕೃತಂ ಕೃಷ್ಣರಾಜ
ಶ್ರೀಮಂತಾಶ್ರಿತ ವೈದ್ಯರಾಜನರ್ಹತ್ಪಾದಾಬ್ಜಲೀನಾಳೀ ನಿ
ಸ್ಸೀಮಂ ಸದ್ಗುಣಿಸೂರಿಪಂಡಿತ ಜಗದ್ವಿಖ್ಯಾತ ವಿದ್ವಜ್ಜನ
ಪ್ರೇಮಂ ಕಾರಿತ ಸತ್ಪ್ರಬಂಧಕಥನಂ ಭದ್ರಂ ಶುಭಂ ಮಂಗಲಂ ॥
ಕಂ ॥ ಹಳೆಗಂನಡ ಬೆಳುಗಂನಡ
ವಳಗಂನಡವಚ್ಚಗಂನಡ ಪೊಸತೆಂಬುದು

ತೆಳುಗಂನಡ ಮಿಶ್ರದಿನಿದ
ನಿಳೆಯೊಳು ಸತ್ಪುರುಷರೋದಿ ಕೇಳ್ವುದು ಸತತಂ ||
ಇಂತೀ ಕಥೆಯಂ ಕೇಳ್ವರ
ಭ್ರಾಂತಿಯು ನೆರೆ ಕೆಡುಗು ಬಳಿಕನೂಯುಂ ಶ್ರೀಯುಂ
ಸಂತಾನವೃದ್ಧಿ ಸಿದ್ಧಿಯ
ನಂತಸುಖಂ ತಪ್ಪುದಪ್ಪುದೆಂಬುದು ನಿರುತಂ ||
ಇತಿ ಸತ್ಯಪ್ರವಚನ ಕಾಲಪ್ರವರ್ತನ ಕನಕಾಚ್ಯಲ ಶ್ರೀ ಜಿನಾರಾಧಕ ಮಲೆಯೂರ ದೇವಚಂದ್ರಪಂಡಿತವಿರಚಿತಂ ರಾಜಾವಲೀ ಕಥಾಸಾರದೊಳ್ಜಾತಿ ನಿರ್ನ್ನಯಪ್ರರೂಪಣಂ ಏಕಾದಶಾಧಿಕಾರಃ ||
ಅಂತು ಸಂಧಿ ೧೧ಕ್ಕಂ ಪದಪ್ರಮಾಣ ಮಂಗಳಮಹಾ ಶ್ರೀ.

ವಿಷಯ : ಪೌರಾಣಿಕ ಮತ್ತು ಚಾರಿತ್ರಿಕ ಕಥಾಸಂಕಲನ.

ವಿಶೇಷ : ಶಿಥಿಲಪ್ರತಿ. ಕೆಲವು ತಪ್ಪುಗಳನ್ನು ಕೆಂಪು ಮಸಿಯಿಂದ ತಿದ್ದಿ ಸರಿಯಾದ ಪಾಠಗಳನ್ನು ಬರೆದಿರುತ್ತಾರೆ. ಅನೇಕ ಪೌರಾಣಿಕ ಮತ್ತು ಚಾರಿತ್ರಿಕ ಕಥೆಗಳನ್ನು ಈ ಕೃತಿಯಲ್ಲಿ ಕವಿ ಸಂಗ್ರಹಿಸಿ ಹೇಳಿದ್ದಾನೆ. ೧೪೮–೨೬೭ರ ವರೆಗಿನ ಪತ್ರಗಳು ಲುಪ್ತವಾಗಿವೆ. ಪತ್ರದ ಒಂದು ಕಡೆ ಮಾತ್ರ ಬರವಣಿಗೆಯಿದೆ. ಗ್ರಂಥದ ಆದಿಯ ಬೇರೆ ಮೂರು ಪತ್ರಗಳಲ್ಲಿ ವಿಷಯಾನುಕ್ರಮಣಿಕೆಯಿದೆ.

1414

ಕೆ. ೧೬೮ ೧	**ರಾಜೇಂದ್ರವಿಜಯ**	ಚಂಪು
೭"×೨"	ಮುರಿಗೆ ದೇಶಿಕೇಂದ್ರ	ಸು. ೧೫೬೦
೧–೧೧೯ ಪತ್ರ	೧೦ ಪಂಕ್ತಿ	೩೪ ಅಕ್ಷರ

ಆದಿ : ರಾಜೇಂದ್ರ ವಿಜಯಕ್ಕೆ........ವಿಕ್ರೀಡಿತ ವೃತ್ತ ||
........ಡ ಮಂಡಲ ಪಿಚಂಡಾಮ್ನಾಯಾಪಾಜಿಸ್ಥಿರಂ
ಭೂಮಿದ್ರೋರ್ಮ್ಮಿಕನಾಮಯಾಳಿಹರ ಶಿಷ್ಟಾಪಾಲ ದುಷ್ಟಾದ್ದ....ಂ
ಸೋಮಂ ಪ್ರಾಂಜುಳನೂರ್ಜಿತಂ ಜಯತು ನಿತ್ಯಾನಂದಮೌನೀಂದ್ರಹೃ
ದ್ಧಾಮಂ ನಿರ್ಜ್ಜರ ಚಕ್ರವರ್ತ್ತಿ....ಹಿಮಂ ಸ್ವಾಮಿಷ್ಟಾಲಿಂಗಂ ಕರಂ || ೧ ||

ಅಂತ್ಯ : ಶಾರ್ದೂಲ ||
ವೀರಾಚಾರ ವಿಚಾರಸಾರ ಜನಮಂದಾರಾಘಘೂರಾಧ್ಯತಾ
ರಾರಾಜಲ ಪರಾಪರೋರು ಮಹಿಮಾಧಾರಾಭ್ರಚಾರಾಪಗಾ
ಕ್ಷೀರಾಪಾರ ಪೃಷಂತಿ ರಾಜಿತ ಜಟಾಕೋಟೀರಧಾರಾಭಿಗಂ
ಭೀರೋದೂರ ಸುಮೇರು ಚಾಪ ಸಲಹೈ ಶ್ರೀಶಾಂತವೀರೇಶ್ವರಾ || ೧೯ ||

ಗದ್ಯ ॥ ಇದು ಮದುಭಂಜನಾಜ್ಜುರ್ನೋದರ ಪುರಂದರ ಪುರೋಗಮ ನಾನಾ ಸುರೋರಗನಿಕರ ನವೀನ ಸುರುಚಿರ ಪ್ರಚುರಾನರ್ಘ್ಯಮಣಿಗಣಖಚಿತ ರಚ ನೋತ್ತುಂಗ ಶೃಂಗಾರಸಾರಕೋಟಿ ಕೋಟೀರ ಸ್ಫಾರರುಚಿ ಕದಂಬ ಪ್ರತಿ ಬಿಂಬಿತ ವಿಮಳ ವಿಳಸಿತ ನಖಮುಕುರ ರಾಜಿರಾಜಿತಸ್ಫುರಣ ಚರಣಾರವಿಂದ ಚಂದ್ರಶೇಖರ ಪರಮ ಶಿವಶರಣ ರಾಜೇಂದ್ರ ಹಂವಿರಾರ ವಿಕ್ರಮಾತುಳ ಪ್ರಬಂಧದೊಳ್ಬದ್ರಾಯುಷ್ಯ ರಾಜಚರಿತ ಬಸವಲಿಂಗನುತಿ ಪ್ರಕಥನಂ ನವಮ ಪ್ರಕರಣಂ ಸಮಾಪ್ತಂ ಶಿವಮಸ್ತು॥ ಶ್ರೀ.

ವಿಷಯ : ಮಲಪ್ರಹಾರಿಯ ತೀರದಲ್ಲಿರುವ ಹವಿರ್ಮಾರಪುರವೆಂಬ ನಗರಕ್ಕೆ ದೊರೆ ಯಾದ ತ್ರೈಲೋಕ್ಯ ಚೂಡಾಮಣಿಯ ಮಗ ಹವಿರ್ಮಾರನ ಕಥೆ.

ವಿಶೇಷ : ಕೆಲವು ಪತ್ರಗಳು ತ್ರುಟಿತ. ಶಕಟರೇಫವಿದೆ. ಕ್ರಮಾಂಕ ೯ ಬಿಟ್ಟು ಹೋಗಿದೆ. ಒಟ್ಟು ಪತ್ರಗಳ ಸಂಖ್ಯೆ ೧೦೮. ಕಾರಕಲಕ್ಷಣವೆಂಬ ಸಂಸ್ಕೃತ ಕೃತಿ ೧೦೯–೧೧೪ರ ವರೆಗೆ ಇದೆ.

1415

ಕೆ. ೧೯೪/೨	**ರಾಜೇಂದ್ರವಿಜಯ**	ಚಂಪು
೧೧.೨" × ೨"	ಮುರಿಗೆ ದೇಶಿಕೇಂದ್ರ	ಸು. ೧೫೬೦
೧೮೧–೨೨೦ ಪತ್ರ	೧೧ ಪಂಕ್ತಿ	೭೮ ಅಕ್ಷರ

ಆದಿ : ಶ್ರೀ ಶಿವಾಯ ನಮಃ ॥ ರಾಜೇಂದ್ರ ವಿಜಕೆ ಶಿವಮಸ್ತು ॥
ಶಾರ್ದೂಲವಿಕ್ರೀಡಿತ ವೃತ್ತ ॥
ಶ್ರೀಮತ್ಕಾಂಡಜಜಾಂಡಮಂಡಲ ಪಿಚಂಡಾಮಾಯಾವಾಜಿಸಿರಂ
ಭೂಮಿದ್ರೋರ್ಮಿತ ನಾಮಯಾಳಿಹರ ಶಿಷ್ಟಾಪಾಲ ದುಷ್ಟಾರ್ದನಂ
ಸೋಮಂ ಪ್ರಾಂಜುಳನೂರ್ಜಿತಂ ಜಯತು ನಿತ್ಯಾನಂದ ಮೌನೀಂದ್ರ ಹೃ
ದ್ಧಾಮಂ ನಿರ್ಜರ ಚಕ್ರವರ್ತಿ ಮಹಿಮಂ ದೇವೇಷ್ಟ ಲಿಂಗೇಶ್ವರಂ ॥ ೧ ॥

ಅಂತ್ಯ : ಶಾರ್ದೂಲ ॥
ವೀರಾಚಾರ ವಿಚಾರಸಾರ ಜನಮಂದಾರಾಘದೂರಾಢ್ಯತಾ
ರಾರಾಜಾಲ ಪರಾಪರೋರು ಮಹಿಮಾದಾರಾಭ್ರಚಾರಾಪಗಾ
ಕ್ಷೀರಾಪಾರ ಪೃಷಂತಿರಾಜಿತ ಜಟಾಕೋಟೀರದೂರಾಭಿ ಗಂ
ಭೀರೋಧಾರ ಸುಮೇರು ಚಾಪ ಸಲಹೈ ಶ್ರೀ ಶಾಂತವೀರೇಶ್ವರಾ ॥ ೧೯ ॥
ಗದ್ಯ ॥ ಇದು ಮದುಭಂಜನಾಜ್ಜುರ್ನೋದರ ಪುರಂದರ ಪುರೋಗಮ ನಾನಾ ಸುರೋರಗ ನಿಕರ ನವೀನ ಸುರುಚಿರ ಪ್ರಚುರಾನರ್ಘ್ಯಮಣಿಗಣಖಚಿತ ರಚ ನೋತ್ತುಂಗ ಶೃಂಗಾರಸಾರಕೋಟಿ ಕೋಟೀರಸ್ಫಾರರುಚಿಕದಂಬ ಪ್ರತಿ

ಬಿಂಬಿತ ವಿಮಳ ವಿಳಸಿತ ನಖ ಮುಕುರ ರಾಜಿರಾಜಿತ ಸ್ಫುರಣ ಚರಣಾರವಿಂದ ಚಂದ್ರಶೇಖರ ಪರಮ ಶಿವಶರಣ ರಾಜೇಂದ್ರಹಂಮಿೀರ ವಿಕ್ರಮಾತುಳ ಪ್ರಬಂಧ ದೊಳ್ಬದ್ರಾಯುಷ್ಯರಾಜ ಚರಿತ ಬಸವಲಿಂಗನುತಿಪ್ರಕಥನಂ ನವಮ ಪ್ರಕರಣಂ ಸಮಾಪ್ತ ಶಿವಮಸ್ತು ಶ್ರೀ.

ವಿಷಯ : ಹಮ್ಮೀರಪುರಕ್ಕೆ ದೊರೆಯಾದ ತ್ರೈಲೋಕ್ಯಚೂಡಾಮಣಿಯ ಮಗ ಹಮ್ಮೀರನ ಚರಿತ್ರೆ.

ವಿಶೇಷ : ಶಕಟರೇಫದ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಭಾವಚಿಂತಾರತ್ನವೆಂಬ ಗ್ರಂಥವೂ ಇದೆ.

1416

ಕೆ. ೩೧೪/೧	**ರಾಜೇಂದ್ರವಿಜಯ**	ಚಂಪು
೧೩" × ೨.೧"	ಮುರಿಗೆ ದೇಶಿಕೇಂದ್ರ	ಸು. ೧೫೬೦
೪–೫೩ ಪತ್ರ	೧೧ ಪಂಕ್ತಿ	೬೫ ಅಕ್ಷರ

ಆದಿ : ....ಮಿದೆವಿ ಪೊದೆದತಿ ಹರಿದಂ
ಬರವೆಂಬಂತಿರೆ ಪಸುರಾ
ದುರುಶಾಳಿಕ್ಷೇತ್ರನೆಸಿಗುವಿಳೆಗತಿಭಾಗ್ಯಂ ॥ ೫೦ ॥
ನೆಲ್ಲವೆಳೆಗದ್ದೆಗಾವ ಸು
ಪುಲ್ಲಾಕ್ಷಿಯರಧರ ರದನ ರುಚಿಯಾ ಕಂಡುಂ
ಸಲ್ಲಸಿತ ಬಿಂಬಕರಕದ
ನಲ್ಲಿನಿವಂಣೆಂದು ತೊಲಗದಿರ್ದ್ದವು ಗಿರಿಗಳ್ ॥ ೫೧ ॥

ಅಂತ್ಯ : ಶಾರ್ದ್ದೂಲ ॥
ವೀರಾಚಾರ ವಿಚಾರಸಾರ ಜನಮುಂದಾರಾಘದೂರಾಢ್ಯತಾ
ರಾರಾಜಾ ಪರಾಪರೋರು ಮಹಿಮಾಧಾರಾಭ್ರಚಾರಾಪಗಾ
ಕ್ಷೀರಾಪಾರ ಪೃಷುತಿರಾಜಿತ ಜಟಾಕೋಟೀರಧಾರಾಭಿ ಗಂ
ಭೀರೋದ್ಧಾರ ಸಮೇರು ಚಾಪ ಸಲಹೈ ಶ್ರೀಶಾಂತವೀರೇಶ್ವರಾ ॥ ೨೦ ॥
ಗದ್ಯ ॥ ಇದು ಮಧುಭಂಗಜನಾರ್ಜ್ಜುನೋಧರ ಪುರಂಧರ ಪುರೋಗಮ ನಾನಾ ಸುರೋರಗ ನಿಕರ ನವೀನ ಸುರಚಿರ ಪ್ರಚುರಾನರ್ಘ್ಯ ಮಣಿಗಣಖಚಿತ ರಚನೋತುಂಗ ಶೃಂಗಾರಸಾರ | ಕೋಟಿಕೋಟೀರಸ್ಫಾರ ರುಚಿಕದಂಬ ಪ್ರತಿ ಬಿಂಬಿತ ವಿಮಳ ವಿಳಸಿತ ನಖರ ಮುಕುರ ರಾಜಿರಾಜಿತಸ್ಫುರಣ ಚರಣಾರವಿಂದ ಚಂದ್ರಶೇಖರ ಪರಮ ಶಿವಶರಣ ರಾಜೇಂದ್ರ ಹಂಮಿೀರ ವಿಕ್ರಮಾತುಳ

ಪ್ರಬಂಧದೊಳ್ । ಭದ್ರಾಯುಷ್ಯರಾಜಚರಿತ ಬಸವಲಿಂಗನುತಿಪ್ರಕಥನಂ । ಅಂತು ನವಮ ಪ್ರಕರಣಕ್ಕೆ ಪದನು ॥ ೬೧೫ ॥ ಕಂ ಮಂಗಳಮಹಾ ಶ್ರೀ ಸಾಮಾಪ್ತ ಶ್ರೀ.

ವಿಷಯ : ಮಲಪ್ರಹಾರಿಯ ತೀರದಲ್ಲಿರುವ ಹಮ್ಮಿರಪುರವೆಂಬ ನಗರಕ್ಕೆ ದೊರೆಯಾದ ತ್ರೈಲೋಕ್ಯ ಚೂಡಾಮಣಿಯ ಮಗ ಹಮ್ಮಿರನ ಕಥೆ.

ವಿಶೇಷ : ಮೊದಲ ಮೂರು ಪತ್ರಗಳಿಲ್ಲ. ೧೭ನೆಯ ಪತ್ರ ಮುರಿದಿದೆ. ಶಕಟರೇಫವಿದೆ. ಗ್ರಂಥದ ಸ್ಥಿತಿ ಸುಮಾರಾಗಿದೆ. ಇದೇ ಕಟ್ಟನಲ್ಲಿ ಗಿರಿಜಾಕಲ್ಯಾಣ ಮತ್ತು ರಾಜಶೇಖರ ವಿಳಾಸವೆಂಬ ಇತರ ಎರಡು ಗ್ರಂಥಗಳಿವೆ.

1417

ಕೆ. ೩೩೨/೧	**ರಾಜೇಂದ್ರವಿಜಯ**	ಚಂಪು
೧೫.೧"×೨"	ಮುರಿಗೆ ದೇಶಿಕೇಂದ್ರ	ಸು. ೧೫೬೦
೧–೪೪ ಪತ್ರ	೧೦ ಪಂಕ್ತಿ	೬೨ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ॥ ಶ್ರೀಮಚ್ಛಾಂಭವ ಲೋಕದಿಂ ಜಗತ್ತುಮಂ ಪಾಲಿಸ ಬಂದ ಪ್ರಮಥ ಗಣಂಗಳ ಸದ್ಬೋದೆಯಂ ಬೋದಿಸಲು x x x ಪ್ರಭುರಾಜ ಮುರಿಗೆಯ ದೇಶಿಕೇಂದ್ರನಾಗಿ ಬಂದು ನಿರೂಪಿಸಿದ ರಾಜೇಂದ್ರ ವಿಜಯವಂ ಬರೆವುಕ್ಕೆ ಶುಭಮಸ್ತು ಕಲ್ಯಾಣಮಸ್ತು ॥ ಶಿವಮಸ್ತು ॥ ಶಾರ್ದ್ದೂಲ ವಿಕ್ರೀಡಿತ ವೃತ್ತ॥

ಶ್ರೀಮತ್ಕಾಂಡಜಜಾಂಡಮಂಡಲ ಪಿಚಂಡಾ ಮಾಯವಾಜಿಸ್ಥಿರಂ
ಭೂಮಿದ್ರೋರ್ಮ್ಮಿಕನಾಮಯಾಳಿ ಹರ ಶಿಷ್ಟಾಪಾಲ ದುಷ್ಟಾರ್ದ್ದನಂ
ಸೋಮಂ ಪ್ರಾಂಜುಳನೂರ್ಜ್ಜಿತಂ ಜಯತು ನಿತ್ಯಾನಂದ ಮೌನೀಂದ್ರ ಹೃ
ದ್ಧಾಮಂ ನಿರ್ಜ್ಜರಚಕ್ರವರ್ತ್ತಿ ಮಹಿಮಂ ದೇವೇಷ್ಟಲಿಂಗೇಶ್ವರಂ ॥ ೧ ॥

ಅಂತ್ಯ : ಶಾರ್ದ್ದೂಲ॥

ವೀರಾಚಾರ ವಿಚಾರಸಾರ ಜನಮಂದಾರಾಘದೂರಾಢ್ಯತಾ
ರಾರಾಜಾಲ ಪರಾಪರೋರು ಮಹಿಮಾಧಾರಾಭ್ರಚಾರಾಪಗಾ
ಕ್ಷೀರಾಪಾರ ಪೃಷಂತಿ ರಾಜಿತ ಜಟಾಕೋಟೀರಧಾರಾಭಿ ಗಂ
ಭೀರೋಧಾರ ಸುಮೇರುಚಾಪ ಸಲಹೈ ಶ್ರೀ ಶಾಂತವೀರೇಶ್ವರಾ ॥ ೨೦ ॥

ಗದ್ಯ॥ ಇದು ಮಧುಭಂಜನಾರ್ಜುನೋದರ ಪುರಂಧರ

x x x x

ರಾಜೇಂದ್ರ ಹಂಮಿರ ವಿಕ್ರಮೂತುಳ ಪ್ರಬಂಧದೊಳ್ಭದ್ರಾಯುಷ್ಯರಾಜ ಚರಿತ ಬಸವಲಿಂಗನುತಿಪ್ರಕಥನಂ ನವಮ ಪ್ರಕರಣಂ ಸಮಾಪ್ತಂ ಶಿವಮಸ್ತೂ ॥ ಮಂಗಳಮಹಾ ಶ್ರೀ.

ವಿಷಯ : ಹಮ್ಮೀರಪುರವೆಂಬ ನಗರಕ್ಕೆ ದೊರೆಯಾದ ತ್ರೈಲೋಕ್ಯಚೂಡಾಮಣಿಯ ಮಗ ಹಮ್ಮೀರನ ಕಥೆ.

ವಿಶೇಷ : ೪೧ನೆಯ ಗರಿ ಮುರಿದಿದೆ. ಗ್ರಂಥದ ಆದಿಯಲ್ಲಿ ಚಿತ್ರವಿರುವ ೨ ಪತ್ರ ಮತ್ತು ಯಜುರ್ವೇದ ಸಟೀಕಿನ ೩ ಪತ್ರಗಳೂ ಇವೆ. ೪೫ನೆಯ ಪತ್ರದಲ್ಲಿ ವಚನಕಾರರ ಹೆಸರುಗಳೂ, ೪೬, ೪೭ರಲ್ಲಿ ಮಠಗಳ ಹೆಸರು, ದೇವತೆಗಳ ವಂಶವೃಕ್ಷ, ಸಂಸ್ಕೃತ ಶ್ಲೋಕಗಳೂ, ಚಿತ್ರಗಳಿರುವ ಬೇರೊಂದು ಪತ್ರವೂ ಇವೆ. ಆಮೇಲೆ ೧–೪, ೯, ೧೦ ಪತ್ರಗಳಲ್ಲಿ ವೈದ್ಯಕ್ಕೆ ಸಂಬಂಧಿಸಿದ ವಿಷಯವೂ ಅನಂತರ ಶಬ್ದಾನುಶಾಸನಕ್ಕೆ ಸಂಬಂಧಿಸಿದ ೩ ಪತ್ರಗಳೂ ತರುವಾಯ ಚಿತ್ರವಿರುವ ಮತ್ತೊಂದು ಪತ್ರವೂ ಇವೆ. ಇದೇ ಕಟ್ಟಿನಲ್ಲಿ ಶಬ್ದಮಣಿದರ್ಪಣವೆಂಬ ಇನ್ನೊಂದು ಗ್ರಂಥವಿದೆ.

1418

ಕೆ. ೩೫೨/೨	**ರಾಜೇಂದ್ರವಿಜಯ**	ಚಂಪು
೭.೫" × ೧.೮"	ಮುರಿಗೆ ದೇಶಿಕೇಂದ್ರ	ಸು. ೧೫೬೦
೨–೧೨೬ ಪತ್ರ	೯ ಪಂಕ್ತಿ	೩೨ ಅಕ್ಷರ

ಆದಿ : ....ಕರವಾಯಾ
ಭಂಗಂ ಭವದೂರನೊಲ್ದು ಪಾಲಿಸುಗೆಂಮಂ || ೬ ||
ಶಾ || ಕಷ್ಟ ಭ್ರಷ್ಟ ಕನಿಷ್ಟ ದಕ್ಷ ವಿಳಸದ್ಭೂಯಿಷ್ಟ ಬೃಂದಿಷ್ಟನೆ
ದಿಷ್ಟೋತ್ಕೃಷ್ಟ ನಿಜೇಷ್ಟದಾಧ್ವರಹರಂ ಭ್ರಾಜಿಷ್ಣು ಭದ್ರಂ ಭವಾ
ರಿಷ್ಟ ಧ್ವಂಸಕನಾರ್ಡ್ಯದಾರ್ಡ್ಯ ವಿಧಿ ಮೇನೇಂದ್ರಾದಿಗರ್ವಾರ್ದನಂ
ಹೃಷ್ಟಂ ದಿವ್ಯಗರಿಷ್ಟ ನವ್ಯ ಮಹಿಮಂ ರಕ್ಷಿಕ್ಕೆ ವೀರೇಶ್ವರಂ || ೭ ||

ಅಂತ್ಯ : ಶಾ || ವೀರಾಚಾರ ವಿಚಾರಸಾರ ಜನಮುಂದರಾಘ ದುರಾಧ್ಯತಾ
ರಾರಾಜಾಲ ಪರಾಪರೋರು ಮಹಿಮಾಧಾರಾಭ್ರಚಾರಾಪಗಾ
ಕ್ಷೀರಾಪಾರ ಪೃಷಂತಿರಾಜಿತ ಜಟಾಕೋಟೀರ ದಾರಾಭಿ ಗಂ
ಭೀರೋಧಾರ ಸುಮೇರುಚಾಪ ಸಲಹೈ ಶ್ರೀಶಾಂತವೀರೇಶ್ವರಾ || ೨೦ ||
ಗದ್ಯ || ಇದು ಮದುಭಂಜನಾರ್ಜುನನೋಧರ ಪುರಂದರ ಪೂರೋಗಮ ನಾನಾ ಸುರೋರಗ ನಿಕರ ನವೀನ ಸುರುಚಿರ ಪ್ರಚುರಾನರ್ಘ್ಯ ಮಣಿಗಣಖಚಿತ ರಚನೋತ್ತುಂಗ ಶೃಂಗಾರಸಾರ ಕೋಟಿ ಕೋಟೀರಸ್ಫಾರ ರುಚಿಕದಂಬ ಪ್ರತಿಬಿಂಬಿತ ವಿಮಳ ವಿಳಸಿತ ನಖಮುಕುರರಾಜಿರಾಜಿತಸ್ಫುರಣ ಚರಣಾರವಿಂದ ಚಂದ್ರಶೇಖರ ಪರಮ ಶಿವಶರಣ ರಾಜೇಂದ್ರ ಹಂಮೀರ ವಿಕ್ರಮಾತುಳ ಪ್ರಬಂಧದೊಳ್ಭದ್ರಾಯುಷ್ಯರಾಜನ ಪ್ರಕಥನ ನವಮ ಪ್ರಕರಣಂ ಶಿವಮಸ್ತು

ಶ್ರೀ ॥ ಇತಿ ರಾಜೇಂದ್ರವಿಜಯ ಸಂಪೂರ್ನ್ನ ಮಂಗಳಮಹಾ ಶ್ರೀ.

ವಿಷಯ : ಮಲಪ್ರಹಾರಿಯ ತೀರದಲ್ಲಿರುವ ಹವಿನ್ಯಾರಪುರವೆಂಬ ನಗರಕ್ಕೆ ದೊರೆಯಾದ ತ್ರೈಲೋಕ್ಯಚೂಡಾಮಣಿಯ ಮಗ ಹವಿನ್ಯಾರನ ಕಥೆ.

ವಿಶೇಷ : ೧ನೆಯ ಪತ್ರವಿಲ್ಲ. ಶಕಟರೇಫವಿದೆ. ಇದರೊಂದಿಗೆ ಸಮಾಧಿಕ್ರಮ ಉದ್ಧರಣೆ ಮತ್ತು ವಿವಿಧ ವಿಷಯದ ೭ ಪತ್ರಗಳಿವೆ.

1419

ಕೆ. ೩೫೭/೨	**ರಾಜೇಂದ್ರವಿಜಯ**	**ಚಂಪು**
೧೧.೧" × ೧.೨"	ಮುರಿಗೆ ದೇಶಿಕೇಂದ್ರ	**ಸು. ೧೫೬೦**
೧–೫೫ ಪತ್ರ	೧೦ ಪಂಕ್ತಿ	೬೫ ಅಕ್ಷರ

ಆದಿ : ಶ್ರೀ x x x ಮುರಿಗೆಸ್ವಾಮಿಗಳು ನಿರೂಪಿಸಿದ ರಾಜೇಂದ್ರವಿಜಯಕ್ಕೆ ಶಿವಮಸ್ತು ॥ ಶಾರ್ದೂಲವಿಕ್ರೀಡಿತ ವೃತ್ತ ॥

ಶ್ರೀಮತ್ಕಾಂಡಜಜಾಂಡಮಂಡಲ ಚಂಡಾಮ್ನಾಯವಾಜಿಸ್ಥಿರಂ
ಭೂಮಿದ್ರೋಣ್ಯಿಕ ಸಾಮಯಾಳಿ ಹರಶಿಷ್ಟಾಪಾಲದುಷ್ಟಾರ್ದನಂ
ಸೋಮಂ ಪ್ರಾಂಜುಳನೂರ್ಜಿತಂ ಜಯತು ನಿತ್ಯಾನಂದ ಮೌನೀಂದ್ರ ಹೃ
ದ್ಧಾಮಂ ನಿಜ್ಜರ ಚಕ್ರವರ್ತಿನಮಹಿಮಂ ದೇವೇಷ್ಟಲಿಂಗಂ ಕರಂ ॥ ೧ ॥

x x x x

ವಸುದೀಪಂ ಮನುರಾಜಂ
ರಸಿಕಂ ರಾಜೇಂದ್ರನಮಳ ಹಂವಿರಾರನೆನಿ
ಪ್ಪಸದೃಶತರನಾಮಂಗಳ್
ಪಸರಿಸುಗುಂ ವೀರರಾಜವಿಜಯನೊಳಿನಿಶಂ ॥ ೨೯ ॥

ಅಂತ್ಯ : ವೀರಾಚಾರ ವಿಚಾರಸಾರ ಜನಮಂದಾರಾಘದೂರಾಢ್ಯತಾ
ರಾರಾಜಾಲ ಪರಾಪರೋರು ಮಹಿಮಾದಾರಾಭ್ರ ಚಾರಾಪಗ
ಕ್ಷೀರಾಪಾರ ಪ್ರಪಂತಿರಾಜಿತ ಜಟಾಕೋಟೀರ ದಾರಾಭಿಗಂ
ಭೀರೋದಾ ಸುಮೇರುಚಾಪ ಸಲಕ್ಷ್ಯೈ ಶ್ರೀಕಾಂತವೀರೇಶ್ವರಾ ॥ ೨೦ ॥

ಇದು ಮಧುಭಂಜನಾರ್ಜುನೋದರ ಪುರಂದರ ಪುರೋಗಮ x x x ಚಂದ್ರಶೇಖರ ಪರಮ ಶಿವಶರಣ ರಾಜೇಂದ್ರ ಹವಿನ್ಯಾರ ವಿಕ್ರಮಾತುಳ ಪ್ರಬಂಧದೊಳ್ಬಿದ್ರಾಯುಷ್ಯ ರಾಜಚರಿತಂ ಬಸವಲಿಂಗನುತಿ ಪ್ರಕಥನಂ ನವಮಪ್ರಕರಣಂ ಸಮಾಪ್ತಂ ಶಿವಮಸ್ತು ಶ್ರೀ.

ವಿಷಯ : ಮಲಪ್ರಹಾರಿಯ ತೀರದಲ್ಲಿರುವ ಹವಿನ್ಯಾರಪುರದ ದೊರೆ ಹವಿನ್ಯಾರನ ಅಥವಾ ರಾಜೇಂದ್ರನ ಚರಿತೆ.

ವಿಶೇಷ : ಶಕಟರೇಫ ಇದೆ. ೧೫ನೆಯ ಸಂಖ್ಯೆಯ ಎರಡು ಪತ್ರಗಳಿವೆ. ಈ ಕಟ್ಟಿನಲ್ಲಿ ಗಿರಿಜಾ ಕಲ್ಯಾಣ ಮತ್ತು ಶಬರಶಂಕರ ವಿಲಾಸ ಸೇರಿವೆ.

1420

ಕೆ. ಎ. ೯೫ ರಾಜೇಂದ್ರವಿಜಯ ಚಂಪು

೧೧.೯" × ೪.೧" ಮುರಿಗೆ ದೇಶಿಕೇಂದ್ರ ಸು. ೧೫೬೦

೧–೪೯ ಪತ್ರ ೨೨ ಪಂಕ್ತಿ ೨೦ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ॥ ಶ್ರೀ ರಾಜೇಂದ್ರ ವಿಜಯಕ್ಕೆ ಶಿವಮಸ್ತು॥
ಶಾರ್ದೂಲ ವಿಕ್ರೀಡಿತ ॥
ಶ್ರೀಮತ್ಕಾಂಡಜಜಾಂಡ ಮಂಡಲ ಪಿಚಂಡಾಮ್ನಾಯ ವಾಜಿಸ್ತರಂ
ಭೂಮಿದ್ರೋರ್ವಿರ್ಗತನಾಮಯಾಳಿ ಹರಶಿಷ್ಟಾಪಾಲದುಷ್ಟಾರ್ದನಂ
ಸೋಮಂ ಪ್ರಾಂಜುಳನೂರ್ಜಿತಂ ಜಯತು ನಿತ್ಯಾನಂದ ಮೌನೀಂದ್ರ ಹೃ
ದ್ಧಾಮಂ ನಿರ್ಜರ ಚಕ್ರವರ್ತಿ ಮಹಿಮಂ ದೇವೇಷ್ಟ ಲಿಂಗೇಶ್ವರಂ ॥ ೧ ॥

ಅಂತ್ಯ : ಉತ್ಪಲ॥ ಭೀಮ ಭವಾರಿ ಭಾಸುರಪುರಾಯಹೋಗ್ರಮುಖಾರಿಮಾರಭಿ
ತ್ಯೋಮಕಾಲಂಕ ಶಾಶ್ವತ ಶಿವಾಂಕ ಗಿರೀಶ ವೃಷಾಂಕ ದೇವ ಚಿ
ದ್ಧಾಮ ಗುಣಾಭಿರಾಮ ನುತರಾಮ ಮಹೇಶ ವಿರಾಮ ಕಾಲ ಹೃ
ತ್ಸ್ವಾಮಿನಿರಂಗಸಾರಗರ ನಿಷಂಗದೃತಾಂಬರಗಾಂಗ ರಕ್ಷಿಸಾಂ ॥
ಗದ್ಯ ॥ ಇದು ಮಧುಭಂಜನಾರ್ಜುನೋದರ ಪುರಂಧರ ಮತೋಗಮ ನಾನಾ ಸುತೋರಗ ನಿಕರ ನವೀನ ಸುರಚಿರ ಪ್ರಚುರಾನರ್ಘ್ಯಮಣಿಗಣಖಚಿತ ರಚನೋತ್ತುಂಗ ಶೃಂಗಾರಕೋಟಿ ಕೋಟೀರಸ್ಫಾರರುಚಿಕದಂಬ ಪ್ರತಿ ಬಿಂಬಿತ ವಿಮಳ ವಿಳಸಿತ ನಖಮುಕುರರಾಜ ರಾಜಿತಸ್ಫುರುಣ ಚರಣಾರವಿಂದ ಚಂದ್ರಶೇಖರ ಪರಮ ಶಿವಶರಣ ರಾಜೇಂದ್ರ ಹವಿನ್ಮಾರ ವಿಕ್ರಮಾತುಳ ಪ್ರಬಂಧದೊಳ್ ಭದ್ರಾಯುಷ್ಯಾರಾಜಂ ಚರಿತ ಬಸವಲಿಂಗನುತಿ ಪ್ರಕಥನಂ ನವಮ ಪ್ರಕರಣಂ ಸಮಾಪ್ತಂ ಶ್ರೀ ಸಂಪೂರ್ಣ.

ವಿಷಯ : ಮಲಪ್ರಹಾರಿಯ ತೀರದಲ್ಲಿರುವ ಹವಿನ್ಮಾರಪುರವೆಂಬ ನಗರಕ್ಕೆ ದೊರೆಯಾದ ತ್ರೈಲೋಕ್ಯ ಚೂಡಾಮಣಿಯ ಮಗ ಹವಿನ್ಮಾರನ ಕಥೆ.

ವಿಶೇಷ : ಮೋಡಿ ಬರಹ. ೨೮, ೩೮, ೮೬ ಈ ಪತ್ರಗಳಲ್ಲಿ ಬರವಣಿಗೆಯಿಲ್ಲ. ಕಾಗದಗಳು ತೆಳುವಾಗಿರುವುದಲ್ಲದೆ ಎರಡು ವಿಧವಾಗಿವೆ.

1421

ಕೆ.ಬಿ. ೪೬೧ **ರಾಣಿ ಗೌರಮ್ಮನ ಚರಿತ್ರೆ** ಸಾಂಗತ್ಯ

೮.೩" × ೬.೬" ? ?

೫೩ ಪುಟ ೧೨ ಪಂಕ್ತಿ ೧೮ ಅಕ್ಷರ

ಆದಿ : ಶ್ರೀ ಕೃಷ್ಣರಾಜೇಂದ್ರ ರಾಣಿಯು ಗೌರಮ್ಮನಮೇಲೆ ಹೇಳಿದ ಚರಿತ್ರೆ॥
ಶ್ರೀವೇಲಾಪುರಿವಾಸಂ
ಶ್ರೀವನಿತಾಧೀಶ ಸೌಮ್ಯಕೇಶವರಾಯಂ
ಬಾವಜನ್ನೈಯ್ಯಂ ಬಯಸಿದು
ದೀವುತೆ ರಕ್ಷಿಸಲಿ ಎಂದು ಪಾದಕೆ ಮನಿಪೇಂ ॥ ೧ ॥
ಶ್ರೀಯುತ ಕೃಷ್ಣಭೂವರಗೆ ಗೌರಮ್ಮಗೆ
ಆಯುರಾರೋಗ್ಯೈಶ್ವರ್ಯಗಳಾ
ಪ್ರಿಯದಿಂ ಕೊಡಲೆಂದು ಬೇಲೂರು ಚೆನ್ನಿಗ
ರಾಯ ಮೂರುತಿಗೆರಗುವೆನೂ ॥ ೨ ॥

ಅಂತ್ಯ : ಗು........ರುಕಚದಿಂ ಗುರು ಪೊರವಾರಿಂ ಗುರುತ್ವದೈಸಿರಿಯಿಂದಂ
........................ದಿಂದಂ
ಗುರುಭಕ್ತಿಯೊಳುಪ್ಪುತಿಹಳು ಗುರು..........
....ವೇಣಿಯು ಹರಿವಾಣಿಯ ಹರಿವಕ್ತ್ರಿಯು ಹರಿಗಭೀರೆ........

ವಿಷಯ : ಕೃಷ್ಣರಾಜರ ಒಬ್ಬ ಪತ್ನಿಯ ಕಥೆ.

ವಿಶೇಷ : ೨೧, ೩೪, ೩೭, ೩೯, ೪೨ನೆಯ ಪುಟಗಳಲ್ಲಿ ಗ್ರಂಥಲೋಪ. ಬೇಲೂರು ಆಗಮಿಕ ಮುತ್ತುಭಟ್ಟರಿಂದ ತಂದ ಪುಸ್ತಕದ ಮರುಪ್ರತಿ ಇದೆಂದು ಮುಖ ಪತ್ರದಲ್ಲಿ ಬರೆದಿದೆ. ಗ್ರಂಥದ ಕೊನೆಯಲ್ಲಿ ೨ ಶುದ್ಧ ಪತ್ರಗಳಿವೆ.

1422

ಕೆ. ೨೦೭/೨ **ರಾತ್ರಿನಲ್ಲನ ಪದ್ಯಗಳು** ಕಂದ

೬.೬" × ೧" ? ?

೧೭–೩೦ ಪತ್ರ ೫ ಪಂಕ್ತಿ ೩೪ ಅಕ್ಷರ

ಆದಿ : ರಾತ್ರಿನೆಲನ ಪದ್ಯ.
ಶ್ರೀಮದನ್ನೃಪನ ಪೆಡೆಯೊಳ್
ಕಾಮಿನಿಯರು ತಂವ್ಮ ತಂವ್ಮ ಸಖಿಯರೊಳ್ಳಿರುಳಿನೊಳ್

ಪ್ರೇಮದಿ ಕೂಡಿದ ವಿಠರು
ದ್ದಾಮತೆಯಂ ಪೇಳುತಿರ್ದರಿಂತೀ ಕ್ರಮದಿಂ || ೧ ||

ಅಂತ್ಯ : ಹರಿಯ ನುಂಗಿದನ ತುಳಿದ
ತರುಣಿಯ ಮನೆಯೊಳಗೆ ಪುಟ್ಟ ಬಾಳುತಿಪ್ಪನ
ಸಿರಮಂ ತರಿದನ ಪಗೆವನ
ಯಿರುವಂ ಪೊಲ್ನ ನಕ್ಕ ರಾತ್ರಿಯ ನಲಂ || ೭೯ ||

ವಿಷಯ : ರಾತ್ರಿನಲ್ಲನ ವಿವರ.

ವಿಶೇಷ : ಈ ಗ್ರಂಥದನಂತರ ೩೯ನೆಯ ಕ್ರಮಸಂಖ್ಯೆಯಿರುವ ಒಂದು ಪತ್ರವಿದ್ದು ಕೆಲವು ಪದಗಳಿವೆ. ಇದೇ ಕಟ್ಟಿನಲ್ಲಿ ಒಗಟಿಪದಗಳು, ಹಾಡುಗಳು ಮೊದಲಾದ ಇತರ ೮ ಗ್ರಂಥಗಳಿವೆ.

1423

ಕೆ.ಎ. ೨೮೫ **ರ್ರಾತಿನಲ್ಲನ ಪದ್ಯಗಳು** ಕಂದ

೧೨.೬″ × ೮″ ? ?

೨೪ ಪತ್ರ ೨೦ ಪಂಕ್ತಿ ೧೩ ಅಕ್ಷರ

ಆದಿ : ರಾತ್ರಿನಲ್ಲನ ಪದ್ಯಗಳು,
ಶ್ರೀಮದ್ಗಿರಿಜೆಯ ಅರಸಂ
ಸೋಮಾರ್ಧ ವಿಭೂಷಿತೋತ್ತಮಾಂಗಂ ಕೃಪೆಯೊಳ್
ಭೀಮಂ ತ್ರಿಪುರ ವಿರಾಮಂ
ಪ್ರೇಮದಿ ಕೃತಿಗೀಯಲೀಗ ಶುಭಮನಳುಂಬಂ || ೧ ||
ಸುರುಚಿರ ಮಧುರಾನಗರದಿ
ವರಸೂಳೆಯ ಕೇರಿ ಸೊಬಗು ಪರಿಯಂ ಜಗದೊಳ್
ತೆರೆಯಾಣ್ಮನೊರ್ವ ಬಲ್ಲಂ
ಬರೆವೆನು ತಿಳಿದನಿತ ಬುಧರು ಪೊರೆವುದು ದಯೆಯಿಂ || ೨ ||

ಅಂತ್ಯ : ಎಂಟಡಿಯನ ತಾಯಂಗೆ
ಕಂಟಕಗೈದವನ ಬಾಯ ತುತ್ತಿಗೆ ಮುನಿದನ
ನೆಂಟರ ಬಗೆವನಾಳ್ದನ
ಭಂಟನ ತಾ ಪೊಲ್ದನಕ್ಕ ರಾತ್ರಿಯ ನಲ್ಲಂ || ೧೧೮ ||
(ಮೂಲ ಪ್ರತಿಯಲ್ಲಿ ಇಷ್ಟೇ ಬರೆದಿರುತ್ತೆ. ಮುಂದಕ್ಕೆ ಇಲ್ಲ)

ವಿಷಯ : ರಾತ್ರಿಯ ವೇಳೆಯಲ್ಲಿ ವೇಶ್ಯೆಯರ ಮನೆಗೆ ಬರುತ್ತಿದ್ದ ವಿಟರ ವರ್ಣನೆಯನ್ನು ತಂಗಿಯು ಅಕ್ಕನಿಗೆ ಒಗಟಿನ ಸ್ವರೂಪದಲ್ಲಿ ಹೇಳುತ್ತಾಳೆ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರವಣಿಗೆಯಿದೆ. ಅಸಮಗ್ರ, ಸ್ಫುಟಾಕ್ಷರ. ಅಲ್ಲಲ್ಲಿ ಪದಗಳು ಲುಪ್ತ. ೭ರಿಂದ ಮುಂದಿರುವ ಎಲ್ಲಾ ಪದ್ಯಗಳ ಅಂತ್ಯದಲ್ಲಿ "ಪೋಲ್ವನಕ್ಕ ರಾತ್ರಿಯನಲ್ಲಂ" ಎಂದು ಬರುತ್ತದೆ. ಗ್ರಂಥಾರಂಭದ ಮೊದಲಲ್ಲಿ ಬೇರೆ ೫ ಪತ್ರಗಳಲ್ಲಿ ಉಪೋದ್ಘಾತವಿದೆ. ಆಮೇಲೆ "ರಾತ್ರಿನಲ್ಲನ ಪದ್ಯಗಳು ಆನುಪೂರ್ವಿ 120 *a* ಮಧುರಾಪಟ್ಟಣದ ವೇಶ್ಯಾವೀಥಿಯೊಳ್ ವಾರಾಂಗನೆಯರು ಸೂರ್ಯೋದಯವಾಗಲು ತಮ್ಮ ತಮ್ಮ ಮನೆಯ ಜಗಲಿಯೊಳ್ಕುಳಿತು, ತಮ್ಮ ತಮ್ಮಲ್ಲಿಗೆ ರಾತ್ರಿಯಲ್ಲಿ ಬಂದಿದ್ದ ವಿಟರ ಗುಣಂಗಳಂ ವರ್ಣಿಸುತ್ತಿರಲು–ಅವರೊಳೋರ್ವ ವಿಲಾಸಿನಿಯು ತನ್ನ ತಂಗಿಯಂ ನೋಡಿ ಎಲೈ ತಂಗಿಯೇ! ನಿನ್ನನ್ನು ರಾತ್ರೆ ಸುಖಪಡಿಸಿದ ಪುರುಷನ್ಯಾರೆನಲು ಆಗ ಚದುರೆಯು ಅವನ ಗುಣಂಗಳಂ ಪೇಳುವಳು—ಅದೆಂತೆನೆ—" ಎಂದಿದೆ. ಅನಂತರ ಕಂದಪದ್ಯಗಳು ಪ್ರಾರಂಭವಾಗುತ್ತವೆ.

1424

ಕೆ. ಬಿ. ೧೭೨	**ರಾಧಾವಿಲಾಸ**	ಯಕ್ಷಗಾನ
೭.೮" × ೬.೨"	ಸಂಜಯ್ಯ (?)	ಸು. ೧೮೬೦
೪೪ ಪತ್ರ	೧೧ ಪಂಕ್ತಿ	೧೯ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ॥ ಶ್ರೀಗುರುಭ್ಯೋ ನಮಃ॥ ಭಾಗವತದೊಳಗಣ ರಾಧಾವಿಲಾಸ ಬರ್ರಿವರೆ ಶುಭಮಸ್ತು ॥

ವೃತ್ತಾ ॥ ಶ್ರೀಗೋಪಾಲ ಮುರಾರಿ ಧಾರ್ಮಿಕಗುಣಂ ಸದ್ಭಕ್ತಸಂರಕ್ಷಕಂ
ಸೌಭಾಗ್ಯಸುಫಲಪ್ರದಾಯಕ ಹರಿಂ ಸೋಮಾರ್ಕತೇಜಾನ್ವಿತಂ
ವಾಗೀಶಾಧಿ ಸುರೌಘವಂದಿತಪದಂ ವೈಕುಂಠಸೌಮಂದಿರಂ
ನಾಗಾತಿವಾಹನ ಗಜೇಂದ್ರವರದಂ ಶ್ರೀ ಕೃಷ್ಣನಾಥಂ ಭಜೇ ॥ ೧ ॥

x x x x

ವಾರ್ಧಿಖ ॥ ವರಪರೀಕ್ಷಿತಗೆ ಶುಕಗುರು ಪೇಳ್ದ ಭಾಗವತ
ಚರಿತ ದಶಮಸ್ಕಂದ ಮೆರೆವ ಮಧುರೆಯಲಿ ಶ್ರೀ
ಹರಿಯು ದೇವಕಿಯೊಳವತರಿಸಿ ಯಶೋದೆಯರಿಗೆ ಬಾಷೆಯ ಸವಿಸುತಾ
ಪರಮಗೋಕಲಕೆ ಬಂದಿರುತ ಗೋಪಿಯತ್ರ ಮಂ
ದಿರಗಳನು ಪೊಕ್ಕು ಬಲುತೆರದ ನಟಣೆಯದೋರೆ
ಮರುಳಾಗಿ ವಿರಹ ಸೈರಿಸದೆ ಸತಿಯರು ಕೂಡಿಯಿರುತಿರಲ್ ಮುಂದೆಸೆಯೊಳು ॥ ೧ ॥

ಅಂತ್ಯ : ಕರ್ನಾಟ ಭೂಪಾಲ ವರ್ನಾಶ್ರಮ ಸುಶೀಲ

ನಿರ್ಣಯಕಲೋಲ ಪರ್ಣಶಕಲೀಲ
ಸ್ವರ್ಣಾಚಲಾಲೋಲ ಚೂರ್ಣಿತಾಹಿತಲೋಲ
ಪೂರ್ಣಕರ ಸೌಲೀಲ ಕರ್ಣಸುರಸಾಲ ಜಯ ಜಯಾ ॥ ೩ ॥
ಅಂತು ರಾಧಾವಿಲಾಸ ಸಂಪೂರ್ಣ ಮಂಗಳಮಹಾ ಶ್ರೀ.

ವಿಷಯ : ರಾಧಾ–ಕೃಷ್ಣರ ಲೀಲಾವಿನೋದಗಳು.

ವಿಶೇಷ : ಗ್ರಂಥದ ಕೊನೆಯಲ್ಲಿ ಮೂರು ಶುದ್ಧ ಪತ್ರಗಳಿವೆ.

1425

ಕೆ.ಬಿ. ೩೪೬	**ರಾಧಾವಿಲಾಸ**	ಯಕ್ಷಗಾನ
೮" × ೬.೫"	ನಂಜಯ್ಯ (?)	ಸು. ೧೮೬೦
೩೨ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ವೆಂಕಟೇಶ ಪ್ರಸಂನ್ನಾ ॥ ರಾಧಾವಿಲಾಸ ಪ್ರಾರಂಭಃ ॥
ಶುಭಮಸ್ತು ॥ ವೃತ್ತಾ ॥ ನಿರ್ವಿಘ್ನಮಸ್ತು ॥
ಶ್ರೀಗೋಪಾಲಮುರಾರಿ ಧಾರ್ಮಿಕಗುಣಂ ಸದ್ಭಕ್ತ ಸಂರಕ್ಷಕಂ
ಸೌಭಾಗ್ಯಂ ಸುಫಲಪ್ರದಾಯಕ ಹರಿಂ ಸೋಮಾರ್ಕ್ನ ತೇಜೋನ್ವಿತಂ
ವಾಗೀಶಾದಿ ಸುರೌಘವಂದಿತಪದಂ ವೈಕುಂಠಸೌಮಂದಿರಂ
ನಾಗಾರಾತಿವಹಂ ಗಜೇಂದ್ರವರದಂ ಶ್ರೀಕೃಷ್ಣದೇವಂ ಭಜೇ ॥ ೧ ॥

x x x x

ವಾರ್ಧಕ ॥ ವರ ಪರೀಕ್ಷತಗೆ ಶುಕಗುರು ಪೇಳ್ದ ಭಾಗವತ
ಚರಿತ ದಶಮಸ್ಕಂಧ ಮೆರೆವ ಮಧುರೆಯಲಿ ಶ್ರೀ
ಹರಿಯ ದೇವಕಿಯೊಳವತರಿಸಿ ನಂದ ಯಶೋದೆಯರಿಗೆ ಭಾಷೆಯ ಸಲಿಸಲು
ಪರಮ ಗೋಕುಲಕೆ ಬಂದಿರುತ ಗೋಪಿಯರ ಮಂ
ದಿರಗಳನು ಪೊಕ್ಕು ಬಲುತೆರದ ನಟಣೆಯದೋರೆ
ಮರುಳಾಗಿ ವಿರಹ ಸೈರಿಸದೆ ಸತಿಯರು ಕೂಡಿ ಯಿರುತಿರಲ್ ಮುಂದೆಸೆಯೊಳು
(ಯೊರದರತಿ ಸಂಭ್ರಮದೊಳು) ॥ ೫ ॥

ಅಂತ್ಯ : ವಾರ್ಧಕ ॥ ಸುರಮುನಿಯು ತೆರಳಿತ್ತಲು ನಂದಗೋಕುಲದಿ
ಸರಸ ಲೀಲಾವಿನೋದವ ತೋರಿ ನರಹರಿಯು
ಪರಮಸೌಖ್ಯದಿ ರಾಧೆಗೊಲಿದುಮನವರತದಿಂದಿರುತಿರುವವಿಾಕೃತಿಯನು
ಬರದೋದಿ ಕೇಳ್ವ ಮನುಜರ ದುರಿತ ದಾರಿದ್ರ
ಪರಿಹರಿಸೆ ಸಕಲಸೌಭಾಗ್ಯಗಳನೀವ ಮಾ
ವರನೆಂದು ನರಪತಿ ಪರೀಕ್ಷಿತನೆ ಶುಕಯೋಗಿ ಹರಿಕಥೆಯನುಸುರುತಿರ್ದಂ
॥ ೨೦೯ ॥

ರಾಗ ಪಂತುರಾವಳಿ || ಯೇಕ ||

ರಾಧಾಕೃಷ್ಣಗೆ ರಮಾಪ್ರೀತನಿಗೆ
ಮೋದವಾಂತು ಮಧುಸೂಧನಿಗೆ ಜಯ || ೧ ||
ಕರುಣಾಭರಣ ಧಾರಣ ಸುಸೀಲಗೆ
ಶರಣರ ಕಾಯುವ ಬಿರುದಾಂತವಗೆ || ೨ ||
ಕಂಜಲೋಚನಗೆ ಕಮಲೆಯರಸನಿಗೆ
ಮಂಜುನಾಥೇಶ್ವರ ಕೃಪಾಪಾತ್ರನಿಗೆ || ೩ || ಶ್ರೀ

ವಿಷಯ : ರಾಧಾಕೃಷ್ಣರ ಲೀಲಾವಿನೋದಗಳು.

ವಿಶೇಷ : ಸಮಗ್ರ. ಈ ಗ್ರಂಥವಾದಮೇಲೆ ೩ ಪುಟಗಳಲ್ಲಿ "ಹುಲಿತಡೆ" ಎಂಬ ವಿಷಯದ ಮೇಲೆ ನಾಲ್ಕು ಪದ್ಯಗಳಿವೆ.

1426

ಕೆ.ಬಿ. ೪೮೪	**ರಾಧಾವಿಲಾಸ**	ಯಕ್ಷಗಾನ
೮″ × ೬.೫″	ನಂಜಯ್ಯ (?)	ಸು. ೧೮೬೦
೧–೩೭ ಪತ್ರ	೧೨ ಪಂಕ್ತಿ	೧೫ ಅಕ್ಷರ

ಆದಿ : ರಾಧಾವಿಲಾಸ || ನಾಂದಿವೃತ್ತಾ ||

ಶ್ರೀ ಗೋಪಾಲ ಮುರಾರಿ ಧಾರ್ಮಿಕಗುಣಂ ಸದ್ಭಕ್ತಸಂರಕ್ಷಕಂ ಸೌ
ಭಾಗ್ಯಸ್ಸಫಲಪ್ರದಾಯಕ ಹರಿಂ ಸೋಮಾರ್ಕ ತೇಜಾನ್ವಿತಂ
ವಾಗೀಶಾದಿ ಸುರೌಘವಂದಿತಪದಂ ವೈಕುಂಠಸೌಮಂದಿರಂ
ನಾಗಾರಾತಿವಹಂ ಗಜೇಂದ್ರವರದಂ ಶ್ರೀ ಕೃಷ್ಣದೇವಂ ಭಜೇ || ೧ ||

x x x x

ವಾರ್ಧಕ || ವರಪರೀಕ್ಷಿತಗೆ ಶುಕಗುರು ಪೇಳ್ದ ಭಾಗವತ
ಚರಿತ ದಶಮಸ್ಕಂದ ಮೆರೆವ ಮಧುರೆಯಲಿ ಶ್ರೀ
ಹರಿಯು ದೇವಕಿಯೊಳವತರಿಸಿ ನಂದ ಯಶೋದೆಯರಿಗೆ ಭಾಷೆಯು ಸಲಿಸಲು
ಪರಮ ಗೋಕುಲಕೆ ಬಂದಿರುತ ಗೋಪಿಯರ ಮಂ
ದಿರಗಳನು ಪೊಕ್ಕು ಬಲುತೆರದ ನಟಣೆಯದೋರೆ
ಮರುಳಾಗಿ ವಿರಹ ಸೈರಿಸದೆ ಸತಿಯರು ಕೂಡಿಯೊರದರತಿ ಸಂಭ್ರಮದೊಳು || ೫ ||

ಅಂತ್ಯ : ವಾರ್ಧಕ || ಸುರಮುನಿಯು ತೆರಳಿತ್ತಲು ನಂದ ಗೋಕುಲದಿ
ಸರಸ ಲೀಲಾವಿನೋದವ ತೋರಿ ನರಹರಿಯು
ಪರಮಸೌಖ್ಯದಿ ರಾಧೆಗೊಲಿದುಮನವರತದಿಂದಿರುತಿರುವವಿಾಕೃತಿಯನು

ಬರದೋದಿ ಕೇಳ್ವ ಮನುಜರ ದುರಿತ ದಾರಿದ್ರ
ಪರಿಹರಿಸಿ ಸಕಲ ಸೌಭಾಗ್ಯಗಳನೀವ ಮಾ
ವರನೆಂದು ನರಪತಿ ಪರೀಕ್ಷಿತಗೆ ಶುಕಯೋಗಿ ಹರಿಕಥೆಯನುಸುರುತಿರ್ದ್ದಂ
|| ೨೩೮ || ಶ್ರೀ ||

ಮಂಗಳಪದಾ || ರಾ | ಪಂತುವರಾಳಿ | ಯೇಕ |
ಜಯ ಜಯ ಮಂಗಳಾರತಿ ಮಾಧವನಿಗೆ
ಜಯ ಮಂಗಳಾರತಿ ಮಹಾಮಹಿಮನಿಗೆ || ಪ್ಲ ||

x x x x

ಕಂಜಲೋಚನಗೆ ಕಮಲೆಯರಸನಿಗೆ
ಮಂಜುನಾಥೇಶ್ವರ ಕೃಪಾಪಾತ್ರನಿಗೆ || ೩ || ಶ್ರೀ ||

ವಿಷಯ : ರಾಧಾ ಕೃಷ್ಣರ ಲೀಲಾವಿನೋದಗಳು.

ವಿಶೇಷ : ಸುಂದರಾಕ್ಷರ. ೨೩ನೆಯ ಪತ್ರದಿಂದ ಮುಂದಕ್ಕೆ ಪತ್ರಗಳ ಅಂಚುಗಳನ್ನು ಅರಿಶಿನದ ಬಣ್ಣದಿಂದ ಅಲಂಕರಿಸಲಾಗಿದೆ. ಅಂತ್ಯದಲ್ಲಿ ಹತ್ತು ಶುದ್ಧ ಪತ್ರಗಳಿವೆ.

1427

ಕೆ. ೭೬/೧	**ರಾಮಕಥಾಕಲ್ಪವೃಕ್ಷ**	ಗದ್ಯ
೧೭.೧" × ೧.೫"	ಮುಮ್ಮಡಿ ಕೃಷ್ಣರಾಜ	೧೮೫೦
೧–೩೯ ಪತ್ರ	೭ ಪಂಕ್ತಿ	೭೦ ಅಕ್ಷರ

ಆದಿ : ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರಿಂದ ೧೭೮೭ನೆ ರಕ್ತಾಕ್ಷಿ ಸಂವತ್ಸರದ ಚೈತ್ರ ಶುದ್ಧ ೯ವಮೀ ಶುಕ್ರವಾರದಲ್ಲಿ ವಿರಚಿತವಾದ ರಾಮಕಥಾಕಲ್ಪವೃಕ್ಷವೆಂಬ ಗ್ರಂಥ ಪ್ರಾರಂಭಃ||
ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ |
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ || ೧ ||

x x x x

ಮುಮ್ಮಡಿ ಶ್ರೀ ಕೃಷ್ಣರಾಜ ಕಂಠೀರವರು ಶ್ರೀಮದ್ರಾಮಾಯಣ ವಿಷ್ಣುಪುರಾಣ ಪಾದ್ಮಕೂರ್ಮ ಅಧ್ಯಾತ್ಮರಾಮಾಯಣ ಶಿವ ವಿಷ್ಣು ಧರ್ಮೋತ್ತರ ಜೈಮಿನ್ಯಾದಿ ಗ್ರಂಥಗಳಲ್ಲಿರುವ ಅನೇಕ ರಾಮಕಥೆಗಳಂ ಪರಿಶೋಧನೆಯಂ ಮಾಡಿ

ಅಂತ್ಯ : ನಿಜರಾಜಧಾನಿಯೊಳ್ ಕುಮಾರರಿಗೆ ಪಟ್ಟಾಭಿಷೇಕವಂ ಮಾಡಿ ಬ್ರಹ್ಮೇಂದ್ರಾದಿ ದೇವತೆಗಳಿಂ ಪ್ರಾರ್ಥಿತರಾಗಿ ಕ್ಷೀರಾಬ್ಧಿಯೊಳ್ ನಿಜಾನಂದ ವೈಭವದಿಂ ಚತುರ್ದಶ ಭುವನಗಳಂ ಪರಿಪಾಲಿಸುತ್ತಿರುವ ಕಥೆಯಂ ಬಣ್ಣಿಸಿರುವ ಯೆಂಟನೆಯ ಸ್ತಬಕಕ್ಕೆ ಮಂಗಳಮಹಾ ಶ್ರೀ|

ಶ್ಲೋಕ || ಮಂಗಳಂ ಕೋಸಲೇನ್ದ್ರಾಯ ಮಹನೀಯ ಗುಣಾಬ್ಧಯೇ |
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಳಂ||
ಸರ್ವಸಾರಸಂಗ್ರಹ ಶ್ರೀರಾಮಕಥಾಕಲ್ಪವೃಕ್ಷವೆಂಬ ರಾಮಾಯಣಗ್ರಂಥವಂ ಸಂಪೂರ್ಣಂ ||

ವಿಷಯ : ಶ್ರೀ ರಾಮನ ಕಥೆ.

ವಿಶೇಷ : ಪತ್ರಗಳ ಕೆಲವು ಕಡೆಯಲ್ಲಿ ಹುಳು ತಿಂದಿದೆ. ಇದರ ಜೊತೆಯಲ್ಲಿ ಕೃಷ್ಣ ಕಥಾರತ್ನಾಕರವೆಂಬ ಗ್ರಂಥವೂ ಇದೆ.

1428

ಕೆ.ಬಿ. ೧೨೩/೧	**ರಾಮಕಥಾಕಲ್ಪವೃಕ್ಷ**	ಗದ್ಯ
೮" × ೬.೩"	ಮುಮ್ಮಡಿ ಕೃಷ್ಣರಾಜ	೧೮೫೦
೧–೭೫ ಪತ್ರ	೧೫ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರಿಂದ ಶಕ ೧೭೮೭ ನೆ ರಕ್ತಾಕ್ಷಿ ಸಂವತ್ಸರದ ಚೈತ್ರ ಶುದ್ಧ ೯ ಶುಕ್ರವಾರದಲ್ಲು ವಿರಚಿತವಾದ ಶ್ರೀರಾಮ ಕಥಾಕಲ್ಪವೃಕ್ಷವೆಂಬ ಗ್ರಂಥ ಪ್ರಾರಂಭಃ—

x x x x

ಮುಂಮಡಿ ಶ್ರೀ ಕೃಷ್ಣರಾಜ ಕಂಠೀರವರು ಶ್ರೀಮದ್ರಾಮಾಯಣ| ವಿಷ್ಣು ಪುರಾಣ| ಪಾದ್ಮ| ಕೂರ್ಮ| ಅಧ್ಯಾತ್ಮ ರಾಮಾಯಣ| ಶಿವ ವಿಷ್ಣು ಧರ್ಮೋತ್ತರ | ಜೈಮಿನ್ಯಾದಿ ಗ್ರಂಥಗಳಲ್ಲಿರುವ ಅನೇಕ ರಾಮಕಥೆಗಳಂ ಪರಿಶೋಧನೆಯಂ ಮಾಡಿ

ಅಂತ್ಯ : ಕುಮಾರರಿಗೆ ಪಟ್ಟಾಭಿಷೇಕವಂ ಮಾಡಿ ಬ್ರಹ್ಮೇಂದ್ರಾದಿ ದೇವತೆಗಳಿಂ ಪ್ರಾರ್ಥಿತನಾಗಿ ಕ್ಷೀರಾಬ್ಧಿಯೊಳ್ ನಿಜಾನಂದ ವೈಭವದಿಂ ಚತುರ್ದಶ ಭುವನಗಳಂ ಪರಿಪಾಲಿಸುತ್ತಿರುವ ಕಥೆಯಂ ಬಂಣಿಶಿರುವ ಯೆಂಟನೆ ಸ್ತಬಕಕ್ಕೆ ಮಂಗಳಂಮಹಾ ಶ್ರೀ.

ವಿಷಯ : ಶ್ರೀರಾಮನ ಕಥೆ.

ವಿಶೇಷ : ಬೇರೆ ಬೇರೆ ಬಣ್ಣದ ಪತ್ರಗಳಿವೆ. ಈ ಗ್ರಂಥದೊಂದಿಗೆ ಕೃಷ್ಣಕಥಾ ರತ್ನಾಕರವೆಂಬ ಮತ್ತೊಂದು ಗ್ರಂಥವಿದೆ.

1429

ಕೆ.ಎ. ೧೪೨	**ರಾಮಕಥಾಮೃತ, ಭಾಗ—೧**	ವಾರ್ಧಕಷಟ್ಪದಿ
೧೩.೨" × ೮"	ವೆಂಕಾಮಾತ್ಯ	ಸು. ೧೭೭೦
೧–೨೫೫ ಪತ್ರ	೩೨ ಪಂಕ್ತಿ	೩೫ ಅಕ್ಷರ

ಆದಿ : ರಾಮುಕಥಾಮೃತಸಾರ ಶ್ರೀ x x x
ಸಕಲ ನಿಗಮಾಗಮ ಪುರಾಣೇತಿಹಾಸಗಳ
ಪ್ರಕರ ಸಂಮತಮೆನಿಪ ಶ್ರೀರಾಮ ಚರಿತೆಯಂ
ಶುಕ ಶೌನಕಾದಿ ದಿಷಿ ನಿವಹ ನಲಿವಂದದಿಂ ಹರನೊರೆದ ಗಿರಿಜಾತೆಗೇ ||
ಪದನೂ || ಭೋಗಿಭೂಷಣ ಮಕುಟಮಣಿಮಾಲೆ ಯಂದೆನಿಪ
ಭಾಗೀರತಿ ಸುಪ್ರತೀರವಾಸಿಗಳೆನಿಪ
ಯೋಗಿವರರೊಂದು ದಿನ ಸಕ್ರಯಾಗಂಗೈದರತುಳಾನುರಾಗದಿಂದಾ
ಆಗಮೋದಿತದರ್ಥವಾಗುಹೋಗುಗಳರಿತ
ಯೋಗಾನುಸಂದಾನ ಸೂತ ಮುನಿವರ ಜಾತು
ಸಾಗರಕೆ ಶುಬ್ರಾಂಶುಮುದಯಿಶಿದ ಮಾಳ್ಕಿಯೊಳ್ಬಂದನಾನಂದದಿಂದೆ ||

ಅಂತ್ಯ : ಮತಿದ್ವತಿಯು ದೃಷ್ಟಿ ದಾರ್ಕ್ಷ್ಯಗಳೆಲ್ಲ ಪೇರ್ಚೆ ಬರೆ
ಮತಿಯುತರೊಳಗ್ಗಳ ಮಹಾ ಕಪಿಯು ಗಮನದಿಂ
ಶತಯೋಜನಬ್ಧಿಯಂ ದಾಂಟಿ ಪಾದವನು ಪಿಕಂಡ ವನರಾಜಿಗಳನೂ
ಅತಿಶಯದ ಮಲಯಗಿರಿಯೋ ಸುರಪನುಪವನವೊ
ಗಾಂಧರ್ವ ತತಿಗಳೀಂ ಕ್ರೀಡಿಸುವ ನೆಲನೋ
ಯನಲಚ್ಚರಿಯಲೆಸದುದುಪವನತಟದೊಳೂ || ೫೯ ||

ವಿಷಯ : ಶ್ರೀರಾಮುಕಥೆ.

ವಿಶೇಷ : ಸಣ್ಣಕ್ಷರ. ಇದರ ಉತ್ತರ ಭಾಗ ಕೆ.ಎ. ೧೪೩ನೆಯ ಪುಸ್ತಕದಲ್ಲಿದೆ.

1430

ಕೆ.ಎ. ೧೪೩	**ರಾಮುಕಥಾಮೃತ, ಭಾಗ—೨**	ವಾರ್ಧಕಷಟ್ಪದಿ
೧೩" × ೮"	ವೆಂಕಾಮಾತ್ಯ	ಸು. ೧೭೭೦
೨೫೬–೫೦೯ ಪತ್ರ	೩೨ ಪಂಕ್ತಿ	೩೫ ಅಕ್ಷರ

ಆದಿ : ರಾಮುಕಥಾಮೃತ ಸುಂದರಕಾಂಡ.
ತ್ವರಿತಗಮನದಿ ಪ್ರಯೋಜನವೇನು ಮೆಲ್ಲನೀ
ಪರಿಯೊಳಗೆ ಚರಿಸೆಂದು ತರಳನುಪದೇಶಮಂ
ಕರುಣಿಸುವದೈತಂದ ತಂದೆಯುಂನದಿ ಮುಂದ ಮರುತ ಮುಂಗಡೆಯ ಸುಳಿಯೇ
ಕರಣಂಗಳೆಲ್ಲ ಸಂತುಷ್ಟಿವಡದವು ಕೂಡೆ
ಹರುಷವಾ ತೀರದೊಳ್ತನುವ ಸಂಕೋಚಿಸುತ
ಮರುತಸುತನಾ ಬನವ ಪೊಕ್ಕು ನಿಟ್ಟಿಸಿ ಹರುಷಗೊಂಡನಾನಂದದಿಂದಾ ||೬೦||

ಅಂತ್ಯ : ಯಿದು ಸಕಲ ಪುರುಷಾರ್ತ್ಥಸಾಧನಂ ಮೇಲ್ಧರಾ
ಭ್ಯುದಯದಾಮೋದಮೆನುತಖಿಲ ಜನರೆಲ್ಲರುಂ
ಹ್ರುದಯ ಸಿದ್ಧಿಯೊಳೋದಿ ಕೇಳುತದರರ್ಥಮಂ ತಾಳಿ ಸಂತೋಷಗೊಳಲೂ

ಪದುಮಾಕ್ಷರಾಮು ಪುರದಸನಖಿಲಾರ್ಥಗಳ
ಮುದದಿಂದ ದಯಗೈದು ಮುಕುತಿ ಸಾಮ್ರಾಜ್ಯಮಂ
ತುದಿಯೊಳಾಳೋಚಿಸುವನಿದು ನಂನಿ ಭೂತಳದೊಳೆಂದರಿವುದಖಿಳ ಜನರೂ
॥ ೩೧ ॥

ಅಂತು ಸಂಧಿ ೭೧ಕಾಂ ಪದನು ೩೬೧೩ಕಾಂ ಮಂಗಳಮಹಾ ಶ್ರೀ x x x ರಾಮುಪುರಿ ಹಂಪಯಾಮಾತ್ತ್ಯತನೂಭವ ವೆಂಕಾಹ್ವ್ರಯ ವಿರಚಿತಮಾದ ಶ್ರೀಮದ್ರಾಮಾಯಣ ಮಹಾಪ್ರಬಂಧದಲ್ಲಿ ಶ್ರೀಮದ್ಯುದ್ಧಕಾಂಡ ಸಮಾಪ್ತ x x x ಯುದ್ಧಕಾಂಡ ೧ಕ್ಕೆ ಸಂಧಿ ೭೧ಕ್ಕಾಂ ಪದನು ೩೬೧೩ ಸಂಧಿ ೧೯೫ಕಾಂ ಪದನೂ ೯೮೬೫ಕಾಂ ಮಂಗಳಮಹಾ ಶ್ರೀ.

ವಿಷಯ : ಶ್ರೀ ರಾಮನ ಕಥೆ.

ವಿಶೇಷ : ಸಣ್ಣಕ್ಷರ. ಇದರ ಪೂರ್ವಭಾಗ ಕೆ.ಎ. ೧೪೨ನೆಯ ಪುಸ್ತಕದಲ್ಲಿದೆ.

1431

ಕೆ.ಎ. ೫೫	**ರಾಮುಕಥಾವತಾರ**	**ಚಂಪು**
೧೨.೬" × ೮"	?	ಸು. ೧೬೯೭
೧–೩೯೯ ಪುಟ	೨೮ ಪಂಕ್ತಿ	೨೦ ಅಕ್ಷರ

ಆದಿ : ರಾಮುಕಥಾವತಾರ ॥ ಶ್ರೀಮದಾದಿ ಪರಮೇಶ್ವರಾಯ ನಮಃ ॥ ಶ್ರೀ ಮತ್ಪಾರ್ಶ್ವಜಿನಚಂದ್ರಾಯ ನಮಃ ॥ ಶ್ರೀಮತ್ಪಂಚಗುರುಭ್ಯೋ ನಮಃ ॥
॥ ೧ ॥ ವೃತ್ತ ॥ ಶ್ರೀಪಾದೋಜ್ವಲಮಂಬರಸ್ಥಮಖಿಲಾನಂದಾಕರಂ ಸಾರಭೃ
ದ್ಭೋಪಾಲಸ್ತುತ ಸುಂದರಂ ಹರಿಮಯೂರಾನಂದ ನಾಟ್ಯಾನ್ವಿತಂ
ಲೋಪಧ್ವಾಂತ ಸುಧಾವಿಸಿರ್ಗತ ಗಭೀರೋದ್ಗರ್ಜನಂ ಭವ್ಯ ಸ
ಸ್ಯಾಪನ್ನಾಶಕರಂ ಸುಮೇರುಜಲದಂ ಶ್ರೀ ಸುವ್ರತೋದ್ವಹರ್ಕಂ ॥

ಅಂತ್ಯ : ಕೃತಕೃತ್ಯಸ್ಸಮಚಿತ್ತರಾಗಿ ಪದವಿಂದಾರ್ಯೈಯ್ಯೆ ಕರ್ನಾಟ ಸಂ
ಸ್ಕೃತ ಕಾವ್ಯಂಗಳೊಳರ್ಥದಿಂ ರಚನೆಯಿಂ ಸೇರ್ಪಟ್ಟು ವಿದ್ವಚ್ಚಮ
ತ್ಕೃತಿಯಪ್ಪಂತಿರೆ ನಾಗಚಂದ್ರ ಸುಕವೀಂದ್ರಂ ಪೇಳ್ದವೊಲಾದ್ಯರ
ದ್ಯತಕಪ್ಪೆಳ್ದಭಿರಾಮುರಾಮು ಕಥೆಯಂ ಸಯ್ಪಿಂಗಡರ್ಪಾದರೆ ॥
೧೫೨೧ ॥ ಕಂ ॥ ಹೇಮಗಿರಿ ಪಾರ್ಶ್ವನಾಥ
ಸ್ವಾಮಿಯ ಶ್ರೀಪಾದಸನ್ನಿಧಾನದಿ ಮೊಗೆದ
ತ್ತಾಮೋದದಿ ಶ್ರೀ ರಾಮು
ಸ್ವಾಮಿಯ ಸತ್ಕಥೆಯು ಮೂರ್ವಿ ಕೀರ್ತಿಗೆ ನಿರುತಂ ॥

೧೫೨ || ಕಂ || ಮಂಗಲಮಯವೆಂದೆನಿಸುವ
ಪಿಂಗಲ ನಾಮಾಬ್ದ ದಾಶ್ವಯುಜ ಪಂಚಮಿಯೊ
ಳಂಗೊಳಸಿ ತೊಡನಿ ಫಾಲ್ಗುನ
ಸಂಗದ ಪುಣ್ಣಮಿಗೆ ಪೂರ್ನಮೇ ತತ್ಕಥನಂ ||

೧೫೩ ವೃ||ಶ್ರೀ ಮತ್ಕಾಂಚನಶೈಲ ಪಾರ್ಶ್ವಜಿನ ಪಾದಾಂಭೋಜ ಭೃಂಗಂ ಬುಧ
ರ್ಗಾಮೋದಂಬಡೆ ಮಾತು ರಾಮಕಥೆಯಂ ಪೇಳ್ದಂ ಮಹೋತ್ಸಾಹದಿಂ
ಪ್ರೇಮಂಬೆತ್ತು ಜನಾಗಮೋಕ್ತ ಕ್ರಮದಂ ದೇವಚಂದ್ರ ದ್ವಿಜಂ
ಶ್ರೀಮದ್ರಾಮಕಥಾವತಾರ ವಿಜಯಂ ಭದ್ರಂ ಶುಭ ಮಂಗಳಂ ||

ಗದ್ಯ || ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಭಾಳಚಂದ್ರ ಮುನೀಂದ್ರ ಚರಣನಖ ಕಿರಣ ಚಂದ್ರಿಕಾಚಕೋರ ಶ್ರೀಮದಭಿನವಪಂಪ ವಿರಚಿತ ರಾಮಚರಿತ್ರ ಪುರಾಣಮಂ ಸಂಬಂಧಿಸಿದ ರಾಮಕಥಾವತಾರದೊಳು ನಿರ್ವಾಣ ಕಲ್ಯಾಣವರ್ನನಂ ಷೋಡಶಾಶ್ವಾಸಂ || ಶ್ರೀಮತ್ಪಂಚಗುರುಭ್ಯೋ ನಮಃ | ಶಕವರ್ಷ ೧೭೫೯ ಪ್ರಭವ ಸಂವತ್ಸರದ ಮಾಘ ಬ ೫ ಮಂಗಳವಾರ ಘಳಿಗೆ ೨೮ ನೆಯಲ್ಲಿ ಬಡಗಗ ಬಾಗಿಲ ಮನೆ ಪಡಸಾಲೆಯಲ್ಲಿ ಶ್ರೀ ಮಲೆಯೂರಾಧೀಶ್ವರಸ್ವಾಮಿ ಪಾದಸ್ಮರಣೆಯಿಂ ರಾಮಕಥಾವತಾರಮಂ ಬರೆದು ಪೂರ್ಣವಾದುದಕ್ಕೆ ಮಂಗಳಮಹಾ ಶ್ರೀ| ಶ್ರೀ ರಾಮಕಥಾವತಾರಗ್ರಂಥ ಪ್ರಮಾಣ ೬೮೦೦ಕ್ಕಂ ಮಂಗಳಮಸ್ತು|| ಸಂಪೂರ್ನಮಾದುದು||

ವಿಷಯ : ಶ್ರೀ ರಾಮನ ಕಥೆ.

ವಿಶೇಷ : ಗ್ರಂಥದಲ್ಲಿ ಪುಟಸಂಖ್ಯೆ ೩೯೭ ಎಂದಿದ್ದರೂ ೭೭, ೩೧೧ ಪುಟಗಳು ಪುನರಾವೃತ್ತಿಯಾಗಿರುವುದರಿಂದ ಪುಟಸಂಖ್ಯೆ ೩೯೯ ಎಂದು ಅರಿಯಬೇಕು.

1432

ಕೆ. ೫೩೩	**ರಾಮ ಕೊರವಂಜಿ**	ಹಾಡು
೮.೯" × ೧.೯"	ವೆಂಕಟೇಶ ಕವಿ	೧೯ನೆಯ ಶತಕ
೧–೨೭ ಪತ್ರ	೮ ಪಂಕ್ತಿ	೩೬ ಅಕ್ಷರ

ಆದಿ : ದ್ವಿಪತೆ || ಶ್ರೀ ಲಕ್ಷುಮೀಕಾಂತ ತ್ರಿಶುಭಾಶಾಂತಾ
ನೀಲಮೇಘಶ್ಯಾಮ ನೀತಿಸುಧಾಮಾ
ರವಿಕೋಟಿಸಂಕಾಶ ರಾಜಿಸುವ ದೇಶಾ
ಭವನತ್ರಯಪೋಷಾ ಭೂರಿಸರ್ವೇಶಾ

x x x x

ಶೇಷಾದ್ರಿಗಿರಿವಾಸ ಸೇವಕರಪೋಶಾ
ಶ್ರೀಲಕ್ಷ್ಮಿಧರಕೇಶ ಶ್ರೀವೇಂಕಟೇಶಾ || ೧ ||

ವಚನ || ಯಂದು ತನ್ನ ಸ್ವಾಮಿಯಾದ ವೆಂಕಟೇಶ್ವರನ ಸ್ತುತಿಸಿ ಆದಿಲಕ್ಷ್ಮಿ
ಯಾದ ಅಲಮೇಲು ಮಂಗಮ್ಮನ ಯೇನೆಂದು ಕೊಂಡಾಡುತಿರ್ದಾನು ||

ಅಂತ್ಯ : ದ್ವಿಪದೆ || ಶ್ರೀ ಪಾರ್ವತಿಪತ್ತಿಗೆ ಶ್ರೀರಮ್ಯವಂಧಿತಗೆ
ಶ್ರೀ ಸಿರಿವಾಸನಿಗೆ ಪರಮಪುರುಷನಿಗೆ
ಚಂದ್ರಶೇಖರಗೆ ಚೆಲುವಲಿಂಗನಿಗೆ
ಯಿಂದುಕುಲವಂದಿತಗೆ ಯೀಶ್ವರಿಗೆ

x x x x

ಸಾಷ್ಟಾಂಗವೆರಸಿ ಸದ್ಭಕ್ತಿಯೊಳು ಪೇಳ್ದ
ಮಲಯತೋಟದ ತಿರುಮಲಯನ ಪುತ್ರ
ನಲವಿಂದ ವೆಂಟಯ್ಯನ ಕುಮಾರನು
ಗುರುದತ್ತ ವರಕೃಪೆವಡದಿಹನು
ಸರಸಕವಿ ವೆಂಕಟೇಶ್ವರನ ಕೃತಿಯು

x x x x

ಆಚಂದ್ರಾರ್ಕವಾಗಿ ವಪ್ಪಿಹುದು ||
ಅಂತು ಸಂಧಿ ೧೧ರ ಪದನು ೩೫೦ ಮಂಗಳಮಹಾ ಶ್ರೀ.

ವಿಷಯ : ಶ್ರೀ ರಾಮನ ಕಥೆ.

ವಿಶೇಷ : ಪತ್ರಗಳು ಸ್ವಲ್ಪ ಅಸ್ತವ್ಯಸ್ತವಾಗಿವೆ.

1433

ಕೆ. ೪೩೬	**ರಾಮಚರಿತೆ**	ವಾರ್ಧಕಷಟ್ಪದಿ
೧೪.೫"×೧.೪"	ವೆಂಕಾಮಾತ್ಯ	ಸು. ೧೭೭೦
೧–೧೬ ಪತ್ರ	೭ ಪಂಕ್ತಿ	೮ ಅಕ್ಷರ

ಆದಿ : ....ಪಾದವೆ ಗತಿ
ಪಲ್ಲ || ಜಗಗಳೀರೇಳು ತೂಗಾಡಿ.... ...
ಯುಗ ಯುಗಂಗಳೊಳು ಯಿಂತೆಸವರಂ ಕಾಣೆನನ
ಲಗಣಿತದ ವೀರರ...........ಮ ತಳಿಸಿ ಯುದ್ಧ ಪ್ರಸಿದ್ಧರಾಗಿ ||
ಪದನೂ || ಭೂಮಿಜಾತನಯ ಕೇಳ್ಬಪನ ಜನಕದುಭುತ
ಸ್ತೋಮಗಳ್ನೆರಹಿದನ ಶೂಲ ನೀಲವದಾಯಿತು
ಆ ಮಹಾಸಮರ ಬೇಸರವಾಯಿತು ದಿ........ಗೆಲೆ ಮಹಾಕಣ.......
ರಾಮ ರಾವಣನ ಕೈಗಣೆಗಳಬ್ಬರವು ಸೋ
ತ್ರಾಮ ಸೂತನ ಚಮತ್ಕೃತಿಯನಿಬ್ಬರ ದಿಶ
ಕ್ಕೊಮಿ ಕಣ್ಗೊಳಿಸಿ ಭೋರೆಸುತೆಸದವಾಗದಪ್ಪುರಿಯ ನಾನೇವೇಳ್ವೆ........||

ಅಂತ್ಯ : ಸಾರಿದಸ್ಸಿರ್ೀರಿದಸ್ಸ್ವರಗತಿಗೆ ಯುಕ್ತದೊಳ್
ಹಾರಿದಪ್ಪಾರಿದರ್ಅತಿ ರವುದ್ರ ಬಾಣದೊಳ್
ಕೇರಿದಕ್ಕೊರ್ೀರಿದಕ್ಕರ್ಂಡ ರಕ್ತಂಗಳಂ ರಣಕುಯದಿ ಗಣನೆಯಿಲ್ದೇ
ಸೂರೆಯೋದಕ್ಕರ್ಣಾ ಚೂತಿಯೊಳ್ಕೀಶದಳ
ವಾ ರಘು ಪ್ರಭುರಿನಣುಗನ ಶರವುಘದಲಿ ಕೇ
ಳ್ವೀರರಣ ರಂಜಿಸಿತನೇಕ ಭೂತಂಗ್ಗಳಾಶ್ರವಿುಸಿ ಭೋಯೆಂದರಚಲೂ ||೬೦||
ಕೇಶದಳದಾಯಿತಗಳಂತ್ತಾಗೆ ರಕ್ಕಸ
ಸ್ಸೂರ್ಸಿದ........ನ ಕೋಳಿಯ ಬಾಯಿ ತೆರೆಯೊಳುಂ
ರೋಸದೊಳ್ವಿಷವ ಮುಕ್ಕುಳಿಸಿದರ್ಅಳಿಸಿದರ್ಆಯುಧ ಪ್ರಾಣಗಳನೂ
ಕೇಶಗಳಿನಿ ಕೆರೆ ವಾಯೊಳೊಡೆ ಝೂಗುಗಳ್
ಹೇಶಿಕೆಯ ಕರ್ನ್ನ ರಂಧ್ರಾಕ್ರುತಿಯ........
....

ವಿಷಯ : ರಾಮಾಯಣದ ಕಥೆ.

ವಿಶೇಷ : ಅಸಮಗ್ರ, ಗ್ರಂಥವು ಉತ್ತರಾರ್ಧದಿಂದ ಎಂದರೆ ೫೧ನೆಯ ಸಂಧಿಯಿಂದ ೬೪ನೆಯ ಸಂಧಿಯಲ್ಲಿ ೬೧ನೆಯ ಪದ್ಯದವರೆಗೆ ಮಾತ್ರವಿದೆ. ಕೊಂಚ ಶಿಥಿಲ. ೨೫ನೆಯ ಪತ್ರದಿಂದ ಕ್ರಮಾಂಕವಿಲ್ಲ. ಆದರೆ ಹೊಸದಾಗಿ ನಾವು ಕೊಟ್ಟಿರುವ ಕ್ರಮಾಂಕದ ರೀತ್ಯ ೮೯, ೧೫೭ ಕ್ರಮಸಂಖ್ಯೆಯ ಪತ್ರಸಂಖ್ಯೆಗಳಿಲ್ಲ.

1434

ಕೆ. ೨೯೨/೧ **ರಾಮಧಾನ್ಯ ಚರಿತೆ** ಭಾಮಿನೀಷಟ್ಪದಿ

೧೨.೨" × ೧.೨" ಕನಕದಾಸ ೧೫೫೦

೧–೪೬ ಪತ್ರ ೪ ಪಂಕ್ತಿ ೩೫ ಅಕ್ಷರ

ಆದಿ : ರಾಮಾಯಣದ ರಾಘವ ಚರಿತ್ರೆ ಬರೆಯುದಕ್ಕೆ ನಿರ್ವಿಘ್ನಮಸ್ತು ||
ಶ್ರೀ ರಾಮಾಪತಿ ಶಿಂದುಶಯನ ಮು
ರಾರಿ ಮುನಿಕುಲ ಪೂಜಿತಾಂಘ್ರಿ ಸ
ರೋರುಹಾಕ್ಷ ಸುದರ್ಶನಾಂಕಿತ ದೇವಭವದೂರ
ಮಾರಪಿತ ಕೌಂಸಲ್ಯಾದೇವಿ ಕು
ಮಾರ ರಘುಕುಲರಾಮ ನೃಪವರ
ದೇವ ಚಂನಿಗರಾಯ ಪಾಲಿಸು ಸಕಲ ಸಜ್ಜನರಾ || ೧ ||
x x x x
ರಾಮಧಾನ್ಯದ ಕೃತಿಯನೀಜನ
ಸ್ತೋಮವೆಲ್ಲಾ ಧರಿಸುವಂದದಿ
ಭೂಮಿಗಚ್ಚರಿಯಾಗಿ ಪೇಳುವೆನೀ ಮಹಾಕಥೆಯಾ

ಪ್ರೇಮದಿಂದಾಧರಿಸಿ ಕೇಳ್ದಸ
ನಮರಿಗೆ ಸತ್ಕರುಣದಲಿ ರಘು
ರಾಮ ಪಾಲಿಸಿಕೊಡುವ ಮನದಲಿ ಇಷ್ಟಸಂಪದವಾ ॥ ೩ ॥

ಅಂತ್ಯ : ಶರಧಿಶಯನ ಮುಕುಂದ ಸಚರಾ
ಚರ ಭರಿತ ನಿರ್ಗುಣ ನಿರಾಮಯಾ
ಸುರ ನರೋರಗವಂದ್ಯ ವರಪುರದಾದಿಕೇಶವನಾ
ಚರಣದಂಕಿತವಾಗಿ ಪೇಳಿದ
ಪರಮಧಾನ್ಯದ ಚರಿತೆ ಸಂತತ
ಧರೆಯೊಳಿಂತೊಪ್ಪಿಹುದು ಆಚಂದ್ರಾರ್ಕಪರಿಯಂತಾ ॥ ೧೫೯ ॥
ಪ್ರತಿ ಶುದ್ಧವಾಗಿದೇಯಂದು ಬರದುಯಿದೇನೆ. ಪ್ರತಿಯಂ ತಿದ್ದುವರೆ ಕಾವ್ಯ ಪ್ರಬಂಧಮಂ ನಾನರಿಯೆನು. ಮತಿಹೀನ ಬರದ ಬರಹವು ಅತಿಶಯದಿಂ ಬುದ್ಧಿ ವಂತರು ತ್ರಿದಿವೋದುವದುತ್ತಮ ಪುರುಷರೂ ॥
ಇಂತೀ ಸಂಪೂರ್ಣಂ ಶ್ರೀರಾಮಚಂದ್ರಗುರುವೇ ನಮಃ॥ ೧೬೦ ॥ಕಾಂ ಮಂಗಳ
ಮಹಾ ಶ್ರೀ ಭವಭವಾರ್ಜಿತ ದುರಿತಕೋಟಿಯ
ತವಿಸುವಘದನಾಮ x x x ನಿಗಮರಹಸ್ಯಪುರಾಣಸಿದ್ಧಿ ಇದೆಂದು ಹರಿ
ನುಡಿದಾ ಶ್ರೀ ಶ್ರೀ ಶ್ರೀ॥

ವಿಷಯ : ಶ್ರೀಮದ್ರಾಮಾಯಣದ ಕಥೆ ಮತ್ತು ರಾಮಧಾನ್ಯದ (ರಾಗಿಯ) ಮಹತ್ವ.

ವಿಶೇಷ : ಕೆಲವು ಪತ್ರಗಳು ಹುಳುತಿಂದು ಶಿಥಿಲವಾಗಿವೆ. ೨೧ನೆಯ ಕ್ರಮಸಂಖ್ಯೆಯ ಎರಡು ಪತ್ರಗಳಿವೆ. ಇದೇ ಕಟ್ಟಿನಲ್ಲಿ ಹಾಡುಗಳು, ಸಂಕ್ಷೇಪರಾಮಾಯಣ ಮತ್ತು ಸಂಕ್ಷೇಪಭಾರತವೆಂಬ ಕೃತಿಗಳಿವೆ.

1435

ಕೆ. ೧೨	**ರಾಮನಾಥಚರಿತೆ**	ಸಾಂಗತ್ಯ
೧೦.೪″ × ೨.೧″	ನಂಜುಂಡ	ಸು. ೧೫೦೦
೨–೨೨೬ ಪತ್ರ	೧೧ ಪಂಕ್ತಿ	೫೦ ಅಕ್ಷರ

ಆದಿ : ....ವವೆಸರಿದ
ನಾವನರಿವನವನಿಯೊಳೂ ॥ ೧೩ ॥
ಬಿಡು ಭವಪಾಶ ಬದ್ಧರ ದೇವತೆಗಳೆಂಬ್ಬ
ನುಡಿಯನಭವನಲ್ಲದಿಳೆಗೆ
ವೊಡೆಯರಿಲ್ಲೆಂದು ನಿಗಮ ನಗಗಳನೆತ್ತಿ
ಮುಡಿದಿಕ್ಕಿದಪೆನಾಂಪರುಂಟ್ಟೆ ॥ ೧೪ ॥
x x x x

ಅಂಡದ ಝುಲ್ಲಿಯಾನೆಯ ನಿಗಳಕೆ ಮಾ
ರ್ಕೊಂಡು ಮಲೆವ ರಾವುತರಾ
ಹಿಂಡಿನ ಗಂಡ ಮಾಧವನಾತ್ಮಜ ನಂ
ಜುಂಡ ನಾನಿದನುಸುರಿದೆನು || ೬೭ ||

ಅಂತ್ಯ : ಕಲಿ ರಾಮನೊಡನೆ ಮಡಿದ ವೀರಭಟರ ಸಂ
ಕುಲದ ಕುದುರೆಗಳ ತರಿಸಿ
ಬಲಯುತರೆಂದು ಬಂಣಿಸಿದವ ಸಲಹುವ
ಬಲುಪಾದಿಗಳಿಗಿತ್ತನವನೂ ||
ಅವರ ಸಂಜೊ................

ವಿಷಯ : ಕುಮಾರರಾಮನ ಕಥೆ.

ವಿಶೇಷ : ೧ನೆಯ ಪತ್ರ ಲುಪ್ತವಾಗಿದೆ. ಅಸಮಗ್ರ ಪ್ರತಿ.

1436

ಕೆ. ೧೨೮ **ರಾಮನಾಥಚರಿತೆ** ಸಾಂಗತ್ಯ

೧೨.೬" × ೨" ನಂಜುಂಡ ಸು. ೧೫೦೦

೨–೯೯೧ ಪತ್ರ ೧೨ ಪಂಕ್ತಿ ೬೫ ಅಕ್ಷರ

ಆದಿ : ....ನೇಕ ಯುಕ್ತಿಯ ಬಲ
ದಿಂದ ವಾದಿಯ ನೋ............
............................ಂಡಾ
ನಂದದಿಂ ಪೇಳ್ವನೀ ಕೃತಿಯಾ || ೨೨ ||
........ಖಿಲ ಕಲಾರೋಹಣ ನಿ
ಶ್ರೇಣಿಯನಬ್ಜಸಂಭವನಾ
ರಾಣಿಯ ಬಲಗೊಂಬೆನೊಲಿದರು ವೀಣಾ
ಪಾಣಿಯನುಚ್ಚವೇಣಿಯನೂ || ೨೩ ||

ಅಂತ್ಯ : ಬಳಿಕಲವನ ಪಂಡಿತರು ಬಂದು ರಾಯನ
ತಿಳುಪಿದರಾಗವೋಕ್ತಿಯಲಿ
ಅಳಲ ನಿಲಿಸಿ ಕುವರಿಯ ಗೋರಿಗೊಳಿಸಿ ಬಂ
ದೆಳಸಿ ನೋಡಿದರಾ ತಲೆಯ || ೯೩ ||
ಅಳಿದಲ್ಲಿದು ಕಳೆಯಳಿವುದಲ್ಲಿದು ಮುಂ............

ವಿಷಯ : ಕುಮಾರರಾಮನ ಕಥೆ.

ವಿಶೇಷ : ೧, ೨೬ ಮತ್ತು ೧೨೧–೧೫೫ ಪತ್ರಗಳು ಇಲ್ಲ. ೯೩ನೆಯ ಪತ್ರ ಮುರಿದಿದೆ. ಶಕಟರೇಫವನ್ನು ಬಳಸಿದೆ. ಅಸಮಗ್ರ ಪ್ರತಿ.

1437

ಕೆ. ೧೭೪/೨ **ರಾಮನಾಥಚರಿತೆ** ಸಾಂಗತ್ಯ

೧೫.೩" × ೨.೪" ನಂಜುಂಡ ಸು. ೧೫೦೦

೧೨೨–೧೬೫ ಪತ್ರ ೧೧ ಪಂಕ್ತಿ ೮೦ ಅಕ್ಷರ

ಆದಿ : ರಾಮನಾಥನ ಸಂಗತ್ಯ

ಶ್ರೀ ಗಿರಿಜಾಸ್ಯಾಂಬುಜ ದಿನನಾಯಕ
ಭೋಗಿಭೂಷಣ ಭಾಳನೇತ್ರ
ಭಾಗೀರಥೀಧರ ಭವರೋಗವೈದ್ಯ ನೀ
ನಾಗು ಶಂಕರ ಶರಣೆನಗೆ ॥ ೧ ॥

ಅಂತ್ಯ : ಅಂತು ಸಂಧಿ ೧೧ಕ್ಕಂ ಮಂಗಳ ಪದನು ೧೫೩೦ ಮಂಗಳಮಹಾ ಶ್ರೀ

x x x x

ಕಾಣುತವನ ಕಾಯದೊಳು ರೂಪುಳ್ಳಕ
ಶ್ರೇಣಿಗಟ್ಟಿದ ಗುಡಿಯನಲೂ
ಕಾಣಿಸಿ ಮೆಯ್ಯನೀಡಾಡಿದವನಿರ್ದ
ತಾಣದ ದೆಸೆಗಾ ಮಂತ್ರಿ ॥ ೨೧ ॥
ತೀವಿದ ಭಕ್ತಿ ಭರದೊಳೆ ತಂನಡಿಗಳಿಗಾ

ವಿಷಯ : ಕುಮಾರರಾಮನ ಕಥೆ.

ವಿಶೇಷ : ಅಸಮಗ್ರ. ಕೊನೆಯ ಕೆಲವು ಪತ್ರಗಳ ಅಂಚು ಮುರಿದಿದೆ. ಇದರೊಂದಿಗೆ ಕಬ್ಬಿಗರ ಕಾವವೆಂಬ ಮತ್ತೊಂದು ಕಾವ್ಯವಿದೆ.

1438

ಕೆ. ೪೫೬ **ರಾಮನಾಥಚರಿತೆ** ಸಾಂಗತ್ಯ

೧೫.೮" × ೧.೯" ನಂಜುಂಡ ಸು. ೧೫೦೦

೧–೬೭ ಪತ್ರ ೧೧ ಪಂಕ್ತಿ ೯೨ ಅಕ್ಷರ

ಆದಿ : ಶ್ರೀ x x x ರಾಮನಾಥನ ಸಂಗತ್ಯ ॥

ಶ್ರೀ ಗಿರಿಜಾಶ್ಯಾಂಬುಜ ದಿನನಾಯಕ
ಭೋಗಿಭೂಷಣ ಭಾಳನೇತ್ರಾ
ಭಾಗೀರತೀಧರ ಭವರೋಗವೈದ್ಯ ನೀ
ನಾಗು ಶಂಕರ ಶರ....ಗೆ ॥ ೧ ॥

ಅಂತ್ಯ : ಸುರುತಾಳ ಕೋಪದಿಂದರಮ....

....

ಭರದಿಂದ ನಿಜ ನಿಳಿಯವನೆಯ್ದಿದನು ಕೈಯ್ಯ
ಹರಣದಿಂ ಬೆದಱುತೆದೆಯೊಳೂ || ೯೮ ||

ಇತಿ ಪಂಚಮಾಶ್ವಾಸೆ ಚತುರ್ಥಃ ಸಂಧಿಃ ||

ಯಿದು ಯೆದುಕುಲಾಮಾತ್ಯ ವಂಶದೊಳಗುದಯಿಸಿದ
ಸದಮಲ ಯೆಶೋ ವಿರಾಜಿತ ವಿಜೆಯನೃಪತನುಜ
ವಿಧಿತ ವಿತರಣ ವಿನೆಯ ವಿಕ್ರಮ........ವನಾಮನಾ
ವುದರಾಬ್ಧಿ ಭವಚಂದ್ರ ನಂಜುಂಡನೊಲಿದೊರೆದ
ಕದನ ಕಲಿಕಾಲಕಪಿಕೇತು ಕಲಿ ಶುಚಿ ರಾಮ
ನುಧಿತ ಕ್ರುತಬಂದದೊಳ್ಮ್ರುದು ಪದನ್ಯಾಸದೊಳಗಾಶ್ವಾಸವೈದನೆಯದೂ ||
ಅಂತು ಸಂದಿ ೨೦ಕ್ಕಂ ಪದನು ೨೩೩ಕ್ಕಂ ಮಂಗಳ ಮಹಾ ಶ್ರೀ.

ವಿಷಯ : ಕುಮಾರರಾಮನ ಕಥೆ.

ವಿಶೇಷ : ३೧ ಮತ್ತು ३३ ನೆಯ ಪತ್ರಗಳಿಲ್ಲ. ೧, ३೨ ಮತ್ತು ೫೪ನೆಯ ಪತ್ರಗಳು ಮುರಿದಿವೆ. ಶಕಟರೇಫ ಪ್ರಯೋಗವಿದೆ. ಪ್ರತಿ ಅಸಮಗ್ರವಾಗಿದೆ.

1439

ಕೆ. ೫೨೯	**ರಾಮನಾಥಚರಿತೆ**	ಸಾಂಗತ್ಯ
೧೦.೪" × ೨.೧"	ನಂಜುಂಡ	ಸು. ೧೫೦೦
೧–೧೦३ ಪತ್ರ	೯ ಪಂಕ್ತಿ	४೦ ಅಕ್ಷರ

ಆದಿ : ರಾಮನ ಸಂಗತ್ಯದಲ್ಲಿ ಸಂಗ್ರಹಾ || ೧ || ಶೂಲದ ಸಂಧಿ || ೧ ||
ಸೂಚನೆ || ಕಂಪಿಲಾತ್ಮಜ ರಾಮ ಶೂಲದ ಹಬ್ಬವ
ಪೆಂಪಿನಿಂ ಮಾಡಿದನೊಸೆದೂ ||
ಪದ || ನೊಸಲ ಕಂಣಿಂದೀಶ್ವರ ಕೌಸ್ತುಭದಿಂ
ದಸುರಾರಾತಿಯಂಬಂತೆ
ಅಸಹಾಯ ಶೂರಕುಮಾರರ ಮಗನಿಂದ
ಝುಷವಡೆದನು ಕಂಪನೃಪತಿ || ೧ ||

ಅಂತ್ಯ : ಯಿದು ಪರದಾರ ಸೋದರ ರಾಮನಾಥನ
ಪದಕೃತಿಯೊಳಗೊಂಬತ್ತನೆಯಾ
ವಿಧಿತಾಶ್ವಾಸದೊಳೆರಡನೆಯದು ಸಂಧಿ
ವೃದುಪದಚಯ ಸಂಬಂಧಿ || ೧೫೬ ||
ಅಂತು ಸಂಧಿ ೧३ಕ್ಕಂ ಪದ ೧೬೧೬ಕ್ಕಂ ಮಂಗಳಮಹಾ ಶ್ರೀ.

ವಿಷಯ : ಕುಮಾರರಾಮನ ಕಥೆ.

ವಿಶೇಷ: ಮೊದಲ ಬೇರೊಂದು ಪತ್ರದಲ್ಲಿ ವಿಷಯಸೂಚಿಯಿದೆ. ಗ್ರಂಥದ ಕೊನೆಯಲ್ಲಿ ಇದೇ ಗ್ರಂಥಕ್ಕೆ ಸಂಬಂಧಿಸಿದ ಮತ್ತೊಂದು ಪತ್ರ (೧೫೯ ಅಥವಾ ೧೬೭) ಇದೆ. ೭೬, ೭೮ ಪತ್ರ ಲೋಪ. ಅಸಮಗ್ರ ಪ್ರತಿ. ಅಕ್ಷರಗಳು ಸುಂದರ ಮತ್ತು ಸ್ಫುಟ.

1440

ಕೆ. ೫೯೧	**ರಾಮನಾಥಚರಿತೆ**	ಸಾಂಗತ್ಯ
೧೦.೫" × ೨.೧"	ನಂಜುಂಡ	ಸು. ೧೫೦೦
೧-೨೩೮ ಪತ್ರ	೧೨ ಪಂಕ್ತಿ	೫೫ ಅಕ್ಷರ

ಆದಿ : ಶ್ರೀ ಗಿರಿಜಾಶಾಂಬುಜ ದಿನನಾಯಕ
ಭೋಗಿಭೂಷಣ ಭಾಳನೇತ್ರಾ
ಭಾಗಿಯರತಿಧಾರ ಭವರೋಗವೈದ್ಯ ನೀ
ನಾಗು ಶಂಕರ ಶರಣೆನಗೆ || ೧ ||

x x x x

ಅಂಡದ ಝುಲ್ಲಿಯಾನೆಯ ನಿಗಳಕೆ ಮುಂ
ಕೊಂಡು ಮಲೆವ ರಾವುತರಾ
ಹಿಂಡಿನ ಗಂಡ ಮಾಧವನಾತ್ಮಜ ನಂ
ಜುಂಡನಿದನುಸುರಿದೆನೂ || ೬೨ ||

ಅಂತ್ಯ : ಗದ್ಯ || ಯಿದು ಸಮಸ್ತ ಸುರಾಸುರ ಮವುಲಿ ಮಾಲಾಕಿಲಿತ ನೂತ್ನ ರತ್ನ ಪ್ರಭಾಪುಂಜರಂಜಿತ ಚಂದ್ರಪ್ರಭ ಚರಣಾರವಿಂದಮದೂಳಿ ಮಧುಕರ ರಾಯಮಾನ ಮಾದವಸೂನು ಕವಿತಾವಿಶಾರದ ನಂಜುಂಡ ವಿರಚಿತಮಪ್ಪ ಕುಮಾರರಾಮಚರಿತ ಮಹಾಪ್ರಬಂಧದೊಳೀಶ್ವರ ಸಭಾವರ್ಣನದಾಶ್ವಾಸದೊಳ್ ಸಂಧಿ ನಾಲ್ವತೆಂಟನೆಯದೂ || ೧೦೮ ||

x x x x

ಲೋಕಾಪಜಯ ಜಾಗರೂಕ ಧನುಜಾಂತಕ ನಿಶಕಾಂತ ಸೂರ್ಯ್ಯ ಸಿಖಿ ಭೂ ಕಮಲಾ ಮಾರುತಾತ್ಮಾಕಾಶ ಸಾಕ್ಷಾಧನಿಕಾಷ್ಟಮೂರ್ತ್ತಿ ಗಿರಿಜಾಕಾಂಕ್ಷ ಸಲಹೆಂನನೂ || ಅಂತು ಸಂಧಿ ೪೮ ಕಂಪದನೂ ೫೮೦೮ಕಂ ಮಂಗಳ ಮಹಾ ಶ್ರೀ.

ವಿಷಯ : ಕುಮಾರರಾಮನ ಕಥೆ.

ವಿಶೇಷ : ಪ್ರತಿ ಸಮಗ್ರವಾಗಿದೆ.

1441

ಕೆ. ೧೫೧ **ರಾಮನಾಥಚರಿತೆ** ಸಾಂಗತ್ಯ

೮."೨ × ೧.೪" ಗಂಗ ಸು. ೧೬೫೦

೧–೧೧೮ ಪತ್ರ ೬ ಪಂಕ್ತಿ ೩೫ ಅಕ್ಷರ

ಆದಿ : ಶ್ರೀ x x x x ರಾಮನ ಸಂಗಿತ್ಯ ಬರೆಯುವದಕೆ ನೆರ್ವಿಗ್ನಮಸ್ತು

ಶ್ರೀ ಗಣದೀಶನೆ ಸುರಮುನಿವಂದ್ಯನೆ
ನಾಗಭೂಷಣ ಶಿವಶಂಕರನೇ
ಆಗಮಕೊಡೆಯನೆ ಭಾಗೀರತಿಯ ಪುತ್ರನೇ
ಬೇಗದೀ ಮತಿಯ ಕೊಡೆನಗೇ ॥ ೧ ॥

x x x x

ಪದಜಾತಿಗೆ ಪಂಚಾಳನು ಪದವಿ ಪೇ
ಳಿದನೀ ಕೃತೀಯಾ
ಸದುಹೃದೆಯರು ಸತ್ಪುರುಷರು ಗಂಗನ
ಪದನ ಕೇಳಿರೋ ಮುದಾದಿಂದಾ ॥ ೧೭ ॥

ಅಂತ್ಯ : ಊರು ಹೋಯಿತು ವಾಳ ಹೊಕ್ಕಾರು ತುರುಕಾರು

ವೀರರಾಮನ ಬಂಟರಾ....
ಸೇರಲೀಸದೆ ತಂಮೊಡೆಯಾನ ಬಳಿಯಂಲೀ
ಹೋರುತಿರ್ದರು ಹೊಕ್ಕು ಹೊಯಿದೂ ॥
....ಗಡೀ....ಸಟ್ಟೀಂ....ಲಿಂಗ....
ಬಯಾಭಂಗ....ದಾನೂ
ಸಾ....ರಾ ಕಾದುತ ಮಾಲೇಯು....
....ರನ ಮುಂದೆ ನಿಂದೂ ॥

ವಿಷಯ : ಕುಮಾರರಾಮನ ಕಥೆ.

ವಿಶೇಷ : ಅಸಮಗ್ರವಾಗಿದೆ. ಕ್ರಮಸಂಖ್ಯೆ ಸರಿಯಾಗಿಲ್ಲ.

1442

ಕೆ. ೧೭೦ **ರಾಮನಾಥಚರಿತೆ** ಸಾಂಗತ್ಯ

೧೪.೪"×೧.೩" ಗಂ.ಗ ಸು. ೧೬೫೦

೧–೯೬ ಪತ್ರ ೬ ಪಂಕ್ತಿ ೬೨ ಅಕ್ಷರ

ಆದಿ : ರಾಮನ ಸಂಗಿತ್ಯ ಬರೆಯುದಕೆ ನಿರ್ವಿಗ್ನಾನಮುಸ್ತು ॥

ಶ್ರೀ ಗಿರಿಜಾಶಾಂಭುಜಾದೀ ವಿನಾಯಕ
ಭೋಗಿಭೂಷಣ ಭಾಳನೇತ್ರಾ
ಭಾಗಿ....ಧರ ಭವರೋಗವೈದ್ಯನೆ
ನಾಗು ಶಂಖರ ಶ್ಯಾರಣ್ಯಾಮಗೇ ॥ ೧ ॥
x x x x
ಶ್ರೀ ಕಾಂತ್ತನ ಕ್ರುಪೆಯೊಳ್ಳ ಚಂನಿಗರಾಮ
ಲೋಕದೊಳಗೆ ಕೀರ್ತಿವಡೆದಾ
ಯೀ ಕ್ರುತಿಯನು ಪೇಳಿದ ಗಂಗೈಯನು ಅ
ನೇಕ ಸಜ್ಜನರು ಲಾಲಿಪುದೂ ॥ ೧ ॥ (೬—೧) (ಪತ್ರ-೩೨)

ಅಂತ್ಯ : ಚಿಂತೆಯೊಳ್ತಿಗೆದು ಬಿಟ್ಟಳು ಗಾಉದ ಹಾದಿ
ಬ್ರಾಂತ....ಮನದೊಳಗೆ
....ಡಿ ಮಾದಗಿತ್ತಿಯು
ಯಿಂತೆಂಬಲ್ಲಿಗೆ ಸಂದಿ ಹದಿಮೂರಾಯ್ತು ॥ ೧೬೯ ॥
ಅಂತು ಸಂದಿ ೧೩ ಕಂ ಪದನು ೧೯೭೦ ಕಂ ಮಂಗಳ ಮಹಾಶ್ರೀ.

ವಿಷಯ : ಕುಮಾರರಾಮನ ಕಥೆ.

ವಿಶೇಷ : ಶಿಥಿಲವಾಗಿದೆ. ಕೊನೆಯಲ್ಲಿ 'ಪ್ರಜೋತ್ಪತ್ಯ ಸಂವತ್ಸರದ ಶ್ರಾವಣ ಶು....೦ಲು ವೇಣುಪುರದ ಗುರಮುಲ್ಯೆಯನವರ ಮಗ ರೇವಂಣನು ಬರೆದ ರಾಮನ ಸಂಗಿತ್ಯ ಸಂಪೂರ್ನ' ಎಂದಿದೆ. ೯ನೆಯ ಪತ್ರ ಮುರಿದು ಹೋಗಿದೆ. ಅಲ್ಲಲ್ಲಿ ಪತ್ರಗಳನ್ನು ಹುಳು ತಿಂದಿದೆ.

1443

ಕೆ. ೧೯೯	**ರಾಮನಾಥಚರಿತೆ**	ಸಾಂಗತ್ಯ
೯" × ೧.೯"	ಗಂಗ	ಸು. ೧೬೫೦
೧–೧೮೬ ಪತ್ರ	೧೦ ಪಂಕ್ತಿ	೩೬ ಅಕ್ಷರ

ಆದಿ : ರಾಮನ ಸಂಗತ್ಯ ಗಂಗು ಪ್ರತಿ ಬರೆಯೊದಕ್ಕೆ ಶುಭಮಸ್ತು
ಶ್ರೀ ಗಣಾಧೀಶಾನೆ ಸುರಮುನಿವಂದ್ಯಾನೆ
ನಾಗಭೂಷಣ ಶಿವಸುತನೆ
ಆಗಮದೊಡೆಯಾನೆ ಪಾರ್ವತಿಪುತ್ರಾನೆ
ಬೇಗಾದಿ ಮತಿಯ ಕೊಡೆನಗೆ ॥ ೧ ॥
x x x x
ಕಂನ್ನಾಡ ಕವಿಜಾಣ ರಂನ್ನಾನೂ ಗಂಗೂಗಾ
ಯಿಂನ್ನು ಮುಂನವೆ ಪಂಚಾಳಾ
ಚಂನ್ನ ಭೂಜಂಗಾನ ಬೃತ್ಯ ಗಂಗೈಯ್ಯ ಸಂ
ಪಂನ ಪೇಳಿದನೀ ಕೃತಿಯಾ ॥ ೧೩ ॥

ಅಂತ್ಯ : ಪರನಾರಿಯ ಸಹೋಧರ ಚೆಂನ್ನರಾಮಾನ
ಪರಿಯ ವಿಸ್ತರಿಸಿ ಕೇಳ್ವರಿಗೆ
ವರಚಂದ್ರಾರ್ಕ ಸೌಭಾಗ್ಯ ಸಂಪದವಿತ್ತು
ಹೊರವ ಶ್ರೀಹರಿ ತಾನು ಬಿಡಾದೆ || ೪೬೩ ||
ಕೊಮಾರರಾಮನ ಸಂಗತ್ಯ ಕಥಾ ಪ್ರಸಂಗದಲ್ಲಿ ಅಂತು ಅದ್ಯಾಯ ೭ಕ್ಕಾಂ
ಪದನೂ ೩೦೪೨ಕ್ಕಾಂ ಜಯಮಂಗಳ.

ವಿಷಯ : ಕುಮಾರರಾಮನ ಕಥೆ.

ವಿಶೇಷ : ಪ್ರತಿ ಸಮಗ್ರವಾಗಿದೆ, ಚೆನ್ನಾಗಿದೆ. ಪ್ರತಿಯ ಕೊನೆಯಲ್ಲಿ 'ಶಾಲಿವಾಹನ ಶಖಾಬ್ದಂ ೧೭೬೧ನೆ ಸಂದ ವರ್ತಮಾನವಾದ ವಿಖಾರಿ ನಾಮ ಸಂವತ್ಸರದ ಪುಷ್ಯ ಬ ೧೨ ಶುಕ್ರವಾರದಲ್ಲು ಪದ್ಮಮಿತ್ರನುದಯವಾದ ೨೫ನೆ ಗಳಿಗೆಯಲ್ಲಿ ವುಪಾದ್ಯ ಗೋವಿಂದೈಯ್ಯನವರ ಕೊಮಾರನಾದ ವುಪಾದ್ಯ ವೆಂಕಟೈಯ್ಯನು ಬರದು ಮೆಚ್ಚಿದಂತ್ತಾ ರಾಮನ ಸಂಗತ್ಯದ ಪುಸ್ತುಕಕ್ಕೆ ಜಯಮಂಗಳ' ಎಂದಿದೆ. ೩ನೆಯ ಪತ್ರ ಎರಡಿವೆ.

1444

ಕೆ. ೩೮೯	**ರಾಮನಾಥಚರಿತೆ**	ಸಾಂಗತ್ಯ
೧೧.೧" × ೨"	ಗಂಗ	ಸು. ೧೬೫೦
೨–೮೨ ಪತ್ರ	೧೦ ಪಂಕ್ತಿ	೪೫ ಅಕ್ಷರ

ಆದಿ : ಸೂರ್ಯ....ಣಕೆ ಸರಿಯಪ್ಪ ಪದಕವ
ವೀರ ರಾಮುಗ ಧರಿಸಿದನೂ || ೮ ||
ಯೆಳೆಮಿಂಚು ಹೊಳೆವ ನಾಮುವನಿಟ್ಟು ನೊಸಲಿಂ
ಖಳೆಯ ಯೇರುವ ಚಂದ್ರನಂತೆ
ಥಳಥಳಿಸುವ ಮುಖಕಾಂತಿ ರಂಜಿಸುತಿರೆ
ಬಲವಂತ ರಾಮುನೊಪ್ಪಿದನೂ || ೯ ||

ಅಂತ್ಯ : ಯಿಾ ಕಥೆಯನ್ನು ಮನವರ ಕೇಳ್ವವರಿಗೆ ಅ
ನೇಕ ಪುಂಣ್ಯವು ದನದಾಂನ್ಯ....
......................ದ್ರವು
ಯಿಾ ಕಥೆ ಸಜ್ಜನ ಕಾವ್ಯ || ೨೦೦ ||
ಅಂತು ಸಂದಿ ೧೪ಕ್ಕಂ ಪದನು ೧೫೫೦ಕ್ಕಂ ಮಂಗಳಮಹಾ ಶ್ರೀ.

ವಿಷಯ : ಕುಮಾರರಾಮನ ಕಥೆ.

ವಿಶೇಷ : ಪ್ರತಿಯ ಕೊನೆಯಲ್ಲಿ " ಯಿಾವ ಸಂವತ್ಸರದ ಆಷಾಡ ಶುದ್ಧ ೧೫ ಬುದವಾರ ಕಿಲಸೂರ ವೇವೈಯ್ಯನು ಬರೆಕೊಟ್ಟ ರಾಮನ...." ಎಂದಿದೆ. ೧, ೫, ೮೧ ಪತ್ರಗಳಿಲ್ಲ. ಅಸಮಗ್ರವಾಗಿದೆ; ಶಿಥಿಲವಾಗಿದೆ.

1445

ಕೆ. ೩೮೭/೪ | **ರಾಮನಾಥಚರಿತೆ** | **ಸಾಂಗತ್ಯ**

೧೯.೨" × ೨" | ಗಂಗ | ಸು. ೧೬೫೦

೧೬–೩೫ ಪತ್ರ | ೯ ಪಂಕ್ತಿ | ೯೫ ಅಕ್ಷರ

ಆದಿ : ....ನಿಂಮ ಹರಿಯಂ ಮನೋಪಾದಿಯಂದಾರೆ
ಕಡುಪಾಪಿ ಪಾಪಕಂಜುವನೆ || ೧೭೦ ||
ವಲ್ಲೆನೆಂದರೆ ಬಲುಹಿಂದ ಹಿಡಿದು ಯಂನ್ನ
ಗಲ್ಲದೊಳುಗುರನಿಕ್ಕುವನೂ
ಸಲ್ಲದು ಯಿದು ಮತವಲ್ಲವಂದಾ ರಾಯ
.... || ೧೭೧ ||

ಅಂತ್ಯ : ಕೊಂಡುಹೋಗಿರಿಸಿ ರಾಮನ ತಲೆಯನು ಯಂದು
ಮಂಡಲಪತಿ ಸುರಿತಾಳಾ
ದಂಡೆಲ್ಲ ಜೋಡಿಸಿ ಕಾಸಿಗೆ ಕಳುಹಿ ಉ
ದ್ದಂಡದಿ ಪೂಜೆ ಮಾಡಿಸಿದಾ || ೧೯೯ ||
ಸಿವನಲ್ಲಿರಿಸಿ ದೂತರು ಬಂದು ಸುರಿತಾಳ
ಗಿರವನೆಲ್ಲವ ಹೇಳಿದರೂ
ಧುರಗಲಿಯಾದ ಚೆಂನಿರಾಮಯ್ಯನ
ಸಿರ ಪೂಜೆಗೊಳುತಿರ್ದುದಾಗಾ || ೨೦೦ ||
ರಾಮನ ಕಥನ ಕಥೆಯನು ಕೇಳಿದ ಜನರಿಗೆ
ಭೂಮಿದಾನವನಿತ್ತ ಫಲವೂ
ಪ್ರೇಮದಿ ಸಕಲೈಶ್ವರ್ಯ ಹೆಚ್ಚುವದೆಂದು
ಉಮೆಯ ಮನೋಹರ ನುಡಿದಾ || ೨೦೧ ||
ಅಂತು ಸಂಧಿ ೫ಕಂ ಪದನು ೧೦೫೨ಕಂ ಮಂಗಳಮಹಾ ಶ್ರೀ.

ವಿಷಯ : ಕಂಪಿಲೇಶ್ವರನ ಪುತ್ರನಾದ ಕುಮಾರರಾಮನ ಕಥೆ.

ವಿಶೇಷ : ಪತ್ರಗಳ ಅಂಚು ಮುರಿದಿವೆ. ಒಂದೆರಡು ಪತ್ರಗಳು ಮುರಿದಿವೆ. ಈ

ಗ್ರಂಥ ಮಾತ್ರವಲ್ಲದೆ ಹನುಮಂತ ವಿಜಯ, ಸೋಮೇಶ್ವರ ಚಿತ್ರಶೇಖರರ ಕಥೆ, ಶೃಂಗಾರಕಟ್ಲೆ (ತೆಲುಗು), ರಾಮಾಯಣ, ಸೋಮೇಶ್ವರ ಚಿತ್ರ ಶೇಖರರ ಕಥೆಗೆ ಸಂಬಂಧಿಸಿದ ಯಕ್ಷಗಾನದ ಒಂದೊಂದು (೪ ಮತ್ತು ೬) ಪತ್ರ ಗಳೂ ಇವೆ. ಪ್ರಕೃತ ಗ್ರಂಥವು ಕುಮಾರರಾಮನು ತನ್ನನ್ನು ಭಂಗಪಡಿಸಿದ ನೆಂಬ ಅಪವಾದವನ್ನು ರಾಣಿ ರತ್ನಾಜಿಯು ಅರಸನಾದ ಕಂಪಿಲೇಶ್ವರನಿಗೆ ಹೇಳುವ ಭಾಗದಿಂದ ಆರಂಭವಾಗುತ್ತದೆ.

1446

ಕೆ. ೪೦೩ **ರಾಮನಾಥಚರಿತೆ** ಸಾಂಗತ್ಯ

೧೪" × ೧.೭" ಗಂಗ ಸು. ೧೬೫೦

೧–೪೩ ಪತ್ರ ೬ ಪಂಕ್ತಿ ೬೨ ಅಕ್ಷರ

ಆದಿ : ಶ್ರೀ x x x ಕುಮಾರ ರಾಮನ ಸಂಗತ್ಯ ಬರವದಕ್ಕೆ ನಿರ್ವಿಘ್ನಮಸ್ತು xxx

ಶ್ರೀಗಣಾಧೀಶಾನೆ ಸುರಮುನಿವಂದ್ಯಾನೆ
ನಾಗಭೂಷಣ ಶಿವಸುತನೇ
ಆಗಾಮಕೊಡೆಯಾನೆ ಭಾಗೀರತಿಪುತ್ರಾನೆ
ಬೇಗಾದಿ ಮತಿಯ ಕೊಡೆನಗೇ ॥ ೧ ॥

x x x x

ಪದ ಜಾತಿಗೆ ಪಾಂಚಾಳಾನು ಗಂಗೂಗಾ
ವದವಿ ಪೇಳಿದನೀಕೃತಿಯಾ
ಸದುಹೃದೆಯರೂ ಸತ್ಪುರುಷಾರು ಗಂಗಾನ
ಪದ ಕೇಳಿರೊ ಮುದದಿಂದಾ ॥ ೧೭ ॥

ಅಂತ್ಯ : ಹುಲಿಯಡಗಿದ ಮೆಳೆಯೊಳು ರಾಮೈಯ್ಯನ
ಕೊಲುವಾರೆ ಕೈಬಾರದೆನಗೇ
ಚೆಲುವಾರ ಗಂಡ ಚಂನಿಗರಾಮನಳಿದಾರೆ
ಲಲನೆಯರೆಂತು ಸೈರಿಪರೂ ॥ ೩೮೮ ॥
ಕಾಟ್ಟಾಳು ರಾಮಾನನುಳುಹಿ ಕಾರ್ಯ್ಯವ ಕಾಬೆ
ಪಟ್ಟಣವನು ಉಳುಹುವೆನೂ ॥

ವಿಷಯ : ಕುಮಾರರಾಮನ ಕಥೆ.

ವಿಶೇಷ : ಪ್ರತಿಯು ಅಸಮಗ್ರವಾಗಿದೆ. ಗ್ರಂಥದ ಆದಿಯ ಬೇರೊಂದು ಪತ್ರದಲ್ಲಿ ಗಣೇಶಾದಿಗಳ ಸ್ತೋತ್ರಗಳಿವೆ. ಗ್ರಂಥದ ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ.

1447

ಕೆ. ೫೮೦ **ರಾಮನಾಥಚರಿತೆ** ಸಾಂಗತ್ಯ

೮.೧″ × ೨″ ಗಂಗ ಸು. ೧೬೫೦

೧–೧೧೮ ಪತ್ರ ೮ ಪಂಕ್ತಿ ೩೫ ಅಕ್ಷರ

ಆದಿ : ಕೊಮಾರ ರಾಮನ ಸಾಂಗತ್ಯ, ಬೊಲ್ಲನ ತಂದ ಸಂಧಿ ಬರವದಕ್ಕೆ ಶುಭಮಸ್ತು
ಪದನೂ ॥ ಗೋವಿಂದ ಭಜಕನೆ ಗೋವಿಂದ ಸುಜನೇ
ಗೋವಿಂದ ನಯನಾರ್ಜಿತನೇ
ಗೋವಿಂದ ಬೃಂದಿತ ಶ್ರೀ ಚರಣಕ್ಕೆ ಬಾ
ಗೂವೆ ಯಂನ್ನ ಮಸ್ತಕವಾ ॥ ೧ ॥
ಶ್ರೀ ಗಿರಿಜೇಶಾಂಭುಜ ನಾಯಕನೇ
ಭೋಗಿಭೂಷಣ ಬಹಳ ನೇತ್ರಾ
ಭಾಗೀರಥಿಧರ ಭವರೋಗ ವೈದ್ಯನೆ
ನಾಗಶಂಕರ ಶರಣೆಂಬೇ ॥ ೨ ॥

ಅಂತ್ಯ : ಯಿಕ್ಷುವಿಲ್ಲನ ರಾಣಿ ವಡ್ಡವಣೆಯಂತೆ
ಪಕ್ಷಿವಾರುನ ನದಿಯಂತೆ
ಸಕ್ಕರೆ ಹಾಲ ಶೋಧಿಸಿ ಸವಿದಂತೆ
ದಿಕ್ಕಿಗೆ ಗಂಗನ ಕೃತಿಯೂ ॥ ೭ ॥ (ಪತ್ರ—೮೦)
x x x x
ಯಿಾ ದುರಧೀರ ರಶಿಖರ ಸಜ್ಜನ
ಹೃದಯ ಸಾರವ ಮುಟ್ಟುವಂತೇ
ಪದುಳದಿಂದಲಿ ರಾಮಾನೊದವೀ ಧರೆಯ ಮೇಲೆ ಅರ
ಸಾದಲ್ಲಿಗೆ ಸಂಧಿ ಪೂರ್ನ ॥ ೨೦೬ ॥
ಅಂತೂ ಸಂಧಿ ೫ಕಾಂ ಪದನೂ ೧೭೫೮ ಕಾಂ ಮಂಗಳಮಹಾ ಶ್ರೀ.

ವಿಷಯ : ಕುಮಾರರಾಮನ ಕಥೆ.

ವಿಶೇಷ : ೩೦–೩೮ರ ವರೆಗೆ ಪತ್ರಸಂಖ್ಯೆ ಪುನರುಕ್ತಿಯಾಗಿದೆ. ೭೭ನೆಯ ಪತ್ರ ಇಲ್ಲ; ಆದರೆ ವಿಷಯ ಲೋಪವಿಲ್ಲ. ೧೧೩ ಮತ್ತು ೧೧೫ ಪತ್ರಗಳಿಲ್ಲ.

1448

ಕೆ. ೫೮೩ **ರಾಮನಾಥಚರಿತೆ** ಸಾಂಗತ್ಯ

೧೧.೫″ × ೨.೧″ ಗಂಗ ಸು. ೧೬೫೦

೧–೧೮೫ ಪತ್ರ ೮ ಪಂಕ್ತಿ ೪೫ ಅಕ್ಷರ

ಆದಿ : ....ಂವತ್ಸರದ ಚಯಿತ್ರ ಶುದಾ ೧೩ ಯು ಆದಿತ್ಯವಾರ ಹಸ್ತ ನಕ್ಷತ್ರ ದಲೂ ಆರಂಭಿಸಿ ಬರವಾ ಕೊಮಾರ ರಾಮನ ಚರಿತ್ರೆಗೆ ನಿರ್ವಿಘ್ನಮಸ್ತು x x x ಗಂಗೂಕ್ರುತಿ ಬೊಲ್ಲನ ತಂದಂದು ಮೊದಲಾಗಿ ಜೋಡು ಪ್ರತಿ ನೋಡಿ ಪ್ರತಿಯಿದ್ದ ಹಾಗೆ

ಪದನೂ ॥ ಶ್ರೀ ಗುರುಲಿಂಗಾವ ಬಲಗೊಂಡು ಮನದಲ್ಲಿ
ನಾಗಾ ಕಂಕಣನ ವಾಲಗಕ್ಕೆ
ಬಾಗೂವೆ ಶಿವಗಣಸ್ತ್ರೋಮದಂಗ್ರಿಗೆ ನಾನು
ರಾಮಾನ ಯಸಗುವೆನೂ ॥ ೧ ॥

x x x x

ಕಂನಾಡ ಕವಿಜಾಣ ರಂನಾನು ಪದಜಾತಿ
ಯಿಂನು ಮುಂನಿನ ಪಂಚಾಸ್ಯಾ
ಚಂನ ಭುಜಂಗಾನ ಬ್ರುಂತ್ಯ ಗಂಗಾದರ ಸಂ
ಪಂನ ಹೇಳಿದನೀ ಕ್ರುತಿಯಾ ॥ ೧೦ ॥

ಅಂತ್ಯ : ರಾಮಾನಾ ಚೆರಿತೆಯಾ ಕೇಳಿದಾ ಜನರಿಗೆ
ಭೂಮಿದಾನವನಿತ್ತಾ ಫಲವೂ
ಪ್ರೇಮಾದಿ ಸಕಲ ಆಯಿಶ್ವರ್ಯಾವು ದೊರಕೊಂಬೂ
ದಾ ಮಾಹಾದೇವ ರಕ್ಷಿಪನೂ ॥ ೧೩೦ ॥
ಅಂತೂ ಸಂಧಿ ೧ಂಕ್ಕಂ ಪದನೂ ಸಾ ೨....ಗಳ ಮಹಾಶ್ರೀ.

ವಿಷಯ : ಕುಮಾರರಾಮನ ಕಥೆ.

ವಿಶೇಷ : ಕೊನೆಯಲ್ಲಿ 'ಶೋಭಕ್ರುತು ಸಂವತ್ಸರದ ವೈಶಾಖ ೧೨ಯೂ ಯಿಂದುವಾರ ದಿವದಲು ತಾಸು ೨ ಯರಡಕ್ಕೆ ಯಿಾ ಕೊಮಾರರಾಮನ ಚರಿತ್ರೆಯು x x' ಎಂದಿದೆ. ಪ್ರತಿಯು ಶಿಥಿಲ. ೧೫೩ನೆಯ ಪತ್ರ ಅರ್ಧ ಮುರಿದುಹೋಗಿದೆ. ೧೭೬ನೆಯ ಕ್ರಮಸಂಖ್ಯೆಯ ಎರಡು ಪತ್ರಗಳಿವೆ.

1449

ಕೆ.ಬಿ. ೯೧/೧	**ರಾಮನಾಥಶತಕ**	ವೃತ್ತ
೭.೮" × ૯.૩"	?	?
೧–೩೫ ಪುಟ	೧೨ ಪಂಕ್ತಿ	೨೪ ಅಕ್ಷರ

ಆದಿ : ರಾಮನಾಥ ಶತಕ ಪ್ರಾರಂಭಃ

ಶ್ರೀಮನ್ನಿತ್ಯಂ ನಿರಾಳಂ ನಿರುಪಮನಚಲಂ ನಿರ್ಭಯಂ ನಿರ್ಮ್ಮಲಂ ನಿಃ
ಕಾಮಂ ನಿರ್ಮ್ಮಾಯನಾದ್ಯಂ ನಿಜನ ಜಡನನಾಥಂ ನಿಜಾಭಾಸನೀಶಂ
ವ್ಯೋಮಾತೀತಂ ನಿರಂಶಂ ನಿರವಯವನಜಂ ನಿರ್ಗ್ಗುಣಂ ನಿಃಕಳಂ ನಿ
ಸ್ಸೀಮಂ ನಿರ್ಲೇಪನಾದ್ಯಂತರಹಿತ ಗುರು ನೀಂ ಶಾಂತರಾಮೇಶಲಿಂಗಾ ॥ ೧ ॥

ಅಂತ್ಯ : ಸದಮುಲ ತತ್ವಸಾರವಿದು ಷಟ್ಸ್ಥಲದಧ್ವದ ವಿಸ್ತರೋಕ್ತಿಯಿಂ
ತಿದು ಘನಲಿಂಗ ಸಂಗಿಗಳ ಸದ್ಮವಿದುನ್ನತ ವೀರಶೈವಮಾ
ರ್ಗ್ಗದ ನೆಲೆ ಕೇಳಿದಾಗಮ ಪುರಾಣ ಮಹಾರ್ಗಳ ಸಾಧ್ಯವಿಂ
ತಿದು ಗುರು ಶಾಂತರಾಮನ ಮನೋಹರವೀ ಶತಕಂ ನಿರಂತರಂ ಶ್ರೀ|| ೧೦೧ ||

ವಿಷಯ : ಸ್ತುತಿ (ವೀರಶೈವ).

ವಿಶೇಷ : ಪ್ರತಿ ಪದ್ಯದಲ್ಲೂ 'ಗುರು ಶಾಂತರಾಮ' ಎನ್ನುವ ಅಂಕಿತವಿದೆ. ಈ ಪುಸ್ತಕದಲ್ಲಿ ಪಂಪಾಶತಕ, ಅರ್ಧೇಂದುಮೌಳಿಶತಕ ಎನ್ನುವ ಎರಡು ಶತಕಗಳಿವೆ.

1450

ಕೆ.ಬಿ. ೧೮೩	**ರಾಮಪಟ್ಟಾಭಿಷೇಕ**	ವಾರ್ಧಕಷಟ್ಪದಿ
೮.೫" × ೬.೬"	ಮಹಾಲಕ್ಷ್ಮಿ	?
೩೮ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ರಾಮಯಾಣದೊಳಗಣ ಪಟ್ಟಾಭಿಷೇಕ ಬರೆವುದಕ್ಕೆ ಶ್ರೀ ಶುಭಮಸ್ತು ||
ನಾಂದಿ ಸಂದಿ || ವಾರ್ಧಿಕ್ಯ ಷಟ್ಪದಿ ||
ಶ್ರೀಮದಚಲಾತ್ಮಜಾನನ ಕೈರವಾಬ್ಜಂ ನಿ
ರಾಮಯಂ ದಿವ್ಯಕೇಶಂ ರಾಜಶೇಖರಂ
ಸಾಮಗಾನಪ್ರಿಯಂ ಹರಿಸುತಾಹಿತನಹೀನಾಲಂಕೃತಾಂಗಂ ಶಿವಂ
ಕಾಮ ಮುಖ್ಯಾರಿವರ್ಗ ಧ್ವಂಸಿಭೂತಪತಿ
ಭೀಮ ವಿಕ್ರಮ ಪುಣ್ಯಜನವಂದಿತಂ ಸದಾ
ರಾಮನೊಲಿದೀಗೆಮಗೆ ಕಾಮಿತಾರ್ಥಂಗಳಂ ಮಂಗಳಂ ಗೋತ್ರೇಶ್ವರಂ || ೧ ||

ಅಂತ್ಯ : ಪಡುಗಡಲ್ಲಿಡೆಯೊಳೇಱಿಡೆಯ ಭೃಗೂದ್ವಹಂ
ಪಡೆದನದಱೊಳ್ ಸೈಪಿಗೆಡೆಯಾಗಿ ಕನ್ನಡದ
ನುಡಿವೆಣ್ಗೆ ಭರ್ತೃ ಮಂದಿರಮಾಗಿ ಸುಖಕೆ ಬೀಡಾಗಿ ನಾಡಾಗಿ ಮೆಱೆವಾ
ಉಡುಪ ಪುರಮೆಂಬ ಸುಕ್ಷೇತ್ರನುಂಟಲ್ಲಿ ಚಾ
ವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ ತ
ನ್ನೊಡತಿ ಚೆಂಗಳೆದೇವಿ ಪೇೞೆಂದು ಪೇೞೆ ಪೇಳ್ದಳೀ ಸತ್ಕೃತಿಯನು || ೯೭ ||
ಅಂತ್ತು ಸಂಧಿ ೫ಕ್ಕಂ ಪದಾ ೩೪೭ಕ್ಕಂ ಮಂಗಳಮಹಾ ಶ್ರೀ| ಪಟ್ಟಾಭಿಷೇಕಂ
ಸಮಾಪ್ತಮಾದುದು ||

ವಿಷಯ : ಶ್ರೀ ರಾಮನ ಕಥೆ.

ವಿಶೇಷ : ಶಕಟರೇಫ, ಱಳಗಳ ಬಳಕೆಯಿದೆ.

1451

ಕೆ.ಬಿ. ೨೦೫/೩ ರಾಮಭಕ್ತಿಸಾರ ಹಾಡು, ಷಟ್ಪದಿ

೭.೮" × ೬" ನರಸ ?

೬೩–೬೮ ಪತ್ರ ೨೨ ಪಂಕ್ತಿ ೩೦ ಅಕ್ಷರ

ಆದಿ : ರಾಮಭಕ್ತಿಸಾರ॥

ಶ್ರೀರಮಣ ತವಪದ ಚರಿತ್ರದ ಸಾರಮೆನಗೊಂದಿತ್ತು ಕರುಣದಿ ಆಧರಿಸಿ
ಯಿಾ ಭಕ್ತಿಸಾರದೊಳ್ ನೀ ನೆಲೆಗೊಂಡು ರಕ್ಷಿಸು ನಂಮ್ಮನ ‌ ‌ ರತಾ
॥ ಪಲ್ಲ ॥

ವಾರಿಜಂಭವ ಸುರೇಂದ್ರ ವಂದಿತ ಪಾದಪಾವನವೆಂಭಚಾರ್ಯದೊಳ್
ಘೋರೆನುತ ಗೋಕ್ಷೀರಕರವೋಲ್ ತೋರಿಸೆರಡಕ್ಷರದ ಚರ್ಯಾ ॥ ೦ ॥

x x x x

ಯಿಂದ್ಧ ಭಕ್ತಿಯೊಳ್ ಭಕ್ತಿಸಾರ
ದೊಂದು ಚರಿತವ ವಿರಚಿಸುವೆ ಗೋ
ವಿಂದ ಮಾದವ ವಿಷ್ಣು ರಕ್ಷಿಸು ನಂಮ್ಮನನವರತಾ
ವೇದವಂದಿತ ವಿಶ್ವಮಂಚದ ನಾದ
ಬಿಂದುಖಳಾ ಮನೋಹರ
ಆದಿಮೂಲ ಪ್ರಕೃತಿಮದಪದ ಯೇಶ ಮಲ್ಲೇಶಾ ॥ ೫ ॥

x x x x

ಧರೆಯೊಳ್ ಕರುಪುರಿಯರೆಯ ರಂಗನ
ಸಿರಿಚರಣ ಕಮಲಾಬ್ಜ ಭೃಂಗ ಸು
ನರಸಕವಿ ವಿರಚಿಸುವ
ಹರಿಕಥಾ ಭಕ್ತಿಸಾರವನೂ ॥ ೭ ॥
ರಾಮಚಾರಿತ್ರದಲ್ಲಿ

ಅಂತ್ಯ : ಚಂದ್ರಚರಿತನು ಸತ್ಯಶೀಲನು ಧೀರವಾಯು ಕುಮಾರ
ವರ ವಿಚಾರಿಸಲು ಬರುವದ ನಿರೀಕ್ಷಿದಾತ ರಕ್ಷಿಸು ನಂಮ್ಮನನವರತಾ
॥ ೫೭ ॥

ಬಂದು ರಾಮನ ಚರಣಕಮಲಕೆ ವಂದನೆಯ ವಿರಚಿಸುತ

ವಿಷಯ : ಶ್ರೀರಾಮನ ಕಥೆ.

ವಿಶೇಷ : ಅಸಮಗ್ರ. ಇದೇ ಪುಸ್ತಕದಲ್ಲಿ ಪಾರ್ವತಿ ಕೊರವಂಜಿ ಮತ್ತು ಶಿವಭಕ್ತಿ ಸಾರ ಎಂಬೆರಡು ಗ್ರಂಥಗಳಿವೆ.

1452

ಕೆ.ಬಿ. ೪೨೦/೩ **ರಾಮರಾವಣ ಯುದ್ಧ** ಯಕ್ಷಗಾನ

೭.೮" × ೫.೮" ? ?

೧೫೪–೧೭೪ ಪತ್ರ ೧೯ ಪಂಕ್ತಿ ೧೭ ಅಕ್ಷರ

ಆದಿ : ರಾಮಾಣ್ಯದೊಳಗಣ ರಾಮರಾವಣ ಯುದ್ಧ.

ಕಂದಾ ॥ ಕುಶ ಕುಮಾರನೆ ಕೇಳು ಪೇಳ್ವೆ ಶ್ರೀ ರಾಮನ ಚರಿತ್ರೆಯ ಅಸಮಾಕ್ಷ ಶಿವ ಬಲ್ಲದಿಂನ್ನೂ ಆತನ ಕಟಾಕ್ಷದಿಂದಾ ವುಸುರ‍್ರುವೆ ನಾ ತಿಳಿದಷ್ಟ–ಮುಂದೆ ನಾನು ಚಂನ್ನಾಗಿ ಪೇಳ್ವುದು—ಕರಮುಗಿದಾಕ್ಷಣ–ಮುನಿಪನೆಡೆಗೆ ಬಂದು ಕೇಳುತೀರ್ದನಾಕ್ಷಣದೊಳೂ ॥ ರಾಗ ಸವುರಾಷ್ಟ್ರ॥ ತ್ರಿಹುಡೆ॥ ಕುಶಕುಮಾರನೆ ನೀನು ಬಾರೈ ರಾಮಚರಿತವು ನೀನು ಪೇಳ್ಳೈ–ಭೂಮಿಭಾರವನಿಳುಹಲೋಸುಗ ಬಂದ ಕಾಣ್ಣೇ ॥

ಅಂತ್ಯ : ಮಾತ್ತಾಡಿಶಿದಳಾಗ । ತಂನ್ನ ನಿಜಪತ್ತಿಯಾ । ವೀರನುಡಿಯ್ಯೆ ವಿಭುಧಸಂಹಾರ್ರ। ನುಡಿಯ್ಯೆ ಜಯ ವಧು ಮಣಿಹಾರ್ರಾ। ಧೀರನುಡಿಯ್ಯೆ ಶ್ರೀರಮಣನುಡಿಯೆಂದು ಮುದ್ದಾಡಿ ಪತ್ತಿಯಾ। ಕಡೆಗಂಣಲೆಂನ್ನ ನೋಡದೆ ಮಾತನಾಡೆನುಡಿಸು ವೀಣೆಯ ನೀನ್ನು । ಪೂರ್ವಶಿಯ ನಾಟ್ಯವನ್ನೂ । ಯಡ ಬಲದಿ ಹೊಗಳುತ್ತಿಹ ಪಾಟಕರಿಗೆ ಕೊಡಿಸು ವೀಳ್ಯವನ್ನೂ । ಆವರ್ಗೆ ಬದಲ

ವಿಷಯ : ರಾಮರಾವಣ ಯುದ್ಧ.

ವಿಶೇಷ : ಅಸಮಗ್ರಕೃತಿ. ಈ ಗ್ರಂಥ ಆದಮೇಲೆ ಮೂರು ಖಾಲಿ ಹಾಳೆಗಳಿವೆ. ಈ ಪುಸ್ತಕದಲ್ಲಿ ಶಿವನಾಟಕ, ಮಾರ್ಕಂಡೇಯ ಚರಿತೆ, ತತ್ತ್ವ ಪದಗಳಿವೆ.

1453

ಕೆ.ಎ. ೩೧೬ **ರಾಮವಿಜಯ ಕಾವ್ಯ** ಸಾಂಗತ್ಯ

೧೩.೨" × ೮.೫" ? ಮಿತ್ರಹೇವಪ್ಪ ೧೭ನೆಯ ಶತಕ

೨೦೦ ಪುಟ ೨೧ ಪಂಕ್ತಿ ೨೨ ಅಕ್ಷರ

ಆದಿ : ರಾಮವಿಜಯ ಕಾವ್ಯ ॥ ನರಸಿಂಹಪುರದ ಬಸ್ತಿಯ ಪದ್ಮಾವತಿಯಮ್ಮನೆ ಶರಣು । ರಾಮವಿಜಯವ ಬರೆವುದಕ್ಕೆ ಶುಭಮಸ್ತು ಪದುಮ್ಮೆಯನ ಬರವು ।

....

....................ಮದಹರನಾ

ಶ್ರೀ ಪಂಚ ಕಲ್ಯಾಣಯುತ ಜಿನರಾಜನ

ಶ್ರೀ ಪಾದವೇ ಶರಣೆನಗೆ ॥ ೧ ॥

ನಾಗಭೂಷಣ ನರ ಸುರವಂದಿತ ಭವ
ಸಾಗರ ವಿ...............
....................ಯ ನೀ
ನಾಗು ಶಂಕರ ಶರಣೆನಗೆ || ೨ ||

x x x x

ವರ ಕರ್ಣಾಟ ಸಕ್ಕಜವನರಿದು ತಾ
ನೊರೆದು ಕನ್ನಡ ಕಾವ್ಯವನು
ಉರುಕೀರ್ತಿ ಕಾಂತೆಯ ಬೆನ್ನ ಬಿಡದೆಯಾ
ಚೆರಿಪ ಪಂಪನ ಸ್ತುತಿಸುವೆನು || ೩೮ ||
ಸುಟ್ಟು ಕಾದಂಬರಿಯನು ಲೀಲಾವತಿ
ಗಿಟ್ಟು ಕಪ್ಪನು ಲೋಕವರಿಯೆ
ದಿಟ್ಟ ವಾದಿಯ ಗೆಲ್ದ ನೇಮಿಚಂದ್ರನ ಮನ
ಮುಟ್ಟಿ ನೆನೆವೆ ನನ್ನಿಯೊಳು || ೩೯ ||
ಚಂದದ ಮೃದು ಬಂಧದ ವೈಸಿರಿಯೊ ತ
ನೊಂದಿದ ಸವಿ ನುಡಿಯಿಂದಾಗಿ
ಅಂದವಡೆದ ಕಾವ್ಯವನುಸುರುವ ನಾಗ
ಚಂದಿರನನು ಪಾಡುವೆನು || ೪೦ ||
ಗಜಗುಣವರ್ಮನ ಶಾಂತಿವರ್ಮನ
ವಿಜಯುನ ಪೊನ್ನನಗ್ಗಳನಾ
ಸುಜನೋತ್ತಂಸ ರನ್ನನ ಮಧುರನ ಮನ
ಸಿಜನಿವರ ಸ್ತುತಿಸುವೆನು || ೪೧ ||

x x x x

(೨೫ನೆಯ ಪುಟ)
ಕೋವಿದರುಗಳ ಹೃತ್ಕಮಲ ಭಾಸ್ಕರ ವಾ
ಗ್ದೇವಿಯ ಮುಖ ಮಣಿ ಮುಕುರಾ
ಭಾವಕರುಗಳ ಸಂತಸ ಸಾಗರ ಮಿತ್ರ
ದೇವಪ್ಪನೊರೆದ ಸತ್ಕಾವ್ಯಾ || ೧೧೩ ||

ಅಂತ್ಯ : ಹೆಣ್ಣೆ ನೀ ನೋಡು ತಾನೋಡು ಕಪಿಯ ವೈಯ
ಬಣ್ಣವನಿದರಾಟವನು
ಕಣ್ಣಲಿ ನೋಡುತಿರದು ಪೊಳಲ್ದನು ಮಸಿ
ಮಣ್ಣು ಮಾಡಿದುದೀ ಪಾಪಿ || ೮೫ ||
ಎಲ್ಲಿ ಕಲಿಯಿತೋ ಯಿಾ ವಿದ್ಯೆ ಯಿಾ ಯಾಟವ
ಯೆಲ್ಲಿಯಭ್ಯಾಸ ಮಾಡಿದುದೊ ||
ಎಲ್ಲಿಂದ ಬಂದಿತೊ ಯೆ...........

ವಿಷಯ : ಜೈನ ರಾಮಾಯಣದ ಕಥೆ.

ವಿಶೇಷ : ಅಸಮಗ್ರಪ್ರತಿ. ಅತ್ಯಂತ ಅರ್ವಾಚೀನ ಪ್ರತಿ. ಪ್ರತಿಕಾರರು ಶ್ರೀ ಕೆ. ರಾಘವಾಚಾರ್ಯರು.

1454

ಕೆ.ಎ. ೧೦೨	**ರಾಮಾಯಣ**	ಯಕ್ಷಗಾನ
೧೩" × ೮"	ಲಿಂಗರಾಜ	೧೮೫೦
೧–೨೮೩ ಪತ್ರ	೨೧ ಪಂಕ್ತಿ	-೨೦ ಅಕ್ಷರ

ಆದಿ : ರಾಮಾಯಣ ಸಂಪೂರ್ಣವಾಗಿ ಬರಿಯುವದಕ್ಕೆ ಮಂಗಳಮಹಾ ಶ್ರೀ॥

ಪುತ್ರಕಾಮೇಷ್ಟಿ॥ ನಾಂದಿ॥ ಕಂದ॥
ಶ್ರೀಮತ್ತಾಮರಸೋತ್ಪಲಶ್ವಸನ ವೈತ್ರೀಪಾತ್ರನೇತ್ರತ್ರಯಂ
ಭೀಮ ಭ್ರುಕುಟಿ ಭಂಗಲೇಶಭಟ ಕಲ್ಪಾನಲ್ಪನಾಕಾಲಯ
ವಾಮಾಂಕಾಸ್ಥಿತ ಶೈಲರಾಜತನಯಾ ಸಲ್ಲಾಪ ಲೋಲಾಶಯಂ
ಪ್ರೇಮಂಬೆತ್ತೆಮಗೀಗೆ ಭದ್ರತತಿಯಂ ಶ್ರೀಭದ್ರಕಾಳೀಪ್ರಿಯಂ ॥ ೧ ॥

x x x x

ಕಂದಪದ್ಯ ॥ ವರವಾಲ್ಮೀಕಿ ತಪೋಧನ
ವಿರಚಿತ ರಾಮಾಯಣಾಬ್ಧಿಃಮಥನೋದ್ಗತ ಬಂ
ಧುರ ರಾಮಕಥಾಮೃತವಂ
ನೊರೆವೆನು ವಿಭುದರ್ಗೆ ಯಕ್ಷಗಾನದೊಳೆಲೆಯಿಂ ॥ ೧೮ ॥

ಅಂತ್ಯ : ವಾರ್ಧಕ॥ ಘನದಿ ವೀಣೆಯೊಳು ರಾಮಾಯಣವ ಬಾಜಿಸುತ
ಲನುವಿಂದ ಪಾಡಿಸಲ್ ತನುಜರಂ ತಕ್ಕೈಸಿ
ವನಿತೆಯಂ ಸಂತೈಸಿ ವಾಲ್ಮೀಕಿಯಂನು ಮುನಿಸುತಲಾಶ್ರಮಕೆ ಕಳುಹಿ
ಮನುಕುಲಂ ತನುಜರಂ ಬೆರೆದು ಸತಿಸಹಿತ ರಥ
ವನು ಹತ್ತಿ ನಗರಮಂ ಪೊಕ್ಕು ಸುಖದಿಂದಿರ್ದ
ನೆನುತ ವೈಶಂಪಾಯನನು ಕುಶಲವರ ಕಥೆಯ ಜನಮೇಜಯಂಗುಸುರಿದಂ ॥ ೪೪೦ ॥

x x x x

ಮಂಗಳ ಪುಂಗವ ತುಂಗ ತುರಂಗ ಮ
ಲಿಂಗ ನೃಪಾರ್ಚಿತ ವರಮಹಲಿಂಗ ॥ ೪೪೩ ॥
ಕಂದ ॥ ತುರಗ ರಸ ರಂದ್ರ ಸಾಗರ
ಪರಿಮಿತ ಕಲ್ಯಾಬ್ದಮರರೆ ಪಿಂದಾಗುತಿರಲ್

ವಿರಚಿಸಿದಂ ಲಿಂಗನೃಪಂ
ಸರಸೋಕ್ತಿಗಳಿಂದಂ ಕುಶಲ ಕುಶಲವ ಕಥೆಯಂ || ೪೪೩ ||
ಶ್ರೀ ||

ವಿಷಯ : ಸಂಪೂರ್ಣ ರಾಮಾಯಣದ ಕಥೆ.

ವಿಶೇಷ : ಅಕ್ಷರಗಳು ದಪ್ಪವಾಗಿಯೂ, ಸುಂದರವಾಗಿಯೂ ಇವೆ. ಆರಂಭ ಮತ್ತು ಅಂತ್ಯದ ಕೆಲವು ಪತ್ರಗಳು ಶಿಥಿಲವಾಗಿವೆ. ಕೃತಿಯನ್ನು ರಚಿಸಿದ ಕಾಲ ಗತಕಲಿ ೪೮೭೭. ಗ್ರಂಥದ ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ.

1455

ಕೆ.ಬಿ. ೮೦	**ರಾಮಾಯಣ**	ನಾಟಕ
೮" × ೬.೫"	ಅಯ್ಯಾಶಾಸ್ತ್ರಿ	೧೯ನೆಯ ಶತಕ
೧–೪೯ ಪತ್ರ	೧೮ ಪಂಕ್ತಿ	೨೦ ಅಕ್ಷರ

ಆದಿ : ವೃತ್ತಂ || ಶ್ರೀಮತ್ಕ್ಷೀರಪಯೋಧಿಮಧ್ಯ ವಿಲಸನ್ನಾಗೇಂದ್ರಶಯ್ಯಾಶಯಂ
ಭೂಮಿ ಶ್ರೀರಮಣೀಮಣೀ ಕರತಲಾಂಭೋಜಾಯತಾಂಘ್ರಿದ್ವಯಂ
ಶ್ಯಾಮಾಂಬೋಧ ಸಮುಲ್ಲಸನ್ನಿಜ ತನುಚ್ಛಾಯಂ ಕೃಪಾಸಂಶ್ರಯಂ
ಧಾಮಂ ಪಾಲಿಕೆ ಚಾಮಭೂಮಿಪತಿಯಂ ಶ್ರೀವಾಸುದೇವಾಹ್ವಯಂ ||

x x x x

ಕಂ || ಶ್ರೀ ರಾಮಾಯಣ ಕಥೆಯಂ
ಸಾರಜ್ಞ ಮೆಚ್ಚುವಂತೆ ಕನ್ನಡ ನುಡಿಯಿಂ
ದೀ ರಸಿಕ ಸಭಾ ಮಧ್ಯದೆ
ಭೂರಿ ಕುತೋಹಲದೊಳೀಗಳಾನಾಡಿಸುವೆಂ ||

ಅಂತ್ಯ : (ಋಷಿಗಳ ಪ್ರವೇಶ)
ರಾಮ—ಪೂಜ್ಯರಿಗೆ ವಂದಿಸುವೆನು.
ಋಷಿಗಳು—ನಿನಗೆ ಮಂಗಳವಾಗಲಿ. ರಾಮಚಂದ್ರನೆ ನೀನು ಖರಾದಿಗಳನ್ನು ಸಂಹಾರಮಾಡಿದ್ದರಿಂದ ನಮ್ಮ ಆಶ್ರಮಗಳೆಲ್ಲಾ ನಿರ್ಬಾಧಕಗಳಾದುವು. ಇದರಿಂದ ನಮಗೆ ಬಹಳ ಸಂತೋಷ ಉಂಟಾಯಿತು.
ರಾಮ— ಇದೆಲ್ಲಾ ತಮ್ಮ ಅನುಗ್ರಹ ಪ್ರಭಾವವು.
(ಎಲ್ಲರೂ ಹೋಗುವರು)
ಪಂಚಮಾಂಕಂ ಸಮಾಪ್ತಂ.

ವಿಷಯ : ವಿಶ್ವಾಮಿತ್ರನ ಯಾಗವನ್ನು ಶ್ರೀರಾಮನು ಸಂರಕ್ಷಿಸುವ ಕಥಾಭಾಗದಿಂದ ಖರದೂಷಣರ ಸಂಹಾರದವರೆಗಿನ ಶ್ರೀರಾಮಾಯಣದ ಕಥೆ.

ವಿಶೇಷ : ಸ್ಫುಟಾಕ್ಷರ. ಈ ನಾಟಕದಲ್ಲಿ ಐದು ಅಂಕಗಳಿವೆ. ಗ್ರಂಥದ ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ.

1456

ಕೆ.ಬಿ. ೩೬೦/೧ **ರಾಮಾಯಣಾಮೃತ** ಯಕ್ಷಗಾನ

೮.೭" × ೫.೫" ? ?

೧–೬೬ ಪತ್ರ ೧೮ ಪಂಕ್ತಿ ೨೧ ಅಕ್ಷರ

ಆದಿ : ವೃತ್ತಾ ॥ ಶ್ರೀರಾಮಂ ದಿವಿಜವುನ ವಂದಿತ ಫದಂ ಶ್ರೀರಾಮ ನೋಲ್ಲಾಸಕಂ
ಕಾರುಣ್ಯಾಂಬುಧಿ ಭಕ್ತವತ್ಸಲಹರಿಂ ಕಂಸಲ್ಯ ಗರ್ಭೋದ್ಭವಂ
ಮಾರೀಚಾದಿ ಸಮಸ್ತ ದೈತ್ಯಮತನಂ ಮಹಾತ್ಪ್ರುತಾಪಾನ್ವಿತಂ
ವೀರಂ ಪಾವನಪುಂಣ್ಯನಾಮಚರಿತಂ ವಂದೇ ಸದಾ ರಾಗವಂ ॥ ೧ ॥

ಅಂತ್ಯ : ವಾರ್ದಿಕ್ಯ ॥ ಅರಸುಮಕ್ಕಳು ಕೇಳಿ ಆಗ ಚೂಡಾಮಣಿಯ
ಮರುತಸುತ ರಾಮಚಂದ್ರನ ಕೈಯ್ಯ ಕೊಟ್ಟಲ್ಲಿ
ಭರತವಾಯಿತುಸಂದಿಯಂದು ವಾಲ್ಮೀಕಿಮುನಿವರನುಸೂರ್ದಂ ಪುಂಣ್ಯಕಥೆಯಾ
ಅರಿತು ಪೇಳುವ ಕೇಳ್ವ ಪುಣ್ಯವಂತರಿಗೆ
ದುರಿತನಳ ಪರಿಹರಿಸಿ ಸಂತೋಷಥಲಿ ಕಂಣ್ವ
ಪುರದೊಡೆಯ ಶ್ರೀಕೃಷ್ಣ ಸಕಲಭಾಗ್ಯವನಿತ್ತು ಪರವನನುಗಾಲ ಬಿಡದೆ ॥ ೪ ॥

ವಿಷಯ : ಹನುಮಂತನು ಸಮುದ್ರವನ್ನು ಲಂಘಿಸಿ ಸೀತೆಯನ್ನು ಹುಡುಕಿ, ಗುರುತಿಗಾಗಿ ಚೂಡಾಮಣಿಯನ್ನು ಪಡೆದುಕೊಂಡು ಶ್ರೀರಾಮನಲ್ಲಿಗೆ ಮರಳಿ ಬಂದುದೇ ಕಥಾವಸ್ತು.

ವಿಶೇಷ : ಪ್ರತಿಯು ಸುಮಾರಾಗಿದೆ. ಇದರೊಂದಿಗೆ ' ಅಭಿಮನ್ಯು ಕಾಳಗ ' ಎಂಬ ಇನ್ನೊಂದು ಗ್ರಂಥವಿದೆ.

1457

ಕೆ.ಬಿ. ೩೫೩/೮ **ರಾವಣನ ಕಥೆ** ಯಕ್ಷಗಾನ

೯" × ೬.೫" ? ?

೧೬೧–೧೮೦ ಪತ್ರ ೨೦ ಪಂಕ್ತಿ ೨೨ ಅಕ್ಷರ

ಆದಿ : ರಾವಣನ ಕಥೆ ಬರೆಯುವದಕ್ಕೆ ಶುಭಮಸ್ತು ॥
ಶ್ಲೋ ॥ ಲವನೆ ಕೇಳಾ ದಿನದ ನಿಶಿಯೊಳು
ರವಿಕುಲಾಂತರಂ ನೊಯ್ದು........
ಪವನಸುತ್ತ ಸಂಹಾರಿಶಿ ರಾತ್ರಿಯೊಳ್ ತಂದಾ....ಪರನ್ನು

ಭುವನ ಮೆಚ್ಚಳ ತೆರದೀ
ಕಪಿಗಳನಿವಹಾರ್ಥಲೀ
ತಂದಿಪತಾ .. ... ಯಾ
ತಪಕರಲಿ ಚರರಿಂದಾ ಲಾಲಿಶೀ
ಮರುಳ ಸಿಥ ಶಕಾಟಾ ‖ ೧ ‖ ರಾಗಾ ‖ ತಾಪಿ । ಅಷ್ಠತಾಳಾ ‖

ಅಂತ್ಯ : ಸಾಕೇತಪೂರ ಪಾವಾನೆ ಮಾಡುತ್ತ ಪಾಕಾಶಾಸನನಿಗೇನೂರ್ಮಡಿ.... ಸೂತ್ತ । ಯೇಕ ಚಕ್ರಾಧಿಪತಿಯೆಂದೂ ಪತಿಯೆಂದೂ । ಸೂ ... ಯರು ಹರುಷದಿ । ಅತಿಶಯಧರಾತ್ರಿಯಾ ಬೆಳಗಾಗಿ‖ ಶೋಭಾನವೇ ‖ ಅಂತು ಸಂಧಿ ೧೧ಕಂ ಪದನು ಸಂಪೂರ್ನ ಮಂಗಳಮಹಾ ಶ್ರೀ ‖

ವಿಷಯ : ರಾವಣನ ಕಥೆ.

ವಿಶೇಷ : ಶಿಥಿಲ ಮತ್ತು ಅಶುದ್ಧ ಪ್ರತಿ. ಹುಳು ಹೊಡೆದಿದೆ. ಇದೇ ಪುಸ್ತಕದಲ್ಲಿ ರಾವಣೋದ್ಭವ ಪ್ರಸಂಗ, ಪುತ್ರಕಾಮೇಷ್ಟಿ, ಚಿಕ್ಕ ಪಟ್ಟಾಭಿಷೇಕ, ವಾಲಿ ಸುಗ್ರೀವರ ಕಾಳಗ, ಚೂಡಾಮಣಿ ಪ್ರಸಂಗ, ಸೇತುಬಂಧನ ಪ್ರಸಂಗ, ಅಂಗದ ಸಂಧಾನ, ವೆಂಕಟೇಶಶತಕ ಎಂಬ ಕೃತಿಗಳಿವೆ.

1458

ಕೆ.ಬಿ. ೧೮೪	**ರಾವಣನ ದಿಗ್ವಿಜಯ**	ಯಕ್ಷಗಾನ
೭.೬" × ೬.೪"	ಗೇರುಸೊಪ್ಪೆ ಶಾಂತಯ್ಯ	೧೮೩೦
೭೨ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ರಾವಣನ ದಿಗ್ವಿಜಯ ಬರೆಯುವರೆ ಶುಭಮಸ್ತು‖
ಶ್ರೀಮದ್ರಾಜಾದಿರಾಜಂ ದಿನಕರಂ ಕುಲಜಂ ಶಾಂತದಾಂತಂ ಪ್ರಸನ್ನಂ
ಸೋಮಾರ್ಕಾಗ್ನಿ ಸ್ವತೇಜಂ ಸರಶಿಜನಯನಂ ಸತ್ಯಧರ್ಮ ಸುಪಾಲಂ
ಶಾಮಬ್ಧಾಂಗಪ್ರಶೋಭಂ ಸುರನರವಿನುತಂ ಶುದ್ವ ಜಾಂಬುನದಾಂಬಂ
ರಾಮಂ ಸೌಮಿತ್ರಿ ಭ್ರಾತ್ರಂ ಧನುಶರಜ್ವಲಿತಂ ರಾಕ್ಷಸಾರಿಂ ನಮಾಮಿ ‖ ೧ ‖
ರಾಗ ‖ ನಾಟಿ ‖ ಝಂಪೆ ‖
ಜಯತು ಮೈಥಿಲಿಪ್ರಿಯ ಜಯತು ಮೋಹನಕಾಯ
ಜಯತು ಜಗದುದ್ಧಾರ ಜಯತು ಪರವೀರ ‖ ಪ್ಲ ‖
x x x x
ಪುತ್ರರೋತ್ತರಖಾಂಡ ರಾಮಾಯಣದೊಳು
ಪತ್ತು ತಲೆಯುವನ ಮಗನೊಲಿದು ಸಮರದೊಳೂ ‖ ೩ ‖

ಶಕ್ರನಂ ಶರೆವಿಡಿದು ಜೈಸಿ ಸ್ವರ್ಗವನು
ವಿಕ್ರಮದೊಳಿಂದ್ರಜಿತುವೆಂಬ ನಾಮವನೂ
ಪಡದನೆಂಬೀ ಘನಚರಿತ್ರವನು ಭರದಿ
ಪೊಡವಿಯೊಳ್ ವರ್ನಿಸುವೆ ಜನರರಿವ ತೆರದಿ || ೫ ||

ಅಂತ್ಯ : ಭಾಮಿನಿ || ಯಿಾ ಮಹಾ ಸತ್ಕಥನವನು ರಚಿ
ಸೀ ಮಹಿಯ ಮೇಲ್ ಮೆರೆಸುದೆಂದನು
ಕಾಮರುತ್ಸುತನಮಿತ ಚರಣನು ಕೃಪೆಯೊಳಿಂದೆನಗೆ
ನೇಮವಿತ್ತುದರಿಂದಲುಸುರ್ದೆನು
ಪ್ರೇಮದಿಂದಾಲಿಸಿದ ಜನರಿಗೆ
ಕ್ಷೇಮಪುರ ವೇಂಕಟೇಶನು ಕರುಣದಿ ಪಾಲಿಸುವನೊಲಿದು || ೧ ||
ಅಂತು ರಾವಣದಿಗ್ವಿಜೆಯ ಸಂಪೂರ್ನ ಮಂಗಳಮಹಾ ಶ್ರೀ.

ವಿಷಯ : ಉತ್ತರರಾಮಾಯಣದ ಕಥೆ.

ವಿಶೇಷ : ಮೋಡಿ ಅಕ್ಷರ.

1459

ಕೆ.ಎ. ೨೬೦/೨ **ರಾವಣ ಮಂಡೋದರೀ ವಾದ** ಪದ್ಯ

೧೨.೮" × ೮" ? ?

೪-೧೭ ಪತ್ರ ೨೫ ಪಂಕ್ತಿ ೧೮ ಅಕ್ಷರ

ಆದಿ : ರಾವಣ ಮಂಡೋದರಿವಾದ ||
ಚಿತ್ತಲಾಂಕೃತಿ ಪದ್ಮಮತೆಯಿಪ್ಪಯಲಿಂಗ ಸು
ವಿಸ್ತರದಿ ಬೆಳಗುತಿಹ ಮೂಲಾಧಾರ ಪ್ರಕಾಶ
ದಲ್ಲಿ ತೋರುವ ಲಿಂಗ ಅಂಗದ ಸಂಗವನು
ನಿನಗುಸುರುವೆನು ಕೇಳೆಂದನಾ ಮುನಿಪಾ || ಪದನೂ ||
ನಿಜಗುಣಾರ್ಯನ ವಚನದಲಿ ನಿಜವೈದುಜನ ಸೇರಿ
ಭುಜಗ ಭೂಷಣವೇರಿ ಮಣಿಪುರ ಹಾರಿ
ಸುಜನರನು ಕೈಶರೆಯ ಪಿಡಿದೆತ್ತಿನಿದುರೆಯುಂಬುವ
ಸುಜನಳನು ಹೊಡೆದಟ್ಟಿ ಸುಖನಿದುರೆಯುಂಬುವ ಫಲಗುಣಾಳ ಮೆಟ್ಟಿಸುವೆ
ಕೇಳೆಂದಾ || ೧ ||

ಅಂತ್ಯ : ರಾಮರಾವಣ ಮುಷ್ಟಿಯುದ್ಧವು ಯಿಾ ಪರಿಯ
ಸಮರಂಗವನು ಗೈದರು ಲೋಕದಲಿ ನರರು ವಿಪ್ರರು
ಸುರರು ಬದ್ಧರು ಸೇವ್ಯರುದ್ದರು ಭಾಗವತೋತ್ತುಮರು ಸಾ
ಗರವ ಗೆಲುವ ಬಾಲಯೋಗಭ್ಯಾಸವಿದೆ ಸಾ

ದನೆಯೆಂದು ನುಡಿದನು ನಿಜಗುಣಾರ್ಯನ ವಚನ ಅಮೃತದೀ ॥ ೪೯ ॥
ಅಂತು ಸಂಧಿ ೩ಕಂ ಪದನು ಮಂಗಳಮಹಾ ಶ್ರೀ ॥

ವಿಷಯ : ಯೋಗ ವಿಚಾರ.

ವಿಶೇಷ : ಅಸಮಗ್ರ ಪ್ರತಿ. ೧-೩ ಪತ್ರಗಳಲ್ಲಿ ಮರಾಠಿ ಹಾಡು ಮತ್ತು ಸಂಸ್ಕೃತ ಶ್ಲೋಕಗಳಿವೆ. ಚಾಟು ಗ್ರಂಥಗಳು (ಸಂ), ಛಾಯಾಪುರುಷನ ಲಕ್ಷಣ, ಆತ್ಮೈಕ್ಯ ಬೋಧೆ (ತೆ), ಶತಕತ್ರಯ (ಸಂ), ಪ್ರಸ್ತಾಪದ ಗ್ರಂಥಗಳು (ಸಂ) ಎಂಬೀ ಕೃತಿಗಳು ಈ ಪುಸ್ತಕದಲ್ಲಿವೆ. ಇದನ್ನು ಕೆ.ಬಿ. ೩೪೦ನೆಯ ನಂಬರಿನ ಪ್ರತಿಯನ್ನು ನೋಡಿ ಬರೆದಿರುವಂತೆ ತಿಳಿದು ಬರುತ್ತದೆ.

1460

ಕೆ.ಬಿ. ೩೪೦ ೨	**ರಾವಣ ಮಂಡೋದರೀ ವಾದ**	ಪದ್ಯ
೯.೫" × ೭.೫"	?	?
೧-೨೦ ಪತ್ರ	೨೦ ಪಂಕ್ತಿ	೧೮ ಅಕ್ಷರ

ಆದಿ : ರಾವಣ ಮಂಡೋಧರೀ ವಾದಾ ॥
ಚಿತ್ರಲಾಂಕೃತಿ ಪದ್ಮ ಮತ್ತೆ ಯಿಪ್ಪಯಲಿಂಗ ಸು
ವಿಸ್ತರದಿ ಬೆಳಗುತಿಹ ಮೂಲಾಧಾರ ಪ್ರಕಾಶ
ದಲ್ಲಿ ತೋರುವ ಲಿಂಗ ಅಂಗದ ಸಂಗವನು
ನಿನಗುಸುರುವೆನು ಕೇಳೆಂದನಾ ಮುನಿಪಾ ॥ ಪದನೂ ॥
ನಿಜಗುಣಾರ್ಯನ ವಚನದಲಿ ನಿಜವೈದುಜನ ಸೇರಿ
ಭುಜಗಭೂಷಣವೇರಿ ಮಣಿಪುರಹಾರಿ
ಸುಜನರನು ಕೈಶರೆಯ ಪಿಡಿದೆತ್ತಿ ನಿದುರೆಯೆಂಬುವ
ಸುಜನಳನು ಹೊಡದಟ್ಟಿ ಸುಖನಿದುರೆಯುಂಬುವ ಫಲುಗುಣಳ ಮುಟ್ಟಿಸುವೆ
ಕೇಳೆಂದಾ ॥ ೧ ॥

ಅಂತ್ಯ : ರಾಮರಾವಣ ಮುಷ್ಟಿಯುದ್ಧವು ಯಿಾಪರಿಯ
ಸಮರಂಗವನು ಗೈದರು ಲೋಕದಲಿ ನರರು ವಿಪ್ರರು
ಸುರರು ಬದ್ಧರು ಸೇವ್ಯರುದ್ಧರು ಭಾಗವತೋತ್ತಮರು ಸಾ
ಗರವ ಗೆಲುವ ಬಾಲಯೋಗಾಭ್ಯಾಸನಿದೆ ಸಾದನೆಯುಂದ್ದು ನುಡಿದನು
ನಿಜಗುಣಾರ್ಯವಚನ ಅಮೃತದಿ ॥ ೪೯ ॥
ಅಂತು ಸಂಧಿ ೩ಕಂ ಪದನು ಮಂಗಳಮಹಾ ಶ್ರೀ.

ವಿಷಯ : ಯೋಗವಿಚಾರ.

ವಿಶೇಷ : ಈ ಕೃತಿಗೆ ನಿಜಗುಣಾರ್ಯನ ವಚನಾಮೃತವೇ ಮೂಲ ಎಂದು ಗ್ರಂಥದಿಂದ ತಿಳಿದುಬರುತ್ತದೆ. ಅಸಮಗ್ರ ಪ್ರತಿ. ಇದಲ್ಲದೆ ಛಾಯಾಪುರುಷ ಲಕ್ಷಣ,

ಆತ್ಮೈಕ್ಯಬೋಧೆ(ತೆ), ಶತಕತ್ರಯ (ಸಂ), ಪ್ರಸ್ತಾಪದ ಗ್ರಂಥಗಳು (ಸಂ) ಈ ಕೃತಿಗಳೂ ಇವೆ. ೧-೭ ಪತ್ರಗಳಲ್ಲಿ ಮರಾಠಿ ಹಾಡು ಮತ್ತು ಸಂಸ್ಕೃತ ಶ್ಲೋಕಗಳಿವೆ.

1461

ಕೆ.ಬಿ. ೩೭೮ **ರಾವಣ ಮಂಡೋದರೀ ವಾದ** ಪದ್ಯ

೭.೭" × ೫.೫" ? ?

೨೩೯-೨೪೫ ಪತ್ರ ೧೯ ಪಂಕ್ತಿ ೧೭ ಅಕ್ಷರ

ಆದಿ : ರಾವಣ ಮಂಡೋದರಿ ವಾದ

ಚಿತ್ತಲಾಂಕೃತಿ ಪದ್ಮ ಮತ್ತೆಯಿಪ್ಪಯ ಲಿಂಗ ಸು
ವಿಸ್ತರದಿ ಬೆಳಗುತಿಹ ಮೂಲಾಧಾರ ಪ್ರಕಾಶ
ದಲಿ ತೋರುವ ಲಿಂಗ ಅಂಗದ ಸಂಗವನು
ನಿನಗುಸುರುವೆನು ಕೇಳೆಂದನಾ ಮುನಿಪಾ ॥ ೧ ॥
ಹಾರಿಸಿದ ಹಂಸನೆಂಬುವ ತೇಜಿಯನು
ದೂರಿಸಿದ ಪರಮನೆಂಬುವ ಜೀವನನು
ಘೋರೇಳಿಸಿದ ಮಹಾಶಕ್ತಿಮಯ ವಿಷ್ಣುವನು
ಚಾರುತರ ಭಾಸುರದಿ ತೋರಿಸಿದ ಜೀವೇಶ್ವರೈಕ್ಯಭಾವವನು ॥ ೨ ॥

ಅಂತ್ಯ : ನಿಜಗುಣಾರ್ಯನ ಚರಿತ ಅಮೃತವಂನ್ನು
ಸವಿಯುವ ಸಿವ ಮಹಾತ್ಮಗೆ ಯಿದೆ ಪರಂಪದವೆಂದು ಸಾಧಿಸುವ
ಸುಜನರಿಗೆ ವಿದೃತ ಕರ್ಮವು ಹರಿದು ಧರ್ಮವು ಹೋ
ಗಿ ಚರ್ಮರವ ಬೆರದು ಸ್ವದರ್ಮವೆ ಆಗುವದು ಕೇಳೆಂದಾ ॥ ೩ ॥
ಯಿಾ ಪರಿಯ ನಿಶ್ಚಯವ ನೀ ತಿಳಿಯದೆ
ಯಿಾ ಪರಿಯಲಿ ಸೀತೆ ಹಂಬಲಬಡುವರೆ

ವಿಷಯ : ಯೋಗವಿಚಾರ.

ವಿಶೇಷ : ೨೩೭ನೆಯ ಪತ್ರದಲ್ಲಿ ೫೫ನೆಯ ಪದ್ಯವಾದ ಮೇಲೆ 'ಅಂತು ಸಂಧಿ ೨೪ಕಂ ಪದನು ೯೩೩ಕಂ ಮಂಗಳಮಹಾ ಶ್ರೀ ॥' ಎಂದು ಸಂಧಿ ಮುಗಿದು ಮತ್ತೆ ಬೇರೆ ಸಂಧಿ ಆರಂಭವಾಗಿ ೨೪೫ನೆಯ ಪತ್ರದಲ್ಲಿ ೧೯೧ನೆಯ ಪದ್ಯವಾದ ಮೇಲೆ 'ಅಂತು ಸಂಧಿ ೬ಕಂ ಪದನು ಮಂಗಳಮಹಾ ಶ್ರೀ॥' ಎಂದಿದೆ. ಅಸಮಗ್ರ ಪ್ರತಿ.

1462

ಕೆ.ಬಿ. ೩೦೭ **ರಾವಣೋದ್ಭವ ಪ್ರಸಂಗ** ಯಕ್ಷಗಾನ

೭.೭" × ೬.೫" ಸುಬ್ಬಯ್ಯ ೧೯ನೆಯ ಶತಕ

೧-೩೫ ಪತ್ರ ೧೬ ಪಂಕ್ತಿ ೨೦ ಅಕ್ಷರ

ಆದಿ : ಉತ್ತರಖಾಂಡದೊಳಗಣ ರಾವಣೋದ್ಭವದ ಕಥಾ ಪ್ರಾರಂಭವುಸ್ತು ॥
ನಾಂದಿವೃತ್ತಾ ॥
ಕೌಸಲ್ಯಾಕೃತ ಲಾಲನಾಸ್ತನರಸಗ್ರಾಸ್ಯಪ್ರತಿಷ್ಠೋತ್ಸುಖಂ
ವ್ಯಾಸಾದಿ ಸ್ತುತಿಗೀತತೋಷಿತ ಶುಚಿಸ್ಮೇರಪ್ರಭಾಸೂಚಕಃ
ಪ್ರಾಸಂಗೀಕೃತ ರಾಮುಚರ‍್ಯಮುನಿಪಃ ಪ್ರೇಮಂ ರಘೂಣಾಂ ಪತೇ
ಶ್ರೀ ಸೀತಾವದನಾಕ್ಷಿಕಾಂತಿಯುಕುತೋ ಬಿಂಬಾಧರಃ ಪಾತು ಮಾಂ ॥ ೧ ॥
ರಾಗ॥ ನಾಟಿ। ರೂಪ್ಕ॥ ಜಯ ಜಯ ನುತ ಹರಿವಂದನ ಜಯ ಜಯ
ಸುರುಕೃತುಸ್ಯಂದನ
ಜಯ ಹೈಮವತಿ ನಂದನ ಜಯ ಮಂಗಳವದನ
ಜಯಜಯ ಸನಕಸನಂದನ ಜಯಲೇಪಿತ ಸುಶ್ಚಂದನ
ಜಯ ಮೂಷಕ ಸುಸ್ಯಂದನ ಜಯ ವಾರಣವದನ ॥ ೨ ॥

ಅಂತ್ಯ : ವಾರ್ಧಿಖಾ ॥
ಶ್ರೀಮದುತ್ತರಕಾಂಡ ಕಥನಮಂ ಪ್ರೀತಿಯೊಳ್
ರಾಮುನಿಗಗಸ್ತ್ಯಮುನಿ ಪೇಳ್ದುದಂ ನಿಖಿಲಜನ
ಭೂಮಿಯೊಳಗಾಲಿಸುವ ತೆರದಿ ನಗರಾಖ್ಯ ಪಟ್ಟಣದಿ ಭೂಸುರ ಕುಲದಲಿ
ನೇಮದಿಂದೆಸೆವ ವಿಟ್ಠಲನರಸಿ ಗೌರಿ ಸು
ಪ್ರೇಮದಿಂ ಪಡೆದ–ಸುತ–ಸುಬ್ಬೈಯ್ಯನೆಂಬುನಂ
ಶ್ರೀಮಹಾ ವೆಂಕಟಾಚಲನನುಗ್ರಹದಿಂದನೊರೆದನೀ ಸಂಗತಿಯನು ॥ ೩೨೬ ॥

x x x x

ಘೋರದುರಿತವಿರಾಮು । ಧಾರಾಧರಶ್ಯಾಮು
ವೈರಿಸಂಕುಲಭೀಮು ಸಂನ್ಮಂಗಳಂ
ಸ್ಮೇರಮುಖಜಿತಸೋಮು । ಭೂರಿದೇವಲಲಾಮು
ಚಾರು ವೇಂಕಟಧಾಮು ಶುಭಮಂಗಳಂ ॥ ೩೫೯ ॥
ಅಂತ್ತು ಪದ್ಯ ೩೫೯ಕಂ ಮಂಗಳಮಹಾ ಶ್ರೀ.

ವಿಷಯ : ಉತ್ತರ ರಾಮಾಯಣದಲ್ಲಿರುವ ರಾವಣನ ಜನ್ಮಕಥೆ.

ವಿಶೇಷ : ಕೆಂಪು ಮಸಿಯಲ್ಲಿ ಪಾಠಗಳನ್ನು ತಿದ್ದಿ ಬರೆದಿದೆ.

1463

ಕೆ.ಬಿ. ೩೫೩/೧	**ರಾವಣೋದ್ಭವ ಪ್ರಸಂಗ**	ಯಕ್ಷಗಾನ
೯″ × ೬.೫″	ಸುಬ್ಬಯ್ಯ	೧೯ನೆಯ ಶತಕ
೧–೨೭ ಪತ್ರ	೧೯ ಪಂಕ್ತಿ	೨೨ ಅಕ್ಷರ

28

ಆದಿ : ರಾಮಾಯಣದೊಳಗಣ ರಾವಣವೂದ್ಭವ ಪ್ರಸಂಗ ಬರೆಯುವುದಕ್ಕೆ ಸುಭಮಸ್ತು ||

ಶ್ಲೋಕ || ಕಂಸ್ಸಲ್ಯಾಕೃತ್ತ ಲಾಲಾ ನಾಸ್ತನರಿಸಂ ಯಕ್ಷ ಪರಿಗೊಸ್ತುಕ
ಪ್ರಾಸಂಗೀಕ್ರ ರಾಮಾಚಯಾ ಮುನಿಪಂ ಪ್ರೇಮ್ಣು ರಿಘೂಣಂ ಪತ್ರಿ
ಶ್ರೀಸೀತ್ರ ಕಾಂತ್ತಿಯುಕ್ತ ಬಿಂಬಾಧರಂ ಪಾತ್ತು ಮಾಂ ||
ರಾಗಾ | ನಾಟ್ಟ | ತಾಳಾ | ಜಂಪೆ ||
ಜಯ ಜಯ ಹರಿನ್ನುತ್ತ ಕಂದ್ಯನ್ನ | ಜಯಜಯ ಶ್ರುಕೃತ್ತ ವಂದನಾ
ಜಯ ಹೈಮವತ್ತಿ ನಂದಾನಾ | ಜಯ ಮಂಗಲ ಸದನಾ
ಜಯ ಮುಷಿಕ ಸ್ವಶ್ಯಂದಾನ | ಜಯಾ ವಾರಣ ವಧನಾ || ೧ ||

ಅಂತ್ಯ : ವಾರ್ಧಿಕಾ ||

ಶ್ರೀ ಮಥೋತರಿ ಖಂಡಾ ಕಥನಮಂ ಪ್ರೇಮಧಿಂ
ರಾಮಾನಿಗಗಸ್ತ್ಯ ಮುನಿ ಪೇಳ್ದುದಂ ನೀಖಿಳಜಯಾ
ಬುಮಿಯೊಳಾಗಲಸುವತ್ತೆರಥಿ ನಗರಾಖ್ಯ ಪಟ್ಟಣಧಿ ಭುಸು....ಕೂಲಾದಲಿ
ನೇಮದಿಂದೆಶವ ವಿಟ್ಮಾಲಾನರಶೀ ಗೌರಿ ಸು
ಪ್ರೇಮದಿಂ ಪಡಧ ಸುತ್ತ ಸುಜ್ಞೆಯಾನೆಂಬಾನಂ
ಶ್ರೀ ಮಹಾವೆಂಕಟಾಚಲನಾನ್ನುಗ್ರಹವೆತ್ತು ನೋನದೆನೀ ಚೆರಿತ್ರೆಯಾನ್ನು

x x x x

ಸಿರಿಮುಖ ಚಿತ್ರಸ್ತೋಮಾ ಭೂರಿ ದೇವಾಲಲಮ್ಮಾ
ಚಕು ವೆಂಕಟದಾಮಾ ಸಂನ್ಯಂಗಳಬವಂತ್ತು ಜಯಮಂಗಳಂ || ೩ ||
ರಾವಣವೂದ್ಭವ ಸಂಧಿ ೧ ಕೆ ಪ ೪೩೫ ಕಂ ಮಂಗಳಮಹಾ ಶ್ರೀ.

ವಿಷಯ : ಉತ್ತರ ರಾಮಾಯಣದಲ್ಲಿರುವ ರಾವಣನ ಜನ್ಮಕಥೆ.

ವಿಶೇಷ : ಅತ್ಯಂತ ಶಿಥಿಲ ಪ್ರತಿ, ತಪ್ಪು ಅಧಿಕ. ಹುಳು ಹೊಡೆದಿದೆ. ಇದೇ ಪುಸ್ತಕದಲ್ಲಿ ಪುತ್ರಕಾಮೇಷ್ಟಿ, ಚಿಕ್ಕ ಪಟ್ಟಾಭಿಷೇಕ, ವಾಲಿಸುಗ್ರೀವರ ಕಾಳಗ, ಚೂಡಾಮಣಿ ಪ್ರಸಂಗ, ಸೇತುಬಂಧನ ಪ್ರಸಂಗ, ಅಂಗದ ಸಂಧಾನ, ರಾವಣನ ಕಥೆ, ವೆಂಕಟೇಶಶತಕ ಎಂಬ ಕೃತಿಗಳಿವೆ.

1464

ಕೆ.ಬಿ. ೨೪೬	**ರಾಸಕ್ರೀಡೆ**	ಶ್ಲೋಕ, ಪದ್ಯ, ಹಾಡು, ವಚನ
೭.೮″ × ೬.೨″	?	?
೧–೩೫ ಪತ್ರ	೧೬ ಪಂಕ್ತಿ	೧೮ ಅಕ್ಷರ

ಆದಿ : ಶ್ರೀಃ || ರಾಸಕ್ರೀಡಾ ಕಥಾಪ್ರಾರಂಭವು ||

ಶ್ಲೋ || ಭಗವಾನಪಿತಾ ರಾತ್ರೀಃ ಶರದೋತ್ಫುಲ್ಲಮಲ್ಲಿಕಾಃ |
ವೀಕ್ಷ್ಯ ರನ್ತುಂ ಮನಶ್ಚಕ್ರೇ ಯೋಗಮಾಯಾಮುಪಾಶ್ರಿತಃ || ೧ ||

ಕಂ || ಶಾರದ ವಿಕಸಿತ ಮಲ್ಲಿಕ
ದಾ ರಾತ್ರಿಗಳನ್ನು ಕಂಡು ಅತಿ ಸಂಭ್ರಮದೀ
ತಾ ರಮಿಸಲು ಮನವ ನಿಲ್ಲಿಸಿ
ನಾರಾಯಣ ಯೋಗಮಾಯೆಯನಾಶ್ರೈಸಿದನೂ ||

ವಚನ || ಶ್ರೀಕಾಂತನಿಂತು ವ್ರಜಿಕಾಂತೆಯರಂಕಸ್ಥಿತ ಕಂತುವಂ ಸಂತೈಸುವೆನೆಂದು ಗೋವರ್ಧನೋಪಕಾಂತಾರದೊಳು ನಿಂತು ! ರಾಸ ಕ್ರೀಡಾರ್ಥವಾಗಿ ಉದ್ಯುಕ್ತನಾಗಲಾ ಸಮಯದೊಳಾದ ಅದ್ಭುತಗಳೇನೆನೆ—

x x x x

ಶ್ಲೋ || ತಾಸಾಂ ತತ್ಸೌಭಗಮದಂ ವೀಕ್ಷ್ಯಮಾನಞ್ಚ ಕೇಶವಃ |
ಪ್ರಶಮಾಯ ಪ್ರಸಾದಾಯ ತತ್ರೈವಾನ್ತರಧೀಯತ ||

ಕಂ || ಅತಿ ಚಲುವರು ನಾವೆ ಸರಿ
ಕ್ಷಿತಿಯೊಳ್ಯಾನಿತರು ನಾವೇವೆ ಚತುರಿಯರೆಂಬಾ
ಸತಿಯರ ಮದುವಣಗಿಪೆನೆಂ
ದತಿ ಕರುಣವ ಮಾಳ್ಪೆನೆಂದತರ್ಹಿತನಾಗೆ

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಪೂರ್ವಾರ್ಧೆ
ಏಕೋನತ್ರಿಂಶೋಽಧ್ಯಾಯಃ

ಅಂತ್ಯ : ಶ್ರೀಶೇಷಾಚಲವಾಸಾ ಶ್ರೀನಿವಾಸಾ ಶ್ರೀವೆಂಕಟೇಶಾ
ಈಸು ಸತಿಯರಲಭಿಲಾಷೆಗಳಿತ್ತು ಪೋಷಿಸಿ ಸ್ಥಿರಪದ ಪೊಂದಿಪೆನೆಂದು || ೫ ||
ಬಂದನು ದೇವರವೇವ ಭಕ್ತಾವೃಂದವ ಕಾವಾ ||

ರಾಸಕ್ರೀಡಾ ಕಥಾ ಸಂಪೂರ್ಣವು || ಮಂಗಳಂ

ಮಂಗಳ ಮಾರಮಣಗೆ ಮಂಗಳ || ಪಲ್ಲವಿ ||
ಮಕುಟಕ್ಕೆ ಮಂಗಳ ಮತ್ಸ್ಯಾವತಾರಗೆ

x x x x

ಪರಿಪರಿರೂಪಗೆ ಪರಮಪುರುಷ ನಮ್ಮ
ಪುರಂದರ ವಿಠಲಗೆ ಜಯಮಂಗಳ
ನಿತ್ಯ ಶುಭಮಂಗಳಾ ||

ಶಾಲೀವಾಹನಶಕೆ ೧೦೨೪ನೆ ಪ್ಲವನಾಮ ಸಂವತ್ಸರದ ಮಾರ್ಗಶಿರ ಶುದ್ಧ ೨ ಶುಕ್ರವಾರದಲ್ಲಿ ಈ ಗ್ರಂಥವು ಲೇಖಕ ಕಡಬದ ಸುಬ್ರಾಮೈಯ್ಯನಿಂದ ಬರದು ಸಮಗ್ರ ಮಾಡಲ್ಪಟ್ಟಿತು–ಶ್ರೀ||

ವಿಷಯ : ಭಾಗವತದಲ್ಲಿರುವ ರಾಸಕ್ರೀಡೆ ಕಥೆಯ ಸಂಸ್ಕೃತ ಶ್ಲೋಕಗಳು ಮತ್ತು ಅವುಗಳ ಕನ್ನಡ ಪದ್ಯಾನುವಾದ.

ವಿಶೇಷ : ಸುಂದರಾಕ್ಷರ. ಶ್ಲೋಕಗಳಿಗೆ ಅನುವಾದರೂಪವಾದ ಕಂದಪದ್ಯಗಳೂ, ಭಾವವನ್ನು ವ್ಯಕ್ತಪಡಿಸುವ ಗೀತೆಗಳೂ, ಮಧ್ಯೆ ಕೆಲವು ವಚನಗಳೂ ಇವೆ. ಅರ್ವಾಚೀನ ಪ್ರತಿ.

1465

ಕೆ. ೭೩	**ರುಕ್ಮಾಂಗದ ಚರಿತ್ರೆ**	ಸಾಂಗತ್ಯ
೧೩.೩" × ೧ ೪"	ಸೋಮ	೧೬೫೦
೧-೧೦೧ ಪತ್ರ	೫ ಪಂಕ್ತಿ	೫೦ ಅಕ್ಷರ

ಆದಿ : ರುಕುಮಾಂಗದನ ಚರಿತೆಗೆ ಕಲ್ಯಾಣಮಸ್ತು
ಹರಿಯ ನೆನೆದು ಸುಖಿ....
............................ಗು
ಹರಿಯ ನೆನೆದು ಸುಖಿಯಾದ ಮನುಜರಿಗೆ
........ಜಲ್ಮದ ಬಾದೆ ....।

ಅಂತ್ಯ : (೯೮ನೆಯ ಪತ್ರ) ವೀರ ವಶಿಷ್ಠ ಮುನಿಪ ಮಾಂಧಾತ ಮ
ಹೀರಮಣಗೆ ವಿಸ್ತರಿಸಿದಾ
ನಾರದಿಯಹ ರುಕುಮಾಂಗದ ಚರಿತೆಯ
ಸೂರಿಗಳೆಲ್ಲ ಚಿತ್ತೈಸಿ ॥ ೧೫೦ ॥
ಅಂತೂ ಸಂಧಿ ೭೭ಕ್ಕಂ ಪದನೂ ೯೫ಂ೭ಕ್ಕಂ ಮಂಗಳಮಹಾ ಶ್ರೀ

x x x x

ಸಂ....ತಕೆ ಹರಿವಾಸರ ನಿತ್ಯ
ವಿಂದಿರಪತಿ ಸರ್ವ್ವಗತನಾ
ಯೆಂದಿರ್ದ್ದರು ಶ್ರೀ ಹರಿಯ ಭಕ್ತ
ರೆಂದಲ್ಲಿ ಸಂಧಿ ಮುಗಿಯಿತೂ ॥ ೫೩ ।
ಯೆಲ್ಲಾ ದೇವರ ವಲ್ಲಭ ಕುರಣಾ
ವಲ್ಲಭ ವರದ ನ್ರು

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಮೊದಲ ೮ ಪತ್ರಗಳು ಶಿಥಿಲವಾಗಿವೆ ಅಸಮಗ್ರ ಪ್ರತಿ.

1466

ಕೆ.೨೦೯ **ರುಕ್ಮಾಂಗದ ಚರಿತ್ರೆ** ಸಾಂಗತ್ಯ

೮.೧" × ೨.೧" ಸೋಮ ೧೬೫೦

೩೨ ಪತ್ರ ೧೦ ಪಂಕ್ತಿ ೩೮ ಅಕ್ಷರ

ಆದಿ : ....ಸುಖಿಯಾಗು ಮಾನವೆ ನರ
ಹರಿಯ ನೆನೆದು ಧಂನ್ಯನಾಗೂ ಹರಿಯ ನೆನೆದು ಸುಖಿಯಾ
...............ಮರಳಿ ಜಲ್ಮಿಪ ಬಾಧೆಯಿಲ್ಲಾ ‖ ೧ ‖
ನರಲೋಕದೊಳಿಲ್ಲಾ ಹರಿ ಸರ್ವೋತ್ತಮನೆಂದು
ಕರುಣಿಸಿ ಸಕ............ರವ ಪರಮಹಂಸ ಪರಿವ್ರತ
ಗುರುಸುರ ಕರಿವರ್ನ ಮುನಿಗೆ ವಂದಿಸುವೇ ‖ ೨ ‖

x x x x

ವರ್ನಪದಾಡಂಬರ ರಸಭಾವದ
ನಿರ್ನಯ ಗತಿ ತಪ್ಪದಂತ್ತೆ
ಕನ್ನಡ ಕವಿ ಕುಮುದದ ಶುಭೋದಯ
ಪೂರ್ನ ಸೋಮನು ವಿರಚಿಸಿದಾ ‖ ೧೪ ‖

ಅಂತ್ಯ : ತಂದೆ ಹೇಳಿದ ಮಾತು ಮನವನುಬ್ಬಿಸೆ ಮುದ
ದಿಂದ ದಿಗ್ವಿಜಯು ಗಗನಕೆ
ಸಂದೇಹವಿಲ್ಲದಾಯತವಾಗಿ ಸುಖಮಿರ್ದನೆಂಬಲ್ಲಿಗೆ
ಸಂಧಿ ಸಂಪೂರ್ನಾ ‖ ೧೧೭ ‖
ಅಂತ್ಪೂ ಸಂಧಿ ೩ಕ್ಕಂಪದನೂ ೩೯೭ ಕ್ಕಂ ಮಂಗಳಮಹಾಶ್ರೀ ‖

x x x x

ಯಿರುತ್ತೊಂದು ದಿವಸ ತಂದೆಯ ಕೂಡೆ ಬಿಂನ್ನೈಸಿ
ಭರದಿಂದ ಧರ್ಮಾಭೂಷಣನೂ
ಧರೆಯನೆಲ್ಲವ ಸುತ್ತಿ ಬಹೆನೆಂದು ಸೇನೆಯ
ನೆರಹಿದನತಿ ಸಂಭ್ರಮದಲಿ ‖ ೫ ‖

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಪತ್ರಗಳಲ್ಲಿ ಕ್ರಮಾಂಕವಿಲ್ಲ. ಅಸಮಗ್ರ ಪ್ರತಿ. ಆರಂಭದ ಎರಡು ಪತ್ರಗಳು ಮುರಿದಿವೆ. ಮುಂದೆ ಕೆಲವು ಪತ್ರಗಳ ಒಂದು ಮೂಲೆಯ ಅಂಚು ಮುರಿದಿದೆ.

1467

ಕೆ. ೫೨೩ **ರುಕ್ಮಾಂಗದಚರಿತ್ರೆ** ಚಂಪು

೮.೬" × ೧.೫" ಚಿಕ್ಕುಪಾಧ್ಯಾಯ ೧೬೭೨

೧–೧೭೫ ಪತ್ರ ೯ ಪಂಕ್ತಿ ೪೮ ಅಕ್ಷರ

ಆದಿ : ರುಕ್ಮಾಂಗದ ಚರಿತ್ರಂ.
ಶ್ರೀ ನವವಾಕ್ಪಿತಧ್ವನಿಯನಂಬುಧಿಜಾಸ್ತನ ಪುಷ್ಪಗು....
....ನಾಳಿಯಿಂದೆ ಕಮಲಾಧರ ಪಲ್ಲವದಿಂದೆ ಭಾರ್ಗವಿ
ಯಾನ ಮರಾಳಿಕಾ ಗತಿಯಿನೊಪ್ಪುವ ತತ್ಪಟು ಯೌವನೋ
ದ್ಯಾನದೊ.......ಸುವ ಮಾಧವನೀಗೆಮಗಿಷ್ಟಸಿದ್ಧಿಯಂ ॥ ೧ ॥

ಅಂತ್ಯ : ಡಿಸಲೊಡಂಶಿವಿಕ್ಕೆರ್ಗೆ ವಿದ್ವಾಂಸರಿಂದೀ ರುಕ್ಮಾಂಗದ ಸಚ್ಚರಿತ್ರಕೆ ಜಯಂ ಭದ್ರಂ ಶುಭಂ ಮಂಗಳಂ ॥ ಗದ್ಯ ॥........ಮುಖ ಸರ್ವ ಗೀರ್ವಾಣವಾಳಿ x x x ಕಲಾನಿಧಿ ಸತ್ಯ ಪರಾಕ್ರಮ ವೀರಶ್ರೀನರಪತಿ ಚಿಕದೇವಮ.... ಶ್ರೀ ಚಿಕುಪಾಧ್ಯಾಯ ಮಂತ್ರಿ ವಿರಚಿತ ರುಕ್ಮಾಂಗದ ಚರಿತ್ರದೊಳ್ ಹರಿದಿನ ಭೋಜನಂ ವಿಹಿ ...ನಂತರ ತತ್ಸತ್ಯ ನಿರ್ವಾಹಣಾರ್ಥವಾಗಿ ಪುತ್ರಶಿರೋ ದಾನಮಂ ಮಾಳ್ಪ ವೇಳೆಯೊಳ್ ಶ್ರೀಮನ್ನಾ .... ಕಳತ್ರ ರುಕ್ಮಾಂಗದಂಗೆ ವಿಷ್ಣು ಸಾಯುಜ್ಯ ಪ್ರಾಪ್ತಿ ಕಥನಂ ಮೋಹಿನಿಗೆ ವಿದ್ಧೈಕಾದಶಿ ಕೃತ ವ್ರತ ಫಲದಾ .... ರೂಪಣಂ ದಶಮಾಶ್ವಾಸಂ ॥ ಶ್ರೀ ಸಾಂಗಂ ರುಕ್ಮಾಂಗದ ಚರಿತ್ರಂ ದಶಾಶ್ವಾಸಂ ಸಂಪೂರ್ಣಂ.

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಕೊನೆಯಲ್ಲಿ ಪತ್ರಗಳು ಶಿಥಿಲವಾಗಿವೆ. ಶಕಟರೇಫ ಪ್ರಯೋಗವಿದೆ. ೪೦ ಸಂಖ್ಯೆಯ ಎರಡು ಪತ್ರಗಳಿವೆ.

1468

ಕೆ.ಬಿ. ೪೧ **ರುಕ್ಮಾಂಗದ ಚರಿತ್ರೆ** ಚಂಪು

೭.೭" × ೬.೨" ಚಿಕ್ಕುಪಾಧ್ಯಾಯ ೧೬೭೨

೧–೨೯೬ ಪತ್ರ ೧೧ ಪಂಕ್ತಿ ೨೫ ಅಕ್ಷರ

ಆದಿ : ರುಕ್ಮಾಂಗದ ಚರಿತ್ರೆ ಬರಿಯುವದಕ್ಕೆ ಶುಭಮಸ್ತು x x
ವೃ ॥ ಶ್ರೀ ನವವಾಕ್ಪಿತಧ್ವನಿಯಿನಂಬುಧಿಜಾಸ್ತನ ಪುಷ್ಪಗುಚ್ಛದಿಂ
ಮಾ ನಯನಾಳಿಯಿಂದೆ ಕಮಲಾಧರ ಪಲ್ಲವದಿಂದೆ ಭಾರ್ಗವಿ

ಯಾನ ಮರಾಳಿಕಾಗತಿಯಿನೊಪ್ಪುವ ತತ್ಪಟು ದಿವ್ಯ ಯೌವ್ವನೋ
ಧ್ಯಾನದೊಳೊಲ್ದು ಚಲಿಸುವ ಮಾಧವನೀಗೆಮಗಿಷ್ಟಸಿದ್ಧಿಯಂ ॥ ೧ ॥

ಅಂತ್ಯ : ಶ್ರೀ ರಾಜಾನ್ವಯ ಭೂಷನಪ್ರತಿಮನುದ್ಯತ್ಕೀರ್ತಿ ಕಾಂತಿಸ್ಫುರ
ದ್ವೀರ ಶ್ರೀ ಚಿಕ್ಕದೇವರಾಯನೊಲವಿಂ ಭೂಭಾಗದೊಳ್ಸಂತತಂ
ಸಾರತ್ವಂ ಬಡೆವಂತೆ ಮಾಡಿಸಲೊಡಂ ತೀವಿರ್ಕೆ ವಿದ್ವಾಂಸರಿಂ
ದೀ ರುಕ್ಮಾಂಗದ ಸಚ್ಚರಿತ್ರಕೆ ಜಯಂ ಭದ್ರಂ ಶುಭಂ ಮಂಗಳಂ ॥ ೨೪ ॥
ಗದ್ಯ ಪದ್ಯಂ ॥ ಇದು ವಿನಮದ್ಗಿರ್ವ x x x x ವೀರ ಶ್ರೀ ನರಪತಿ ಚಿಕ್ಕ ದೇವ ಮಹಾರಾಜ ರಾಜಿತ ದಯಾಭಾಜನ ಶ್ರೀ ಚಿಕ್ಕುಪಾಧ್ಯಾಯ ವಿರಚಿತ ರುಕ್ಮಾಂಗದ ಚರಿತ್ರದೊಳ್ ಹರಿದಿನ ಭೋಜನಂ x x x ಸಪುತ್ರ ಕಳತ್ರ ರುಕ್ಮಾಂಗದಂಗೆ ವಿಷ್ಣುಸಾಯುಜ್ಯ ಪ್ರಾಪ್ತಿಕಥನಂ ಮೋಹಿನಿಗೆ ವಿದ್ಧ್ಯೈಕಾದಶೀಕೃತ ವ್ರತಫಲದಾನವಿವರಣಂ ಹರಿದಿನ ವ್ರತಾಚರಣಾದಿ ನಿರೂಪಣಂ ದಶಮಾಶ್ವಾಸಂ ಸಾಂಗಂ॥ ರುಕ್ಮಾಂಗದಚರಿತ್ರಂ ದಶಮಾಶ್ವಾಸಂ ಸಂಪೂರ್ಣಂ.

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಪ್ರತಿ ಸಮಗ್ರವಾಗಿದೆ.

1469

ಕೆ. ೬೨೩	**ರುಕ್ಮಾಂಗದ ಚರಿತ್ರೆ**	ವಾರ್ಧಕಷಟ್ಪದಿ
೧೫.೩" × ೧.೩"	ಲಕ್ಷ್ಮೀಶ	ಸು. ೧೭೨೩
೧–೨೦೭ ಪತ್ರ	೫ ಪಂಕ್ತಿ	೬೨ ಅಕ್ಷರ

ಆದಿ : ರುಕ್ಮಾಂಗದ ಚರಿತ್ರೆ ಬರೆಯುವದಕ್ಕೆ ಶುಭಮಸ್ತು ॥
ಶ್ರೀ ಸಕಲ ಮುನಿಹೃದಯ ವಾಸವಂದಿತಾ ಜನಾ
ಧೀಶ ಕಾರುಂಣ್ಯ ಸರ್ವೇಶ ರವಿಕೋಟಿ ಸಂ
ಕಾಶ ತ್ರೈಲೋಕ್ಯ ಪ್ರಕಾಶ ವರ ಕಂಸ್ತುಭಸುಭೂಷ ಪರಿಪೂರ್ನವೇಷಾ
ಭಾಸುರತರ ಪ್ರಬಲಶೇಷ ನಿಜಕಲ್ಪ ಸುದಿ
ನೇಶ ವಿದುನೇತ್ರ ಕಮಲಾಸನನೆ ಪಡದ ಸುವಿ
ಲಾಸ ಖಗಪುರ ಚಂನಕೇಶವನು ನಮಗೆ ಸಂತೋಷ ಸಂಪದವೀಯ್ಯಲಿ ॥ ೧ ॥

x x x x

ಭೂತಳಕೆ ದಕ್ಷಿಣ ಸುವೈಕುಂಠಮೆನಿಸಿ ವಿ
ಖ್ಯಾತಿವಡದಿರ್ಪ ಖಗಪುರ ನಿವಾಸದೊಳು ತೋ
ರ್ಪಾತ ಬುಧಕುಲಶಿರೋಮಣಿಯಾದ ಕಾಶ್ಯಪಸುಗೋತ್ರ ನಿರ್ಮಳಚರಿತ್ರಾ

ನೀತಿ ಸಂನುತ ರಾಮಚಂದ್ರನುದರಾಬ್ಧಿ ಸಂ
ಜಾತ ಲಕ್ಷ್ಮೀಶನೆಂಬವನು ವಿರಚಿಶಿದ ಖ
ದ್ಯೋತ ಕುಲತಿಲಕ ರುಕ್ಮಾಂಗದ ಚರಿತ್ರಮಂ ಕೇಳ್ವು ನಲಿವುದು ಸುಜನರೂ

ಅಂತ್ಯ : ಹರಿ ಹರುಪದಿಂದಿತ್ತಲಿನ ಕುಲಾಧಿಪನ ವರ || ೨೩ ||
ತರುಣಿ ಸಂಧ್ಯಾವಳಿಯ ಧರ್ಮ ಭೂಷಣನ ಸ
ತ್ಕರುಣ ಮಿಗೆ ಕರದೊಯ್ದು ವೈಕುಂಠ ಪುರಕತುಳ ತತ್ಪ್ರೇಮದೇಳ್ಗೆಯಿಂದಾ
ಧರೆಯೊಳೀ ವಿಷ್ಣು ವಾಸರವನಾರಾದರಾ
ಚರಿಸಿದರ್ಗಿಹದಿ ಸಂಪದವಿತ್ತು ಪರದಲ್ಲಿ
ಪರಮ ಪುರುಷೋತ್ತಮನು ರಕ್ಷಿಸುವನಿದು ಸಿದ್ಧವೆಂದು ಶರಣರು ತಿಳಿದೂ
|| ೧೦೮ ||

ಭಾನುಚಂದ್ರ ಗ್ರಹಣದೊಳು ಭೂಸುರರ್ಗಳಿಗೆ
ಧೇನು ಕಂನ್ಯಾದಾನವಿತ್ತ ಫಲ ನಿತ್ಯ ಸು
ಜ್ಞಾನ ಯೋಗಾಭ್ಯಾಸವಿಟ್ಟ ಫಲವ ತಿಥಿ ಸತ್ಕರವಂನಧಾನಫಲವೂ
ನಾನಾ ಸುತೀರ್ಥ ದೇವಸ್ಥಾನದೊಳು ಚರಿಸಿ
ದಾನಂದ ಫಲಮಪ್ಪುದೀ ಕೃತಿಯ ಕೇಳ
......................ಯವೆಂದು ಮುನಿ ನುಡಿದನೂ ||೧೦೯||

ಅಂತು ಸಂಧಿ ೧೭ಕಂ ಪದನೂ ೯೫೪ಕಂ ಮಂಗಳಮಹಾ ಶ್ರೀ
....ಚರಿತ್ರೆ
ಸಂಪೂರ್ಣ ಮಂಗಳಾನಿ ಭವಂತೂ || ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀ ವಾಹನ ಶಖ ವರುಷಂಗಳು ನೇ ಸಂದ ವರ್ತಮಾನವಾದ ವಿಜಯ ಸಂವತ್ಸರದ ಮಾರ್ಗಶಿರ ಶ್ಧ ೧೦ ಸ್ಥಿರವಾರದವರಿಗೆ ಸಂಪೂರ್ನ ಮಂಗಳಾನಿ ಭವಂತ್ತೂ ಶ್ರೀ ರಸ್ತು || ಯಿಾ ಪುಸ್ತುಕ ಬರೆದಾತ ಕಗ್ಗಲೀಪುರದ ಸುಂಕ|| .... || ನರಸುಂಹೈಯ್ಯನವರ ಕುಮಾರ ವೋಬಳೈಯ್ಯನ ಬರಹಾದ ಪುಸ್ತುಕಕ್ಕೆ ಶುಭಮಸ್ತು|| ಸಮಸ್ತ ಸನ್ಮಂಗಳಾನಿ ಭವಂತ್ತೂ ||

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಸ್ಫುಟಾಕ್ಷರ. ಮೊದಲು ಕೊನೆಗಳಲ್ಲಿ ಒಂದೆರಡು ಗರಿಗಳ ಅಂಚು ಮುರಿದಿದೆ. ೮೧, ೧೭೬, ೧೮೧, ೨೦೧ ಈ ಕ್ರಮಾಂಕಗಳ ಗರಿಗಳು ಮುರಿದಿವೆ.

1470

ಕೆ.ಎ. ೩	**ರುಕ್ಮಾಂಗದ ಚರಿತ್ರೆ**	ವಾರ್ಧಕಷಟ್ಪದಿ
೧೨.೮" × ೭.೮"	ಲಕ್ಷ್ಮೀಶ	ಸು. ೧೭೨೩
೧–೬೭ ಪತ್ರ	೩೦ ಪಂಕ್ತಿ	೨೮ ಅಕ್ಷರ

ಆದಿ : ರುಕ್ಮಾಂಗದ ಚರಿತ್ರಂ ॥ ವಾರ್ಧಿಕ ಷಟ್ಪದಿ ॥
ಶ್ರೀ ಸಕಲ ಮುನಿಹೃದಯ ವಾಸ ವಂದಿತ ಜನಾ
ಧೀಶ ಕಾರುಣ್ಯ ಸರ್ವೇಶ ರವಿಕೋಟಿ ಸಂ
ಕಾಶ ತ್ರೈಲೋಕ್ಯ ಪ್ರಕಾಶ ವರ ಕೌಂಸ್ತುಭ ಸುಭೂಷ ಪರಿಪೂರ್ಣವೇಷಾ
ಭಾಸುರತರ ಪ್ರಬಳ ಶೇಷ ನಿಜತಳ ಸುದಿ
ನೇಶ ವಿಧುನೇತ್ರ ಕಮಲಾಸನನ ಪಡೆದ ಸುವಿ
ಲಾಸ ಖಗಪುರ ಚೆನ್ನಕೇಶವನು ನಮಗೆ ಸಂತೋಷ ಸಂಪದವೀಯಲಿ ॥ ೧ ॥

x x x x

ಭೂತಳಕೆ ದಕ್ಷಿಣ ಸುವೈಕುಂಠಮೆನಿಸಿ ವಿ
ಖ್ಯಾತಿವಡೆದಿರ್ಪ ಖಗಪುರ ನಿವಾಸದೊಳು ತೋ
ರ್ಪಾತ ಬುಧಕುಲಶಿರೋಮಣಿಯಾದ ಕಾಶ್ಯಪಸುಗೋತ್ರ ನಿರ್ಮಳ ಚರಿತ್ರಾ
ನೀತಿ ಸನ್ನುತ ರಾಮಚಂದ್ರನುದರಾಬ್ಧಿ ಸಂ
ಜಾತ ಲಕ್ಷ್ಮೀಶನೆಂಬುವನು ವಿರಚಿಸಿದ ಖ
ದ್ಯೋತ ಕುಲತಿಲಕ ರುಕ್ಮಾಂಗದ ಚರಿತ್ರಮಂ ಕೇಳ್ದು ನಲಿವುದು ಸುಜನರು ॥ ೨೩ ॥

ಅಂತ್ಯ : ಹರಿ ಹರುಷದಿಂದಿತ್ತಲಿನಕುಲಾಧಿಪನ ವರ
ತರುಣಿ ಸಂಧ್ಯಾವಳಿಯು ಧರ್ಮಭೂಷಣನ ಸ
ತ್ಕರುಣಿ ಮಿಗೆ ಕರೆದೊಯ್ದು ವೈಕುಂಠ ಪುರಕತುಳತತ್ರೀಮದೇಳ್ಗೆಯಿಂದ
ಧರೆಯೊಳೀ ವಿಷ್ಣುವಾಸರವನಾರಾದರಾ
ಚರಿಸಿದರ್ಗಿಹದಿ ಸಂಪದವಿತ್ತು ಪರದಲ್ಲಿ
ಪರಮ ಪುರುಷೋತ್ತಮನು ರಕ್ಷಿಸುವನಿದು ಸಿದ್ಧಮೆಂದು ಶರಣರು ತಿಳಿವುದು ॥ ೧೦೮ ॥

ಭಾನು ಚಂದ್ರ ಗ್ರಹಣದೊಳು ಭೂಸುರರ್ಗಳಿಗೆ
ಧೇನು ಕನ್ಯಾದಾನವಿತ್ತ ಫಲ ನಿತ್ಯ ಸು
ಜ್ಞಾನ ಯೋಗಾಭ್ಯಾಸವಿದ್ದ ಫಲವ ತಿಥಿ ಸತ್ಕರವನ್ನದಾನಫಲವು
ನಾನಾ ಸುತೀರ್ಥ ದೇವಸ್ಥಾನದೊಳ್ ಚರಿಸಿ
ದಾನಂದ ಫಲಮಪ್ಪುದೀ ಕೃತಿಯ ಕೇಳ್ದರ್ಗೆ
ಶ್ರೀನಾಥನೊಲಿವನಿದು ನಿಗಮ ಶಾಸ್ತ್ರಾರ್ಥನಿರ್ಣಯಮೆಂದು ಮುನಿ ನುಡಿದನು ॥ ೧೦೯ ॥

ಅಂತು ಸಂಧಿ ೧೭ಕ್ಕಂ ಪದಂ ೯೪೪ಕ್ಕಂ ಮಂಗಳಮಸ್ತು ॥
ಆನೆಕಲ್ಲು ಸ್ಥಳದ ಹಾರುಗದ್ದೆ ಕವಿ ಲಕ್ಷ್ಮಯ್ಯನವರು ತಮ್ಮ ಇಷ್ಟದೈವ ಚೆನ್ನಿಗರಾಯ ಸ್ವಾಮಿಯವರ ಪ್ರಸಾದದಿಂದ ಕೇಳಿದ ರುಕ್ಮಾಂಗದ ಚರಿತ್ರೆ ಕಾವ್ಯಮಿದು ಸಂಪೂರ್ಣಮಾದುದು ಶ್ರೀರಸ್ತು ಸ್ವಸ್ತಿ ಶ್ರೀ ಶಾಲೀವಾಹನ ಶಕಾಬ್ದಂ ೧೭೫೯ ನೆಯ ಈಶ್ವರ ಸಂ ಭಾದ್ರಪದ ಶುದ್ಧ ೧ ಶುಕ್ರವಾರ ದಿನ

ಚೆನ್ನಪಟ್ಟಕ್ಕೆ ವಳಿತವಾದ ಹೊಂಗನೂರು ನಾರಣೈಯನು ತನ್ನ ಮಗನಿಗೆ ಬರೆದುಕೊಟ್ಟ ಮೂಲ ಪ್ರತಿಯನ್ನು ನೋಡಿ ಬರೆದದ್ದು.
ನಂಪನ ಸಂ. ಭಾದ್ರಪದ ಬಹುಳ ಸಪ್ತಮಿ ಮಂಗಳವಾರ ತಾರೀಖು 13ನೆಯ ಸೆಪ್ಟಂ 92 ಕ್ಲೋಸ್‌ಪೇಟೆ. ಕೆ. ರಾಮುಸ್ವಾಮಯ್ಯಂಗಾರ್.

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಮೋಡಿ ಅಕ್ಷರ. ಕಾವ್ಯಾರಂಭಕ್ಕೆ ಮೊದಲು ಪ್ರತಿಕಾರರು ಮೂರು ಪುಟಗಳಲ್ಲಿ ಪೀಠಿಕೆಯನ್ನೂ, ಒಂದು ಪುಟದಲ್ಲಿ ವಿಷಯಸೂಚಿಕೆಯನ್ನೂ ಬರೆದಿದ್ದಾರೆ. ಪೀಠಿಕೆಯನ್ನು ಬರೆದ ಕಾಲ ೧ನೇ ಸೆಪ್ಟೆಂಬರ್ ೧೮೯೨.

1471

ಕೆ.ಬಿ. ೭೪	**ರುಕ್ಮಾಂಗದ ಚರಿತ್ರೆ**	ವಾರ್ಧಕಷಟ್ಪದಿ
೮″ × ೬.೫″	ಲಕ್ಷ್ಮೀಶ	ಸು. ೧೭೨೩
೧–೨೨೯ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ರುಕ್ಮಾಂಗದ ಚರಿತ್ರೆ ಬರೆಯುವದಕ್ಕೆ ಶುಭಮಸ್ತು
ಶ್ರೀ ಸಕಲ ಮುನಿಹೃದಯ ವಾಸವಂದಿತ ಜನಾ
ಧೀಶ ಕಾರುಣ್ಯ ಸರ್ವೇಶ ರವಿಕೋಟಿ ಸಂ
ಕಾಶ ತ್ರೈಲೋಕ್ಯ ಪ್ರಕಾಶ ವರಕೌಸ್ತುಭ ಸುಭೂಷ ಪರಿಪೂರ್ನವೇಷಾ
ಭಾಸುರತರ ಪ್ರಬಲಶೇಷ ಸಿಜತಳ್ಪ ಸುದಿ
ನೇಶ ವಿದುನೇತ್ರ ಕಮಲಾಸನನ ಪಡದ ಸುವಿ
ಲಾಸ ಖಗಪುರ ಚನ್ನಕೇಶವನು ನಮಗೆ ಸಂತೋಷ ಸಂಪದವೀಯ್ಯಲಿ ॥ ೧ ॥

x x x x

ಯಿಂದೆಮ್ಮ ಪಿತೃಮಾತೆಯರ್ ಸುನಿಷ್ಠಿತರಾಗಿ
ಶ್ರೀಕಮಲೆಯಂ ಭಜಿಸಲೊಲಿದು ಸನ್ನೃತ
ದಿಂದ ಸಂತಾನವಿತ್ತು ಸಲೆ ಸತ್ಯಪಾಂಭೋನಿಧಿಯೊಳೋಲಾಡಿಸಿ
ಚತುರ ಘನಕುಶಲ ಲಕ್ಷ್ಮಣನೆಂಬ ಪೆಸರನಿ
ತ್ತತುಳ ಗಾಂಭೀರ ಯುಕ್ತಾದಿ ಲಕ್ಷ್ಮೀಯ ಪಾದ
ಶತಪತ್ರಕೆರಗಿ ವಂದಿಸುವೆಮಿಾ ಕಾವ್ಯಕ್ಕೆ ಕರುಣರಸವಿಾವುದೆಂದೂ ॥ ೭ ॥

ಅಂತ್ಯ : ಭಾನು ಚಂದ್ರ ಗ್ರಹಣದೊಳು ಭೂಸುರರ್ಗಳಿಗೆ
ಧೇನು ಕನ್ಯಾದಾನವಿತ್ತ ಫಲ ನಿತ್ಯ ಸು
ಜ್ಞಾನ ಯೋಗಾಭ್ಯಾಸವಿತ್ತ ಫಲವತಿಥಿ ಸತ್ಕರವನ್ನದಾನ ಫಲವೂ

ನಾನಾ ಸುತೀರ್ಥ ದೇವಸ್ಥಾನದೊಳ್ ಚರಿಸಿ
ದಾನಂದ ಫಲಮಪ್ಪುದೀ ಕೃತಿಯ ಕೇಳ್ದರ್ಗೆ
ಶ್ರೀನಾಥನೊಲವನಿದು ನಿಗಮಶಾಸ್ತ್ರಾರ್ಥ ನಿರ್ಣಯವೆಂದು ಮುನಿ ನುಡಿದನೂ
ಅಂತೂ ಸಂಧಿ ೧೭ಕ್ಕಾಂ ಪದನೂ ೯೫೩ಕ್ಕಾಂ ಮಂಗಳ || || ೧೦೮ ||

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಸಮಗ್ರವಾಗಿದೆ. ಅಕ್ಷರ ಸ್ಫುಟ.

1472

ಕೆ.ಬಿ. ೧೩೫ **ರುಕ್ಮಾಂಗದ ಚರಿತ್ರೆ** ಯಕ್ಷಗಾನ

೭.೮" × ೬.೨" ಲಿಂಗರಾಜ ೧೮೫೦

೧–೩೨ ಪತ್ರ ೧೭ ಪಂಕ್ತಿ ೨೦ ಅಕ್ಷರ

ಆದಿ : ಶ್ರೀ ರುಕ್ಮಾಂಗದ ಚರಿತ್ರೆ || ನಾಂದಿ ಕಂದಪದ್ಯ ||
ಶ್ರೀ ತುಹಿನಗಿರಿ ಕುಮಾರೀ
ಜಾತ ದಯಾಸಾರ ನಿಭೃತ ಹೃದಯ ತಟಾಕಂ
ಸೀತಾಂಶು ಕಲಿತ ಜೂಟಂ
ಪ್ರೀತಿಯೊಳೆಮ್ಮಂ ಸಲಹಲಿ ಶ್ರೀ ವೀರೇಶಂ || ೧ ||
ರಾಗ ನಾಟಿ ಝಂಪೆ ||
ಜಯ ಕೋಟಿ ರವಿಶೋಭ | ಜಯ ನಿಹತ ದಿತಿಜೇಭ
ಜಯ ಸಂತತ ಪ್ರತಿಭ | ಜಯ ವಿರಚಿತ ಲೋಭ
ಜಯ ಶರನ್ಮಿದಿರಾಭ | ಜಯದಳನ್ಮದನೇಭಾ
ಜಯ ಶರ ಬಿಸಜನಾಭ | ಜಯಭಕ್ತಲಾಭ || ೨ ||
x x x x
ಕಂದ|| ಸರಸಪದ ಜಲದ ಜಾಲಾ
ವರ ನವರಸೋವೃಷ್ಟಿಯಂ ಕರೆಯಲ್ ರಸಿಕೋ
ತ್ಕರ ಹೃಲ್ಲತೆ ಪರ್ಬುವುದೆಂ
ದಿರದುಸುರುವೆ ಕಥೆಯ ನೃಪತಿ ರುಕ್ಮಾಂಗದನ || ೧೦ ||

ಅಂತ್ಯ : ವಾರ್ಧಿಕ ||
ಹರಿವಾಸರ ವ್ರತಾನುಷ್ಠಾನ ಮಹಿಮೆಯಿಂ
ಪರಮ ಹರಿಸಾಯುಜ್ಯ ಪದವಿಯಂ ಪಡದನಾ
ಧರಣೀಶ ರುಕ್ಮಾಂಗದನು ಜಗದೊಳದರಿಂದಲೀ ವ್ರತವನಾರಾಗಲು
ವಿರಚಿಸಲ್ ಜನ್ಮ ಜನ್ಮಾಂತರಾರ್ಜಿತವಾದ
ದುರಿತಗಳು ಬೆಂದಪವು ಪರಮ ಪಾವನವೆಂದು
ವರಮುನಿ ವಸಿಷ್ಠನಾ ಮಾಂಧಾತ ನೃಪತಿಗಾನಂದದಿಂ ಪೇಳುತಿರ್ದಂ || ೩೮೨ ||

ಮಂಗಳಂ ||

|| ರಾಗ ಬಿಲಹರಿ ಅಟ್ಟತಾಳ ||

ಮಂಗಳಂ ಮಂಗಳಂ ಶಿವಗೆ || ಮಂಗಳಂ ಮಂಗಳಂ ಭವಗೆ ||ಪ||

x x x x

ಗಂಗಾಭಂಗೋತ್ತುಮಾಂಗನಿಗೆ | ತುಂಗಪುಂಗವವಾಹನಿಗೆ

ಲಿಂಗ ಭೂಪಾಂತರಂಗಗೆ | ಸಂಗದುರುಮಹಲಿಂಗನಿಗೆ || ೩೮೫ ||

ಕಂದ ಪದ್ಯ || ಶರ ರುತು ಭಕ್ತಿ ಪಯೋನಿಧಿ

ಪರಿಮಿತ ಕಲಿವತ್ಸರಂಗಳ್ ಇಳೆಯೊಳ್ ಕಳೆಯಲ್

ವರರುಕ್ಮಾಂಗದ ಚರಿತೆಯ

ವಿರಚಿಸಿದ ಮೋದದಿಂ ಲಿಂಗನರೇಂದ್ರಂ || ೩೮೬ ||

ಮಂಗಳಂ ಶ್ರೀರಸ್ತು ಸಂಪೂರ್ಣಂ ||

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಪತ್ರಗಳು ಹಿಂದು ಮುಂದಾಗಿವೆ.

1473

ಕೆ.ಬಿ. ೩೭೦ **ರುಕ್ಮಾಂಗದ ಚರಿತ್ರೆ** ಯಕ್ಷಗಾನ

೭.೮" × ೫-೯" ? ?

೩೯ ಪತ್ರ ೨೦ ಪಂಕ್ತಿ ೨೨ ಅಕ್ಷರ

ಆದಿ : ಮಣಿಖಚಿತ ಮಕುಟ ಕುಂಡಲ

ಫಣೆಯೊಳ್ ಧರಿಶಿರುವ ತಿಲುಕ ಕೊರಳ್ಹಾರಗಳೊಳ್

ಗುಣನಿಧಿ ರುಕುಮಾಂಗದ ತಾ

ಝಣು ತಕ್ಕಿಟಯೆನುತ ಬಂದ ಮಂತ್ರಿಯು ಸಹಿತಾ || ....

ತಾಳ ಆದಿ :

ರಾಜಾಧಿ ಭೂಪಾಲ ಚಂದ್ರಾ—ರಾಜಾ ರವಿತೇಜ ಸಾಂದ್ರಾ ಬಂದನೂ|| ಪ ||

ಮಾಟಾದ ಕಿರೀಟವಂನ್ನು ಸೀಟಿನಿಂದ ಧರಶಿ ತಾನೂ ಬಂದನೂ || ೧ ||

x x x x

ವಚನಾ || ಯಿಾ ಪ್ರಕಾರದಲ್ಲಿ ರುಕ್ಮಾಂಗದ ರಾಯನು ಸಭಾಸ್ಥಾನದಲ್ಲಿ ಕುಳಿತುಕೊಂಡು ಧರ್ಮದಿಂ ರಾಜ್ಯಾಧಿಪತ್ಯವಂ ಮಾಡುತ್ತಾ ತಂನ ಮಂತ್ರಿಯಂನ ಕುರಿತು ಮಾತನಾಡುವಂತಾ ಬಗೆ—

ಅಂತ್ಯ : ಅಂದಕಸುರನಿಂದ ಬಂದುಪಟವಳ ನೀನಂದು ಕಾಯ್ದೆ ಶಂಭೋ

ಮಂದರ ನಗವನ್ನು ಅಂದು ನೆಗಪಿ ಗೋವೃಂದವ ಸಲಹಿಕಾ

ಳಿಂದಿಯ ಮತಿಶಿದೇ ನಾರಾಯಣ || ೧ ||

ವರ ಮಾರ್ಕಂಡೇಯಗೆ ಚಿರತರದಾಯುವ
ಕರುಣಿಶಿದೆಯಾ ದೇವಾ
ಸುರರಿಗಭಯವಿತ್ತು ಪರಿದು ಭೂಭಾರವ
ಧರಣಿಯೊಳ್ ದಶರೂಪಧರಿಶಿ ॥ ಮೆರೆವ ಶ್ರೀ ॥ ೨ ॥
ನೃಗಧರ ಧರನೆ ಮೂಜಗದೊಳಧಿಕನೇ
ನಿಗಮ ಗೋಚರ ಮಹಿಮಾ
ಸುಗುಣ ಸುಸ್ಥಿರಕಾಯ ಜಗದಂತರ್ಯಾಮಿಯೆ
ಮಘಪೋಷ ಶ್ರೀಶೇಷ ನಗವಾಸ ಶ್ರೀಶನೇ ॥ ನಾರಾಯಣಾ ॥ ೩ ॥
ಯಿಾಶ್ವರಾ—

ವಚನ—ಯಿಾ ಪ್ರಕಾರವಾಗಿ ಸ್ತೋತ್ರವಂ ಮಾಡಿ ನಮಸ್ಕರಿಸಲು ತ್ರೈಮೂರ್ತಿಗಳು ರಾಯರಿಗೆ ಅಭಯವಂ ಕೊಟ್ಟು ತಂಮ ಲೋಕಕ್ಕೆ ಗಮಿಸಲ್ಲುದ್ಯುಕ್ತರಾಗಲು ಮೋಹಿನಿಯು ಬ್ರಹ್ಮದೇವರಂನ ಕುರಿತು ಮಾತನಾಡುವ ಬಗೆ—

ವಿಷಯ : ರುಕ್ಮಾಂಗದನ ಕಥೆ.

ವಿಶೇಷ : ಪತ್ರಗಳಿಗೆ ಕ್ರಮಾಂಕ ಇಲ್ಲ. ಕಾಗದ ತೆಳುವು. ಮೋಡಿ ಅಕ್ಷರ.

1474

ಕೆ.ಬಿ. ೫	**ರುಕ್ಮಿಣೀ ಸ್ವಯಂವರ**	ಯಕ್ಷಗಾನ
೯.೫" × ೭.೨"	?	?
೧–೩೮ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ॥ ಶ್ರೀ ಶುಭಮಸ್ತು ॥ .... ಸ್ವಯಂವರ – ಕಲ್ಯಾಣ........ದಕ್ಕೆ........
ನಿರಾಲಸ್ಯಮ............ರಾಗಾ ॥ ನಾಟ ॥
ಜಂಪೇ॥....ಗಣ....ಗಜ ದನ ಸುರ ನಿಕರನ್ನು....ರಣ ।
ನಾಗಿನಿ....ಯಾ ಭರಣನ ಜನೋದ್ಧರಣಾ ॥
ಯೋಗಿಜನ....ಲಯ ವೇಣಾಂಕಧರತನ....॥
ರಾಗಾದಿದೋಷ........॥ ಜಯ ಜಯಾ ॥ ೧ ॥

x x x x

ಭಾ....ವತ....ರಾಣದೊಳಗೆ ......ಶಯ....ವಲಿಶಿ ಮೆರದ ಸಂ........ ॥೩॥
ಪೇಳುವೆನ್ನು ಮೂಖಾಂಬಿಕೆ........ಪುದು ವಾಕ್ಯದಿಂ ಯಕ್ಷಗಾನದ.... ॥೪॥

ಅಂತ್ಯ : ನೆರದ ಭೂಪಾಲಕರ....ಜ್ಣಯ ಜಯವೆಂನುತ। .... ಲಾಗಾವಾರಿಯಾರ್ರು
ಶೌರಿಗೆ...ಲೆಗೆ ಶ್ರೀ.... ಗಾರತ್ತಿಯಂನ್ನು....ರುಷಾದಿಂದೆತ್ತಿದರು ॥೩॥

x x x x ॥ ೫೧೧ ॥

........ಗೆ ತಾಳಿಗೆ ಸುಮುಖಿಸಿಗೆ । ಸೀಲಗ್ರೀವಗೆ ಶೈಲಜೆಗೆ । ಫಾಲಾಂಬಾಕನಿಗೆ........ಮಾಧವನಿಗೆ । ಕೊಲ್ಲಾಪುರದ ಮುಖಾಂಬಿಕೆಗೆ ॥ ೩ ॥ ರುಕ್ಮಿಣೀ ಕಲ್ಯಾಣವಾದ ಪ್ರಸಂಗ..............ನಾಮ ಸಂವತ್ಸರದ ಮಾರ್ಗಶಿರ.... ಹುಳ೭........ವಾರದ್ದಿ ವಿಘ....ಗೆ ೫ರಲ್ಲೂ ಸಂಪೂರ್ನವಾದ........ಗಳ ಮಹಾಶ್ರೀ.

ಶ್ರೀ ಕೃಷ್ಣಾರ್ಪಣಮಸ್ತು.

ವಿಷಯ : ಶ್ರೀ ಕೃಷ್ಣರುಕ್ಮಿಣಿಯರ ವಿವಾಹದ ಕಥೆ.

ವಿಶೇಷ : ಸಮಗ್ರ. ಆದರೆ ಬಹಳ ಶಿಥಿಲವಾಗಿದೆ. ಕೆ. ಬಿ. ೧೧೧ ಎಂಬ ಪುಸ್ತಕವನ್ನು ಇದು ಹೋಲುತ್ತದೆ.

1475

ಕೆ.ಬಿ. ೨೦೯	**ರುಕ್ಮಿಣೀ ಸ್ವಯಂವರ**	ಯಕ್ಷಗಾನ
೭.೯" × ೬.೧"	?	?
೧–೩೭ ಪತ್ರ	೧೭ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ರುಕ್ಮಿಣಿ ಸ್ವಯಂವರ ॥ ರಾಗ ॥ ನಾಟಿ ॥ ಜಂಪೆ ॥
ಶ್ರೀಗಣಪ ಗಜವದನ ಸುರಸಿಕರನುತ ಚರಣ
ನಾಗ ನಿಚಯಾಚರಣ ನತ ಜನೋದ್ಧರಣ
ಯೋಗಿಜನ ಹೃನ್ನಿಲಯ ವೇಣಾಂಕಧರತನಯ
ರಾಗಾದಿ ದೋಷಹರ ರಂಜಿತಾಕಾರ ॥ ೧ ॥

x x x x

ಭಾಗವತ ಪೌರಾಣದಲ್ಲಿ ರುಗ್ಮಿಣಿಯ
ಭೋಗಿಶಯನನನು ವಲಿಸಿ ಮೆರದ ಸಂಗತಿಯ ॥ ೮ ॥
ಪೇಳುವೆನು ಶ್ರೀ ಮುಖಾಂಬಿಕೆಯ ಕರುಣದಲಿ
ಪಾಲಿಸಿದ ವಾಖ್ಯದಿಂದೆಕ್ಷಗಾನದಲಿ ॥ ೯ ॥

ಅಂತ್ಯ : ಬಾಲಾರ್ಕ ಪ್ರಭೆಗಳನು ಸೋಲಿಪಗೆ ಮಂಗಳಂ
ವ್ಯಾಳ ಪುರದಲಿ ನೆಲಸಿದಗೆ ಮಂಗಳಂ
ಸೀಲ ಶ್ರೀ ಸೌಮ್ಯನಾಯಕಿ ಅರಸಭಕ್ತ ಕೃಪಾಳು
ಯನಿಸಿದ ಕೃಷ್ಣಗೆ ಮಂಗಳಂ ಜಯ ಮಂ ॥ ೩ ॥ ೪೯೮ ॥
ಮೊದಲಿದ್ದಂದದಿ ಬರೆಯಂ
ದುದನಂಗೀಕರಿಸಿ ನಾನು ಬರೆದಿಹೆ ಸುಜನರ್
ಪದದೊಳ್ ತಪ್ಪಿರೆ ದೋಷವಾ
ನೊದಗಿಸುವದಯುಕ್ತಮೆಂದು ತಿಳಿಯುವದೆಂನೊಳ್ ॥ ೧ ॥

ಶ್ರೀ ರುಕ್ಮಿಣಿ ಕಲ್ಯಾಣವು ಸಂಪೂರ್ಣ ಮಂಗಳ ಮಹಾಶ್ರೀ

x x x x

ಅಂಬ ಜಗದಾಲಂಬೆ ಸುಗುಣಕ
ದಂಬೆ ಶಂಬರವೈರಿ ಶಾಂಭವಿ
ಸಾಂಬ ಚುಂಬಿತ ಮಂಜುಳಾದರೆ
ಬೆಂಬೆ ನಂಬಿಹೆ ಪಾಲಿಸೆನುತಲಿ|| ೩ || ಶ್ರೀ

ವಿಷಯ : ಶ್ರೀ ಕೃಷ್ಣರುಕ್ಮಿಣಿಯರ ವಿವಾಹ.

ವಿಶೇಷ : ಸಮಗ್ರ. ಪತ್ರಗಳನ್ನು ಅಲ್ಲಲ್ಲಿ ಹುಳು ತಿಂದಿದೆ.

1476

ಕೆ.ಬಿ. ೩೫೮/೨ **ರುಕ್ಮಿಣೀ ಸ್ವಯಂವರ** ಯಕ್ಷಗಾನ

೭.೬″ × ೫.೭″ ? ?

೪೮–೧೦೨ ಪತ್ರ ೧೪ ಪಂಕ್ತಿ ೧೮ ಅಕ್ಷರ

ಆದಿ : ಶ್ರೀ ಗಣಾಧಿಪತೆಯೇ ನಮ ಶ್ರೀ ಮುಂಜುನಾಥೇಶ್ವರಾಯ ನಮಃ ||
ಭಾಗವತ ದಶಮಸ್ಕಂದದೊಳಗಣ ರುಕ್ಮಿಣಿ ಸ್ವಯಂವರ ಬರಿಯುವದಕ್ಕೆ ಶುಭಮಸ್ತು–
ರಾ || ನಾ || ಝಂ || ಶ್ರೀ ಗಣಪ ಗಜವದನ ಸುರನಿಕರ ನುತಚರಣ
ನಾಗ ನಿಚಯಾಭರಣ ನತಜನೋದ್ಧರಣಾ
ಯೋಗಿಜನ ಹೃಂನಿಲಯ ವೇಣಾಂಕಧರತನಯ
ರಾಗಾದಿ ದೋಷಹರ ರಂಜಿತಾಕಾರಾ || ೧ ||

ಅಂತ್ಯ : ಪಾತಾಳ ಭೂಯೋಮನಾಥಗೆ
ಮಾತಾಂತ ರಾಜಪಾಲಕಗೆ
ಪೂತನಿಯುಸುವನು ಹೀರಿದ ಮಹಿಮೆಗೆ
ವಾತಶಕಟಗಳ ವತ್ಸವಿನಾಶಗೆ
ಗೋತರಕ್ಷಗೆ ಗೋತ್ರೋದ್ಧಾರಗೆ
ಮಾತುಳಾಂಕಗೆ ಜಯ ಜಯ || ೩ || ಶ್ರೀ
ರುಕ್ಮಿಣಿ ಸ್ವಯಂವರದ ಕಥಾ ಸಂಪೂರ್ಣಂ.

ವಿಷಯ : ಶ್ರೀಕೃಷ್ಣ ರುಕ್ಮಿಣಿಯರ ವಿವಾಹ

ವಿಶೇಷ : ಇದೇ ಕಟ್ಟಿನಲ್ಲಿ ಚಿತ್ರಸೇನನ ಕಾಳಗವೆಂಬ ಮತ್ತೊಂದು ಗ್ರಂಥವಿದೆ.

1477

ಕೆ.ಬಿ. ೩೬೭/೧ ರುಕ್ಮಿಣೀ ಸ್ವಯಂವರ ಯಕ್ಷಗಾನ
೮.೫" × ೬.೮" ? ?
೧–೭೭ ಪತ್ರ ೧೩ ಪಂಕ್ತಿ ೧೬ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ । ಶ್ರೀ ಶಾರದಾ ॥ ಗುರುಭ್ಯೋ ನಮಃ ॥
ಭಾಗವತದೊಳಗ........ರುಕ್ಮಿಣೀ ಸ್ವಯಂವರ ಬರೆಯುವದಕ್ಕೆ ಶುಭಮಸ್ತೂ ॥
ರಾಗಾ ....॥ ಝುಂಪೆ ತಾಳಾ ॥
ಶ್ರೀ ಗಣಪ ಗಜವದನ ಸುರನಿಕರ ನುತಚರಣ
ನಾಗನಿಜಯಾಭರಣ ನತಜನೋದ್ಧರಣಾ
ಯೋಗೀಜನಾಹೃಂನಿಲಯ ವೇಣಾಂಕಧರತನಯ
ರಾಗದಿ ದೋಷಹರ ರಂಜಿತಾಕಾರಾ ॥ ೧ ॥

ಅಂತ್ಯ : ನೆನವ ಭಕ್ತರಿಗನೂದಿನದಿ ಸಂತಸದಿಂದ
ಧನಕನಕ ವಸ್ತುವಾಹನಗಳಂನೂ
ಮನವಲಿದು ಪಾಲಿಸುತ ಮಮತೆಯಲಿರಕ್ಷಿಸುವ
ಮುನಿಜನಾರ್ಚಗೆ ಶ್ರೀಮುಖಾಂಬಿಕೆಗೇ ॥ ೫೨೬ ॥
ಅಂತೂ ರುಗ್ಮಿಣೀ ಸ್ವಯಂವರ ಪಂದಕ್ಕಾಂ ಮಂಗಳಮಹಾ ಶ್ರೀ.

ವಿಷಯ : ಶ್ರೀ ಕೃಷ್ಣರುಕ್ಮಿಣಿಯರ ವಿವಾಹ.

ವಿಶೇಷ : ಪತ್ರಗಳು ಶಿಥಿಲ ಮತ್ತು ಹುಳು ತಿಂದಿದೆ. ಇದೇ ಪುಸ್ತಕದಲ್ಲಿ ವಾಲಿ ಸುಗ್ರೀವರ ಕಾಳಗ ಹಾಗೂ ಚೂಡಾಮಣಿ ಎಂಬ ಇನ್ನೆರಡು ಗ್ರಂಥಗಳಿವೆ. ಈ ಗ್ರಂಥ ಆದ ಮೇಲೆ ಮುಂದಿನ ೭೮ನೆಯ ಪತ್ರದಲ್ಲಿ ಬಭ್ರುವಾಹನನ ಕಾಳಗಕ್ಕೆ ಸಂಬಂಧಿಸಿದ ವಿಷಯವಿದೆ.

1478

ಕೆ.ಬಿ.೩೮೫ ರುಕ್ಮಿಣೀ ಸ್ವಯಂವರ ಯಕ್ಷಗಾನ
೭.೬" × ೬" ? ?
೪೩ ಪತ್ರ ೨೦ ಪಂಕ್ತಿ ೧೬ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ ರುಕ್ಮಿಣೀ ಸ್ವಯಂವರ ಬರಿಯುವದಕ್ಕೆ ನಿರ್ವಿಘ್ನಮಸ್ತು ಶುಭಮಸ್ತು.
ನಾಟಿ ಝುಂಪೆ ॥ ಶ್ರೀಗಣಪ ಗಜವದನ ಸುರನಿಕರ ನುತಚರಣ
ನಾಗನಿಜಯಾಭರಣ ನತಜನೋದ್ಧರಣಾ
ಯೋಗಿ ಹೃಂನಿಲಯ ವೇಣಾಂಕಧರತನಯ
ರಾಗಾದಿದೋಷಹರ ರಂಜಿತಾಕಾರಾ ಪಾಹಿ ಪಾಹಿ ॥ ೧ ॥

x x x x

ಭಾಗವತ ಪೌರಾಣದಲ್ಲಿ ರುಗ್ಮಿಣಿಯಾ
ಭೋಗಿಶಯನನನು ವಲಿಶಿ ನೆರದ ಸಂಗತಿಯಾ || ೧೯ ||
ಪೇಳುವೆನು ಶ್ರೀಮುಖಾಂಬಿಕೆಯ ಕರುಣದಲೀ
ಪಾಲಿಶಿದ ವಾಖ್ಯವಂ ಯಕ್ಷಗಾನದಲೀ || ೨೦ ||

ಅಂತ್ಯ : ನೆರದಿಹ ಭೂಪಾಲಕರು ಜಯಜಯವೆನು
ತಿರಲಾಗಾ ನಾರಿಯರು ಶಿರಿಗೆ
ನೀಲೆಗೆ ಶ್ರೀವರನಿಗಾರತಿಯಂನು ಹರುಷದಿಂದೆತ್ತಿದರೂ || ೫೨೩ ||

x x x x

ನೆನವುತಿಹ ಭಕ್ತರಿಂಗನುದಿನದಿ ಸಂತಸದಿ
ಧನಕನಕ ವಸ್ತುವಾಹನಗಳನೂ
ಮನವಲಿದು ಪಾಲಿಸುತ ಮಮತೆಯಲಿ ರಕ್ಷಿಸುವ
ಮುನಿಜನಾರ್ಚಿತೆ ಶ್ರೀಮುಕಾಂಬಿಕೇಗೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ || ೫೪೦ ||
ಅಂತು ಸಂದಿ ೧ಕ್ಕೆ ೧೦ ವಚನಂಗಳು ಸಹಿತವಾಗಿ ೫೫೦ ಪದಕ್ಕಾಂ ಮಂಗಳ
ಮಹಾಶ್ರೀ ರುಕ್ಮಿಣೀ ಸ್ವಯಂವರ ಸಂಪೂರ್ಣಃ ಶ್ರೀ.

ವಿಷಯ : ಶ್ರೀಕೃಷ್ಣ ರುಕ್ಮಿಣಿಯರ ವಿವಾಹ.

ವಿಶೇಷ : ಸಮಗ್ರ. ಉತ್ತಮ ಸ್ಥಿತಿ. ಪತ್ರಗಳ ಕ್ರಮಸಂಖ್ಯೆಯಿಲ್ಲ.

1479

ಕೆ.ಬಿ. ೪೧೧	**ರುಕ್ಮಿಣೀ ಸ್ವಯಂವರ**	ಯಕ್ಷಗಾನ
೭.೯" × ೬"	?	?
೪೮೮–೫೨೩ ಪತ್ರ	೨೧ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ ಗುರುಭ್ಯೋಂ ನಮಃ ರುಕ್ಮಿಣೀ ಸ್ವಯಂವರ ಬರೆಯುವದಕ್ಕೆ ನಿರ್ವಿಘ್ನ
ಮಸ್ತು || ನಾಟ || ಝಂಪೆ ||
ಶ್ರೀಗಣಪ ಗಜವದನ ಸುರನಿಕರ ನುತಚರಣ
ನಾಗನಿಚಯಾಭರಣ ನತಜನೋದ್ಧರಣಾ
ಯೋಗಿ ಹೃಂನಿಲಯ ವೇಣಾಂಕಧರತನಯ
ರಾಗಾದಿ ದೋಷಹರ ರಂಜಿತಾಕಾರಾ ಪಾಹಿ ಪಾಹಿ || ೧ ||

x x x x

ಭಾಗವತ ಪೌರಾಣದಲ್ಲಿ ರುಕ್ಮಿಣಿಯಾ
ಭೋಗಿಶಯನನ್ನುವಲಿಶಿ ನೆರದ ಸಂಗತಿಯಾ || ೧೯ ||

ಪೇಳುವೆನು ಶ್ರೀಮುಖಾಂಬಿಕೆಯ ಕರುಣದಲೀ
ಪಾಲಿಶಿದ ವಾಖ್ಯವಂ ಯಕ್ಷಗಾನದಲೀ || ೨೦ ||

ಅಂತ್ಯ : ನೆರದಿಹ ಭೂಪಾಲಕರು ಜಯ ಜಯವೆನು
ತಿರಲಾಗಾ ನಾರಿಯರೂ ಸಿರಿಗೆ ನೀಲೆಗೆ ಶ್ರೀ
ವರನಿಗಾರತಿಯಂನು ಹರುಷದಿಂದೆತ್ತಿದರೂ || ೫೨೩ ||

x x x x

ನೆನವುತಿಹ ಭಕ್ತರಿಂಗನುದಿನದಿ ಸಂತಸದಿ
ಧನಕನಕವಸ್ತು ವಾಹನಗಳಂನೂ
ಮನವ ಪಾಲಿಸುತ ಮಮತೆಯಲಿ ರಕ್ಷಿಸುವ
ಮುನಿಜನಾರ್ಚಿ ಶ್ರೀ ಮುಕಾಂಬಿಕೇಗೇ || ೫೪೦ || ಶ್ರೀ
ಅಂತ್ತು ಸಂದಿ ೧ಕ್ಕೆ ೧೦ ವಚನಗಳು ಸಹಿತವಾಗಿ ೫೫೦ಪದಕಾಂ ಮಂಗಳ
ಮಹಾ ಶ್ರೀ ರುಕ್ಮಿಣೀ ಸ್ವಯಂವರ ಸಂಪೂರ್ಣ.

ವಿಷಯ : ಶ್ರೀ ಕೃಷ್ಣನನ್ನು ರುಕ್ಮಿಣಿಯು ವರಿಸಿದ ಕಥೆ.

ವಿಶೇಷ : ಸಮಗ್ರ, ಉತ್ತಮ ಸ್ಥಿತಿ.

1480

ಕೆ.ಎ. ೧೯೦/೧೧	**ರುದ್ರಭಾರತ**	ಗದ್ಯ
೧೨.೬″ × ೮″	ಚನ್ನಬಸವದೇವರು	ಸು. ೧೨೬೦
೭೯–೧೧೫ ಪತ್ರ	೨೪ ಪಂಕ್ತಿ	೩೧ ಅಕ್ಷರ

ಆದಿ : ರುದ್ರಭಾರ್ತ್ತವಂ ಬರೆಯುವುದಕ್ಕೇ ಶುಭಮಸ್ತು ||
ಪರಶಿವನು ಶಿಂಹಾ್ಮಸನರುಡನಾಗಿ ಯಿರುತ್ತಿರ್ಪ ಸಮೆಯದಲ್ಲಿ ಹರಿ ಸುರಾದಿ ಬ್ರಂಹ್ಮ ದೇವತೆಗಳು ವಡ್ಡೋಲಗಂಗೊಟ್ಟಿರಲೂ ನಂದಿನಾಥ ದೇವರು ಆ ಪರಶಿವ ಮೂರ್ತಿಗೆ ನಮಸ್ಕಾರವಂ ಮಾಡಿ ಭಯಭಕ್ತಿಯಿಂ ಕಿಂಕುರ್ವಾಣದಿಂ ಬಿಂನ್ನೈಸುತಿರ್ದನದೆಂತೆಂದೊಡೆ |
ಯಲ್ಯೆ ದೇವ ದೇವ ಶಿಕಾಮಣಿ ದೇವ ಗಿರಿಜಾರಮಣ ಯಲೆ ಪರಾತ್ಪರ ಮೂರ್ತಿಯೆ ಶ್ರೀರುದ್ರಭಾರಥದಲ್ಲಿ ಮೂಲತತ್ವ ಹ್ಯಾಗೆ ವುತ್ಪತ್ಯವಾಯಿತು. ಸರ್ವಮೂಲಬೀಜಾಂಕುರಂಗಳು ಹ್ಯಾಗೆ ಜನಿಸಿದವು ಪಂಚತತ್ವಂಗಳು ಹ್ಯಾಗೆ ನಿರ್ಮಿತವಾದವು.

ಅಂತ್ಯ : ೫೬ ದೇಶಂಗಳಿಗೆ ಮುಖ್ಯ ಕಲ್ಯಾಣಪುರದ ಬಿಜ್ಜಾಳೈಕ್ಯ ನೃಪಾಲನ ಮಂತ್ರಿ ಬಸವೇಶ್ವರನು ಆ ಶಾಂಬಲೋಕವಂನೆ ಮರ್ತ್ಯಲೋಕಕ್ಕೆ ತಂದು ೭೦೭೦ ಅಮರಗಣಂಗಳು ಸಹಿತ ಯಲಪವಾಡವಂ ಗೆಲಿದು ಲಕ್ಷದ ವ್ಯಾಲೆ ತೊಂಬ

ತ್ತಾರು ಸಾವಿರ ಜಂಗಮಕ್ಕೆ ಯಿಶ್ಟಾಪದಾರ್ತವಂ ನೀಡಿ ಮರ್ತ್ಯಕ್ಕೆ ಭಕ್ತಿಯಂ ಪಸರಿಸಿ। ದ್ವಿತೀಯ ಶಂಬುನಾಮ ದೇಹವನುಳ್ಳ ಸಂಗನ ಬಸವಂಣನ ದಿವ್ಯ ಶ್ರೀಪಾದಪದ್ಮಕ್ಕೆ ಅಹೋರಾತ್ರಿಯಲ್ಲಿ ಶರಣೆಂದು ಬದುಕಿದೆನು ಕಣಾ ಕೂಡಲ ಚಂನಸಂಗೈಯ್ಯ ಯಿಂತೀ ಚಂನಬಸವದೇವರು ನಿರೂಪಿಸಿದ ಶ್ರೀರುದ್ರಭಾರಥ ಶ್ರೀಷ್ಟಿ ಸಮಾಪ್ತಂ ಮಂಗಳಮಹಾ ಶ್ರೀ ॥

ವಿಷಯ : ಸೃಷ್ಟಿ ವಿಚಾರ.

ವಿಶೇಷ : ಈ ಪುಸ್ತಕದಲ್ಲಿ ಸೋಮೇಶ್ವರಶತಕ, ಸಂಕ್ಷೇಪರಾಮಾಯಣ, ಸಂಕ್ಷೇಪ ಭಾರತ, ಧರ್ಮನೀತಿ, ವಿಭೀಷಣನ ಬುದ್ಧಿ, ಗೋವಿನ ಹಾಡು, ವಿಷ್ಣುಭಕ್ತಿ ಸಾರ, ಸುಭಾಷಿತಗ್ರಂಥ, ನಳಚರಿತ್ರೆ, ಹರಿಶ್ಚಂದ್ರೋಪಾಖ್ಯಾನ ಈ ಕೃತಿಗಳಿವೆ.

1481

ಕೆ.ಬಿ. ೪೮೬/೨	**ರುದ್ರಮುನಿಸ್ವಾಮಿಗಳ ಕಾಲಜ್ಞಾನ**	ವಚನ
೮" × ೬.೫"	ರುದ್ರಮುನಿಸ್ವಾಮಿ	?
೧–೨೦ ಪತ್ರ	೧೩ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ x x x x ಶ್ರೀರುದ್ರಮುನಿಸ್ವಾಮಿಗಳು ನಿರೂಪಿಸಿದ ಕಾಲಗ್ನಾನ ಬರಿಯುವುದ್ದಕ್ಕೆ ಶುಭಮಸ್ತು ॥ ಶಿವಪ್ರಸಾದದ ವಚನ ಬರಿಯುವುದಕ್ಕೆ ಶುಭಮಸ್ತು ॥ ಶ್ರೀಪರ್ವತದಲ್ಲಿ ವುದ್ಭವಿಶಿತ್ತೂ ॥ ಶ್ರೀ ಗುರುವೇ ಗತೀ ॥ ನಿರಂಜನ । ಆದಿ । ಅನಾದಿ । ಅನಂತ । ಅರ್ಬುದ । ಕಮಂಥ । ಕಾಂಡಜ । ತಾರಜ । ಬಿಂನ್ನಜ । ಬಿಂನಾಯುಕ್ತ । ಮಣಿರಣ । ಮಂನ್ಯಾರಣ । ವಿಶ್ವಾರಣ ವಿಶ್ವಾವಸು । ವಿಮಾಂಗ । ಅಲಂಕ್ರುತ । ಕ್ರುತಾಯುಗ । ತ್ರೇತಾಯುಗ ದ್ವಾಪರಾಯುಗ । ಕಲಿಯುಗದಲ್ಲಿ ಯಿಂತ್ತಿ ಯಿಪ್ಪತ್ತೊಂದು ಯುಗದಲ್ಲಿ ನಂಮ್ಮ ಬಸವಂಣನೆ ಬಕ್ತ । ಪ್ರಭುದೇವರೆ ಜಂಗಮವೂ ಯೆಂದೆಂಬ ಬೇಧ ವಿಲ್ಲದೇ ತಪ್ಪದೇ ನೋಡಿರೈಯಾ । ಯಿಂತೆಂಬ ಬಕ್ತಿಯಂ ಪ್ರಕಾಶವಂನುಂಟು ಮಾಡಬೇಕೆಂದು ಮುಂಡಿಗೆಯ ಮಾದರಸರು ಮದಮಾಂಬಿಕೆಯರ ಚಿದ್ಗರ್ಭದಲ್ಲಿ ವುದ್ಭವಿಶೀ ತಂಡತಂಡದ ನಾಮಾಂಕಿತ ಕೈಗೊಂಡು ಬಸವಪ್ರೀಯ ಕೂಡಲ ಚಂನಬಸವೈಯ ದಿವ್ಯ ಶ್ರೀಚರಣಾರವಿಂಧಕೆರಗಿಧನೂ ॥

ಅಂತ್ಯ : ಸುರರಿಗೆ ನರರಿಗೆ ಪೇಳಿದ ಕಾಲಗ್ನಾನ ಸಂಪೂರ್ನ । ಯಿದು ವುದಯ ಮಧ್ಯಾನ ಸಯಂಕಾಲದಲ್ಲಿ ಪಟಿಶಿದವರಿಗೆ ಧನಧಾಂನ್ಯ ಮಹದೈಶ್ವರ್ಯವು ಚಂದ್ರನ ಕಂಡ ಅಂಭುಧಿಯಂತ್ತೆ ದಿನದಿನಕ್ಕೆ ಗುರುಕ್ರುಪೆಯಿಂದ ಬಕ್ತ ಮಹೇ ಶ್ವರರು ಸುಬುಧಿಯಿಂದ ಮುಂದಣಕಾಲ ಸೂಚನೇ ॥ ತಿಳಿವದು ಯಿದು ಸತ್ಯವು ಮಂಗಳ ಮಹಾ ಶ್ರೀ ॥....ಯಿ ಕಾಲಗ್ನಾನ ಹಂಪೆ ಸ್ತಳದಿಂದ ಕಂಚಿ

ಪಟ್ಟಣಕ್ಕೆ ಪಾವಾಡ ಶೆಟ್ಟಿಯವರಲ್ಲಿ ಯತ್ತಿನ ಕೊಟ ಬಂದು ಯಿದ್ದ ಕಾಗು ಶಿವಂಣನವರು ವಂದಂತಾದ್ದು । ಶುಭಮಸ್ತು ॥

ವಿಷಯ : ರುದ್ರಮುನಿಸ್ವಾಮಿಗಳು ನಿರೂಪಿಸಿರುವ ಭವಿಷ್ಯವಾಣಿ.

ವಿಶೇಷ: ಅಸ್ಫುಟಾಕ್ಷರ. ಈ ಗ್ರಂಥಾರಂಭಕ್ಕೆ ಮೊದಲು ಕೆಲವು ಶುದ್ಧ ಪತ್ರಗಳಿವೆ. ಇದೇ ಪುಸ್ತಕದಲ್ಲಿ 'ತ್ರಿಪುರದಹನದ ಕಥೆ' ಎಂಬ ಮತ್ತೊಂದು ಕೃತಿ ಇದೆ.

1482

ಕೆ. ೬೨೪	**ರೇಣುಕ ವಿಜಯ**	**ಚಂಪು**
೭.೮" × ೨.೪"	ಸಿದ್ಧಲಿಂಗದೇಶಿಕ	ಸು. ೧೭೦೦
೧–೯೯ ಪತ್ರ	೧೧ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ರೇಣುಕ ವಿಜಯಂ ಶುಭಮಸ್ತು ॥
ಶಾರ್ದೂಲ ॥ ಶ್ರೀಮಚ್ಚಾಂಭವ ಚಕ್ರವಹ್ನಿಶಶಿಸೂರ್ಯಾವೃತ್ತ ಮಧ್ಯೇ ಗತಂ
ಕಾಮಾಕಾಮ ವಿದೂರ ಭಕ್ತಗಣಸಂತೋಷಾಬ್ಧಿ ಚಂದ್ರೋದಯಂ
ರಾಮಾಂಗಂ ರಸಿಕಂ ರಮೇಶನಮಿತಂ ತ್ವಾಂ ವಂದೇಹಂ ಸರ್ವದಾ
ಸೋಮಾದಿತ್ಯ ಸುಪಾವಕಾಂಭಕಮುಮಾಕಾಂತೇಷ್ಟಲಿಂಗೇಶ್ವರಂ ॥ ೧ ॥

x x x x

ಚಂ॥ ಬಸವನಾಮವೆನ್ನ ರಸನಾಗ್ರದೊಳೋದುತ ವಾತನಂಗಮಂ
ಮುಸಗಿದ ಕಾಂತಿಯಿಂದಮುಮನೀಕ್ಷಿಸುತಂತರ ದ್ರುಷ್ಟಿಯಿಂದಲುಂ
ಸಸಿನದಿ ರೇಣುಕೇಶ್ವರನ ಸತ್ಕೃತಿವೇಳೆ ದ್ವಿತೀಶನಾದವಂ
ರಸಿಕರ ಚಿತ್ತಕೊರ್ಮಡಿಯಿದಾಗಲಿಕಿರ್ಮಡಿಯಿಂದಲಾಗಿಪಂ ॥ ೧೧ ॥

x x x x

ಧರೆಗತಿ ಶೋಭನಂ ಮಿಗಲು ತೋರದೊಪ್ಪುವದೇವ ಗ್ರಾಮದೊ
ಳ್ಗರುವದ ಭೀರ ತಾನೆಯಹುದೆಂದೆನಲೆಲ್ಲರು ವೀರಣಾರ್ಯರಾ
ಪರತರ ಪುತ್ರ ತಾನೆ ಬಸವೇಶ್ವರನು ರೇವಣಸಿದ್ಧ ಕಾವ್ಯಮಂ
ಭರದೊಳೆ ಕೇಳೆ ಪೇಳಿದನು ಚಂನವೃಷೇಂದ್ರನದೊಂದು ಲೀಲೆಯಿಂ ॥ ೧೭ ॥

ಅಂತ್ಯ : ಮಾತೆ ಗಿರೀಂದ್ರಜಾತೆ ಸಕಲಾಗಮಸಂತತಿಸ್ತೋತ್ರಸಂಯುತೇ
ಖ್ಯಾತಿಪುನೀತೆ ಶಂಕರಸಮನ್ವಿತೇ ಪಾತಕ....ಜಾತಸಂಹತೇ
ನೀತಿನಿರಾಮಾಯಾನ್ವಿತೆ ಕಲಾತತಿ ಸಂಗದೊಳಂ ಸಮಾವೃತೇ
ಓತುರದಿಂದಲೆನ್ನ ಪರಿಪಾಲಿಸು ಶಾಂಭವಿ ಸರ್ವಮಂಗಳೇ ॥ ೧೦೭ ॥

ಗದ್ಯ ॥....ದು ಪರಮ ಪರಮ ಪರಾಪರ ಸಚ್ಚಿದಾನಂದನೀತ....ಪರಿಪೂರ್ನ್ನ ಪ್ರಭಾ ಪುಂಜರಂಜಿತಮಹದಿಷ್ಟ....ಗ ಪ್ರೇಮಾಸ್ಪದ ಪ್ರಮಥರುದ್ರ ಭಕ್ತಗಣಸ್ವಾತ್ಮಾ

ನಂದಸುದಾಬ್ಧಿವರ್ದ್ಧನ ಚಿಚ್ಚೆಂದ್ರೋಯ ರೇಣುಕವಿಜಯ ಮಹಾಕೃತಿಯೊಳ್....ಬಂದನ ರುದ್ರಮುನಿ ದೇವೋತ್ಪತ್ಯ ಕಲ್ಲಿದೇವ ದೀಕ್ಷಾವಿದಾನ ರೇಣುಕ ಶಿವೈಕ್ಯವರ್ನನವುಷ್ಟಮಾ ಪರಿಚೇದಃ ಸಮಾಪ್ತ ॥ ಶ್ರೀ ॥

ವಿಷಯ : ರೇವಣಸಿದ್ಧೇಶ್ವರ ಚರಿತ್ರೆ.

ವಿಶೇಷ : ಕೆಲವು ಗರಿಗಳಲ್ಲಿ ಮಾತ್ರ ಹುಳು ಹೊಡೆದಿದೆ. ೯೮ನೆಯ ಗರಿಯ ಒಂದು ಪಾರ್ಶ್ವದಲ್ಲಿ ಸ್ವಲ್ಪ ಭಾಗ ಬರಹವಿಲ್ಲ. ೯೯ನೆಯ ಗರಿಯು ಶಿಥಿಲ. ೬೦ನೆಯ ಗರಿ ಮುರಿದು ತುಂಡಾಗಿದೆ.

1483

ಕೆ.ಬಿ. ೪೭೪	ರೇವಣಸಿದ್ಧ ಚಾರಿತ್ರ	ಹಾಡು
೮.೩" × ೬.೬"	ಮಲ್ಲಯ್ಯ	?
೧-೩೦ ಪುಟ	೧೨ ಪಂಕ್ತಿ	೧೬ ಅಕ್ಷರ

ಆದಿ : ಶಿವಕವಿ ಮಲ್ಲಯ್ಯಕೃತ ರೇವಣಸಿದ್ಧ ಚಾರಿತ್ರವು

ರಾಗಾ ॥ ತ್ರಾಹಿ ಹಿಮಕರ ಮೌಳಿ
ತ್ರಾಹಿ ಕರುಣಾಪಾಂಗ
ತ್ರಾಹಿ ಶಿವ ತೆಲುಗ (ತರುಳ) ಬಾ
ಳಿನ ಸಿದ್ಧರಾಯ ತ್ರಾಹಿ ॥ ಪಲ್ಲ ॥

ಮತ್ಸ ಕೂರ್ಮನು ವರಹ ನರಸಿಂಹರೆಂದೆಂಬ
ಪಕ್ಷ ವಾಮನ ರಾಮು ವಸುದೇವನಣುಗ
ಯೀಕ್ಷಿಸಲು ಬಲಭದ್ರ ಬುದ್ಧ ಕಲ್ಕ್ಯವರಿಂದಾ
ಳೀ ಕ್ಷಿತಿಯೊಳ್ ನುತಿವಡದೇ ನಿಗಮಕ್ಕಭೇದ್ಯ ತ್ರಾಹಿ ॥ ೧ ॥

x x x x

(೬ನೆಯ ಪುಟ) ಶ್ರೀರಾಗಾ ॥ ವಂದಿಸುವೆನು ಗುರುಪಾದಪದ್ಮಕೆ
ವಂದಿಸುವೆನು ಕವಿಗಳ ಚರಣಕೆ

x x x x

ಕಂದ ಕವಿ ಮಲ್ಲದೇವಗೊಂದಿಸಿ
ಪೇಳ್ವೆನೀ ಕೃತಿಯ ಚಂದ್ರಶೇಖರ x x x

ಅಂತ್ಯ : ತೆಲುಗ........................ದ್ದನು

ದೇಶ ದೇಶವ ತಿರುಗುತ್ತ ಲೇಸ ಮಾಡುತ್ತ ಬಹಳ ಬಡವರ
ಘಾಸಿಯ ಮಾಡುತ್ತ ತನ್ನ ಜರಿದವರ
ಈಶ ಮಂಗಳವಾಡದ ಪಟ್ಟಣಕ್ಕೆ ಮುನಿ
ವೇಷದಿಂ ಬಂದನು ರಾಯ ಸಮೀಪಕ್ಕೆ ॥ ಶ್ರೀ ॥

ಸಂಪೂರ್ಣಂ

ವಿಷಯ : ರೇವಣಸಿದ್ಧರ ಚರಿತ್ರೆ.

ವಿಶೇಷ : ' ಹಾವೇರಿ ಸದ್ಧರ್ಮ ದೀಪಿಕಾ ಪ್ರಕಾಶಕರಿಂದ ಶ್ರೀಮಾನ್ ಚನ್ನಮಲ್ಲಿ ಕಾರ್ಜುನಪ್ಪನವರಿಂದ ಬಂದಿದ್ದ ಪ್ರತಿಯಮೇಲೆ ಕಾಪಿಯಾಗಿದೆ ' ಎಂದು ಮೊದಲಿನ ಪುಟದ ಪ್ರಾರಂಭದಲ್ಲಿದೆ.

1484

ಕೆ.ಬಿ. ೨೫೪	**ರೇವಣಸಿದ್ಧೇಶ್ವರ ಚಾರಿತ್ರ**	ಭಾಮಿನೀಷಟ್ಪದಿ
೭.೯"×೬."೬	ಮಲ್ಲ	?
೧-೧೪ ಪತ್ರ	೨೫ ಪಂಕ್ತಿ	೩೦ ಅಕ್ಷರ

ಆದಿ : 'ರೇವಣಸಿದ್ಧೇಶ್ವರ ಕಾವ್ಯ ಶೈವ ಸಮಂಥ x x ರೇವಣ ಸಿದ್ಧೇಶ್ವರನ ಕಾವ್ಯ ಬರೆವುದಕ್ಕೆ ಶುಭಮಸ್ತು
ರಾಗ ಭಾಮಿನೀಷಟ್ಪದಿ ॥ ಕೇಳು ಜನಮೇಜಯ ಧರಿತ್ರಿಯ
ಮೇಲೆ ರೇವಣಸಿದ್ಧನೈನದಿತ್ಯ
ಭಳ ಬಡವರ ನೋಡುತಲಿ ಕೃಪೆಯ ಮಾಡಿ ನಡೆತಂದಾ ॥
ಪದನೂ ॥ ಕಾಲಲಂದಿಗೆ ಪಲ್ಲವಿಟ್ಟಳು
ವ್ಯಾಲೆ ಪಟ್ವಾವಳಿಯನುಟ್ಟಳು
ಮೇಲು ಮುತ್ತಿನ ವಜ್ರ ಮೂಗುತಿ ಕೊರಳ ಪದಕಗಳೂ
ಬಾಲೆ ಸರಸ್ವತಿ ಕಯ್ಯ ಕಂಠವು
ತಾಳ ಪತ್ರದ ಮೇಲೆ ಬರವುತ
ವಂದಿಸಿದ ಕವಿ ಮಲ್ಲ ಬೇಡಿದ ವರವ ಕೃಪೆಯ ಮಾಡೆಂದು ॥ ೧ ॥

ಅಂತ್ಯ : ಆದಿ ಮಹಿಮೆಯ ಚರಿತೆಯನು
ಯಿದೆ ಭೇದವಿಲ್ಲದೆ ಕೇಳಿದವರಿಗೆ
ಭೂದಾನ ಗೋದಾನ ಕಂನ್ಯಾದಾನ ಫಲಸಿದ್ಧಿ
ನಾದಪ್ರಿಯನು ಜಾಲವಾದಿಯು
ವೇದವಂದಿತ ಶಂಕರ ಶಂಭುವ
ಪಾದಪದ್ಮದ ಕೃಪೆಯ ವರಕವಿ ಮಲ್ಲು ಪೇಳಿದನೂ ॥ ೪೮ ॥
ಅಂತು ಸಂಧಿ ೭ ಕ್ಕಾಂ ಪದನು ೩೨೬ ಕಾಂ ಮಂಗಳಮಹಾ ಜಯಮಂಗಳ.

ವಿಷಯ : ರೇವಣಸಿದ್ಧೇಶ್ವರನ ಚರಿತ್ರೆ.

ವಿಶೇಷ : ಸಣ್ಣಕ್ಷರ.

1485

ಕೆ.ಬಿ. ೨೮೮/೧ **ರೇವಣಸಿದ್ಧೇಶ್ವರ ಪುರಾಣ** ವಾರ್ಧಕಷಟ್ಪದಿ

೭.೭" × ೬.೨" ಚತುರ್ಮುಖ ಬೊಮ್ಮರಸ ಸು. ೧೫೦೦

೧–೧೩೬ ಪತ್ರ ೧೧ ಪಂಕ್ತಿ ೨೮ ಅಕ್ಷರ

ಆದಿ : ಶ್ರೀ ರೇವಣ ಸಿದ್ಧೇಶ್ವರ ಪುರಾಣ ಪ್ರಾರಂಭಃ x x x x ಕನ್ನಡ ಪದ್ಯಕಾವ್ಯ
ಶ್ರೀಮದಮೃತಾಂಶು ಲೇಖಾಮರುದ್ಗಂಭೀ
ರಾಮ ಪಿಂಗಲ ಘನ ಜಟಾಮಕುಟ ಸಾಮ ಸು
ಪ್ರೇಮ ಕಾತ್ಯಾಯನಿ ವಾಮಾಂಗಕರುಣಾ....ವಿಲಸದಪಾಂಗಾ
ಶ್ಯಾಮಗಳ ಕಾಮಹರ ಭೀಮ ಸುತ್ರಾಮ ಮು
ಖ್ಯಾಮರಸ್ತೋಮ ನತ ಹಿಮಗಿರಿಮಂದಿರ ಪಿ
ತಾಮಹಾರ್ಚಿತ ಶಾಂತಮಲ್ಲಿಕಾರ್ಜುನ ಜಯ ಮಹಾಮಹಿಮ ಮಂಗಳಕರಾ ॥ ೧ ॥

x x x x

ಈ ಕೃತಿಯ ಪೆಸರು ಸಿದ್ಧೇಶ್ವರ ಪುರಾಣವಿಂ
ತೀ ಕೃತಿಗೆ ಪತಿ ಶಾಂತಮಲ್ಲಿಕಾರ್ಜುನಲಿಂಗ
ನೀ ಕೃತಿಯ ಪೇಳಿಸಿದನತ್ಯಧಿಕ ವೀರಶೈವಾಚಾರ್ಯ ಕುಲವರ್ಯನೂ
ಶ್ರೀಕಂಠನಾಕಾರಮಂ ತಳೆದ ವಿತತ ಮಹಿ
ಮಾಕರಂ ಬಾಲ ಸಿದ್ಧೇಶ ಯತಿರಾಜನೆನ
ಲೀ ಕಾವ್ಯವಾವ ಶಿವಶರಣರಂ ತಲೆದೂಗಿಸದು ಧರತ್ರೀತಳದೊಳೂ ॥ ೩೧ ॥

x x x x

ಗುರುಶಾಂತ ಮಲ್ಲಿಕಾರ್ಜುನ ಪಾದಪದ್ಮಮಧು
ಕರನು ಕಾಶ್ಯಪಗೋತ್ರಜಾತಸು ಯಜುರ್ವೇದ
........ಮಾಯಣಾತ್ಮೋದ್ಭವ ಶೈವಾಗಮಜ್ಞನು ಕಲಾಭಿಜ್ಞನೂ
ಪರಮಬೋದಾಯನ ಮಹಾಸೂತ್ರ ಶೋಭಿತನು
ಸರಸ ಗೀರ್ವಾಣ ಭಾಷಾಯುತ ಕರ್ನಾಟ
ವರ ವಚಶ್ರೀಲಸಿತ ವದನ ತಾಮರಸ ಬೊಂಮರಸ ಪೇಳಿದುದೀ ಕೃತಿ ॥ ೩೮ ॥

ಅಂತ್ಯ : ಕವಿಸಭಾಮಾಣಿಕ್ಯದೀಪ ಕರ್ಣಾಟ ದೇ
ಶ ವಿಶೇಷಾ ಭಾಷಾಪ್ರವೀಣ ಶೈವಾವನಿ
ಧಿವಿ...........ಕವಿಬ್ರಹ್ಮಸಾನಯಕೃತಿರಸಾ
ವಿವರಿಪೊಡೆ ಜೇನೆಯ್ಯ ಹೂರದಂತಮರ್ದಸಾ
ಲುವೆಯಂತೆ ರಸದಾಳಿರಸದ ಪೆರ್ಬಾನಲಂತೆ
ಕಿವಿಗುಡಿತೆಯಿಂದೆಂಟಬಲ್ಲ ರಸಿಕರಿಗೆ ಕಡುಸವಿಯೆನಿಸಿದು ಧರೆಯೊಳೂ ॥೩೯॥

ಅಂತು ಸಂಧಿ ೧೩ಕ್ಕಾಂ ಪದನು ೫೬೫ಕ್ಕಾಂ ಮಂಗಳಮಹಾ ಶ್ರೀ
ಶ್ರೀ ಸಿದ್ಧೇಶ್ವರ ಪುರಾಣವು ಸಮಾಪ್ತವಾದುದು.

ವಿಷಯ : ರೇವಣ ಸಿದ್ಧೇಶ್ವರನ ಕಥೆ.

ವಿಶೇಷ : ಕೆಲವು ಕಡೆಗಳಲ್ಲಿ ಪದಗಳು ಲುಪ್ತವಾಗಿವೆ. ಅಕ್ಷರಗಳು ಸ್ಫುಟವಾಗಿವೆ. ಈ ಗ್ರಂಥದ ಜೊತೆಯಲ್ಲಿ ಗುರುರಗಳೆ ಎಂಬ ಗ್ರಂಥವಿದೆ.

1486

ಕೆ. ೫೬೩ | **ಲಕ್ಷಣೆ ಸ್ವಯಂವರ** | ಯಕ್ಷಗಾನ

೧೦.೫" × ೧.೯" | ? | ಸು. ೧೫೦೦

೧–೧೧ಪತ್ರ | ೯ ಪಂಕ್ತಿ | ೪೫ ಅಕ್ಷರ

ಆದಿ : ಲಕ್ಷ್ಣೆ ಸ್ವಯಂವರ ಬರವುದಕ್ಕೆ ಶುಭಮಸ್ತೂ ||
ವೃತ್ತಾ || ಶ್ರಿಂಕಾಂತಂ ಕಮಲಜಮಿತ್ರ ಕೋಟಿಧಾಮಂ
ನಾಕೇಶಾಮರ ವಿರೋಧಿ ಪದ್ಮಸೋಮಂ
ಗೋಕರ್ನಾಭರಣಸಖಂ ಸಪುಂಣ್ಯನಾಮಂ
ಲೋಕೋಶಾರ್ಚಿತ ಚರಣಂ ಭಜಾಮಿ ಶಾಮಂ ||

ರಾಗಾ | ಬೇಗಡೆ || ತ್ರಿಉಡೆ ||
ಭುಜಗಭೂಷಣ ವಿಘ್ನೇಶ್ವರನ ಸಂಸ್ತುತಿಸೀ
ಭರ್ಗನ ಚರಣ ಪಂಕೇಜಕೆ ನಮಿಸಿ
ಅಜಘನಯಾನಾ ದಿವಿಜರ ಸ್ಮರಿಸೀ
ಅಂಬಿಕವಾ ಸರಸ್ವತಿಯರ ಭಜಿಸೀ || ೧ ||
ಶುಕಮುನಿಪನ ಪಾದಪದ್ಮಕೆ ಮಣಿದೂ
ಸದ್ಗೂರು ಕವಿಗಳ ಮನದಲಿ ನೆನದೂ
ಮಕರಕೇತನಪಿತ ಲಕ್ಷಣೆಗೊಲಿದೂ
ಮದುವೆಯಾದುದ ಪೇಳ್ವೆ ಸಂತಸವೆರದೂ || ೨ ||
ವೇದ ಪುರಾಣ ಶಾಸ್ತ್ರಾದಿಗಳಂನ್ನೂ
ಕೋವಿದ ವಿತ್ಪಂನ್ನನಲ್ಲಿನನಿಂನ್ನೂ
ಶ್ರೀಧರ ವೆಂಕಟ ನುಡಿಸಿದ ನುಡಿಯಂನ್ನೂ
ಸ್ರುಜಿಸುವೆ ಕಂನಡವಾಣಿಯೊಳಿದನೂ || ೩ ||

ಅಂತ್ಯ : ಭಾಮಿನಿ || ಸುರರುಘೇಘೇಯನಲು ವಾದ್ಯ
ಸ್ವರದಿ ವಿಪ್ರರ ಮಂತ್ರಘೋಷದಿ
ಮುರಹರಗೆ ಲಕ್ಷಣೆಯ ಧಾರೆಯನೆರೆದನಾ ಜನಪಾ

ಸ್ಮರನ ಪಡದವಳಾದಿಯಷ್ಟವು
ತರುಣಿಯರ ಮಾಧವನೊಡನೆ ಕು
ಳ್ಳಿರಿಸಿ ದಿವ್ಯಾರತಿಯವೆಳಸಿದರೈ ಮೃಗಾಕ್ಷಿಯರೂ ॥
x x x x x ॥ ಶೋ ॥ ೨ ॥ ಶಂಕರಮಿತ್ರಗೆ ಸಂನ್ಮಂಗಲಗೆ
ಲಂಕಾಧಿಪಶಗೆ ಜಾಂನಕಿಗೆ
ವೆಂಕಟರಮಣನಿಗೆ ಪದ್ಮಾವತಿಗೆ
ಬಿಂಕದಿ ಪೂರ್ನ ಶಶಾಂಕಯರೂ
ಕುಂಕುಮದಾರತೀಯಾ ಬೇಳಾಗೀರೇ ॥ ಶೋಭಾನೇ ॥
ಅಂತು ಪದ ೧೨೫ ॥

ವಿಷಯ: ಶ್ರೀಕೃಷ್ಣನು ಲಕ್ಷಣೆಯನ್ನು ವರಿಸಿದ ಕಥೆ.
ವಿಶೇಷ: ೮, ೯ ಕ್ರಮಾಂಕದ ಎರಡೆರಡು ಪತ್ರಗಳಿವೆ.

1487

ಕೆ. ೨೦೮/೩	**ಲಕ್ಷ್ಮೀಕಲ್ಯಾಣ**	ಯಕ್ಷಗಾನ
೧೬.೮″ × ೧.೪″	ರಂಗ	೧೯ನೆಯ ಶತಕ
೧—೨೯ ಪತ್ರ	೬ ಪಂಕ್ತಿ	೮೫ ಅಕ್ಷರ

ಆದಿ : ಶ್ರೀ x x x x ಲಕ್ಷ್ಮೀಕಲ್ಯಾಣ ಯಕ್ಷಗಾನದ ಪುಸ್ತಕ
ದ್ವಿಪದೆ ॥ ಶ್ರೀಕಾಮಿನೀರಮಣ ವರಪುಣ್ಯಚರಣಾ
ಭೂಕಾಂತಗತಿಪ್ರಿಯ ಲಾವಣ್ಯಕಾಯ
ಕೋಟಿ ದಿನಮಣಿತೇಜ ಆನತ ಭೂಜ
ನಾಟಕ ಮೃಗರೂಪ ಯದುಕುಲದೀಪ
ಸುಜನಜನ ಮಂದಾರ ಸಕಲಗುಣಪೂರ

x x x x

ವಾರಿಜದಳನಯನ ವಾಸುಗಿಶಯನಾ
ಕ್ಷೀರಾಬ್ಧಿ ನೆಲೆವಾಸ ದೇವದೇವೇಶಾ
ವರ ಸಿಬಿಪುರಗಿರಿಯ ವಸ್ತುನರಶಿಷ್ಯ
ಕರುಣದಿಂ ಶ್ರೀಲಕ್ಷ್ಮೀಕಲ್ಯಾಣವೆಂಬಾ
ಚರಿತೆಯನು ಯಕ್ಷಗಾನವ ಮಾಡಿ ರಚಿಸಿ
ವರವೆನು ಭುವನಕಚ್ಚರಿಯಿದೆಂದೆನಿಸಿ ॥ ೧ ॥

ಅಂತ್ಯ : ಯಿಂತೆಂದು ಲಕ್ಷ್ಮೀಕಲ್ಯಾಣ ವಿಶಾಲ ಫಲಂಗಳ
ಅಮರ ಮುನಿ ನಾರದನೊಲಿದು...............
ಲಾದಿ ಮುನೀಶ್ವರನ ಚರಣಕಮಲಕ್ಕೆ ಮಣಿಖ
ಚಿತಕಿರೀಟ ಸಿರ ದೀರ್ಘದಂಡ ನಮಸ್ಕಾರಮಂ
ಮಾಡಿ ಸಮಸ್ತ ಉಚಿತೋಪಚಾರಗಳಿಂದರ್ಚಿಸಲಾ
ಮುನೀಶ್ವರನತಿ ಹರುಷದಿಂದಾ ಭೂಪಾ... ....
ದಚ್ಯುತನಾಮಸ್ಮರಣೆಗೈಯುತಾ ಅಮರಪುರಕೆ
ಮುನಿಕುಲೋತ್ತಮ ಗಮಿಸಿದನಾನಂದ ಸಂತೋಷದಿಂದಂ ||
ಲಕ್ಷ್ಮೀಕಲ್ಯಾಣ ಸಮಾಪ್ತ ||

ವಿಷಯ : ಲಕ್ಷ್ಮಿಯ ವಿವಾಹ.

ವಿಶೇಷ : ಕೆಲವು ಪತ್ರಗಳು ಶಿಥಿಲವಾಗಿವೆ. ಇದರೊಂದಿಗೆ ಶತಕಂಧರಚರಿತೆ ಎಂಬ ಗ್ರಂಥವೂ ಇದೆ.

1488

ಕೆ. ೨೩೪	**ಲಲಿತೋಪಾಖ್ಯಾನ**	ಗದ್ಯ
೧೮.೩" × ೨.೨"	ಕೃಷ್ಣರಾಜ	೧೮೫೦
೧–೨೯೮ ಪತ್ರ	೮ ಪಂಕ್ತಿ	೭೫ ಅಕ್ಷರ

ಆದಿ : ಶ್ರೀ ಹಯಗ್ರೀವಾಯ ನಮಃ|| ಶುಭಮಸ್ತು ನಿರ್ವಿಘ್ನಮಸ್ತು
ಜಯತ್ಯಮಿತ ಕಲ್ಯಾಣ ಗುಣರತ್ನ ಮಹೋದಧಿಃ |
ಮಹಿಶೂರಪುರೇ ಶ್ರೀಮಾನ್ಕೃಷ್ಣರಾಜಮಹೀಪತಿಃ ||
x x x x
ಸ್ವಸ್ತಿ ಧ್ರೀಮದಖಂಡ ಭಾರತ ಖಂಡ ಮಂಡನಾಯಮಾನ ಕೋಸಲ ದೇಶದೊಳು ನಾಕದಂತೆ ವಿಬುಧಾಶ್ರಯವಾಗಿ ರಸಾತಲದಂತೆ ನೇತ್ರಶ್ರುತಿ ಮನೋಹರಮಾಗಿ ಮುಂನೀರಿನಂತೆ ರಾಜಾಭ್ಯುದಯ ವರ್ಧಿಷ್ಣುವಾಗಿ

ಅಂತ್ಯ : ನಿತ್ಯ ಸಂತೈಸುತಲಾವುದುಂಬಸಿಂದ ತಾನು ಮಾಚಿತನಾಗಿ ನವ್ಯದಂಪತಿ ಗಳಿಗೆ ವರೆದು ಪರಮಾಶಿಷವ ನಡೆದನಷ್ಟಾವಕ್ರನಿಂತು ಸಂತೋಷದಿಂದಾವು ದುಂಬರನಖಿಳ ವೈಭವದಿಂ ಕುವರನಿಗೆ ಮದುವೆಯನು ಮಾಡಿ ನಿಜ ಬಂಧು ನಿಕರಗಳಿಗೆ ಬಹುಮತಿಯ ಮಾಡಿ ಮೇಣವರಿಗಪ್ಪಣೆಯಿಂತ್ತು ಸುಖದಿಂದ

ವಿಷಯ : ಬ್ರಹ್ಮಾಂಡಪುರಾಣದ ಉತ್ತರಭಾಗದ ಕಥೆ.

ವಿಶೇಷ : ಅಸಮಗ್ರ. ಮೊದಲ ಗರಿ ಸ್ವಲ್ಪ ಮುರಿದಿದೆ. ಬರಹವು ಸುಂದರವಾಗಿದೆ. ೨೮—೩೦ರ ವರೆಗೆ ಗರಿಗಳ ಮೇಲೆ ಕ್ರಮಾಂಕವನ್ನು ಬರೆದಿಲ್ಲ.

1489

ಕೆ.ಎ. ೧೪೭ **ಲಲಿತೋಪಾಖ್ಯಾನ** ಗದ್ಯ

೧೨.೭" × ೮" ಕೃಷ್ಣರಾಜ ೧೮೫೦

೧–೫೯೩ ಪುಟ ೨೩ ಪಂಕ್ತಿ ೨೦ ಅಕ್ಷರ

ಆದಿ : ಶ್ರೀ ಗಣೇಶ ಶಾರದಾ ಗುರು ಪರಮಾತ್ಮನೇ ನಮಃ ||
ಲಲಿತೋಪಾಖ್ಯಾನೆ ಸಹಸ್ರಾಯು ಕಥಾಪ್ರಾರಂಭೆ ನಿರ್ವಿಘ್ನಮಸ್ತು ||
ಜಯತ್ಯಮಿತ ಕಲ್ಯಾಣ ಗುಣರತ್ನ ಮಹೋದಧಿಃ |
ಮಹೀಶೂರಪುರೇ ಶ್ರೀಮಾನ್ಕೃಷ್ಣರಾಜಮಹೀಪತಿಃ || ೧ ||

x x x x

ಸ್ವಸ್ತಿ ಶ್ರೀಮದಖಂಡಭಾರತಖಂಡಮಂಡನಾಯಮಾನ ಕೋಸಲದೇಶದೊಳು ನಾಕದಂತೆ ವಿಬುದಾಶ್ರೀಯಮಾಗಿ ರಸಾತಲದಂತೆ ನೇತ್ರಶ್ರುತಿ ಮನೋಹರಮಾಗಿ

ಅಂತ್ಯ : ವೈಭವದಿಂ ಕುವರನಿಗೆ ಮದುವೆಯನು ಮಾಡಿ ನಿಜಬಂಧುನಿಕರಗಳಿಗೆ ಬಹುಮತಿಯ ಮಾಡಿ ಮೇಣವರಿದಪ್ಪಣೆಯಿತ್ತು ಸುಖದಿಂದಲಿರುತಿರ್ದರೆಂಬಲ್ಲಿಗೆ || ಗದ್ಯಾ ||

x x x x

ಶ್ರೀಮನ್ಮಹೀಶೂರಪುರವರಾಧೀಶ ಶ್ರೀಮತ್ಕೃಷ್ಣರಾಜವಡೆಯರವರ ಲೋಕೋಪಕಾರಾರ್ಥಮಾಗಿ ರಚಿಸಲ್ಪಟ್ಟ ಶ್ರೀಕೃಷ್ಣರಾಜವಾಣೀವಿಲಾಸವೆಂಬಾಂಕಿತದಿಂದ ಕರ್ನಾಟಕಭಾಷಾ ವ್ಯಾಖ್ಯಾನರೂಪವಾಗಿ ರಚಿಶಿರೂವ ಬ್ರಂಹ್ಮಾಂಡೋಪಪುರಾಣದಲ್ಲಿ ಉತ್ತರಭಾಗದಲ್ಲಿ ಲಲಿತೋಪಾಖ್ಯಾನದಲ್ಲಿ ಪೂರ್ವಖಂಡದಲ್ಲಿ ಹಯಗ್ರೀವಾಗಸ್ತ್ಯ ಸಂವಾದದಲ್ಲಿ ಪಂಚವಿಂಶೊಧ್ಯಾಯಃ ||

ವಿಷಯ : ಬಹ್ಮಾಂಡಪುರಾಣದ ಉತ್ತರಭಾಗದ ಕಥೆ.

ವಿಶೇಷ : ಬರಹ ಸುಂದರ. ಈ ಭಾಗವು ಮಾತ್ರ ಸಮಗ್ರವಾಗಿದೆ.

1490

ಕೆ. ಎ. ೨೭೮ **ಲಾವಣಿಗಳು** ಹಾಡು

೧೨.೭" × ೮" ? ?

೧–೨೦೧ ಪತ್ರ ೧೪ ಪಂಕ್ತಿ ೨೦ ಅಕ್ಷರ

ಆದಿ : ಮಹಾರಾಜರು ಪಾಳ್ಯಗಾರರು ಮುಂತಾದವರ ಪರವಾದ ಕೃತಿಗಳು.
ಲಾವಣಿ ತೆಲುಗು. " ಮನ್ರೋ ಸಾಹೇಬರ ಮೇಲೆ "

ದಿವಾನಗಿರಿ ವಿಾದ ಧೀರುಡೆವಂಡಮ್ಮಾ,
ಚಿಕ್ಕಾನಿ ಮನ್ರ್ರೋಲು ಸರದಾರುಡಂವಾ,
ಬಾಲುಡು ಮನ್ರ್ರೋಲು ಭಗವತುಡವ್ಮಾ
ದೀರುಡು ಮನ್ರ್ರೋಲು ವೆಳ್ಳಿಕಾದವ್ಮಾ ||

ಅಂತ್ಯ : ಶೆಟ್ಟಿಗೆ ಬಂದು ವೆಂಕೋಜಿ ಹೇಳಿದ ಲಾವಣಿ ಪದ ಉರಟಾ
ಚಿಕ್ಕಣ್ಣಾ ಷಾಹಿರ ಕುಂತು ಕೇಳುತಾನೆ ಹರಿದಾಸರ ನೆಂಟಾ
ಕೇಳಿದ ದಾಸೀ ಲಾವಣಿಖಾಸಾ ಹಾಕಿಬಿಟ್ಟನೂ ಜಾಲಾ ||

ವಿಷಯ : ಮಿಶ್ರವಿಷಯಗಳನ್ನು ಕುರಿತ ಲಾವಣಿಗಳು.

ವಿಶೇಷ : ಜಂಕ್ಕೂ ಹೆಚ್ಚು ಹಾಡುಗಳಿವೆ. ತೆಲುಗಿನಲ್ಲಿಯೂ ಲಾವಣಿಯನ್ನು ಹೇಳಿದೆ. ಬರಹವು ಮೋಡಿಯಾದರೂ ತಿಳಿದುಕೊಳ್ಳಬಹುದು. ಕೆಲವು ಹಾಡುಗಳು ಅಸಮಗ್ರವಾಗಿವೆ. ಪತ್ರದ ಒಂದುಕಡೆಯಲ್ಲಿ ಮಾತ್ರ ಬರೆದಿದೆ. ಸ್ವಲ್ಪಮಟ್ಟಿಗೆ ಶಿಥಿಲ. ಗ್ರಂಥದ ಆದಿಯಲ್ಲಿ ಬೇರೆ ೪ಪತ್ರಗಳಲ್ಲಿ ವಿಷಯ ಸೂಚಿಯಿದೆ.

1491

ಕೆ.ಎ. ೨೬೧	**ಲಿಂಗಪುರಾಣ** (೧ನೆಯ ಭಾಗ)	ಗದ್ಯ
೧೨.೮"×೮."	ಕಳಲೆ ನಂಜರಾಜ	೧೭೪೦
೧–೧೯೨ ಪುಟ	೨೪ ಪಂಕ್ತಿ	೨೧ ಅಕ್ಷರ

ಆದಿ : ಲಿಂಗಪುರಾಣ (ಇದರ ಆದಿಯು ಇಲ್ಲವೆಂದು ತೋರುತ್ತದೆ) ಲಿಂಗಪುರಾಣ ಬರೆಯುವುದಕ್ಕೆ ಶುಭಮಸ್ತು| ಅನಂತರದಲ್ಲಿ ಸೂತಪುರಾಣಿಕನಿಂತೆಂದನು. ಕೇಳಿರೈ ರುಷಿಗಳಿರಾ ! ಈ ಲಿಂಗಪುರಾಣದಲ್ಲಿರುವ ಕಥೆಗಳನೆಲ್ಲವನ್ನು ಸಂಕ್ಷೇಪ ವಾಗಿ ವಿವರಿಸುತ್ತಲಿದ್ದೇನೆ x x x ಇಂತು ಮಹೀಶೂರ ಸೇನಾಪತಿ ದೊಡ್ಡ ರಾಜಪುತ್ರ ವೀರರಾಜ ದಳಪತಿ ದೇವರಾಜಾನುಜ ಕಳಲೆ ನಂಜರಾಜ ವಿರಚಿತ ಮಾದ ನಂಜರಾಜವಾಣಿವಿಲಾಸವೆಂಬ ಕರ್ನಾಟಕಭಾಷಾ ವಿರಚಿತಮಾದೀ ಮಹಾಪುರಾಣವಾದ ಲಿಂಗಮ....ಪುರಾಣದಲ್ಲಿ || ಪ್ರಥಮಾಧ್ಯಾಯಾರ್ಥ ನಿರೂಪಣಂ ||

ಅಂತ್ಯ : ಶಿಲಾದಮುನೀಂದ್ರನು ಮುನಿಗಳ ಕುರಿತು ಹೇಳಿದನೆಂದು ನಂದೀಶ್ವರನು ಸನತ್ಕುಮಾರಮುನೀಂದ್ರನಿಗೆ ತಿಳುಹಿಸ್ತನೆಂದು ಸೂತಪುರಾಣಿಕನು ನೈಮಿ ಷರಣ್ಯವಾಸಿಗಳಾದ ಶೌನಕಾದಿ ರುಷಿಗಳಿಗೆ ನಿರೂಪಿಸಿದನು.
ಇಂತು ಕರ್ನಾಟಕ ಮಹಾಪುರಾಣವಾದ ಲಿಂಗಪುರಾಣದಲ್ಲಿ ಮಹೀಶೂರ ಸೇನಾಧಿಪತಿ ದೊಡ್ಡರಾಜ ಪೌತ್ರ ವೀರರಾಜ ತುನೂಜ ದಳಪತಿ ದೇವರಾಜಾ

ನುಜ ಕಳುಲೆ ನಂಜರಾಜ ವಿರಚಿತವಾದ ಕರ್ನಾಟಟೀಕಿನಲ್ಲಿ ನಾಲ್ವತ್ತೆರಡನೇ ಅಧ್ಯಾಯ.

॥ ನಂದೀಶ್ವರವರ ಪ್ರಸಾದ ॥

ಅನಂತರದಲ್ಲಿ ನಂದೀಶ್ವರನಿಂತೆಂದನು ಎಲೆ ಸನತ್ಕುಮಾರವು

ವಿಷಯ : ಶಿವಲಿಂಗದ ಮಹಿಮೆ.

ವಿಶೇಷ : ಗ್ರಂಥದ ಆದಿಯಲ್ಲಿ ಶಿವಲಿಂಗದ ಗುರುತಿನ ಮೂರು ಚಿತ್ರಗಳಿವೆ. ಇದರ ಮುಂದಿನ ಭಾಗ ಕೆ. ಎ. ೨೭೨ ರಲ್ಲಿದೆ.

1492

ಕೆ.ಎ. ೨೭೨	**ಲಿಂಗಪುರಾಣ (೨ನೆಯ ಭಾಗ)**	**ಗದ್ಯ**
೧೩" × ೮"	ಕಳಲೆ ನಂಜರಾಜ	೧೭೪೦
೧೯೩–೬೦೨ ಪುಟ	೨೪ ಪಂಕ್ತಿ	೨೩ ಅಕ್ಷರ

ಆದಿ : ನೀಂದ್ರನೇ ಆ ಬಳಿಕ ನನ್ನ ತಂದೆಯಾದ ಶಿಲಾದಮುನೀಂದ್ರನೇ ಆ ಬಳಿಕ ನನ್ನ ತಂದೆಯಾದ ಶಿಲಾದಮುನೀಂದ್ರನು ಸಂತುಷ್ಟನಾಗಿ ಪರಮೇಶ್ವರರಿ ಗೆರಗಿದನು ಹಣ ಸಿಕ್ಕಿದರೆ ಸಂತೋಷಪಡುವ ಹಾಗೆ ಅತಿ ಸಂತೋಷವುಳ್ಳವ ನಾಗಿ ನನ್ನನ್ನು ಕರಕೊಂಡು ತನ್ನ ಆಶ್ರಮಕ್ಕೆ ಹೋಗಲು ಯಾವಾಗ ನಾನು ಶಿಲಾದಮುನೀಂದ್ರನ ಆಶ್ರಮವನ್ನೈದಿದೆನೋ ಆ ಸಮಯದಲ್ಲಿ ನಾನು ಕಾಲ ವಶದಿಂದ ದೇವರೂಪವ ಬಿಟ್ಟು ಮನುಷ್ಯರೂಪವನ್ನೈದಲು ಒಂದಾನೊಂದು ಕಾರಣದಿಂದ ದಿವ್ಯಜ್ಞಾನ ನಷ್ಟವಾಗಿ ಪ್ರಾಕೃತ ಮನುಷ್ಯನ ಹಾಗೆ ಅಜ್ಞಾನ ಹುಟ್ಟಲು ನನ್ನ ತಂದೆಯಾದ ಶೀಲಾದಮುನೀಂದ್ರನು

ಅಂತ್ಯ : ಈ ಮಂತ್ರಗಳಿಂದ ಪೂಜಾ ಜಪಗಳ ಮಾಡಿದವನು ಸರ್ವಪಾಪ ವಿನಿರ್ಮುಕ್ತ ನಾಗುವನು. ಒಂದು ಸಾರಿ ಸ್ಮರಿಸಿ ವನು ಸಕಲಪಾಪ ವಿನಿರ್ಮುಕ್ತನಾಗುವನು ಎಂದು ಸೂತಪುರಾಣಿಕನು ನೈಮಿಷಾರಣ್ಯವಾಸಿಗಳಾದ ಶೌನಕಾದಿ ರುಷಿ ಗಳಿಗೆ ನಿರೂಪಿಸಿದನು.

ಇಂತು ಮಹಾಪುರಾಣವಾದ ಲಿಂಗಪುರಾಣದಲ್ಲಿ ಮಹೀಶೂರಸೇನಾಧೀಶ ದೊಡ್ಡರಾಜ ಪೌತ್ರ ವೀರರಾಜನಂದನ ದಳಪತಿ ದೇವರಾಜಾನುಜ ಭಾರ ದ್ವಜಗೋತ್ರ ರುಕ ಶಾಖಾನುವರ್ತನ ಕಳುಲೆ ನಂಜರಾಜ ವಿರಚಿತವಾದ ಕರ್ನಾಟಕ ಟೀಕಿನಲ್ಲಿ ಐವತ್ತನೇ ಅಧ್ಯಾಯದರ್ಥ ಶ್ರೀಶ್ರೀ ಲಿಂಗಪುರಾಣದಲ್ಲಿ ಪೂರ್ವಭಾಗದಲ್ಲಿ ಅಧ್ಯಾಯ ನೂರಏಳು ೧೦೭ಕ್ಕೆ (ಕ್ರಮವಾಗಿ ಅಧ್ಯಾಯ ೯೭ ಇದರ ಮೇಲೆ ಮತ್ತು ನೂರಮೂರರಿಂದ ನೂರಏಳು ಪರಿಯಂತ ಇದೆ. ೧೦೩ರಿಂದ ೧೦೭) ಉತ್ತರಭಾಗದಲ್ಲಿ ಅಧ್ಯಾಯ ೪೯–೫ನೇದು ಪ್ರಾರಂಭ.

(ಎಂದು ಮಾತೃಕೆಯಲ್ಲಿ ಪೆನ್ಸಲಿನಿಂದ ಬರೆದಿದೆ) ಇದನ್ನು ಬರೆದವನು ಕೆ. ಶಂಭು ಶರ್ಮಾ. 27-9-1921. ದಕ್ಷಿಣ ಕನ್ನಡ.

ವಿಷಯ : ಶಿವಲಿಂಗ ಮಹಿಮೆ.

ವಿಶೇಷ : ಪ್ರತಿಯ ಕೊನೆಯಲ್ಲಿ ಕಾಪಿ ಮಾಡಿದವನ ಹೆಸರಿದೆ. ಪ್ರತಿ ಸುದೃಢವಾಗಿದೆ. ಇದರ ಮೊದಲ ಭಾಗ ಕೆ. ಎ. ೨೭೧ರಲ್ಲಿದೆ.

1493

ಕೆ. ೩೨೫/೧೦	**ಲಿಂಗಪುರಾಣದ ನಾಂದ್ಯ**	ವಾರ್ಧಕಷಟ್ಪದಿ
೯.೫" × ೨"	?	?
೨೬-೨೮ ಪತ್ರ	೧೧ ಪಂಕ್ತಿ	೫೬ ಅಕ್ಷರ

ಆದಿ : ಲಿಂಗಪುರಾಣದ ನಾಂದ್ಯ ವಾರ್ದ್ಧಿಕ ಷಟ್ಪದಿ ||
ಬಸವೇಶ ಸದ್ಗುಣೋತ್ತುಂಗ ಕರುಣಾಪಾಂಗ
ಬಸವಂಣ ಸಂಹೃತಾನಂಗ ಸತತಾಭಂಗ
ಬಸವ ಸದ್ಭಕ್ತಿಪುಂಗವ ಬಸವ ಸಂಗೀತರಂಗ ವೇದಪ್ರಸಂಗ
ಬಸವ ಸಾಕ್ಷಾನ್ಮಹೇಶಾಂಗ ಸದ್ಗುರುಲಿಂಗ
ಬಸವ ಚರಲಿಂಗ ಪದಪದ್ಮವಿಲಸದ್ಭೃಂಗ
ಬಸವ ಪಶುಪತಿ ಚರಣ ನಿಹಿತಾಂತರಂಗ ಮದ್ಭರ್ತೃಮತ್ರಾತ ಬಸವಾ || ೧ ||

ಅಂತ್ಯ : ಜಯ ಬಸವರಾಜೇಂದ್ರನನುಭವಾಂಬುಧಿಚಂದ್ರ
ಜಯ ಬಸವರಾಜೇಂದ್ರ ಕಮಲಪೀಠಜರೇಂದ್ರ
ಜಯ ಬಸವರಾಜೇಂದ್ರ ಚರಣವಂದಿತುಪೇಂದ್ರ ಜಯ ಬಸವರಾಜ ತೇಜಾ
ಜಯ ಬಸವರಾಜೇಂದ್ರ ಸತ್ಯಸದ್ಗುಣಸಾಂದ್ರ
ಜಯ ಬಸವರಾಜೇಂದ್ರ ಸದ್ಭಕ್ತಿ ಘನಸಾಂದ್ರ
ಜಯ ಬಸವರಾಜೇಂದ್ರ ನಾಮನುತನತನಿಂದ್ರ ಜಯ ಬಸವರಾಜ
ಪಾಹೀ || ೨೧ ||
ಲಿಂಗಪುರಾಣದ ನಾಂದ್ಯ ಪದ ಸಂಪೂರ್ನ್ನ ಮಂಗಳಮಹಾ ಶ್ರೀ.

ವಿಷಯ : ಲಿಂಗಪುರಾಣಕಾವ್ಯದ ನಾಂದೀ ಪದ್ಯಗಳು.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಅಯ್ಯನವರ ನಾಂದ್ಯ, ಮುರಿಗೆ ಸ್ವಾಮಿಗಳ ನಾಂದ್ಯಗಳೆಂಬ ಇನ್ನೂ ಇತರ ೨೪ ಗ್ರಂಥಗಳಿವೆ.

1494

ಕೆ. ೩೨೨/೧೦	**ಲಿಂಗಲೀಲಾವಿಲಾಸ ಗ್ರಂಥದ ವ್ಯಾಖ್ಯಾನ**	ಶ್ಲೋಕ, ಅರ್ಥ
೧೩" × ೨"	?	?
೪೯-೬೧ ಪತ್ರ	೧೨ ಪಂಕ್ತಿ	೪೨ ಅಕ್ಷರ

ಆದಿ : ಲಿಂಗಲೀಲಾವಿಲಾಸದ ಗ್ರಂಥದ ವ್ಯಾಖ್ಯಾನ || ಲಿಂಗಸ್ಥಲನಿಃಕಲ ||
ಈಶ್ವರೌವಾಚ|| ಅಲಕ್ಷ್ಯಮದ್ವಯಂ ಶೂನ್ಯ ಮಮೂರ್ತಂ ಪರಮಾವ್ಯಯಂ |
ಅನಾಮಪ್ಯಕುಲಂ ಶುದ್ಧಮನಾದ್ಯಂ ಶಿವಮುಚ್ಯತೇ ||
ಟ್ಕು || ಅಲಕ್ಷ್ಯಂ | ಲಕ್ಷಿಸಲು ಬಾರದಂಥ | ಅದ್ವಯಂ | ಕರ್ತೃಕರ್ಮಾದಿ ಭೇದ ಪ್ರಪಂಚವಿಲ್ಲದಂಥ | ಶೂನ್ಯಂ | ಅವ್ಯಕ್ತ ಸದಾತ್ಮಕವಾದಂಥಾ | ಅಮೂರ್ತ್ತಂ | ಚಂದ್ರಶೇಖರಾದಿ ನಾನಾ ವಿಗ್ರಹರಹಿತನಾದಂಥಾ | ಅನಾದ್ಯಂ | ತನಗೊಂದಾದಿಯಿಲ್ಲದಂಥಾ ಜಗತ್ಕಾರಣವಸ್ತುವು | ಶಿವಂ | ಶಿವತತ್ವವೆಂದು| ವುಚ್ಯತೇ | ಹೇಳಲುಪಡುತ್ತಿದ್ದೀತು || ೧ ||

ಅಂತ್ಯ : ಶಂಭೋ ಪಾದೋದಕಂ ಪೀತ್ವಾ ಪಶಾಚದಶುಚಿಶಂಕಯಾ |
ಯಸ್ತ್ಯಾಚಮತಿ ಮೋಹೇನ ತಂ ವಿಂದ್ಯಾದ್ಬ್ರಹ್ಮಘಾತುಕಃ ||
|| ಟ್ಕು|| ಶಂಭೋ ಪಾದೋದಕಂ ಪೀತ್ವಾ| ಶಿವಪಾದೋದಕವನು ಕೊಂಡು | ಪಶ್ಚಾತ್ | ಮತ್ತೆ | ಅಶುಚಿಶಂಕಯಾ | ಅಶುಚಿಯೆಂಬ ಶಂಕೆಯಿಂದೆ | ಯಃ | ಅವನಾನೋರ್ವನು | ಮೋಹೇನ | ಅಜ್ಞಾನದಿಂದ | ಆಚಮತಿ | ಶುದ್ಧಾಚಮಾನವನು ಮಾಡುತ್ತಿದ್ದಾನು | ತಂ | ಆತನು ಬ್ರಹ್ಮಘಾತುಕಂ | ಬ್ರಹ್ಮಹತ್ಯಕಾರನೆಂದು | ವಿಂದ್ಯಾತ್ | ಅರಿವುದು || ೧೭ || ಹರವಾಕ್ಯ ಸಮಾಪ್ತಂ || ಶ್ರೀ ||

ವಿಷಯ : ಲಿಂಗಲೀಲಾವಿಲಾಸದಲ್ಲಿ ಉದಾಹೃತಗಳಾಗಿರುವ ಶಿವಾಗಮ ಸಂಸ್ಕೃತ ಕಾರಿಕೆಗಳಿಗೆ ಪ್ರತಿಪದ ಕನ್ನಡಟೀಕನ್ನು ಸ್ಥಲಾನುಗುಣವಾಗಿ ಬರೆದಿದೆ.

ವಿಶೇಷ : ೩೧–೪೮ ಪತ್ರಗಳು ಲುಪ್ತ. ಇದರೊಂದಿಗೆ ಅನುಭವ ಸೂತ್ರದ ಟೀಕು, ಯೋಗ ರಹಸ್ಯ ಮೊದಲಾದ ಗ್ರಂಥಗಳಿವೆ.

1495

ಕೆ.ಎ. ೪೮	**ಲಿಂಗಲೀಲಾವಿಲಾಸ ಚಾರಿತ್ರ**	ವಚನ, ಟೀಕು
೧೨.೫" × ೭.೭"	ಕಲ್ಲುಮಠದ ಪ್ರಭುದೇವ	೧೪೩೦
೧–೨೨೪ ಪತ್ರ	೨೦ ಪಂಕ್ತಿ	೩೧ ಅಕ್ಷರ

ಆದಿ : ಲಿಂಗಲೀಲಾವಿಲಾಸ ಚಾರಿತ್ರ ಪ್ರಾರಂಭಃ
ಈ ಲಿಂಗಲೀಲಾವಿಲಾಸ ಚಾರಿತ್ರದ ಪರಿಯಾಯವೆಂತೆಂದಡೆ| ಪ್ರಥಮದಲ್ಲಿ ನಿಃಕಲಲಿಂಗಸ್ಥಲ | ಎರಡನೆಯಲ್ಲಿ ಮಹಾಲಿಂಗಸ್ಥಲ| ಮೂರನೆಯಲ್ಲಿ ಲಿಂಗ ಮೂರ್ತಿಸ್ಥಲ| ನಾಲ್ಕನೆಯಲ್ಲಿ ಅಂಗಸ್ಥಲ x x x ಆ ಷಟ್ಸ್ಥಲ ಮಾರ್ಗವೆ ಲಿಂಗಲೀಲಾವಿಲಾಸ ಚಾರಿತ್ರವೆಂದು ನಿರೂಪಿಸಿದ ಗುರುವಚನವಿಡಿದು ಗುರು

ಪ್ರಸಾದಜ್ಞಾನದಿಂದ ವಿದ್ಯಾನಗರದ ಕಲ್ಲಮಠದ ಪ್ರಭುದೇವಾರ್ಯನು| ಪುರಾತನರ ವಚನಂಗಳಲ್ಲಿಯೂ ಸಾರವಾದ ವಚನಂಗಳ ತೆಕ್ಕೊಂಡು ಷೋಡಶ ಸ್ಥಲ ಪರಿಕ್ರಮದಿಂದ ಸೇರಿಸಿ ಅರ್ಥೈಸಿದ ವಚನಾಗಮವಿದು.

ಅಂತ್ಯ : ಪುರಾತನರ ವಚನ ಏಳನೂರಇಪ್ಪತ್ತ ತೆಗದುಕೊಂಡು ಷೋಡಶ ಸ್ಥಲ ಪರಿಕ್ರಮದಿಂದ ಸೇರಿಸಿ ವ್ಯಾಖ್ಯಾನವ ಮಾಡಿದ ವಿದ್ಯಾನಗರದ ಕಲ್ಲಮಠದ ಪ್ರಭುದೇವಾರ್ಯನು| ಇದರ ನಾಮ ಲಿಂಗಲೀಲಾವಿಲಾಸಚಾರಿತ್ರವೆಂದು|x x x ಈ ಲಿಂಗಲೀಲಾವಿಲಾಸಚಾರಿತ್ರವನು ಬರದು ಓದಿ ಕೇಳಿ ಅರಿದು ಆನಂದಿಸುವ ಭಕ್ತಜನಂಗಳಿಗೆ ಇಹಪರಸುಖವ ಕೊಡುವ ಧಾತ್ರುಭೋತೃವಪ್ಪ ಶಿವಪದವ ಕೊಡುವುದೀ ಪುರಾತನರ ವಚನಪ್ರಸಾದ| ಶಿವಗಣಂಗಳೀ ಶರಣ ನೊಪ್ಪುಗೊಂಬುದು || ಶ್ರೀ || ಲಿಂಗಲೀಲಾವಿಲಾಸಚಾರಿತ್ರ ಸಂಪೂರ್ಣಂ ||

ವಿಷಯ : ಷಟ್ಸ್ಥಲ ಸಿದ್ಧಾಂತ.

ವಿಶೇಷ : ಕೊನೆಯಲ್ಲಿ ' ಆನಂದ ಸಂವತ್ಸರದ ಚೈತ್ರಶುದ್ಧ ದಶಮಿ ಗುರುವಾರದಲ್ಲು ರಾಮುಗಿರಿಯ ಕೆಂಪನಂಜೆಯದೇವರ ಶಿಷ್ಯರು ಶ್ರೀಕಂಠದೇವರಿಗೆ ಚೆನ್ನಬಸವ ದೇವರ ಶಿಷ್ಯರು ಬಸವಲಿಂಗದೇವರು ಬರದು ಸಮಪ್ಪಿಸಿದ ಲಿಂಗಲೀಲಾವಿಲಾಸ ಚಾರಿತ್ರದ ಪುಸ್ತಕಕ್ಕೆ ಮಂಗಳಮಹಾ ' ಎಂದಿದೆ.

1496

ಕೆ. ಬಿ. ೩೩೮	**ಲಿಂಗಲೀಲಾವಿಲಾಸ ಚಾರಿತ್ರ**	ವಚನ ಟೀಕು
೧೧.೫" × ೪"	ಕಲ್ಲುಮಠದ ಪ್ರಭುದೇವ	೧೪೩೦
೧–೧೧೫ ಪತ್ರ	೧೨ ಪಂಕ್ತಿ	೪೫ ಅಕ್ಷರ

ಆದಿ : ಲಿಂಗಲೀಲಾವಿಲಾಸ ಚಾರಿತ್ರ ಈ ಲಿಂಗಲೀಲಾವಿಲಾಸಚಾರಿತ್ರದ ಪರಿಯಾಯವೆಂತೆಂದೊಡೆ || ಪ್ರಥಮದಲ್ಲಿ ನಿಃಕಲ ಲಿಂಗಸ್ತಲ | ದ್ವಿತಿಯದಲ್ಲಿ ಮಹಾ ಲಿಂಗಸ್ತಲ x x x ಆ ಷಡುಸ್ತಲಮಾರ್ಗವೆ ಲಿಂಗಲೀಲಾವಿಲಾಸ ಚಾರಿತ್ರವೆಂದೂ ನಿರೂಪಿಸಿ | ಗುರುವಚನವಿಡಿದು ಗುರುಪ್ರಸಾದ ಜ್ಞಾನದಿಂದಾ ವಿದ್ಯಾನಗರದ ಕಲ್ಲುಮಟ್ಠದ ಪ್ರಭುದೇವಾರ್ಯ್ಯನೂ | ಪುರಾತನರ ವಚನಂಗಳಲ್ಲಿಯ್ಯೂ| ಸಾರವಾದ ವಚನಂಗಳಂ ತೆಕ್ಕೊಂಡು ಶೋಡಸಸ್ತಲ ಪರಿಕ್ರಮದಿಂದ ಸೇರಿಸಿ ಅರ್ಥೈಸಿದ ವಚನನಾಗಮವಿದೂ|

ಅಂತ್ಯ : ಪುರಾತನರ ವಚನ ಯೇಳುನೂರಯೆಪ್ಪತ ತೆಗೆದುಕೊಂಡು ಷೋಡಸಸ್ತಲ ಪರಿಶ್ರಮದಿಂದ ಸೇರಿಸಿ ವ್ಯಾಖ್ಯಾನವ ಮಾಡಿದ ವಿದ್ಯನಗರದ ಕಲ್ಲಮಟದ

ಪ್ರಭುದೇವಾರ್ಯನೂ। ಯಿದರ ನಾಮ ಲಿಂಗ ಲೀಲಾವಿಲಾಸ ಚಾರಿತ್ರ। ಯಿಾ ಲಿಂಗಲೀಲಾವಿಲಾಸಚಾರಿತ್ರವನು ಶಿವಶರಣರು ತಂಮ ಚರಿತ್ರವೆಂದು ತಂಮ ನಿಜವೆಂದು। ತಂಮ ಮಹತ್ವವೆಂದು ಅಱಿದು ಆನಂದಿಸುವ ಶಿವಗಣಂಗಳಿಗೆ ಸಮಾರ್ಪಿತವಾಯಿತ್ತೆಂದಱಿದು ವೊಪ್ಪುಗೊಂಬ ಶರಣರಿಗೆ ಶರಣೆನುತಿರ್ದೆನೂ॥ ಯಿಾ ಲಿಂಗಲೀಲಾವಿಲಾಸಚಾರಿತ್ರವನೂ ಬರದೂ ವೋದಿ ಕೇಳೀ ಅರಿದು ಆನಂದಿಸುವ ಭಕ್ತಜನಂಗಳಿಗೆ ಯಿಹ ಪರದ ಸುಖಮಂ ಕೊಡುವನು। ದಾತ್ರುವಪ್ಪ ಶಿವಪದವಂ ಕೊಡುವದೀ ಪುರಾತನರ ವಚನ ಪ್ರಸಾದ ಶಿವಗಣಂಗಳಿಗೆ ಶರಣನೊಪ್ಪುಗೊಂಬುದೂ॥ ಪರಿಧಾವೀ ನಾಮ ಸಂವತ್ಸರದ ಮಾಘ ಬಹುಳ ೬ ಯಲ್ಲು ಸುಕ್ರುವಾರ ರಾತ್ರೇ ಘಳಿಗೆ ೬ ಹಸ್ತಾ ನಕ್ಷತ್ರದಲ್ಲು ಲಿಂಗಲೀಲಾವಿಲಾಸಚಾರಿತ್ರವ ಕೊಂಡಾಪುರದ ವೀರಪ್ಪನ ಕುಮಾರ ಲಿಂಗಪ್ಪನ ಕುಮಾರ। ಚೆಂನಬಸಪ್ಪನವರು ಬರಸಿದ್ದು ಲಿಂಗಲೀಲಾವಿಲಾಸ ಸಂಪೂರ್ನ ಮಂಗಳ ಮಹಾ ಶ್ರೀ.

ವಿಷಯ : ಷಟ್ಸ್ಥಲ ಸಿದ್ಧಾಂತ.

ವಿಶೇಷ : ೯೬ನೆಯ ಪತ್ರದಿಂದ ಮುಂದಕ್ಕೆ ಎಲ್ಲಾ ಪತ್ರಗಳ ಮುಂಭಾಗ ಸ್ವಲ್ಪ ಹರಿದಿವೆ. ಕೆಲವೆಡೆಯಲ್ಲಿ ಶಕಟರೇಫದ ಬಳಕೆಯಿದೆ.

1497

ಕೆ. ೩೨೫/೨೪	**ಲಿಂಗಷಟ್ಪದಿ**	ವಿವಿಧ ಷಟ್ಪದಿ
೯.೫" × ೨"	?	?
೮೬–೯೬ ಪತ್ರ	೧೧ ಪಂಕ್ತಿ	೫೦ ಅಕ್ಷರ

ಆದಿ: ಲಿಂಗಸ್ತೋತ್ರದ ಷಟ್ಪದಂಗಳೂ॥ ಭಾವಿನಿ ಪದ॥
ಶ್ರೀಮದಗಜಾ ವಾಮಭಾಗೋ
ದ್ದಾಮ ವಪುರಭಿರಾಮನಭಿನುತ
ಸಾಮಗಾನ ಸ್ತೋಮ ಸರಸ ಪ್ರೇಮನಸಿ ಭೀಮಾ
ಕಾಮ ತಾತ ಪಿತಾಮಹಾಪ್ರಮು
ಖಾಮರೇಂದ್ರ ಕ್ಷೇಮನಪ್ರತಿ
ನಾಮನೊಸೆದುದ್ಧರಿಸುಗೆಂಮನು ಸಿದ್ಧವಟಧಾಮಾ ॥ ೧ ॥

ಅಂತ್ಯ: ಈ ಮಹಾಘನಲಿಂಗ ಸ್ತೋತ್ರಮಂ ಪರತರ
ಪ್ರೇಮದಿಂ ಪಠಿಸಿ ಕೇಳಿದಡೆ ಸಲೆ ವಿಸ್ತರಿಸಿ
ತಾಂ ವೋಹದಿಂ ಪೇಳಿದಡೆ ನುತಿಸಿ ಕೀರ್ತಿಸಿದ ಯಕ್ಷರಾಕ್ಷಸವಿಪಕ್ಷಾ

ಯಮ ಕಾಮ ಮೃತ್ಯು ದಾರಿದ್ರ ಹರಿಕರಿಚೋರ
ಕ್ಷಾಮಧಾಮರ ಶಿಖಿಕ್ಷ್ಮಾಪ ವಿಷಫಣಿ ಪುಲಿ ಮ
ಹಾ ಭೀತಿಯಳಿದನಘ ಪರಮಲಿಂಗೈಕ್ಯರ ಹರಿದು ಸಿದ್ಧವೂ || ೧೧೧ ||
ಲಿಂಗಸ್ತೋತ್ರದ ಷಟ್ಪದಿ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಲಿಂಗಸ್ತುತಿ.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ವೈರಾಗ್ಯಷಟ್ಪದಿ, ಪ್ರಭುನಟನತಾರಾವಳಿಗಳೆಂಬ ಇನ್ನೂ ಇತರ ೨೪ ಗ್ರಂಥಗಳಿವೆ.

1498

ಕೆ. ೩೨೫/೨೧	**ಲಿಂಗಸ್ತೋತ್ರದ ಪದ**	ವಾರ್ಧಕಷಟ್ಪದಿ
೯.೫″ × ೨″	?	?
೬೫–೭೫ ಪತ್ರ	೧೦ ಪಂಕ್ತಿ	೫೫ ಅಕ್ಷರ

ಆದಿ : ಶಂಕರ ಸಂಹಿತೆಯಾಸಾದ್ಯದ ಲಿಂಗಸ್ತೋತ್ರದ ಪದ ||
ಶ್ರೀ ನಗಸುತಾರಮಣ ಮಾನಿತ ಕೃಪಾಭರಣ
ಮೌನಿಸಂನ್ನುತ ಪಾದಗಾನ ನಿಗಮಾಮೋದ
ಸಾನುರಾಗಸ್ವಾಂತ ಭಾನುಬಿಂಬ ನಿಶಾಂತ ಸೂನತ್ನುವೇಲಕಾಂತಾ
ಜ್ಞಾನಸುಖ ಸದ್ಧಾಮ ನಾನಾ ಗುಣಾರಾಮ
ಜಾನಕೀಪತಿಪಕ್ಷ ಭೂನಿಲಿಂಪಾಧ್ಯಕ್ಷ
ದಾನ ಕಲಿತಾಟೋಪ ವೈನತೇಯ ಗರೋಪಸಾನು ಮಚ್ಚಾಪ ಶರಣು || ೧ ||

ಅಂತ್ಯ : ಅಸಮನಯನಾಕಾರ ಪಶುಪವಾಹನ ಶೂರ
ಪಶುಪಸಮಯೋದ್ಧಾರ ವಿಶದ ವಿಭವಸ್ಥಾರ
ದಶದಿಗ್ಯಶಃಪೂರ ಕುಸುಮ ಬಾಣಶಶಿ ಶಿರ ಭಸಿತಾಂಗಮೋದಕಾರಾ
ಅಸಮಪುಣ್ಯ ಶರೀರ ವಸುಧಾಚಯಾಧಾರ
ಭಸಿತ ಕಾಯಕುಮಾರ ವಿಶಿತಾಶನೋನ್ಮಾದ
ಲಸಿತಶೈವಾಚಾರ ಸುಶರ ನಿತ್ಯುದ್ದಾರ ಬಸವಗಣಧೀರ ಶರಣೂ || ೧೦೧ ||
ಶಂಕರ ಸಂಹಿತೆಯ ಲಿಂಗಸ್ತೋತ್ರದ ಷಟ್ಪದ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಲಿಂಗಸ್ತೋತ್ರ.

ವಿಶೇಷ : ಇದೇ ಕಟ್ಟಿನಲ್ಲಿ ಶಿವಲಿಂಗ ಮಹಿಮಾ ಸಾಂದ್ಯ, ಲಿಂಗಷಟ್ಪದಿಗಳೆಂಬ ಇನ್ನೂ ಇತರ ೨೪ ಕೃತಿಗಳಿವೆ.

1499

ಕೆ. ೩೪೩/೨ **ಲಿಂಗಸ್ತೋತ್ರದ ಷಟ್ಪದಿ** ವಿವಿಧ ಷಟ್ಪದಿ

೧೨.೨" × ೨.೩" ? ?

೯೫–೧೦೪ ಪತ್ರ ೧೧ ಪಂಕ್ತಿ ೫೮ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಲಿಂಗಸ್ತೋತ್ರದ ಷಟ್ಪದ॥ ಭಾವಿನಿಪದ॥
ಶ್ರೀ ಮದಗಜಾ ವಾಮಭಾಗೋ
ದ್ದಾಮವ ಪುರಭಿರಾಮನಭಿನುತ
ಸಾಮಗಾನಸ್ತೋಮ ಸರಸ ಪ್ರೇಮನರಿಭೀಮಾ
ಕಾಮತಾತಪಿತಾಮಹ ಪ್ರಮು
ಖಾಮರೇಂದ್ರಕ್ಷೇಮನಪ್ರತಿ
ನಾಮನೊಸೆದುದ್ಧರಿಸುಗೆಂಮಂ ಸಿದ್ಧವಟದಾಮಾ ॥ ೧ ॥

ಅಂತ್ಯ : ಈ ಪರಮಘನಲಿಂಗ ನುಡಿಗಳಂ ಪ್ರೀತಿಯಿಂ
ದೇ ಪೊತ್ತು ಪಠಿಸಿ ಕೇಳ್ದೊಡೆ ವಿಸ್ತರಿಸಿ ತಾಂ ನಿ
ರೂಪಿಸಿದೊಡಂ ಪೊಗಳ್ದೊಡಂ ಕ್ಷಾಮಡಾಮರ ಯಕ್ಷರಾಕ್ಷಸ ವಿಷಫಣಿ
ಕೋಪವೀ ಮೃತ್ಯು ತಸ್ಕರ ಸಿಂಹಮದಕುಂಭಿ
ಭೂಪದಾರಿದ್ರಾರಿ ಕಾಲಕಾಮಾಗ್ನಿ ಸಂ
ತಾಪ ಶಾರ್ದೂಲ ಭಯವಳಿದು ಘನಲಿಂಗೈಕ್ಯರಪ್ಪುದಿದು ಸಿದ್ಧಾಂತವೂ
ಲಿಂಗಸ್ತೋತ್ರದ ಷಟ್ಪದಂಗಳು ಸಮಾಪ್ತ ಮಂಗಳಮಹಾ ಶ್ರೀ. ॥ ೧೧೧ ॥

ವಿಷಯ : ಲಿಂಗಮಹಿಮಾವರ್ಣನೆ.

ವಿಶೇಷ : ಸಮಗ್ರ. ಮುದ್ರಾಪುರಾಧೀಶ, ಸಂಗಮೇಶ, ಶಾಂತೇಶ ಇವರ ಸ್ತುತಿಗಳೂ ಇವೆ. ಇದರೊಂದಿಗೆ—ವೈರಾಗ್ಯ ಷಟ್ಪದಿ, ಶಿವಲಿಂಗ ಷಟ್ಪದಿ, ಶಿವಮಹಿಮಾ ಶತಕ, ಪಂಚವಿಂಶತಿನುತಿ, ಷಡ್ಚಕ್ರಸ್ತೋತ್ರಂ ಎಂಬ ಇತರ ಗ್ರಂಥಗಳಿವೆ.

1500

ಕೆ.ಬಿ. ೮೭/೨ **ಲಿಂಗಸ್ತೋತ್ರದ ಷಟ್ಪದಿ** ವಿವಿಧಷಟ್ಪದಿ

೭.೯" × ೬.೪" ? ?

೧–೨೮ ಪತ್ರ ೧೨ ಪಂಕ್ತಿ ೧೬ ಅಕ್ಷರ

ಆದಿ : ಶ್ರೀಲಿಂಗಸ್ತೋತ್ರದ ಷಟ್ಪದಿ ಬರಿಯುವುದಕ್ಕೆ ಪ್ರಾರಂಭ

ಪದ್ಯ || ಶ್ರೀಮದಗಜ ವಾಮಭಾಗೋ
ದ್ಧಾಮವ ಪುರಭಿರಾಮನಭಿನುತ
ಸಾಮಗಾನಸ್ತೋ_ೀಮ ಸರಸ ಪ್ರೇಮನರಿಭೀಮಾ
ಕಾಮ ತಾತ ಪಿತಾಮಹಾಪ್ತಮು
ಖಾಮರೇಂದ್ರಕ್ಷೇಮನಪ್ರತಿ
ನಾಮನೊಸೆದುದ್ಧರಿಸುಗೆಂಮುನು ಸಿದ್ಧಮಟಧಾಮಾ || ೧ ||

ಅಂತ್ಯ : ಈ ಮಹಾಘನಲಿಂಗಸ್ತೋತ್ರಮಂ ಪರತರ
ಪ್ರೇಮದಿಂ ಪಠಿಸಿ ಕೇಳಿದೊಡೆ ಸಲೆ ವಿಸ್ತರಿಸಿ
ತಾಮ್ಮೋಹದಿಂ ಪೇಳಿದೊಡೆ ನುತಿಸಿ ಕೀರ್ತಿಸಿದೊಡೆ ಯಕ್ಷ ರಾಕ್ಷಸವಿಪಕ್ಷಾ
ಕಾಮಯಮಮೃತ್ಯು ದಾರಿದ್ರ ಹರಿಕರಿಚೋರ
ಕ್ಷಾಮ ಡಾಮರ ಶಕ್ತಿಕ್ಷಪ ವಿಷಫಣಿ ಪುಲಿ
ಈ ಮಹಾಯಿಳಿದನಘ ಪರಮಲಿಂಗೈಕ್ಯರ ಹರಿವು ಸಿದ್ಧವೂ || ೧೧೧ ||
ಲಿಂಗಸ್ತೋತ್ರದ ಷಟ್ಪದಿ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಲಿಂಗಮಹಿಮಾ ವರ್ಣನೆ.

ವಿಶೇಷ : ಬರಹವು ಸುಂದರವಾಗಿದೆ. ಇದೇ ಪುಸ್ತಕದಲ್ಲಿ ಮರುಳುದೇವರ ಕಂದ, ಷಡಕ್ಷರಿಯ ಕಂದ, ಮಿಶ್ರಸ್ತೋತ್ರ ಮುಂತಾದ ಗ್ರಂಥಗಳಿವೆ.

1501

ಕೆ.ಬಿ. ೩೧೮	**ಲಿಂಗಾಚಾರ ರಚನಾಗಮ**	ಶ್ಲೋಕ, ಟೀಕ ೧
೭.೬" × ೬.೨"	ಗುರುಸಿದ್ಧಯೋಗಿ	೧೫೬೦
೧–೧೪೧ ಪತ್ರ	೧೨ ಪಂಕ್ತಿ	೨೧ ಅಕ್ಷರ

ಆದಿ : ಲಿಂಗಾಚಾರ ರಚನಾಗಮ ಪ್ರಾರಂಭ :—
ಶ್ರೀಮದ್ವೇದಶಿರೋ ರಹಸ್ಯ ವಿಲಸತ್ತತ್ವಪ್ರಬೋಧೋ ಗುರು
ರ್ಭಕ್ತಿಜ್ಞಾನ ವಿರಕ್ತಿ ಶಕ್ತಿ ಸಹಿತಃ ಕಾರುಣ್ಯವಾರಾಂ ನಿಧಿಃ
ಭಕ್ತಾಭೀಷ್ಟಕರಃ ಪ್ರಸನ್ನವದನೋ ಯೋ ವರ್ತತೇ ಭೂತಳೇ
ತಸ್ಮೈ ಶ್ರೀ ಮರಿಶಾಂತ ದೇಶಿಕಕುಲಾಚಾರ್ಯಾಯ ತೆಸ್ಮೈ ನಮಃ ||
ವಿನಮ್ಯ ಮುರಿಗಾಶಾಂತ ವೀರೇಶಂ ಗುರುಮೀಶ್ವರಂ |
ಲಿಂಗಾಚಾರಸ್ಯ ರಚನಾ ಕ್ರಿಯತೇ ಬೋಧ್ಯಸಿದ್ಧಯೇ ||
ಟೀ|| ಮುರಿಗಾಶಾಂತವೀರೇಶಂ | ಮುರಿತ್ಯತ್ರ ಮುರವೇಷ್ಟನ ಇತಿ ಧಾತು ಗತ್ಯಾ ಮೊರತೀತಿ ಮುರಃ | ಮುರಶ್ಚರ್ಮವೇಷ್ಟನಂ | ತದೇಷಾಮಸ್ತೀ | ಮುರಿಣಶ್ಚರ್ಮಶರೀರಿಣಃ | ಚರಾಚರ ಜೀವಿನಸ್ತಾರ್ಣ ಗಚ್ಛತೀತಿ ಮುರಿಗಾ|

x x x x ಈಶ್ವರಂ ಪರಶಿವನನು। ವಿನಮ್ಯ ಮಿಗೆ ನಮಸ್ಕರಿಸಿ ಬೋಧ್ಯ ಸಿದ್ಧಯೆ ಬೋಧ್ಯ ಬೋಧಿಸಲ್ಕತ್ಕಂಥಾವರ ಸಿದ್ಧಯೇ–ಸಿದ್ಧಿಗೋಸ್ಕರ। ಲಿಂಗಾಚಾರಸ್ಯ–ಲಿಂಗಾಚಾರದ । ರಚನಾ–ರಂಜನೆಯು । ಮಯಾ-ಯೆನ್ನಿಂದೆ। ಕ್ರಿಯತೇ-ಮಾಡಲ್ಪಡುತ್ತಿರ್ದ್ದಪುದು— ॥ ೧ ॥

ಅಂತ್ಯ : ಶಾ॥ ಶ್ರೀಮದ್ದೇಶಿಕ ಚಕ್ರವರ್ತಿಮುರಿಗಾಸ್ವಾಮಿ ಪ್ರಬೋಧಾದಯು
ಸ್ಸಜ್ಜ್ಯೋತಿಶ್ಶಿವಲಿಂಗಪಾದಸರಸೀಸಂಜಾತ ಭೃಂಗೋ ಮಹಾ
ಚಕ್ರೇಽಮುಂ ಗುರುಸಿದ್ಧಯೋಗಿವಿಬುಧಸ್ಸಂಪಟ್ಸ್ಥಲಾದ್ವೈತ ವಿ
ದ್ಭಕ್ತಾನಾಮನುರೂಪಕೋಸ್ತು ವಿಜಯಿಾ ಲೋಕತ್ರಯೇ ಸಂಗ್ರಹಃ ॥ ಶ್ರೀ ॥
ಗದ್ಯ ॥ ಶ್ರೀಮನ್ಮಹಾವೀರ ಮಾಹೇಶ್ವರ ಶಿರೋವ್ರತಾತ್ಮಕ ಲಿಂಗಧಾರಣಚಾರ ಪ್ರತಿಷ್ಠಾ ಕರ್ತುಃ ವೇದವೇದಾಂತ ಸ್ಮೃತೀತಿಹಾಸ ಸೂತ್ರ ಪುರಾಣಗಮಾದಿ ಸಕಲ ಶಾಸ್ತ್ರ ಪ್ರಸಿದ್ಧ ಗ್ರಂಥಸಂತತಿ ಕೃತಸಾರಸಂಗ್ರಹೀಭೂತ ಲಿಂಗಾಚಾರ ರಚನಾಗಮೋ ನಾಮೈಕಾದಶಪಟಲಃ ಪರಿಸಮಾಪ್ತಃ ಶ್ರೀ ॥
ಶಾಲೀವಾಹನ ಶಕ ಸಂದ ಸಾವಿರದ ಆರನೂರ ಐವತ್ತೆರಡನೆಯದಾಥಂಥ ಶುಕ್ಲ ಸಂವತ್ಸರದ ಜೇಷ್ಠಮಾಸದ ದಶಮಿ ಸೋಮವಾರದಲ್ಲಿಯು ಶ್ವೇತಪುರದ ದೊಡ್ಡಮಠದಲ್ಲಿಯು ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ನಿರಂಜನ ಪರಂಜ್ಯೋತಿ ಸ್ವರೂಪರಾದಂಥ ಪೂರ್ವತೇಜೋಮಯರಾದಂಥ ಯನ್ನನುದ್ಧರಿಸಿದಂಥ ಆಧಾರಾದಿ ಪಶ್ಚಿಮಾಂತ್ಯವಾದ ಥಲಂಗಳಲ್ಲಿ ತಾನೆ ತಾನಾದ ಎನ್ನ ಸರ್ವಾಂಗದಲ್ಲಿ ಸಂಪೂರ್ಣನಾದಂಥ ಶ್ರೀ ಗುರುವಿನ ಚರಣಾರವಿಂದಂಗಳಿಗೆ ಲೇಖನ ಸಮರ್ಪಣೆಯಾಯಿತು.

ವಿಷಯ : ವೀರಶೈವರ ಆಚಾರದ ವಿವರ.

ವಿಶೇಷ : ಸುಂದರಾಕ್ಷರ.

1502

ಕೆ. ೧೪	**ಲೀಲಾವತಿ**	ಚಂಪು
೧೦.೭" × ೧.೭"	ನೇಮಿಚಂದ್ರ	೧೧೭೦
೧–೧೬೨ ಪತ್ರ	೮ ಪಂಕ್ತಿ	೫೦ ಅಕ್ಷರ

ಆದಿ : ಲೀಲಾವತಿ । ಸ್ರಗ್ಧರ ।

ಶ್ರೀಪಾದಾಕ್ರಾಂತಲೋಕಂ ಪರಮಹಿಮಕರಂ ನೂತನಕ್ಷತ್ರಕಾಂತಂ
ತಾಪಧ್ವಾಂತಂ ಪನೋದಕ್ಷಮನಮೃತಕಳಾವಲ್ಲಭಂ ವಿಶ್ವವಿದ್ಯಾ
ಕೂಪಾರೋಜ್ಜೀವ ಜೈವಾತ್ರುಕ ತನುಕೃತಾ ಶ್ರಾಂತ ಸೌಖ್ಯಂ ತ್ರಿಲೋಕೀ
ದೀಪ ತಳ್ಕೈಸುಗಸ್ಮಿನ್ಮತಿ ಕುಮುದಿನಿಯಂ ನೇಮಿಚಂದ್ರಂ ಜಿನೇಂದ್ರಂ ॥ ೧ ॥

ಅಂತ್ಯ : ಕಂ॥ ಮಾಸದ ಮಳಯಜ ರೇಖಾ
ನ್ಯಾಸಂ ಕರಮೆಸೆದುದಾ ವಿಳಾಸಿನಿಯರ ಕಂ
ಣ್ಣಾಸಿಗದೆ ಮುಳಿದು ಮೋದಿದ
ಬಾಸುಳಿದೆನೆ ಮೆಯ್ಯೊಳಾ ನರೇಂದ್ರಾತ್ಮಜನಾ ॥ ೩೦ ॥
ಕಂ ॥ ಬಳಸಿದ ಬಗೆಯರ ಘನಕುಚ
ಕಳಶಂಗಳ ನಡುವೆ ನೃಪತಿ ಲಾವಣ್ಯ ಮಹಾ
ಜಳದಿಯೊಳೆಲಿರ್ದಲಾಬೂ
ಫಳತತಿಗಳ ತೆಪ್ಪದಿಂದೆ ಬರ್ಪವೊಲೆಸೆದಂ ॥

ವಿಷಯ : ಶೃಂಗಾರ ರಸ ಪ್ರಧಾನವಾದ ಲೀಲಾವತಿಯ ಕಥೆ.

ವಿಶೇಷ : ಅಸಮಗ್ರ ಪ್ರತಿ. ೧೨ನೆಯ ಆಶ್ವಾಸದ ೩೧ನೆಯ ಪದ್ಯ ಪೂರ್ತಿ ಗ್ರಂಥವಿದೆ. ಸ್ಫುಟಾಕ್ಷರ. ೭೩ನೆಯ ಕ್ರಮಸಂಖ್ಯೆಯ ೨ ಪತ್ರಗಳಿವೆ.

1503

ಕೆ. ೧೧೪	**ಲೀಲಾವತಿ**	ಚಂಪು
೧೯.೨" × ೧.೯"	ನೇಮಿಚಂದ್ರ	೧೧೭೦
೧–೭೪ ಪತ್ರ	೧೧ ಪಂಕ್ತಿ	೯೮ ಅಕ್ಷರ

ಆದಿ : ಲೀಲಾವತಿ ಪುಸ್ತಕಸ್ಯ ಭದ್ರಂ ಭೂಯಾತ್॥ ಸ್ರಗ್ಧರಾವೃತ್ತಂ ॥
ಶ್ರೀಪಾದಾಕ್ರಾಂತಲೋಕಂ ಪರಮಹಿಮಕರಂ ನೂತನಕ್ಷತ್ರಕಾಂತಂ
ತಾಪಧ್ವಾಂತಾಪನೋದಕ್ಷಮನಮೃತ ಕಲಾವಲ್ಲಭಂ ವಿಶ್ವವಿದ್ಯಾ
ಕೂಪಾರೋಜ್ಜೀವಜೈವಾತೃಕನತನುಕೃತಶ್ರಾಂತ ಸೌಖ್ಯಂ ತ್ರಿಲೋಕೀ
ದೀಪಂ ತಳ್ಕೈಸುಗಸ್ಮನ್ಮತಿ ಕುಮುದಿಸಿಯಂ ನೇಮಿಚಂದ್ರಂ ಜಿನೇಂದ್ರಂ ॥ ೧ ॥

ಅಂತ್ಯ : ಧರೆಯಂ ರಕ್ಷಿಸುತಿರ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವೀಶ್ವರಂ
ಸಿರಿಯಂತಾತನ ತೋಳೊಳಿಕ್ಕೆ ಸತತಂ ಶ್ರೀಚಂದ್ರಿಕಾದೇವಿ ಸಾ
ಯಿರಿಮಂ ಕಾವ್ಯವನೊಲ್ದು ಪೇಳ್ಗೆ ಸುಖದಿಂ ಚಂದ್ರೋದಯಮಂ ಸಪ್ತಸಾ
ಗರ ಪರ್ಯಂತ ಧರಿತ್ರಿಯೊಳ್ನೆಲಸುಗೀ ಕಾವ್ಯಂ ಶುಭಂ ಮಂಗಳಂ ॥
ಗದ್ಯ ॥ ಇದು ವಿದಿತ ವಿವಿಧ ಪ್ರಬಂಧ ವನವಿಹಾರ ಪರಿಣತ ಪರಮ
ಜಿನಚರಣ ರಂಮ್ಯ ಹರ್ಮ್ಯ ಚಲೋಚ್ಚಲಿತ ನಖ ಮಯೂಖ ಮಂದಾಕಿನೀ
ಮಜ್ಜನಾಸಕ್ತ ಸಂತತೋತ್ಸಿಕ್ತ ದಾನಾಮೋದ ಮುದಿತ ಬುಧಮಧುಕರ ಪ್ರಕರ
ಕವಿರಾಜ ಕುಂಜರ ವಿರಚಿತಮಪ್ಪ ಲೀಲಾವತಿಯೊಳ್ನಾಯಿಕಾ ಪುರಪ್ರವೇಶ
ವರ್ಣ್ನನಂ ಚತುರ್ದಶಾಶ್ವಾಸಂ ॥ ೧೪ ॥ x x x x
ಇತಿ ಶ್ರೀ ಲೀಲಾವತಿ ಪ್ರಬಂಧಸ್ಸಮಾಪ್ತಃ ।

ವಿಷಯ : ಶೃಂಗಾರರಸ ಪ್ರಧಾನವಾದ ಲೀಲಾವತಿಯ ಕಥೆ.

ವಿಶೇಷ : ಪ್ರತಿ ಸಮಗ್ರವಾಗಿದೆ. ಚೆನ್ನಾಗಿದೆ.

1504

ಕೆ. ೧೩೫	**ಲೀಲಾವತಿ**	ಚಂಪು
೭.೫" × ೧.೪"	ನೇಮಿಚಂದ್ರ	೧೧೭೦
೧–೧೮೨ ಪತ್ರ	೯ ಪಂಕ್ತಿ	೩೫ ಅಕ್ಷರ

ಆದಿ : ಶ್ರೀಪಾದಾಕ್ರಾಂತಲೋಕಂ ಪರಮಹಿಮಕರಂ ನೂತನಕ್ಷತ್ರ....
........ಪನೋದಕ್ಷಮನಮೃತ ಕಳಾವಲ್ಲಭಂ ವಿಶ್ವವಿದ್ಯಾ
ಕೂಪಾರೋಜ್ಜೀವ ಜೈನಾತ್ಮಕನತನು ಕೃತಾಶ್ರಾಂತ ಸೌಖ್ಯಂ ತ್ರಿಲೋಕೀ
ದೀಪಂ ತಳ್ಕೈಸುಗಸ್ಮನ್ಮತಿ ಕುಮುದಿನಿಯಂ ನೇಮಿಚಂದ್ರಂ ಜಿನೇಂದ್ರಂ || ೧ ||

ಅಂತ್ಯ : ವರೆಯಂ ರಕ್ಷಿಸುತಿರ್ಕೆ ಲಕ್ಕವರ್ಷಂ. . ಲಕ್ಷ್ಮೀಧರೋರ್ವೀಶ್ವ . .
ಸಿರಿಯಂ ತಾತನ ತೋಳೊಳಿರ್ಕೆ ಸತತಂ ಶ್ರೀ ಚಂದ್ರಿಕಾದೇವಿ ಸಾ
ವಿರಮುಂ ಕಾವ್ಯಮನೊಲ್ದು ಪೇಳ್ಗೆ ಸುಖದಿಂ ಚಂದ್ರೋದಯಂ ಸಪ್ತ ಸಾ
ಗರಪರಿಯಂತ ದರಿತ್ರಿಯೊಳ್ನೆಲಸುಗೀ ಕಾವ್ಯಂ ಶುಭಂ ಮಂಗಳಂ ||
ಗದ್ಯ || ಇದು ವಿದಿತ ವಿವಿದ ಪ್ರಬಂಧವನ ವಿಹಾರ ಪರಿಣತ ಪರಮ ಜಿನ ಚರಣರಮ್ಯ x x x ಕವಿರಾಜಕುಂಜರ ವಿರಚಿತಮಪ್ಪ ಲೀಲಾವತಿಯೊಳು ನಾಯ್ಕ ಪುರಪ್ರವೇಶವಣ .. ....|| ಮೂಲ ಪುಸ್ತಕದೊ........ಮೂಲಸ........ ಭಾವತಾ ಬರದ ಪುಸ್ತಕ ೧ಕ್ಕೆ ಮಂಗಳಮಹಾ ಶ್ರೀ|| ಯಿಾ ಪೊಸ್ತುಕ ವಿಳಂಬಿ ಸಂವತ್ಸರದಲ್ಲಿ ಬರದುದೂ ||

ವಿಷಯ : ಶೃಂಗಾರರಸ ಪ್ರಧಾನವಾದ ಲೀಲಾವತಿಯ ಕಥೆ.

ವಿಶೇಷ : ಸಣ್ಣಕ್ಷರ. ಶಿಥಿಲಪ್ರತಿ. ಮೊದಲು ಕೊನೆಗಳಲ್ಲಿ ಒಂದೆರಡು ಪತ್ರಗಳ ಅಂಚು ಮುರಿದಿದೆ. ೩೪ನೆಯ ಪತ್ರ ಲುಪ್ತ. ೧೨೧ನೆಯ ಪತ್ರ ಎರಡಿವೆ.

1505

ಕೆ. ೧೭೨	**ಲೀಲಾವತಿ**	ಚಂಪು
೧೫.೨" × ೧.೮"	ನೇಮಿಚಂದ್ರ	೧೧೭೦
೧–೧೪೧ ಪತ್ರ	೧೧ ಪಂಕ್ತಿ	೭೮ ಅಕ್ಷರ

ಆದಿ : ಶ್ರೀಪಾದಾಕ್ರಾಂತಲೋಕಂ....ನೂತನಕ್ಷತ್ರಕಾಂತಂ
ತಾ....ನೋದಕ್ಷಮನಮೃತಕಲಾವಲ್ಲಭಂ ವಿಶ್ವವಿದ್ಯಾ

ಕೂಪಾರೋಜ್ಜೀವ ಜೈವಾತೃಕನತನುಕೃತ ಶ್ರಾಂತಸೌಖ್ಯಂ ತ್ರಿಲೋಕೀ
ದೀಪಂ ತಳ್ಕೈಸುಗಸ್ಮಿನ್ಮತಿ ಕುಮುದಿನಿಯಂ ನೇಮಿಚಂದ್ರಂ ಜಿನೇಂದ್ರಂ ||೧||

ಅಂತ್ಯ : ಧರೆಯಂ ರಕ್ಷಿಸುತಿರ್ಕ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವ್ವೀಶ್ವರಂ
ಸಿರಿಯಂ ತಾತನ ತೋಳೊಳಿರ್ಕ್ಕೆ ಸತತಂ ಶ್ರೀ ಚಂದ್ರಿಕಾದೇವಿ ಸಾ
ಯಿರಮಂ ಕಾವ್ಯವನೊಲ್ದು ಪೇಳ್ಗೆ ಸುಖದಿಂ ಚಂದ್ರೋದಯಂ ಸಪ್ತಸಾ
ಗರ ಪರ್ಯ್ಯಂತ ಧರಿತ್ರಿಯೊಳ್ನೆಲಸುಗೀ ಕಾವ್ಯಂ ಶುಭಂ ಮಂಗಲಂ ||
ಗದ್ಯ–ಇದು ವಿದಿತ ವಿವಿಧ ಪ್ರಬಂಧ ವನವಿಹಾರ ಪರಿಣತ ಪರಮಜಿನ ಚರಣ ರಮ್ಯ ಹರ್ಮ್ಯಾಚಲೋಚ್ಚಲಿತ ನಖಮಯೂಖ ಮಂದಾಕಿನೀ ಮಜ್ಜನಾಶಕ್ತ ಸಂತತೋತ್ಸಿಕ್ತ ದಾನಾಮೋದಮುದಿತ ಬುಧಮಧುಕರ ಪ್ರಕರ ಕವಿರಾಜ ಕುಂಜರ ವಿರಚಿತಮಪ್ಪ ಲೀಲಾವತಿಯೊಳ್ನಾಯಿಕಾ ಪುರಪ್ರವೇಶ ವರ್ನ್ನನಂ ಚತುರ್ದ್ದಶಾಸ್ವಾಸಂ || ೧೪ ||
ಲೀಲಾವತಿ ಸಂಪೂರ್ಣ್ಣಂ ಮಂಗಲಮಹಾ ಶ್ರೀ || ವಿಕೃತಿ ಸಂವತ್ಸರದ ಚಯಿತ್ರ ಶುದ್ಧ ತ್ರಯೋದಶಿಯೂ ಸೋಮವಾರ ಹದಿನಾಡ ಯಿಂಮಡಿ ರಾಮರಾಜನಾಯಕರಿಗೆ ತಳಕಾಡ ದೇವರಸ ಉಪಾಧ್ಯರು ಬರೆದ ಲೀಲಾ ವತಿಗಂ ಮಂಗಲಮಹಾ ಶ್ರೀ ಶುಭಮಸ್ತು ||

ವಿಷಯ : ಶೃಂಗಾರರಸ ಪ್ರಧಾನವಾದ ಲೀಲಾವತಿಯ ಕಥೆ.

ವಿಶೇಷ : ಅಕ್ಷರಗಳು ವಿರಳವಾಗಿವೆ. ಶಕಟರೇಫದ ಬಳಕೆ ಇದೆ. ೧ಮತ್ತು ೨ನೆಯ ಗರಿಗಳ ಅಂಚು ಮುರಿದಿದೆ. ಕೊನೆಯಲ್ಲಿ ಗಣಿತ ಶಾಸ್ತ್ರಕ್ಕೆ ಸಂಬಂಧಪಟ್ಟ ಒಂದು ಗರಿ ಇದೆ.

1506

ಕೆ. ೩೭೧	**ಲೀಲಾವತಿ**	ಚಂಪು
೧೯.೩″ × ೧.೯″	ನೇಮಿಚಂದ್ರ	೧೧೭೦
೧–೧೭೧ ಪತ್ರ	೩ ಪಂಕ್ತಿ	೮೨ ಅಕ್ಷರ

ಆದಿ : ಲೀಲಾವತಿ ಪುಸ್ತಕ ಬರೆಯುವುದಕ್ಕೆ ನಿರ್ವಿಘ್ನಮಸ್ತು |
ಶ್ರೀಪಾದಾಕ್ರಾಂತಲೋಕಂ ಪರಮಹಿಮಕರಂ ನೂತ್ನನಕ್ಷತ್ರಕಾಂತಂ
ತಾಪಧ್ವಾಂತಾಪನೋದಕ್ಷಮನಮೃತಕಳಾವಲ್ಲಭಂ ವಿಶ್ವವಿದ್ಯಾ
ಕೂಪಾರೋಜ್ಜೀವಜೈವಾತೃಕನತನುಕೃತಾಶ್ರಾಂತಸೌಖ್ಯಂ ತ್ರಿಲೋಕೀ
ದೀಪಂ ತಳ್ಕೈಸುಗಸ್ಮನ್ಮತಿಕುಮುದಿನಿಯಂ ನೇಮಿಚಂದ್ರಂ ಜಿನೇಂದ್ರ || ೧ ||

ಅಂತ್ಯ : ಧರೆಯಂ ರಕ್ಷಿಸುತಿರ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವೀಶ್ವರಂ
ಸಿರಿಯಂತಾತನ ತೋಳೊಳಿರ್ಕೆ ಸತತಂ ಶ್ರೀಚಂದ್ರಿಕಾದೇವಿ ಸಾ
ಯಿರಮಂ ಕಾವ್ಯಮನೊಲ್ದು ಪೇಳ್ಗೆ ಸುಖದಿಂ ಚಂದ್ರೋದಯಂ ಸಪ್ತಸಾ
ಗರ ಪರ್ಯ್ಯಂತ ಧರಿತ್ರಿಯೊಳ್ನೆಲಸುಗೀ ಕಾವ್ಯಂ ಶುಭಂ ಮುಂಗಲಂ ॥
ಗದ್ಯ ॥ ಯಿದು ವಿದಿತ ವಿವಿಧ ಪ್ರಬಂಧವನ ವಿಹಾರ ಪರಿಣತ ಪರಮ ಜಿನ ಚರಣ ರಮ್ಯ ಹರ್ಮ್ಯೋಚ್ಚಲೋಚ್ಚಲಿತ ನಖ ಮಯೂಖ ಮಂದಾಕಿನೀ ಮಜ್ಜನಾಸಕ್ತ ಸಂತತೋತ್ಸಿಕ್ತ ದಾನಾಮೋದಮುದಿತ ಬುಧ ಮಧುಕರ ಪ್ರಕರ ಕವಿರಾಜಕುಂಜರ ನೇಮಿಚಂದ್ರ ವಿರಚಿತಮಪ್ಪ ಲೀಲಾವತಿ ಮಹಾ ಪ್ರಬಂಧದೊಳ್ ವನವಿಹಾರ ನಾಯಕಾ ಜಯಂತಿ ಪುರಪ್ರವೇಶ ವರ್ಣ್ನನಂ ಚತುರ್ದಶಾಶ್ವಾಸಂ ಜಯಮಂಗಳಂ ಮಹಾಶ್ರೀ ಲೀಲಾವತಿ ಪುಸ್ತಕ ಸಂಪೂರ್ಣ್ನಂ ॥

ವಿಷಯ : ಶೃಂಗಾರರಸ ಪ್ರಧಾನವಾದ ಲೀಲಾವತಿಯ ಕಥೆ.

ವಿಶೇಷ : ಸುಂದರಾಕ್ಷರ. ಪಂಕ್ತಿಗಳಿಗೆ ಕ್ರಮಾಂಕವಿದೆ. ಮೊದಲು ಕೊನೆಗಳಲ್ಲಿ ಕೆಲವು ಶುದ್ಧ ಪತ್ರಗಳಿವೆ. ೭ನೆಯ ಗರಿ ಮುರಿದಿದೆ. ಗ್ರಂಥಾಂತ್ಯದಲ್ಲಿ ಕ್ರಮ ಸಂಖ್ಯೆಯಿಲ್ಲದ ಇದೇ ಗ್ರಂಥಕ್ಕೆ ಸಂಬಂಧಿಸಿದ ಬೇರೊಂದು ಗರಿಯಿದೆ.

1507

ಕೆ.ಎ. ೨೫	**ಲೀಲಾವತಿ**	ಚಂಪು
೧೨.೪" × ೭.೮"	ನೇಮಿಚಂದ್ರ	೧೧೭೦
೧–೨೭೧ ಪುಟ	೩೦ ಪಂಕ್ತಿ	೨೩ ಅಕ್ಷರ

ಆದಿ : ಲೀಲಾವತಿ ॥ ಪ್ರಥಮಾಶ್ವಾಸ ಪ್ರಾರಂಭ ॥
ಸ್ರಗ್ಧರೆ ವೃ॥ಶ್ರೀಪಾದಾಕ್ರಾಂತಲೋಕಂ ಪರಮಹಿಮಕರಂ ನೂತನಕ್ಷತ್ರಕಾಂತಂ
ತಾಪಧ್ವಾಂತಾಪನೋದಕ್ಷಮನಮೃತಕಳಾವಲ್ಲಭಂ ವಿಶ್ವವಿದ್ಯಾ
ಕೂಪಾರೋಜ್ಜೀವಜೈವಾತ್ರಕನತನುಕೃತಶ್ರಾಂತಸೌಖ್ಯಂ ತ್ರಿಲೋಕೀ
ದೀಪಂ ತಳ್ಕೈಸುಗನ್ಮಿನ್ಮತಿ ಕುಮುದಿನಿಯಂ ನೇಮಿಚಂದ್ರಂ ಜಿನೇಂದ್ರಂ ॥

ಅಂತ್ಯ : ವೃ ॥ ಧರೆಯಂ ರಕ್ಷಿಸುತಿಕ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವೀಶ್ವರಂ
ಸಿರಿಯಂ ತಾತನ ತೋಳೊಳಿರ್ಕೆ ಸತತಂ ಶ್ರೀ ಚಂದ್ರಿಕಾದೇವಿ ಸಾ
ಯಿರಮಂ ಕಾವ್ಯಮನೊಲ್ದು ಪೇಳ್ಗೆ ಸುಖದಿಂ ಚಂದ್ರೋದಯಂ ಸಪ್ತ ಸಾ
ಗರಪರ್ಯಂತ ಧರಿತ್ರಿಯೋಳ್ನೆಲಸುಗೀ ಕಾವ್ಯಂ ಶುಭಂ ಮಂಗಳಂ ॥
ಗದ್ಯ—ಇದು ವಿದಿತ ವಿವಿಧ ಪ್ರಬಂಧವನವಿಹಾರ ಪರಿಣತ ಪರಮಜನ ಚರಣ ರಮ್ಯಹರ್ಮ್ಯಾಚಳೋಚ್ಚಳಿತ ನಖಮಯೂಖ ಮಂದಾಕಿನೀ ಮಜ್ಜನಾಶಕ್ತ ಸಂತತೋತ್ಸಿಕ್ತ ದಾನಾಮೋದ ಮುದಿತ ಬುಧಮಧುಕರ ಪ್ರಕರ ಕವಿರಾಜ

ಕುಂಜರ ವಿರಚಿತಮಪ್ಪ ಲೀಲಾವತೀ ಪ್ರಬಂಧದೋಳ್ ನಾಯಿಕಾಪುರ ಪ್ರವೇಶ ವರ್ನನಂ ಚತುರ್ದಶಾಶ್ವಾಸಂ ಸಂಪೂರ್ನಂ ಮಂಗಳಮಸ್ತು ॥ ಸ್ವಸ್ತಿಶ್ರೀ ಸಕಲ ಕಲ್ಯಾಣಭ್ಯುದಯ ಶಾಲೀವಾಹನ ಶಕವರ್ಷ ೧೪೩೨ನೆಯ ವಿಳಂಬಿ ಸಂವತ್ಸರದ ಫಾಲ್ಗುಣ ಶುದ್ಧ ೧೨ ಆದಿತ್ಯವಾರದಲ್ಲು ಶ್ರೀಮದ್ರಾಜಧಿರಾಜರಾದ ಬೆಟ್ಟದ, ಚಾಮುರಸುವೊಡೆಯರವರ ಕುಮಾರಕರಾದ ಕಂಠೀರವ ನರಸ ರಾಜೇಂದ್ರಂಗೆ ಆಯುರಾರೋಗ್ಯ ಅಯಿಶ್ವರ್ಯಾಭಿವೃದ್ಧಿಯಾಗಲಿಯೆಂದು ಪುತ್ರ ಪೌತ್ರ ಪರಂಪರೆ ಆಗಲಿಯೆಂದು ಪೊಲುಕಂಡಿ ಚಿಟ್ಟೆಯನ ಕುಮಾರನು ಭಾರತಿ ಅಯಣ್ಣನು ಬರೆದುಕೊಟ್ಟಂಥಾ ಲೀಲಾವತಿಯ ಪುಸ್ತುಕ। ಮಂಗಳ ಮಹಾ ಶ್ರೀ ॥

ವಿಷಯ : ಶೃಂಗಾರರಸಪ್ರಧಾನವಾದ ಲೀಲಾವತಿಯ ಕಥೆ.

ವಿಶೇಷ : ಸಣ್ಣಕ್ಷರ. ಶಕಟರೇಫದ ಬಳಕೆ ಇದೆ. ಕಾವ್ಯಾರಂಭಕ್ಕೆ ಮೊದಲು ಪ್ರತ್ಯೇಕ ಎರಡು ಪುಟಗಳಲ್ಲಿ ವಿಷಯಸೂಚಿ ಇದೆ. ಕೊನೆಯಲ್ಲಿ " ಬಹುಧಾನ್ಯ ಸಂವತ್ಸರದ ಫಾಲ್ಗುಣ ಶುದ್ಧ ೫ ಶುಕ್ರವಾರದಲ್ಲೂ ಉಗ್ರಾಣದ ಸಿದ್ದೈಯನ ಮಗ ದೇವರಾಯನು ಬರೆದ ಲೀಲಾವತಿಯ ಪುಸ್ತುಕಕ್ಕೆ ಮಂಗಳಮಹಾ " ಎಂದು ಸೀಸದ ಕಡ್ಡಿಯಿಂದ ಬರೆದಿದೆ.

1508

ಕೆ.ಎ.೬೮	**ಲೀಲಾವತಿ**	ಚಂಪು
೧೨.೭" × ೭.೮"	ನೇಮಿಚಂದ್ರ	೧೧೭೦
೧–೪೦೬ ಪತ್ರ	೧೮ ಪಂಕ್ತಿ	೨೨ ಅಕ್ಷರ

ಆದಿ : ಲೀಲಾವತೀ ಪುಸ್ತುಕಕ್ಕೆ ನಿರ್ವಿಘ್ನಮಸ್ತು ॥
ಶ್ರೀಪಾದಾಕ್ರಾಂತಲೋಕಂ ಪರಮಹಿಮಕರಂ ನೂತನಕ್ಷತ್ರಕಾಂತಂ
ತಾಪಧ್ವಾಂತಾಪನೋದಕ್ಷಮನಮೃತಕಲಾವಲ್ಲಭಂ ವಿಶ್ವವಿದ್ಯಾ
ಕೂಪಾರೋಜ್ಜೀವಜೈವಾತೃಕನತನುಕೃತಶ್ರಾಂತಸೌಖ್ಯಂ ತ್ರಿಲೋಕೀ
ದೀಪಂ ತಳ್ಕೈಸುಗಸ್ಮನ್ಮತಿಕುಮುದಿನಿಯಂ ನೇಮಿಚಂದ್ರಂ ಜಿನೇಂದ್ರಂ ॥ ೧ ॥

ಅಂತ್ಯ : ಧರೆಯಂ ರಕ್ಷಿಸುತಿರ್ಕ್ಕೆ ಲಕ್ಕವರ್ಷಂ ಲಕ್ಷ್ಮೀಧರೋರ್ವೀಶ್ವರಂ
ಸಿರಿಯಂ ತಾತನ ತೋಳೊಳಿರ್ಕ್ಕೆ ಸತತಂ ಶ್ರೀಚಂದ್ರಿಕಾದೇವಿ ಸಾ
ವಿರಮುಂ ಕಾವ್ಯಮನೊಲ್ದು ಪೇಳ್ಗೆ ಸುಖದಿಂ ಚಂದ್ರೋದಯಂ ಸಪ್ತಸಾ
ಗರ ಪರಿಯಂತ ಧರಿತ್ರಿಯೊಳ್ನೆಲಸುಗೀ ಕಾವ್ಯಂ ಶುಭಂ ಮಂಗಳಂ ॥
ಗದ್ಯ ॥ ಇದು ವಿದಿತ ವಿವಿಧ ಪ್ರಬಂಧ ವನವಿಹಾರ ಪರಿಣತ ಪರಮ ಜಿನ ಚರಣ ರಂಮ್ಯ ಹರ್ಮ್ಯಾಚಳೋಚ್ಚಳಿತ ನಖಮಯೂಖ ಮಂದಾಕಿನೀ

ಮಜ್ಜನಾಶಕ್ತ ಸಂತೋತ್ಸಿಕ್ತದಾನಾಮೋದ ಮುದಿತ ಬುಧ ಮಧುಕರ ಪ್ರಕರ ಕವಿರಾಜಕುಂಜರ ವಿರಚಿತಮಪ್ಪ ಲಿಲಾವತಿಯೊಳು ನಾಯಕ ಪುರಪ್ರವೇಶ ವರ್ಣ್ನನಂ ಚತುರ್ದಶಾಶ್ವಾಸಂ || ಅಂತು ಆಶ್ವಾಸ ೧೪ಕ್ಕಂ ಮಂಗಳಂ ಮಹಾ ಶ್ರೀ || ಯರಡು ಮೂಲ ಪ್ರತಿಗಳಂನ್ನು ಯಿಟ್ಟುಕೊಂಡು ಸಮಗ್ರವಾಗಿ ಬರೆಯಲ್ಪಟ್ಟದೆ || ಕವಿಕುಂಜರ ಲೀಲಾವತಿ ಸಂಪೂರ್ಣ್ನಂ ||

ವಿಷಯ : ಶೃಂಗಾರರಸಪ್ರಧಾನವಾದ ಲೀಲಾವತಿಯ ಕಥೆ.

ವಿಶೇಷ : ವಿರಳಾಕ್ಷರ. ಶಕಟರೇಫದ ಬಳಕೆ ಇದೆ. ಪತ್ರದ ಒಂದು ಕಡೆ ಬರವಣಿಗೆ ಯಿದೆ.

1509

ಕೆ.ಬಿ. ೧೭	**ಲೀಲಾವತಿ**	ಚಂಪು
೮.೫" × ೬.೩"	ನೇಮಿಚಂದ್ರ	೧೧೭೦
೧–೨೫ ಪತ್ರ	೧೨ ಪಂಕ್ತಿ	೨೩ ಅಕ್ಷರ

ಆದಿ : ಶ್ರೀ ಕಾಂತಾಕಾಂತನಿಳಾ
ಲೋಕಸ್ತುತನೊಪ್ಪಿದಂ ಕುಬೇರನ ಕೆಳೆಯಿಂ
ಶ್ರೀಕಂಠನೊಪ್ಪುವಂತೆವೊ
ಲಾ ಕೆಳೆಯನ ಕೂಟದಿಂದೆ ಕೃತಿಕುಲದೀಪಂ || ೧ ||

ಅಂತ್ಯ : ವೃ || ಅಂತಪ್ಪಾರಾತ್ರಿ ಸಂಭೋಗಮನತಿಮುದದಿಂ ನೋಡಿದಂ ನಿರ್ವಿಕಾರಾ
ಶಾಂತಂ ನರ್ಮಪ್ರಧಾನೋತ್ತಮ ಕರತಳಕರ್ಪ್ಪೂರ ತಾಂಬೂಲ ದಾನಾ
ತ್ಯಂತಾಭಿತ್ಯಾನ್ವಿತಂ ಮನ್ನಿಸಿ ಬಳಿಕ್ಕಂದು ಪೋದಂ ಜಯಶ್ರೀ
ಕಾಂತೇಶಂ ತಂನ ರಾಜಾಲಯಕೆ ಜನನುತಂ ರೂಪ ಕಂದರ್ಪ ದೇವಂ|| ೧೩೯ ||
ಗದ್ಯ : ಇದು ವಿದಿತ ವಿವಿಧ ಪ್ರಬಂಧ ವನವಿಹಾರ ಪರಿಣತ ಪರಮ ಜಿನ ಚರಣ ರಮ್ಯ ಹರ್ಮ್ಯ್ಯಚಳ್ಳೋಚ್ಚಲಿತ x x x ಕವಿರಾಜ ಕುಂಜರ ವಿರಚಿತಮಪ್ಪ ಶ್ರೀ ಲೀಲಾವತಿಯೊಳ್ ರಾತ್ರಿ ವಿಹಾರವರ್ನನಂ ದ್ವಿತೀಯಾಶ್ವಾಸಂ ಸಂಪೂರ್ನಂ.

ವಿಷಯ : ಶೃಂಗಾರರಸ ಪ್ರಧಾನವಾದ ಲೀಲಾವತಿಯ ಕಥೆ.

ವಿಶೇಷ : ಎರಡನೆಯ ಆಶ್ವಾಸ ಮಾತ್ರ ಇದೆ.

1510

ಕೆ. ೨೦/೨	**ಲೋಸ್ವರೂಪ**	ಕಂದ
೯.೨"×೧.೪"	ಚಂದ್ರಮ	ಸು. ೧೬೫೦
ಪತ್ರ ೨೨–೨೪	೬ ಪಂಕ್ತಿ	೩೮ ಅಕ್ಷರ

ಆದಿ : ಶ್ರೀವರ್ಧಮಾನ ಜಿನರಂ
ಭಾವನನಮಸ್ಕಾರದಿಂದ ವಂದಿಸಿ ಮುದದಿಂ
ಭಾವಕರಿಗಱಿಯ ಪೇಳ್ವೆಂ
ಪಾವನ ಲೋಕಸ್ವರೂಪವಮಂ ಬುದನುತವಮಂ ||

ಅಂತ್ಯ : ಯೆರಡುಂ ಕ್ರೋಶಘನೊಂದದಿ
ಪರಿವೇಷ್ಟಿಸಿದೊಂದು ಕ್ರೋಶ ಘನನಿಲಯದೊಳೊ
ದರೆಯಿಸಿತನುವಾತಂಗಳು
ಯಿರೆ ನಾನೂಱಱುಪ್ಪತ್ತೈದು ಬಿಲ್ಲುಂ ಬದೆದ ಕ್ರೋಶಂ ||
ಲೋಕಾಕಾರ ಸ್ವರೂಪಂ ಸಮಾಪ್ತಂ || ಮಂಗಳಮಹಾ ಶ್ರೀ.

ವಿಷಯ : ಜೈನ ಪ್ರಕ್ರಿಯೆಯಂತೆ ಮೂರು ಲೋಕದ ವರ್ಣನೆ.

ವಿಶೇಷ : ಸಮಗ್ರ. ಶಕಟರೇಫದ ಬಳಕೆಯಿದೆ. ಇದೇ ಕಟ್ಟನಲ್ಲಿ ಯೋಗಾಮೃತ, ದೇವರಾಜವಲ್ಲಭಾಷ್ಟಕ ಇತ್ಯಾದಿ, ಅನುಪ್ರೇಕ್ಷೆ, ಶಾಸ್ತ್ರಸಾರಸಮುಚ್ಚಯ, ಜಿನೇಶ್ವರಾಷ್ಟಕವೆಂಬ ಗ್ರಂಥಗಳಿವೆ.

1511

ಕೆ.ಎ. ೪೫/೩	**ಲೋಕಸ್ವರೂಪ**	ಕಂದ
೧೨.೯"×೭.೯"	ಚಂದ್ರಮ	ಸು. ೧೬೫೦
೬೪–೮೨ ಪುಟ	೨೧ ಪಂಕ್ತಿ	೨೪ ಅಕ್ಷರ

ಆದಿ : ಲೋಕದ ತೆರ ಪ್ರಾರಂಭಾ ||
ಲೋಕಾಲೋಕ ಸುತತ್ವಗ
ಳೇಕಕ್ಷಣಕರಿತು ಕಾಣ್ಬ ವಿಜಯ ಜಿನೇಂದ್ರಂ.
ಗೇಕ ಮನದಿಂದ ವಂದಿಸಿ
ಲೋಕದ ತೆರನಲ್ಪದಿಂದ ಬಲ್ಲನಿತುಸುರ್ವೆಂ || ೧ ||
ಜಿನಮುನಿಗಳ ಪದ ಕಮಲಗ
ಳನು ನಾಂ ಬಲಗೊಂಡು ಜೈನಶಾಸ್ತ್ರಕ್ಕೊರಗಿಂ

ಮ್ಮನವೊಲಿದು ಪೇಳ್ವೆ ಲೋಕಕೆ
ಜನನಂ ತಾನಾಗಿಹುದನಂತಾಕಾಶಂ ॥ ೨ ॥
ಆಕಾಶದ ಬಹುಮಧ್ಯದಿ
ಲೋಕಂ ನಿಂದುಹುದನಾದಿ ನಿಧನದೊಳೆಂದುಂ
ತೂಕದಿ ಧರ್ಮಾಧರ್ಮ್ಮಗ
ಳಾಕಾರಂ ಕಾಲಜೀವಪುದ್ಗಲಮಯದಿಂ ॥ ೩ ॥

ಅಂತ್ಯ : ಇದು ಜಿನರಾಜ ನಿರೂಪಿತ
ಪದಮಲಶ್ಯಾದ್ವಾದವೆಂಬ ಪರಮಾಗಮದಿಂ
ದೊದಗಿಸಿ ಕಂನಡದಿಂದಂ
ವೃದು ಮಾರ್ಗದಿ ಕೇಳ್ದೆ ಮೂರುಲೋಕ ಸ್ಥಿತಿಯಂ ॥ ೧೩೩ ॥

x x x x

ಜಿನಸಮಯ ವಾರ್ಧಿವರ್ಧನ
ನೆನಿಸುವ ಶ್ರೀ ಚಂದ್ರಕೀರ್ತಿ ಯೋಗೀಶ್ವರನಂ
ಮನವೊಲಿದು ನಮಿಸಿ ಚಂದ್ರಮ
ನನುರಾಗದಿ ಕೇಳ್ದೆ ಮೂರುಲೋಕ ಸ್ವರೂಪಂ ॥ ೧೨೫
ತುಳು ಮಧುರೆ ಯನಿಪ ದೇಶದೊ
ಳಳಿಯದ ಪುರದಲ್ಲಿ ನಿಂದ ವಿಜಯ ಜಿನೇಂದ್ರಂ
ಗೊಲಿದೆರಗಿ ಪೇಳ್ದೀ ಕಂದಗ
ಳಿಳೆಯನ್ನಾ್ಯ
ಕೌಶಾಂಬ್ಯೆಂ ಕೌಶಲಾಯಾಂ ಕನಕಪುರವರೇ ದೇವಗಿರ್ಯ್ಯಂ ಚ ಕಾವಶ್ಯಂ
ನಾಶಕೆಂಜಿಗೇಹೆ ದಶಪುರನಗರೇ ಬುದ್ಧಿಲೇಶಾಂವ್ರವತ್ಯಾಂ ॥ x x x ಶ್ರೀ
ಮತ್ತೀರ್ಥಂಕರಾಣಾಂ ಪ್ರತಿದಿವಸಮಹಂ ತತ್ರ ಚೈತ್ಯಾನಿ ವಂದ್ಯಾ ॥
ಸಂಪೂರ್ನಂ ಶ್ರೀ ॥

ವಿಷಯ : ಜೈನಪ್ರಕ್ರಿಯೆಯಂತೆ ಮೂರುಲೋಕಗಳ ವರ್ಣನೆ.

ವಿಶೇಷ : ನೋಡಿ ಅಕ್ಷರ. ಒಟ್ಟು ೧೩೫ ಕಂದಪದ್ಯಗಳಿವೆ. ಇದೇ ಪುಸ್ತಕದಲ್ಲಿ ಯೋಗರತ್ನಾಕರ ಮತ್ತು ದ್ವಾದಶಾನುಪ್ರೇಕ್ಷೆ ಎಂಬ ಕೃತಿಗಳಿವೆ.

1512

ಕೆ.ಎ. ೨೮೪/೭	**ಲೋಕಸ್ವರೂಪ**	ಕಂದ
೧೨.೯″ × ೮.೨″	ಚಂದ್ರಮ	ಸು. ೧೬೫೦
೧–೨ ಪತ್ರ	೨೨ ಪಂಕ್ತಿ	೨೦ ಅಕ್ಷರ

ಆದಿ : ಲೋಕಸ್ವರೂಪ

ಶ್ರಿವರ್ಧಮಾನಜಿನರಂ
ಭಾವನಮಸ್ಕಾರದಿಂದ ವಂಸೀ ಮುದದಿಂ
ಭಾವಕರಿಗಱಿಯ ಪೇಳ್ವೆಂ
ಪಾವನ ಲೋಕ ಸ್ವರೂಪಮಂ ಬುದನುಮಂ ॥ ೧ ॥

ಅಂತ್ಯ : ಎರಡುಂ ಕ್ರೋಶ ಘನೋದದಿ
ಪರಿವೇಷ್ಟಿಸಿದೊಂದು ಕ್ರೋಶ ಘನನಿಳಯದೊಳಂ
ಪರಿಕಿಸೆ ತನುವಾತಂಗಳು ನಾ
ನೂಱಿಪ್ಪತ್ತಯ್ದು ಬಿಲ್ಲುಗುಂದಿದ ಕ್ರೋಶಂ ॥ ೨೨ ॥

ವಿಷಯ : ಜೈನ ಪ್ರಕ್ರಿಯೆಯಂತೆ ಮೂರು ಲೋಕದ ವರ್ಣನೆ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಶಕಟರೇಫದ ಪ್ರಯೋಗವಿದೆ. ಇದರಲ್ಲಿ 'ತ್ರೈಲೋಕ್ಯ ರಕ್ಷಾಮಣಿ ಸ್ತೋತ್ರಂ' ಮೊದಲಾದ ಇತರ ೧೧ ಗ್ರಂಥಗಳಿವೆ.

1513

ಕೆ.ಬಿ. ೨೬೦।೨ **ಲೋಕಸ್ವರೂಪ** ಕಂದ

೮" × ೬.೬" ಚಂದ್ರಮ ಸು. ೧೬೫೦

೧೨–೧೩ ಪತ್ರ ೨೬ ಪಂಕ್ತಿ ೩೨ ಅಕ್ಷರ

ಆದಿ : ಲೋಕಸ್ವರೂಪ ಬರೆವುದಕ್ಕೆ ಶುಭಮಸ್ತು ॥ ಪದ್ಯ ॥

ಶ್ರೀವರ್ಧಮಾನ ಜಿನರಂ
ಭಾವನಮಸ್ಕಾರದಿಂದ ವಂದಿಸಿ ಮುದದಿಂ
ಭಾವಕರಿಗರಿಯ ಪೇಳ್ದೆ
ಪಾವನಲೋಕ ಸ್ವರೂಪಮಂ ಬುದನುತಮಂ ॥ ೧ ॥
ಆಕಾಶ ಮಧ್ಯದಲ್ಲಿಯ
ಲೋಕಂ ಪದಿನಾಲ್ಕು ರಜ್ಜುಮಗಲಮೆದೇಳುಂ
ಯೇಕಂ ಪಂಚಕಮೊಂದೆನೆ
ಯಾಕಾರಂದಾಯುತ್ರಯದಿನೊಪ್ಪುಗು ಲೋಕಂ ॥ ೨ ॥

ಅಂತ್ಯ : ಲೋಕಾಕಾರಮನಿನಿತುಂ
ಯೇಕೈಕಧ್ಯಾನದಿಂದ ಭಾವಿಸುವವರುಂ
ಶ್ರೀಕರಮೆನಿಸುವ ಶಾಶ್ವತ
ಲೋಕೋತ್ತರಮೆನಿಪ ಸುಖದ ಕಣೆಯಾಗಿಕ್ಕುಂ ॥ ೨೩ ॥
ಲೋಕಸ್ವರೂಪ ಸಂಪೂರ್ಣ ಮಂಗಳಮಹಾ ಶ್ರೀ ॥

ವಿಷಯ : ಜೈನಪ್ರಕ್ರಿಯೆಯಂತೆ ಮೂರು ಲೋಕದ ವರ್ಣನೆ.

ವಿಶೇಷ : ಮೋಡಿ ಲಿಪಿ. ಇದೇ ಪುಸ್ತಕದಲ್ಲಿ ಸಜ್ಜನಚಿತ್ತವಲ್ಲಭ, ಜಿನಸಹಸ್ರನಾಮ (ಸಂಸ್ಕೃತ), ಪತಿವ್ರತಾಧರ್ಮ ಎಂಬ ಕೃತಿಗಳಿವೆ.

1514

ಕೆ.ಎ. ೨೦೯/೧ **ಲೋಕಸ್ವರೂಪ** ಕಂದ, ವಚನ,ಅರ್ಧಮಾಗಧಿ, ಗಾಹೆ

೧೨.೮″ × ೮″ ? ?

೧–೪೬ ಪತ್ರ ೩೯ ಪಂಕ್ತಿ ೨೭ ಅಕ್ಷರ

ಆದಿ : ಲೋಕಸ್ವರೂಪ ॥ ಲೋಕಸ್ವರೂಪಮೆಂತೆನೆ

ಕ ॥ ಪರಮ ಜಿನಚರಣ ಕಮಳ
ಕ್ಕರು ಮುದದಿಂದೆರಗಿ ಭವ್ಯ ಜನಹಿತ ಕರಮಂ
ವರ ಮುಕ್ತಿಕಾಂಕ್ಷೆಯಿಂದಂ
ಸುರುಚಿರ ಲೋಕಸ್ವರೂಪಮಂ ಪ್ರಕಟಿಸುವೆಂ ॥

ವ ॥ ಯೆತ್ತಂ ನೋರ್ಪಡಮನಂತಮಪ್ಪ ಸರ್ವಾಕಾಶದ ಮಧ್ಯದಲ್ಲಿ ಜಗಚ್ಛ್ರೇಣಿ ಘನ ಪ್ರಮಾಣಾಸಂಖಾತ ಪ್ರದೇಶಮನುಳ್ಳ ಲೋಕಮಿರ್ಪುದಾ ಲೋಕಮನಾದ್ಯ ನಿಧನಮುಮಕೃತ್ರಿಮಮುಂ ।

x x x x

ಅಲ್ಲಿಯಧೋ ಲೋಕಸ್ವರೂಪಮೆಂತನೆ ॥ ರತ್ನಪ್ರಭೆ । ಶರ್ಕರಾಪ್ರಭೆ । ವಾಳುಕಪ್ರಭೆ । ಪಂಕಪ್ರಭೆ । ಧೂಮಪ್ರಭೆ । x x x x ಮಹಾತಮಃಪ್ರಭೆಯೆಂಟು ಸಾಸಿರಯೋಜನ ಬಾಹುಳ್ಯ ಮಸುಳ್ಳುದಕ್ಕಂ ॥

ಅಂತ್ಯ : ನಿರಂಜನರು । ನಿರ್ಲೇಪರುಂ । ನಿರಾಳಂಬರುಂ ನಿರಹಂಕಾರರುಂ । ನಿರುಪಮರುಮಪ್ಪ ಸಿದ್ಧ ಪರಮೇಷ್ಠಿಗಳಾಗಿ ಸ್ವಾತ್ಮೋತ್ಥಾನಂತಸುಖಮನನವರತಮನುಭವಿಸಿರ್ಪ್ಪರು, ಸಂಕ್ಷೇಪದಿಂ ಲೋಕಸ್ವರೂಪಮನರುಪಿದರು ॥
ಶ್ರೀಮನ್ಮಲೆಯೂರಾದಿ ಪರಮೇಶ್ವರಾಯ ನಮೋ ನಮಃ ॥

ವಿಷಯ : ಜೈನಸಿದ್ಧಾಂತದಲ್ಲಿಯ ಮೂರು ಲೋಕಗಳ ವರ್ಣನೆ

ವಿಶೇಷ : ಇದೇ ಪುಸ್ತಕದಲ್ಲಿ ಕರ್ಮಪ್ರಕೃತಿ, ಪರಮಾಗಮಸಾರ, ರತ್ನಕರಂಡಕಗಳೆಂಬ ಗ್ರಂಥಗಳು ಇವೆ. ಮೋಡಿ ಬರಹ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

1515

ಕೆ. ೫೭೨ ಲೋಕೋಪಕಾರ ಕಂದ, ವೃತ್ತ, ಟೀಕು

೧೪" × ೨.೨" ಚಾವುಂಡರಾಯ ಸು. ೧೧೫೦

೭+೭೩ ಪತ್ರ ೧೦ ಪಂಕ್ತಿ ೫೪ ಅಕ್ಷರ

ಆದಿ : ಲೋಕೋಪಕಾರ ಪುಸ್ತಕಕ್ಕೆ ಶುಭಮಸ್ತು ॥
ಕಂದ ॥ ಶ್ರೀಪತಿ ಉಮಾಪತಿ ವಾ
ಣೀಪತಿಯರು ಮೂವರೊಲಿದು ನಮಗೊರದಿಂ
ಚಾಪಳಮೆನಿಸುವ ಮತಿಗ
ಶ್ರೀಪದಮಂ ಪರಮಪದವನೀಗಭಿವಂದ್ಯರೂ ॥ ೧ ॥

x x x x

ಆಲಿದ ಕರತರದಿನಶ್ವಯಮಂ ಶಿಖಿಕಮಳಜಂ ಶೀ
ತಕರಂ ರುದ್ರನದಿತಿಗುರುಸರ್ಪಪಿತ್ರು ಭಗರ್ವಾ ಅರ್ಯ್ಯಮಂದಿನ
ವರಂ ತ್ವಷ್ಟ್ರು ಸವಿಾರನಿಂದಾಗ್ನಿಮೈತ್ರಂ ಸುರಗಣಾಧಿಪಂ
ನಿರೂತ್ತಿ ಜಳಂ ವಿಶ್ವೆದೇವನಜಂ ವಾಲಿಜಾಕ್ಷಂ ವಸುಸರಧಿಪನತ್ಯಜಪಾಧ—
ನಹಿರ್ಬುಧ್ನ್ಯಂ ಪೌಷ್ಣಮಿವಿಪ್ಪತ್ತೆಂಟು ತಾರೆಗಧೀಶರೂ ॥ ೯ ॥
ಟೀಕು ॥ ಅಶ್ವಿನಿಗೆ ಅಶ್ವಿನಿದೇವರ್ಕಳು । ಭರಣಿಗೆ ಯಮನು । x x x x x
ರೇವತಿಗೆ—ಪೌಷ್ಣದೇವತೆ । ಯಿಾ ಮರಿಯಾದೆಯಲ್ಲು ಯಿಪ್ಪತ್ತೆಂಟು
ನಕ್ಷತ್ರಂಗಳಿಗೆ ಯಿಪ್ಪತ್ತೆಂಟು ಅಧಿದೇವತೆಗಳು ॥

ಅಂತ್ಯ : ಕಂದ ॥ ಶೀತಮುಗರುಜಳಂ ಹಿಮದೀ
ಧಿತಿಯುಂಬವರಿಂದೆ ಧೂಪಮಂ ಕೊಡೆಮುಚಳಾ
ಮೃತರುಚಿ ಚಾತುರ್ಜಾತಕ
ಯುಕ್ತಮಾಗೆ ಸುಧೋಪಮಾನಮಕ್ಕುಂ ಪಾನಂ ॥ ೫೬ ॥
ಟೀಕು ॥ ಯರನ ಹಂಣಿನ ರಸ ಹಸಿಯ ನೆಲ್ಲಿಕಾಯ ರಸ ದಾಳಿಂಬದ ಹಂಣಿನ
ರಸ x x x x ಯಾಲಕ್ಕಿ ಯಿವನೂ ಚೂರ್ನವಂ ಮಾಡಿ ತಳಿಯಲೂ
ಅಮೃತಕ್ಕೆ ಸಮಾನವಹದೂ । ಪಾವನಗಳಹವೂ । ಗದ್ಯ । ಯಿದು ಸಮಸ್ತ
ಭುವನ ಜನವಿನೂತಂ ಹರವರ ಪ್ರಾಸಾದೋತ್ಪಂನ್ನವಾಗ್ವಿ ಳಾಸಂ॥ ಶ್ರೀಮತ್ಕ
ವಿತಾ ವಿಲಾಸತನೂಜಂ ಶ್ರೀಮಚ್ಚಾವುಂಡರಾಜವಿರಚಿತಮಪ್ಪ ಲೋಕೋ
ಪಕಾರದೊಳು ಸೂಪಶಾಸ್ತ್ರ ಪ್ರಕರಣಂ ಅಷ್ಟಮಾಶ್ವಾಸಂ ಮಂಗಳಮಹಾ ಶ್ರೀ.

ವಿಷಯ : ಜ್ಯೋತಿಷ ಮತ್ತು ಸೂಪಶಾಸ್ತ್ರಗಳಿಗೆ ಸಂಬಂಧಪಟ್ಟ ವಿಷಯಗಳ ಸಂಗ್ರಹ.

ವಿಶೇಷ : ಅಸಮಗ್ರ ಪ್ರತಿ. ಒಂದರಿಂದ ಏಳು ಪತ್ರಗಳಲ್ಲಿ ಮೊದಲನೆಯ ಅಧ್ಯಾಯವಿದೆ. ಮತ್ತೆ ೧ರಿಂದ ಕ್ರಮಾಂಕ ಪ್ರಾರಂಭವಾಗಿದೆ. ಅಕ್ಷರಗಳು ಸ್ಫುಟವಾಗಿವೆ. ಮೊದಲಿನ ೪ ಮತ್ತು ೫ನೆಯ ಪತ್ರಗಳಲ್ಲಿ ಒಂದೇ ಕಡೆ ಬರೆದಿದೆ.

1515-ಅ

ಕೆ.ಎ. ೨೫೧/೧	**ಲೋಕೋಪಕಾರ**	ಕಂದ, ವೃತ್ತ, ಟೀಕು
೧೩" × ೮"	ಚಾವುಂಡರಾಯ	ಸು. ೧೧೫೦
೧೬-೬೮ ಪತ್ರ	೧೮ ಪಂಕ್ತಿ	೨೦ ಅಕ್ಷರ

ಆದಿ : ಚಾವುಂಡರಾಯ ಕೃತ ಉದಕಾರ್ಗಲೇ ॥
ಸ್ಥಾವರ ಜಂಗಮೆಂಬೀ
ಜೀವಜಯಕ್ಕಿಂತು ನೋಪ್ಪುಡಂ
ಜೀವನಮೆಂದುದಕಾರ್ಗಳಂ
ಕೋವಿದನಿದನೆಸೆಯೆ ಪೇಳ್ಗುಮುಚಳಿತ ವಚನಾ ॥ ೧ ॥
ಟೀಕು ॥ ಸ್ಥಾವರ ಜಂಗಮಾತ್ಮಕವಾಗಿ ಯಿದ್ದಂಥಾ ಯೀ ಲೋಕಕ್ಕೆ ಉದಕ ಜೀವನಾಗಿ ಇಹುದಾಗಿ ಆ ಉದಕ ಹುಟ್ಟುವಂಥಾ ಸ್ಥಾನವನ್ನು ಶಾಸ್ತ್ರ ಮುಖದಿಂದ ಹೇಳಿಹೆನೆಂದು ತೊಡಗುತ್ತಾ ಇದ್ದಾನೂ ॥ ೧ ॥

ಅಂತ್ಯ : ಕಂ ॥ ತಲೆಗಾತ್ರ ಸ್ಫುರಣೆಂನಂ
ಉಲಿಕಾರೆಳತ್ತಿ ಚಂಮ್ಮಾರ್ಖಿಳೆಂದಿನಿತ ಬಂ
ದೊಳ್ಪುರುಷಂಗೆಡದೊಳು
ಲಲನೆಗೆ ಸಮನಿಸಿದೊಡಿಷ್ಟಫಲಮಂ ಕೊಡುಗುಂ ॥
ಟೀಕು ॥ ಮಂಡೆ ಶರೀರಳು ಕೆತ್ತಿತಿರುಹ ನರವಲ್ಲಿ ಕಾರೆಳ್ಳು ಮತ್ತಿ ಚಂಮುಖಿಳು ಈ ಲಕ್ಷಣಂಗಳು ಬಲದಲ್ಲು ಪುರುಷಂಗೆ ಆದರೆ ಉತ್ತಮ ಸ್ತ್ರೀಯರುಗಳಗೆ ಯೆಡದಲ್ಲಿ ಆದರೆ ಉತ್ತಮುವೆನಿಸಿಕೊಂಬುದು.

ವಿಷಯ : ಉದಕಾರ್ಗಳ ಮತ್ತು ಸ್ತ್ರೀ ಲಕ್ಷಣ ವಿಚಾರ.

ವಿಶೇಷ : ಇದೇ ಪುಸ್ತುಕದಲ್ಲಿ ರಟ್ಟನ ಜಾತಕ ಎಂಬ ಮತ್ತೊಂದು ಕೃತಿ ಇದೆ. ಪತ್ರದ ಒಂದು ಕಡೆ ಮಾತ್ರ ಬರವಣಿಗೆಯಿದೆ. ಅಸಮಗ್ರ ಗ್ರಂಥ. ಕೇವಲ ೧೫ ಮತ್ತು ೧೬ನೆಯ ಆಶ್ವಾಸಗಳು ಮಾತ್ರ ಇವೆ. ಗ್ರಂಥಾರಂಭಕ್ಕೆ ಮೊದಲು ಬೇರೆ ಒಂದು ಪತ್ರದಲ್ಲಿ 13-12-1910ರಲ್ಲಿ ಶ್ರೀ ಬಿ. ರಾಮಸ್ವಾಮಿಶಾಸ್ತ್ರಿಗಳವರು ಈ ಭಾಗದ ವಿಷಯ ವಿಭಾಗಗಳನ್ನು ಸೂಚಿಸಿದ್ದಾರೆ.

1515–ಇ

ಕೆ.ಬಿ. ೫೫೧ **ಲೋಕೋಪಕಾರ** (ಸಟೀಕು) ಕಂದ,ವೃತ್ತ, ಟೀಕು

೮.೨" × ೬.೬" ಚಾವುಂಡರಾಯ ಸು. ೧೧೫೦

೧–೧೬೫ ಪತ್ರ ೨೦ ಪಂಕ್ತಿ ೧೮ ಅಕ್ಷರ

ಆದಿ : ಶುಭಮಸ್ತು ॥ ಲೋಕೋಪಕಾರ ಗ್ರಂಥ ಬರಯುವದಕ್ಕೆ ನಿರ್ವಿಘ್ನಮಸ್ತು ॥

ಶ್ರೀಪತಿಯುಮುಮಾಪತಿ ವಾ
ಣೀಪತಿಯುರು ಮೂವರೊಲಿದು ನಮಗಾದರದಿಂ
ಚಾಪಳವೆನಿಸುವ ಮತಿಗಳ
ಶ್ರೀಪದಮಂ ಪರಮಪದಮನೀಗಭಿವಂದ್ಯರ್ ॥ ೧ ॥

x x x x

ತರದಿನಶ್ವ ಯಮಮಂ ಸಿಖಿ ಕಮಳಜಂ ಶೀತ
ಕರಂ ರುದ್ರನದಿತಿಗುರು ಸರ್ಪಪಿತೃ ಭಗವಾನ್ ಆರ್ಯಮಂ ದಿನ
ವರಂ ತ್ವಷ್ಟ್ರ ಸಮಿಾರನಿಂದ್ರಾಗ್ನಿ ಮೈತ್ರಂ ಸುರಗಣಾಧಿಪಂ
ನಿರುತಿ ಜಳಂ ವಿಶ್ವೇದೇವನಜಂ ವಾರಿಜಾಕ್ಷಂ ವಸುಪರಧಿಪನತ್ಯಜ
ಪಾದನಹಿರ್ಭುಧ್ನ್ಯಂ ಪೌಷ್ಣಮಿಪ್ಪತ್ತೆಂಟು ತಾರೆಗಧೀಶರೂ॥

ಟೀಕು ॥ ಅಶ್ವಿನೀಗೆ ಅಶ್ವಿನೀ ದೇವರ್ಕಳು । ಭರಣೀಗೆ ಯಮನು । x x x ರೇವತೀಗೆ ಪೌಷ್ಣ ದೇವತೆ । ಯಿಾಮರ್ಕಾದೆಯಲ್ಲೂ ಯಿಪ್ಪತ್ತೆಂಟು ನಕ್ಷತ್ರಂಗಳಿಗೆ ಯಿಪ್ಪತ್ತೆಂಟು ಅಧಿ ದೇವತೆಗಳು ॥

ಅಂತ್ಯ : ಕಂದ ॥ ಸಮನಾಗಿ ಕೂಡಿ ತಳವೆರ
ಸುಮದಂ ಗಜಗಳ್ಗೆ ಶೂಲೆ ಗುಲ್ಮಂ ಜಾಡ್ಯಂ
ಕ್ರಿಮಿವಿಷ್ಟಂಭಂ ಕಫಮಂ
ಹ್ನಿಮಾಂದ್ಯಮರುಚಿತ್ವಮೆಂಬಿವಂ ಮಾಣಿಸುಗುಂ ॥ ೨ ॥

ಟೀಕು ॥ ಅವನೆಲ್ಲವನು ಸಮಗೂಡಿಕೊಂಡು ಆ ಮಾಡಿದ ಚೂರ್ನವನು ಅಂಬಿಲದಲ್ಲೂ ಕದಡಿ ಆನೆಗಳಿಗೆ ಕುಡಿಸಲು ಶೂಲೆ ಗುಲ್ಮ ಜಡಕ್ರಿಯೆ ಮೈಮಜಿ ವುದು, ಕೆಮ್ಮು, ದೀಪನವಿಲ್ಲದಿರುಹ ಅರುಚಿ ಮೊದಲಾದ ಯೆಲ್ಲಾ ವ್ಯಾಧಿಗಳು ಕೆಡುವವು ॥ ೨ ॥

ಇತಿ ಗಜವೈದ್ಯಂ ಸಮಾಪ್ತಮ್ ॥

ಶಾಲೀವಾಹನ ಶಕಾಬ್ದಾ ೧೫೫೬ನೆಯ ಭಾವ ಸಂವತ್ಸರದ ಕಾರ್ತಿಕ ಶುದ್ಧ ೫ ಗುರುವಾರದಲ್ಲು ಪುಸ್ತಕ ಬರದು ಮುಗಶಿಥೇನೆ ಯಂತಾ ಇರುತ್ತೆ. ಮಂಗಳಮಸ್ತು ಶ್ರೀ ॥

ವಿಷಯ : ಜ್ಯೋತಿಷ, ಸೂಪ ಮತ್ತು ವೈದ್ಯ ಈ ಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳ ಸಂಗ್ರಹ.

ವಿಶೇಷ : ೯೮ ಮತ್ತು ೯೯ನೆಯ ಕ್ರಮಾಂಕದ ಪತ್ರಗಳ ಮಧ್ಯೆಗ್ರಂಥಲೋಪವಿದೆ. ಶಕಟರೇಫದ ಬಳಕೆ ಇದೆ. ಸುಂದರಾಕ್ಷರ.